ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ

COMPARATIVE STUDY OF THE SOCIAL AND CULTURAL BASIS IN THE MARATHI AND KANNADA DALIT AUTOBIOGRAPHIES

(ಡಾ. ಎಸ್. ರಾಧಾಕೃಷ್ಣನ್ ಪೋಸ್ಟ್ ಡಾಕ್ಟರೇಟ್ ಫೆಲೋ ಪದವಿಗಾಗಿ ಸಿದ್ಧಪಡಿಸಿದ ಅಂತಿಮ ವರದಿ)

(Final Report prepared for the post Doctoral Fellow Degree by Dr. S. Radhakrishnana)

ಡಿಎಸ್‌ಆರ್‌ಪಿಡಿಎಫ್ ಸಂಶೋಧಕರು

DSR PDF Scholar

ಡಾ. ಹೊಂಬಯ್ಯ

Dr. Hombaiah

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

Kuvempu Institute of Kannada Studies

ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

Manasagangothri, Mysuru – 570 006

ಮಾರ್ಗದರ್ಶಕರು

Research Guide

ಪ್ರೊ. ಎನ್.ಕೆ. ಲೋಲಾಕ್ಷಿ

Prof. N.K. Lolakshi

ಪ್ರಾಧ್ಯಾಪಕರು

Professor

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

Kuvempu Institute of Kannada Studies

ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

Manasagangothri, Mysuru – 570 006

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

Kuvempu Institute of Kannada Studies

ಮಾನಸಗಂಗೋತ್ರಿ, ಮೈಸೂರು

Manasagangothri, Mysuru

2021

ಪಿಡಿಎಫ್ ಸಂಶೋಧಕರ ದೃಢೀಕರಣ ಪತ್ರ

ಡಾ. ಹೊಂಬಯ್ಯ ಆದ ನಾನು **'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ'** ಎಂಬ ವಿಷಯದಲ್ಲಿ ಪೋಸ್ಟ್ ಡಾಕ್ಟರೇಟ್ ಫೆಲೋ ಪದವಿಗಾಗಿ **ಡಾ. ಎನ್.ಕೆ. ಲೋಲಾಕ್ಷಿ,** ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ ಪಿಡಿಎಫ್ ಅಂತಿಮ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಶೋಧನೆಯ ವರದಿಯು ನನ್ನ ಸ್ವಂತ ಪರಿಶ್ರಮದಿಂದ ಸಿದ್ಧಪಡಿಸಲಾಗಿದ್ದು, ಇದನ್ನು ಯಾವುದೇ ವಿಶ್ವವಿದ್ಯಾನಿಲಯದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಅಥವಾ ಯಾವುದೇ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 29/09/21

ಸ್ಥಳ : ಮೈಸೂರು

ಡಾ. ಹೊಂಬಯ್ಯ
ಪಿಡಿಎಫ್ ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

ಪ್ರೊ. ಎನ್.ಕೆ.ಲೋಲಾಕ್ಷಿ, ಎಂ.ಎ., ಪಿಎಚ್.ಡಿ.

ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮೊಬೈಲ್ : 9480157279
ಇ–ಮೇಲ್ : nklolakshi@gmail.com

ಮಾರ್ಗದರ್ಶಕರ ದೃಢೀಕರಣ ಪತ್ರ

ಡಾ. ಹೊಂಬಯ್ಯ ಪಿಡಿಎಫ್ ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು **ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ'** ಎಂಬ ವಿಷಯದಲ್ಲಿ ಪೋಸ್ಟ್ ಡಾಕ್ಟರೇಟ್ ಫೆಲೋ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಅಂತಿಮ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುತ್ತಿದ್ದಾರೆ.

ಈ ಸಂಶೋಧನೆಯ ಅಂತಿಮ ವರದಿಯು ಇವರ ಸ್ವಂತ ಪರಿಶ್ರಮದಿಂದ ಕೂಡಿದ್ದು, ಇದನ್ನು ಯಾವುದೇ ವಿಶ್ವವಿದ್ಯಾನಿಲಯದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಅಥವಾ ಯಾವುದೇ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 29/09/2021

ಸ್ಥಳ : ಮೈಸೂರು

ಪ್ರೊ. ಎನ್.ಕೆ. ಲೋಲಾಕ್ಷಿ
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಡಾ. ಎನ್.ಕೆ. ಲೋಲಾಕ್ಷಿ
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು-570006

ಮೈಸೂರು ವಿಶ್ವವಿದ್ಯಾನಿಲಯ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ, ಮೈಸೂರು

ನಿರ್ದೇಶಕರ ದೃಢೀಕರಣ ಪತ್ರ

ಡಾ. ಹೊಂಬಯ್ಯ ಪಿಡಿಎಫ್ ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು **'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ'** ಎಂಬ ವಿಷಯದಲ್ಲಿ **ಡಾ. ಎನ್.ಕೆ. ಲೋಲಾಕ್ಷಿ,** ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ಅಂತಿಮ ವರದಿಯನ್ನು ಸಿದ್ಧಪಡಿಸಿ ಪೋಸ್ಟ್ ಡಾಕ್ಟರೇಟ್ ಫೆಲೋ ಪದವಿಗಾಗಿ ಸಲ್ಲಿಸುತ್ತಿದ್ದಾರೆ.

ಈ ಸಂಶೋಧನೆಯ ಅಂತಿಮ ವರದಿಯು ಇವರ ಸ್ವಂತ ಪರಿಶ್ರಮದಿಂದ ಕೂಡಿದ್ದು, ಇದನ್ನು ಯಾವುದೇ ವಿಶ್ವವಿದ್ಯಾನಿಲಯದ ಎಂ.ಎ., ಎಂ.ಫಿಲ್., ಪಿಎಚ್.ಡಿ. ಅಥವಾ ಯಾವುದೇ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 21/12/21

ಸ್ಥಳ : ಮೈಸೂರು

ಎಂ. [signature]

ನಿರ್ದೇಶಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ, ಮೈಸೂರು-6

ಅಕ್ಕರೆಯ ನೆನೆಕೆಗಳು

ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಸ್ನಾತಕೋತ್ತರ ಪದವಿಯನ್ನು ಪಡೆಯಲು ಕಾರಣಕರ್ತರಾದ ನನ್ನ ತಂದೆ ತಾಯಿಗೆ, ಈ ಸಂಶೋಧನೆಯ ವಿಷಯವನ್ನು ಸೂಚಿಸಿ ಸಂಶೋಧನೆಯ ಪ್ರತಿಯೊಂದು ಹಂತದಲ್ಲೂ ನಿರಂತರವಾಗಿ ಸಲಹೆ ಮತ್ತು ಸಹಕಾರ ನೀಡಿ ಮಾರ್ಗದರ್ಶನ ಮಾಡಿರುವ ಪ್ರೊ. ಎನ್.ಕೆ. ಲೋಲಾಕ್ಷಿ ಅವರಿಗೆ ಅವರಿಗೆ ನನ್ನ ಗೌರವ ಪೂರಕ ಕೃತಜ್ಞತೆಗಳು.

ನಾನು ಪೋಸ್ಟ್ ಡಾಕ್ಟರೇಟ್ ಫೆಲೋ ಪದವಿಗಾಗಿ ಸಂಶೋಧನೆಯನ್ನು ಮಾಡಬೇಕೆಂದು ಕನಸನ್ನು ನನಸು ಮಾಡಿದ ಡಾ. ಎಸ್. ರಾಧಾಕೃಷ್ಣನ್ ಪೋಸ್ಟ್ ಡಾಕ್ಟರೇಟ್ ಫೆಲೋಶಿಪ್‌ನ ಧನಸಹಾಯ ಮಾಡಿದ ಯು.ಜಿ.ಸಿ, ನವದೆಹಲಿ ಇವರಿಗೆ ನನ್ನ ನಮನಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ, ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್, ಪ್ರೊ. ಎನ್.ಎಂ.ತಳವಾರ್ ಹಾಗೂ ಪ್ರಸ್ತುತ ನಿರ್ದೇಶಕರಾದ ಪ್ರೊ. ಎಂ.ಜಿ. ಮಂಜುನಾಥ ಅವರಿಗೆ ನನ್ನ ನಮಸ್ಕಾರಗಳು. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಲಕ್ಷ್ಮಿ ಶಿಕ್ಷಣ ಸಂಸ್ಥೆಯ ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಬೇಡಕಿಹಾಳದ ಅಧ್ಯಕ್ಷರಾದ ಪಿ.ಆರ್. ಪಾಟೀಲ್, ಉಪಾಧ್ಯಕ್ಷರು, ನಿರ್ದೇಶಕರುಗಳಿಗೆ, ಪ್ರಾಂಶುಪಾಲರು, ಸಹೋದ್ಯೋಗಿ ಮಿತ್ರರಿಗೆ, ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ನೆನೆಕೆಗಳು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದ ಸಿಬ್ಬಂದಿ ವರ್ಗದವರ ಸಹಾಯವನ್ನು ನಾನು ನೆನಪಿಸಿಕೊಳ್ಳುತ್ತೇನೆ.

ಈ ಎಲ್ಲಾ ಯಶಸ್ಸಿನ ಹಿಂದೆ ನನಗೆ ಬುದ್ದಿ ಹೇಳಿ ನೀನು ಆದೇನ್ ಓದ್ತಿದಿಯೋ ನಮಗೆ ಗೊತ್ತಿಲ್ಲ, ಒಟ್ನಲ್ಲಿ ಚನ್ನಾಗಿ ಓದು ಎಂದು ಹೇಳುತ್ತಿದ್ದ ತಂದೆ ಹೊಂಬಯ್ಯ, ಅವ್ವ ಚಲ್ಲಮ್ಮ, ಹಾಗೂ ಪತ್ನಿ ಭಾನುಮತಿ ಇವರಿಗೆ ನನ್ನ ನಮನಗಳು. ಈ ಮಹಾಪ್ರಬಂಧವನ್ನು ಅಂದವಾಗಿ ಪುಟ ಸಂಯೋಜನೆ ಮಾಡಿದ ಶ್ರೀಮತಿ ಪ್ರಿಯಾ ಎನ್. ಶೆಣೈ ಅವರಿಗೆ ನಾನು ಅಭಾರಿ.

ಡಾ. ಹೊಂಬಯ್ಯ

ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ

ಪರಿವಿಡಿ

ಪುಟ ಸಂಖ್ಯೆ

	ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ		**೧–೯**
ಅಧ್ಯಾಯ ೧	**ಭಾರತೀಯ ದಲಿತ ಆತ್ಮಕಥೆಗಳ ಪ್ರೇರಣೆ ಮತ್ತು ಪ್ರಭಾವಗಳು**		**೧೦–೯೯**
	೧.೧	ದಲಿತ ಪದದ ಅರ್ಥ ಮತ್ತು ವ್ಯಾಖ್ಯಾನ	
	೧.೨	ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯದ ಉಗಮ	
		೧.೨.೧ ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯದ ನೆಲೆ ನಿಲುವುಗಳು	
	೧.೩	ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆ ಪರಿಕಲ್ಪನೆಯ ಹುಟ್ಟು ಬೆಳವಣಿಗೆ	
		೧.೩.೧ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್	
		೧.೩.೨ ಕರ್ನಾಟಕದ ದಲಿತ ಪ್ಯಾಂಥರ್ಸ್	
		೧.೩.೩ ಕಪ್ಪು ಸಾಹಿತ್ಯ	
		೧.೩.೪ ಮಹಾತ್ಮ ಜ್ಯೋತಿ ಬಾಫುಲೆ	
		೧.೩.೫ ಮಹಾತ್ಮ ಗಾಂಧಿ	
		೧.೩.೬ ಡಾ. ಬಿ.ಆರ್. ಅಂಬೇಡ್ಕರ್	
		೧.೩.೭ ಕಾರ್ಲ್‌ಮಾರ್ಕ್ಸ್	
		೧.೩.೮ ರಾಮಮನೋಹರ ಲೋಹಿಯಾ	
		೧.೩.೯ ಪೆರಿಯಾರ್ ರಾಮಸ್ವಾಮಿ ನಾಯ್ಕರ್	
ಅಧ್ಯಾಯ ೨	**ಭಾರತೀಯ ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳು**		**೧೦೦–೧೪೦**
	೨.೧	ಮರಾಠಿ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	
	೨.೨	ತಮಿಳು ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	
	೨.೩	ತೆಲುಗು ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	
	೨.೪	ಮಲಯಾಳಂ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	
	೨.೫	ಪಂಜಾಬಿ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	
	೨.೬	ಹಿಂದಿ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	
	೨.೭	ಕನ್ನಡ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು	

ಅಧ್ಯಾಯ ೩ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ನೆಲೆಗಳು ೧೪೧–೨೦೬

೩.೧ ಜಾತೀಯತೆ ಮತ್ತು ಅಸ್ಪೃಶ್ಯತೆ
೩.೨ ಬಡತನ ಮತ್ತು ಹಸಿವು
೩.೩ ಕಾಯಕಗಳು ಮತ್ತು ಜೀತಗಾರಿಕೆ
೩.೪ ಕೇರಿ, ಭೂಮಿ ಮತ್ತು ಜೀವಸಂಬಂಧ
೩.೫ ದಲಿತ ಮಹಿಳಾ ಸ್ಥಾನಮಾನ

ಅಧ್ಯಾಯ ೪ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಂಸ್ಕೃತಿಕ ನೆಲೆಗಳು ೨೦೭–೨೬೯

೪.೧ ದಲಿತ ಆತ್ಮಕಥೆಗಳಲ್ಲಿ ಸಾಂಸ್ಕೃತಿಕ ಅನನ್ಯತೆ
೪.೨ ನಂಬಿಕೆ–ಆಚರಣೆ–ಸಂಪ್ರದಾಯಗಳು
೪.೨.೧ ದಲಿತ ಸಾಂಸ್ಕೃತಿಕ ಅನನ್ಯತೆಯ ಹಬ್ಬಗಳು ಮತ್ತು ಆಚರಣೆಗಳು
೪.೩ ಆಹಾರ ಪಾನೀಯಗಳು
೪.೪ ಉಡುಗೆ ತೊಡುಗೆಗಳು

ಅಧ್ಯಾಯ ೫ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಫಲಿತ–ಆಶಯ ಹಾಗೂ ಸಮಾರೋಪ ೨೭೦–೨೭೪

ಅನುಬಂಧ – ೧ ೨೭೫–೨೭೭

ಆಕರ ಗ್ರಂಥಗಳು

ಅನುಬಂಧ – ೨ ೨೭೮–೨೮೯

ಪರಾಮರ್ಶನ ಗ್ರಂಥಗಳು

ಲೇಖನಗಳು

* * * * *

ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಭಾರತೀಯ ಸಾಹಿತ್ಯದ ಸಂಶೋಧನ ವಲಯದಲ್ಲಿ ಸಾಹಿತ್ಯ ಕೃತಿಗಳನ್ನು ಒಳಗೊಂಡಂತೆ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕಾವ್ಯ, ಕಾದಂಬರಿ, ನಾಟಕ, ಆತ್ಮಕಥನ ವಿಮರ್ಶೆ ಈ ಬಗೆಯ ಪರಿಕಲ್ಪನೆಯ ಅಧ್ಯಯನಕ್ಕೆ ತನ್ನದೇ ಆದ ಐತಿಹಾಸಿಕ ಪರಂಪರೆ ಮತ್ತು ಮಹತ್ವವಿದೆ. ಈ ಬಗೆಯ ಸಂಶೋಧನೆಗೆ ಹತ್ತೊಂಬತ್ತನೆಯ ಶತಮಾನದ ಅಂತ್ಯಕಾಲ ಹಾಗೂ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಭಾರತದ ಸಾಹಿತ್ಯ ವಲಯದಲ್ಲಿ ಹೊಸ ಬದಲಾವಣೆಗಳು ಕಾಣಿಸತೊಡಗಿದವು. ಇಂಗ್ಲೀಷ್ ಭಾಷೆಯ ಕಲಿಕೆಯಿಂದ ಪಾಶ್ಚಾತ್ಯ ಸಾಹಿತ್ಯದ ಪರಿಚಯ ಭಾರತೀಯರಿಗೆ ಆಯಿತು. ಮರಾಠಿ, ತಮಿಳು, ತೆಲಗು, ಕನ್ನಡ, ಬಂಗಾಳಿ, ಪಂಜಾಬಿ ಹೀಗೆ ಈ ಮೊದಲಾದ ಭಾಷೆಗಳಲ್ಲಿ ಸಾಹಿತ್ಯವು ಹೊಸರೂಪ ಪಡೆಯತೊಡಗಿತು. ಇಪ್ಪತ್ತನೆಯ ಶತಮಾನದ ಆದಿಭಾಗವು ಚಳುವಳಿಯ ದೃಷ್ಟಿಯಿಂದಲೂ ವಿಭಿನ್ನ ನೆಲೆಯಲ್ಲಿ ಕಾಣಿಸಿಕೊಂಡಿದೆ. ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಸಾತ್ರಂತ್ರ್ಯ ಚಳುವಳಿ ಎಷ್ಟು ಮುಖ್ಯವಾಗುತ್ತದೆಯೋ ಅಷ್ಟೇ ಪ್ರಮುಖವಾಗಿ ದಲಿತರ ಪರವಾಗಿ ಅಂದು ಮಹಾನ್‌ನಾಯಕರ ನೆಲೆ ಮತ್ತು ನಿಲುವುಗಳು ಹಾಗೂ ಅವುಗಳ ಹೋರಾಟ ಅಷ್ಟೇ ಮುಖ್ಯವಾಗುತ್ತವೆ. ಕನ್ನಡ ದಲಿತ ಸಾಹಿತ್ಯದಲ್ಲಿ ವಿಶೇಷ ಪ್ರಕಾರವಾದ ದಲಿತ ಆತ್ಮಕಥೆಗಳ ಮೂಲ ನೆಲೆ-ಸೆಲೆಗಳನ್ನು ಹುಡುಕುತ್ತಾ ಹೋದರೆ ಇಂಗ್ಲೀಷ್ ಭಾಷೆ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದ ಚಳುವಳಿಯ ವಿಭಿನ್ನ ನೆಲೆಗಳು, ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಮಹಾತ್ಮ ಗಾಂಧೀಜಿ, ಜ್ಯೋತಿಬಾಫುಲೆ, ಅಂಬೇಡ್ಕರ್, ರಾಮಮನೋಹರ ಲೋಹಿಯಾ, ಪೆರಿಯಾರ್ ರಾಮನಾಯ್ಕರ್ ಮತ್ತು ಕಾರ್ಲ್‌ಮಾರ್ಕ್ಸ್ ಚಿಂತನೆಗಳು ಭಾರತದಲ್ಲಿ ದಲಿತ ಸಾಹಿತ್ಯ ಪರಂಪರೆಯೊಂದು ಉಗಮವಾಗಲು ಕಾರಣವಾಯಿತು.

ಇಂಗ್ಲೀಷ್ ಸಾಹಿತ್ಯ ಮತ್ತು ಭಾಷೆಯ ಪ್ರಭಾವದಿಂದ ಭಾರತೀಯ ಸಾಹಿತ್ಯದ ಮರಾಠಿ ಮತ್ತು ಕನ್ನಡ ಸಾಹಿತ್ಯವು ವಿಭಿನ್ನ ನೆಲೆಯಲ್ಲಿ ಬೆಳೆಯತೊಡಗಿತು. ನವೋದಯ, ಪ್ರಗತಿಶೀಲ, ನವ್ಯ ಎಂಬ ಪ್ರಕಾರಗಳು ಭಾರತೀಯ ಸಾಹಿತ್ಯಕ್ಕೆ ಹೊಸದಿಕ್ಕನ್ನು ತೋರಿಸಿದವು. ಆದರೂ ಈ

ಹಂತಗಳಲ್ಲಿ ಭಾಷಿಕ ಮತ್ತು ರಾಚನಿಕ ಬದಲಾವಣೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಆದರೆ ವಸ್ತುವಿನ ವಿಭಿನ್ನ ಹಾದಿಯನ್ನು ಕಂಡುಕೊಂಡು ದಲಿತ ಸಮುದಾಯದ ಸಂವೇದನೆಯ ನೆಲೆಯಲ್ಲಿ ಸಾಹಿತ್ಯವನ್ನು ರಚಿಸತೊಡಗಿದ್ದು ಭಾರತೀಯ ದಲಿತ ಸಾಹಿತ್ಯ. ದಲಿತ ಬದುಕನ್ನು ಕೇಂದ್ರವಾಗಿಟ್ಟುಕೊಂಡು ದಲಿತ ಪರವಾಗಿ ಸಾಹಿತ್ಯ ರಚಿಸಲು ಹಾತೊರೆದ ದಲಿತ ವಿದ್ಯಾವಂತರು ಹೊಸದೊಂದು ಸಾಹಿತ್ಯ ಕ್ರಾಂತಿಗೆ ನಾಂದಿ ಹಾಡಲು ಮುಂದಾದರು. ಇದರ ಫಲವೇ ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯ.

೧೯೭೦ರ ಕಾಲಘಟ್ಟದಲ್ಲಿ ಮಹಾರಾಷ್ಟ್ರ ರಾಜ್ಯವು ವಿವಿಧ ರೀತಿಯ ಚಳುವಳಿಯ ಬೆಳವಣಿಗೆಗೆ ನಾಂದಿ ಹಾಡಿತು. ಈ ಬೆಳವಣಿಗೆಯಿಂದ ಸಾಹಿತ್ಯ ಜನರ ಮನಸ್ಸನ್ನು ಎಚ್ಚರಿಸುವ ಅತಿ ಮುಖ್ಯ ಮಾಧ್ಯಮವಾಗಿ ಕಂಡು ಬಂದಿತು. ಬೀದಿಗಿಳಿದು ಹೋರಾಟ ಮಾಡುವುದರ ಜೊತೆಗೆ ಲೇಖನಿಯ ಹರಿತವನ್ನು ಇವರು ತೋರಿಸಿಕೊಟ್ಟರು. ಪುಸ್ತಕದ ಒಳಗಿಂದ ವಾಸ್ತವದ ಜಗತ್ತನ್ನು ಅರಿಯುವ ಆಲೋಚನ ಕ್ರಮವೊಂದು ತನ್ನ ಗೊತ್ತು ಗುರಿಗಳನ್ನು ಸ್ಪಷ್ಟಪಡಿಸಿಕೊಳ್ಳುತ್ತಾ ಸಾಗಿದ್ದನ್ನು ನಾವು ಗಮನಿಸಬಹುದು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಸಂಘಟಿತರಾದ ಮೊದಲ ತಲೆಮಾರಿನ ದಲಿತ ವಿದ್ಯಾವಂತ ವರ್ಗ ಮೊದಲಿಗೆ ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್ ರೂಪದಲ್ಲಿ ಕಾಣಿಸಿಕೊಂಡು ಸಾಹಿತ್ಯವನ್ನು ರಚನೆ ಮಾಡಿತು. ಸಾಮಾಜಿಕ ನೋವು ನಲಿವುಗಳು ತಳಸಮುದಾಯದ ಕವಿಗಳಿಂದ ಸಾಹಿತ್ಯದ ಮೂಲಕ ಹರಿದು ಬಂದು ಜನರಲ್ಲಿ ಜಾಗೃತಿಯನ್ನುಂಟು ಮಾಡಿದವು. ಇಂತಹ ಒಂದು ಜಾಗೃತಿಯ ಬೆಳವಣಿಗೆ ಮರಾಠಿಯೊಟ್ಟಿಗೆ ಕನ್ನಡ ಸಾಹಿತ್ಯದಲ್ಲೂ ಜರುಗಲು ಕರ್ನಾಟಕದ ಸಾಮಾಜಿಕ ವ್ಯವಸ್ಥೆಯೂ ಪೂರಕವಾಗಿತ್ತು. ದಲಿತ ಪ್ಯಾಂಥರ್ಸ್‌ನ ಪ್ರಭಾವದಿಂದ ಕರ್ನಾಟಕದಲ್ಲಿ ದಲಿತ ಸಾಹಿತ್ಯವೆಂಬುವುದು ಚಿಗುರೊಡೆಯಿತು. ಈ ಸಂದರ್ಭದಲ್ಲೇ ಇದುವರೆಗೂ ರಚಿತವಾದ ಎಲ್ಲ ಸಾಹಿತ್ಯದಲ್ಲಿ 'ಬೂಸಾ' ಇದೆ ಎಂಬ ಬಸವಲಿಂಗಪ್ಪನವರ ಒಂದು ಮಾತಿನ ಕಿಡಿ ಇಡೀ ಸಂಪ್ರದಾಯಸ್ಥ ಸಾಹಿತ್ಯ ವಲಯದಲ್ಲಿ ತಳಮಳವನ್ನುಂಟು ಮಾಡಿತು. ಹಾಗಾದರೆ ನಿಜವಾದ ಸಾಹಿತ್ಯ ಯಾವುದು ಎಂಬ ಚಿಂತನೆಗೆ ಎಲ್ಲರನ್ನು ಒಳಗು ಮಾಡಿತು. ಇಂತಹ ಸಂದರ್ಭದಲ್ಲಿ ಎಚ್ಚೆತ್ತುಕೊಂಡ ದಲಿತ ವಿದ್ಯಾವಂತ ವರ್ಗ ತಮ್ಮ ನೋವು-ನಲಿವುಗಳಿಗೆ ಬೆಲೆಯೇ ಇಲ್ಲದ ಅದುವರೆಗಿನ ಮರಾಠಿ ಮತ್ತು ಕನ್ನಡ ಸಾಹಿತ್ಯವನ್ನು ನೋಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ತಮ್ಮದೇ ಆದ ಅಭಿವ್ಯಕ್ತಿ ಕ್ರಮವೊಂದನ್ನು ಕಂಡುಕೊಂಡರು. ಅಲ್ಲಿಂದ ಮುಂದೆ ಯಾವುದೇ ಬರಹಗಾರನಿಗಿಂತ ಹೆಚ್ಚು ಸಾಮಾಜಿಕ ಜವಾಬ್ದಾರಿ ನಮ್ಮದಾಗಿದೆ ಎಂಬುವುದನ್ನು ತಳ ಸಮುದಾಯದ ಬರಹಗಾರರು

ಕಂಡುಕೊಂಡರು. ಇಂತಹ ತಾತ್ವಿಕವಾದ ನಿಲುವನ್ನು ದಲಿತ ಬರಹಗಾರರು ತೆಗೆದುಕೊಂಡಿದ್ದರಿಂದ ಒಟ್ಟು ಸಮಾಜದ ಆರೋಗ್ಯಕರ ಬೆಳವಣಿಗೆಗೆ ಪೂರಕವಾಗಿ ಸಾಹಿತ್ಯದ ದಿಕ್ಕನ್ನು ಕೊಂಡೊಯ್ಯಲು ಸಾಧ್ಯವಾಯಿತು.

ಸೃಜನಶೀಲತೆಗೆ ಅಪಾರ ವೈವಿಧ್ಯತೆಯನ್ನೂ ಸತ್ವವನ್ನು ಒದಗಿಸಿಕೊಡಬಲ್ಲ ದಲಿತ ಪ್ರಪಂಚದ ಪೂರ್ಣ ಅರಿವನ್ನೂ ಸಂಪಾದಿಸಲು ದಲಿತ ಬರಹಗಾರರು ಪ್ರಯತ್ನಿಸಿದಷ್ಟು ಅವರ ಬರಹ ಅನನ್ಯವಾಗುತ್ತದೆ ಎಂಬ ಅರಿವು ಇವರಲ್ಲಿ ಮೂಡಿತು. ಈ ಅನನ್ಯತೆ ಸಾಧ್ಯವಾಗಬೇಕಾದರೆ ದಲಿತ ಬರಹಗಾರರು ಇನ್ನಷ್ಟು ವ್ಯಾಪಕವಾಗಿ ತಮ್ಮ ಪರಿಸರ ಪ್ರಪಂಚದ ಆಳವಾದ ಅರಿವಿನ ಬಗೆಗೆ ತಿಳಿದುಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ದಲಿತ ಲೇಖಕರು ಮತ್ತು ಕಲಾವಿದರ ಒಕ್ಕೂಟದ ವತಿಯಿಂದ ಭದ್ರಾವತಿಯಲ್ಲಿ ಎರಡು ದಿನದ ಸಮ್ಮೇಳನವನ್ನು ಆಯೋಜಿಸಿತು. ಈ ಸಮ್ಮೇಳನವನ್ನು ಬಿ. ಬಸವಲಿಂಗಪ್ಪ ಉದ್ಘಾಟಿಸಿದರು. ಆನಂತರ ಚಿಕ್ಕಮಗಳೂರಿನಲ್ಲಿ ನಡೆದ ಸಮ್ಮೇಳನದಲ್ಲಿ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಎಂಬುದಾಗಿ ಮರುನಾಮಕರಣ ಮಾಡಲಾಯಿತು. ಬಿ. ಕೃಷ್ಣಪ್ಪ ಇದರ ಮೊದಲ ರಾಜ್ಯ ಸಂಚಾಲಕರಾಗಿ ಆಯ್ಕೆಯಾದರು. ಈ ಸಂಘಟನೆಯ ಮೂಲಕ ಕರ್ನಾಟಕದಾದ್ಯಂತ ಹಲವಾರು ವಿಚಾರ ಸಂಕಿರಣ, ಕಥಾ ಕಮ್ಮಟ, ವಿಮರ್ಶೆ ಗೋಷ್ಠಿಗಳು ನಡೆದವು.

ಈ ಪ್ರಭಾವದಿಂದ ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯವು ಬೆಳೆದು ಹಲವು ಪ್ರಕಾರಗಳಲ್ಲಿ ಕಾಣಿಸಿಕೊಂಡಿತು. ಮೊಟ್ಟ ಮೊದಲಿಗೆ ತನ್ನ ನೋವು–ನಲಿವಿನ ದನಿಯನ್ನು ಅಕ್ಷರ ರೂಪಕ್ಕೆ ಇಳಿಸಿದ್ದೆ ಕಾವ್ಯದಲ್ಲಿ. ಆನಂತರ ಕಥೆ, ಕಾದಂಬರಿ, ಜೀವನ ಚರಿತ್ರೆ, ವಿಮರ್ಶೆ, ಆತ್ಮಕಥೆ ಹೀಗೆ ವಿವಿಧ ಪ್ರಕಾರಗಳಲ್ಲಿ ದಲಿತ ಸಾಹಿತ್ಯ ಮೂಡತೊಡಗಿತು. ದಲಿತಾನುಭವದ ಸಂವೇದನೆಗಳನ್ನು ತಾನು ಅನುಭವಿಸಿದ ತಲ್ಲಣಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿಪಡಿಸುತ್ತಾರೆ. ಮರಾಠಿ ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕತೆಗಳ ಕೃಷಿ ಆಗಾಧವಾಗಿ ಬೆಳೆದು ಬಂದಿದೆ.

ಕಿಸನಧೌಗೊಬನ ಸೋಡೆಯೊಂದಿಗೆ ನಾರಾಯಣ ಸುರ್ವೆ, ನಾಮದೇವ ಢಸಾಳ, ದಯಾಪವಾರ, ಲಿಂಬಾಳಕರ್, ಕೇಶವಮೇಶ್ರಾಮ ಮುಂತಾದವರು ಬಾಬಾಸಾಹೇಬರ ಚಿಂತನೆಗಳು, ಬುದ್ಧನ ತತ್ವಗಳು, ಕಾರ್ಲ್‌ಮಾರ್ಕ್ಸ್‌ನ ವಿಚಾರಧಾರೆಗಳನ್ನು ತಮ್ಮ ಸಾಹಿತ್ಯ ಬರವಣಿಗೆಯಲ್ಲಿ ಕೃಷಿ ಮಾಡಿದ್ದಾರೆ. ಮರಾಠಿ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗೆ ವಿಶಿಷ್ಟವಾದ ಸ್ಥಾನವಿದೆ. ಏಕೆಂದರೆ ದಲಿತರ ಅಂತರಂಗದ ಭಾವನೆಗಳನ್ನು ಅಭಿವ್ಯಕ್ತ ಮಾಡಲು ರೂಪುಗೊಂಡ ಮಾಧ್ಯಮ. ಯಾವುದೇ ಸಂಕೋಚವಿಲ್ಲದೆ ನಿರ್ಭೀತಿಯಿಂದ ತಮ್ಮ ಎಲ್ಲಾ ಕಹಿ–ಸಿಹಿ ಅನುಭವಗಳು

ಬಿಚ್ಚಿಡುತ್ತಾ ಹೋಗುತ್ತಾರೆ. ಶಂಕರರಾವ್ ಖರಾತ್ ಅವರ 'ತರಾಳ ಅಂತರಾಳ', ನಾಮದೇವವ್ಹಟಕರ್ ಅವರ 'ಕಥಾಯಾರ್ಝಾಜಿನ್ಮಾಚೀ', ಪ್ರೊ.ಕೇಶವಮೇಶ್ರಾಂ 'ಹಕೀಕತ್‍ಕಣಿ ಜಟಾಯು', ದಯಾಪವಾರ್ ಅವರ 'ಬಲೂತ', ಲಕ್ಷ್ಮಣಮಾನೆಯವರ 'ಉಪಾರಾ', ಪ್ರೊ. ಸೋನಕಾಂಬಳೆಯವರ 'ಆಠವಣಿಂಚೆ ಪಕ್ಷಿ', ಮಾಧವಕೊಂಡ ವಿಲಕರ ಅವರ 'ಮುಕ್ಕಾಮುದೇವಾಚೆಗೋಡಣೆ', ದಾದಾಸಾಹೇಬ ಮಲಾರ ಮೋರೆಯವರ 'ಗಬಾಳ', ಶರಣಕುಮಾರ ಲಿಂಬಾಳೆಯವರ 'ಅಕ್ಕರಮಾಶಿ ಸಂತಾನ', ಲಕ್ಷ್ಮಣಗಾಯಕವಾಡ ಅವರ 'ಉಚಲ್ಯಾ', ಹೀಗೆ ಹಲವಾರು ಮರಾಠಿಯ ಆತ್ಮಕತೆಗಳು ಮರಾಠಿ ಭಾಷೆಯ ಸಾಹಿತ್ಯ ಕೃಷಿ ಮಾಡಿವೆ. ಉತ್ತಮ ಬಂಡುತುಪ್ಪೆ ಅವರ 'ಕಾಟ್ಯಾವರಚಿ ಪೊಟ', ಪಾರ್ಥಪೊಳಕೆಯವರ 'ಆಭರಣ', ಮಲಿಕಾ ಅಮರಶೇಟ್ ಅವರ 'ಮಲಾಲುಧ್ವಸ್ತಹ್ಯಾಯಚ', ಹಾಗೂ ಮಾಧವಿ ದೇಸಾಯಿ ಅವರ 'ಕುಣಿಯ ಘುಮಾ', ಹೀಗೆ ಇಲ್ಲಿಯವರೆಗೆ ಸುಮಾರು ಎಂಬತ್ತೈದು ಮಾರಾಠಿ ಆತ್ಮಕತೆಗಳು ಪ್ರಕಟಗೊಂಡಿವೆ.

ಕನ್ನಡ ದಲಿತ ಸಾಹಿತ್ಯದ ಸಂದರ್ಭದಲ್ಲಿ ಗಮನಿಸಿದಾದ ಕನ್ನಡ ದಲಿತ ಕಾದಂಬರಿ ಲೋಕಕ್ಕೆ ದೇವನೂರ ಮಹದೇವ, ದಲಿತ ಕಾವ್ಯದ ಕ್ಷೇತ್ರದಲ್ಲಿ ಕವಿ ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಬಿ.ಟಿ.ಲಲಿತಾನಾಯಕ್, ಹೆಚ್. ಗೋವಿಂದಯ್ಯ, ಸತ್ಯಾನಂದ ಪಾತ್ರೋಟ, ಚನ್ನಣ್ಣ ವಾಲೀಕಾರ್, ಕೆ.ಬಿ.ಸಿದ್ದಯ್ಯ, ಮುಳ್ಳೂರು ನಾಗರಾಜು ಹಾಗೂ ವಿಮರ್ಶಾ ಕ್ಷೇತ್ರದಲ್ಲಿ ದೇವಯ್ಯ ಹರವೆ, ಮ.ನ.ಜವರಯ್ಯ, ಅರವಿಂದ ಮಾಲಗತ್ತಿ, ಆತ್ಮಕಥಾ ಪ್ರಕಾರದಲ್ಲಿ ಅರವಿಂದ ಮಾಲಗತ್ತಿ ಸಿದ್ದಲಿಂಗಯ್ಯ, ತುಂಬಾಡಿ ರಾಮಯ್ಯ, ದು.ಸರಸ್ವತಿ, ಕೆ.ಗೋವಿಂದರಾಜು, ಪರಶಿವಮೂರ್ತಿ, ಹನುಮಂತರಾವ್.ಬಿ. ದೊಡ್ಡಮನಿ, ಕೆ.ಕೆ. ಎಲ್ಲಪ್ಪ, ಲಕ್ಷ್ಮಣ್, ಮುಳ್ಳೂರು ನಾಗರಾಜು, ಡಾ.ಹನುಮಂತಯ್ಯ, ಮೂಡ್ನಾಕೂಡು ಚಿನ್ನಾಸ್ವಾಮಿ, ಹೀಗೆ ಇನ್ನೂ ಹಲವಾರು ಪ್ರಮುಖ ಸಾಹಿತಿಗಳು, ಲೇಖಕರು ಕನ್ನಡ ದಲಿತ ಸಾಹಿತ್ಯ ಕ್ಷೇತ್ರದಲ್ಲಿ ವಿಪುಲವಾದ ಕೃಷಿ ಮಾಡಿ ಕನ್ನಡ ಸಾಹಿತ್ಯ ರಥವನ್ನು ಹೊಸ ದಿಕ್ಕಿನೆಡೆಗೆ ಕೊಂಡೊಯ್ದರು.

ಅಂಬೇಡ್ಕರ್ ಮೊದಲಾದ ಚಿಂತಕರ ಪ್ರಭಾವ ಪ್ರೇರಣೆಯಿಂದ ಶತ-ಶತಮಾನಗಳಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಧಾರ್ಮಿಕ ನೆಲೆಯ ಈ ಎಲ್ಲ ಬಗೆಯ ಹಕ್ಕುಗಳಿಂದ ವಂಚಿತರಾಗಿ ಅಕ್ಷರಶಃ ಮೂಕರೇ ಆಗಿದ್ದ ದಲಿತರು ೧೯೭೦ರ ದಶಕದಲ್ಲಿ ಅಧಿಕೃತವಾಗಿ ಮೊದಲು ಸಾಹಿತ್ಯದ ಮುಖಾಂತರ ಮಾತನಾಡಿ ಅಭಿವ್ಯಕ್ತಿಸಿದಾಗ ಇಡೀ ಕನ್ನಡ ಸಾಹಿತ್ಯಲೋಕ ಅಚ್ಚರಿಪಟ್ಟುಕೊಂಡಿತು. ಇದಕ್ಕಿಂತ ಮುಂಚೆ ಸ್ವಾತಂತ್ರ್ಯ ಪೂರ್ವದ

ಕಾಲದಲ್ಲಿ ಮೊದಲ ತಲೆಮಾರಿನ ದಲಿತ ಲೇಖಕರು ಸಾಹಿತ್ಯ ರಚನೆ ಮಾಡಿದ್ದರೂ ಸಹ ಸಾಹಿತ್ಯ ವಲಯದಲ್ಲಿ ಬೆಳಕಿಗೆ ಬಾರದೆ ಇದ್ದದ್ದು ಸೋಜಿಗದ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ದಲಿತರು ತಮ್ಮ ತಮ್ಮ ಅಸಲಿ ಅನುಭವಗಳ ಹಿನ್ನೆಲೆಯಲ್ಲಿ ಕಂಡುಂಡ ನೋವಿನ ಅಂತರಾಳದ ಅನುಭವಗಳನ್ನು ಎಲ್ಲರು ಮೆಚ್ಚುವಂತೆ ಬರೆದರು. ತಿರಸ್ಕಾರ ಅಪಮಾನಗಳಿಗೆ ಗುರಿಯಾಗಿದ್ದು ಅಸ್ಪೃಶ್ಯರ ನಿಗೂಢ ಜಗತ್ತನ್ನು ತಮ್ಮ ನೆಲಮೂಲ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದರಿಂದ ಕನ್ನಡ ಸಾಹಿತ್ಯದ ವಲಯದಲ್ಲಿ ಕನ್ನಡ ದಲಿತ ಸಾಹಿತ್ಯ ವಿಶಿಷ್ಟ ನೆಲೆಯನ್ನು ಕಂಡುಕೊಂಡಿತು.

ಕರ್ನಾಟಕದ ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳು ಹುಟ್ಟಿಕೊಳ್ಳಲಿಕ್ಕೆ ಮಹಾರಾಷ್ಟ್ರದ ಮರಾಠಿ ದಲಿತ ಆತ್ಮಕಥೆಗಳು ಬಹುತೇಕ ಕಾರಣವಾಯಿತು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆತ್ಮಕಥನಕ್ಕೆ ತನ್ನದೆ ಆದ ಸಾಹಿತ್ಯಕ–ಸಾಮಾಜಿಕ ನೆಲೆ ಇದೆ. ಕುವೆಂಪು, ಕಾರಂತ, ಲಂಕೇಶ್, ಜಿ.ಪಿ.ರಾಜರತ್ನಂ, ಹೆಚ್.ನರಸಿಂಹಯ್ಯ, ದೇಜಗೌ ಹೀಗೆ ಹಲವಾರು ಕನ್ನಡದ ಹಿರಿಯ ಸಾಹಿತಿಗಳು ಕೂಡ ಆತ್ಮಕಥನ ಸಾಹಿತ್ಯದಲ್ಲಿ ಕೆಲಸ ಮಾಡಿದ್ದಾರೆ. ತಮ್ಮ ವಿಶಿಷ್ಟ ಅನುಭವಗಳನ್ನು ಕಟ್ಟಿಕೊಟ್ಟಿದ್ದಾರೆ. ಅವುಗಳಿಗೆ ವಿಶಿಷ್ಟ ಸ್ಥಾನವು ಕನ್ನಡ ಸಾಹಿತ್ಯ ವಲಯದಲ್ಲಿದೆ. ಆದರೆ ಕನ್ನಡ ದಲಿತ ಆತ್ಮಕಥೆಗಳಿಗಿರುವ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆಯೇ ಬೇರೆಯಾಗಿದೆ. "ದಲಿತರ ಆತ್ಮಕಥೆಯಲ್ಲಿ ದಲಿತ ತುಡಿತಗಳು ತುಂಬಾ ಪ್ರಭಾವಶಾಲಿಯಾಗಿ ವ್ಯಕ್ತಗೊಂಡಿವೆ. ಈ ತುಡಿತಗಳು ವೇದನೆಗಳ, ವ್ಯಥೆಗಳ, ದುಃಖ ದುಮ್ಮಾನಗಳು ಹಾಗೂ ಆಕ್ರೋಶಗಳ ಸ್ಪಂದನಗಳು ತಾವು ಅನುಭವಿಸಿದ ನೋವು, ಅವಮಾನ, ಹಿಂಸೆ, ಸಮಾಜ ಮತ್ತು ಪರಂಪರೆಗಳ ಕಾಲಕಾಲಕ್ಕೆ ನೀಡಿದ ಬರೆ ಅಜ್ಞಾನದಿಂದ ತಾವು ಅನುಭವಿಸುತ್ತಿರುವ ದೈನ್ಯ ಹಾಗೂ ದಾಸತ್ವ ಇವುಗಳ ವಿಸ್ತೃತ ವಿವರಣೆ ಈ ಆತ್ಮಕತೆಗಳಲ್ಲಿವೆ. ಇಲ್ಲಿನ ಘಟನೆಗಳ ಪರಿಸರ, ಹಸಿವು, ದಾರಿದ್ರ್ಯ, ಅವಮಾನ, ಸಮಾಜದ ಮಾನಸಿಕ ಸ್ಥಿತಿ ಇವುಗಳು ಮಹತ್ವದ್ದಾಗುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಆತ್ಮಕತೆಗಳಲ್ಲಿಯ ಸ್ವತಃ (ತನ್ನತನ) ಎಲ್ಲದರ ಮೇಲೆ ತನ್ನ ವಿಜಯವನ್ನು ಸಾಧಿಸುತ್ತದೆ."[೨] ಅಂದರೆ ದಲಿತ ಆತ್ಮಕತೆಗಳು ಕೇವಲ ಒಬ್ಬ ವ್ಯಕ್ತಿಯ ಹೋರಾಟ ಬದುಕು ಮಾತ್ರವಲ್ಲ. ಅದು ಇಡೀ ಸಮುದಾಯದ ನೊಂದ ಜೀವಿಗಳ ಬದುಕಿನ ಸಂಕಥನವೇ ಆಗಿರುತ್ತದೆ. ಈ ಹಿನ್ನಲೆಯಲ್ಲಿ ದಲಿತ ಆತ್ಮಕಥನಗಳು ದಲಿತ ಸಮುದಾಯದ ಸಂಕಥನಗಳಾಗಿ ಕಂಡು ಬರುತ್ತವೆ.

ಸಾಹಿತ್ಯದ ಇತರ ಪ್ರಕಾರಗಳಂತೆ ಸೃಜನಶೀಲ ರೂಪವೇ ಆದ ದಲಿತ ಆತ್ಮಕಥೆಗಳ ಪ್ರವೇಶ ಇನ್ನೂ ಹೆಚ್ಚಿನ ಕುತೂಹಲಗಳನ್ನು ನೀಡಿತು. ಮರಾಠಿ ಭಾಷೆಯಲ್ಲಿ ಈ ಪ್ರಕಾರ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಪರಿಧಿಗಳ ಎಲ್ಲೆಯನ್ನು ವಿಸ್ತರಿಸಿದುದು ಗಮನಾರ್ಹ. ಸ್ವಲ್ಪ

ನಿಧಾನವೆನಿಸಿದರೂ ಕನ್ನಡದಲ್ಲಿ ಬಂದ ದಲಿತ ಆತ್ಮಕತೆಗಳು ಮೌಲಿಕ ಸ್ಥಾನಗಳನ್ನು ಪಡೆದುಕೊಂಡವು. ಹಾಗಾಗಿ ಕನ್ನಡ ದಲಿತ ಆತ್ಮಕಥೆಗಳ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಮಹತ್ವಗಳ ಸಂಶೋಧನೆ ಅಗತ್ಯವಿದೆ. ದಲಿತ ಆತ್ಮಕತೆಗಳು ಅವಮಾನ ಮತ್ತು ಸ್ವಾಭಿಮಾನದ ಸ್ಮಾರಕಗಳು. ಇವೇ ಆತ್ಮಕತೆಗಳ ಅಂತರಾತ್ಮದಿಂದ ಎದ್ದು ಬಂದಿರುವುದು ಕಂಡು ಬರುತ್ತದೆ. ಇವುಗಳ ಹಿಂದಿರುವ ಮೂಲಭೂತವಾದ ಆಶಯವೇ ಈ ಅಸಮಾನತೆಯ ಸಮಾಜವನ್ನು ಸಮಾನತೆಯೆಡೆಗೆ ಕರೆದೂಯ್ಯಬೇಕು ಎನ್ನುವುದಾಗಿದೆ. ಇವುಗಳ ಜೊತೆಗೆ ಹಸಿವು, ಸ್ವಾಭಿಮಾನ, ಶಿಕ್ಷಣ, ಉದ್ಯೋಗ, ಅಸ್ಪೃಶ್ಯತೆ, ಅವಮಾನ, ಅಸಮಾನತೆ ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಹೋರಾಟ, ಸಂಘಟನೆ ಮತ್ತು ಮನುಷ್ಯ ಸಂಬಂಧಗಳ ನೆಲೆ ಇವುಗಳ ಹಿನ್ನಲೆಯಲ್ಲಿ ಅನುಭವಗಳು ಯಾವ ಉದ್ದೇಶಕ್ಕಾಗಿ ದುಡಿಯುತ್ತವೆ ಎಂಬ ಸಾಮಾಜಿಕ ಪರಿವರ್ತನೆಯ ಸಾಧ್ಯತೆಗಳಿಗಾಗಿ ಕನ್ನಡ ದಲಿತ ಆತ್ಮಕತೆಗಳಲ್ಲಿ ಸಂಶೋಧನೆ ನಡೆಯಬೇಕಾಗಿದೆ. ದಲಿತ ಕಾವ್ಯ, ಸಣ್ಣಕಥೆ, ಕಾದಂಬರಿ ಹಾಗೂ ನಾಟಕ ಕ್ಷೇತ್ರದಲ್ಲಿ ಸಂಶೋಧನೆ ನಡೆದಿದೆ. ಆದರೆ ದಲಿತ ಆತ್ಮಕಥೆಗಳ ಬಗ್ಗೆ ಸಣ್ಣಪುಟ್ಟ ಲೇಖನಗಳು, ನಿಬಂಧಗಳು, ಸಣ್ಣಪುಟ್ಟ ವಿಮರ್ಶೆಗಳು ಮಾತ್ರ ಬಂದಿವೆ. ಭಾರತೀಯ ದಲಿತ ಸಾಹಿತ್ಯದ ಸಂದರ್ಭದಲ್ಲಿ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ ಸಮಗ್ರವಾದ ಇದುವರೆಗೂ ನಡೆದಿರುವುದಿಲ್ಲ. ಹಾಗಾಗಿ ಮರಾಠಿ ಮತ್ತು ಕನ್ನಡದ ಸಾರಸ್ವತ ಲೋಕಕ್ಕೆ ಹೊಸ ಆಯಾಮ ನೀಡಿದ ದಲಿತ ಆತ್ಮಕಥೆಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಶೋಧನಾತ್ಮಕವಾದ ಆಧ್ಯಯನ ಮಾಡುವುದು ನಮ್ಮೆಲ್ಲರ ಸಾಂಸ್ಕೃತಿಕ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಹಾಪ್ರಬಂಧಕ್ಕೆ **ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ** ಎಂಬ ಶೀರ್ಷಿಕೆಯನ್ನು ನೀಡಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಅಧ್ಯಯನ ವ್ಯಾಪ್ತಿ

ನನ್ನ ಈ ಸಂಶೋಧನೆಯ ವ್ಯಾಪ್ತಿಯಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಸಮಾರೋಪವನ್ನು ಹೊರತುಪಡಿಸಿ ಮಹಾಪ್ರಬಂಧವು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಇಲ್ಲಿನ ಅಧ್ಯಾಯಗಳನ್ನು ವಿವರಣಾತ್ಮಕ ಹಾಗೂ ವಿಮರ್ಶಾತ್ಮಾಕ ದೃಷ್ಟಿಕೋನದೊಂದಿಗೆ ಸಮಾಜಶಾಸ್ತ್ರೀಯ ನೆಲೆಯಲ್ಲಿ ನಿರೂಪಣೆ ಮಾಡಲಾಗಿದೆ. ಪ್ರವೇಶಿಕೆಯ ವಿಷಯದಲ್ಲಿ ದಲಿತ ಸಾಹಿತ್ಯದ ಬೆಳವಣಿಗೆಯ ಹಿನ್ನೆಲೆಯಲ್ಲಿ ಆಂಶಿಕವಾಗಿ ಬೌದ್ಧಧರ್ಮ ಹಾಗೂ ವಚನಯುಗ,

ದಾಸಯುಗ ಆಶಯಗಳನ್ನು ತಿಳಿಸಲಾಗಿದೆ. ಮುಂದೆ ಹೊಸಗನ್ನಡ ಸಾಹಿತ್ಯದ ಚಾರಿತ್ರಿಕ ಸನ್ನಿವೇಶದವರೆಗೂ ಸಂವೇದನೆಯ ಸೂಕ್ಷ್ಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಹಾಗೆಯೇ ದಲಿತ ಸಾಹಿತ್ಯದ ಹುಟ್ಟಿಗೆ ಮೂಲಭೂತ ಕಾರಣಾಂಶಗಳನ್ನು ಚಾರಿತ್ರಿಕ ನೆಲೆಯಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ. ಮುಖ್ಯವಾಗಿ ಈ ಮಹಾಪ್ರಬಂಧವನ್ನು ರಚಿಸಿರುವ ಉದ್ದೇಶ ಮತ್ತು ಮಹತ್ವವನ್ನು ತಿಳಿಸಲಾಗುವುದು.

ಮೊದಲನೆಯ ಅಧ್ಯಾಯದಲ್ಲಿ **'ಭಾರತೀಯ ದಲಿತ ಆತ್ಮಕಥೆಗಳ ಪ್ರೇರಣೆ ಮತ್ತು ಪ್ರಭಾವಗಳು'** ಎಂಬ ವಿಷಯಗಳನ್ನು ಅಧ್ಯಾಯನಕ್ಕೆ ಒಳಪಡಿಸಲಾಗಿದೆ. ಎಪ್ಪತ್ತರ ದಶಕದಿಂದೀಚೆಗೆ ಕನ್ನಡ ಸಾಹಿತ್ಯದಲ್ಲಿ ಅಕ್ಷರ ವಂಚಿತ ಸಮುದಾಯವು ಅಕ್ಷರವನ್ನು ಕಲಿತು ಬರವಣಿಗೆಯ ಜಾಡನ್ನು ಹಿಡಿದು ತಾನು ಉಂಡಂತಹ ಎಲ್ಲಾ ರೀತಿಯ ನೋವು-ನಲಿವುಗಳನ್ನು ದಲಿತರು ಬರೆಯತೊಡಗಿದರು. ಈ ಅಕ್ಷರ ವಂಚಿತ ದಲಿತರು ಬರೆಯಲು ಪ್ರಾರಂಭಿಸಿದಾಗ ಕನ್ನಡ ಸಾಹಿತ್ಯದಲ್ಲಿ ಒಂದು ರೀತಿಯ ಸಂಚಲನವೇ ಉಂಟಾಯಿತು. ದಲಿತ ಬರವಣಿಗೆಯ ಸಂಚಲನಕ್ಕೆ ಜಾಗೃತಿಯ ಪ್ರತೀಕಗಳಾಗಿ ಹಲವಾರು ಪ್ರಭಾವಗಳು ಮತ್ತು ಪ್ರೇರಣೆಗಳು ಕೆಲಸ ಮಾಡಿವೆ. ಅಂತಹ ಪ್ರೇರಣೆ ಪ್ರಭಾವಗಳನ್ನು ಕುರಿತಂತೆ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ದಲಿತ ಪದದ ಅರ್ಥ ಮತ್ತು ವ್ಯಾಖ್ಯಾನಗಳನ್ನು ಕುರಿತಂತೆ ಕನ್ನಡ ಸಾಹಿತ್ಯ ಹಲವಾರು ಚಿಂತಕರ ಚಿಂತನೆಗಳನ್ನು, ಅಭಿಪ್ರಾಯಗಳನ್ನು ಸಂಗ್ರಹಿಸಿ ಚರ್ಚಿಸಲಾಗುವುದು. ದಲಿತ ಸಾಹಿತ್ಯದ ಹುಟ್ಟು ಹಾಗೂ ಬೆಳವಣಿಗೆಯ ಹಿನ್ನೆಲೆಯಲ್ಲಿ ಚರ್ಚೆ ಮಾಡುತ್ತಾ ಮರಾಠಿ ಮತ್ತು ಕನ್ನಡ ದಲಿತ ಆತ್ಮಕತೆಯ ಪರಿಕಲ್ಪನೆ ಮತ್ತು ಹುಟ್ಟು ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುತ್ತದೆ. ಹಾಗೆಯೇ ದಲಿತ ಪ್ಯಾಂಥರ್ಸ್‌ನ ಹುಟ್ಟು ಬೆಳವಣಿಗೆಯಿಂದ ಒಳಗೊಂಡಂತೆ ಕಪ್ಪು ಸಾಹಿತ್ಯ, ದಲಿತ ಚಳುವಳಿಯ ಹುಟ್ಟಿನ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯದ ಬೆಳವಣಿಗೆಗೆ ಹೇಗೆ ಈ ಚಳುವಳಿಗಳು ಪ್ರಮುಖ ಪಾತ್ರವಹಿಸಿದವು ಎಂಬುದನ್ನು ಚರ್ಚಿಸಲಾಗುವುದು. ಇವುಗಳಷ್ಟೇ ಅಲ್ಲದೆ ಈ ಎಲ್ಲಾ ಚಿಂತನೆಗಳ ಬೆಳವಣಿಗೆ ಹಾಗೂ ಸಮುದಾಯದಲ್ಲಿ ಜಾಗೃತಿಯ ಮತ್ತು ಸ್ವಾಭಿಮಾನದ ಬೀಜವನ್ನು ಬಿತ್ತಿ, ತನ್ನೊಳಗಿನ ಅಂತರಂಗದ ಭಾವನೆಗಳನ್ನು ನಿರ್ಭಿಡತೆಯಿಂದ ಅಭಿವ್ಯಕ್ತಿಸಲು ಕಾರಣರಾದ ಜ್ಯೋತಿಬಾಫುಲೆ, ಮಹಾತ್ಮಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್, ರಾಮಮನೋಹರ ಲೋಹಿಯಾ, ಪೆರಿಯಾರ್ ಮತ್ತು ಕಾರ್ಲ್‌ಮಾರ್ಕ್ಸ್ ಮೊದಲಾದವರ ಚಿಂತನೆಗಳನ್ನು ಕುರಿತಂತೆ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಎರಡನೆಯ ಅಧ್ಯಾಯದಲ್ಲಿ **'ಭಾರತೀಯ ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳು'** ಎಂಬ ವಿಷಯವನ್ನು ಕುರಿತು ವಿಶ್ಲೇಷಿಸಲಾಗುವುದು. ಭಾರತವು ಸಾಂವಿಧಾನಿಕವಾಗಿ ಹದಿನೈದು ಭಾಷೆಗಳನ್ನು ಗುರುತಿಸಿದ್ದು, ಇಂತಹ ಕೆಲವು ಭಾಷೆಗಳಲ್ಲಿನ ದಲಿತ ಸಾಹಿತ್ಯದ ಬಗೆಗೆ ಕಿರುನೋಟವನ್ನು ಬೀರಲಾಗುವುದು. ದಲಿತ ಸಾಹಿತ್ಯವು ಮೊಟ್ಟಮೊದಲ ಬಾರಿಗೆ ಅಂಕುರಿಸಿದ್ದು ಮಹಾರಾಷ್ಟ್ರದ ದಲಿತ ಸಾಹಿತ್ಯದಿಂದ ಕನ್ನಡ, ತಮಿಳು, ಮರಾಠಿ, ತೆಲಗು, ಮಲಯಾಳಂ, ಹೀಗೆ ದಕ್ಷಿಣಭಾರತದ ಕೆಲವು ಭಾಷೆಗಳು ಅಂತೆಯೇ ಉತ್ತರಭಾರತದ ಕೆಲವು ಪ್ರಮುಖ ಭಾಷೆಗಳಲ್ಲಿ ದಲಿತ ಸಾಹಿತ್ಯದ ಪ್ರಾರಂಭಿಕ ಹೆಜ್ಜೆಗಳನ್ನು ಗುರುತಿಸಿ, ದಲಿತ ಆತ್ಮಕಥೆಗಳ ಕೃತಿಗಳ ಸಂಕ್ಷಿಪ್ತವಾದ ಮಾಹಿತಿಯನ್ನು ವಿವೇಚಿಸಲಾಗುವುದು.

ಮೂರನೇ ಅಧ್ಯಾಯದಲ್ಲಿ **'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕ ನೆಲೆಗಳು'** ಎಂಬ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳು ದಲಿತ ಬದುಕಿನ ಸಾಂಸ್ಕೃತಿಕ ಕೈಗನ್ನಡಿಗಳು. ಏಕೆಂದರೆ ದಲಿತನೊಬ್ಬನ ಬದುಕು, ಅನುಭವ ಕಥನವಾಗಿರುವುದಿಲ್ಲ ಇದು ದಲಿತ ಜಗತ್ತಿನ ಸಾಮುದಾಯಿಕ ಅನುಭವ ಕಥನವಾಗಿರುತ್ತದೆ. ಮೂಕಲೋಕದ ಸಾವಿರಾರು ಬಾಯಿಗಳಲ್ಲಿ ಕತ್ತಲ ಕನಸುಗಳನ್ನು ಹುದಗಿಸಿಕೊಂಡ ಕಥನದ ರೂಪವಾಗಿ ಕಂಡುಬರುತ್ತದೆ. ದಲಿತ ವ್ಯಕ್ತಿ ಅನುಭವಿಸಿದ ನೋವು, ಜಾತೀಯತೆಯ, ಅಸ್ಪೃಶ್ಯತೆಯ ಸೋಂಕು, ಅವಮಾನ, ಬಡತನ, ಹಸಿವು, ಜೀತಗಾರಿಕೆಯ ಸಂಕಟಗಳು ಊರುಕೇರಿಯ ಬದುಕಿನ ಸಾಮಾಜಿಕ ತಲ್ಲಣಗಳು, ಹೀಗೆ ಹತ್ತು ಹಲವಾರು ಸಂಗತಿಗಳನ್ನು ಚಿತ್ರಿಸುವುದಾಗಿದೆ. ದಲಿತ ಕೇರಿಯು ಪ್ರತಿದಿನವು ಒಂದಿಲ್ಲೊಂದು ಪ್ರತಿರೋಧಗಳನ್ನು ಇಂದಿಗೂ ಅನುಭವಿಸುತ್ತಿರುವುದು ನಮ್ಮ ಕಣ್ಣ ಮುಂದಿದೆ. ಈ ಪ್ರತಿರೋಧಗಳಿಂದ ವಿರಾಮದ ಅವಶ್ಯಕತೆಯನ್ನು ತಿಳಿಸುವುದು ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಸಾಮಾಜಿಕ ಕಾಳಜಿಯಾಗಿರುತ್ತದೆ. ಆದರೆ 'ದಲಿತರ ಮೇಲೆ ಬಲವಂತವಾಗಿ ಹೇರಲ್ಪಟ್ಟ ಜೀವನ ಕೇವಲ ಅವನಿಗಷ್ಟೇ ಸೀಮಿತವಾಗಿರುವುದಿಲ್ಲ. ಅದು ಇಡೀ ದಲಿತ ಸಮುದಾಯದ ಮೇಲೆ ಹೇರಲ್ಪಟ್ಟಿರುತ್ತದೆ'. ಆದ್ದರಿಂದ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳು ದಲಿತ ಸಮಾಜದ ಆತ್ಮಕಥನಗಳೇ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ಸೋದಾಹರಣ ವಿಶ್ಲೇಷಣೆಯೊಂದಿಗೆ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ **'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಸಾಂಸ್ಕೃತಿಕ ನೆಲೆಗಳ'ನ್ನು** ಶೋಧಿಸಲಾಗುವುದು. ಮರಾಠಿ ಮತ್ತು ಕನ್ನಡ ಸಾಹಿತ್ಯದ ದಲಿತ ಆತ್ಮಕಥೆಗಳಲ್ಲಿ

ನಿರೂಪಣೆಗೊಂಡಿರುವ ಸಾಹಿತ್ಯ ಸಾಂಸ್ಕೃತಿಕ ಸಂಕ್ರಮಣವೇ ಸರಿ. ಒಂದಲ್ಲೊಂದು ರೀತಿ–ಸಂಪ್ರದಾಯಗಳನ್ನು ಒಳಗೊಂಡಿದೆ. ಅಲ್ಲದೆ ಕರ್ನಾಟಕದಾದ್ಯಂತ ದಲಿತರು ಪ್ರಾದೇಶಿಕವಾಗಿ, ಆಯಾಯ ಪ್ರದೇಶಕ್ಕೆ ಅನುಗುಣವಾಗಿ ವಿವಿಧ ಬಗೆಯ ಸಾಂಸ್ಕೃತಿಕ ಸಂಪನ್ನತೆಯನ್ನು ಹೊಂದಿದ್ದಾರೆ. ದಲಿತ ಬದುಕಿನ ಸಂಸ್ಕೃತಿ, ನಂಬಿಕೆ ಆಚರಣೆಗಳು, ವಿವಿಧ ರೀತಿಯ ಸಂಪ್ರದಾಯಗಳು, ಬಗೆಬಗೆಯ ಆಹಾರ ಪದ್ಧತಿಗಳು ಇವುಗಳೊಟ್ಟಿಗೆ ಉಡುಗೆ–ತೊಡುಗೆಗಳ ಸಂಗತಿಗಳು ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ಸಾಂಸ್ಕೃತಿಕ ನೆಲೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ **ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಫಲಿತ – ಆಶಯ** ಹಾಗೂ ಸಮಾರೋಪದಲ್ಲಿ ಅಕ್ಷರಸ್ಥರು ಹಾಗೂ ಅನಕ್ಷರಸ್ಥ ಇಬ್ಬರನ್ನೂ ಕುರಿತ ದಲಿತ ಸಮುದಾಯದ ಬದುಕಿನ ತಲ್ಲಣಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿದ ಮೇಲೆ ಈ ಸಮಾಜದ ಬದಲಾವಣೆಯ ಕುರಿತು ಮರಾಠಿ ಮತ್ತು ಕನ್ನಡ ದಲಿತ ಆತ್ಮಕತೆಗಳು ಬಿತ್ತರಿಸುವ ಬಹುಮುಖ್ಯವಾದ ಆಶಯಗಳನ್ನು ದಾಖಲು ಮಾಡಲಾಗುವುದು. ಆನಂತರ ಅಧ್ಯಯನದ ಫಲಿತಗಳನ್ನು ನಿರೂಪಿಸಲಾಗುವುದು. ಸಮಾರೂಪದಲ್ಲಿ ಪ್ರಮುಖ ಅಂಶಗಳನ್ನು ಕುರಿತಂತೆ ಚರ್ಚಿಸಲಾಗುವುದು. ಮಹಾಪ್ರಬಂಧದ ಅನುಬಂಧದಲ್ಲಿ ರಚನೆಗೆ ಪೂರಕವಾದ ಮೂಲ ಆಕರಗಳ ವಿವರ ಮತ್ತು ಪೂರಕವಾದ ಆಕರಗಳ ಸಮಗ್ರವಾದ ಮಾಹಿತಿಯನ್ನು ನೀಡಲಾಗುವುದು. ಅಂತಿಮವಾಗಿ ಔಚಿತ್ಯಪೂರ್ಣವೆಂದು ಭಾವಿಸಿ ಕನ್ನಡ ದಲಿತ ಆತ್ಮಕಥೆಗಳ ಕೃತಿಗಳ ಮುಖಪುಟಗಳನ್ನು ಸಂಶೋಧನಾ ಮಹಾಪ್ರಬಂಧ ಕೊನೆಯಲ್ಲಿ ದಾಖಲಿಸಲಾಗುವುದು.

ಅಡಿಟಿಪ್ಪಣಿಗಳು

೧. ಜನಾರ್ಧನ ಎರ್ಪಕಟ್ಟೆ, ದಲಿತ ಚಿಂತನೆ, ಪುಟ–೧೮.

೨. (ಸಂ) ಅರವಿಂದ ಮಾಲಗತ್ತಿ, ಸಂಪಾದಕರ ಮಾತು : ದಲಿತಮಾರ್ಗ, ೨೦೦೨.

ಅಧ್ಯಾಯ ೧

ಭಾರತೀಯ ದಲಿತ ಆತ್ಮಕಥೆಗಳ ಪ್ರೇರಣೆ ಮತ್ತು ಪ್ರಭಾವಗಳು

ದಲಿತ ಸಾಹಿತ್ಯ ನಮ್ಮ ಸಮಾಜದ ಹೊಸ ದನಿ. ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯದ ಮೇಲೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪ್ರಭಾವ ಅಪಾರ. ಏಕೆಂದರೆ ಇವರು ಭಾರತೀಯ ದಲಿತ ಸಾಹಿತ್ಯ ಬೆಳವಣಿಗೆಯ ಸ್ಫೂರ್ತಿಯ ಚಿಲುಮೆ ಇವರಾಗಿದ್ದಾರೆ. ದಲಿತ ಸಮುದಾಯ ಜನರಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ, ಸಮಾನತೆ, ಸೋದರತ್ವಗಳನ್ನು ಬಿತ್ತಿದವರು. ಈ ಹಿನ್ನೆಲೆಯಲ್ಲಿ ದಲಿತ ಚಿಂತನೆ, ದಲಿತಪ್ರಜ್ಞೆ, ದಲಿತಪರ ಸಂವೇದನೆಗಳು, ಕನ್ನಡ ಸಾಹಿತ್ಯದಲ್ಲಿ ಮೂಡಿಬಂದವು. ದಲಿತ ಸಾಹಿತಿಗೆ ಒಂದು ಸಾಮಾಜಿಕ ಜವಾಬ್ದಾರಿ ಇದೆ. ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಅವರ ಜೀವನ ಕ್ರಮವಿದೆ. ಇಲ್ಲಿ, ಜೀವ ವಿರೋಧಿ ವೈದಿಕ ಧರ್ಮವನ್ನು ತೊರೆದು ಮಾನವ ಧರ್ಮವನ್ನು ಅಪ್ಪಿಕೊಳ್ಳುವಂತ, ಒಪ್ಪಿಕೊಳ್ಳುವಂತ ಆದರ್ಶಗಳು, ಚಿಂತನೆಗಳು ಮುಖ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ "ಅಂಬೇಡ್ಕರ್ ಪ್ರೇರಣೆಯ ಮಾತೃಕೋಶದಿಂದಲೇ ದಲಿತ ಸಾಹಿತ್ಯದ ಜನ್ಮವಾಯಿತೆಂಬುದು ಖಚಿತವಾದರೂ ಇದಕ್ಕೆ ಹಿನ್ನೆಲೆಯಾಗಿ ಮಹಾರಾಷ್ಟ್ರದಲ್ಲಿ ಸುದೀರ್ಘ ಪರಂಪರೆ ಇರುವುದು ಮರೆಯಲಾಗದು"[೧] ಈ ನೆಲೆಯಲ್ಲಿ ತಳ ಸಮುದಾಯದ ಲೇಖಕರಿಂದ ಮೂಡಿ ಬಂದ ಸಾಹಿತ್ಯ ಭಾರತೀಯ ದಲಿತ ಸಾಹಿತ್ಯವಾಯಿತು.

೧.೧ ದಲಿತ ಪದದ ಅರ್ಥ ಮತ್ತು ವ್ಯಾಖ್ಯಾನ.

ಭಾರತೀಯ ದಲಿತ ಸಾಹಿತ್ಯದ ಪೂರ್ವ ಪರಂಪರೆಯನ್ನು ಅಧ್ಯಯನ ಮಾಡಿದರೆ 'ದಲಿತ' ಎಂಬ ಪದವು ಹಳಗನ್ನಡ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಧಿಕೃತವಾಗಿ ಕಂಡು ಬರುವುದಿಲ್ಲ. ಇದು ಇತ್ತೀಚಿನ ದಿನಗಳಲ್ಲಿ ಬೆಳೆದು ಬಂದಿರುವ ಒಂದು ಪರಿಕಲ್ಪನೆಯಾಗಿದೆ. ಅಂದರೆ ಎಪ್ಪತ್ತರ ದಶಕದಲ್ಲಿ ಈ ಪದವು ಮಹತ್ವದ ಚಲಾವಣೆಯನ್ನು ಪಡೆದುಕೊಂಡಿತು. ದಲಿತ ಎಂಬ ಪದವನ್ನು ಮೊಟ್ಟಮೊದಲು ಅಸ್ಪೃಶ್ಯರು ಎನ್ನುವ ಅರ್ಥದಲ್ಲಿ ಬಳಸುತ್ತಿದ್ದರು. "ಬಂಡಾಯ ಸಾಹಿತ್ಯದ ನಂತರ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗೆ ಒಳಪಟ್ಟವರೆಲ್ಲರೂ 'ದಲಿತರು' ಎಂಬ ಅರ್ಥದಲ್ಲಿ ಬಳಸಲಾಗಿದೆ. ಈ ಬೆಳವಣಿಗೆಗಳಿಂದ ದಲಿತ ಎಂಬ ಪದವನ್ನು ಕುರಿತು ಹೊಸ ಚರ್ಚೆಗಳು ನಡೆಯಲು ದಾರಿ ಮಾಡಿಕೊಟ್ಟಿತು".[೨]

ದಲಿತ ಎಂದರೆ ಯಾರು ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಸ್ವಲ್ಪ ಕಷ್ಟವೆ. ಏಕೆಂದರೆ ದಲಿತರ ಪರವಾಗಿ ಸಾಹಿತ್ಯ ರಚನೆಗೊಂಡ ನಂತರವೇ ದಲಿತ ಎಂದರೆ ಯಾರು ಎಂಬ ಪ್ರಶ್ನೆ ಹೆಚ್ಚು ಚರ್ಚಿತವಾದ ಸಂಗತಿಯಾಗಿದೆ. ದಲಿತ ಎಂಬ ಪದ ಜಾತಿವಾಚಕವೇ ಅಥವಾ ವ್ಯವಸ್ಥೆಯ ವಿರುದ್ಧದ ಒಂದು ಧ್ವನಿಯೇ; ಇಲ್ಲ ಒಂದು ಚಳುವಳಿಯೇ ಅಥವಾ ಒಂದು ಪಂಥವೇ ಹೀಗೆ ನಾನಾ ಪ್ರಶ್ನೆಗಳು ನಮ್ಮ ಮುಂದೆ ನಿಲ್ಲುತ್ತವೆ.

"ದಲಿತ ಎಂಬ ಪದ ನಿಘಂಟಿನ ಪ್ರಕಾರ ಒಡೆಯಲ್ಪಟ್ಟ, ಸೀಳಲ್ಪಟ್ಟ, ತುಂಡು ಮಾಡಲ್ಪಟ್ಟ, ಪುಡಿ ಮಾಡಲ್ಪಟ್ಟ, ಅರೆಯಲ್ಪಟ್ಟ ಅಳಿಸಲ್ಪಟ್ಟ, ವಿನಾಶ, ತುಳಿಯಲ್ಪಟ್ಟ, ಹತ್ತಿಕ್ಕಲ್ಪಟ್ಟ, ಪದಕ್ರಾಂತಿ, ಹಿಂಸೆಗೆ ಒಳಗಾದ ಮುಂತಾದ ಅರ್ಥಗಳನ್ನು ಒಳಗೊಂಡಿದೆ".[೩] ಆದರೆ ಕೆಲವರು ದಲಿತರೆಂದರೆ ಅಸ್ಪೃಶ್ಯರೆಂದು ಇನ್ನು ಕೆಲವರು ತುಳಿತಕ್ಕೆ ಒಳಪಟ್ಟವರು ಎಂದು ಅರ್ಥೈಸಲು ಪ್ರಯತ್ನಿಸುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಪ್ರಕಾರ 'ದಲಿತ' ಎಂದರೆ ದಳ, ಗುಂಪು, ಸೈನ್ಯ, ದಮನಕ್ಕೆ ಒಳಗಾದವರು, ಶೋಷಿತ ಜನ, ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದವರು ಎಂದು ಅರ್ಥೈಸುತ್ತದೆ. ಆದರೆ "ಮಹಾರಾಷ್ಟ್ರದಲ್ಲಿ ದಲಿತ ಎಂಬ ಪದವನ್ನು ಮೂರು ಬಗೆಯಲ್ಲಿ ಅರ್ಥೈಸಿರುವುದು ಕಂಡುಬರುತ್ತದೆ.

ದಲಿತ – ಕೇವಲ ಮಹಾರ ಜನಾಂಗ

ದಲಿತ – ಅಸ್ಪೃಶ್ಯರು

ದಲಿತ – ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿಯಲ್ಪಟ್ಟವರು"[೪]

ಹೀಗೆ ದಲಿತ ಸಾಹಿತ್ಯದ ಹಿನ್ನೆಲೆಯಲ್ಲಿ ನೋಡಿದರೆ ದಲಿತ ಪದಕ್ಕೆ ಸಂಕುಚಿತ ಅರ್ಥ ಬರುತ್ತದೆ. ಏಕೆಂದರೆ ಅಸ್ಪೃಶ್ಯ ಎಂದು ಯಾರನ್ನು ಕರೆಯುತ್ತೇವೆಯೋ ಅವರಿಗೆ ಮಾತ್ರ ಈ ಪದ ಅನ್ವಯಿಸುತ್ತದೆ. ಹಾಗೆಯೇ ಈ ಪದವು ಜಾತಿವಾಚಕವಾಗಿ ಕಂಡುಬರಬಹುದು. ಅದ್ದರಿಂದಲೇ ಬಾಬುರಾವ್‌ಬಾಗೋಲ, ಡಾ.ವಾಂಖಡೆ, ಡಾ.ಸದಾಕರ್‍ಲ್ಹಾಡೆ, ಇವರುಗಳು ದಲಿತ ಸಾಹಿತ್ಯ ಚಳುವಳಿ ಎಂದರೆ ಶೋಷಿತರ ಸಾಹಿತ್ಯ ಚಳುವಳಿ ಎಂಬ ಅರ್ಥದಲ್ಲಿ ಬಳಸಿ ದಲಿತ ಪದವು ಶೋಷಿತರನ್ನೆಲ್ಲ ಒಳಗೊಳ್ಳುತ್ತದೆ ಎಂದು ಹೇಳಿದ್ದಾರೆ. "ಅಮೇರಿಕೆಯೊಳಗಿನ ಕರಿ, ಕೆಂಪು, ಕಂದು, ಆಫ್ರೋ, ಏಶಿಯಾ ದೇಶದೊಳಗಿನ ಕರಿ, ಕೆಂಪು, ಹಳದಿ ಈ ಜನರನ್ನೆಲ್ಲ ದಲಿತ ಪದ ಒಳಗೊಳ್ಳುತ್ತದೆ. ನಮ್ಮ ದೇಶದೊಳಗಿನ ಅಸ್ಪೃಶ್ಯ ಆದಿವಾಸಿ ಮತ್ತು ಶೋಷಿತ ಜನರೆಲ್ಲ ಈ ಪದದ ವ್ಯಾಪ್ತಿಯಲ್ಲಿ ಸೇರುತ್ತಾರೆ ಎಂದು ಬಾಬುರಾವ್‌ಬಾಗೋಲ ೧೭, ೧೮, ಜನವರಿ ೧೯೭೬ರಂದು ನಾಗಪೂರದಲ್ಲಿ ಜರುಗಿದ ದಲಿತ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು".[೫]

ಈ ಮಾತು ದಲಿತ ಎಂಬ ಪದಕ್ಕೆ ವಿಶಾಲ ಅರ್ಥವನ್ನು ಒದಗಿಸಿಕೊಡುತ್ತದೆ. ಆದರೆ ಒಂದು ಜಾತಿಯ ಹಿನ್ನೆಲೆಯಲ್ಲಿ ನೋಡದೆ ವಿಶಾಲ ಅರ್ಥದಲ್ಲಿ ಈ ಪದವನ್ನು ನೋಡಿದರೆ ದಲಿತ ಸಾಹಿತ್ಯದ ನಿಲುವಿಗೆ ಅರ್ಥವೇ ಇಲ್ಲದಂತಾಗುತ್ತದೆ. ಎಲ್ಲ ಜನಾಂಗದಲ್ಲೂ ಶೋಷಿತರಿದ್ದಾರೆಂಬುದು ನಿಜ. ಎಲ್ಲ ವರ್ಗಗಳಲ್ಲೂ ಶೋಷಿತರು ಇದ್ದಾರೆ ಎಂದು ಒಪ್ಪಿಕೊಂಡರು ಸಹ ಇವರೆಲ್ಲಾ ದಲಿತರು ಎಂಬ ವಲಯಕ್ಕೆ ಸೇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಯಾವ ವ್ಯಕ್ತಿ ಅಸ್ಪೃಶ್ಯನಾಗಿ ಹುಟ್ಟಿ ಅಲ್ಲಿಯ ನೋವು-ನಲಿವುಗಳನ್ನುಂಡು ತನ್ನ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುತ್ತಾನೋ ಆತ ದಲಿತ ಸಾಹಿತಿಯಾಗಬಲ್ಲ. ಆತ ಬರೆದದ್ದು ದಲಿತ ಸಾಹಿತ್ಯವಾಗುತ್ತದೆ. ಹೀಗೆ ನೋಡಿದರೆ ದಲಿತ ಎಂಬ ಪದಕ್ಕಿರುವ ಸಮರ್ಥ ಅರ್ಥವೇ ಉತ್ತಮ ಅರ್ಥವಾಗುತ್ತದೆಂಬುದು ಅನೇಕ ಬರಹಗಾರರು ಮತ್ತು ಚಿಂತಕರ ಅಭಿಪ್ರಾಯವಾಗಿದೆ.

ದಲಿತರೆಂದರೆ ಈ ಜಗತ್ತು ಮತ್ತು ಜೀವನವನ್ನು ಹೊಸ ದೃಷ್ಟಿಯಿಂದ ಕಟ್ಟಬಯಸುವವರು; ಪ್ರಜ್ಞಾವಂತ ದಲಿತನಿಂದ, ಪ್ರಳಯಕಾರಿ ದಲಿತನಿಂದ ಇವತ್ತಿನ ಸಮಾಜದ ಪುನರ್ ನಿರ್ಮಾಣ ಚಿಂತನೆ, ಆತನಿಗಾಗಿ ಹೊಸ ಶಾಸ್ತ್ರಗಳು ಉಪಲಬ್ದವಾಗಿವೆ. ಇಂತಹ ಸಂದರ್ಭದಲ್ಲಿ ಒಂದೆರಡು ಪ್ರಶ್ನೆಗಳು ಸಹಜವಾಗಿ ಎದುರಾಗುತ್ತವೆ. ಸಂವೇದನಾಶೀಲ ಬರವಣಿಗೆ ಇತರ ಸಾಹಿತಿಗಳಿಂದ ಸಾಧ್ಯವಿಲ್ಲವೆ? ವಿಶಾಲ ಅರ್ಥದಲ್ಲಿ ಇರುವ ದಲಿತ ಪದವನ್ನು ಸಂಕುಚಿತ ಅರ್ಥದಲ್ಲಿ ಅಸ್ಪೃಶ್ಯರಿಗೆ ಬಳಸುವುದು ಎಷ್ಟು ಸರಿ? ಇಂಥ ಪ್ರಶ್ನೆಗಳಿಗೆ ದಲಿತ ಪದದಿಂದಲೇ ಉತ್ತರ ಕೊಡುವುದು ಕಷ್ಟವೆಂದು ಅರಿತ ಕೆಲವರು ದಲಿತ ಪದಕ್ಕೆ ಸಂವಾದಿಯಾಗಿ ಬೌದ್ಧ ಪದವನ್ನು ಬಳಸಿದರು. ರಾಜ ಢಾಲೆ ಅವರು "ಬೌದ್ಧ ಎಂದರೆ ಯಾವುದೇ ಒಂದು ಹೊಸ ಸಂಸ್ಕಾರ, ಹೊಸ ಜೀವನ ಮೌಲ್ಯ, ಹೊಸ ಜೀವನ ಮಾರ್ಗ ಎಂಬ ಅಂಬೇಡ್ಕರ್‌ರ ವಿಚಾರವನ್ನು ಮುಂದಿಡುತ್ತ, ದಲಿತ ಪದಕ್ಕಿಂತ ಹೆಚ್ಚು ವ್ಯಾಪಕವಾಗಿ ಸೈದ್ಧಾಂತಿಕ ಹಿನ್ನೆಲೆಯಿಂದ 'ಬೌದ್ಧ ಸಾಹಿತ್ಯ' ಪದ ಬಳಸುವ ಪ್ರಯತ್ನವು ಕೆಲವರಿಂದ ನಡೆದರೂ ಆ ಪದ ಅಷ್ಟೊಂದು ರೂಢಿಗೊಳ್ಳಲಿಲ್ಲ. ಕ್ರಮೇಣ ದಲಿತ ಪದಕ್ಕೆ ಹೆಚ್ಚು ಮನ್ನಣೆ ದೊರೆಯಿತು. ಸಾವಿರಾರು ವರುಷಗಳಿಂದ ಯಾರ ಮೇಲೆ ಅನ್ಯಾಯವಾಗಿದೆಯೋ ಅಂಥ ಅಸ್ಪೃಶ್ಯರಿಗೆ ದಲಿತರೆನ್ನಬೇಕು ಎಂಬ ವಾದ ಬಲವಾಯಿತು".[೬] ಇಂತಹ ವಾದವನ್ನು ದಲಿತ ಪ್ಯಾಂಥರ್ಸ್ ಬೆಂಬಲಿಸಿತು. ಹಿಂದೂ ಧರ್ಮ ಮತ್ತು ಸಾಂಪ್ರದಾಯಿಕ ಸಮಾಜ ಯಾರನ್ನೂ ಇವತ್ತಿಗೂ ಬಹಿಷ್ಕೃತರು ಎಂದು ದೂರವಿಟ್ಟಿದೆಯೊ ಆ ಜನರೆಲ್ಲ ಡಾ. ಬಾಬಾ ಸಾಹೇಬರ ವಿಮೋಚನಾ ಹೋರಾಟದ ಶಕ್ತಿಯನ್ನು ಪಡೆದವರು.

ಒಂದರ್ಥದಲ್ಲಿ ಈ ನಿಲುವು ಅಂಬೇಡ್ಕರ್ ಅವರ ವಿಚಾರ ಚಿಂತನೆಗಳನ್ನು ಅವಲಂಬಿಸಿ, ಅನುಸರಿಸಿ ಬಂದುದಾಗಿದೆ. ಆದರೆ ಇಂತಹ ಹಲವಾರು ವಾದಗಳು ಈ ಸಮಾಜದಲ್ಲಿ ಭದ್ರವಾದ ನೆಲೆಯನ್ನು ಕಾಣದಾದುದ್ದು ಸೋಜಿಗದ ಸಂಗತಿಯಾಗಿದೆ. 'ದಲಿತ' ಎಂಬ ಪದ ಎಷ್ಟೇ ಚರ್ಚೆಗೆ ಒಳಗಾದರೂ ಉಳಿದುಕೊಂಡಿದೆ. "ಕೇಶವ ಮೇಶ್ರಾಮ ಅವರು ಮಹಾಬಳೇಶ್ವರ ಸಾಹಿತ್ಯ ಸಮ್ಮೇಳನದ ಚರ್ಚಾಗೋಷ್ಠಿಯಲ್ಲಿ ಮಾತನಾಡುತ್ತಾ ಸಾವಿರಾರು ವರ್ಷಗಳಿಂದ ಯಾರ ಮೇಲೆ ಅನ್ಯಾಯವಾಗಿದೆಯೋ ಅಂಥ ಅಸ್ಪೃಶ್ಯರಿಗೆ ದಲಿತರೆನ್ನಬೇಕು"[೭] ಎಂದು ಉಲ್ಲೇಖ ಮಾಡಿ ಮಾತನಾಡಿದ್ದಾರೆ. ಆ ಅಭಿಪ್ರಾಯವೇ ಆಗಿನ ಸಂದರ್ಭಗಳಲ್ಲಿ ಸರ್ವಸಮ್ಮತವಾಗಿತ್ತು.

ಬಂಡಾಯ ಸಾಹಿತ್ಯ ಸಂಘಟನೆಯ ಪೂರ್ವದಲ್ಲಿಯೇ ದಲಿತ ಸಾಹಿತ್ಯ ಚಳುವಳಿ ರೂಪು ಪಡೆದಿತ್ತು. ಅದು ದಲಿತ ಚಳುವಳಿಯ ಒಂದು ಭಾಗವೇ ಆಗಿದ್ದು, ಆನಂತರದಲ್ಲಿ ರೂಪುಗೊಂಡ ಬಂಡಾಯ ಬರಹಗಾರರು ದಲಿತ ಸಂಘಟನೆಯಲ್ಲಿ ಒಳಸರಿದು ದಲಿತ ಸಾಹಿತ್ಯವನ್ನು ಇಬ್ಭಾಗ ಮಾಡಿ ದಲಿತ ಬಂಡಾಯವೆಂದು ಕರೆದರು. ಬಂಡಾಯ ಸಾಹಿತ್ಯ ಸಂಘಟನೆ ಈ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರೊಳಗೆ ಅನೇಕ ದಲಿತ ಬರಹಗಾರರು ಪ್ರಮುಖ ವ್ಯಕ್ತಿಗಳು ಆಗಿದ್ದರು. ಮರಾಠಿ ದಲಿತ ಸಾಹಿತ್ಯ ನಮ್ಮ ಬರಹಗಾರರನ್ನು ಅದರಲ್ಲೂ ದಲಿತ ಮುಖ್ಯವಾದ ಬರಹಗಾರರನ್ನು ಆಕರ್ಷಿಸಿತು. ಬಂಡಾಯ ಸಾಹಿತ್ಯದ ಸಂಘಟನೆಯಲ್ಲಿ ಗುರುತಿಸಿಕೊಂಡು ಬರವಣಿಗೆ ಮಾಡುತ್ತಿದ್ದು, ದಲಿತ ಬರಹಗಾರರು ಪ್ರತ್ಯೇಕತೆಯನ್ನು ಗುರುತಿಸಿಕೊಂಡು ಹೊರಬಂದರು. ಇಂತಹ ಸಂದರ್ಭದಲ್ಲಿ ದಲಿತ ಪದದ ಬಗೆಗೆ ಕನ್ನಡ ಸಾಹಿತ್ಯ ವಲಯದಲ್ಲಿ ಅತೀವವಾದ ಚರ್ಚೆ ನಡೆಯಿತು. ದಲಿತ ಪದವನ್ನು ಮೊದಲೆ ಚರ್ಚೆ ಮಾಡಿದಂತೆ ಸಂಕುಚಿತ ಮತ್ತು ವಿಶಾಲ ಅರ್ಥದಲ್ಲಿ ಈ ಪದವನ್ನು ಕನ್ನಡ ಸಾಹಿತ್ಯ ವಲಯದಲ್ಲಿಯೂ ಚರ್ಚೆಗೆ ಒಳಪಡಿಸಲಾಯಿತು. ದಲಿತರು ಎಂದರೆ ಕೇವಲ ಅಸ್ಪೃಶ್ಯರಲ್ಲ. ಇತರ ಜಾತಿಗಳಲ್ಲೂ ಶೋಷಣೆಗೆ ಒಳಗಾದ ಎಲ್ಲರೂ ದಲಿತರು ಎಂಬ ವಾದವು ಮಂಡಿತವಾಯಿತು. "ದಲಿತರು ಕೇವಲ ಶೋಷಿತರಷ್ಟೇ ಅಲ್ಲ. ಒಂದು ವ್ಯಕ್ತಿತ್ವವೇ ಇಲ್ಲದವರೆಂಬಂತೆ ನಡೆಯಿಸಿಕೊಳ್ಳಲ್ಪಟ್ಟರು"[೮] ಎಂದು ಹೇಳಲಾಯಿತು. ಇದಿಷ್ಟೇ ಅಲ್ಲದೆ ಸಂಘಟನಾತ್ಮಕ ಹೋರಾಟದ ದೃಷ್ಟಿಯಿಂದ ಈ ಪದದ ವ್ಯಾಪ್ತಿಯು ದೊಡ್ಡದು ಮಾಡಿ "ಆರ್ಥಿಕವಾಗಿ, ಸಾಮಾಜಿಕವಾಗಿ, ಶೋಷಿತರಾದ ಎಲ್ಲ ಜನಾಂಗದವರು ಹಾಗೂ ಸಾಹಿತ್ಯಿಕವಾಗಿ ಅಸ್ಪೃಶ್ಯತೆಯನ್ನು ನಿವಾರಿಸಲು ಅಸ್ಪೃಶ್ಯರು ಮತ್ತು ಇವರಷ್ಟೇ ಶೋಷಣೆಗೆ ಒಳಗಾದ ಕೆಳವರ್ಗದ ಜನರು ದಲಿತರಾಗಿದ್ದಾರೆ"[೯] ಹಾಗೆಯೇ "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು; ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ,

ಊರ ಹೊರಗೆ ವಾಸಿಸಿ ಕೀಳುವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ"[೧೦] ಎಂಬ ವಾದ ಒಪ್ಪಿಗೆಯಾದಂತಾಯಿತು.

ತಮಿಳು ಸಾಹಿತಿ ಅರ್ಜುನ್‌ಪಿಳ್ಳೈ ಎಂಬುವರು "ಶೂದ್ರಾತಿ ಶೂದ್ರರೆನಿಸಿಕೊಂಡ ದಲಿತರು ತಮ್ಮ ಬದುಕಿನ ಬವಣೆಗಳನ್ನು ಸ್ವತಃ ತಾವೇ ಅನುಭವಿಸಿ ಬರೆಯುವ ಬರವಣಿಗೆಗಳೇ ದಲಿತಸಾಹಿತ್ಯ. ಈ ಸಾಹಿತ್ಯದ ಮುಖ್ಯ ಗುರಿ ದಲಿತ ಸಮುದಾಯದಲ್ಲಿ ಜಾಗೃತಿಯನ್ನುಂಟು ಮಾಡುವುದಾಗಿದೆ"[೧೧] ಎಂದು ಅಭಿಪ್ರಾಯ ಪಡುತ್ತಾರೆ. ಈ ಹಿನ್ನೆಲೆಯನ್ನು ಗಮನಿಸಿದಾಗ ಅಸ್ಪೃಶ್ಯ ಜನಾಂಗವನ್ನು ಗುರುತಿಸುವುದಕ್ಕಾಗಿ ನಾನಾ ಹೆಸರುಗಳು ಬಳಕೆಯಲ್ಲಿರುವುದನ್ನು ಕಾಣಬಹುದು. ಹೊಲೆಯ, ಮಾದಿಗ, ಆದಿಕರ್ನಾಟಕ, ಪಂಚಮ, ಅಂತ್ಯಜ, ಆದಿಮಜನಾಂಗ ಇವೇ ಮೊದಲಾಗಿ "ಗಾಂಧಿಜೀಯವರು 'ಹರಿಜನ' ಎಂಬ ಪದವನ್ನು ರೂಪಿಸಿ ಬಳಕೆಗೆ ತಂದರು. ಹರಿಜನ ಎಂದರೆ ಸಾಮಾನ್ಯ ಅರ್ಥದಲ್ಲಿ 'ದೇವರ ಮಕ್ಕಳು' ಎಂದಾಗುತ್ತದೆ. ಆದರೆ ಆಕ್ಸ್‌ಫರ್ಡ್ ನಿಘಂಟು (೧೯೮೫ರ ಮುದ್ರಣ) ಇದರಲ್ಲಿ ಹರಿಜನ ಎಂಬ ಪದಕ್ಕೆ 'ವಿಷ್ಣುವಿಗೆ ಮೀಸಲಾದ ಭಾರತೀಯ ಅಸ್ಪೃಶ್ಯ' ಎಂದು ಹೇಳುತ್ತದೆ. ಗಾಂಧಿಜೀ ಈ 'ಹರಿಜನ' ಎಂಬ ಪದವನ್ನು ಮಧ್ಯಕಾಲೀನ ಭಕ್ತಿಪಂಥದ ಕಾವ್ಯದಿಂದ ಆರಿಸಿಕೊಂಡಂತೆ ಕಾಣುತ್ತದೆ. ವಿಷ್ಣುವು ಅಸ್ಪೃಶ್ಯರನ್ನು ತನ್ನವರೆಂದೇ ಪರಿಗಣಿಸಿ ಅವರೊಡನೆ ಬೆರೆಯುತ್ತಿದ್ದ ಮತ್ತು ಅವರ ಸಂರಕ್ಷಕನಾಗಿದ್ದ ಎಂಬ ಒಂದು ಕತೆ ವಿಷ್ಣು ಪುರಾಣದಲ್ಲಿದೆ. ಭಕ್ತಿ ಪಂಥದ ಕವಿಗಳು ಈ ಕಥೆಯನ್ನು ಕಟ್ಟಿ ಹಾಡುತ್ತಾ ವಿಷ್ಣುವಿನ ಗುಣಗಾನ ಮಾಡುತ್ತಿದ್ದರು. ಹದಿನೆಂಟನೆಯ ಶತಮಾನದ ಗುಜರಾತಿನ ಭಕ್ತಿ ಕವಿ ನರಸಿಮೆಹ್ತಾ ದೇವದಾಸಿಯ ಮಗನನ್ನು ಕುರಿತು ಹೇಳುವಾಗ 'ಹರಿಜನ' ಎಂಬ ಪದವನ್ನು ಮೊಟ್ಟ ಮೊದಲ ಬಾರಿಗೆ ಉಪಯೋಗಿಸಿದೆ"೧೨ ಎಂದು ತಿಳಿದು ಬರುತ್ತದೆ. ಆದರೆ ಈ ಪದವನ್ನು ಅಂಬೇಡ್ಕರ್ ಆದಿಯಾಗಿ ವಿಚಾರವಂತ ದಲಿತ ಮಂದಿ ಒಪ್ಪಿಕೊಳ್ಳಲಿಲ್ಲ. ಇದಕ್ಕೆ ಮಹತ್ವದ ಕಾರಣವನ್ನು ಕೊಡಲಿಕ್ಕೆ ಸಾಧ್ಯವಿದೆ. ಎಷ್ಟೇ ಮಂದಿ ದಲಿತರು ವಿಷ್ಣುವಿಗಿಂತ ಶಿವನನ್ನೇ ಅಂದರೆ ಹರನ ವಿವಿಧ ರೂಪಗಳನ್ನೇ ಅಥವಾ ಆತನ ಮಡದಿಯಾದ ಪಾರ್ವತಿಯ ಬೇರೆ ಬೇರೆ ಅವತಾರಗಳನ್ನೇ ಪೂಜಿಸುತ್ತಿರುವಾಗ 'ಹರಿಜನ' ಎಂಬ ಪದ ಅಪ್ರಸ್ತುತ ಎಂದಾಯಿತು.

ದಲಿತ ಪದದ ಹಿನ್ನೆಲೆಯಲ್ಲಿ ದಲಿತರು ಯಾರು ಎಂಬ ವಿಷಯದ ಚರ್ಚೆ ಮುಂದುವರಿದಂತೆ ಶೋಷಿತರು ಮಾತ್ರವಲ್ಲ ಮೇಲ್ವರ್ಗದಿಂದ ತುಳಿತಕ್ಕೊಳಗಾಗಿ, ಪ್ರತಿಭಟಿಸಿ ಅರಳಿದರೆ ಮಾತ್ರ ದಲಿತರೆನಿಸಿಕೊಳ್ಳುತ್ತಾರೆ. ಅದ್ದರಿಂದ ದಲಿತಸಾಹಿತ್ಯದ ರೂಪವು ಶೋಷಣೆಯ ವಿರುದ್ಧದ ಧ್ವನಿ

ಅಂದರೆ ದಮನಕ್ಕೆ ಒಳಗಾದವರು ಅದನ್ನು ಪ್ರತಿಭಟಿಸಿ ಅದರ ವಿರುದ್ಧ ರಚಿಸಿದ ಅರಳಿಸಿದ ಸಾಹಿತ್ಯ ಪ್ರಕಾರವೇ ದಲಿತಸಾಹಿತ್ಯ. ಈ ಸಾಹಿತ್ಯವನ್ನು ಬರೆಯುವವರೆ ದಲಿತ ಸಾಹಿತಿಗಳು ಹೀಗೆ ಹತ್ತು ಹಲವಾರು ಅಭಿಪ್ರಾಯಗಳನ್ನು ಸಂಗ್ರಹಿಸಿ ಡಾ.ಅರವಿಂದ ಮಾಲಗತ್ತಿ ಅವರು ಮೂರು ಬಗೆಯ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ :

೧. "ಶೋಷಣೆ ಎಂಬ ಪದಕ್ಕೆ ಜಾತಿ ಭೇದವಿಲ್ಲ; ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರು.
೨. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು.
೩. ಅಸ್ಪೃಶ್ಯರೂ ಸೇರಿದಂತೆ ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರಂತೆ ಆರ್ಥಿಕ, ಸಾಮಾಜಿಕ, ರಾಜಕೀಯ, ರಂಗದಲ್ಲಿ ಶೋಷಣೆಗೆ ಒಳಗಾದ ಜನರೂ ಸೇರಿ ದಲಿತರಾಗುತ್ತಾರೆ".[೧೩]

ಅರವಿಂದ ಮಾಲಗತ್ತಿಯವರು ಸಂಗ್ರಹಿಸಿರುವ ಈ ಮೇಲಿನ ಮೂರು ಅಭಿಪ್ರಾಯಗಳನ್ನು ಗಮನಿಸಿದರೆ ಇವುಗಳು ಸಮಂಜಸವಾದುದ್ದೆಂದು ತೋರುವುದಿಲ್ಲ. ಕಾರಣ ಒಂದು ನಿರ್ದಿಷ್ಟವಾದ ವ್ಯಾಖ್ಯಾನಕ್ಕೆ ದಲಿತ ಎಂಬ ಪದವನ್ನು ಒಳಪಡಿಸಲು ಸಾಧ್ಯವಾಗದಿರುವಂತೆ ಇಲ್ಲಿ ಕಂಡುಬರುತ್ತದೆ. ದಲಿತ ಸಾಹಿತ್ಯ ಎಂಬ ಹೊಸ ಚಿಂತನೆಯ ಮೇಲೆ ವಿಶ್ಲೇಷಿಸಿ ನೋಡಿದರೆ ಅರವಿಂದ ಮಾಲಗತ್ತಿ ಅವರು ಸಂಗ್ರಹಿಸಿರುವ ಅಭಿಪ್ರಾಯಗಳು ದಲಿತ ಸಾಹಿತ್ಯವನ್ನು ಮೀರಿರುವಂತೆ ಕಂಡುಬರುತ್ತದೆ. ಮೊದಲ ಹೇಳಿಕೆ ಮತ್ತು ಕೊನೆಯ ಅಭಿಪ್ರಾಯಗಳು ಬಂಡಾಯ ಸಾಹಿತ್ಯಕ್ಕೆ ಹತ್ತಿರವಾಗಿದೆ ಎಂದು ಅನಿಸುತ್ತದೆ. ಎರಡನೆಯ ಅಭಿಪ್ರಾಯ ಪಂಚಮರು ಮತ್ತು ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರು ದಲಿತರು. ಈ ಅಭಿಪ್ರಾಯವು ದಲಿತ ಪದಕ್ಕೆ ಹತ್ತಿರವಾಗಿ ಕಂಡು ಬರುತ್ತದೆ. ಚಿಂತನಶೀಲ ದಲಿತ ಲೇಖಕರಾದ ದೇವಯ್ಯ ಹರವೆ ಅವರು ಅಸ್ಪೃಶ್ಯತೆಯ ನೆಲೆಯಿಂದಲೇ ಮೊದಲಿಗೆ ದಲಿತರು ಪರಿಕಲ್ಪನೆಯನ್ನು ಸಮರ್ಥಿಸಿಕೊಂಡು ಹೀಗೆ ವಿವರಿಸುವುದನ್ನು ಗಮನಿಸಬಹುದು "ದಲಿತ ಎಂದರೆ 'ಹಿಂಸೆಗೆ ಒಳಗಾದ', 'ಸೋಲಿಸಲಾಗದ' ಎಂಬ ಸಾಮಾನ್ಯ ಶಬ್ದಕೋಶ ಪದಗಳ ಅರ್ಥವನ್ನು ಇಟ್ಟುಕೊಂಡು ಅತ್ಯಂತ ಮೇಲುಸ್ಥಾನದಲ್ಲಿರುವ ಪುರೋಹಿತ ವರ್ಗ ಮತ್ತು ಅದರ ನಂತರ ವರ್ಗಗಳಿಂದ ತುಳಿತಕ್ಕೆ ಒಳಗಾದ, ಅಸ್ಪೃಶ್ಯರನ್ನು ಐತಿಹಾಸಿಕ ಆಧಾರದಿಂದಲೇ ಅಸ್ಪೃಶ್ಯರನ್ನು ಮಾತ್ರ ದಲಿತರೆನ್ನುತ್ತಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಯಾರನ್ನು ಕಡೆಗಣಿಸಲಾಗಿದೆಯೋ ಅಂಥವರನ್ನು ಮಾತ್ರ ದಲಿತರೆಂದು ಕರೆಯಬಹುದಾಗಿದೆ"[೧೪] ಎಂಬ ಹರವೆಯವರ ಅಭಿಪ್ರಾಯ ಸಮಂಜಸವಾದುದಾಗಿದೆ.

ಆಧುನಿಕ ಕಾಲದ ಸಂದರ್ಭದಲ್ಲಿ ದಲಿತ ಪ್ರಜ್ಞೆಯಿಂದ ಎರಡನೇ ತಲೆಮಾರಿನ ದಲಿತ ವಿದ್ಯಾವಂತರು ಹಳೆಯ ಪದಗಳನ್ನು ಬಿಟ್ಟು ಹೊಸ ಪದಗಳನ್ನು ಹುಡುಕಿಕೊಂಡು ಎಪ್ಪತ್ತರ ದಶಕದ ಜಾಗೃತ ಪ್ರಜ್ಞೆಯಿಂದ ಸಮರ್ಥಿಸಿಕೊಳ್ಳುತ್ತಾರೆ. "ಬಿ. ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಪ್ರಕರಣದಲ್ಲಿ ಮತ್ತೆ ಈ ವಿಚಾರಗಳು ಓರೆಗಲ್ಲಿಗೆ ಹಚ್ಚಲು ಪ್ರಾರಂಭವಾಯಿತು. ಹೊಲೆ, ಮಾದಿಗರು ಎಂದು ನೇರವಾಗಿ ಹೇಳಿಕೊಳ್ಳುವ ಹೊಸ ಅಲೆ ಪ್ರಾರಂಭವಾಯಿತು. 'ಹರಿಜನ' ಎಂಬ ಪುನರ್ ನಾಮಕರಣದ ಹೆಸರಿನ ಮೇಲೆ ಬೆಂಕಿ ಕಾರತೊಡಗಿದರು. 'ನಾವು ದೇವರ ಮಕ್ಕಳಲ್ಲ, ಮನುಷ್ಯರ ಮಕ್ಕಳು ಎಂದು ವಾಸ್ತವಿಕ ನೆಲೆಯಲ್ಲಿ ನೋಡುವ ಪ್ರಜ್ಞೆಯನ್ನು ತೋರಿದರು. ಈ ಹಿನ್ನೆಲೆಯಲ್ಲಿ ದಲಿತ ಪದವನ್ನು ಅಧಿಕೃತವಾಗಿ ಬಳಕೆಗೆ ತಂದರು"[೧೫].ದಲಿತ ಎಂಬ ಪದದ ಹಿನ್ನೆಲೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಸಾಹಿತ್ಯದಲ್ಲಿ 'ಡಿಪ್ರೆಸ್ಡ್' ಎಂಬ ಪದವನ್ನು ಬಳಸಿದ್ದಾರೆ. ಮರಾಠಿ ಭಾಷೆಯಲ್ಲಿ ದಲಿತ ಪದಕ್ಕೆ ಬದಲಾಗಿ ಬೌದ್ಧ ಶಬ್ಧವನ್ನು ಬಳಸುವ ಪ್ರಯತ್ನವನ್ನು ಕಾಣಬಹುದು.

ಹೀಗೆ ತುಳಿತಕ್ಕೊಳಪಟ್ಟ, ಕೀಳಾದ ಜನರನ್ನೇ ದಲಿತ್ ಎನ್ನುವ ಪದದ ಮೂಲಕ ಗುರುತಿಸಲಾಗುತ್ತದೆ. ಈ ರೀತಿಯಲ್ಲಿ ಗುರುತಿಸಿಕೊಂಡ ಇವರನ್ನು ಹೊರ ಪ್ರಪಂಚಕ್ಕೆ ಸಾರಿ ಹೇಳುವ ಕಾರಣಕ್ಕಾಗಿ ಕೆಳಮಟ್ಟದಲ್ಲಿಯೇ ಇಡಲಾಗುತ್ತಿದೆ. ಅದ್ದರಿಂದ ದಲಿತರ ಏಳಿಗೆಗಾಗಿ ಸಂಘ ಸಂಸ್ಥೆಗಳ ಸ್ಥಾಪನೆ ಮತ್ತು ಸಾಹಿತ್ಯ ರಚನೆಯ ತುರ್ತು ಏರ್ಪಟ್ಟಿತ್ತು. ಈ ಸಮಸ್ಯೆಗಳನ್ನು ಮೊದಲ ಬಾರಿಗೆ ಅರ್ಥೈಸುವುದಕ್ಕೆ ಪ್ರಯತ್ನಿಸಿದ ಮರಾಠಿ ವಿದ್ವಾಂಸರು ಎರಡು ರೀತಿಯ ವಿವರಣೆ ಕೊಡುವುದಕ್ಕೆ ಪ್ರಯತ್ನಪಟ್ಟರು.

ಮರಾಠಿಯಲ್ಲಿ ತುಳಿತಕ್ಕೊಳಪಟ್ಟ ಜಾತಿಗಳಾದ ಮಗಾರ್, ಮಾಂಗು, ಚಾಮರ್, ತೋರ್ ಎಂಬುದು ಪ್ರಾಚೀನರನ್ನು ಕುರಿತ ಸಾಮಾನ್ಯ ಪದಗಳಾಗಿವೆ. ೧೯೭೨ರಲ್ಲಿ ರಚಿಸಲಾದ ದಲಿತ ಪ್ಯಾಂಥರ್ಸ್ (ದಲಿತ ಚಿರತೆಗಳು) ತುಳಿತಕ್ಕೊಳಪಟ್ಟ, ಬುಡಕಟ್ಟು ವರ್ಗದವರು, ಕೂಲಿ ಕಾರ್ಮಿಕರು, ರೈತರು, ಅಲೆಮಾರಿ ಜನರು ಹೀಗೆ ಹತ್ತು ಹಲವು ಪಂಗಡಗಳನ್ನು 'ದಲಿತ್' ಎಂಬ ಪದದ ಅರ್ಥದಲ್ಲಿ ಗುರುತಿಸಲಾಯಿತು. ಈ ಹಿನ್ನೆಲೆಯಲ್ಲಿ ನೋಡಿದಾಗ ಮಹಾರಾಷ್ಟ್ರ ಕರ್ನಾಟಕದಂತೆ ಶೋಷಣೆಗೆ ಒಳಗಾದ ಒಂದು ನಿರ್ದಿಷ್ಟ ಸಮುದಾಯವನ್ನು ದಲಿತ ಎಂದು ಕರೆಯಲ್ಪಟ್ಟಿರುವುದನ್ನು ಕಾಣಬಹುದು. ಎಷ್ಟೇ ಚರ್ಚೆಗಳು ನಡೆದರೂ ಮಹಾರಾಷ್ಟ್ರದಲ್ಲಿ ಒಪ್ಪಿದ ದಲಿತ ಸಾಹಿತ್ಯವನ್ನು ಕರ್ನಾಟಕ ದಲಿತ ಸಾಹಿತ್ಯ ಒಪ್ಪಿಕೊಂಡಂತೆ, ತಮಿಳುನಾಡಿನ ದಲಿತ ಸಾಹಿತ್ಯವು (ದಲಿತ್ ಇಳಕ್ಕಿಯನ್) ಅದೇ ಹೆಸರಿನಿಂದ ಗುರುತಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಹಲವಾರು

ವಿದ್ವಾಂಸರುಗಳ ಭಿನ್ನಾಭಿನ್ನ ಚರ್ಚೆ ಮತ್ತು ಚಿಂತನೆಯ ತಳಹದಿಯಲ್ಲಿ ದಲಿತ ಪದದ ಅರ್ಥ ಮತ್ತು ವಿಶ್ಲೇಷಣೆಯ ಕಾರ್ಯ ನಿರಂತರವಾಗಿ ಸಾಗಿದೆ.

೧.೧ ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯದ ಉಗಮ

ಮರಾಠಿ ಮತ್ತು ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯವು ವಿಶಿಷ್ಟವಾದ ಅಸ್ತಿತ್ವವನ್ನು ಪಡೆದುಕೊಂಡಿದೆ. ಈ ದಲಿತ ಪದದ ಉತ್ಪತ್ತಿ ಹಾಗೂ ಅದರ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಹಲವಾರು ಚಿಂತಕರ ಅಭಿಪ್ರಾಯವನ್ನು ಚರ್ಚಿಸಲಾಯಿತ್ತದಾರೂ, ಪ್ರಸ್ತುತ ದಲಿತ ಸಾಹಿತ್ಯ ಎಂದರೇನು? ಇದರ ಉಗಮ, ವಿಕಾಸ, ವಿಸ್ತಾರವನ್ನು ತಿಳಿಯುವುದು ಸಹ ಅಷ್ಟೇ ಮುಖ್ಯವಾಗಿದೆ.

ಮರಾಠಿ ದಲಿತ ಸಾಹಿತ್ಯವು ೧೯೭೦ರ ದಶಕದ ನಂತರ ಹೆಚ್ಚು ಪ್ರವರ್ಧಮಾನಕ್ಕೆ ಬಂದಿದ್ದರೂ ಅದರ ಕುರುಹುಗಳನ್ನು ಡಾ. ಅಂಬೇಡ್ಕರ್ ಅವರ ಚಳುವಳಿಯಲ್ಲಿಯೇ ಗುರುತಿಸಬಹುದು. ೧೯೨೦ರ ಸಂದರ್ಭದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮಹಾರಾಷ್ಟ್ರದಲ್ಲಿ ದಲಿತ ಸಮಾಜಕ್ಕಾಗಿ ಸ್ವಾಭಿಮಾನ ಮತ್ತು ವೈಚಾರಿಕ ಆಂದೋಲನವನ್ನು ಆರಂಭಿಸಿದರು. ಈ ಆಂದೋಲನ ಮಹಾರಾಷ್ಟ್ರದಲ್ಲಿ ಹೊಸ ಸಾಹಿತ್ಯ ಪರಂಪರೆಯೊಂದಕ್ಕೆ ಎಡೆ ಮಾಡಿಕೊಟ್ಟಿತು. ದಲಿತ ಲೇಖಕರು ತಾವು ಅನುಭವಿಸಿದ ಅನುಭವಗಳ ಮತ್ತು ನೋವು-ನಲಿವುಗಳನ್ನು ಬರಹರೂಪಕ್ಕೆ ಇಳಿಸುವ ಪ್ರಯತ್ನ ಮಾಡಿದರು. ಆದರೆ ಸಮಕಾಲೀನ ಮಾಧ್ಯಮಗಳು ಅವರ ಬರಹಗಳನ್ನು ಓದುಗ ಲೋಕಕ್ಕೆ ತಲುಪಿಸಲು ನಿರಾಕರಿಸಿದವು. ಆ ಸಂದರ್ಭದಲ್ಲಿ ಗಂಗಾಧರ ಪಾನತಾವಣೆ ಅವರ 'ಅಸ್ಮಿತಾ ದರ್ಶನ ಪತ್ರಿಕೆ'ಯನ್ನು ಪ್ರಾರಂಭಿಸಿದ್ದರು. ಇದು ಉದಯೋನ್ಮುಖ ಬರಹಗಾರರಿಗೆ ವೇದಿಕೆಯನ್ನು ಕಲ್ಪಿಸಿಕೊಟ್ಟಿತು. ಮರಾಠಿ ದಲಿತ ಸಾಹಿತ್ಯವು ಮೊದಲು ತೆರೆದುಕೊಂಡಿದ್ದು ಈ ಪತ್ರಿಕೆಯ ಮೂಲಕವೆಂಬುದು ಚಾರಿತ್ರಿಕ ಅಂಶವಾಗಿದೆ.

ಮರಾಠಿ ದಲಿತ ಸಾಹಿತ್ಯಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು ಮುಖ್ಯ ಪ್ರೇರಣೆಗಳಾದವು. ಡಾ.ಬಿ.ಆರ್. ಅಂಬೇಡ್ಕರ್ ಅವರು ೧೯೪೬ರಲ್ಲಿ "People Education Society" ಸ್ಥಾಪಿಸಿ ಮುಂಬೈನಲ್ಲಿ ಸಿದ್ಧಾರ್ಥ ಕಾಲೇಜನ್ನು ಆರಂಭಿಸಿದ್ದರು. ೧೯೫೦ರಲ್ಲಿ ಸಾಹಿತ್ಯಕ ಚಟುವಟಿಕೆಗಳಿಗೋಸ್ಕರ 'ಸಿದ್ಧಾರ್ಥ ಸಾಹಿತ್ಯ ಸಂಘ' ಪ್ರಾರಂಭವಾಯಿತು. ವಾಸ್ತವವಾಗಿ ಈ ಸಂಘ ಮುಂದೆ ೧೯೫೮ರಲ್ಲಿ ಮಹಾರಾಷ್ಟ್ರ ದಲಿತ ಸಾಹಿತ್ಯ ಸಂಘ ಎಂಬ ಹೆಸರನ್ನು ಪಡೆದು ದಲಿತ ಸಾಹಿತ್ಯದ ನಿರ್ಮಾಣಕ್ಕೆ ನಾಂದಿ ಹಾಡಿತು.

ಮರಾಠಿ ದಲಿತ ಸಾಹಿತ್ಯದಲ್ಲಿ ಬಹುಮುಖ್ಯವಾಗಿ ಗೌರವಿಸಲ್ಪಡುವ ದಲಿತ ಸಾಹಿತಿ ಅಣ್ಣಭಾವು ಸಾಠೆ ಅವರು. ೧೯೫೩-೫೪ರಲ್ಲಿ ಸಾಠೆಯವರು ದಲಿತರ ಜೀವನದ ನೈಜವಾದ ಚಿತ್ರಣವನ್ನು ಬಿಂಬಿಸುವ ಸಾಹಿತ್ಯವನ್ನು ರಚನೆ ಮಾಡಿದರು. ಸಾಠೆಯವರ ಬರವಣಿಗೆಯ ಮೇಲೆ ಕಮ್ಯೂನಿಸ್ಟ್ ತತ್ವದ ಪ್ರಭಾವ ಹೆಚ್ಚಿರುವುದನ್ನು ಕಾಣಬಹುದು. ಸುಮಾರು ೩೦೦ ಕಥೆಗಳು ೯೬ ದಲಿತ ಕಾದಂಬರಿಗಳನ್ನು ರಚಿಸಿರುವ ಅಣ್ಣಭಾವ ಸಾಠೆಯವರನ್ನು ಮರಾಠಿಯ ಪ್ರಪಥಮ ಶ್ರೇಷ್ಠ ದಲಿತ ಸಾಹಿತಿ ಎಂದು ಗುರುತಿಸಲಾಗಿದೆ.

ಮಹಾರಾಷ್ಟ್ರದ ದಲಿತ ಸಾಹಿತ್ಯ ಸಂಘ ಮುಂಬೈಯಲ್ಲಿ ೧೯೫೮ರ ಮಾರ್ಚ್ ೨ರಂದು ದಲಿತ ಸಾಹಿತ್ಯ ಸಮ್ಮೇಳನವೊಂದನ್ನು ಆಯೋಜಿಸಿತು. ಈ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಪದದ ವಿವರಣೆ; ಅದರ ನೆಲೆ-ನಿಲುವುಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಿತು. ಆದಾದನಂತರ ಅನೇಕ ದಲಿತ ಸಮ್ಮೇಳನಗಳು ನಡೆದವು. ೧೯೬೦ರ ನಂತರ ಮರಾಠಿ ದಲಿತಸಾಹಿತ್ಯ ವಿಫಲವಾಗಿ ಬೆಳೆಯಿತು. ಮುಖ್ಯವಾಗಿ ಕಥೆಗಳು, ಕವಿತೆಗಳು, ನಾಟಕಗಳು, ವಿಮರ್ಶೆ, ಕಾದಂಬರಿ ಹಾಗೂ ಆತ್ಮಕಥೆಯ ಪ್ರಕಾರಗಳಲ್ಲಿ ದಲಿತ ಸಾಹಿತ್ಯ ಬೆಳೆಯತೊಡಗಿತು.

ದಲಿತ ಸಾಹಿತ್ಯ ಮತ್ತು ದಲಿತ ಚಳುವಳಿ ಜೊತೆ ಜೊತೆಯಾಗಿ ಇಂದು ನಾಣ್ಯದ ಎರಡು ಮುಖಗಳಂತೆ ಸಾಗಿದ್ದನ್ನು ಕಾಣುತ್ತೇವೆ. ದಲಿತ ಚಳುವಳಿಯ ಉದ್ದೇಶಗಳೇ ಸಾಹಿತ್ಯ ಚಳುವಳಿಯ ಉದ್ದೇಶವು ಆಗಿತ್ತು. ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಡಾ. ಅಂಬೇಡ್ಕರ್ ಅವರ ಮಹಾಪರಿನಿರ್ವಾಣದ ನಂತರ ಭಾರತಾದ್ಯಂತ ಹರಡುತ್ತಿದ್ದ ದಲಿತ ಚಳುವಳಿಗೆ ಮಂಕು ಕವಿಯಿತು. ನಂತರದ ಸಂದರ್ಭದಲ್ಲಿ ೧೯೭೦ರ ದಶಕದಲ್ಲಿ ದಲಿತರ ಶೋಷಣೆ ಹೆಚ್ಚಾಯಿತು. ದಲಿತರ ಸಮಸ್ಯೆಗಳು ಪ್ರಜ್ಞಾವಂತ ದಲಿತ ಮಂದಿಯನ್ನು ಮತ್ತೇ ವಿವೇಚನೆಗೆ ಒಳಗುಮಾಡಿತು. ಇದರ ಫಲವೇ ೧೯೭೨ರ ಜುಲೈ ೯ರಂದು ಮುಂಬೈಯ ಸಿದ್ಧಾರ್ಥ ಕಾಲೇಜಿನಲ್ಲಿ ದಲಿತ ಪ್ಯಾಂಥರ್ಸ್ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಈ ಸಂಘಟನೆ ಮಹಾರಾಷ್ಟ್ರ ಅಷ್ಟೇ ಅಲ್ಲದೆ ಇಡೀ ಭಾರತದಾದ್ಯಂತ ದಲಿತ ಸಾಹಿತ್ಯ ಮತ್ತು ಚಳುವಳಿಗೆ ಹೊಸ ಸ್ಫೂರ್ತಿ ಒದಗಿಸಿತು.

ಮರಾಠಿ ದಲಿತ ಸಾಹಿತ್ಯದಲ್ಲಿ ಕಾವ್ಯ ಪ್ರಕಾರ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿ ಬಳಕೆಯಾಯಿತು. ಗದ್ಯ ಪರಿಣಾಮಕಾರಿಯಾಗಿ ಕಂಡು ಬಂದರೂ ಗದ್ಯ ಬರಹಗಾರರುಗಳಿಗಿಂತ ಕಾವ್ಯ ಕವಿಗಳ ಸಂಖ್ಯೆ ಹೆಚ್ಚಾಗಿದೆ. ಇದು ಎಲ್ಲ ಕಾಲಕ್ಕೂ ಎಲ್ಲಾ ಸಾಹಿತ್ಯ ಪ್ರಕಾರಕ್ಕೂ ಅನ್ವಯಿಸುವ ಮಾತು. ಮರಾಠಿ ದಲಿತ ಕಾವ್ಯದ ಧ್ಯೇಯ-ಧೋರಣೆಗಳು ಅರ್ಥವಾಗುತ್ತವೆ. ನಾವು ವಾಸಿಸುವ ದೇಶ, ಅನ್ನ ನೀಡುವ ಈ ಭೂಮಿ ಸರ್ವರಿಗೂ ಶ್ರೇಷ್ಠವೇ ಅದ್ದರಿಂದಲೇ

ಅನೇಕ ಮಂದಿ ಮಹಾಕವಿಗಳು ತಮ್ಮ ತಾಯಿ ನಾಡನ್ನು ಹಾಡಿ ಹೊಗಳುತ್ತಾರೆ. ಅಂತೆಯೇ ದಲಿತಾನುಭವದ ಸಂವೇದನೆಗಳನ್ನು ತಾನು ಅನುಭವಿಸಿದ ತಲ್ಲಣಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿ-ಪಡಿಸುತ್ತಾರೆ. ಕಾವ್ಯದೊಟ್ಟಿಗೆ ಕಥೆ, ಕಾದಂಬರಿ, ನಾಟಕ, ಆತ್ಮಕತೆಗಳನ್ನು ಸಾಕಷ್ಟು ಮರಾಠಿ ಸಾಹಿತ್ಯ ಕೃಷಿ ಬೆಳೆದು ಬಂದಿದೆ.

ಕಿಸನಧೌಗೊಬನ ಸೋಡೆಯೊಂದಿಗೆ ನಾರಾಯಣ ಸುರ್ವೆ, ನಾಮದೇವ ಢಸಾಳ, ದಯಾ ಪವಾರ, ಲಿಂಬಾಳಕರ್, ಕೇಶವಮೇಶ್ರಾಮ ಮುಂತಾದವರು ಬಾಬಾಸಾಹೇಬರ ಚಿಂತನೆಗಳು, ಬುದ್ಧನ ತತ್ವಗಳು, ಕಾರ್ಲ್‌ಮಾರ್ಕ್ಸ್‌ನ ವಿಚಾರಧಾರೆಗಳನ್ನು ತಮ್ಮ ಸಾಹಿತ್ಯ ಬರವಣಿಗೆಯಲ್ಲಿ ಕೃಷಿ ಮಾಡಿದ್ದಾರೆ. ಮರಾಠಿ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗೆ ವಿಶಿಷ್ಟವಾದ ಸ್ಥಾನವಿದೆ. ಏಕೆಂದರೆ ದಲಿತರ ಅಂತರಂಗದ ಭಾವನೆಗಳನ್ನು ಅಭಿವ್ಯಕ್ತ ಮಾಡಲು ರೂಪುಗೊಂಡ ಮಾಧ್ಯಮ. ಯಾವುದೇ ಸಂಕೋಚವಿಲ್ಲದೆ ನಿರ್ಭೀತೆಯಿಂದ ತಮ್ಮ ಎಲ್ಲಾ ಕಹಿ-ಸಿಹಿ ಅನುಭವಗಳು ಬಿಚ್ಚಿಡುತ್ತಾ ಹೋಗುತ್ತಾರೆ. ಶಂಕರರಾವ್ ಖರಾತ್ ಅವರ 'ತರಾಳ ಅಂತರಾಳ', ನಾಮದೇವವ್ಹಟಕರ್ ಅವರ 'ಕಥಾಯಾರ್ಝಾಜಿನ್ಮಾಚೀ', ಪ್ರೊ.ಕೇಶವಮೇಶ್ರಾಂ 'ಹಕೀಕತ್‌ಕಣಿ ಜಟಾಯು', ದಯಾಪವಾರ್ ಅವರ 'ಬಲೂತ', ಲಕ್ಷ್ಮಣಮಾನೆಯವರ 'ಉಪಾರಾ', ಪ್ರೊ. ಸೋನಕಾಂಬಳೆಯವರ 'ಆಠವಣಿಂಚೆ ಪಕ್ಷಿ', ಮಾಧವಕೊಂಡ ವಿಲಕರ ಅವರ 'ಮುಕ್ಕಾಮುದೇವಾಚೆಗೋಡಣೆ', ದಾದಾಸಾಹೇಬ ಮಲಾರ ಮೋರೆಯವರ 'ಗಬಾಳ', ಶರಣಕುಮಾರ ಲಿಂಬಾಳೆಯವರ 'ಅಕ್ಕರಮಾಶಿ ಸಂತಾನ', ಲಕ್ಷ್ಮಣಗಾಯಕವಾಡ ಅವರ 'ಉಚಲ್ಯಾ', ಹೀಗೆ ಹಲವಾರು ಮರಾಠಿಯ ಆತ್ಮಕತೆಗಳು ಮರಾಠಿ ಭಾಷೆಯ ಸಾಹಿತ್ಯ ಕೃಷಿ ಮಾಡಿವೆ. ಉತ್ತಮ ಬಂಡುತುಪ್ಪೆ ಅವರ 'ಕಾಟ್ಯಾವರಚಿ ಪೊಟ', ಪಾರ್ಥಪೊಳಕೆಯವರ 'ಆಭರಣ', ಮಲಿಕಾ ಅಮರಶೇಟ್ ಅವರ 'ಮಲಾಲುಧ್ವಸ್ತಹ್ಯಾಯಚ', ಹಾಗೂ ಮಾಧವಿ ದೇಸಾಯಿ ಅವರ 'ಕುಣಿಯ ಘುಮಾ', ಹೀಗೆ ಇಲ್ಲಿಯವರೆಗೆ ಸುಮಾರು ಎಂಬತ್ತೈದು ಮಾರಾಠಿ ಆತ್ಮಕತೆಗಳು ಪ್ರಕಟಗೊಂಡಿವೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಒಮ್ಮೆ ಅವಲೋಕಿಸಿದಾಗ, ಹಲ್ಮಿಡಿ ಶಾಸನದಿಂದ ಪ್ರಾರಂಭವಾಗಿ ೨೧ನೇ ಶತಮಾನದವರೆಗಿನ ಸರಿಸುಮಾರು ಹದಿನೈದುನೂರು ವರ್ಷಗಳ ಕಾಲ ಅವಿಚ್ಛಿನ್ನವಾಗಿ ಸಾಹಿತ್ಯ ಬೆಳೆದು ಬಂದಿರುವುದು ವಿಶಿಷ್ಟವಾಗಿದೆ. ಈ ಪರಂಪರೆಯಲ್ಲಿ ಹಲವಾರು ಧರ್ಮತತ್ವಗಳು ವಿಭಿನ್ನ ಧಾರೆಗಳನ್ನು ತನ್ನೊಳಗೆ ಅಂತರ್ಗತವಾಗಿಸಿಕೊಂಡು ಕನ್ನಡ ಸಾಹಿತ್ಯ ಬೆಳೆದು ಬಂದಿದೆ. ಹಲವು ವಿಭಿನ್ನ ತತ್ವಾದರ್ಶಗಳನ್ನು ಹೊತ್ತ ಜೈನ, ಬೌದ್ಧ, ವೈಷ್ಣವ, ಶೈವ-ವೀರಶೈವ ಧರ್ಮಗಳ ವಿಭಿನ್ನ ಸಂವೇದನೆಗಳನ್ನು ಪ್ರಾಚೀನ ಕನ್ನಡ ಸಾಹಿತ್ಯದ ಧೋರಣೆಗಳಲ್ಲಿ

ಕಂಡು ಬರುವುದನ್ನು ಕಾಣಬಹುದು. ಇದಕ್ಕೆ ಭಿನ್ನವಾದ ಮತ್ತು ಜನಮುಖಿಯಾದ ಚಿಂತನೆಯನ್ನೊಳಗೊಂಡ ಆಧುನಿಕ ಕಾಲದ ಆರಂಭದಲ್ಲಿ ಕಾಣಿಸಿಕೊಂಡ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಪಂಥಗಳು ಪ್ರಾಮುಖ್ಯತೆಯನ್ನು ಪಡೆದವು. ನವೋದಯ ಸಾಹಿತ್ಯ ರಾಷ್ಟ್ರಪ್ರೇಮ, ನಿಸರ್ಗ, ರೊಮ್ಯಾಟಿಕ್ ಚಿಂತನೆಗಳಲ್ಲದೆ ದೇಶಿ ಮತ್ತು ವಿದೇಶಿ ಚಿಂತನೆಗಳ ಸ್ವೀಕಾರ ಹಾಗೂ ನಿರಾಕರಣೆಯ ತೊಳಲಾಟದಲ್ಲಿ ತೊಡಗಿಕೊಂಡಿತು. ನವ್ಯದ ಸಂದರ್ಭದಲ್ಲಿ ಧರ್ಮಾತೀತ, ಮತಾತೀತವಾದ ನೆಲೆಯಲ್ಲಿ ಕನ್ನಡ ಲೇಖಕರು ಬರಹಕ್ಕೆ ಮುಂದಾದರು. ಪ್ರಗತಿಶೀಲರು, ಕಾರ್ಮಿಕರು, ವೇಶ್ಯೆಯರ ಹಾಗೂ ಗುಡಿಕೈಗಾರಿಕೆ ಸಮಸ್ಯೆಗಳು ನಗರೀಕರಣದಂತ ವಿಷಯಗಳನ್ನು ಎತ್ತಿಕೊಂಡು ಅಕ್ಷರ ರೂಪಕೊಟ್ಟಿರುವುದನ್ನು ಕಾಣಬಹುದು.

ಎಪ್ಪತ್ತರ ದಶಕದಲ್ಲಿ ಕಾಣಿಸಿಕೊಂಡ ದಲಿತ ಬಂಡಾಯ ಸಾಹಿತ್ಯ ಮತ್ತು ಚಳುವಳಿ ಒಂದು ನಾಣ್ಯದ ಎರಡು ಮುಖವಿದ್ದಂತೆ. ಈ ಹಿನ್ನೆಲೆಯಲ್ಲಿ ಧರ್ಮ, ದೇವರು, ಅಸ್ಪೃಶ್ಯತೆ, ಜಾತೀಯತೆ ಹೆಸರಿನಲ್ಲಿ ದಮನಕ್ಕೊಳಪಟ್ಟ ದಲಿತ, ಶೋಷಿತ ವರ್ಗಗಳಲ್ಲಿ ಹೊಸದೊಂದು ಅರಿವನ್ನು ಮೂಡಿಸಿತ್ತು. ಅಕ್ಷರ ಸಂಸ್ಕೃತಿಯ ಪ್ರತಿಫಲದಿಂದಾಗಿ ದನಿ ಇಲ್ಲದವರಂತಿದ್ದ ಜನರ ಪರವಾಗಿ ದನಿ ಎತ್ತಿ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು. “ನಾನು ಅಂಥ ಕತ್ತಲ ರಾಜ್ಯದಿಂದ ಬಂದಂಥವನು. ಕಲಾಮಾಧ್ಯಮದಲ್ಲಿ ನಾನು ಕಂಡುಕೊಳ್ಳುತ್ತಿರುವುದು ಒಂದು ಆಕಸ್ಮಿಕವೇ. ನಾನು ಇದುವರೆಗೂ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು, ಹೆಚ್ಚೆಂದರೆ ಒಂದು ಹಸ್ತ ಇದ್ದಿತು. ಅದೆಷ್ಟೋ ಕನ್ನಡ ಸಾಹಿತ್ಯದ ಗತಿಯನ್ನು ಅಲ್ಲಾಡಿಸುವಲ್ಲಿ ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ. ಒಂದೆರಡು ಬೆರಳು ಹಸ್ತಕ್ಕೆ ಇಷ್ಟವಾಗುವುದಾದರೆ ಕತ್ತಲೆ ರಾಜ್ಯದ ಇಡೀ ಮನುಷ್ಯ ಮಾತನಾಡುವುದಾದರೆ ಅದರಿಂದ ಉಂಟಾಗುವ ಬದಲಾವಣೆಯು ನನ್ನ ಕಲ್ಪನೆಗೆ ಎಟುಕದಷ್ಟಾಗಬಹುದು. ಆ ಬದಲಾವಣೆಗೆ ಈ ಮನುಷ್ಯನ ನುಡಿಗೆ ನುಡಿ ಕೊಡಲು ನೂರಾರು ಜನರು ಹುಟ್ಟಬೇಕಾದಿತು. ಒಂದು ಆಂದೋಲನ ಇದನ್ನ ಕಾಣಿಸಬಹುದೇನೊ.......”[೧೬] ಎಂಬ ದೇವನೂರರ ಮಾತುಗಳು ಬಹಳ ಅರ್ಥಪೂರ್ಣವಾಗಿ ದಲಿತ ಸಾಹಿತ್ಯ ಮತ್ತು ಚಳುವಳಿಯ ಹುಟ್ಟಿನ ಅಂತರಂಗದ ಭಾವನೆ ಅಭಿವ್ಯಕ್ತಗೊಳಿಸಿರುವುದನ್ನು ಕಾಣಬಹುದು.

ಯಾವುದೇ ಸಾಹಿತ್ಯ ಪರಂಪರೆ ತನ್ನ ಸಾಧ್ಯತೆಗಳನ್ನು ಪೂರೈಸಿಕೊಂಡು ಸ್ಥಗಿತವಾಗುವ ಸಮಯಕ್ಕೆ ಮತ್ತೊಂದು ಸಾಹಿತ್ಯ ಪರಂಪರೆ ಹುಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಆಶಯಗಳನ್ನು ತನ್ನ ಗರ್ಭದಲ್ಲಿಯೇ ಹುದುಗಿಸಿಕೊಂಡಿರುತ್ತದೆ. ಪ್ರಮುಖವಾದ ಈ ಆಶಯದ ಜೊತೆಗೆ ಬೇರೆ ದೇಶದ ಬೇರೆ ಕಾಲದ ಬೇರೆ ಶಿಸ್ತಿನ ಹಲವು ಸಂಗತಿಗಳು ನೂತನ ಸಾಹಿತ್ಯದ ನಿರ್ಮಾಣಕ್ಕೆ

ಕಾರಣವಾಗಿರುತ್ತದೆ ಎಂಬುದನ್ನು ಪರಿಗಣಿಸಬಹುದು. ಇಂತಹ ಮಾತುಗಳು ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ. ಅಲ್ಲದೆ ಸೃಜನಶೀಲತೆಯ ನೆಲೆಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಭದ್ರವಾದ ಚೌಕಟ್ಟನ್ನು ಒದಗಿಸುತ್ತದೆ. ಇದಕ್ಕೆ ಬಲವಾದ ಒಂದು ಉದಾಹರಣೆ ಎಂದರೆ ನೋವಿನ ನೆಲೆಯಿಂದ ಬಂದ ಅಂಬೇಡ್ಕರ್ ಅವರು ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ನೋಡಿದ್ದರು. ಇವರ ಶಿಕ್ಷಣ ಪ್ರಸಾರ ಯೋಜನೆಗಳಿಂದಲೂ ದಲಿತರು ಪ್ರಭಾವಿತರಾದರು. ಹಾಗಾಗಿ ತಮ್ಮ ಅನುಭವಗಳನ್ನು ಚಳುವಳಿ ಮತ್ತು ಸಾಹಿತ್ಯದ ಮೂಲಕ ಹಂಚಿಕೊಳ್ಳತೊಡಗಿದ್ದರು.

ಭಾರತ ದೇಶದ ಅತಿ ಮುಖ್ಯ ಸಾಮಾಜಿಕ ಸಮಸ್ಯೆಗಳೆಂದರೆ ಹಸಿವು, ಅಸ್ಪೃಶ್ಯತೆ, ಬಡತನ, ಅಪಮಾನ. ಇವು ಬಹುಸಂಖ್ಯಾತರಾದ ಕೆಳವರ್ಗದವರನ್ನು ಅಸ್ಪೃಶ್ಯತೆಯ ಗುಂಪಿಗೆ ಸೇರಿಸಿ ಸಮಾಜದಲ್ಲಿ ಅತ್ಯಂತ ನಿಕೃಷ್ಟವಾಗಿ ಅವರನ್ನು ಕಾಣುವಂತೆ ಮಾಡಲಾಯಿತು. ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಇವರನ್ನು ಶೋಷಿಸಲಾಗುತ್ತದೆ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹತ್ತೊಂಬತ್ತನೆಯ ಶತಮಾನದ ಆದಿಭಾಗದವರೆಗೂ ದಲಿತರಿಗೆ ತಮ್ಮ ಭಾವನೆಗಳನ್ನು ಅಭಿವ್ಯಕ್ತಪಡಿಸಲು ಸಾಧ್ಯವಾಗಿರಲಿಲ್ಲ. ಅಲ್ಲದೆ ಸ್ವಾತಂತ್ರ್ಯ ಪೂರ್ವದಲ್ಲಿ ಮೊದಲ ತಲೆಮಾರಿನ ದಲಿತ ಲೇಖಕರ ಬರವಣಿಗೆಗೆ ಹಾಗೂ ಸಾಹಿತ್ಯಕ್ಕೆ ಯಾವುದೇ ರೀತಿಯ ಬೆಲೆಯು ದೊರಕಲಿಲ್ಲ. ಅಂತೆಯೇ ಈ ಲೇಖಕರು ಮುಖ್ಯವಾಹಿನಿಗೆ ಬರುವುದಕ್ಕೆ ಈ ಸಾಮಾಜಿಕ ವ್ಯವಸ್ಥೆಯು ಅಡ್ಡಗೋಡೆಯಾಗಿ ಪರಿಣಮಿಸಿತ್ತು.

ಕನ್ನಡ ದಲಿತ ಬರಹಗಾರರಿಗೆ ಮುಖ್ಯವಾಗಿ ಪ್ರೇರಣೆ ದೊರೆತದ್ದು ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳುವಳಿಯಿಂದ. ಈ ಚಳುವಳಿ, ಹಿಂದೂ ಧರ್ಮದ ಅನಿಷ್ಟಗಳಾದ ಚಾತುರ್ವರ್ಣ, ಜಾತೀಯತೆ, ಅಸ್ಪೃಶ್ಯತೆ, ದೇವರ ಪರಿಕಲ್ಪನೆ, ಡಂಭಾಚಾರ, ಧರ್ಮದ ದುರ್ಬಳಕೆ, ದೌರ್ಜನ್ಯ, ವಂಚನೆ ಮೊದಲಾದವುಗಳ ವಿರುದ್ಧ ಪ್ರತಿಭಟಿಸಿ ನಡೆಸಿದ ಚಳುವಳಿಯಾಗಿದೆ. ದಲಿತ ಪ್ಯಾಂಥರ್ಸ್‌ನವರು 'ದಲಿತರ ಭವಿಷ್ಯ ದಲಿತರ ಕೈಯಲ್ಲಿಯೇ ಇದೆ' ಎಂದಿದ್ದಲ್ಲದೆ ದಲಿತರ ಮೇಲೆ ಮೇಲ್ಜಾತಿಯವರು ಕಟ್ಟಿದಭೋಗ ಜೀವನವನ್ನು ಖಂಡಿಸಿದರು. ಕಪ್ಪುಸಾಹಿತ್ಯದ ಪ್ರತಿಭಟನೆಯಂತೂ ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಜರುಗತೊಡಗಿತ್ತು. ಇವೆಲ್ಲದರ ಪ್ರಭಾವ ಕನ್ನಡ ದಲಿತ ಸಾಹಿತ್ಯದ ಮೇಲೂ ಉಂಟಾಗತೊಡಗಿತು.

ಈ ಸಂದರ್ಭದಲ್ಲಿ ಸಾಹಿತ್ಯಿಕ ಪ್ರೇರಣೆಗಳ ಜೊತೆಗೆ ಸಾಹಿತ್ಯೇತರ ಪ್ರೇರಣೆಗಳೂ ಕೆಲಸ ಮಾಡಿದವು. ಅದರಲ್ಲೂ ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲವೂ ದಲಿತಸಾಹಿತ್ಯದ ಉಗಮದ ಮೇಲೆ ಪ್ರಭಾವ ಬೀರಿದೆ. ಈ ಎಡಪಂಥೀಯ ಚಿಂತನೆಯ ಬರಹಗಾರರು

ಸೃಜನಶೀಲ ಚಟುವಟಿಕೆಗಳಿಗೆ ಬೆಂಬಲ ಒದಗಿಸಿದರು. ಮೀಸಲಾತಿಯಿಂದ ದಲಿತರಲ್ಲಾದ ಸುಧಾರಣೆಗಳು, ಮತಾಂತರದ ಪ್ರಸಂಗಗಳು, ವ್ಯಾಪಕವಾಗಿ ಜರುಗುತ್ತಿರುವ ಉಪಸಂಸ್ಕೃತಿಗಳ ಅಧ್ಯಯನ ಈ ಎಲ್ಲ ನೆಲೆಗಳಿಂದ ದಲಿತರಲ್ಲಿ ಜಾಗೃತಿಯ ಪ್ರಜ್ಞೆ ಮೂಡಿತು. ಅಖಂಡ ದುಃಖ ದುಮ್ಮಾನಗಳೇ ದಲಿತ ಸಾಹಿತ್ಯದ ಮೂಲ ಸ್ಫುಟವಾಯಿತು. ಭೂ ಆಕ್ರಮಣ ಹೋರಾಟಗಳು, ವೆಂಕಟಸ್ವಾಮಿ ಆಯೋಗದ ವರದಿ, ಅಲ್ಲದೆ ಬೆತ್ತಲೆಸೇವೆ, ದೇವದಾಸಿ ಪದ್ಧತಿ ವಿರುದ್ಧದ ಹೋರಾಟ, ಬೆಲ್ಚಿ, ಕುದುರೆ ಮೋತಿ ಪ್ರಕರಣ, ಕಂಬಾಲಪಲ್ಲಿ ಪ್ರಕರಣ, ಬೆಂಡಿಗೇರಿ ಪ್ರಕರಣ, ಚುನಾವಣಾ ಬಹಿಷ್ಕಾರ ಮುಂತಾದ ಘಟನೆಗಳು ದಲಿತ ಚಳುವಳಿ ಹೆಚ್ಚು ಚಾಲನೆಗೊಳ್ಳಲು ಕಾರಣವಾದುಲ್ಲದೆ ದಲಿತ ಸಾಹಿತ್ಯ ರಚನೆಯ ನಿರಂತರತೆಯ ಸಂದರ್ಭದಲ್ಲೂ ಪರಿಣಾಮವನ್ನುಂಟು ಮಾಡಿದ್ದವು.

ಮಹಾರಾಷ್ಟ್ರದಲ್ಲಿ ದಲಿತ ಸಾಹಿತ್ಯ ಮೊದಲು ಹುಟ್ಟಿಕೊಂಡು, ಇದರ ಪ್ರತಿಫಲವಾಗಿ ಕನ್ನಡ, ಹಿಂದಿ, ಬೆಂಗಾಳಿ, ಗುಜರಾತಿ, ತಮಿಳು, ಮಲಯಾಳಂ, ತೆಲುಗು ಮರಾಠಿ, ಪಂಜಾಬಿ ಹೀಗೆ ಹಲವಾರು ಭಾಷೆಗಳಲ್ಲಿ ತನ್ನ ಪ್ರಭಾವವನ್ನು ಹರಡಿಸಿತು. ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಈ ಸಾಹಿತ್ಯ ಉದಯವಾಗಿರಬಹುದಾದರೂ ಭಾರತದ ಎಲ್ಲಾ ಭಾಷೆಗಳಲ್ಲೂ ಇದರ ಕುರುಹುಗಳನ್ನು ಕಾಣಬಹುದು. ಇಂದಿಗೂ ಹಲವಾರು ಭಾಷೆಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿ ದಲಿತ ಸಾಹಿತ್ಯವು ಮುನ್ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

೧.೨.೧ ಮರಾಠಿ ಮತ್ತು ಕನ್ನಡ ದಲಿತ ಸಾಹಿತ್ಯದ ನೆಲೆ ನಿಲುವುಗಳು

ಅಸ್ಪೃಶ್ಯರಲ್ಲಿ ಉಂಟಾದ ಅಕ್ಷರ ಕ್ರಾಂತಿಯೇ ದಲಿತ ಸಾಹಿತ್ಯದ ಉಗಮಕ್ಕೆ ಕಾರಣವಾಯಿತು. ಭಾರತೀಯ ಸಾಹಿತ್ಯದಲ್ಲಿ ಬಹುತೇಕ ಆದರ್ಶ ಮತ್ತು ಪ್ರಕೃತಿ ಸೌಂದರ್ಯದ ಪ್ರತಿಪಾದನೆಗೆ ಮೀಸಲಾಗಿರುವುದನ್ನು ಗುರುತಿಸಬಹುದು. ಕಲ್ಪನಾ ಲೋಕದಲ್ಲಿ ವಿಹರಿಸುವ ಕವಿ ತನ್ನ ಕಲ್ಪನೆಯಲ್ಲಿ ಕಂಡ ಲೋಕವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದುದೇ ಹೆಚ್ಚು. ಆದರೆ ಜನತೆಯ ನೋವು-ನಲಿವುಗಳಿಂದ ದೂರವಾಗಿ ಮಣ್ಣಿನ ವಾಸನೆಯ ಗಂಧವು ಅರಿಯದ ಈ ಸಾಹಿತ್ಯ ಸಂತೋಷಕ್ಕಾಗಿ ಕಟ್ಟಿಕೊಂಡ ಒಂದು ಕಲಾ ಮಾಧ್ಯಮವಾಯಿತು. ಸಮಾಜದ ಓರೆಕೋರೆಗಳನ್ನು ತಿದ್ದಿ ಸುವ್ಯವಸ್ಥಿತ ಸಮಾಜ ನಿರ್ಮಾಣಕ್ಕೆ ಕರೆಕೊಡಲು ಲೇಖನಿಗಿಂತ ಹರಿತವಾದುದ್ದು ಮತ್ತೊಂದಿಲ್ಲ ಎಂಬುದು ಕಟುಸತ್ಯ ಅರ್ಥವಾಯಿತು. ಅದರೂ ಪ್ರಕೃತಿ ಸೌಂದರ್ಯ ಪ್ರತಿಪಾದನೆಯ ಸಾಹಿತ್ಯವನ್ನು ಬಿಟ್ಟು ಪ್ರತಿಭಟನೆಯ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲಿಲ್ಲ. ಆದರೆ ಪ್ರತಿಭಟನೆಯನ್ನೇ ತನ್ನ ಒಡಲಿನಲ್ಲಿ ಹುಟ್ಟಿಕೊಂಡ ರಚನೆಗೊಂಡ ಸಾಹಿತ್ಯವೇ ಅದು ದಲಿತ ಸಾಹಿತ್ಯ. ಡಾ ಯು.ಆರ್.

ಅನಂತಮೂರ್ತಿಯವರು, "ನಮ್ಮ ಹಿಂದೂ ಸಮಾಜದ ಚೌಕಟ್ಟಿನಲ್ಲಿ ಯಾವ ಜಾತಿಗಳು ತಮ್ಮ ಜಾತಿಗಳನ್ನು ಬಹಿರಂಗವಾಗಿ ಘೋಷಿಸಿಕೊಳ್ಳಲು ಸಾಧ್ಯವಿಲ್ಲವೋ ಅವೇ ಕೆಳಜಾತಿಗಳು. ಆ ಜಾತಿಗಳಿಂದ ರಚಿತವಾದದ್ದೇ ದಲಿತ ಸಾಹಿತ್ಯ".[೧೭] ಹಾಗೆಯೇ ಡಾ. ಜಿ.ಎಸ್. ಶಿವರುದ್ರಪ್ಪನವರು "ಎಲ್ಲ ಬಡವರ ಸಾಹಿತ್ಯವೂ ದಲಿತ ಸಾಹಿತ್ಯವಲ್ಲ ಬಡವರಲ್ಲೇ ವಿಶಿಷ್ಟ ಶೋಷಣೆಗೆ ಒಳಗಾದ ಕೆಳಜಾತಿ ವರ್ಗಗಳ ಸಾಹಿತ್ಯವೇ ದಲಿತ ಸಾಹಿತ್ಯ"[೧೮] ಎಂದಿದ್ದಾರೆ. ಅನಾದಿಕಾಲದಿಂದಲೂ ದೀನ-ದಲಿತರು ಮೇಲ್ವರ್ಗದವರ ಶೋಷಣೆ ಮತ್ತು ದಬ್ಬಾಳಿಕೆಗೆ ಗುರಿಯಾಗುತ್ತಲೆ ಬಂದಿದ್ದಾರೆ. ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ದಲಿತರನ್ನು ದುರ್ಬಲಗೊಳಿಸಲಾಗಿದೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಪದ್ಧತಿ ಒಂದು ಶಾಪವಾಗಿದೆ. ಈ ಶಾಪದ ವಿಮೋಚನೆಗಾಗಿ ಹಾಗೂ ಸಾವಿರಾರು ವರ್ಷಗಳ ಬಂಧವನ್ನು ಕಳಚಿಕೊಂಡು ಮನುಷ್ಯರಾಗಿ ಬದುಕಲು ಪಣತೊಟ್ಟ ಬದುಕಿನ ಬದ್ಧತೆಯ ಫಲವಾಗಿ ಈ ದಲಿತಸಾಹಿತ್ಯ ತಳಸಮುದಾಯದವರಲ್ಲಿ ಮೂಡಲಿಕ್ಕೆ ಸಾಧ್ಯವಾಯಿತು.

ಹೊಲೆಯ ಎನಿಸಿಕೊಂಡವ ಊರಿನ ಹೊರಭಾಗದ ದಕ್ಷಿಣಕ್ಕೆ ನೆಲೆಸಬೇಕು. ಯಾವುದೇ ಭದ್ರತೆ ಇಲ್ಲದೆ ದುಷ್ಟ ಸಂದರ್ಭಗಳೊಂದಿಗೆ ಹೋರಾಟ ನಡೆಸುತ್ತಾ ಜೀವನ ಸಾಗಿಸಬೇಕು. ತನಗಿಂತ ಮೇಲು ಜನತೆಯೊಡನೆ ಒಂದಾಗಿ ಕೂಡುವಂತಿಲ್ಲ. ಊರ ಕೆರೆಯಲ್ಲಿನ ನೀರನ್ನು ಮುಟ್ಟುವಂತಿಲ್ಲ. ಹಾಗೆಯೇ ಮೇಲ್ಜಾತಿಯಯವರ ದೇವಾಲಯಗಳಿಗೆ ಪ್ರವೇಶವನ್ನು ದಲಿತ ಸಮುದಾಯದ ಜನರಿಗೆ ನಿರಾಕರಿಸಿದರು. ಇದಿಷ್ಟೇ ಏಕೆ ಸವರ್ಣೀಯರ ಬೀದಿಗಳಲ್ಲಿ ತಿರುಗಾಡಬೇಕೆಂದರೆ ತಾನು ಹಾಕಿಕೊಳ್ಳುವ ಚಪ್ಪಲಿಗಳನ್ನು ಕೈಯಲ್ಲಿ ಹಿಡಿದು ನಡೆಯಬೇಕು. ಆಡಳಿತ ವ್ಯವಸ್ಥೆಯಿಂದಲೂ ಈತನಿಗೆ ಯಾವುದೇ ಸೌಲಭ್ಯವಿಲ್ಲ. ಮೇಲ್ವರ್ಗದವರು ಕೊಡಲ್ಪಡುವ ಅತ್ಯಲ್ಪ ಕೂಲಿ ಮತ್ತು ಆಹಾರ ಇವುಗಳನ್ನೆ ಬಳಸಿಕೊಂಡು ದಿನದೂಡುವಂತಹ ಪರಿಸ್ಥಿತಿ ಇಂದಿನ ದಿನಮಾನಗಳಲ್ಲೂ ಕಾಣಲಿಕ್ಕೆ ಸಾಧ್ಯವಿದೆ. ಈ ರೀತಿಯಾಗಿ ದಲಿತ ಜನಾಂಗವನ್ನು ನಿಕೃಷ್ಟ ಸ್ಥಿತಿಗೆ ಭಾರತದ ಜಾತಿವ್ಯವಸ್ಥೆ ದೂಡಲ್ಪಟ್ಟಿತು. ಈ ರೀತಿಯ ಜಾತಿಯ ಸೋಂಕಿನ ಸಂಪೂರ್ಣ ಸುಳಿವುಗಳು ಮತ್ತು ಜಾತೀಯ ಹೆಸರಿನಿಂದ ಅನುಭವಿಸಿದ ಈ ದಲಿತ ಆತ್ಮಕಥನಕಾರರ ಆತ್ಮಕಥೆಗಳಲ್ಲಿ ಜಾತಿಯ ನೆಲೆಯ ಕೌರ್ಯವನ್ನು ದಾಖಲಿಸಿರುವುದು ಕಂಡುಬರುತ್ತದೆ.

ಅಸಂಖ್ಯಾತ ದೀನ-ದಲಿತರು ಭೂಮಾಲೀಕರ ಜಮೀನುಗಳನ್ನು ಉತ್ತು ಬಿತ್ತು ಬೆಳೆ ತೆಗೆದು ಒಡೆಯನಿಗೆ ಒಪ್ಪಿಸುತ್ತಿದ್ದರು. ಆ ಭೂಮಾಲೀಕನು ಎಲ್ಲಾ ಭೋಗವನ್ನು ತಾನು ಅನುಭವಿಸಿ ಅತ್ಯಲ್ಪ ಪ್ರಮಾಣವನ್ನು ಮಾತ್ರ ಇವರಿಗೆ ಕೊಡುತ್ತಿದ್ದನು. ಹೀಗೆ ಹಲವು ರಂಗಗಳಲ್ಲಿ ಕಂಡು

ಬಂದ ಅಸಮಾನತೆಯೂ ಮೇಲ್ವರ್ಗದವರ ವಿರುದ್ಧ ದೀನ–ದಲಿತರು ಹೋರಾಟ ಮಾಡುವ ಅನಿವಾರ್ಯತೆಯನ್ನು ಸೃಷ್ಟಿಸಿತು. ಭೂಮಾಲೀಕರೊಂದಿಗೆ ಶಾಮೀಲಾದ ಸರ್ಕಾರದ ಜನಪ್ರತಿನಿಧಿಗಳು ಕೃಷಿ ಕಾರ್ಮಿಕರಾದ ಅಸ್ಪೃಶ್ಯರನ್ನು ಹತ್ತಿಕ್ಕಲು ಪ್ರಾರಂಭಿಸಿದರು. ಕೃಷಿ ಕಾರ್ಮಿಕರ ಕಗ್ಗೊಲೆಗೆ ಮುಂದಾದರು. ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚಲಾಯಿತು. ಅತ್ಯಾಚಾರದಂತಹ ಹೀನ ಕೆಲಸಕ್ಕೂ ಇವರು ಕೈ ಹಾಕಿರುವ ಘಟನೆಗಳು ನಡೆದಿರುವುದರ ಬಗ್ಗೆ ಇತಿಹಾಸ ಹೇಳುತ್ತದೆ. "ಬೆಂಕಿಯಿಂದ ಧಗಧಗನೆ ಉರಿಯುತ್ತಿದ್ದ ಗುಡಿಸಲೊಳಗೆ ಸಿಕ್ಕಿದ್ದ ಜನರು ಮತ್ತು ದನ, ಎಮ್ಮೆ, ಕರುಗಳ ಆಕ್ರಂದನ ಕರುಳು ಕಿತ್ತು ಬರುವಂತಿತ್ತು. ಕತ್ತಲಿರಬೇಕಾಗಿದ್ದ ಆ ರಾತ್ರಿಯಲ್ಲಿ ಊರಿಗೆ ಊರೇ ಕೆಂಪಾಗಿ ಹೆಣಗಳ ವಾಸನೆ ಮೂಗಿಗೆ ರಾಚುತ್ತಿತ್ತು".[೧೯] ಇಂತಹ ಘೋರ ಘಟನೆಗಳು ಈ ನೆಲದಲ್ಲಿ ನಡೆದಿವೆ. ೧೯೮೦ರಲ್ಲಿ ಪಿಪ್ರಾದಲ್ಲಿ ಭೂಮಾಲೀಕರು ಹರಿಜನರ ಗುಡಿಸಲುಗಳಿಗೆ ಬೆಂಕಿ ಹಚ್ಚಿದಾಗ ಕಂಡು ಬಂದ ಹೃದಯ ವಿದ್ರಾವಕ ಚಿತ್ರವಿದು.

ಇಂತಹ ಕ್ರೂರ ವ್ಯವಸ್ಥೆಯಲ್ಲಿ ಸಿಲುಕಿದ ಹಲವರು ಇದರ ವಿರುದ್ಧ ಸಿಟ್ಟಿಗೆದ್ದರು. ವಿದ್ಯಾವಂತ ದಲಿತ ಮಂದಿ ಪ್ರತಿಭಟನೆಯ ಅಸ್ತ್ರವಾಗಿ ಸಾಹಿತ್ಯವನ್ನು ಬಳಸತೊಡಗಿದರು. ಇದರ ಪ್ರತಿಫಲನದ ಸಾಹಿತ್ಯವೇ ದಲಿತ ಸಾಹಿತ್ಯವಾಗಿ ಪ್ರಾರಂಭವಾಯಿತು. ದಲಿತ ಸಾಹಿತ್ಯ ಕೇವಲ ಸಾಹಿತ್ಯವಲ್ಲ ಅದು ಸಾಮಾಜಿಕ ನ್ಯಾಯದ ನಿಲುವಿನ ಪ್ರತಿಭಟನೆಯೊಂದಿಗೆ ಮೂಡಿಬಂದ ಸಾಹಿತ್ಯ. ಇದು ಸರ್ವಸಮಾನತೆಯ ಸಮಾಜವನ್ನು ನಿರ್ಮಾಣಮಾಡುವುದು ಮತ್ತು ದಲಿತರ ಬದುಕಿಗಾಗಿ ಹೋರಾಟ ನಡೆಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಅದ್ದುರಿಂದಲೇ ಮೊದಮೊದಲು ಮೂಡಿಬಂದ ದಲಿತಸಾಹಿತ್ಯವೆಲ್ಲವೂ ಹೆಚ್ಚು ಅಬ್ಬರದಲ್ಲಿಯೇ ಕಾಣಿಸಿಕೊಂಡವು. ಆನಂತರದ ಕಾಲದಲ್ಲಿ ಸ್ವಲ್ಪ ಮಟ್ಟಿನ ಆಕ್ರೋಶ ಕಡಿಮೆಯಾಗಿ ತಣ್ಣನೆಯ ಪ್ರತಿಭಟನೆಯನ್ನು ಕೈಗೊಂಡಿತು. ದಲಿತ ಸಾಹಿತ್ಯವು ದಲಿತರ ಬದುಕಿನ ಮಹತ್ತರ ಸಾಂಸ್ಕೃತಿಕ ದಾಖಲೆ. ಈ ಸಾಹಿತ್ಯ ಸಾಮಾಜಿಕ ಪರಿವರ್ತನೆಗಾಗಿ ಮೂಡಿಬಂದ ಪ್ರಖರ ಆಯುಧವಾಗಿತ್ತು.

ಅಂಬೇಡ್ಕರ್ ಅವರ ವಿಚಾರಧಾರೆಗಳಿಂದ ಪ್ರಭಾವಿತರಾದ ದಲಿತ ಸಾಹಿತಿಗಳು ಸಾಮಾಜಿಕ ಅಸಮಾನತೆಗೆ ಅಸ್ಪೃಶ್ಯರ ನಿಕೃಷ್ಟತೆಗೆ ಕಾರಣವನ್ನು ಹುಡುಕತೊಡಗಿದರು. ಅಂಬೇಡ್ಕರ್ ಅವರ ವಿಚಾರಧಾರೆಗಳಲ್ಲಿ ಉತ್ತರ ಹುಡುಕಿದರು. ಜಾತಿ ಧರ್ಮ ಸಂಬಂಧಗಳು, ಜೀತ, ಕೂಲಿ ಈ ಮೊದಲಾದವುಗಳನ್ನು ಹೊಸ ಹೊಸ ದೃಷ್ಟಿಕೋನಗಳಲ್ಲಿ ನೋಡಿ ದಾಖಲಿಸುವ ಪ್ರಯತ್ನ ಮಾಡಿದರು. ಸಮಾನತೆಯ ಸಮಾಜ ಅವರ ಮುಖ್ಯ ಉದ್ದೇಶವಾಗಿತ್ತು. "ಹೊಸ ಚಿಂತನೆ ಕ್ರಾಂತಿಕಾರಕ ವಿಚಾರಗಳು ಧರ್ಮ, ದೇವರು, ವರ್ಣ, ಜಾತಿ ಇವುಗಳ ಜಿಜ್ಞಾಸೆ ಹೊಸ

ಬಾಗಿಲನ್ನು ತೆರೆಸಿದವು. ಇಂಥವನ್ನೆಲ್ಲ ತಲೆಯಲ್ಲಿ ಹೊತ್ತ ತನ್ನದೇ ಅನಕ್ಷರಸ್ಥ ಕುಟುಂಬದೊಂದಿಗೆ ಬೆರತು-ಅರಿತು ಬಾಳಲಾಗದ ದಲಿತರಿಗೆ ಈ ಸಾಂಸ್ಕೃತಿಕ ಸಂದರ್ಭ ಸಂಘರ್ಷದ ಹಾಗೂ ತ್ರಿಶಂಕು ಸ್ಥಿತಿಯ ಬದುಕನ್ನು ತಂದಿತು. ಪ್ರಜ್ಞಾವಂತರಾದ ಅಕ್ಷರಸ್ಥ ದಲಿತರು ತಮ್ಮ ಸಮಾಜಕ್ಕೆ ತಮ್ಮದೇ ಆದ ಅರಿವು ಅಥವಾ ಪ್ರಜ್ಞೆಯನ್ನು ತಂದುಕೊಡುವ ಅವಶ್ಯಕತೆ ಮನಗಂಡು ಹೋರಾಟಕ್ಕೆ ಸಾವಯವ ಸಂಬಂಧ ಸಾಧಿಸುವುದಕ್ಕೆ ತಮ್ಮದೇ ಆದ ಸಾಹಿತ್ಯಕ ಮಾರ್ಗಗಳನ್ನು ಅರಸತೊಡಗಿದ್ದರು".[೨೦]

ದಲಿತ ಸಾಹಿತ್ಯದ ಮತ್ತೊಂದು ಪ್ರಮುಖ ಅಂಶವೆಂದರೆ, ಭಾಷೆಗೆ ಸಂಬಂಧಿಸಿದಂತೆ ದಲಿತ ಸಾಹಿತಿಗಳು ಕಂಡುಕೊಂಡ ನೆಲೆ-ನಿಲುವು. ಪ್ರತಿಯೊಂದು ಭಾಷೆಯಲ್ಲಿಯೂ ಗ್ರಂಥಸ್ಥ ಮತ್ತು ಆಡು ಭಾಷೆ ಎಂಬ ಎರಡು ವಿಭಾಗಗಳು ಸಹಜವಾಗಿಯೇ ಇರುತ್ತವೆ. ಆಡು ಭಾಷೆಯು ಆಯಾ ಜನರ ಮಣ್ಣಿನ ವಾಸನೆಯ ಸೊಗಡಿನೊಡನೆ ಸಂಬಂಧ ಹೊಂದಿರುತ್ತದೆ. ಗ್ರಂಥಸ್ಥ ಭಾಷೆಯು ಹೆಚ್ಚಾಗಿ ವ್ಯವಹಾರಿಕವಾಗಿ ಬಳಕೆಯಲ್ಲಿ ಇರುವುದಿಲ್ಲ. ಇದುವರೆಗಿನ ಸಾಹಿತ್ಯವೆಲ್ಲವು ಗ್ರಂಥಸ್ಥ ಭಾಷೆಗೆ ಸಂಬಂಧಿಸಿದ್ದೆ ಆಗಿವೆ. ಆದರೆ ದಲಿತ ಸಾಹಿತಿಗಳು ಇದಕ್ಕೆ ಭಿನ್ನವಾಗಿ ಆಲೋಚಿಸಿದರು. ಜನರು ಆಡುವ ಭಾಷೆಯಲ್ಲಿಯೇ ಸಾಹಿತ್ಯ ರಚಿಸಲು ಮುಂದಾದರು. ಯಾವ ಭಾಷೆ, ಯಾವ ಪದಗಳು, ಯಾವ ಬರವಣಿಗೆಯ ವಿಧಾನ ಕೀಳುಮಟ್ಟದ್ದು ಎಂದು ಭಾವಿಸಲ್ಪಟ್ಟಿತ್ತೋ ಅದು ದಲಿತರ ಸಾಹಿತ್ಯ ಮಾಧ್ಯಮವಾಯಿತು. ಇಂತಹ ನೆಲಮೂಲ ಭಾಷೆಯಲ್ಲಿ ದಲಿತ ಸಂಸ್ಕೃತಿ ಸಹಜ ಸುಂದರವಾಗಿ ಮೂಡಿ ಬರತೊಡಗಿತು. ಭಾಷೆಯನ್ನು ವೈವಿಧ್ಯಮಯವಾಗಿ ಸಾಂಸ್ಕೃತಿಕ ಬೇರಾಗಿ ಬಳಸಿಕೊಂಡಿದ್ದುದರಿಂದ ದಲಿತ ಸಾಹಿತ್ಯವು ಪರಿಣಾಮಕಾರಿಯಾಗಿ ವೈವಿಧ್ಯಮವಾಗಿ ಮೂಡಿಬಂದಿತು.

೧.೩ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆ ಪರಿಕಲ್ಪನೆಯ ಹುಟ್ಟು ಬೆಳವಣಿಗೆ

ಮನುಷ್ಯನ ಭಾವನೆಗಳು, ವಿಚಾರಗಳು ಮತ್ತು ನೆನಪುಗಳು ಅನುಭವ ವೇದ್ಯವಾಗಿ ಮೂರ್ತಿಕರಣಗೊಂಡ ಸೌಂದರ್ಯಾತ್ಮಾಕ ರೂಪದಲ್ಲಿ ಮೈದಳೆದು ನಿಂತಾಗ ಸಾಹಿತ್ಯವೆನಿಸುತ್ತದೆ. ಮನುಷ್ಯನ ಸೃಜನಶೀಲತೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳು ಸಾಹಿತ್ಯ ಪ್ರಕಾರಗಳ ಅರಹನ್ನು ಹೆಚ್ಚಿಸುತ್ತಲೇ ಇವೆ. ಕಾದಂಬರಿ, ಕಥೆ, ನಾಟಕ, ಕಾವ್ಯ, ವಿಮರ್ಶೆ, ಆತ್ಮಕತೆಗಳು ಹೀಗೆ ಪಟ್ಟಿ ಮುಂದುವರೆಯುತ್ತಾ ಹೋಗುತ್ತದೆ. ಆತ್ಮಕಥೆಗಳ ಬರೆಯುವ ಕಾಯಕ ಇಂದು ನೆನ್ನೆಯದಲ್ಲ. ಅದಕ್ಕೆ ಹಲವಾರು ವರ್ಷಗಳ ಇತಿಹಾಸವಿದೆ. ಆದರೆ ಮೊದಲು ಜೀವನ ಚರಿತ್ರೆಯನ್ನು ಸಾಹಿತ್ಯ ಪ್ರಕಾರವಾಗಿ ನೋಡುವ ಪರಿಪಾಠವಿತ್ತು. ಈ ಜೀವನ ಚರಿತ್ರೆಯ ಜೊತೆ ಜೊತೆಯಲ್ಲೆ ಬೆಳೆದು

ಬಂದದ್ದು ಆತ್ಮಕಥೆ ಪ್ರಕಾರ ಎಂದು ಹೇಳಲಿಕ್ಕೆ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ತೀರ ಇತ್ತೀಚೆಗೆ ಆತ್ಮಕಥೆಯನ್ನು ಸಾಹಿತ್ಯದ ಪ್ರಮುಖ ಪ್ರಕಾರವಾಗಿ ನೋಡುವ ಪರಿಪಾಠ ಆರಂಭವಾಯಿತು.

"ಆತ್ಮಜೀವನಿ, ಆತ್ಮಕಥಾ, ಆತ್ಮಚರಿತ್, ಆತ್ಮಚರಿತ್ರೆ, ಆತ್ಮವೃತ್ತ, ಜೀತ್‌ನಾಮ್, ಆತಮ್‌ಕಥ್ ಮೊದಲಾಗಿ ಭಾರತೀಯ ಭಾಷೆಗಳಲ್ಲಿ ಅನುವಾದಿಸಲ್ಪಟ್ಟ ಇಂಗ್ಲೀಷಿನ Autobiography ಪದ, ಗ್ರೀಕ್ ಮೂಲದ auto 'self', bios, 'life' ಮತ್ತು graphein, 'write' ಶಬ್ದಗಳ ಮಿಲನದಿಂದ Self-life-writing ಅಂದರೆ ತನ್ನನ್ನು ಕುರಿತು ಬರೆಯುವುದು ಎಂಬರ್ಥದಲ್ಲಿ ಬಳಕೆಯಲ್ಲಿದೆ".[೨೧] ತನ್ನನು ತಾನು ಕುರಿತು ಬರೆಯುವಂತಹ ಬೆಳವಣಿಗೆ ಪಾಶ್ಚಾತ್ಯರಿಂದ ಬೆಳೆದು ಬಂದಿದೆ. ಈ ಪ್ರಕಾರವು ೧೮, ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಅಧಿಕವಾಗಿ ಬೆಳೆದರೂ ಭಾರತೀಯ ಸಾಹಿತ್ಯದ ಸಂದರ್ಭದಲ್ಲಿ ತೀರಾ ವಿರಳವಾಗಿ ಕಂಡುಬರುತ್ತದೆ. ಏಕೆಂದರೆ ನಮ್ಮ ಭಾರತೀಯರು ಲೌಕಿಕ ವಿಚಾರಗಳಿಗಿಂತ ಅಲೌಕಿಕ ವಿಚಾರಗಳಿಗೆ ತುಂಬಾ ಮಹತ್ವ ಕೊಡುವವರಾಗಿದ್ದರು. ವ್ಯಕ್ತಿಗಳಿಗಿಂತ ತಮ್ಮ ಬದುಕಿನ ಸ್ವಂತ ಅನುಭವಗಳಿಗಿಂತ, ದೇವರು, ದೇವತೆ, ಪುರಾಣಗಳಲ್ಲಿ ಆಸಕ್ತಿ ತಳೆದವರಾಗಿದ್ದರು ಎಂಬುದನ್ನು ಮರೆಯಲಾಗದು.

ಮಾನವ ಬದುಕು ಸಾಂಘಿಕವಾದದ್ದು, ಭೌತಿಕ ಲೋಕದಷ್ಟೇ ಮಾನಸಿಕ ಲೋಕ ಅಮೂರ್ತವೂ, ವಿಶಿಷ್ಟವೂ ಆದದ್ದು, ಅಂತೆಯೇ ವ್ಯಕ್ತಿ ತನ್ನ ಬದುಕಿನಲ್ಲಾದ ನೋವು–ನಲಿವು ಆಸರಿಕೆ–ಬೇಸರಿಕೆ, ಒಳಿತು–ಕೆಡಕು, ಸಿಹಿ–ಕಹಿ ಘಟನೆಗಳನ್ನು ಪ್ರಾಮಾಣಿಕವಾಗಿ ಮುಚ್ಚುಮರೆಯಿಲ್ಲದೆ ಬಿಚ್ಚು ಮನಸ್ಸಿನಿಂದ ತಾನೇ ದಾಖಲಿಸಲು ಪ್ರಯತ್ನಿಸುತ್ತಿದ್ದಾನೆ. ಆ ವ್ಯಕ್ತಿಯ ಬದುಕಿನ ಅನುಭವಗಳ ಸಾರವತ್ತದ ನಿರೂಪಣೆಯೇ ಆತ್ಮಕಥೆ ಎನಿಸಿಕೊಳ್ಳುತ್ತದೆ. ಸಾಹಿತ್ಯ ಮಾನವ ಆಸೆ ಆಕಾಂಕ್ಷೆಗಳನ್ನು, ಅನುಭವಗಳನ್ನು ಅಭಿವ್ಯಕ್ತಿಸುವ ಒಂದು ಮಾಧ್ಯಮವಾಗಿದೆ. ಆದ್ದರಿಂದ ಆತ್ಮಾಭಿವ್ಯಕ್ತಿಗೆ ಬರಹಗಾರನು ತನ್ನ ಜೀವನದ ಕಷ್ಟ ಸುಖಗಳನ್ನು ಜೀವನದ ಘಟನೆಗಳನ್ನು ನಿರೂಪಿಸುವಲ್ಲಿ ಇದಕ್ಕಿಂತ ಶಕ್ತಿಶಾಲಿ ಮಾರ್ಗ ಬೇರೊಂದಿರಲಾರದು. ಹೀಗಾಗಿ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ದಾಖಲುಗೊಳಿಸಲು ಸಾಹಿತ್ಯ ಮಾಧ್ಯಮದ ಆತ್ಮಕತೆಯ ಪ್ರಕಾರವನ್ನು ಅವಲಂಬಿಸಬೇಕಾಯಿತು.

"ಒಬ್ಬ ವ್ಯಕ್ತಿ ತಾನೇ ಬರೆದ ತನ್ನ ಜೀವನ ಚರಿತ್ರೆಯೇ ಆತ್ಮಕಥೆ. ಈ ಆತ್ಮಕಥೆ ಕಟ್ಟುಕಥೆಯಲ್ಲ. ಅದರಲ್ಲಿ ಅನುಭವ ನಿರೂಪಣೆ ಇರುತ್ತದೆ. ಸತ್ಯಾಂಶಗಳನ್ನೊಳಗೊಂಡು ಘಟನೆಗಳ ಪರಿಣಾಮಕಾರಿ ವರ್ಣನೆಯಿರುತ್ತದೆ. ಹಿಂದಿನವರ ಜನಜೀವನವನ್ನು ಮುಂದಿನವರು ಕಾಣಲು ಅನುವಾಗುವ ದಾರಿದೀಪವೇ ಆತ್ಮಚರಿತ್ರೆ. ಚರಿತ್ರೆಯನ್ನು ರಚಿಸುವವನಿಗೆ ಬೇಕಾದ ಹೇರಳವಾದ ಸಾಮಗ್ರಿಗಳನ್ನು

ಆತ್ಮಚರಿತ್ರೆ ಒಳಗೊಂಡಿರುತ್ತದೆ. ಗಣ್ಯರ, ಸತ್ವಶಾಲಿಗಳ, ಶ್ರೇಷ್ಠರ ಮಹಾಪುರುಷರ ಆತ್ಮಚರಿತ್ರೆಯಿಂದ ವ್ಯಕ್ತಿತ್ವವನ್ನು ಗುರುತಿಸಲು ಸಾಧ್ಯವಾಗುತ್ತದೆ. ಚರಿತ್ರೆಯ ರಚನೆಯಲ್ಲಿ ಬರಹಗಾರನ ಪಾತ್ರವೇನೆಂಬುದನ್ನು ಆತ್ಮಕಥೆ ವ್ಯಕ್ತಪಡಿಸುತ್ತದೆ. ಅವನ ಜೀವನ ಸಿದ್ಧಾಂತಗಳಿಗೆ ಪ್ರೇರಕವಾದ ಘಟನೆಗಳನ್ನು, ಹಿನ್ನೆಲೆಯನ್ನು ಆತ್ಮಚರಿತ್ರೆ ನಿರೂಪಿಸುತ್ತದೆ. ಅಂದಿನ ಕಾಲದಲ್ಲಿ ಅಂದಿನವರು ಅಂಗೀಕರಿಸಿದ್ದ ಧ್ಯೇಯಗಳ, ಅನುಸರಿಸಿದ ಧೋರಣೆಗಳ ಪ್ರತಿಫಲವೇ ಆತ್ಮಚರಿತೆ”.[೨೨]

ಆತ್ಮಕಥೆಯ ಹುಟ್ಟು ಪಾಶ್ಚಾತ್ಯರಲ್ಲಿ ಕಂಡುಬರುತ್ತದೆ. ಬಹುಮಟ್ಟಿಗೆ ಯುರೋಪ್ ಖಂಡದಲ್ಲಿ ಆತ್ಮಕಥೆಯ ಹುಟ್ಟು ಮತ್ತು ಬೆಳವಣಿಗೆ ಆಗುವುದಕ್ಕೆ ಒಂದು ಕಾರಣ ಕ್ರೈಸ್ತಮತದ ಮುಖ್ಯ ಅಂಶಗಳಲ್ಲೊಂದಾದ ಪಾಪ ನಿವೇದನೆ. ಇದರಿಂದ ಪಾಪ ನಿವೇದನೆಯ ಸ್ವಭಾವ ಬೆಳೆದು ಯುರೋಪಿನಲ್ಲಿ ಬಹಳ ಹಿಂದೆಯೇ ಆತ್ಮಚರಿತ್ರಾಂಶವುಳ್ಳ ಅನೇಕ ಕೃತಿಗಳು ಬರೆಯಲ್ಪಟ್ಟವು. ಇದೊಂದು ರೀತಿ ಆತ್ಮ ಪರಿಶೋಧನೆಯ ಲಿಖಿತ ಸಾಕ್ಷಿಯ ಹಾಗೆ. ಕ್ರಿ.ಶ. ೧೨೧–೧೮೦ರಲ್ಲಿ 'ಮಾರ್ಕಸ್ ಆಲೀಲಿಯಸ್' ಎಂಬ ರಾಜನ 'ಮೆಡಿಟೇಷನ್' ಎಂಬ ಕೃತಿಯು ಪ್ರಪಂಚದ ಮೊದಲ ಆತ್ಮಚರಿತ್ರೆ ಗ್ರಂಥವೆಂದು ಗುರುತಿಸಲಾಗಿದೆ. ನಂತರ ಕ್ರಿ.ಶ.೩೫೪–೪೩೦ರಲ್ಲಿ ಬದುಕಿದ 'ಸೆಂಟ್ ಆಗಸ್ಟಿನ್' ಎಂಬುವನು ಬರೆದ 'ಕನ್‌ಫೆಷನ್ಸ್' ಎಂಬುವುದನ್ನು ಆತ್ಮಚರಿತ್ರೆ ಲೋಕದ ಎರಡನೇ ಕೃತಿ ಎಂದು ಪರಿಗಣಿಸಲಾಗಿದೆ. ಈ ಕೃತಿಯು ಆಗಸ್ಟಿನ್ ತಾಯಿಯ ಮಮತೆ, ಬಾಲ್ಯಜೀವನ, ಮತಾಂತರ ಹೊಂದಿದ್ದು, ಆತ್ಮತತ್ವದ ಅನ್ವೇಷಣೆಗೆ ಪ್ರಯತ್ನಿಸಿದ್ದು ಇವೇ ಮೊದಲಾದ ಅಂಶಗಳನ್ನು ಒಳಗೊಂಡಿದ್ದು ತರುವಾಯದ ಆತ್ಮಚರಿತ್ರೆಗೆ ಒಂದು ಮಾದರಿ ಎನಿಸಿದೆ. ತರುವಾಯ ಕ್ರಿ.ಶ ೮ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಬದುಕಿದ 'ವೆನರಬಲ್‌ಬೀಡ್' ಎಂಬಾತನು ಸ್ವವಿವರಗಳನ್ನುಳ್ಳ ಒಂದು ಕೃತಿಯನ್ನು ರಚಿಸಿದ್ದಾಗಿ ತಿಳಿದುಬರುತ್ತದೆ. ಮುಂದೆ 'ಥಾಮಸ್‌ಟಸರ್' ಎಂಬುದು ಆತ್ಮಕಥನ ಸಾಹಿತ್ಯದಲ್ಲಿ ವಿಶಿಷ್ಟ ಮರ್ಯಾದೆಯನ್ನು ಹೊಂದಿದೆ. ಹೀಗೆ ಕ್ರಿ.ಶ.ದ ಆರಂಭದಿಂದಲೇ ವಿಶೇಷವಾಗಿ ಯುರೋಪ್ ಖಂಡದ ಕ್ರೈಸ್ತಮತೀಯರಿಂದ ಆತ್ಮಚರಿತ್ರೆ ಗ್ರಂಥಗಳು ರಚನೆಗೊಂಡಿದ್ದು ಗಮನಾರ್ಹ ಅಂಶವಾಗಿದೆ.

ಇದೇ ರೀತಿ ಹಳೆಯ ನೆನಪುಗಳ ಮತ್ತು ಯಾತ್ರಿಗಳ ಪ್ರವಾಸದ ಅನುಭವಗಳನ್ನು ಮುಖ್ಯವಾಗಿ ತಿಳಿಸುವ ಆತ್ಮಚರಿತ್ರೆ ಗ್ರಂಥಗಳು ೧೭ನೇ ಶತಮಾನದ ಫ್ರೆಂಚ್ ಸಾಹಿತ್ಯದಲ್ಲಿ ಬಂದಿವೆ. ಹಾಗೆಯೇ ಆಂಗ್ಲಸಾಹಿತ್ಯದಲ್ಲಿ ಸುಮಾರು ೧೭ನೇ ಶತಮಾನದ ಹೊತ್ತಿಗೆ ಮಹಿಳೆಯರು ಆತ್ಮಚರಿತ್ರೆಗಳನ್ನು ಬರೆದುಕೊಂಡಿರುವುದು ಗಮನಾರ್ಹವಾಗಿದೆ. ಇಟಲಿ, ಸ್ಕಾಟ್, ದೇಶಗಳಲ್ಲೂ ಕೆಲವು ಆತ್ಮಚರಿತ್ರೆಗಳು ರಚನೆಗೊಂಡಿವೆ. ಕ್ರಿಶ ೧೮೦೯ರಲ್ಲಿ ಆಕ್ಸ್‌ಫರ್ಡ್ ಶಬ್ದಕೋಶದಲ್ಲಿ

ಆಟೋಬಯೋಗ್ರಫಿ (Autobiography) ಎಂಬ ಶಬ್ದ ಮೊದಲ ಬಾರಿಗೆ ಕಾಣಿಸಿಕೊಂಡಿತು. ಮುಂದೆ ೧೯ನೇ ಶತಮಾನದಲ್ಲೂ ಅದರ ತರುವಾಯದಲ್ಲೂ ನೂರಾರು ಆತ್ಮಚರಿತ್ರೆಗಳು ಪಾಶ್ಚಿಮಾತ್ಯರಲ್ಲಿ ಬೆಳೆದು ಬಂದಿವೆ. ಒಟ್ಟಿನಲ್ಲಿ ಭಾರತೀಯರಿಗಿಂತ ಹೆಚ್ಚಾಗಿ ಪಾಶ್ಚಾತ್ಯರು ಜೀವನ ಪ್ರೀತಿಯನ್ನು ಚಾರಿತ್ರಿಕ ಪ್ರಜ್ಞೆಯನ್ನು ಹೊಂದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಭಾರತೀಯರಲ್ಲಿ ಆತ್ಮಚರಿತ್ರೆಗಳು ರೂಪುಗೊಂಡಿದ್ದು ತುಂಬ ತಡವಾಗಿ, ಅಂದರೆ ೧೯ನೇ ಶತಮಾನದಲ್ಲಿ ಪಾಶ್ಚಾತ್ಯರ ಪ್ರಭಾವ ಭಾರತೀಯರ ಮೇಲೆ ಸಾಕಷ್ಟು ದಟ್ಟವಾಗಿ ಆಗಿರುವುದನ್ನು ಕಾಣಬಹುದಾಗಿದೆ. ಆದರೂ ದೇಶದ ಪ್ರಮುಖ ಸಾಹಿತಿಗಳು, ಕಲಾವಿದರು, ರಾಜಕೀಯ ವ್ಯಕ್ತಿಗಳು, ಮಹಿಳೆಯರು ಸೇರಿದಂತೆ ಭಾರತದಲ್ಲಿ ಆತ್ಮಚರಿತ್ರೆ ಪರಂಪರೆ ಸಾಕಷ್ಟು ಸಮೃದ್ಧವಾಗಿಯೇ ಬೆಳೆದು ಬಂದಿದೆ. ಅಲ್ಲದೆ ನೆನಪಿನ ಲೇಖನಗಳು, ವ್ಯಕ್ತಿ ಚಿತ್ರಗಳು, ಪತ್ರಗಳು, ದಿನಚರಿಗಳು ಮೊದಲಾದ ವೈವಿಧ್ಯಮಯವಾದ ರೀತಿಗಳಲ್ಲಿ ಹಲವಾರು ಭಾರತೀಯ ಭಾಷೆಗಳಲ್ಲಿ ಈ ಆತ್ಮಕಥೆಯ ಪ್ರಕಾರ ಮೈತಳೆದು ನಿಂತಿದೆ. ಸಂಸ್ಕೃತವೊಂದನ್ನು ಬಿಟ್ಟು ಹಿಂದಿ, ತಮಿಳು, ಮರಾಠಿ, ಕನ್ನಡ, ತೆಲಗು, ಪಂಜಾಬಿ, ಅಸ್ಸಾಮಿ, ಬೆಂಗಾಳಿ, ಮಲೆಯಾಳಂ, ಮೊದಲಾದ ಭಾಷೆಗಳಲ್ಲಿ ಆತ್ಮಕಥೆಗಳು ಹುಟ್ಟಿಕೊಂಡಿವೆ.

"ಪ್ರತಿಯೊಬ್ಬನ ಬಾಳಿನ ಕಥೆಯೂ ಒಂದು ಅತ್ಯುತ್ತಮ ಚರಿತ್ರೆಯಾಗುತ್ತದೆ. ಬರೆಯುವ ಹದವನ್ನು ಬಲ್ಲವನಿಗೆ ಬಾಳೇ ಒಂದು ಕಲೆ ಅದನ್ನು ಮಸಿಯಲ್ಲಿ ಮೂಡಿಸುವುದು ಸೂಕ್ಷ್ಮಕಲೆ, ಕೆಸರಿನ ಕೆಲಸ. ಒಬ್ಬ ಲಕ್ಷಾಧೀಶನ ಜೀವನ ಒಂದು ಕಲೆಯಾಗಬಹುದಾದರೆ ಒಬ್ಬ ಭಿಕ್ಷುಕನ ಬಾಳು ಇನ್ನೂ ಹೆಚ್ಚು ಸ್ವಾರಸ್ಯಕರವಾದ ಕತೆಯಾಗುವುದರಲ್ಲಿ ಸಂಶಯವಿಲ್ಲ"[೨೩] ಎಂಬ ಬೀಚಿಯವರ ಮಾತಿನಲ್ಲಿ ಆತ್ಮಚರಿತ್ರೆಗೆ ಎಲ್ಲರೂ ಅರ್ಹರು ಎಂಬ ವಿಚಾರ ವ್ಯಕ್ತವಾಗಿದೆ. ಇಲ್ಲಿ ಬಡವ ಶ್ರೀಮಂತ ಎಂಬ ಯಾವುದೇ ತಾರತಮ್ಯವಿಲ್ಲದೆ ತಮ್ಮ ತಮ್ಮ ಅನುಭವಗಳನ್ನು ದಾಖಲಿಸುವ ಒಂದು ಮಾಧ್ಯಮವಾಗಿ ಆತ್ಮಕಥೆಗಳು ಹುಟ್ಟಿಕೊಂಡವು ಎಂದೇ ಹೇಳಬಹುದಾಗಿದೆ. "ಆತ್ಮಕಥೆ ಕಟ್ಟುಕತೆಯಲ್ಲ, ಅದರಲ್ಲಿ ಅನುಭವದ ನಿರೂಪಣೆಯಿರುತ್ತದೆ. ಸತ್ಯಾಂಶಗಳನ್ನೊಳಗೊಂಡ ಘಟನೆಗಳ ಪರಿಣಾಮಕಾರಿ ವರ್ಣನೆಯಿರುತ್ತದೆ. ಹಿಂದಿನವರ ಜೀವನ ಜನಜೀವನವನ್ನು ಮುಂದಿನವರು ಕಾಣಲು ಅನುವಾಗುವ ದಾರಿದೀಪವೇ ಆತ್ಮಕಥನ. ಈ ಕಥನವನ್ನು ರಚಿಸುವವನಿಗೆ ಬೇಕಾದ ಹೇರಳವಾದ ಮೂಲಸಾಮಾಗ್ರಿಗಳನ್ನು ಆತ್ಮಚರಿತ್ರೆ ಒಳಗೊಂಡಿರುತ್ತದೆ. ಗಣ್ಯರ ಸತ್ವಶಾಲಿಗಳ, ಶ್ರೇಷ್ಠರ ಮಹಾಪುರುಷರ ಆತ್ಮಚರಿತ್ರೆ ಅದನ್ನು ಓದಿದವರಿಗೆ ಸ್ಫೂರ್ತಿದಾಯಕವೂ ಆಗಿರುತ್ತದೆ"[೨೪] ಎಂಬುದಾಗಿ ವಿ. ಗುಂಡಣ್ಣನವರು ಅಭಿವ್ಯಕ್ತಿಸಿದ್ದಾರೆ.

ಆತ್ಮಕಥನಗಳು ಕಟ್ಟುಕಥೆಯಲ್ಲ ಮತ್ತು ವರ್ಣನೆಗಳು ಅಲ್ಲ, ಅವು ಸತ್ಯ ಘಟನೆಗಳ ಪರಿಣಾಮಕಾರಿ ಅಂಶಗಳನ್ನು ಬಿಚ್ಚಿಕೊಡುವ ಕಥನಗಳಾಗಿರುತ್ತವೆ. ಈ ಕಥನಗಳು ಕೇವಲ ದಾಖಲೆಗಳಾಗದೆ ಮುಂದಿನ ತಲೆಮಾರಿಗೆ ಆಯಾ ಕಾಲಮಾನದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ನೀಡುವ ಮಹತ್ವದ ತಲೆಮಾರಿನ ಕಥನಗಳಾಗಿರುತ್ತವೆ. ಹೀಗಾಗಿ ಹಿಂದಿನವರು ಬದುಕನ್ನು ಕಟ್ಟಿದ ಮತ್ತು ಬದುಕಿ ತೋರಿಸಿದ ಕ್ರಮಗಳು ಮುಂದಿನ ತಲೆಮಾರಿಗೆ ಮಾರ್ಗದರ್ಶಿಯಾಗುತ್ತವೆ. ಅಲ್ಲದೆ ಈ ಆತ್ಮಕಥನಗಳು ಬದುಕಿಗೆ ಸ್ಫೂರ್ತಿದಾಯಕವಾಗಬಲ್ಲವು ಎಂಬುದನ್ನು ಇಂದಿಗೂ ಮರೆಯುವಂತಿಲ್ಲ.

ಕನ್ನಡದಲ್ಲಿ ಮೊಟ್ಟಮೊದಲ ಸ್ವತಂತ್ರ ಕನ್ನಡ ಆತ್ಮಕಥೆ ಬರೆದವರು ಹರ್ಡೇಕರ ಮಂಜಪ್ಪನವರು. ೧೯೩೬ರಲ್ಲಿ ಪ್ರಕಟವಾದ 'ನನ್ನ ಮೂವತ್ತು ವರ್ಷಗಳ ಕಾಣಿಕೆ' ಎಂಬುದು ಇವರ ಸಂಕ್ಷಿಪ್ತ ಪೂರ್ವವೃತ್ತಾಂತ ಹಾಗೂ ಇವರ ಸಾರ್ವಜನಿಕ ಜೀವನದ ವಿವರಣೆಯನ್ನು ತಿಳಿಸುತ್ತದೆ. ಆನಂತರದ ಆತ್ಮಕಥೆ ೧೯೫೯ರಲ್ಲಿ ಪ್ರಕಟವಾದ ಜಿ.ಪಿ.ರಾಜರತ್ನಂ ಅವರ 'ಹತ್ತು ವರುಷ'. ಇದು ಇವರ ಸಂಪೂರ್ಣ ಜೀವನದ ಬರಹವಾಗಿ ಓದುಗರಿಗೆ ಕಂಡುಬರುವುದಿಲ್ಲ. ಕೇವಲ ಹತ್ತು ವರ್ಷಗಳ ಬದುಕಿನ ಪ್ರಮುಖ ಘಟನೆಗಳನ್ನು ಈ ಆತ್ಮಕಥೆ ಓದುಗರಿಗೆ ತಿಳಿಸಿಕೊಡುತ್ತದೆ.

ನವೋದಯದ ಕಾಲಘಟ್ಟದಲ್ಲಿ ಪ್ರಾರಂಭಗೊಂಡ ಈ ಆತ್ಮಚರಿತ್ರೆಯಲ್ಲಿ ಮೊಟ್ಟಮೊದಲ ಬಾರಿಗೆ, ಮೊದಲ ತಲೆಮಾರಿನ ದಲಿತ ಸಾಹಿತಿಯಾದ ಡಿ.ಗೋವಿಂದದಾಸ್ ಅವರು ದಲಿತ ಆತ್ಮಕಥನವನ್ನು ಬರೆಯುತ್ತಾರೆ. ಈ 'ಆತ್ಮಕಥನ'ವನ್ನು ಸಂಪಾದಿಸಿದ ಪ್ರೊ.ಎಂ.ಎಸ್.ಶೇಖರ್ ಅವರು "ಡಿ.ಗೋವಿಂದದಾಸ್ ಅವರ ಆತ್ಮಕಥನ ಅಪೂರ್ಣವಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಹಿರಿಯ ದಲಿತ ಲೇಖಕರಾದ ಗೋವಿಂದದಾಸ್ ಅವರ ಈ ಆತ್ಮಕಥನ ಕನ್ನಡದ ಮೊಟ್ಟಮೊದಲ ದಲಿತ ಆತ್ಮಕಥನವೂ ಆಗಿದೆ. ಅಪ್ತಮಿತ್ರರಾದ ಆದಿನಾರಾಯಣಯ್ಯನವರ ಒತ್ತಾಯಕ್ಕೆ ಮಣಿದು ೧.೧.೧೯೪೦ರಲ್ಲಿ ಪ್ರಾರಂಭಿಸಿ ೧೯೪೪ಕ್ಕೆ ಬರೆದು ಮುಗಿಸಿದನೆಂದು ಗೋವಿಂದದಾಸ್ ಅವರೇ ಹೇಳಿಕೊಂಡಿದ್ದಾರೆ. ಈ ಆತ್ಮಕಥನದಲ್ಲಿ ಆತ್ಮಕಥನಕಾರರ ಬಾಲ್ಯ ಹೋರಾಟದ ಶಿಕ್ಷಣ, ಶೋಷಣೆ, ಪ್ರವಾಸದ ಅನುಭವಗಳು ಮತ್ತು ನೊಂದವರ ಪರವಾದ ಸಾಮಾಜಿಕ ಸೇವೆಗಳ ಕೆಲಸಗಳು ಮುಖ್ಯವಾದವುಗಳಾಗಿವೆ"[೨೫] ಎಂದು ಗುರುತಿಸಿರುವುದು ಉಲ್ಲೇಖನೀಯವಾಗಿದೆ.

೧೯೪೮ರಲ್ಲಿ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಆತ್ಮಕಥೆ ಪ್ರಕಟವಾಯಿತು. ಇದು ಕಾರಂತರ ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುವ ಕೃತಿಯಾಗಿದೆ. ಮಧುರಚೆನ್ನರು ಬರೆದ 'ಪೂರ್ವರಂಗ' 'ಕಾಳರಾತ್ರಿ' 'ಬೆಳಗು' ಮತ್ತು 'ಆತ್ಮಶೋಧನೆ' ಕೂಡ ಉತ್ತಮ ಕನ್ನಡ ಆತ್ಮಕತೆಗಳಾಗಿವೆ. ೧೯೬೦ರಲ್ಲಿ ಅ.ನ.ಕೃ ಅವರು 'ನನ್ನನ್ನು ನಾನೇ ಕಂಡೆ' ಹಾಗೂ ಶ್ರೀರಂಗರ 'ನನ್ನ ನಾಟ್ಯ ನೆನಪುಗಳು' ಎಂಬ ಆತ್ಮಕಥೆಗಳು ಹೊರಬಂದವು. ಮುಂದೆ ೧೯೬೧ರಲ್ಲಿ ದ.ರಾ.ಬೇಂದ್ರೆಯವರ 'ಚತುರ್ಮುಖ' ಆತ್ಮಕಥನ ಪ್ರಕಟಗೊಂಡಿತು. ಚತುರ್ಮುಖದ ಪೂರ್ವಭಾಗವನ್ನು ದ.ರಾ.ಬೇಂದ್ರೆಯವರು ಬರೆದರೆ, ಬೇಂದ್ರೆಯವರ ಮಗ ವಾಮನಬೇಂದ್ರೆಯವರು ಉತ್ತರಭಾಗ ಬರೆದು ಪೂರ್ಣಗೊಳಿಸಿದ್ದಾರೆ.

೧೯೬೮ರಲ್ಲಿ ದೇ.ಜ.ಗೌ ಅವರು 'ಹೋರಾಟದ ಬದುಕು' ಎಂಬ ಆತ್ಮಚರಿತ್ರೆಯನ್ನು ಬರೆದರು. ೧೯೬೮-೬೯ರಲ್ಲಿ ಕನ್ನಡದ ಆಸ್ತಿಯೆಂದೇ ಹೆಸರಾದ ಮಾಸ್ತಿಯವರು 'ಭಾವ' ಎಂಬ ಹೆಸರಲ್ಲಿ ಮೂರು ಸಂಪುಟಗಳಲ್ಲಿ ಆತ್ಮಚರಿತ್ರೆಯನ್ನು ರಚನೆ ಮಾಡಿದ್ದಾರೆ. ಇದು ಆತ್ಮಚರಿತ್ರೆಗಳಲ್ಲಿ ದೊಡ್ಡದಾದದ್ದು. ಮಾಸ್ತಿಯವರ ಬಾಲ್ಯ, ಅಧಿಕಾರವಧಿಯಲ್ಲಿ ಇವರು ಕೈಗೊಂಡ ಜನಪ್ರಿಯ ಕಾರ್ಯಕ್ರಮಗಳು ಹಾಗೂ ವಿಶ್ರಾಂತಿ ಕಾಲದ ಬದುಕಿನ ಕೆಲವು ಪ್ರಮುಖ ಘಟನೆಗಳು ಹಾಗೂ ಇನ್ನಿತರ ಪ್ರಮುಖ ವಿಷಯಗಳನ್ನು ತಿಳಿಸುವ ಮಹತ್ವದ ಕೃತಿಯಾಗಿ ನಮ್ಮ ಕಣ್ಣ ಮುಂದೆ ಭಾವ ಆತ್ಮಕತೆಯು ತೆರೆದುಕೊಳ್ಳುತ್ತದೆ.

೧೯೭೨ರಲ್ಲಿ ಅ.ನ.ಕೃರವರ ಆತ್ಮಕತೆಯಾದ 'ಬರಹಗಾರನ ಬದುಕು' ಪ್ರಕಟವಾಯಿತು. ೧೯೭೩ರಲ್ಲಿ ಕೋ.ಚನ್ನಬಸಪ್ಪನವರ 'ನನ್ನ ಮನಸ್ಸು ನನ್ನ ನಂಬುಗೆ' ಎಂಬ ಆತ್ಮಕಥನ ಪ್ರಕಟಗೊಂಡಿತು. ೧೯೭೪ರಲ್ಲಿ ಎಚ್.ಕೆ.ವೀರಣ್ಣಗೌಡರ 'ಬದುಕು ಮೆಲುಕು' ಎಂಬ ರಾಜಕಾರಣಿಯೊಬ್ಬರ ಆತ್ಮಚರಿತ್ರೆ ಪ್ರಕಟವಾಯಿತು. ಇದೇ ಸಂದರ್ಭದಲ್ಲಿ ಆಲೂರು ವೆಂಕಟರಾಯರ 'ನನ್ನ ಜೀವನಸ್ಮೃತಿಗಳು' ಎಂಬ ಆತ್ಮಕಥನ ಪ್ರಕಟವಾಯಿತು. ಈ ಕೃತಿಯಲ್ಲಿ ಆಲೂರರು ತಮ್ಮ ಬಾಲ್ಯದ ಬದುಕಿನ ಕ್ಷಣಗಳೊಂದಿಗೆ ಆ ಕಾಲದ ಸಾಮಾಜಿಕ ಸ್ಥಿತಿ ಹಾಗೂ ಐತಿಹಾಸಿಕ ಘಟನೆಗಳನ್ನು ದಾಖಲಿಸಿದ್ದಾರೆ.

೧೯೮೫ರಲ್ಲಿ ಅನುಪಮಾ ನಿರಂಜನರ 'ನೆನಪು ಸಿಹಿ ಕಹಿ' ಆತ್ಮಕಥನ ಪ್ರಕಟವಾಯಿತು. ಮಹಿಳೆಯರು ಬರೆದ ಆತ್ಮಕಥನಗಳಲ್ಲಿ ಇದು ಮಹತ್ವವಾದ ಸ್ಥಾನವನ್ನು ಪಡೆದುಕೊಂಡಿತು. ವೈದ್ಯೆಯಾಗಿ, ಸಾಹಿತಿಯಾಗಿ, ಪತ್ನಿಯಾಗಿ, ಮಾತೆಯಾಗಿ, ಅನುಪಮಾ ಪಡೆದ ಸಿಹಿ ಮತ್ತು ಕಹಿ ನೆನಪುಗಳನ್ನು ಇಲ್ಲಿ ಅಭಿವ್ಯಕ್ತಪಡಿಸಿದ್ದಾರೆ ಚಿ.ನ. ಮಂಗಳಾ ಅವರು ಅಧ್ಯಾಪಕಿಯಾಗಿ ಪಡೆದ ಅನುಭವಗಳ ಸಾರಸಂಗ್ರಹವನ್ನು 'ಅಧ್ಯಾಪಕಿಯಾಗಿ ೨೫ವರ್ಷ' ಎಂಬ ಆತ್ಮಕಥನವನ್ನು

ರಚಿಸಿದ್ದಾರೆ. ಇದೇ ಅವಧಿಯಲ್ಲಿ ಜಿ.ಎಸ್. ಶಿವರುದ್ರಪ್ಪನವರ 'ಚತುರಂಗ' ಆತ್ಮಕಥನ ಪ್ರಕಟವಾಯಿತು. ಎ.ಕೆ.ರಾಮಾನುಜನ್ ಅವರ 'ಮತ್ತೊಬ್ಬನ ಆತ್ಮಚರಿತ್ರೆ', ಎಸ್.ಆರ್.ಗುಂಜಾಳ ಅವರ 'ನಾನು', ಬಿ.ಡಿ ಜತ್ತಿಯವರ 'ನನಗೆ ನಾನೇ ಮಾದರಿ' ಎಂಬ ಆತ್ಮಕಥೆಗಳು ಪ್ರಕಟವಾದವು.

೧೯೮೯ರಲ್ಲಿ ಸ.ಸ.ಮಾಳವಾಡರ 'ದಾರಿ ಸಾಗಿದೆ' ಎಂಬ ಆತ್ಮಕಥೆಯಲ್ಲಿ ಹಳ್ಳಿಯ ಹುಡುಗ, ಅಣ್ಣ ದೊಡ್ಡಪ್ಪ, ಮಾಮಾಜಿ, ಅಜ್ಜ, ವಿವಿಧ ಭಾಗಗಳಿಂದ ಪಡೆದ ಅನುಭವಗಳನ್ನು ಅಭಿವ್ಯಕ್ತಪಡಿಸುತ್ತಾರೆ. ಎ.ಎನ್.ಮೂರ್ತಿರಾಯರ 'ಸಂಜೆಗಣ್ಣಿನ ಹಿನ್ನೋಟ', ತರಾಸು ಅವರ 'ಹಿಂತಿರುಗಿ ನೋಡಿದಾಗ' ನಿರಂಜನ ಅವರ 'ಬರಹಗಾರ್ತಿಯ ಬದುಕು' ಆತ್ಮಕಥೆಗಳು ಪ್ರಕಟಣೆಗೊಂಡ ಪ್ರಮುಖ ಕೃತಿಗಳಾಗಿವೆ. ೧೯೯೧ರಲ್ಲಿ ತ.ಸು.ಶಾಮರಾಯರ 'ನೆನಪಿನ ಅಲೆಗಳು' ಎಂಬ ಕೃತಿ ಪ್ರಕಟವಾಯಿತು. ಆರ್.ಸಿ.ಹಿರೇಮಠರ 'ಏರಿ ಬರಲಿ ಸಿರಿ ಬರಲಿ', ಜೆ.ಎಂ.ಪಾಟೀಲರ 'ನೆನಪಿನಂಗಳದಲ್ಲಿ', ಎಚ್.ನರಸಿಂಹಯ್ಯನವರ 'ಹೋರಾಟದ ಹಾದಿ' ಹೀಗೆ ಪಾಶ್ಚಾತ್ಯರ ಪ್ರಭಾವದಿಂದ ಪ್ರೇರಣೆಗೊಂಡು ಕನ್ನಡ ಸಾಹಿತ್ಯದ ವಲಯದಲ್ಲಿ ಹಲವಾರು ಶ್ರೇಷ್ಠ ಕವಿಗಳು, ಚಿಂತಕರುಗಳು ಆತ್ಮಕಥನಗಳನ್ನು ಬರೆದು ಕನ್ನಡ ಸಾಹಿತ್ಯ ಲೋಕವನ್ನು ಆತ್ಮಕಥೆಯ ಪ್ರಕಾರದಲ್ಲಿ ಶ್ರೀಮಂತಗೊಳಿಸಿದ್ದಾರೆ.

ಹೀಗೆ ಕನ್ನಡದ ಹಲವು ಸಾಹಿತಿಗಳು ಬರೆದ ಕನ್ನಡ ಆತ್ಮಕಥನಗಳು ಬಹುತೇಕ ಮೇಲು ವರ್ಗದ ಆತ್ಮಕಥನಗಳು ಎಂದು ಕರೆಯಬಹುದು. ಆದರೆ ಈ ಅವಧಿಯಲ್ಲಿ ೧೯೪೦ರ ಕಾಲಘಟ್ಟದಲ್ಲಿ ಮೊದಲ ತಲೆಮಾರಿನ ದಲಿತ ಲೇಖಕರಾದ ಡಿ. ಗೋವಿಂದದಾಸ್ ಅವರ ಒಂದೇ ಒಂದು 'ದಲಿತ ಆತ್ಮಕಥನ'ವನ್ನು ಆತ್ಮಕತೆಯಾಗಿ ಕಾಣಲಿಕ್ಕೆ ಸಾಧ್ಯವಿದೆ.

ಆಧುನಿಕ ಕನ್ನಡ ಸಾಹಿತ್ಯದ ದಲಿತ ಬಂಡಾಯ ಸಾಹಿತ್ಯವನ್ನು ದಲಿತಪ್ರಜ್ಞೆಯ ದೃಷ್ಟಿಯಿಂದಲೇ ಸಾಹಿತ್ಯ ಮತ್ತು ಸಾಹಿತ್ಯ ಪ್ರಕಾರಗಳನ್ನು ವಿಮರ್ಶೆಯ ನೆಲೆಯಲ್ಲಿ ನೋಡುವ ಪದ್ಧತಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಅದರಲ್ಲೂ ಕನ್ನಡ ದಲಿತ ಆತ್ಮಕಥೆಗಳ ಒಂದು ಪರಂಪರೆಯು ನಿರ್ದಿಷ್ಟವಾಗಿ ಪ್ರಾರಂಭಗೊಂಡಿದೆ. ಈ ಕನ್ನಡ ದಲಿತ ಆತ್ಮಕಥೆಗಳನ್ನು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರತ್ಯೇಕವಾಗಿಯೇ ಪರಿಶೀಲಿಸುವ ಮತ್ತು ವಿಶ್ಲೇಸಿಸುವ ಅವಶ್ಯಕತೆ ಇದೆ. ಹಿಂದಿನ ಕನ್ನಡ ಆತ್ಮಕಥೆಗಳ ರೀತಿಯನ್ನು ಹೋಲಿಸಿದರೆ ಕನ್ನಡದ ದಲಿತ ಆತ್ಮಕಥೆಗಳು ತನ್ನದೇ ಆದ ನೆಲಮೂಲ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡು ರಚನೆಗೊಂಡಿವೆ.

ಡಾ.ಅರವಿಂದ ಮಾಲಗತ್ತಿಯವರು ತಮ್ಮ ಗೌರ್ಮೆಂಟ್ ಬ್ರಾಹ್ಮಣ ಕೃತಿಯನ್ನು ಬರೆಯುವ ಸಂದರ್ಭದಲ್ಲಿ “ನನ್ನ ಆತ್ಮಕಥೆಯು ಕೆಲವು ಪುಟಗಳನ್ನು ನಿಮ್ಮ ಮುಂದಿಟ್ಟು ನಾನೊಬ್ಬ ಮಹಾತ್ಮ ಎಂದು ಕರೆಯಿಸಿಕೊಳ್ಳುವ ಭ್ರಮೆ ನನಗಿಲ್ಲ. ನನಗೆ ಸಾಮಾನ್ಯ ಮನುಷ್ಯನ ಅನುಭವಗಳೇ ಆಗಿವೆ ಎನ್ನುವ ಮಾತನ್ನು ಹೇಳಲಾರೆ. ಆದರೆ ಸಾಮಾನ್ಯ ದಲಿತನೊಬ್ಬನ ಅನುಭವಗಳಾಗಿವೆ ಎನ್ನುವುದನ್ನು ಹೇಳದಿರಲಾರೆ. ಒಬ್ಬ ದಲಿತನಿಗೆ ಇರಬಹುದಾದ ಎಲ್ಲಾ ಆಕಾಂಕ್ಷೆಗಳು ಅರೆಕೊರೆಗಳು, ನನ್ನಲ್ಲಿವೆ. ಆದರೆ ಅಳೆದು ಹೇಳಲು ಯಾವ ಮಾನದಂಡವೂ ಸಾಲದು. ಹೀಗೆಂದು ಕೈಚೆಲ್ಲಿ ಕೂಡುವುದು ನನ್ನ ಉದ್ದೇಶವಲ್ಲ”[೨೬] ಎಂದಿದ್ದಾರೆ. ಹೀಗೆ ದಲಿತ ಆತ್ಮಕಥನಕಾರರಾದ ಮಾಲಗತ್ತಿಯವರ ಬದುಕಿನ ಅನುಭವಗಳು ‘ಮಹಾತ್ಮರ’ ಅನುಭವಗಳಂತವುಗಳಲ್ಲ. ಇವು ದಲಿತರ ಶೋಷಿತರ ಬದುಕಿನ ಅನುಭವಗಳ, ಮಿಡಿತಗಳಾಗಿವೆ. ಅಲ್ಲದೆ ದಲಿತ ಸಮುದಾಯದ ಅನುಭವ ಕಥನವಾಗಿ ಕಂಡುಬರುತ್ತದೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ೧೯ನೇ ಶತಮಾನದಿಂದ ಪ್ರಾರಂಭಗೊಂಡ ಮೊದಲ ತಲೆಮಾರಿನ ದಲಿತ ಆತ್ಮಕಥನಕಾರರನ್ನೂ ಒಳಗೊಂಡಂತೆ ೧೯೭೦ರ ದಲಿತ ಚಳುವಳಿ ಮತ್ತು ದಲಿತ ಸಾಹಿತ್ಯದ ನೆಲೆಯಲ್ಲಿ ಕನ್ನಡ ದಲಿತ ಆತ್ಮಕಥನಗಳ ಪರಂಪರೆ ಸ್ವತಂತ್ರವಾಗಿ ಅಸ್ತಿತ್ವವನ್ನು ಪಡೆದುಕೊಂಡಿತು ಎಂಬುವುದನ್ನು ನಿಖರವಾಗಿ ದಾಖಲಿಸಲು ಸಾಧ್ಯವಾಗಿದೆ.

ಹಿಂದಿನ ಹಿರಿಯ ಕನ್ನಡದ ದಲಿತೇತರರ ಆತ್ಮಚರಿತ್ರೆಕಾರರು ಪ್ರತಿಷ್ಠಿತರು ಮತ್ತು ಪ್ರಸಿದ್ಧರು. ಸ್ವಾತಂತ್ರ್ಯ ಸಂಗ್ರಾಮ, ಸಮಾಜಸುಧಾರಣೆ ಸಾಹಿತ್ಯ–ಸಾಂಸ್ಕೃತಿಕ ಸುಧಾರಣೆ, ಧಾರ್ಮಿಕ ಸುಧಾರಣೆ ಮುಂತಾದ ರಂಗಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಆಧುನಿಕ ಕರ್ನಾಟಕವನ್ನು ಕಟ್ಟಿದ ಮಹನೀಯರು. ಇಂತವರ ಅನುಭವ ದಾಖಲೆಗಳು ಚಾರಿತ್ರಿಕ ಮಹತ್ವವನ್ನು ಹೊಂದಿರುವಂಥವು. ಮುಂದಿನ ಪೀಳಿಗೆಗೆ ದಾರಿದೀಪವಾಗಬಲ್ಲ ಮಾರ್ಗದರ್ಶಕ ಕೃತಿಗಳನ್ನು ಅವರು ಕೊಟ್ಟಿದ್ದಾರೆ. ಅವರೆಲ್ಲ ಬಹುತೇಕ ಸಮಾಜದ ಮೇಲುವರ್ಗಗಳಿಂದ ಬಂದವರು. ಆದರೆ ಅವರ ಕೃತಿಗಳಲ್ಲಿ ಕೆಳವರ್ಗಗಳ ಅದರಲ್ಲೂ ದಲಿತ ವರ್ಗಗಳಿಂದ ಬಂದವರ ಚಿತ್ರಣ, ದೊರೆಯಲಾರದು. ಇದುವರೆಗೂ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿ ಮೂಕ ವೇದನೆಯನ್ನು ಅನುಭವಿಸುತ್ತ ಬಂದ ದಲಿತ ಸಮುದಾಯದ ಅಸಂಖ್ಯ ಜೀವಿಗಳಿಗೆ ಧ್ವನಿಯೇ ಇಲ್ಲದಂತೆ ಸಮಾಜದ ವಾತಾವರಣವು ಸೃಷ್ಟಿಯಾಗಿತ್ತು. ದಲಿತರ ಜೀವನದ ಸ್ವರೂಪ ಅವರ ನೋವು ನರಳಿಕೆಗಳ ಪರಿಸ್ಥಿತಿಗಳು ಹಾಗೂ ಅವರದೇ ಆದ ನಂಬಿಕೆ, ಆಚರಣೆ, ಸಂಸ್ಕೃತಿ, ಜೀವನ ವಿಧಾನಗಳು ಕನ್ನಡ ಸಾಹಿತ್ಯದಲ್ಲಿ ದಾಖಲಾಗಲು ಸಾಧ್ಯವಿರಲಿಲ್ಲ. ಆದರೆ ದಲಿತ ವರ್ಗಗಳು

ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೊರೆತ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳಿಂದ ಅಕ್ಷರವಂತರಾದರು. ಜೊತೆಗೆ ತಮ್ಮ ತಮ್ಮ ಅನುಭವಗಳನ್ನು ಅಭಿವ್ಯಕ್ತಸಲು ಅಕ್ಷರ ವೇದಿಕೆಯನ್ನು ಸಿದ್ದಗೊಳಿಸಿಕೊಂಡರು.

ಬಹುಕಾಲದವರೆಗೆ ಸಮಾಜದಿಂದ ಅಜ್ಞಾತವಾಗಿದ್ದ, ತಿರಸ್ಕಾರಕ್ಕೆ ಒಳಗಾಗಿದ್ದ ದಲಿತ ಲೋಕವೊಂದು ಅಕ್ಷರ ಪ್ರಪಂಚದಲ್ಲಿ ಕಣ್ಣು ತೆರೆದುಕೊಂಡಿತು. ಕಾವ್ಯ, ಕಥೆ, ಕಾದಂಬರಿ, ನಾಟಕಗಳ ಮೂಲಕ ಈ ದಲಿತಲೋಕ ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅನಾವರಣಗೊಂಡಿತು. ಇವುಗಳೊಟ್ಟಿಗೆ ಕಂಡು ಬಂದ ದಲಿತಲೋಕದ ಬರಹಗಾರರು ಹಾಗೂ ಅಕ್ಷರ ರಹಿತ ದಲಿತರು ತಮ್ಮ ತಮ್ಮ ಅನುಭವಗಳನ್ನು ಆತ್ಮಕಥೆಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ವಾಸ್ತವವಾಗಿ ಅಕ್ಷರ ರೂಪದಲ್ಲಿ ಮೂಡಿಸಿದಾಗ ಪ್ರತಿಷ್ಠಿತ ಸಾಹಿತ್ಯ ಪರಂಪರೆಗೆ ಬೆಚ್ಚಿ ಬೀಳುವಂಥಹ ಅನುಭವವೇ ಆಯಿತು ಎಂದರೆ ತಪ್ಪಾಗಲಾರದು.

"ಆತ್ಮಕಥೆ ಮಹಾಮಹಿಮರಿಗೆ ಮಾತ್ರ ಮೀಸಲಾದದ್ದಲ್ಲ. ಸಿಂಹಕ್ಕೊಂದು ಬದುಕಿರುವಂತೆ ಕ್ಷುದ್ರಕೀಟಕ್ಕೂ ಒಂದು ಬದುಕಿದೆ. ಅದರದರ ಬದುಕು ಹೆಚ್ಚು, ಯಾವುದು ಸಹ ಕೀಳಲ್ಲ"[೨೭] ಎಂಬ ವಿಶಾಲ ಮನಸ್ಸು ಕನ್ನಡಿಗರದ್ದು. ಅದ್ದರಿಂದ ದಲಿತರ ಸಾಹಿತ್ಯ ಸೃಷ್ಟಿಯನ್ನು ಕನ್ನಡ ಸಾಹಿತ್ಯದ ಪರಂಪರೆ ಆಶ್ಚರ್ಯಪಟ್ಟುಕೊಂಡರು ಸಹ ಉತ್ಸಾಹದಿಂದ ಸ್ವೀಕರಿಸಿದೆ. ತಮ್ಮ ಅನುಭವವನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಗೊಳಿಸುವ ಸಾಮರ್ಥ್ಯವಿದ್ದು ಯಾರಾದರೂ ತಮ್ಮ ಕಥೆಯನ್ನು ಬರೆಯಬಹುದು. ಆದರೆ ಅದು ಸ್ವಅನುಭವದೊಂದಿಗೆ ಎಷ್ಟೊಂದು ಪರಿಣಾಮಕಾರಿಯಾಗಿ ಮೂಡಿಬಂದಿದೆ ಎಂಬುದು ಮುಖ್ಯ.

ಹಿಂದಿನ ಆತ್ಮಕಥೆಗಳಿಗೆ ಹೋಲಿಸಿದರೆ ದಲಿತ ಆತ್ಮಕಥೆಗಳಲ್ಲಿ ಕಂಡು ಬರುವ ಲೋಕ ಭಿನ್ನವಾದುದು. ಕನ್ನಡದ ದಲಿತೇತರರ ಆತ್ಮಕಥೆಗಳಲ್ಲಿ ಒಂದು ಶಿಷ್ಟ ವಾತಾವರಣವಿರುತ್ತದೆ. ಮಡಿವಂತಿಕೆ ಕಂಡುಬರುತ್ತದೆ. ಅವರುಗಳು ಕುಟುಂಬದ ಹದ್ದು ಮೀರಿ ಬದುಕುವಂತಿರಲಿಲ್ಲ. ಪಾವಿತ್ರ್ಯತೆಯ ಚೌಕಟ್ಟು ಅಲ್ಲಿರುತ್ತದೆ. ಬದುಕಿನ ಯಾವುದೇ ದಾಖಲೆಗಳಲ್ಲಿ ಇವುಗಳನ್ನು ಮೀರಿದ ಮಡಿವಂತಿಕೆ ಕಂಡುಬರುವುದಿಲ್ಲ. ನೀತಿ ನಿಯಮಗಳು ಮರ್ಯಾದೆಯ ಚೌಕಟ್ಟಿರುತ್ತದೆ. ಆದರ್ಶಗಳ ಮಟ್ಟದ ಗಂಭೀರ ವಾತಾವರಣವಿರುತ್ತದೆ. ಕಳ್ಳತನ, ಹಾದರ, ಮಾಂಸಾಹಾರ, ಹಿಂಸೆ, ಕೊಳಕುತನ, ಸುಳ್ಳು, ಮೋಸ ಮುಂತಾದ ಪದಗಳ ಸನ್ನಿವೇಶದ ದೃಶ್ಯಗಳು ಓದುಗರ ಕಣ್ಣಿಗೆ ಬೀಳುವುದು ತುಂಬಾ ಕಡಿಮೆ. ಆ ಹಿರಿಯರು ಬಾಳಿದ್ದು ಅಂಥ ಉನ್ನತ ಆದರ್ಶಗಳ ಜೀವನವನ್ನು. ಅದು ಅವರ ಬರವಣಿಗೆಯಲ್ಲಿ ಪ್ರತಿಬಿಂಬವಾಗುತ್ತಿತ್ತು. ಆದರೆ ದಲಿತ ಲೋಕದಲ್ಲಿ ಇದಕ್ಕೆ ವಿಭಿನ್ನವಾದ

ವಾತಾವರಣ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಅದು ಅತ್ಯಂತ ಹೀನವಾದ ಪರಿಸ್ಥಿತಿಯಿಂದ ಬಿಡಿಸಿಕೊಂಡು ಹೊರಬರುವ ಹೋರಾಟದ ಯಾತನೆಯ ಅನುಭವದ ಕಥನಗಳು ದಲಿತ ಆತ್ಮಕಥೆಗಳು ಬಿಚ್ಚಿಡುತ್ತವೆ.

ಹಿಂದಿನ ಹಿರಿಯ ಕನ್ನಡ ಆತ್ಮಕಥೆಗಳು ಅವರ ಇಳಿಯವಯಸ್ಸಿನಲ್ಲಿ ಬರೆದು ಮೂಡಿಬಂದಿರುವಂತವುಗಳು, ತಮ್ಮ ಬದುಕಿನ ಹೆಜ್ಜೆಗಳನ್ನು, ಸೋಲು ಗೆಲುವುಗಳನ್ನು ಸಿಹಿ ಕಹಿಗಳನ್ನು ಕುರಿತು ಮೆಲಕುಹಾಕುತ್ತಾ ತಾವು ನಂಬಿದ ಮೌಲ್ಯಗಳಿಗಾಗಿ ತಾವು ಹೋರಾಡಿದ ರೀತಿ ನೀತಿಗಳು ಮುಂದಿನವರಿಗೂ ಉಪಯೋಗವಾಗಲಿ ಎಂಬ ಆಶಯದಿಂದ ಅವರು ತಮ್ಮ ಆತ್ಮಚರಿತ್ರೆಗಳನ್ನು ಬರೆದಿದ್ದಾರೆ. ತಮ್ಮ ಇಡೀ ಬದುಕಿನ ಒಟ್ಟು ಸಾರ ಸಂದೇಶಗಳನ್ನು ತಿಳಿಸಿಕೊಡಲು ಪ್ರಯತ್ನಿಸಿದ್ದಾರೆ. ಆದರೆ ಕನ್ನಡದ ದಲಿತ ಆತ್ಮಕಥೆಗಳು ಈ ಬಗೆಯ ಇಡೀ ಜೀವನದ ಹಾಸುಬೀಸುಗಳನ್ನು ಹೊಂದಿರುವುದಿಲ್ಲ. ಇದುವರೆಗೆ ಕತ್ತಲಲ್ಲಿದ್ದ ದಲಿತಲೋಕವನ್ನು ಬೆಳಕಿಗೆ ತರಬೇಕು. ದಲಿತರು ತಮ್ಮ ಬದುಕಿನ ಬವಣೆಗಳನ್ನು ಜಗತ್ತಿಗೆ ತೋರಿಸಬೇಕೆಂಬ ಹಂಬಲ ತೀವ್ರವಾಗಿದ್ದು, ಚಿಕ್ಕವಯಸ್ಸಿನಲ್ಲೆ ತಾವು ಅನುಭವಿಸಿದ ಅನುಭವಗಳನ್ನು ಕುರಿತು ಬರೆದಿರುವುದು ಕಂಡುಬರುತ್ತದೆ, ದಲಿತರ ಹಲವಾರು ಬಾಯಿಗಳಿಗೆ, ಬಾಯಿಬೇಕು, ಮಾತನಾಡುವ ಶಕ್ತಿಯಾಗಬೇಕು ಎಂಬ ಆಸೆ ಇದೆ. ಹೀಗಾಗಿ ದಲಿತ ಆತ್ಮಕತೆಗಳು ಕೇವಲ ವ್ಯಕ್ತಿಗತವೆನಿಸದೇ ಒಂದು ಸಮುದಾಯವನ್ನೇ ಪ್ರತಿನಿಧಿಸುತ್ತದೆ. "ದಲಿತ ಆತ್ಮಕತೆ ಒಬ್ಬ ವ್ಯಕ್ತಿಯ ಬದುಕಿನ ಹೋರಾಟದ ಅಥವಾ ಸಾಧನೆಯ ಕತೆಯಲ್ಲ, ಇಲ್ಲಿ ನಾನು ಎನ್ನುವ ಅಹಂ 'ನಾವು' ಅನ್ನುವ ಒಗ್ಗಟ್ಟಿನಲ್ಲಿ ಕರಗಿ ಹೋಗಿ ಒಂದು ಜನಾಂಗದ ತುಳಿತಕ್ಕೊಳಗಾದ ಜನರ ಧ್ವನಿಯಾಗಿದೆ. ಇಲ್ಲಿ ಬಡತನ, ಕೋಪ, ಅವಮಾನಗಳೆಲ್ಲವೂ ಮಡುಗಟ್ಟಿರುವುದರೊಂದಿಗೆ ಒಂದು ಜನಾಂಗದ ತಣ್ಣಗಿನ ಬದುಕಿನ ಬವಣೆಗಳು ಇವೆ"[೨೮] ಇವುಗಳೊಂದಿಗೆ ತಮ್ಮನ್ನು ತಾವು ತೋರ್ಪಡಿಸಿಕೊಂಡು ಸಾಮಾಜೀಕರಣಗೊಳ್ಳುವುದರ ಜೊತೆಗೆ ಸಾಮಾಜಿಕ ಬದಲಾವಣೆಯನ್ನು ಕೂಡ ಬಯಸುತ್ತದೆ.

ಭಾರತೀಯ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳು ಮರಾಠಿ ಹಿನ್ನೆಲೆಯಲ್ಲಿ ಹುಟ್ಟಿಬಂದರು ಕನ್ನಡ ಸಾಹಿತ್ಯದಲ್ಲಿ ಮರಾಠಿ ಆತ್ಮಕಥೆಗಳಿಗಿಂತಲೂ ಭಿನ್ನವಾದ ಅನುಭವವನ್ನು ಕನ್ನಡದ ದಲಿತ ಆತ್ಮಕಥನಗಳು ಕೊಡುತ್ತವೆ. ಈ ದಲಿತ ಆತ್ಮಕಥೆಗಳನ್ನು ಬರೆಯುವುದರಿಂದ ಸಮಾಜ ಮತ್ತು ಸಂಸ್ಕೃತಿಯ ಕಣ್ಣನ್ನು ತೆರಸಿದಂತಾಗುತ್ತದೆ. "ದಲಿತ ಆತ್ಮಕಥೆಗಳನ್ನು ಓದುತ್ತಿದ್ದಂತೆಯೇ ಕೆಲವು ಪ್ರಶ್ನೆಗಳು ಎದುರಿಗೆ ಬಂದು ನಿಲ್ಲುತ್ತವೆ. ಈಗಾಗಲೇ ದಲಿತ ಲೇಖಕ ಅತ್ಯಂತ ಅಪಮಾನಾತ್ಮಾಕ ಜೀವನವನ್ನು ಅನುಭವಿಸುತ್ತಿದ್ದಾನೆ. ಈ ಅನುಭವಗಳನ್ನು ಮತ್ತೇ ಮತ್ತೇ ಮೆಲಕು ಹಾಕುವುದು

ಸರಿಯೇ? ಯಾವ ಭೂತಕಾಲವನ್ನು ಮರೆಯಬೇಕೆಂದು ದಲಿತರು ಇಚ್ಛಿಸಿದ್ದಾರೆಯೋ ಅದನ್ನು ಮತ್ತೇ ಮತ್ತೇ ಅಕ್ಷರಗಳ ರೂಪದಲ್ಲಿ ದಾಖಲಿಸುವುದು ಯಾವ ಸುಖಕ್ಕಾಗಿ? ಇದೆಲ್ಲ ತಿಪ್ಪೆಯನ್ನು ಕೆದಕಿದಂತಾಗುವುದಿಲ್ಲವೋ? ಆತ್ಮಕಥೆಗಳನ್ನು ಬರೆದು ತಾವು ಪಟ್ಟಯಾತನೆಯನ್ನು ಪುನಃ ಪುನಃ ಸ್ಮರಿಸಿಕೊಳ್ಳುವುದರಲ್ಲಿ ಯಾವ ಪುರುಷಾರ್ಥವಿದೆ? ದಲಿತ ಲೇಖಕರ ಈಗಿನ ಸ್ಥಿತಿಗೆ (ಸಾಮಾಜಿಕ, ಮಾನಸಿಕ, ಆರ್ಥಿಕ) ಆತನ ಹಳೆಯ ಜೀವನದ ವಾಸನೆಯಿಂದ ತೊಂದರೆಯುಂಟಾಗುವುದಿಲ್ಲವೇ?"[೨೯] ಎಂದು ಹೇಳಿದರೂ ಸಹ ತಮ್ಮ ಅನುಭವಗಳನ್ನು ಪ್ರಾಮಾಣಿಕವಾಗಿ ದಾಖಲಿಸುವುದರಿಂದ ಆ ಯಾತನೆಗಳಿಂದ ತನ್ನ ಬೆನ್ನಿಗಿದ್ದ ಸಮಾಜ ಬದಲಾಗಬೇಕೆಂಬ ತಹತಹಿಕೆ ಕನ್ನಡ ದಲಿತ ಆತ್ಮಕಥೆಗಳಲ್ಲಿ ಕಂಡುಬರುತ್ತದೆ.

ಕನ್ನಡದ ದಲಿತ ಆತ್ಮಕಥೆಗಳನ್ನು ಓದಿ ಪ್ರತಿಕ್ರಿಯಿಸಿದ ಅನೇಕ ವಿಮರ್ಶಕರು ಮತ್ತು ಓದುಗರು ಕನ್ನಡದ ದಲಿತ ಆತ್ಮಕಥೆಗಳಿಗೆ ಮೂಲ ಪ್ರೇರಣೆ ಮರಾಠಿ ದಲಿತ ಆತ್ಮಕಥೆಗಳು ಎಂದು ಹೇಳಿದ್ದಾರೆ. ಮರಾಠಿ ದಲಿತ ಆತ್ಮಕಥೆಗಳು ಮತ್ತು ಕನ್ನಡ ದಲಿತ ಆತ್ಮಕಥೆಗಳು ಇವೆರಡನ್ನು ಓದಿ ತೌಲನಿಕವಾಗಿ ವಿಮರ್ಶಿಸಿ ಈ ರೀತಿ ಹೇಳಿದ್ದಾರೆ. ಮರಾಠಿ ದಲಿತ ಆತ್ಮಕಥೆಗಳಲ್ಲಿ ಮಾನವ ಲೋಕದ ಅತ್ಯಂತ ನಿಕೃಷ್ಟ ಬದುಕು ಅನಾವರಣಗೊಂಡಿದೆ. "ಮರಾಠಿ ಸಾಹಿತ್ಯದಲ್ಲಿ ದಲಿತ ಲೇಖಕರ ಒಂದು ಪ್ರಭಾವ ಪೂರ್ಣವಾದ ಸಾಹಿತ್ಯ ಮಾಧ್ಯಮ ಆತ್ಮಕಥೆ. ಕನ್ನಡದಲ್ಲಿ ಈ ಪ್ರಕಾರ ಬೆಳೆದು ಬಂದಿಲ್ಲ. ಮರಾಠಿ ದಲಿತ ಆತ್ಮಕಥೆಗಳನ್ನು ಬರೆಯದಿರುವ ಲೇಖಕರೇ ವಿರಳ. ದಲಿತ ಲೇಖಕನನ್ನು ಸಮಾಜ ಯಾವ ಯಾವ ರೀತಿಯಲ್ಲಿ ಹೇಗೆ ಹೇಗೆ ಶೋಷಣೆ ಮಾಡಿತ್ತೆಂಬುದನ್ನು ಹಾಗೂ ಆತ ಅದನ್ನು ಹೇಗೆ ಎದುರಿಸಿದನೆಂಬುದರ ವಾಸ್ತವ ಚಿತ್ರಣ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಈ ಆತ್ಮಕಥೆಯಲ್ಲಿ ದಲಿತರ ಮನಸ್ಸಿನ ತುಡಿತಗಳು ತುಂಬ ಪ್ರಭಾವಶಾಲಿಯಾಗಿ ವ್ಯಕ್ತಗೊಂಡಿವೆ. ಈ ತುಡಿತಗಳು ಮರಾಠಿಗೆ ಅತ್ಯಂತ ತುಂಬ ಬೆಲೆಯುಳ್ಳ ಕಲಾಕೃತಿಗಳನ್ನು ನೀಡಿದವು. ದಲಿತ ಆತ್ಮಕಥೆಗಳು ಅವರು ಪಟ್ಟ ದುಃಖಗಳ ಖಂಡಕಾವ್ಯಗಳೇ ಆಗಿವೆ. ಈ ಆತ್ಮಕಥೆಗಳು ರಂಜನೆಗಾಗಿ ಬರೆದ ಸಾಹಿತ್ಯ ಪ್ರಕಾರವಲ್ಲ ತಾವು ಅನುಭವಿಸಿದ ಅವಮಾನ, ಹಿಂಸೆ, ಸಮಾಜ ಮತ್ತು ಪರಂಪರೆಗಳು ಕಾಲಕಾಲಕ್ಕೆ ನೀಡಿದ ಬರೆ, ಅಜ್ಞಾನದಿಂದ ತಾವು ಅನುಭವಿಸಿದ, ಅನುಭವಿಸುತ್ತಿರುವ ದೈನ್ಯ ಹಾಗೂ ದಾಸ್ಯತ್ವ ಇವುಗಳ ವಿಸ್ತೃತ ವಿವರಣೆ ಈ ಆತ್ಮಕಥೆಗಳಲ್ಲಿವೆ. ಇಲ್ಲಿಯ ವ್ಯಕ್ತಿಗತ 'ನಾನು' ಅನುಭವದ ಕುಲುಮೆಯಿಂದ 'ನಾವು' ಎಂದು ಸಾರ್ವತ್ರಿಕರಣಗೊಳ್ಳುತ್ತದೆ. ನಾನು ಎಂದು ಹೇಳಿಕೊಳ್ಳುತ್ತಾ ನಾವು ಎಂಬ ಸಾಮೂಹಿಕ ಭಾವನೆಯನ್ನು ಆತ್ಮಕಥನಕಾರ ಸೃಷ್ಟಿಸುತ್ತಾನೆ. ಇಲ್ಲಿ ಘಟನೆಗಳ

ಪರಿಸರ, ಹಸಿವು, ದಾರಿದ್ರ್ಯ, ಅವಮಾನ, ಸಮಾಜದ ಮಾನಸಿಕ ಸ್ಥಿತಿ, ಇವುಗಳು ಮಹತ್ವದಾಗುತ್ತದೆ".[೩೦] ಹೀಗೆ, ಮರಾಠಿಯಲ್ಲಿನ ಅನೇಕ ದಲಿತ ಲೇಖಕರು ಸ್ವಾನುಭವಗಳ ನೆಲೆಯಲ್ಲಿ ತಮ್ಮ ಸಮುದಾಯದ ಬದುಕನ್ನು ಆತ್ಮಕಥನಗಳ ಮೂಲಕ ದಾಖಲಿಸಿದ್ದಾರೆ.

ಕನ್ನಡ ಹಾಗೂ ಇತರೆ ಭಾಷೆಗಳಲ್ಲಿ, ಸಾಹಿತ್ಯದಲ್ಲಿ ಪರಿಣತಿಯಿರುವ ಸಾಹಿತ್ಯ ವಿಮರ್ಶಕರು ಮರಾಠಿ ಆತ್ಮಕಥನಗಳನ್ನು ಓದಿ ಅದರ ಪ್ರಭಾವದ ಹಿನ್ನೆಲೆಯಲ್ಲಿ ಕನ್ನಡ ದಲಿತ ಆತ್ಮಕಥೆಗಳ ಮೌಲ್ಯವನ್ನು ದಾಖಲಿಸಿದ್ದಾರೆ. ಅಂದರೆ ಮರಾಠಿಯ ಆತ್ಮಕಥೆಗಳಷ್ಟು ಕನ್ನಡದ ದಲಿತ ಆತ್ಮಕತೆಗಳು ಸಮಾಜದ ಮೇಲೆ ಪರಿಣಾಮ ಬೀರುವುದಿಲ್ಲ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ವಿಮರ್ಶಕರಾದ ಡಾ. ಗಿರಡ್ಡಿ ಗೋವಿಂದರಾಜ ಅವರ ಅಭಿಪ್ರಾಯ ಹೀಗಿದೆ : "ಕನ್ನಡ ದಲಿತ ಸಾಹಿತ್ಯದಲ್ಲಿ ಆತ್ಮಕಥೆಯ ಪ್ರಕಾರ ಇಲ್ಲವೆನ್ನುವಷ್ಟರ ಮಟ್ಟಿಗೆ ಅದು ಬಡವಾಗಿದೆ. ನಮ್ಮ ದಲಿತರಿಗೆ ಇಂಥ ಧಾರುಣ ಅನುಭವಗಳು ಇಲ್ಲವೆ? ತಮ್ಮ ಅವಮಾನಗಳನ್ನೆಲ್ಲ ಅವರು ಮುಚ್ಚಿಟ್ಟುಕೊಂಡಿದ್ದಾರೆಯೇ? ಅವುಗಳನ್ನು ಹೇಳಿಕೊಂಡರೆ ತಮ್ಮ ಪ್ರತಿಷ್ಠೆಗೆ ಕುಂದಾದೀತೆಂಬ ಭಯವೇ? ಅವರಲ್ಲಿ ಸಿಟ್ಟೇನೋ ಸಾಕಷ್ಟಿದೆ. ಆದರೆ ಆ ಸಿಟ್ಟಿನ ಕಾರಣ ಸಾಮಾನ್ಯೀಕರಿಸಿದ್ದೇ ಹೊರತು ವೈಯಕ್ತಿಕ ಅನುಭವದಲ್ಲಿ ಕುದ್ದು ಗಟ್ಟಿಯಾದುದಲ್ಲ. ಅವರು ತಮ್ಮ ಸಿಟ್ಟಿನ ಅಭಿವ್ಯಕ್ತಿಗಾಗಿ ಇನ್ನೂ ಸಾಂಪ್ರದಾಯಿಕ ಸಾಹಿತ್ಯ ಪ್ರಕಾರಗಳಲ್ಲಿಯೇ ತಡಕಾಡುತ್ತಿದ್ದಾರೆ. ಮರಾಠಿ ದಲಿತ ಲೇಖಕರಂತೆ ತಮ್ಮ ವಿಶಿಷ್ಟ ನೋವಿನ ಅಭಿವ್ಯಕ್ತಿಗಾಗಿ ವಿಶಿಷ್ಟ ಸಾಹಿತ್ಯ ಪ್ರಕಾರವೊಂದನ್ನು ರೂಪಿಸಿಕೊಳ್ಳಲು ಯತ್ನಿಸುತ್ತಿಲ್ಲ"[೩೧] ಎಂದು ಗಂಭೀರವಾಗಿ ವಿಮರ್ಶೆ ಮಾಡಿದ್ದಾರೆ.

"ಆತ್ಮಚರಿತ್ರೆ ಯಾರದ್ದೇ ಆಗಿರಲಿ ಅದು ಯಾವಾಗಲೂ ವೈಯಕ್ತಿಕ ವಿಷಯಗಳ ಜೊತೆ ಜೊತೆಯಲ್ಲಿ ಸಾಮುದಾಯಿಕ ಸಾಂಸ್ಕೃತಿಕ ವಿವರಗಳೂ ಬಿತ್ತರಗೊಳ್ಳುತ್ತಿರಬೇಕು. ಹೀಗೆ ಜೊತೆಗೂಡಿ ಬಂದಾಗಲೇ ಅದಕ್ಕೆ ಬೆಲೆ. ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕೃತಿಯಲ್ಲಿ ಕೇವಲ ಅವರ ಸ್ವಂತ ವಿಚಾರಗಳು ಇಲ್ಲ. ಅದೊಂದು ಶೂದ್ರಾಂದೋಲನ ಚರಿತ್ರೆ. ಅದರಂತೆ ದಲಿತರ ಆತ್ಮಕಥೆಗಳು ದಲಿತಾಂದೋಲನ ಚರಿತ್ರೆಯಾಗಬೇಕಿತ್ತು ಅಂಥ ಕೆಲಸವನ್ನು ಈಗ ಬಂದಿರುವ ಕನ್ನಡ ದಲಿತ ಆತ್ಮಕಥೆಗಳು ಮಾಡಲಿಲ್ಲ. ಅನುಭವಗಳು ಮಾಗುವ ಮುನ್ನವೇ ದಲಿತರು ಬರೆಯಲು ಹೊರಟರು"[೩೨] ಎಂದು ವಿಮರ್ಶೆ ಮಾಡುತ್ತಾರೆ. ವಿಮರ್ಶಕರ ಈ ಮಾತುಗಳನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಮಹಾರಾಷ್ಟ್ರದಲ್ಲಿನ ಮರಾಠಿ ದಲಿತ ಆತ್ಮಕತೆಗಳು ಬಹಳ ಹುಲುಸಾಗಿ ಬೆಳೆದು ಬಂದವು ಎಂಬುವುದು ಸಹ ಅಷ್ಟೇ ಸತ್ಯ. ಅಲ್ಲದೆ ಮರಾಠಿ ದಲಿತ ಲೇಖಕರು ಸಾಹಿತ್ಯ ರಚನೆಯಲ್ಲಿ ತೊಡಗಿದಾಗ ಮೊದಲು ಆತ್ಮಕಥೆಯ

ಪ್ರಕಾರವನ್ನೆ ಪ್ರಮುಖವಾಗಿ ಆಯ್ಕೆ ಮಾಡಿಕೊಂಡು ತಮ್ಮ ಅನುಭವಗಳನ್ನು ಬಿಚ್ಚಿಡುತ್ತಾರೆ. ಕನ್ನಡ ದಲಿತ ಆತ್ಮಕಥೆಗಳಿಗೆ ಮರಾಠಿ ಆತ್ಮಕಥೆಗಳ ಪ್ರಭಾವ ಇದೆ. ಆದರೆ ಕನ್ನಡದಲ್ಲಿ ದಲಿತ ಆತ್ಮಕಥೆಗಳು ಪ್ರಾರಂಭವಾಗುವ ಮುನ್ನ ಕಾವ್ಯ ಪ್ರಕಾರ ಬಹಳ ಹುಲುಸಾಗಿ ಬೆಳೆದು ಬಂದಿತು. ಮಹಾರಾಷ್ಟ್ರದ ದಲಿತ ಆತ್ಮಕಥೆಗಳಿಗೆ ಇರುವ ಮೌಲ್ಯವನ್ನು ನಾವು ಕನ್ನಡದ ದಲಿತ ಕಾವ್ಯಕ್ಕೆ ನೀಡಬಹುದು.

ಪ್ರೊ.ಲಿಂಗದೇವರು ಹಳೆಮನೆ ಅವರು ಹೇಳಿದಂತೆ, "ದಲಿತರ ಆತ್ಮಕಥೆ ಸಂದರ್ಭಕ್ಕೆ ಬಂದಾಗ ಕಲ್ಚರಲ್ ಹಿನ್ನಲೆಯ ವಿಸ್ತರಣೆ ಸಾಹಿತ್ಯಕ್ಕೆ ಬರುವಂತಹುದು ಆಗಿರುತ್ತದೆ. ಶುಷ್ಕವಾದ ವಿವರಗಳು ಇಲ್ಲಿ ಇಲ್ಲ. ಸಾಹಿತ್ಯ ಕೃತಿಯ ಹಿನ್ನಲೆಯಲ್ಲಿ ಇವರು ಸಾಹಿತ್ಯದ ವಿದ್ಯಾರ್ಥಿಯಾಗಿದ್ದು, ತಾನು ಕಂಡಂತಹ ಘಟನೆಗಳನ್ನು ತಾನು ಆಧುನಿಕವಾಗಿ ಪಡೆದುಕೊಂಡಿರುವ ಅರಿವಿನ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾ ಹೋಗುತ್ತಾರೆ. ಯಾಕೆಂದರೆ ದಲಿತರಲ್ಲಿ ಬಂದಿರುವಂತಹ ಕಥೆ, ಕವನ, ಕಾದಂಬರಿ, ಆತ್ಮಕಥೆ, ಏನೇ ಇದ್ದರೂ ಅವೆಲ್ಲವೂ ಸಹ ನನ್ನ ಪ್ರಕಾರ ಒಂದು ರೀತಿಯಲ್ಲಿ ಬಯೋಗ್ರಾಫಿಕಲ್ ಡಿಟೈಲ್ಸ್. ದೇವನೂರ ಮಹಾದೇವರ ಕಥೆಯೂ ಕೂಡಾ ಬಯೋಗ್ರಾಫಿಕಲ್, ಅಥವಾ ಸಿದ್ದಲಿಂಗಯ್ಯನವರ ಒಂದು ಹಾಡು ಕೂಡಾ ಬಯೋಗ್ರಾಫಿಕಲ್. ಉದಾಹರಣೆಗೆ ಒಂದು ಮೂಳೆಯ ಹಾಡು ನಾನು ಮೂಳೆ ಹಿಂಗೆ ಇರೋಕಿಲ್ಲ ಒಂದು ದಿವಸ ಮನುಷ್ಯ ಆಗ್ತೀನಿ' ಇದು ಪ್ರತಿಯೊಬ್ಬ ದಲಿತನು ಅನುಭವಿಸಿರುವ ನೋವಿನ ಹಾಡೇ. ಹೀಗೆ ಎಲ್ಲವೂ ಸಹಾ ಬಯೋಗ್ರಾಫಿಕಲ್ಲೇ ಆಗಿರುತ್ತವೆ. ಯಾಕೆಂದರೆ ಅವರಿಗೆ ಹೊರಗಿನದನು ಕದ್ದು ಬರೆಯುವ ಅನಿವಾರ್ಯತೆ ಇಲ್ಲ. ಹೊರಗಿನದನ್ನು ತಂದು ಬರೆಯುವುದೇ ಆಗಿದ್ದರೆ ಆತ ದಲಿತ ಲೇಖಕ ಆಗಿರೋದೆ ಇಲ್ಲ. ಅವನು ಬೇರೆ ರೀತಿಯ ಲೇಖಕನೇ ಆಗಿರಬಹುದು."[೩೩]. ಹೀಗಾಗಿಯೇ ದಲಿತ ಸಮುದಾಯದಲ್ಲಿ ಅರಿವು ಪಡೆದುಕೊಂಡ ಸೃಜನಶೀಲ ಶಕ್ತಿಯುಳ್ಳ ಆತ್ಮಕಥನಕಾರರು ತಮ್ಮ ತಮ್ಮ ಜನಸಮುದಾಯಗಳ ಸಾಂಸ್ಕೃತಿಕ ನೆಲೆ–ಹಿನ್ನೆಲೆ, ಪರಂಪರೆ–ಪಲ್ಲಟ, ಆಧುನಿಕತೆಯ ಪರಿಣಾಮಗಳನ್ನು ಹೊಸಕಣ್ಣುಗಳಿಂದ ವೀಕ್ಷಿಸುವ ಪ್ರಯತ್ನ ಮಾಡಿದ್ದಾರೆ.

೧೯೭೦ರ ದಶಕದಲ್ಲಿ ಕನ್ನಡದ ದಲಿತ ಬರಹಗಾರರು ಆತ್ಮಕಥೆಯನ್ನು ಬರೆಯುವುದರ ಬದಲು ತಮ್ಮ ಬದುಕಿನ ಎಲ್ಲಾ ಅನುಭವಗಳನ್ನು ದಲಿತ ಕಾವ್ಯದ ರೂಪದಲ್ಲಿ ರಚಿಸಿದ್ದಾರೆ. ಈ ಸಂದರ್ಭದಲ್ಲಿ ದಲಿತ ಸಾಹಿತ್ಯ ಆರಂಭದ ಬೆಳವಣಿಗೆಯಲ್ಲಿ ಸಿಟ್ಟು, ಅಬ್ಬರ, ಆಕ್ರೋಶ, ನೋವು, ಸಂಕಟ, ಜಾತೀಯತೆಯ ಅವಮಾನಗಳನ್ನು ಅಭಿವ್ಯಕ್ತಿಸಲು ಕಾವ್ಯವನ್ನು ಮೊದಲ

ಅಭಿವ್ಯಕ್ತಿ ಮಾರ್ಗವಾಗಿ ಮಾಡಿಕೊಂಡರು. ಈ ಕಾವ್ಯಗಳೂ ಸಹ ದಲಿತರ ಬಯೋಗ್ರಾಫಿಕ್ಸ್ ಆಗಿವೆ ಎಂದು ವಿದ್ವಾಂಸರೂ ಅಭಿಪ್ರಾಯಪಟ್ಟಿರುವುದರಿಂದ ಕೆಲವು ಕಾವ್ಯಮಾರ್ಗದ ಹೊಳಹುಗಳನ್ನು ಪರಿಶೀಲಿಸಬಹುದು.

ಬಿ.ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಪ್ರಕರಣದ ಪರಿಣಾಮ ಕರ್ನಾಟಕದಲ್ಲಿ ದಲಿತ ಚಳುವಳಿ ಮತ್ತು ದಲಿತ ಸಾಹಿತ್ಯ ಹುಟ್ಟಿಕೊಂಡಿತು. ಇಂತಹ ಸಂದರ್ಭದಲ್ಲಿ ದಲಿತ ಕಾವ್ಯದ ಶಕ್ತಿಯಾಗಿ ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪು ನಾಡಿನ ಹಾಡು ಇಂತಹ ಕಾವ್ಯ ಸಂಕಲನಗಳು ಹುಟ್ಟಿಕೊಂಡವು. ಸಿದ್ದಲಿಂಗಯ್ಯರೊಟ್ಟಿಗೆ ಎಚ್.ಗೋವಿಂದಯ್ಯ, ದೇವನೂರು ಮಹಾದೇವ ವಿ.ಮುನಿವೆಂಕಟಪ್ಪ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ಮುಳ್ಳೂರು ನಾಗರಾಜು, ಸತ್ಯಾನಂದ ಪಾತ್ರೋಟ, ಎಲ್. ಹನುಮಂತಯ್ಯ, ಚೆನ್ನಣ್ಣ ವಾಲೀಕರ, ಕೆ.ಬಿ. ಸಿದ್ದಯ್ಯ, ಜಂಬಣ್ಣ ಅಮರಚಿಂತ, ಅನಸೂಯ ಕಾಂಬಳೆ, ಸುಕನ್ಯಾ ಮಾರುತಿ, ಗಂಗಾರಾಂ ಚಾಂಡಾಳ, ಕೆ.ರಾಮಯ್ಯ, ಎಂ.ಎಸ್.ಶೇಖರ್, ಲಕ್ಷ್ಮಣ್, ಇಂತಹ ಪ್ರಮುಖ ಕವಿಗಳು ಶೋಷಿತರ ಸ್ಥಿತಿಯನ್ನು ಸಾಂಸ್ಕೃತಿಕ ಸೂಕ್ಷ್ಮಗಳ ಶೋಧನೆಗೆ ತೊಡಗುವುದರ ಮೂಲಕ ಕಾವ್ಯ ಕೃಷಿಯಲ್ಲಿ ದಲಿತರ ಬದುಕಿನ ಚಿತ್ರಣವನ್ನು ತೆರೆದಿಟ್ಟರು.

ಕನ್ನಡದ ಪ್ರಸಿದ್ಧ ದಲಿತ ಕವಿಯಾದ ಡಾ.ಸಿದ್ದಲಿಂಗಯ್ಯ ಅವರು ದಲಿತ ಬದುಕಿನ ಕರಾಳ ಚಿತ್ರಣಗಳನ್ನು ಕಾವ್ಯದಲ್ಲಿ ಕಟ್ಟಿಕೊಟ್ಟರು. ನಿರ್ಲಕ್ಷಕ್ಕೆ ಒಳಗಾಗಿದ್ದ ಈ ನೆಲದ ಅಸ್ಪೃಶ್ಯರ ಬದುಕಿನ ವೇದನೆ-ಸಂವೇದನೆಗಳನ್ನು ಪರಿಣಾಮಕಾರಿಯಾಗಿ ಕಾವ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ. ಶತಶತಮಾನಗಳ ನೋವುಂಡ ಮೂಕವೇದನೆಯನ್ನು ಅನುಭವಿಸುತ್ತಿದ್ದ ದಲಿತ ಸಮುದಾಯ ಮೊದಲ ಬಾರಿಗೆ ತನ್ನಲ್ಲೆ ಸಿಟ್ಟು-ಸೇಡುಗಳಿಂದ ಮಾತನಾಡಿದ್ದು ಕಾವ್ಯದ ಮೂಲಕ. ಆದರೆ ಮರಾಠಿ ಸಾಹಿತ್ಯದ ಆತ್ಮಕಥೆಗಳು ಮೊದಲು ತಮ್ಮ ನೋವು ಸಂಕಟ ಸೇಡುಗಳನ್ನು ಅಭಿವ್ಯಕ್ತಿಸಿದ್ದು ಆತ್ಮಕಥೆಗಳ ಮೂಲಕ ಎಂದು ಹೇಳಬಹುದು.

ಸಿದ್ದಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಸಂಕಲನವು ತಳಸಮುದಾಯದ ಬದುಕನ್ನು ಕಾವ್ಯವಾಗಿಸಿತು. ಮನುಷ್ಯನ ನಡುವಿನ ಭೇದಾಭೇದಗಳನ್ನು ಬಹುಸಾಂದ್ರವಾಗಿ ಹೇಳಿದರು. ಎಪ್ಪತ್ತರ ದಶಕದ ಶೋಷಿತರ ಬದುಕಿನ ದುಃಖ ದುಮ್ಮಾನಗಳ ಮೊದಲ ಅಭಿವ್ಯಕ್ತಿಯ ಆತ್ಮಕಥನಾತ್ಮಕ ಕಾವ್ಯವಾಗಿದೆ. ಈವರೆಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜದ ಪ್ರಗತಿಗೆ ಮೂಲಕಾರಣರಾದ ಶ್ರಮಿಕರಿಗೆ ಯಾವುದೇ ಬಗೆಯ ಮನ್ನಣೆಯನ್ನು ದೊರಕಿಸಿಕೊಟ್ಟಿಲ್ಲ. ಬಹುಸಂಖ್ಯಾತರ ಶ್ರಮದ ದುಡಿಮೆಯ ಪ್ರತಿಫಲವನ್ನು ಕೆಲವೇ ಮಂದಿ ಅನುಭವಿಸುತ್ತಿರುವುದು

ಸಾಮಾಜಿಕ ಶೋಷಣೆಯ ವೈಪರೀತ್ಯವನ್ನು ಎತ್ತಿ ತೋರಿಸುತ್ತದೆ. ನೇರ ಅಭಿವ್ಯಕ್ತಿಯ ಮೂಲಕ ಸರಳ ಅರ್ಥವಂತಿಕೆಯೊಟ್ಟಿಗೆ ಬಿಚ್ಚಿಕೊಳ್ಳುವ 'ನನ್ನ ಜನಗಳು' ಕವಿತೆ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಬಂಧದಲ್ಲಿ ಜರ್ಝರಿತವಾಗಿರುವ ಶೋಷಿತರ ಬದುಕಿನ ಬವಣೆ, ಮುಗ್ಧತೆ, ಅಸಹಾಯಕತೆಯನ್ನು ಹಾಡಾಗಿಸಿದೆ. ಈ ಕವಿತೆಯು ನಾಡಿನ ಹೊಲಗದ್ದೆಗಳಲ್ಲಿ ರಕ್ತ ಬಸಿದು ದುಡಿಯುವ, ನಗರಗಳ ನೈರ್ಮಲ್ಯವನ್ನು ಕಾಯ್ದುಕೊಳ್ಳುವ ಈ ನಾಡಿನ ಮಕ್ಕಳ ಆರ್ಯಗೀತೆ. ಭೂಮಾಲೀಕರು, ಮಠಾಧಿಪತಿಗಳು, ರಾಜಕಾರಣಿಗಳು, ಲೇವಾದೇವಿಗಾರರು, ಬಂಡವಾಳಶಾಹಿಗಳು, ಶೋಷಕವರ್ಗವನ್ನು ಪ್ರತಿನಿಧಿಸಿದರೆ, ಬಡವರು, ರೈತರು, ಗಾರೆಕೆಲಸ ಮಾಡುವವರು ದುಡಿಯುವ ಕೂಲಿಕಾರ್ಮಿಕರು ಶೋಷಿತವರ್ಗವನ್ನು ಪ್ರತಿನಿಧಿಸುತ್ತಾರೆ.

'ಬೀಳು' ಕವಿತೆಯು ದಲಿತ ಸಮುದಾಯದ ಕೂಲಿ ಹೆಣ್ಣಿನ ದುಃಸ್ಥಿತಿಯನ್ನು ಕಟ್ಟಿಕೊಡುತ್ತದೆ. ಅಲ್ಲದೆ ದಲಿತರ ಬಡತನದ ತೀವ್ರತೆಯನ್ನು ನಿಷ್ಠುರವಾಗಿ ಅಭಿವ್ಯಕ್ತಿಸುತ್ತದೆ.

> **"ಎಣ್ಣೆ ಕಾಣದ ತಲೆಯ ಕೂದಲುಗಳೆದ್ದೆದ್ದು**
> **ನರ್ತನವ ಗೈಯುತಿರೆ ಮೋದದಿಂದ**
> **ಬರಿಹೊಟ್ಟೆ ಕೊರಗಿತ್ತು ಕೊಳೆಬಟ್ಟೆ ಹರಿದಿತ್ತು**
> **ಪ್ರೇತಕಳೆ ಚಿಮ್ಮುತ್ತ ವದನದಿಂದ**
> **ಹರಿದ ಸೀರೆಯ ಅಂಚು ಸುಳಿವ ಗಾಳಿಗೆ ಹಾರಿ**
> **ಅಡಗಿದ್ದ ತೊಡೆಗಳು ತೋರುತ್ತಿತ್ತು**
> **ಚಿಂದಿ ಕುಬಸವು ತನ್ನ ಒಲವು ಒಂದೆಡೆ ತೂರಿ**
> **ವಕ್ಷಗಳ ದರ್ಶನವ ಮಾಡಿಸಿತ್ತು"**[೩೪]

ಹೊಲಗದ್ದೆಗಳಲ್ಲಿ ದುಡಿಯುವಾಗ ಬಿಸಿಲಿನ ಝಳಕ್ಕೆ ಕಾದ ತಲೆಗೆ, ಎಣ್ಣೆ ಹಾಕಲಿಕ್ಕಾಗದಷ್ಟು ಕಿತ್ತು ತಿನ್ನುವ ಬಡತನ ದಲಿತರ ಬದುಕನ್ನು ಆವರಿಸಿದೆ. ಎಷ್ಟು ದುಡಿದರೂ ಕೂಡ ದಲಿತರ ಪಾಲಿಗೆ ಹಸಿವನ್ನು ಇಂಗಿಸಿಕೊಳ್ಳುವುದು ದುಸ್ತರವೆನಿಸಿದೆ. ಬಡತನದಿಂದಾಗಿ ಉಡಲು ಬಟ್ಟೆ ಇಲ್ಲದೆ, ಹರಿದ ಬಟ್ಟೆಗಳಿಂದ ಮಾನಮುಚ್ಚಿಕೊಳ್ಳುವುದು ಅಸಾಧ್ಯವೆನಿಸಿದೆ, ಕವಿ ಬಾಲ್ಯದಲ್ಲಿ ಕಂಡ ದಲಿತ ಸಮುದಾಯದ ಶೋಷಣೆಯ ಸ್ಥಿತಿಗತಿಗಳನ್ನು ಕಾವ್ಯರೂಪದಲ್ಲಿ ಚಿತ್ರಿಸಿದ್ದಾರೆ. 'ನನ್ನ ಜನಗಳು' ಎಂಬ ಕವಿತೆಯಲ್ಲಿ ಶೋಷಿತ ವರ್ಗದವರ ಬದುಕಿನ ಅವಮಾನ, ಅಸ್ಪೃಶ್ಯತೆಯ ಸೋಂಕಿನ ಪರಿಣಾಮಗಳನ್ನು ವಾಸ್ತವದ ನೆಲೆಯಲ್ಲಿ ಬಿಂಬಿಸಿದ್ದಾರೆ.

“ಇಕ್ರಲಾವದೀರ್ಲಾ ಈ ನನ್‌ಮಕ್ಕಳ ಚರ್ಮ ಎಬ್ರಲ
ದೇವ್ರ ಒಬ್ನೆ ಅಂತಾರೆ
ಹೊಲೇರ್ನಾ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೋಟ್ಲು, ಬಾವಿ, ಮನೆ, ಯಾವುದಕ್ಕೂ ಸೇರ್ಸಲ್ವಲ್ರೋ
ನಮ್ಮ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟ್‌ಕತ್ತಾರೆ
ನಾವ್ ಬೆಳೆದಿತ್ ತಿಂತಾರೆ ನಾವ್ ದುಡಿದಿತ್ ತಗತ್ತಾರೆ
ನಾವ್ ಮಾತ್ರ ಬ್ಯಾಡ
ಹೊಲೇರು ಮಾದುಗ್ರು ಅನ್ನೋ ಬದ್ಲು ಹರಿಜನಾ
ಅಂತ ಕರ್ದು ನಗ್ತಾರಲಪ್ಪೋ”[೩೫]

ಇಲ್ಲಿ ಮೇಲ್ವರ್ಗದ ಜನರು ಸೃಷ್ಟಿಸಿರುವ ಜಾತಿವ್ಯವಸ್ಥೆಯ ಒಳಸುಳಿಗಳನ್ನು ಕವಿ ಅನಾವರಣ ಮಾಡುತ್ತಾರೆ. ಅಲ್ಲದೆ ಜಾತೀಯತೆಯ ಮರ್ಮವನ್ನು ಈ ಕವಿತೆ ತಿಳಿಸಿಕೊಡುತ್ತದೆ. ಇಂತಹ ಕವಿತೆಗಳು ದಲಿತ ಬದುಕಿನ ಆತ್ಮಕಥನಗಳೇ ಆಗಿರುವುದನ್ನು ಅಲ್ಲಗಳೆಯಲಾಗದು. ಬೆಲ್ಚಿಯ ಹೃದಯ ವಿದ್ರಾವಕ ಘಟನೆ, ಕರ್ನಾಟಕದ ಕೋಲಾರದ ಕಂಬಾಲಪಲ್ಲಿ, ನಂಜನಗೂಡಿನ ಬದನವಾಳು, ಶ್ರೀರಂಗಪಟ್ಟಣದ ಗುಮ್ಮನ ಹಳ್ಳಿಯ ದಲಿತರ ದುರಂತ ಸ್ಥಿತಿಯನ್ನು ನೆನಪಿಸುತ್ತದೆ

“ದೊಡ್ಡಗೌಡರ ಬಾಗಿಲೀಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯ
ಕಂಬ ಅವರ ಹಟ್ಟಿಗೆ”[೩೬]

ಸಿದ್ದಲಿಂಗಯ್ಯನವರ ಪ್ರತಿಯೊಂದು ಕವನಗಳು, ದಲಿತ ಬದುಕಿನ ಆತ್ಮಕಥನಗಳೇ ಆಗಿವೆ. ಪ್ರತಿಭಟನೆ, ಸಿಟ್ಟು, ಅಪಮಾನ, ಜಾತೀಯತೆ, ಬಡತನ, ಹಸಿವು, ಅಸ್ಪೃಶ್ಯತೆಯ ನೋವು ಹೀಗೆ ಹಲವಾರು ಶೋಷಣೆ ವಿವಿಧ ಮುಖಗಳನ್ನು ತಮ್ಮ ಕವನಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಅಂತೆಯೇ ಶೋಷಕ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯನ್ನು ತಿಳಿಸುವಂತಹ ಕವಿತೆಯನ್ನು ಸೃಜಿಸಿದ್ದಾರೆ.

“ಗುಡಿಸಲುಗಳು ಗುಡುಗುತಿವೆ ಬಂಗಲೆಗಳು ನಡುಗುತಿವೆ
ಎಲ್ಲೆಲ್ಲಿಯು ಮೊಳಗುತ್ತಿದೆ ನವಕ್ರಾಂತಿಯ ಗಾನ
ಮತಗಳು ಹತವಾಗುತಿವೆ ಜನಪಥಗಳು ಮೂಡುತಿವೆ
ಅಸಮಾನತೆ ಆಗುತಿದೆ ಕ್ರಾಂತಿಗೆ ಸೋಪಾನ
ರೈಲು ನಿಲುವ ತಾಣದಲ್ಲಿ ಬಾರ ಹೊತ್ತರವೆಯಲಿ

ತೊಟ್ಟಿಕ್ಕಿದ ಬೆವರ ಹನಿ ಬೆಂಕಿಯಾಗಿ ಸಿಡಿದು
ಬಡಜನಗಳ ಕಣ್ದೆರಸಿ ಶೋಷಕರನ್ನು ಕಂಗೆಡೆಸಿ
ಕೆಂಗಡಿಗಳ ಕಾರುತಿದೆ ಘೋರಾರ್ಭಟವಾಗಿ"[೩೭]

ಇದು ಶತಮಾನಗಳಿಂದ ಮೇಲ್ವರ್ಗದವರ ದಬ್ಬಾಳಿಕೆಯನ್ನು ಮೂಕವಿಸ್ಮಿತರಾಗಿ ಅನುಭವಿಸುತ್ತಿದ್ದ ಶೋಷಿತ ಸಮುದಾಯ ಮೊದಲ ಬಾರಿಗೆ ಶೋಷಣೆಯ ವಿರುದ್ಧ ಪ್ರತಿಭಟನೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಎಚ್ಚರಗೊಳ್ಳುತ್ತಿರುವುದರ ಸಂಕೇತವಾಗಿದೆ. ಗುಡಿಸಲು ಶೋಷಿತರ, ಬಡತನದ ಸಂಕೇತವಾದರೆ, ಬಂಗಲೆ ಶೋಷಿತರ ದಬ್ಬಾಳಿಕೆಯ ಸಂಕೇತವಾಗಿ ಕಂಡುಬರುತ್ತದೆ.

ಡಾ.ಅರವಿಂದ ಮಾಲಗತ್ತಿಯವರು ದಲಿತ ಸಮುದಾಯವು ಮೊದಲು ಅಕ್ಷರವಂತರಾಗಬೇಕು ಎಂದು ಆಶಿಸುತ್ತಾ ಶಾರದೆಯನ್ನು ಆಹ್ವಾನಿಸುತ್ತಾರೆ :

"ನರ್ತಿಸು ನರ್ತಿಸಲೆ ಶಾರದೆ ನರ್ತಿಸು
ನೀ ನನ್ನ ನಾಲಗೆಯ ಮೇಲೆ ನರ್ತಿಸು"[೩೮]

ಮ.ನ.ಜವರಯ್ಯನವರು ೬ ಕವನಸಂಕಲನಗಳನ್ನು ಬರೆದಿದ್ದಾರೆ. ಕೇಳು ಜಗಮಾದಿಗ ಹೊಲೆಯ, ಅತ್ತೆ ಸೊಸೆ ಆತ್ಮಕಥೆ, ಗುಲಾಮಿ, ಅಪ್ಪ ಅವ್ವ ನಾನು, ವಿದ್ರೋಹ ಎಂಬ ಕವನ ಸಂಕಲನಗಳನ್ನು ರಚಿಸಿ ಹೊರತಂದಿದ್ದಾರೆ. ೧೯೭೦ರ ಸಂದರ್ಭದಲ್ಲಿ ದಲಿತ ಚಳುವಳಿಯು ಸ್ವರೂಪ ಪಡೆದುಕೊಂಡ ತರುವಾಯ ದಲಿತ ಚಳುವಳಿಯ ಆಶಯವನ್ನು ಹೊಂದಿರುವಂತಹ ಹಲವಾರು ಕವಿತೆಗಳನ್ನು ರಚಿಸಿದ್ದಾರೆ.

"ಧರ್ಮ ಜಾತಿ ಬೆಂಕಿ ಸಾವು
ಕರ್ಮ ಕತೆಯ ಹೇಳುತ್ತಿವೆ.
ದಲಿತ ಜ್ವಾಲೆ ಸಿಡಿಯುತ್ತವೆ"[೩೯]

ಇದು ದಲಿತ ಚಳುವಳಿಯ ಅನೇಕ ಅಂಶಗಳನ್ನು ಈ ಕವನ ಸಂಕಲನವು ದಾಖಲಿಸಿಕೊಂಡಿದೆ. ಕವಿತೆಗಳು ದಲಿತರ ಪರ ಧೋರಣೆಗಳಾಗಿ ಅಭಿವ್ಯಕ್ತಗೊಂಡಿವೆ. ಸಾಮಾಜಿಕ ಬದಲಾವಣೆಯ ಪ್ರತೀಕವಾಗಿದೆ.

"ಕುಲಕಾಂಡವ ಕಲಾಪದಗ್ನಿಭೈರವಕಾಲ
ಹದೆಗೆಟ್ಟ ಬದುಕಿನ ಅತ್ತೆ ಕಾಲ
ಆತ್ಮ ಸೋಸಲು ಸೊಸೆಗಿದು ಸೂಕ್ತ ಕಾಲ

ಕಮ್ಮಾರ ಕಾಯದ ಚಿತ್ತ ಮುಗಿಲಲ್ಲಿ

ಇನ್ನಾದರೂ ಮೂಡಬೇಕಿದೆ

ಅ ಕಳಂಕ ತಾರಾ ಮಂಡಲದ ಬೆಳಕು”[೪೦]

ಹೀಗೆ ಮನಜ ಅವರು ದಲಿತ ಸಂವೇದನೆಯ ಮೂಲಕ ತಣ್ಣನೆಯ ಹೋರಾಟದ ಕಿಡಿಯನ್ನು ಹಚ್ಚಿ ಸಾಮಾಜಿಕ ಬದಲಾವಣೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸುತ್ತಾರೆ.

ವಿ.ಮುನಿವೆಂಕಟಪ್ಪನವರು ದಲಿತ ಚಳುವಳಿಯ ಚಳುವಳಿಗಾರರಲ್ಲಿ ಒಬ್ಬರಾಗಿದ್ದರು. ಇವರು ಸ್ವಾಭಿಮಾನದ ಬೀಡಿಗೆ, ಕಾಡುಕಣಿವೆಯ ಹಕ್ಕಿ, ಬುದ್ಧ ಮತ್ತು ಅಂಗುಲಿಮಾಲ ಮೊದಲಾದ ಕವನಸಂಕಲನಗಳನ್ನು ಬರೆದಿದ್ದಾರೆ, ಈ ಕವನ ಸಂಕಲನಗಳು ದಲಿತ ಚಳುವಳಿಯ ಸಂದರ್ಭದಲ್ಲಿ ವಿವಿಧ ಬದಲಾವಣೆಗೆ ಸಾಕ್ಷಿಯಾಗಿವೆ. ಎಪ್ಪತ್ತರ ದಶಕ ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ತುಂಬಾ ಮಹತ್ವದ ಕಾಲಘಟ್ಟ. ಇಂತಹ ಸಂದರ್ಭದಲ್ಲಿ ದಲಿತರ ಅಸಹಾಯಕ ಸ್ಥಿತಿ, ಧರ್ಮದ ಮೂಲಕ ಅನ್ಯಾಯಗಳ ಕಾರಣ ಜಾತ್ಯಾತೀತ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗದೆ ದಲಿತರ ಸ್ಥಿತಿ ಸುಧಾರಿಸದು. ಈ ಹಿನ್ನೆಲೆ ದಲಿತ ಸಂವೇದನೆಯ ನೆಲೆಯಲ್ಲಿ ಇವರ ಕವನ ಸಂಕಲನಗಳು ಪ್ರಧಾನವಾಗಿ ಕಂಡುಬರುತ್ತವೆ. ಬಡತನ, ಜಾತೀಯತೆ, ಅಸ್ಪೃಶ್ಯತೆ, ಧರ್ಮ, ಕೇರಿ, ಹಸಿವು, ಅಪಮಾನ, ಜೀತಗಾರಿಕೆ, ನೋವು ಸಂಕಟ, ಸಂಘರ್ಷ ಹೋರಾಟದ ಚಿಂತನೆಗಳನ್ನು ಇವರ ಕವಿತೆಗಳಲ್ಲಿ ಕಾಣುತ್ತೇವೆ. ಇವರ 'ಕೊರಗು' ಕವಿತೆ ಸಾಮಾಜಿಕ ವ್ಯವಸ್ಥೆಯಲ್ಲಿನ ಜಾತಿತಾರತಮ್ಯಗಳನ್ನು ಕುರಿತು ಮಾತನಾಡುತ್ತದೆ.

“ಅಸ್ಪೃಶ್ಯ ಅಣ್ಣ ತಮ್ಮಂದಿರು

ಅಕ್ಕ ತಂಗಿಯರು

ನಾವು ಮನುಷ್ಯರಾಗಲಾರವೇ

ಎಂಬುದೇ ಕೊರಗು”[೪೧]

ಮನುಷ್ಯ ಮನುಷ್ಯರನ್ನು ಮೊದಲು ಪ್ರೀತಿಸಬೇಕು. ನಾವೆಲ್ಲರು ಮನುಷ್ಯ ಜಾತಿ. ಜಾತಿ ವ್ಯವಸ್ಥೆಯಿಂದ ದೂರವಿದ್ದು ಅಣ್ಣ ತಮ್ಮಂದಿರಂತೆ, ಒಂದೇ ತಾಯಿಯ ಮಕ್ಕಳಂತೆ ಬಾಳ್ವೆಯನ್ನು ನಡೆಸಬೇಕು. ಜೊತೆಗೆ ಮನುಷ್ಯತ್ವದ ಮಾನವೀತೆಯನ್ನು ಮೆರೆಯಬೇಕು ಎಂಬ ಆಶಯವನ್ನು ಇವರ ಕವಿತೆಗಳು ಅಭಿವ್ಯಕ್ತಿಸುತ್ತವೆ.

‘ತಾಯಿ ನೆನಪಿಗೆ’ ಎನ್ನುವ ಕವಿತೆಯಲ್ಲಿ, ದಲಿತರು ಮೊದಲ ತಲೆತಲೆಮಾರಿನಿಂದ ಮಾಡಿಕೊಂಡು ಬಂದಿರುವಂತಹ ಜೀತಗಾರಿಕೆಯಿಂದ ನನ್ನನ್ನು ಬಿಡುಗಡೆಗೊಳಿಸಿ ಅಕ್ಷರ ಕಲಿಸಿದ ತಾಯಿಯನ್ನು ಈ ಕವಿತೆ ಕೃತಜ್ಞತೆಯಿಂದ, ಗೌರವದಿಂದ, ಪ್ರೀತಿಯಿಂದ ಸ್ಮರಿಸುತ್ತದೆ.

“ಉಂಡೋ ಉಪವಾಸವಿದ್ದೋ
ನಮಗೆ ಎದೆ ಹಾಲು ಉಣಿಸಿದೆ
ಎಂತೋ ಏನೋ ಬರಗಾಲ ನಡುವೆಯು
ನಮಗೆ ಜೀತದಟ್ಟಿ ತಪ್ಪಿಸಿದೆ”[೪೨]

ಎನ್ನುವ ಮಾತಿನಲ್ಲಿ ಕೇವಲ ದಲಿತನೊಬ್ಬನಿಗೆ ಬಿಡುಗಡೆಯ ಮಾತುಗಳಲ್ಲ, ಇದು ಇಡೀ ದಲಿತ ಸಮುದಾಯದ ಕರುಳಿನ ಕೂಗಿನ ವ್ಯಥೆಯ ಕಥೆಯಾಗಿದೆ. ದಲಿತ ಸಮುದಾಯದಲ್ಲಿ ಮನೆಯ ಒಡತಿ ಮಹಿಳೆಯಾಗಿರುತ್ತಾಳೆ. ಇವಳು ತನ್ನ ಸಂಸಾರದ ನೌಕೆಯನ್ನು ಹಲವಾರು ಕಷ್ಟಗಳ ನಡುವೆಯು ದಡವನ್ನು ಸೇರಿಸುವ ಮನೋಧರ್ಮವನ್ನು ಹೊಂದಿರುತ್ತಾಳೆ. ಅಂತೆಯೇ ತನ್ನ ಕುಟುಂಬದಲ್ಲಿ ಹಲವಾರು ಅಸಂಪ್ರದಾಯಿಕ ಶೋಷಣೆಯಿಂದ ಬಿಡುಗಡೆಯನ್ನು ಬಯಸುತ್ತಾಳೆ. ಹಾಗಾಗಿ ತನ್ನ ಮಗ ಜೀತಗಾರಿಕೆಯಿಂದ ಬಿಡುಗಡೆ ಹೊಂದಿ ಅಕ್ಷರವಂತನಾಗಬೇಕೆಂದು ಹಂಬಲಿಸುತ್ತಾಳೆ.

‘ಕೆಂಡದ ನಡುವೆ’ಯಲ್ಲಿನ ಕವನಗಳು ಮೇಲ್ವರ್ಗದ ಪುರೋಹಿತ ಶಾಹಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುವುದನ್ನು ಕಾಣಲಿಕ್ಕೆ ಸಾಧ್ಯವಿದೆ.

“ರಾತ್ರಿಯಲ್ಲಿ ನಗ್ನ ಸ್ಪರ್ಶ ಹಗಲೆಲ್ಲ ಅಸ್ಪೃಶ್ಯತೆ
ನಾಯಿಯನ್ನು ನಾರಾಯಣ ಎಂದು ಕರೆದರು
ಮನುಷ್ಯರನ್ನು ಪ್ರಾಣಿಯಂತೆ ಕಾಣುವ
ಹಿಂದು ಧರ್ಮವ ಬಿಟ್ಟರು ದಲಿತರು”[೪೩]

ಹಿಂದೂಧರ್ಮದ ಆಚರಣೆಗಳು, ಸಂಪ್ರದಾಯಗಳು, ಮೂಢನಂಬಿಕೆಗಳು ದಲಿತರನ್ನು ಬಲಿಪಶು ಮಾಡುತ್ತಿದ್ದವು. ಅಲ್ಲದೆ ಪುರೋಹಿತಾಶಾಹಿ ವ್ಯವಸ್ಥೆ ನಮ್ಮ ದಲಿತ ಸಮುದಾಯದ ಮೇಲೆ ದಬ್ಬಾಳಿಕೆ ಮಾಡುತ್ತಿತ್ತು. ಈ ಎಲ್ಲಾ ಹಿನ್ನೆಲೆಯನ್ನು ಮನಗಂಡ ಬಾಬಾಸಾಹೇಬರು ‘ನಾನು ಹಿಂದುವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ’ ಎಂದು ಹೇಳಿ ಸಾಯುವ ಸಂದರ್ಭದಲ್ಲಿ ‘ಸಮಾನತೆಯ ಧರ್ಮವಾದ ‘ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಈ ಹಿನ್ನೆಲೆಯಲ್ಲಿ ಕವಿ ಮುನಿವೆಂಕಟಪ್ಪ ಮೇಲು ವರ್ಗದ ಜನ ದಲಿತರನ್ನು ರಾತ್ರಿಯ

ಸಮಯದಲ್ಲಿ ಸ್ಪರ್ಶಿಸುವಾಗ ಅಸ್ಪೃಶ್ಯತೆಯ ಸೋಂಕು ತಗಲುವುದಿಲ್ಲ ಆದರೆ ಹಗಲಿನ ವೇಳೆಯಲ್ಲಿ ಜಾತೀಯತೆಯ ನಿಲುವು ತಾಳುವುದನ್ನು ವಿರೋಧಿಸಿ ಇಂತಹ ಮನಸ್ಥಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಬೆಂಕಿಯಿಂದ ಸುಡಬೇಕು ಎಂದು ಕಿಡಿಕಾರಿದ್ದಾರೆ.

ಹೀಗೆ ಕನ್ನಡದ ಹಲವಾರು ದಲಿತ ಲೇಖಕರು ಸಾಹಿತ್ಯವನ್ನು ರಚನೆ ಮಾಡಲು ತೊಡಗಿದಾಗ ಮೊದಲಿಗೆ ಕಾವ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಂಡು ದಲಿತರ ಬದುಕಿನ ನೆಲಮೂಲ ಸಂಸ್ಕೃತಿಯ, ಹಾಗೂ ದಲಿತ ಸಂವೇದನೆಯ ಹಿನ್ನೆಲೆಯಲ್ಲಿ ತಮ್ಮ ಬದುಕಿನ ಅನುಭವಗಳನ್ನು ದಾಖಲಿಸಿದ್ದಾರೆ. ಏನೇ ಆದರೂ ಮರಾಠಿ ದಲಿತ ಆತ್ಮಕಥೆಗಳೊಂದಿಗೆ ನಮ್ಮ ಕನ್ನಡದ ದಲಿತ ಆತ್ಮಕಥೆಗಳನ್ನು ತೌಲನಿಕವಾಗಿ ನೋಡಿ, ಕನ್ನಡದ ದಲಿತ ಆತ್ಮಕಥೆಗಳು, ಮರಾಠಿಯ ದಲಿತ ಆತ್ಮಕಥೆಗಳಂತೆ ಮೂಡಿ ಬಂದಿಲ್ಲ ಎಂದು ಹೇಳುವುದು ವಿಮರ್ಶಕರ ಗ್ರಹಿಕೆಯ ಮಿತಿಯಾಗಿದೆ ಎನ್ನುವುದು ನನ್ನ ಅಭಿಪ್ರಾಯ.

ಮಹಾರಾಷ್ಟ್ರದ ದಲಿತರು, ಕರ್ನಾಟಕದ ದಲಿತರು ಮನುಷ್ಯರೇ ಎಂದು ಭಾವಿಸಿದ್ದರು ಸಹ ಇವರು ಅನುಭವಿಸಿದ ತಲ್ಲಣಗಳು ಬೇರೆ ಬೇರೆಯಾದ ಸ್ವರೂಪವನ್ನು ಹೊಂದಿವೆ ಎಂದು ಹೇಳಲಿಕ್ಕೆ ಸಾಧ್ಯವಿದೆ. ಈ ಎಲ್ಲಾ ಚರ್ಚೆಗಳನ್ನು ಗಮನಿಸಿದಾಗ ಕನ್ನಡ ದಲಿತ ಆತ್ಮಕಥೆಗೂ ಮುನ್ನ ಮರಾಠಿ ದಲಿತ ಆತ್ಮಕಥೆಗಳಲ್ಲಿ ಕಾದಂಬರಿ ರೂಪದ ಬರವಣಿಗೆ ಇರುವುದನ್ನು ಕಾಣಬಹುದು. ಮರಾಠಿ ಆತ್ಮಕಥೆಗಳಲ್ಲಿ ಯಾವೊಂದು ಘಟನೆಗಳನ್ನು ಪ್ರತ್ಯೇಕವಾಗಿ ಚರ್ಚೆಮಾಡಿರುವುದಿಲ್ಲ. ಎಲ್ಲಾ ವಿಚಾರಗಳನ್ನು ಕಾದಂಬರಿಯ ರೂಪದಲ್ಲಿ ಚರ್ಚಿಸಿರುವುದು ಕಂಡುಬರುತ್ತದೆ. ಅದರೆ ಮೊಟ್ಟ ಮೊದಲು ಮೊದಲ ತಲೆಮಾರಿನ ದಲಿತ ಕವಿ ಡಿ. ಗೋವಿಂದ ದಾಸ್ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಆತ್ಮಕಥನವನ್ನು ಬರೆಯುವ ಸಂದರ್ಭದಲ್ಲಿ ಕಾದಂಬರಿಯ ಸ್ವರೂಪವನ್ನು ಪಡೆದುಕೊಂಡಿದೆ. ಈ ಆತ್ಮಕಥನದಲ್ಲಿ ಬಾಲ್ಯದ ಭಾಗದಿಂದ ಹಿಡಿದು ಅವರು ಉತ್ತರ ಭಾರತದ ಪ್ರವಾಸದ ಅನುಭವಗಳನ್ನು ದಾಖಲಿಸಿರುವುದು ತಿಳಿದುಬರುತ್ತದೆ. ಅಲ್ಲದೆ ದಲಿತ ಸಂವೇದನೆಯ ಅನುಭವಗಳು ಮಡುಗಟ್ಟಿರುವುದನ್ನು ಗುರುತಿಸಲು ಸಹ ಈ ಆತ್ಮಕಥೆ ತೆರೆದುಕೊಳ್ಳುತ್ತದೆ.

ಡಿ. ಗೋವಿಂದದಾಸ್ ಅವರ ಆತ್ಮಕಥನದ ಸ್ವರೂಪ ಓದುಗರಿಗೆ ದೊರೆಯುವುದು ಪ್ರೊ. ಎಂ.ಎಸ್.ಶೇಖರ್ ಅವರು ಸಂಪಾದಿಸಿರುವ, ಹಂಪಿ ವಿಶ್ವವಿದ್ಯಾನಿಲಯವು ಪ್ರಕಟಿಸಿರುವ, ಡಿ.ಗೋವಿಂದದಾಸ್ ಸಮಗ್ರ ಸಾಹಿತ್ಯದಲ್ಲಿ ಈ ಆತ್ಮಕಥನದ ಭಾಗವು ದೊರೆಯುತ್ತದೆ. ತದನಂತರ ಕನ್ನಡ ದಲಿತ ಸಾಹಿತ್ಯದಲ್ಲಿ ಮೊಟ್ಟಮೊದಲ ದಲಿತ ಆತ್ಮಕಥೆ 'ಗೌರ್ಮೆಂಟ್ ಬ್ರಾಹ್ಮಣದಲ್ಲಿ ೨೨ ಬಿಡಿಬಿಡಿಯಾದ ಗದ್ಯಗಳು ಇರುವುದು ಕಂಡುಬರುತ್ತದೆ. ರಹಮತ್

ತರೀಕೆರೆಯವರು ಗುರುತಿಸುವಂತೆ "ಮಾಲಗತ್ತಿ ಅವರು ಕವಿಯಾಗಿ, ಕಾದಂಬರಿಕಾರರಾಗಿ, ಚರ್ಚೆಗೊಳಗಾಗಿರುವ ಶಕ್ತ ಲೇಖಕರು, ತಮ್ಮ ಕವಿತೆ ಕಾದಂಬರಿಗಳಲ್ಲಿ ಬಳಸಿಕೊಳ್ಳಲಾಗದ ವಿಭಿನ್ನ ಅನುಭವ ಜಗತ್ತನ್ನು ಈ ಆತ್ಮಕಥೆಯ ಬರಹದಲ್ಲಿ ಸಹಜವಾಗಿ, ಪ್ರಕಾರವಾಗಿ ತೆರದು ಇಟ್ಟಿದ್ದಾರೆ. ಹಾಗೆ ನೋಡಿದರೆ ಈ ಕೃತಿ ಒಂದೇ ಸಲಕ್ಕೆ ಬರೆದದ್ದಲ್ಲ. ಆತ್ಮಕಥೆಯ ತುಣುಕುಗಳಂತಿರುವ ಇಲ್ಲಿನ ಬಹುತೇಕ ಲೇಖನಗಳನ್ನು ಕಳೆದ ಹತ್ತು ವರ್ಷಗಳಿಂದ ಲೇಖಕರು ಬಿಡಿಬಿಡಿಯಾಗಿ ಪ್ರಕಟಿಸಿಕೊಂಡೇ ಬಂದಿರುವರು. ಬಿಡಿ ಬರಹಗಳಾಗಿ ಪ್ರಕಟವಾಗಿದ್ದಾಗಲೇ ಇವು ಕನ್ನಡದ ಓದುಗರ ಸಂವೇದನೆಯನ್ನು ಅಲ್ಲಾಡಿಸಲು ಅಣಿಯಾಗಿವೆ. ಕನ್ನಡದೊಳಗೆ ನಡೆಯುತ್ತಿರುವ ಸಂಸ್ಕೃತಿ ಚಿಂತನೆಯಲ್ಲಿ ಅನೇಕ ಚಲನೆಗಳನ್ನು ಮಾಡುವಷ್ಟು 'ಗೌರ್ಮೆಂಟ್ ಬ್ರಾಹ್ಮಣ ಕೃತಿಯು ಸಮರ್ಥವಾಗಿದೆ"[೪೪] ಎಂಬ ಮಾತು ಒಪ್ಪುವಂತದ್ದು, ಏಕೆಂದರೆ ಎಷ್ಟೋ ವಿಮರ್ಶಕರು ಈ ಅಂಶವನ್ನು ಗಮನಿಸದಿರುವುದು ಕಂಡುಬರುತ್ತದೆ. ಬಹುಶಃ ಅರವಿಂದ ಮಾಲಗತ್ತಿಯವರು ಮರಾಠಿ ದಲಿತ ಆತ್ಮಕಥೆಗಳನ್ನು ಓದಿದ್ದರೆ ಕಾದಂಬರಿ ರೂಪದಲ್ಲಿ ಆತ್ಮಕಥೆ ಪ್ರಕಟವಾಗುತ್ತಿತ್ತೋ ಏನೋ ದಲಿತ ಆತ್ಮಕಥೆಗಳನ್ನು ವಿಮರ್ಶಿಸಿದ ದಲಿತರು ಮತ್ತು ದಲಿತೇತರರು, ದಲಿತರು ಅನುಭವಿಸುತ್ತಿದ್ದ ಕಷ್ಟಕೋಟಲೆಗಳನ್ನು ಎತ್ತಿ ತೋರಿಸಿದರೆ ವಿನಃ ಮಾನದಂಡಗಳನ್ನು ವಿಮರ್ಶಕರು ಆಲೋಚಿಸಿ ತೋರಿಸಲಿಲ್ಲ.

ದಲಿತ ಆತ್ಮಕಥೆಗಳು ದಲಿತ ಬದುಕಿನ ಅತ್ಯಂತ ಕಷ್ಟ ಕೋಟಲೆಗಳು ಜಾತೀಯತೆಯ ಸೊಂಕಿನ ಅನುಭವಗಳು, ಬಡತನದ ವಿವಿಧ ಮುಖಗಳನ್ನು ವಿಶಿಷ್ಟ ನೆಲೆಯಲ್ಲಿ ದಾಖಲಿಸಿರುವುದು ಕಂಡು ಬರುತ್ತದೆ. "ಅಸ್ಪೃಶ್ಯತೆಯ ಘೋರ ಅನುಭವ, ಭೀಕರವಾದ ಬಡತನ ಕಹಿ, ಪರಾವಲಂಬನೆಯಿಂದ ಬಂದ ದಾಸ್ಯ, ವ್ಯವಸ್ಥೆಯ ಅಟ್ಟಹಾಸ, ದಲಿತರ ಬದುಕನ್ನು ನುಂಗಿ ನೀರು ಕುಡಿಯುತ್ತಿರುವ ಮೌಢ್ಯ, ಸ್ವಾತಂತ್ರ್ಯ ನಂತರದ ಬಂದ ಶೈಕ್ಷಣಿಕ ಸವಲತ್ತುಗಳಿಂದ ಅನುಕೂಲತೆ, ತಮ್ಮ ಮೇಲಿನ ದೌರ್ಜನ್ಯವನ್ನು ಎದುರಿಸಲು ದಲಿತರು ನಡೆಸಬೇಕಾಗಿ ಬಂದ ಹೋರಾಟ ಇತ್ಯಾದಿ ವಿಷಯಗಳು ಈ ದಲಿತ ಆತ್ಮಕಥೆಗಳ ಒಡಲಲ್ಲಿ ಇಂಬುಗೊಂಡಿವೆ".[೪೫] ಎಂಬ ಮಾತುಗಳು ದಲಿತ ಬದುಕಿನ ಲೋಕವನ್ನು ವಾಸ್ತವವಾಗಿ ಬಿಚ್ಚಿಡುತ್ತವೆ. "ಗಾಂಧೀಜಿಯವರಿಗೆ ಅವರ ಆತ್ಮಕಥೆ ಸತ್ಯಾನ್ವೇಷಣೆಯ ದಾರಿಯಾದರೆ, ಗೌರ್ಮೆಂಟ್ ಬ್ರಾಹ್ಮಣ ಇತರರಿಗೆ ಅಂದರೆ ದಲಿತೇತರರಿಗೆ ಸ್ವ ವಿಮರ್ಶೆಗೆ ಪ್ರೇರಣೆಯಾಗುತ್ತದೆ"[೪೬] ಎನ್ನುವ ಅನೇಕ ಹೋಲಿಕೆಗಳು ಕನ್ನಡ ದಲಿತ ಆತ್ಮಕಥೆಗಳ ಬಾಹುವನ್ನು ಗಟ್ಟಿಗೊಳಿಸುತ್ತವೆ.

"ಆತ್ಮಕಥೆ ಬರೆಯುವುದು ನನ್ನ ಚಿಕ್ಕವಯಸ್ಸಿಗೆ ಬೇಕೆ ಎನ್ನುವ ಪ್ರಶ್ನೆ ನನ್ನನ್ನು ಕಾಡಿದೆ. ಏಕೆಂದರೆ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆ ಬರೆಯುವುದು ಸಾಮಾನ್ಯವಾಗಿ ಕೂದಲು ನರೆತು ತಲೆ ಅಲುಗಾಡುವಾಗ...... ಅನುಭವಗಳನ್ನು ಹೇಳಿಕೊಳ್ಳಲು ಕೂದಲು ನೆರೆಯಬೇಕಾಗಿಲ್ಲ. ಬಾಯೊಳಗಿನ ಹಲ್ಲು ಉದುರಬೇಕಿಲ್ಲ. ಬದುಕಿನ ವಾಸ್ತವದ ಸಂಗತಿಗಳನ್ನು ಯಥಾವತ್ತಾಗಿ ಕೊಡುವುದು ಎಂದರೆ ಬದುಕಿರುವಾಗಲೇ ಜನತೆಯ ಬಾಯಿಗೆ ಎಲೆ–ಅಡಿಕೆಯಾಗುವುದು ಎಂದರ್ಥ"[೪೭] ಎಂದು ಅರವಿಂದ ಮಾಲಗತ್ತಿಯವರು ಚಿಕ್ಕವಯಸ್ಸಿನಲ್ಲೇ ಆತ್ಮಕಥೆಯನ್ನು ಬರೆಯುವುದರ ಅವಶ್ಯಕತೆಯನ್ನು ಸೂಚಿಸಿರುವುದು ತಿಳಿದು ಬರುತ್ತದೆ.

ದಲಿತ ಆತ್ಮಕಥೆ ಒಬ್ಬ ವ್ಯಕ್ತಿಯ ಕಥೆಯಲ್ಲ, ಇಡೀ ತನ್ನ ಸಮುದಾಯದ ಚರಿತ್ರೆಯಾಗಿದೆ ಎಂಬುವುದನ್ನು ಗುರುತಿಸಬಹುದು. "ಜನಾಂಗವಾದ ಇರುವ ಸಮಾಜದಲ್ಲಿ ಒಬ್ಬ ಕಪ್ಪು ವರ್ಣೀಯ, ಜಾತಿ ಸಮಾಜದಲ್ಲಿ ಒಬ್ಬ ಅಸ್ಪೃಶ್ಯ ವ್ಯಕ್ತಿ ತನ್ನ ಆತ್ಮಕಥೆ ಬರೆದಾಗ ಅದು ಒಬ್ಬ ವ್ಯಕ್ತಿಯ ಕಥನವಾಗಿರುವುದಿಲ್ಲ. ಇಡೀ ಒಂದು ಸಮುದಾಯವೇ ಚರಿತ್ರೆಯಲ್ಲಿ ಪಟ್ಟ ಅಪಮಾನದಿಂದ ಬದುಕುಳಿಯಲು ಮಾಡಿದ ಸೆಣಸಾಟದ ಕಥನವಾಗಿರುತ್ತದೆ. ಜತೆಯಲ್ಲೆ ಅದು ಸಾಂಪ್ರದಾಯಿಕ ಸಮಾಜವೊಂದರ ಒಳಗಿನ ಅಮಾನವೀಯತೆ, ಕ್ರೌರ್ಯಗಳ ಕಥನ ಕೂಡ ಆಗಿರುತ್ತದೆ"[೪೮] ಎಂದು ರಹಮತ್ ತರೀಕೆರೆಯವರು ದಲಿತ ಆತ್ಮಕಥೆಗಳ ಸಮಷ್ಠಿ ಪ್ರಜ್ಞೆಯ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಸಾಂಪ್ರದಾಯಿಕ ಆತ್ಮಕಥೆಗಳಿಗಿಂತ ಭಿನ್ನವಾದ ನೆಲೆಯಲ್ಲಿ ದಲಿತ ಆತ್ಮಕಥೆ ತನ್ನದೇ ಆದ ವಿಶಿಷ್ಟ ಹಾಗೂ ಸಮುದಾಯ ಮುಖಿ ಸ್ವರೂಪಗಳನ್ನು ಪಡೆದುಕೊಂಡಿದೆ.

ಮರಾಠಿಯ ದಲಿತ ಆತ್ಮಕಥೆಗಳು ತಳ ಸಮುದಾಯದ ಪ್ರತೀಕಗಳು. ತಮ್ಮದೇ ಆದ ನೆಲೆಯಲ್ಲಿ ತಮ್ಮ ಬದುಕಿನ ಅನುಭವಗಳನ್ನು ಈ ಓದುಗರಿಗೆ ತಟ್ಟುವಂತೆ ನಿರೂಪಿಸಿರುವುದನ್ನು ಗಮನಿಸಬಹುದು. "ಉಚಲ್ಯಾದ ಜನರ ದಾರಿದ್ರ್ಯ, ಸಂಕಟ, ವೇದನೆಗಳನ್ನೆಲ್ಲ ನೋಡುತ್ತ ಬಂದಿದ್ದೇನೆ. ಕ್ರಮೇಣ ನಾನೊಬ್ಬ ಕಾರ್ಯಕರ್ತನಾದೆ. ಈ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬನಿಗೂ ಉಸಿರುಗಟ್ಟಿದಂತಾಗುತ್ತಿತ್ತು. ಅವರ ಈ ವ್ಯಥೆಯನ್ನು ಚರ್ಚೆ, ಭಾಷಣಗಳ ಮುಖಾಂತರ ವ್ಯಕ್ತಪಡಿಸುತ್ತಿದ್ದೆ. ಮನುಷ್ಯರಂತೆ ಬದುಕಲು ನಮಗೂ ಹಕ್ಕಿದೆ, ಕಿಸೆಗಳ್ಳತನದ ವ್ಯವಸಾಯ ಬಿಟ್ಟು, ಸ್ವಂತ ಶಕ್ತಿಯ ಮೇಲೆ ಬದುಕಬೇಕು, ಶಿಕ್ಷಣ ಪಡೆಯಬೇಕು, ಅನ್ಯಾಯದ ವಿರುದ್ಧ ಸಂಘಟಿತರಾಗಬೇಕೆಂದು ನಮ್ಮ ಜನರಿಗೆ ತಿಳುವಳಿಕೆ ನೀಡುತ್ತಿರುವ ಸಂದರ್ಭದಲ್ಲೇ ಸವರ್ಣೀಯರಿಗೆ, ಮಧ್ಯಮ ವರ್ಗದವರಿಗೆ, ಬುದ್ಧಿಜೀವಿಗಳಿಗೆ, ಪಟ್ಟಭದ್ರರಿಗೆ ನಮ್ಮ ಸಮಾಜದ ನೋವಿನ ಕಥೆ ಗೊತ್ತಿಲ್ಲವೆಂಬ ಅರಿವು ನನಗಾಯಿತು. ಹೀಗಾಗಿ ಈ ಎಲ್ಲ ನೋವಿನ ಕಥೆಯನ್ನು ಜನರೆದುರಿಗೆ

ತೋಡಿಕೊಳ್ಳಬೇಕೆಂಬ ಪ್ರಯತ್ನವೇ ಬರವಣಿಗೆಯ ಉದ್ದೇಶ. ಪಟ್ಟಭದ್ರರೂ ತಮ್ಮ ಪೂರ್ವಗ್ರಹ ತೊರೆದು ನಮ್ಮ ಬಗ್ಗೆ ಮತ್ತೊಮ್ಮೆ ಯೋಚಿಸುವಂತಾಗಲಿ; ಜೊತೆಗೆ ಜಾತಿ ವ್ಯವಸ್ಥೆಯ ಬಗ್ಗೆ ಹೊಸ ಅರಿವು ಮೂಡಿಸಿಕೊಂಡವರು, ಈ ಸಮಾಜದ ಬಗ್ಗೆ ತಮ್ಮ ಸ್ಪಷ್ಟ ನಿಲುವು ವ್ಯಕ್ತಪಡಿಸುವಂತಾಗಲಿ ಎಂಬುದೇ ಈ ವೇದನೆಯ ಹಿಂದಿನ ಉದ್ದೇಶವೂ ಆಗಿವೆ”[೪೯] ಎಂಬ ಈ ಮರಾಠಿ ದಲಿತ ಲೇಖಕನ ಸಂವೇದನೆಯು ಕನ್ನಡ ದಲಿತ ಲೇಖಕನ ಹಾಗೂ ಕನ್ನಡದ ದಲಿತ ಆತ್ಮಕಥೆಗಾರ ಬದುಕಿನ ಸಮಾಜದ ಚಿತ್ರಣವನ್ನು ತೆರೆದಿಡುತ್ತವೆ. ಅಲ್ಲದೆ ಪ್ರತಿಯೊಂದು ಆತ್ಮಕಥೆಗಳು ಹೆಚ್ಚು ಹೆಚ್ಚು ಓದಿಸಿಕೊಂಡು ಓದುಗರ ಅನುಭವದೊಂದಿಗೆ ಸಂವಹನಗೊಳ್ಳುತ್ತವೆ. ಇದಲ್ಲದೆ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಪುನರ್ ಮೌಲ್ಯಮಾಪನ ಮಾಡುವ ಕಾರ್ಯವನ್ನು ನಮ್ಮ ಕನ್ನಡದ ದಲಿತ ಆತ್ಮಕಥೆಗಳು ಮಾಡುತ್ತವೆ.

ಡಿ.ಗೋವಿಂದದಾಸ್ ಅವರ 'ಆತ್ಮಕಥನ', ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ', ಸಿದ್ಧಲಿಂಗಯ್ಯನವರ 'ಊರುಕೇರಿ ಭಾಗ ೧, ಭಾಗ ೨', ತುಂಬಾಡಿ ರಾಮಯ್ಯನವರ 'ಮಣೆಗಾರ' ಮತ್ತು 'ಮುತ್ತಿನ ಜೋಳ', ಕೆ. ಗೋವಿಂದರಾಜ್ ಅವರ 'ಮನವಿಲ್ಲದವರ ಮಧ್ಯೆ', ಲಕ್ಷ್ಮಣ್ ಅವರ 'ಸಂಭೋಳಿ', ಸಿ.ಜಿ.ಕೆಯವರ 'ಕತ್ತಾಲೆ ಬೆಳದಿಂಗಳೊಳಗೆ' ಹನುಮಂತರಾವ್ ಬಿ. ದೊಡ್ಡಮನಿಯವರ 'ಪಂಚಮ', ಮುಳ್ಳೂರು ನಾಗರಾಜು ಅವರ 'ಮಾಮರದ ಮೇಲೊಂದು ಕೋಗಿಲೆ', ದು. ಸರಸ್ವತಿಯವರ 'ಈಗೇನ್ ಮಾಡೀರಿ', ಎಂ.ಎಸ್. ಪರಶಿವಮೂರ್ತಿಯವರ 'ಗೆರೆದಾಟಿದ ಮೇಲೆ', ಡಾ.ಎಲ್ಲಪ್ಪ ಕೆ.ಕೆ.ಪುರ ಅವರ 'ಕೇರಿಯಿಂದ ತೇರಿಗೆ', ಡಾ. ಶಿರಗಾನಹಳ್ಳಿ ಶಾಂತನಾಯ್ಕ ಅವರ 'ಲಮಾಣಿ', ಡಾ. ಜೆ. ಸಂಜೀವರಾಯ ಅವರ 'ಹೊರಬೀಡು', ಎ.ಎಂ. ಮದರಿ ಅವರ 'ಗೊಂದಲಿಗ್ಯಾ' ಇವುಗಳೊಟ್ಟಿಗೆ ತಲಪರಿಗೆಯಲ್ಲಿ ಕಂಡುಬರುವ ಬಿ.ಡಿ. ನಾರಾಯಣಾದಾಸ್ ಅವರ 'ಅಪ್ಪನ ಸಾಲ ತೀರಿಸಿದೆ', ಎನ್.ಕೆ. ಹನುಮಂತಯ್ಯನವರ 'ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು', ನೇತ್ರ ಅವರ 'ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ', ಇವುಗಳಲ್ಲದೆ 'ಗರಿ ಗೆದರಿದ ನವಿಲು'ವಿನಲ್ಲಿ ಕಂಡುಬರುವ ಜನಪದರ ಆತ್ಮಕಥೆಗಳು ಮತ್ತು ದಲಿತ ಲೋಕದ ನೋವು ನಲಿವುಗಳು ಈ ಬಿಡಿಬಿಡಿ ಆತ್ಮಕಥೆಗಳನ್ನು ಕೃತಿಯಲ್ಲಿ ಗಮನಿಸಬಹುದಾಗಿದೆ.

ಒಟ್ಟಾರೆಯಾಗಿ ದಲಿತರ ಸ್ಥಿತಿಗತಿಗಳು ಮಹಾರಾಷ್ಟ್ರದಲ್ಲಾಗಲಿ, ಕರ್ನಾಟಕವಾಗಲೀ ಎಲ್ಲಾ ಒಂದೇ. ಆದರೆ ಸಾಹಿತ್ಯಿಕ ಅನುಭವ, ಅಭಿವ್ಯಕ್ತಿಗಳಲ್ಲಿ ವ್ಯತ್ಯಾಸಗಳಿರುವುದಷ್ಟೆ. ಭಾರತೀಯ ಜಾತಿ ವ್ಯವಸ್ಥೆಯ ಆಧಾರದ ಮೇಲೆ ಮಾನವರನ್ನು ಜಾತಿಗಳ ಗೋಡೆಗಳ ನಡುವೆ ಸಿಲುಕಿಸಿ

ಅಮಾನವೀಯ ವಾತಾವರಣವನ್ನು ನಿರ್ಮಾಣಗೊಂಡಿದೆ. “ಸಾಮಾಜಿಕ ಮತ್ತು ಬೌದ್ಧಿಕ ಮುನ್ನಡೆಗೆ ಸಾಮಾಜಿಕ ಹಕ್ಕಿನ ಬಳಕೆ ಅತ್ಯಗತ್ಯ. ಒಂದು ಸಮಾಜವು ಸಾವಿರಾರು ಹೋಳುಗಳಾಗಿ ಛಿದ್ರಗೊಂಡು ಜಾತಿಜಾತಿಗಳ ನಡುವೆ ಪರಸ್ಪರ ಹೊಕ್ಕು ಬಳಕೆಯ ಬಾಗಿಲು ಭದ್ರವಾಗಿ ಮುಚ್ಚಲ್ಪಟ್ಟಾಗ ಆ ಸಮಾಜವು ತಾನಾಗಿ ಅವನತಿಯನ್ನು ಆಹ್ವಾನಿಸಿದಂತೆ”[೫೦] ಹೀಗೆ ಅವನತಿಯಲ್ಲಿ ಬಂದು ನಿಂತಿರುವ ಭಾರತೀಯ ಸಮಾಜದಲ್ಲಿ ಬದಲಾವಣೆ ತರಬೇಕಾದ ಅವಶ್ಯಕತೆ ತಲೆದೋರಬೇಕಾದದ್ದು ಸಹಜ. ಡಾ ಅಂಬೇಡ್ಕರ್ ಅವರು ಇಂಥ ಸಾಮಾಜಿಕ ವಿಷಮತೆಯ ಅಸಮಾನ ಬದುಕನ್ನು ಮನಗಂಡಿದ್ದರು. ಈ ಹಿನ್ನೆಲೆಯಲ್ಲಿ ದಲಿತ ವಿದ್ಯಾವಂತ ಲೇಖಕರು ವಿದ್ಯಾವಂತರಾಗಿ ಇಂಥಹ ಸೈದ್ಧಾಂತಿಕ ನೆಲೆಯಲ್ಲಿ ಅರಿತುಕೊಂಡು ರಚಿಸಿದ ಸಾಹಿತ್ಯವೇ ಭಾರತೀಯ ದಲಿತ ಸಾಹಿತ್ಯ. ಈ ಭಾರತೀಯ ದಲಿತ ಸಾಹಿತ್ಯದ ಅವಿಭಾಜ್ಯ ಅಂಗವೇ ಆತ್ಮಕಥನ ಪ್ರಕಾರ.

ಭಾರತೀಯ ಸಾಹಿತ್ಯದೊಂದಿಗೆ ಕನ್ನಡ ಸಾಹಿತ್ಯವು ಅವಿನಾಭಾವ ಸಂಬಂಧವನ್ನು ಹೊಂದಿದೆ. ಭಾರತೀಯ ವಿವಿಧ ಭಾಷೆಗಳು ಕೊಡುಕೊಳ್ಳುವಿಕೆಯಿಂದ ತಮ್ಮ ಸಾಹಿತ್ಯದ ಅಭಿವೃದ್ಧಿಗೆ ಕಾರಣವಾಗಿವೆ. ಈ ಸಾಹಿತ್ಯದ ನಡುವೆ ದಲಿತ ಸಾಹಿತ್ಯವು ಭಾರತೀಯ ಸಾಹಿತ್ಯದಲ್ಲಿ ಸ್ಥಾನ ಪಡೆದುಕೊಂಡು ತನ್ನ ಅಸ್ಮಿತೆಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ದಲಿತ ಸಾಹಿತ್ಯ ಹುಟ್ಟಿಕೊಳ್ಳಲು ಹಲವಾರು ಕಾರಣ ಮತ್ತು ಪ್ರೇರಣೆಗಳು ಕಂಡು ಬರುತ್ತದೆ. ಕನ್ನಡ ದಲಿತ ಸಾಹಿತ್ಯವು ಹುಟ್ಟಲು ಪ್ರಮುಖವಾಗಿ ಪ್ರೇರಣಾಕರ್ತರು ಅಂಬೇಡ್ಕರ್ ಎಂಬುವುದು ಸುಸ್ಪಷ್ಟ. “ಸಾವಿರಾರು ವರುಷಗಳ ಸುದೀರ್ಘ ಇತಿಹಾಸವಿರುವ ಈ ನಾಡಿನ ಸಾಹಿತ್ಯವನ್ನು ಅವಲೋಕಿಸಿದಾಗ ದಲಿತಪರ ಧ್ವನಿಗಳು ಪರಂಪರೆಯುದ್ದಕ್ಕೂ ಅಭಿವ್ಯಕ್ತಗೊಳ್ಳುತ್ತ ಬಂದಿರುವುದನ್ನು ಕಾಣಬಹುದು. ಅಂದಂದಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂದರ್ಭಕ್ಕೆ ತಕ್ಕಂತೆ ಅವು ಪ್ರಕಟಗೊಂಡಿದ್ದು, ಆಧುನಿಕ ದಲಿತ ಪ್ರಜ್ಞೆಯ ಅಭಿವ್ಯಕ್ತಿ ಸ್ವರೂಪಕ್ಕಿಂತ ಭಿನ್ನವಾದವುಗಳಾಗಿವೆ”.[೫೧] ಪಂಪನ ಕಾವ್ಯದಿಂದ ಆಧುನಿಕ ಕನ್ನಡ ಸಾಹಿತ್ಯದ ದಲಿತ ಬಂಡಾಯದವರೆಗೆ ದಲಿತಪರ, ಕ್ರಾಂತಿಕಾರಕ ವಿಚಾರಗಳು ರಚನೆಗೊಂಡು ಸಾಹಿತ್ಯ ಉಗಮವಾಗಿರುವುದನ್ನು ಕಾಣಬಹುದು.

ಕನ್ನಡ ದಲಿತ ಆತ್ಮಕತೆಗಳ ಮತ್ತು ಸಾಹಿತ್ಯ ಬೆಳವಣಿಗೆಯನ್ನು ಅವಲೋಕಿಸಿದಾಗ, ಹನ್ನೆರಡನೆಯ ಶತಮಾನದ ವಚನಕಾರರು ನಮಗೆ ಮುಖ್ಯವಾಗಿ ಕಂಡುಬರುತ್ತಾರೆ. ಸಮ-ಸಮಾಜದ ಪರಿಕಲ್ಪನೆಯನ್ನು ಮೈಗೂಡಿಸಿಕೊಂಡಿದ್ದ ವಚನಕಾರರು ತಮ್ಮ ಜೀವನದ ಅನುಭವಗಳನ್ನು ಸಮಾಜದೊಟ್ಟಿಗೆ ನಿರ್ಭಿಡೆತೆಯಿಂದ ಅಭಿವ್ಯಕ್ತಿಸಿದ್ದಾರೆ. ಈ ವಿಚಾರದಲ್ಲಿ ದಲಿತ ವಚನಕಾರ

ಶರಣ/ಶರಣೆಯರು ಹೊರತಾಗಿಲ್ಲ. ಈ ವಚನಕಾರರು ತಮ್ಮ ಅನುಭವಗಳೊಂದಿಗೆ ಸಮಾಜದ ಕಂದಚಾರಗಳನ್ನು, ಅಸಮಾನತೆಯನ್ನು ಬುಡಮೇಲು ಮಾಡಿ ಮಾನವೀಯ ಅಂತಃಕರಣ ಮೆರೆಯುವ ಮುಂಚೂಣಿಯಾಗಿ ಬಸವಣ್ಣನವರ ಸಾರಥ್ಯದಲ್ಲಿ 'ಸಮಾಜೋ ಧಾರ್ಮಿಕ ಆಂದೋಲನ'ವಾದ ಈ ಚಳುವಳಿಯಲ್ಲಿ ಎಲ್ಲಾ ವರ್ಗದ ಶರಣ ಶರಣೆಯರು ಭಾಗವಹಿಸಿದ್ದರು.

ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಾದಾರ ಧೂಳಯ್ಯ, ಸೂಳೆ ಸಂಕವ್ವ ಮುಂತಾದ ದಲಿತ ವರ್ಗದ ಅನುಭಾವಿಗಳು ಒಂದೇಡೆ ಸೇರಿ ವರ್ಗರಹಿತ, ವರ್ಣರಹಿತವಾದ ಸರ್ವ ಸಮಾನತೆಯ ಸಮಾಜ ರಚನೆ ಮಾಡಲು ಪಣತೊಟ್ಟಿದ್ದರು. ಇವರ ಮೂಲ ಉದ್ದೇಶ ಜಾತೀಯತೆಯನ್ನು ಹೋಗಲಾಡಿಸಿ ಎಲ್ಲ ವರ್ಗದ ಜನರು ಸಮಾನರು ಎಂಬ ಪರಿಕಲ್ಪನೆ ಮೂಡಿಸುವುದು ಮತ್ತು ಸುಖ ಬಾಳ್ವೆಯನ್ನು ನಡೆಸುವುದೇ ಆಗಿತ್ತು. ಆದರೆ ವಚನಕಾರರ ನಂತರ ಮತ್ತೇ ವರ್ಗತಾರತಮ್ಯವು ನಿರಂತರವಾಗಿ ನಡೆದುಕೊಂಡು ಬಂದಿತು. ಈ ಅಸಮಾನತೆಯ ವಿರುದ್ಧ ಹೋರಾಟ ಪ್ರಾರಂಭಗೊಂಡಿದ್ದೆ ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ. ಈ ಅವಧಿ ಸಾಮಾಜಿಕ ರಂಗದಲ್ಲಿ ಸುಧಾರಣೆಯ ಗಾಳಿ ಬೀಸತೊಡಗಿತು. ಜಾತಿಯ ಪಿಡುಗಿನಿಂದ ಹಿಂದುಳಿದ ದಲಿತರು ಮುಂದೆ ಬಂದು ಸಂಘಟಿತ ಪ್ರಯತ್ನಕ್ಕಿಳಿದರು. ಈ ಸಂಘಟಿತ ಪ್ರಯತ್ನವೇ ಚಳುವಳಿಯ ಮೂಲಪ್ರೇರಣೆಯಾಯಿತು. ಚಳುವಳಿ ಮತ್ತು ಸಾಹಿತ್ಯ ಪ್ರೇರಣೆಗೆ "ಪ್ರಪಂಚದ ಕಪ್ಪು ಸಾಹಿತ್ಯವೆಂದು ಪ್ರಸಿದ್ಧವಾದ ಆಫ್ರಿಕ ಮತ್ತು ಅಮೇರಿಕಾದ ಕಪ್ಪು ಜನರು ಅನುಭವಿಸಿದ ವರ್ಣಭೇದ ನೀತಿಯ ಅಸಮಾನತೆಯ ನೋವಿನಿಂದ ಹೊರ ಹೊಮ್ಮಿದ ಎಚ್ಚರದಿಂದ ಬರೆದ ಪ್ರತಿಭಟನಾ ಸಾಹಿತ್ಯ"[೫೨]. ಈ ಪ್ರತಿಭಟನೆಯ ಸಾಹಿತ್ಯವು ಹುಟ್ಟಲು ಹಲವಾರು ಚಳುವಳಿಗಳು ಪ್ರಮುಖ ಪಾತ್ರವಹಿಸಿವೆ.

ಸ್ವಾತಂತ್ರ್ಯ ಪೂರ್ವದಲ್ಲಿನ ಸಾಹಿತ್ಯ ಉಳ್ಳವರ ಹಾಗೂ ಮೇಲು ವರ್ಗದವರ ಹಿಡಿತದಲ್ಲಿ ಇತ್ತು. ದಲಿತರು ಬರೆಯುವ ಸಾಹಿತ್ಯ ಸಾಹಿತ್ಯವೇ ಅಲ್ಲ, ಅವರು ಬರೆಯುವ ಬರವಣಿಗೆ ಸಾಹಿತ್ಯದ ಸ್ವರೂಪ ಪಡೆಯಲು ಸಾಧ್ಯವೇ ಇಲ್ಲವೆಂದು ದೂರವಿಟ್ಟು ಅವರನ್ನು ಶೋಷಣೆ ಮಾಡುತ್ತಿದ್ದರು. ಆದರೆ ಈ ದಲಿತ ಬರಹಗಾರರು ಬರವಣಿಗೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಬಳಸಬೇಕಾದರೆ ಶಿಕ್ಷಣವು ಪ್ರಮುಖವಾಗಿ ಪರಿಣಮಿಸಿತು. ಅಸ್ಪೃಶ್ಯತೆ ಮತ್ತು ದಲಿತರ ನೋವು ಒಂದು ವಿಶಿಷ್ಟವಾದ ಅನುಭವ. ಅದನ್ನು ಅನುಭವಿಸಿದವರಿಗೇ ಮಾತ್ರ ಅದರ ತೀವ್ರತೆಯ ಅನುಭವವಾಗುವುದು. ಇತರರಿಗೆ ಅದರ ನೋವನ್ನು ಕಲ್ಪಿಸಲೂ ಸಾಧ್ಯವಾಗಲಾರದು. ದಲಿತ ಪ್ರಜ್ಞೆ ಎಂಬುವುದು ಮನಸ್ಸಿನ ಆಳ ಮತ್ತು ಅರಿವು. ದಲಿತರು ತಮ್ಮ ನೋವು ಮತ್ತು

ಶೋಷಣೆಗಳನ್ನು ಅನುಭವಿಸುತ್ತಲೇ ಅವುಗಳ ಪರಿಹಾರಗಳನ್ನು ಹೋರಾಟ ಮತ್ತು ಚಳುವಳಿಗಳ ಮೂಲಕ ಪಡೆಯಲು ಶ್ರಮಿಸಿದ್ದರು. ಅಲ್ಲದೆ ಭಾರತೀಯ ಸಾಹಿತ್ಯದಲ್ಲಿ ಮತ್ತಷ್ಟು ದಲಿತ ಚಿಂತನೆಯ ಪ್ರಜ್ಞೆಗಳು ಬೆಳೆಯಲು ಹಲವಾರು ಚಳುವಳಿಗಳು ಪ್ರಮುಖವಾದ ಪಾತ್ರವನ್ನು ವಹಿಸಿವೆ ಎಂಬುದನ್ನು ಸಹ ಮರೆಯಬಾರದು. ಅವುಗಳಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್, ಕಪ್ಪು ಸಾಹಿತ್ಯ, ಕರ್ನಾಟಕದ ದಲಿತ ಚಳುವಳಿ, ದಿಗಂಬರ ಸಾಹಿತ್ಯ. ಈ ಚಳುವಳಿಯ ಪರಿಣಾಮ ಭಾರತೀಯ ದಲಿತ ಸಾಹಿತ್ಯವು ಮತ್ತಷ್ಟು ಪ್ರೇರಣೆ ಮತ್ತು ಪ್ರಭಾವವನ್ನು ಹೊಂದಲು ಕಾರಣವಾಯಿತು ಎಂಬುವುದು ಸಹ ಸ್ಪಷ್ಟ.

೧.೩.೧ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್

ಚಳುವಳಿ ಮತ್ತು ಸಾಹಿತ್ಯ ಒಂದು ನಾಣ್ಯದ ಎರಡು ಮುಖಗಳು. ದಲಿತ ಚಳುವಳಿಗೂ–ಸಾಹಿತ್ಯಕ್ಕೂ ಅವಿನಾಭಾವ ಸಂಬಂಧವಿದೆ. ಸಾಹಿತ್ಯ ನೊಂದವರ ಧ್ವನಿಯಾದಾಗ ಅದು ಚಳುವಳಿಯ ಸ್ವರೂಪ ತಾಳುವುದು ಸಹಜ. ಇಂಥ ಸಾಹಿತ್ಯಿಕ ಚಳುವಳಿಗಳು ಜಗತ್ತಿನ ಚರಿತ್ರೆಯುದ್ದಕ್ಕೂ ಕಾಣಬಹುದಾಗಿದೆ. ಸಮಾಜದೊಳಗಿನ ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳು ಹದಗೆಟ್ಟಾಗ ಅವು ಶೋಷಣೆಯ ಕೆರೆಗಳಾಗಿ ನಿಂತ ನೀರು ಬಗ್ಗಡವಾದಾಗ ಅವುಗಳ ಅಸಮಾಧಾನದಿಂದ ಚಳುವಳಿ ಹರಳುಗಟ್ಟುತ್ತದೆ. ಸಾಹಿತ್ಯ ಸಮಾಜವಾದಿ ನಿಲುವಿಗೆ ಬದ್ಧವಾದಂತೆ ಸಮಾಜಮುಖಿಯಾದಂತೆ ಚಳುವಳಿಯ ಪರಿಣಾಮವೂ ತೀವ್ರಗೊಳ್ಳುತ್ತ ಹೋಗುತ್ತದೆ. ಇಂತಹ ಚಳುವಳಿಗಳಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಒಂದಾಗಿದೆ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರ ಹೋರಾಟದಿಂದ ಈ ಚಳುವಳಿಗೆ ವೈಚಾರಿಕ ಮತ್ತು ಕ್ರಿಯಾತ್ಮಕ ಸ್ವರೂಪ ಪ್ರಾಪ್ತವಾಯಿತು. ಅಂದರೆ ದಲಿತರು, ದಲಿತರಿಗಾಗಿ ಮತ್ತು ದಲಿತರೇ ಪ್ರಾರಂಭಿಸಿದ ಚಳುವಳಿಯಾಗಿದೆ. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಮುಂಬಯಿಯ ಸಿದ್ಧಾರ್ಥ ಕಾಲೇಜಿನಲ್ಲಿ ೦೯.೦೭.೧೯೭೨ರಲ್ಲಿ ಅಸ್ತಿತ್ವಕ್ಕೆ ಬಂದಿತು. “ಅಮೇರಿಕಾದ ಬ್ಲ್ಯಾಕ್ ಪ್ಯಾಂಥರ್ಸ್ ಚಳುವಳಿಯಿಂದ ಪ್ರಭಾವಿತರಾದ ಮಹಾರಾಷ್ಟ್ರದ ದಲಿತರು ತಮ್ಮ ಚಳುವಳಿಗೆ ದಲಿತ ಪ್ಯಾಂಥರ್ಸ್ ಎಂದು ಹೆಸರಿಟ್ಟರು”[೫೩] ಪ್ಯಾಂಥರ್ಸ್ ಎಂದರೆ ಚಿರತೆ. ಚಿರತೆ ಬಹಳ ಬುದ್ಧಿವಂತ ಪ್ರಾಣಿಯಾಗಿದ್ದು ಹುಲಿ ಸಿಂಹಗಳನ್ನು ಹೊಂಚು ಹಾಕಿ ಕೊಲ್ಲುವ ಚಾಕಚಾಕ್ಯತೆ ಹೊಂದಿರುತ್ತದೆ. ತಮ್ಮ ಸಂಘಟನೆ ಮಹಾರಾಷ್ಟ್ರದ ಶಿವಸೇನಾದ ಮಾದರಿಯಲ್ಲಿ ಇರಬೇಕೆಂದು ಸಹ ಅವರು ಪ್ರತಿಪಾದಿಸತೊಡಗಿದರು. ಶಿವಸೇನೆಗೆ ಪ್ರತಿ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಅದರ ಶಾಖೆಗಳು ಇರುವಂತೆ ದಲಿತ ಪ್ಯಾಂಥರ್ಸ್‌ಗೂ ಇದ್ದದ್ದು ಕುತೂಹಲಕಾರಿಯಾದುದು.

ಬಾಬಾಸಾಹೇಬ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣದ ನಂತರ ಕೆಲವು ಕಾಲ ಮಹಾರಾಷ್ಟ್ರದ ದಲಿತ ಚಳುವಳಿ ಮತ್ತು ದಲಿತ ಸಾಹಿತ್ಯಕ್ಕೆ ಹಾಗೂ ದಲಿತ ಸಮುದಾಯಕ್ಕೆ ಹಿನ್ನೆಡೆ ಸಂಭವಿಸಿತು. ಸಂಪೂರ್ಣ ದಲಿತ ಸಮಾಜವೇ ಕುಟುಂಬದ ಹಿರಿಯನನ್ನು ಕಳೆದುಕೊಂಡ ರೀತಿಯಲ್ಲಿ ಸಂಪೂರ್ಣವಾಗಿ ಅನಾಥವಾದಂತೆ ಗೋಚರಿಸುತ್ತಿದ್ದ ಸಂದರ್ಭದಲ್ಲಿ 'ಮಹಾರಾಷ್ಟ್ರದ ಸಿದ್ದಾರ್ಥ ಕಾಲೇಜಿನಲ್ಲಿ 'ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್' ಹುಟ್ಟಿಕೊಂಡಿತು. ಇದರ ಅಧ್ಯಕ್ಷರಾಗಿ ರಾಜಾಡಾಲೆ, ಉಪಾಧ್ಯಕ್ಷರಾಗಿ ವಿಠಲಸಾಠೆ, ಕಾರ್ಯದರ್ಶಿಯಾಗಿ ಜೆ.ವಿ. ಪವಾರ್, ಸಂಘಟನಾ ಕಾರ್ಯದರ್ಶಿಯಾಗಿ ಸಾಂಗರೆ, ಖಜಾಂಚಿಯಾಗಿ ಅವಿನಾಶ ಮಹತೇಕರ ಹಾಗೂ ಮಹಿಳಾ ವಿಭಾಗದಲ್ಲಿ ಶ್ರೀಮತಿ ಜಯಂತ ಜಗದಾಲೆಯವರು ಆಯ್ಕೆಯಾದರು. ತದನಂತರ ಅಂಬೇಡ್ಕರ್‌ರ ಚಿಂತನೆಗಳನ್ನು ಸಾಮಾಜಿಕ ಹೋರಾಟಗಳನ್ನು, ಮುಂದುವರಿಸ ತೊಡಗಿದ್ದರು.

"ಅಂಬೇಡ್ಕರ್‌ರವರಿಗೆ ಮಹಾರಾಷ್ಟ್ರದಲ್ಲಿ ನಡೆಯುತ್ತಿದ್ದ ದಲಿತ ವಿರೋಧಿ ಕೃತ್ಯಗಳು, ಮನುವಾದಿ ತಂತ್ರಗಳು ಹಾಗೂ ಜಾತಿ ಶ್ರೇಣಿಕೃತ ಸಮಾಜದಲ್ಲಿ ದಲಿತರನ್ನು ಪ್ರಾಣಿಗಿಂತಲೂ ಕಡೆಯಾಗಿ ಕಾಣುತ್ತಿದ್ದ ರೀತಿ ಬಾಲ್ಯದಲ್ಲಿ ಅವರಿಗೆ ಸ್ವತಃ ಅನುಭವವಾಗಿತ್ತು. ಅಂಬೇಡ್ಕರ್ ಅವರಿಗೆ ಆದ ಆ ನೋವಿನ ಫಲವೆ ಅವರು ಹಿಂದೂ ಶ್ರೇಣಿಕೃತ ಸಮಾಜದ ವಿರುದ್ಧ ಭಾರತದಾದ್ಯಂತ ಹೋರಾಟ ಮಾಡಲು ಪ್ರೇರೇಪಿಸಿತ್ತು".[೫೪] ಇದರ ಪರಿಣಾಮವಾಗಿ ದಲಿತ ಪ್ಯಾಂಥರ್ಸ್ ಭಾರತದ್ಯಾಂತ ತನ್ನ ಶಾಖೆಗಳನ್ನು ತೆರೆದು ದಲಿತರ ಪರವಾಗಿ ಹೋರಾಟಗಳನ್ನು ಮುಂದುವರಿಸಿತು. ಹಾಗೆಯೇ ದಲಿತರ ಒಗ್ಗಟ್ಟನ್ನು ಮೂಡಿಸಲು ಅವರನ್ನು ರಾಷ್ಟ್ರೀಯ ಪ್ರವಾಹದಲ್ಲಿ ಒಂದುಗೂಡಿಸಲು ಭಾರತದ ಅನೇಕ ರಾಜ್ಯಗಳಲ್ಲಿ ದಲಿತರ ಸ್ಥಿತಿಗತಿ ಅಧ್ಯಯನ ಮಾಡಲು ಅಂಬೇಡ್ಕರ್ ಚಿಂತನೆಗಳು ದೇಶದಾದ್ಯಾಂತ ಚಲಿಸಿದವು.

ಈ ರೀತಿಯಲ್ಲಿ ಸಂಘಟನೆಗೊಂಡ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಹಲವಾರು ಕಾರಣಗಳನ್ನು ಮುಂದಿಟ್ಟುಕೊಂಡು ಮಹಾರಾಷ್ಟ್ರದ್ಯಂತ ಕಾರ್ಯಭಾರವನ್ನು ಪ್ರಾರಂಭಮಾಡಿತು. "ಡಾ.ಬಿ.ಆರ್.ಅಂಬೇಡ್ಕರ್‌ರ ಮೇಲೆ ಅವರ ತತ್ವಜ್ಞಾನದ ಕುರಿತು ಅಸೀಮ ಸ್ವರೂಪದ ಶ್ರದ್ಧೆ, ದಲಿತ ಸಮಾಜದ ಸಮಸ್ಯೆಗಳ ಕುರಿತು ಅಪಾರವಾದ ಪ್ರೀತಿ-ವಿಶ್ವಾಸ, ಸಾಮಾಜಿಕ ವಿಷಮತೆಯ ಕುರಿತು ಸಿಡಿದೆದ್ದ ಸಂತೃಪ್ತ ಮಾನಸಿಕತೆ ಇವು ದಲಿತ ಪ್ಯಾಂಥರ್ಸ್‌ನ ಸಾಮಾನ್ಯ ಲಕ್ಷಣಗಳಾಗಿ ಪರಿಣಮಿಸಿದವು".[೫೫] ಇಂಥ ಭಾವನಾ ಪ್ರಧಾನ ದಲಿತ ತರುಣರಿಂದಾಗಿಯೇ ದಲಿತ ಪ್ಯಾಂಥರ್ಸ್ ಅತಿ ಕಡಿಮೆ ಸಮಯದಲ್ಲಿ ಮಹಾರಾಷ್ಟ್ರದ ತುಂಬೆಲ್ಲಾ ಜ್ವಲಿಸುವ

ಅಗ್ನಿಶಿಲೆಯಂತೆ ಸಿಡಿದೆದ್ದಿತು. ಇದಲ್ಲದೆ ರಾಷ್ಟ್ರದ ರಾಜಧಾನಿಯಾದ ದೆಹಲಿ, ಮಧ್ಯಪ್ರದೇಶ, ಕರ್ನಾಟಕದ ನಿಪ್ಪಾಣಿ, ಬೆಳಗಾಂವ್, ಹೈದ್ರಾಬಾದ್ ಮುಂತಾದ ಸ್ಥಳಗಳಲ್ಲಿ ಶಾಖೆಗಳು ತೆರೆಯಲ್ಪಟ್ಟವು.

ಈ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಹಲವಾರು ಧ್ಯೇಯೋದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಉದಯವಾಯಿತು.

೧. ಡಾ. ಅಂಬೇಡ್ಕರ್ ನಿಧನದ ನಂತರದ ಕಾಲಾವಧಿಯಲ್ಲಿ ಒಂದು ಕಡೆ ದಲಿತರ ಮೇಲೆ ಅನ್ಯಾಯ-ಅತ್ಯಾಚಾರಗಳು ನಡೆಯುತ್ತಿದ್ದರೆ, ಇನ್ನೊಂದೆಡೆ ಇವೆಲ್ಲವುಗಳನ್ನು ಸಮರ್ಥವಾಗಿ ಎದುರಿಸಿ ದಲಿತರ ಹಿತರಕ್ಷಣೆ ಮಾಡುವ ಪ್ರಬಲ ಸಂಘಟನೆಯೇ ಮಹಾರಾಷ್ಟ್ರದಲ್ಲಿ ಇರಲಿಲ್ಲವಾದ ಕಾರಣವಾಗಿ ಈ ಸಂಘಟನೆ ಉದಯವಾಯಿತು.
೨. ಆಧುನಿಕ ಶಿಕ್ಷಣ, ವಿಜ್ಞಾನ, ಕಾಯಿದೆ, ತಂತ್ರಜ್ಞಾನ, ಅಂಬೇಡ್ಕರ್ ವಿಚಾರಧಾರೆಯಿಂದಾಗಿ ಅಂಬೇಡ್ಕರ್‌ರ ದಲಿತ ಚಳುವಳಿಯಿಂದಾಗಿ ಯುವ ದಲಿತರ ಮನದಲ್ಲಿ ಆತ್ಮಸನ್ಮಾನದ ಭಾವನೆ ಪ್ರಬಲವಾಗಿತ್ತು. ಆದರೆ ಯುವ ದಲಿತರಿಗೆ ಭವಿಷ್ಯದ ಬೆಳಕನ್ನು ತೋರುವ ಸಂಘಟನೆಯಾಗಿ ದಲಿತ ಪ್ಯಾಂಥರ್ಸ್ ಉದಯವಾಯಿತು.
೩. ಮಹಾರಾಷ್ಟ್ರದಲ್ಲಿ ಸವರ್ಣೀಯರನ್ನು ಸಮರ್ಥವಾಗಿ ಎದುರಿಸಿ ಅಸ್ಪೃಶ್ಯತೆಯಂತಹ ಪ್ರಬಲವಾದ ಪ್ರಶ್ನೆಯನ್ನು ಸಂಘರ್ಷ ಸ್ವರೂಪದಲ್ಲಿ ಎದುರಿಸಬಹುದಾದ ಸಂಘಟನೆಯ ಚಳುವಳಿಯ ಕೊರತೆ ದಿನೇ ದಿನೇ ಎದ್ದು ಕಾಣುತ್ತಿತ್ತು. ಆ ಕೊರತೆಯನ್ನು ದಲಿತ ಪ್ಯಾಂಥರ್ಸ್ ಸಮರ್ಥವಾಗಿ ತುಂಬಿತು.
೪. ಜಾತಿ ಸಂಸ್ಥೆಗಳು ವರ್ಣ ವ್ಯವಸ್ಥೆ ಅಂಬೇಡ್ಕರ್ ನಿಧನದ ನಂತರ ಪ್ರಬಲವಾಗತೊಡಗಿದವು. ಅಂಬೇಡ್ಕರ್ 'ಮುಯ್ಯಿಗೆ-ಮುಯ್ಯಿ' ಎಂದು ಪ್ರಖರವಾಗಿ ದಲಿತರ ಸಲುವಾಗಿ ಹೋರಾಡುತ್ತಿದ್ದರು. ಇದನ್ನು ಉಳಿಸಿ-ಬೆಳಸಿ ಅಭಿವೃದ್ಧಿಗೊಳಿಸುವ ಚುರುಕಾದ ಸಂಘಟನೆಯ ಅವಶ್ಯಕತೆ ಮಹಾರಾಷ್ಟ್ರದ ತುಂಬೆಲ್ಲ ಕಾಣಿಸಿಕೊಳ್ಳಲಾರಂಭಿಸಿತ್ತು. ಇದು ದಲಿತ ಪ್ಯಾಂಥರ್ಸ್‌ನ ಚಳುವಳಿಯು ಆಗಿತು.
೫. ಅಂಬೇಡ್ಕರ್‌ರ ಪ್ರೇರಣೆಯಿಂದ ಸ್ಥಾಪಿಸಿದ ಶಾಲಾ-ಕಾಲೇಜುಗಳಿಂದ ಶಿಕ್ಷಣ ಪಡೆದ ದಲಿತ ವಿದ್ಯಾರ್ಥಿಗಳು ಸಾಮಾಜಿಕ ಕಾಳಜಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಚಳುವಳಿಯನ್ನು ನಡೆಸುತ್ತಿದ್ದರು. ಇವರಿಗೆ ಮತ್ತಷ್ಟು ಚೈತನ್ಯವನ್ನು ತುಂಬಿ ಸಾಮಾಜಿಕ ಪಿಡುಗುಗಳ ಬಗ್ಗೆ ಹೋರಾಟ ಮಾಡಲು ಪ್ಯಾಂಥರ್ಸ್ ಕಾರಣೀಭೂತವಾಯಿತು.

೬. ಅಂಬೇಡ್ಕರ್‌ರ ನಿಧನದ ತರುವಾಯ ರಾಷ್ಟ್ರದಲ್ಲಿ ಉಂಟಾದ ಶೂನ್ಯತೆಯಲ್ಲಿ ದಲಿತರನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಿಕ ನೆಲೆಯಲ್ಲಿ ಪುನರುಜ್ಜೀವನಗೊಳಿಸುವುದು ಅತ್ಯಾವಶ್ಯಕವಾಗಿತ್ತು. ಈ ಕೊರತೆಯನ್ನು ದಲಿತ ಪ್ಯಾಂಥರ್ಸ್ ತುಂಬಲು ಪ್ರಯತ್ನಿಸಲಷ್ಟೇ ಅಲ್ಲದೆ ಈ ಕಾರ್ಯದಲ್ಲಿ ಯಶಸ್ವಿಯನ್ನು ಕೆಲ ಕಾಲ ಕಂಡಿತು.

೭. ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್ ಸಂಘಟನೆ ಬರುವ ಮುನ್ನ ಹತ್ತು ಹಲವಾರು ಸಂಘಟನೆಗಳು ಸ್ಥಾಪನೆಗೊಂಡಿದ್ದರೂ ಸಹ ದೇಶದ ಯಾವ ಮೂಲೆಯಲ್ಲಿರುವ ದಲಿತರ ಮೇಲಾಗಲೀ, ಮಕ್ಕಳ ಮೇಲಾಗಲೀ ಅನ್ಯಾಯವಾದಾಗ ಸಮಗ್ರವಾಗಿ ಪ್ರತಿಭಟನೆ ಮಾಡುವ ಸಾಮರ್ಥ್ಯವನ್ನು ಈ ಸಂಘಟನೆಗಳು ಪ್ರದರ್ಶನ ಮಾಡುತ್ತಿರುತ್ತಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ಸ್ಥಾಪನೆಗೊಂಡ ದಲಿತ ಪ್ಯಾಂಥರ್ಸ್ ಈ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯಮಾಡತೊಡಗಿತು. ಇದಲ್ಲದೆ ದಲಿತರ ಮೇಲೆ ನಡೆಯುವ ಹಲ್ಲೆಗಳು ಹತ್ಯಾಚಾರಗಳ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯೆಯನ್ನು ನೀಡಲಾಯಿತು. ಇದಲ್ಲದೆ ನೊಂದ ದಲಿತ ಸಮುದಾಯದವರಿಗೆ ಆರ್ಥಿಕವಾಗಿ ಸಹಾಯ ಹಸ್ತವನ್ನು ಈ ಸಂಘಟನೆಯು ನೀಡುತ್ತಾ ಬಂದಿತು.

ಹೀಗೆ ಮಹಾರಾಷ್ಟ್ರದಾದ್ಯಂತ ದಲಿತ ಪ್ಯಾಂಥರ್ಸ್ ಈ ಸಮಾಜಕ್ಕೆ ಹೊಸ ಭರವಸೆಯನ್ನು ನೀಡತೊಡಗಿತು. ದಲಿತ ಪ್ಯಾಂಥರ್ಸ್ ಸಾಹಿತ್ಯ ಮತ್ತು ಚಳುವಳಿಯನ್ನು ಬೆಳೆಸಲು ಹೆಗಲು ಕೊಟ್ಟು ಮಹಾರಾಷ್ಟ್ರದಲ್ಲಿ ಮುನ್ನಡೆಸಲು ಪ್ರಾರಂಭಿಸಿತು. ಈ ದಲಿತ ಸಾಹಿತ್ಯದ ಪ್ರೇರಣೆಯಿಂದ ದೇಶದ ವಿವಿಧ ಭಾಷೆಗಳಲ್ಲಿ ದಲಿತ ಸಾಹಿತ್ಯ ಹುಟ್ಟಲಿಕ್ಕೆ ಪ್ರೇರಣೆಯಾಯಿತು. ಮಹಾರಾಷ್ಟ್ರದಲ್ಲಿ ದಲಿತ ಸಾಹಿತ್ಯ ಚಳುವಳಿಯೊಟ್ಟಿಗೆ ಬೆಳೆಯಲು ಮೂಲಕಾರಣಕರ್ತರು ನಾಮದೇವ ಢಸಾಳ, ಜಿ.ವಿ.ಪವಾರ, ರಾಜಾಢಾಲೆ, ರಾಮದಾಸ ಸೊರೆಟೆ, ಲತೀಫ್, ಖಾಟಿಕ್ ಅರುಣ ಕಾಂಬಳೆ, ರಾಮದಾಸ ಆಠವಲ್, ಗಂಗಾಧರಗಾಡೆ ಉಮಾಕಾಂತ ರಣಧೀರ, ದಯಾನಂದ ಮಸ್ಕೆ, ಪ್ರೀತಮ್‌ಕುಮಾರ್, ಶೆಂಗಾವಕರ್ ಮುಂತಾದವರು ಪ್ರಮುಖರಾಗಿದ್ದಾರೆ.

ಇಪ್ಪತ್ತನೆಯ ಶತಮಾನವು ಮಹಾರಾಷ್ಟ್ರದ ದಲಿತ ಚಳುವಳಿ ದಲಿತ ಶಬ್ದ ಅನ್ವಯಾರ್ಥದಿಂದ ಹಿಡಿದು, ದಲಿತ ಪ್ರಜ್ಞೆ, ದಲಿತ ಚಳುವಳಿ, ದಲಿತ ಸಿದ್ಧಿಯವರೆಗೆ ದಲಿತೋದ್ಧಾರದ ಮಹಾಶತಕವೆಂದೇ ಪರಿಗಣಿಸಲ್ಪಡುತ್ತದೆ. ಅಂಬೇಡ್ಕರ್‌ರ ನಂತರದ ಕಾಲದಲ್ಲಿ ಅನೇಕ ಕಾರಣಗಳಿಂದ ದಲಿತ ಅಸ್ಮಿತೆಯ ಚಳುವಳಿ ದುರ್ಬಲವೂ ಆಗಿತ್ತು. ಆ ಕಾಲದಲ್ಲಿ ಕೇವಲ

ದಲಿತ ಸಾಹಿತ್ಯವೊಂದೇ ವಿಚಾರಶಕ್ತಿ ನೀಡಿತು ಎಂದರೇ ತಪ್ಪಾಗಲಾರದು. "ಮರಾಠಿ ದಲಿತ ಚಳುವಳಿ ಮತ್ತು ಸಾಹಿತ್ಯ ಒಂದೇ ತಾಯಿಯ ಗರ್ಭದಿಂದ ಜನ್ಮ ತಾಳಿವೆ. ಇವೆರಡು ಒಂದನ್ನು ಬಿಟ್ಟು ಮತ್ತೊಂದು ಇರಲಾರವು ಮತ್ತು ಬದುಕಲಾರವು. ಕಾರಣ ಇವೆರಡು ಒಂದೇ ನಾಣ್ಯದ ಎರಡು ಬೇರೆ ಬೇರೆ ಮುಖಗಳು. ಒಂದು ಇನ್ನೊಂದಕ್ಕೆ ಪೂರಕವಾಗಿದೆ. ಅದ್ದರಿಂದ ಇವೆರಡು ಮಹಾರಾಷ್ಟ್ರದಲ್ಲಿ ಒಂದೇ ಕಾಲಕ್ಕೆ, ಒಂದೇ ಸ್ವರೂಪದಲ್ಲಿ ಸಾಮಾಜಿಕ ಸಾಂಸ್ಕೃತಿಕ ಘಟನೆಗಳಾಗಿ, ಹೊಸ ಸಾಹಿತ್ಯದ ನಿರ್ಮಾಣದ ಘಟನೆಯಾಗಿ ಪರಿಣಮಿಸುತ್ತವೆ. ಇವೆರಡೂ ಆಧುನಿಕ ಮರಾಠಿ ಸಾಹಿತ್ಯಕ್ಕೆ, ಸಮಾಜಕ್ಕೆ ಸಂಸ್ಕೃತಿಗೆ ಅಷ್ಟೇ ಅಲ್ಲ ಇಡೀ ಭಾರತೀಯ ದಲಿತ ಸಾಹಿತ್ಯಕ್ಕೆ, ವಿಚಾರಧಾರೆಗೆ ಉಸಿರು ತುಂಬಿವೆ, ಜೀವ ನೀಡಿವೆ, ಹೊಸ ಆಯಾಮ ಹಾಗೂ ಹೊಸ ಸಂಕಲ್ಪಕ್ಕೆ ಮರುಹುಟ್ಟು ಹಾಕಿವೆ".[೫೬]

ಮಹಾರಾಷ್ಟ್ರದಲ್ಲಿ ದಲಿತ ಚಳುವಳಿಯ ತಾಯಿ ಬೇರಿನಿಂದಲೇ ಜನ್ಮತಾಳಿದ ಈ ದಲಿತ ಸಾಹಿತ್ಯ ವಿವಿಧ ಸ್ತರಗಳಲ್ಲಿ ವಿವಿಧ ಕಾಲದಲ್ಲಿ ವಿವಿಧ ರೀತಿಯಲ್ಲಿ ರೂಪುಗೊಂಡಿದ್ದಷ್ಟೇ ಅಲ್ಲ ಚಳುವಳಿಯ ಮೂಲ ಸ್ವರೂಪವನ್ನು ಸಂಘರ್ಷದ ಪರಂಪರೆಯನ್ನು ಇಂದಿಗೂ ತುಂಬ ಚುರುಕಾಗಿಟ್ಟಿದೆ. ಕೇವಲ ಮಹಾರಾಷ್ಟ್ರದ ಅಸ್ಪೃಶ್ಯರಿಗಷ್ಟೇ ಅಲ್ಲ, ಭಾರತದಲ್ಲಿರುವ ಎಲ್ಲಾ ಅಸ್ಪೃಶ್ಯರಿಗೂ ಮನುಷ್ಯತ್ವದ ಪ್ರತಿಷ್ಠೆಯನ್ನು ಪ್ರಸ್ಥಾಪಿಸಲು ಈ ದಲಿತ ಚಳುವಳಿ ತನ್ನ ಸಾಹಿತ್ಯದ ಮೂಲಕ ಸತತವಾಗಿ ಹೋರಾಟ ಸಂಘರ್ಷ ನಡೆಸಿಕೊಂಡು ಬರುತ್ತಿದೆ. ಡಾ.ಬಿ.ಆರ್.ಅಂಬೇಡ್ಕರ್‌ರ ದಲಿತ ತತ್ತ್ವಜ್ಞಾನವನ್ನು ಸರಿಯಾಗಿ ಅರಗಿಸಿಕೊಂಡ ಈ ದಲಿತ ಸಾಹಿತ್ಯವು ಸಮಾನತೆಯ ಆದರ್ಶದ ಭವ್ಯ ಬೆಳಕಿನಲ್ಲಿ ನವ ಸಮಾಜದ ಪುನರುತ್ಥಾನಕ್ಕಾಗಿ ಅವಶ್ಯವಿರುವಂತೆಯೇ ಈ ಚಳುವಳಿಯನ್ನು ಚುರುಕಾಗಿ ನಡೆಸಿಕೊಂಡು ಹೋಗುತ್ತಿದೆ.

ಮಹಾರಾಷ್ಟ್ರದ ದಲಿತ ಸಾಹಿತ್ಯವು ರಚನೆಗೊಂಡು ಪ್ರಮುಖವಾಗಿ ದಲಿತ ಕಾವ್ಯ, ಕಥೆ, ಕಾದಂಬರಿ, ದಲಿತ ನಾಟಕ, ದಲಿತ ಆತ್ಮಕಥೆ, ಸಂಶೋಧನೆ, ವಿಚಾರ ವಿಮರ್ಶೆ ಮತ್ತು ದಲಿತ ಪ್ರವಾಸ ಕಥನಗಳನ್ನು ಗುರುತಿಸಬಹುದು. ಈ ಸಾಹಿತ್ಯದ ವಿವಿಧ ಪ್ರಕಾರಗಳ ಪರಿಣಾಮ ಕನ್ನಡ ದಲಿತ ಸಾಹಿತ್ಯದ ರಚನೆಗೆ ಮೈಲುಗಲ್ಲೆ ಎಂದೇ ಪರಿಗಣಿಸಬಹುದು. ಇದರಲ್ಲಿ ಮರಾಠಿ ದಲಿತ ಆತ್ಮಕತೆಗಳು ಕನ್ನಡ ದಲಿತ ಆತ್ಮಕತೆಗಳ ಮೇಲೆ ನೇರ ಪರಿಣಾಮವನ್ನು ಬೀರಿವೆ. "ಮರಾಠಿ ದಲಿತ ಚಳುವಳಿಯ ಪ್ರಭಾವಲಯದಲ್ಲಿ ಜನ್ಮ ತಾಳಿದ ಆತ್ಮಕಥೆಗಳಿಗೆ ಪ್ರೇರಣೆಯೇನು ಎಂಬ ಪ್ರಶ್ನೆ ಸಹಜವಾಗಿ ವ್ಯಕ್ತವಾದಂತೆ ಕನ್ನಡ ದಲಿತ ಆತ್ಮಕತೆಗಳಿಗೂ ವ್ಯಕ್ತವಾಗುತ್ತದೆ. ಒಂದೇ ಊರಿನಲ್ಲಿ ಒಂದೇ ಸಮಾಜದಲ್ಲಿ ಬದುಕುತ್ತಿದ್ದರೂ ದಲಿತ ಕತೆಗಾರರು ಆತ್ಮಕಥನಗಾರರು

ಎದುರಿಸಿದ ನೋವು, ಅಪಮಾನ, ದಾಸ್ಯ, ಹಿಂಸೆ, ದಾರಿದ್ರ್ಯ ಮುಂತಾದ ಅನೇಕ ಭಯಂಕರ ಸಮಸ್ಯೆಗಳು ಅವನನ್ನು ಸತತವಾಗಿ ಕಾಡಬಹುದು. ತನ್ನ ಜೀವನದಲ್ಲಿಯ ಇಂಥ ಘಟನೆಗಳಿಂದ ಸಮಾಜಕ್ಕೆ ವಿಶೇಷವಾಗಿ ತಾನು ಬದುಕಿದ ಸಮಾಜಕ್ಕೆ ತನ್ನವರಿಗೆ ವಿವಿಧ ರೀತಿಯಲ್ಲಿ ಉಪಯುಕ್ತವಾಗುವಂತಿದ್ದಲ್ಲಿ ಅಥವಾ ತನ್ನ ಜೀವನದ ಆದರ್ಶ ಇತರರಿಗೆ ಸಮಾಜಕ್ಕೆ ಪ್ರೇರಕವಾಗುವುದರ ಜತೆಗೆ ಹೊಸ ಆದರ್ಶಗಳನ್ನು ಸಮಾಜದಲ್ಲಿ ನಿರ್ಮಿಸುವಂತಿದ್ದಲ್ಲಿ, ಸಾಹಿತಿಯಾದವನು ಈ ಕುರಿತು ಸೃಜನಕ್ರಿಯೆಗೆ ಅಭಿವ್ಯಕ್ತಿ ನೀಡಲು ಪ್ರಯತ್ನಿಸುತ್ತಾನೆ".[೫೭] ಹೀಗೆ ಪ್ರತಿಯೊಬ್ಬ ದಲಿತ ಸಾಹಿತಿಯು ತಾನು ಕಂಡುಂಡ ಅನುಭವಗಳನ್ನು ನಿರ್ಭೀತಿಯಿಂದ ಅಭಿವ್ಯಕ್ತಿಸಲು ತೊಡಗುತ್ತಾನೆ.

ಮರಾಠಿ ದಲಿತ ಆತ್ಮಕತೆಗಳ ಪ್ರಭಾವದಿಂದ ಕರ್ನಾಟಕದ ಕನ್ನಡ ದಲಿತ ಆತ್ಮಕತೆಗಳು ರಚನೆಗೊಂಡವು. ವಿಶೇಷವೆಂದರೆ ಮರಾಠಿ ದಲಿತ ಆತ್ಮಕಥೆಗಳು ಕೇವಲ ದಲಿತರಿಗೆ ಮಾತ್ರ ಸೀಮಿತವಾಗದೆ ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಪ್ರಭಾವ ಬೀರುತ್ತದೆ. ಈ ದಲಿತ ಆತ್ಮಕತೆಗಳು ಮಹಾರಾಷ್ಟ್ರದ ಸಮಗ್ರ ಸಾಹಿತ್ಯ ವಲಯದಲ್ಲಿ ಹೊಸ ಹೊಸ ಅಲೆಗಳನ್ನೆ ಎಬ್ಬಿಸಿವೆ. ಇದರಿಂದಾಗಿ ಮಹಾರಾಷ್ಟ್ರದ ಅಕ್ಕಪಕ್ಕ ರಾಜ್ಯಗಳ ದಲಿತ ಸಾಹಿತ್ಯದ ಮೇಲೂ ಪ್ರಭಾವ ಮತ್ತು ಪ್ರೇರಣೆ ಉಂಟಾಗಿ ಕನ್ನಡ ದಲಿತ ಸಾಹಿತ್ಯದ ಆತ್ಮಕಥೆಯೂ ಬೆಳೆಯಲು ಪ್ರಾರಂಭಸಿತು. ಇಲ್ಲಿ ದಲಿತರು ತಾವು ಮತ್ತು ತಮ್ಮ ಸಮುದಾಯ ಅನುಭವಿಸಿದ ಭಯಂಕರ ದುಃಖವನ್ನು ಅಪಮಾನ-ಅವಮಾನಗಳನ್ನು ಅಸ್ಪೃಶ್ಯತೆಯ ನೋವನ್ನು ಇಲ್ಲಿ ನಮೂದಿಸಿದ್ದಾರೆ. ದಲಿತರ ಆತ್ಮಕತೆಗಳಲ್ಲಿ ಮನವನ್ನು ಮಿಡಿಯುವ, ಮನಕ್ಕೆ ನಡುಕವನ್ನೇ ಹುಟ್ಟಿಸುವ ಒಂದು ಅಜ್ಞಾತ ಸ್ವರೂಪದ ಸಮಗ್ರ ಬದುಕಿನ ಚಿತ್ರಣವೇ ಅನಾವರಣಗೊಂಡಿದೆ.

ಹೀಗೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿಯು ಮಹಾರಾಷ್ಟ್ರದ ಸಿದ್ಧಾರ್ಥ ಕಾಲೇಜಿನಲ್ಲಿ ಜನ್ಮತಾಳಿ ಸಮಾಜಪರ ಚಿಂತನೆಯ ಹಾಗೂ ದಲಿತ ಸಮುದಾಯದವರ ನೋವು ನಲಿವುಗಳಿಗೆ ಸ್ಪಂದಿಸುತ್ತಾ, ದೇಶದಾದ್ಯಂತ ತನ್ನ ಶಾಖೆಗಳನ್ನು ತೆರೆದು ನೊಂದ ಜೀವಗಳಿಗೆ ಮಿಡಿಯುವ ಪ್ರಾಣಮಿತ್ರನಂತೆ ಕೆಲಸ ಮಾಡಿವೆ. ಹೀಗೆ, ಮಹಾರಾಷ್ಟ್ರದಲ್ಲಿ ದಲಿತ ಸಾಹಿತ್ಯವು ಹುಟ್ಟಿ ದಲಿತ ಲೇಖಕರು, ಚಿಂತಕರು, ವಿಮರ್ಶಕರು ಸಂಶೋಧಕರು ಸಾಹಿತ್ಯ ರಚಿಸಿ ಸಮಾಜಮುಖಿ ಕೆಲಸ ಮಾಡಲು ಈ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಕಾರಣೀಭೂತವಾಗಿದೆ.

೧.೩.೨ ಕರ್ನಾಟಕದ ದಲಿತ ಚಳುವಳಿ

ದಲಿತರ ಚರಿತ್ರೆಯೆಂದರೆ ಸಂಘರ್ಷಮಯದ ಬದುಕಿನ ಚರಿತ್ರೆ. ಈ ಸಂಘರ್ಷದ ಹಿನ್ನೆಲೆ ದೀರ್ಘಕಾಲದಿಂದ ಕೈಗೊಂಡ ನಿರಂತರ ಹೋರಾಟವನ್ನು ಆಧರಿಸಿರುವಂಥದ್ದು, ಸಂವಿಧಾನಾತ್ಮಕ ಸಂರಕ್ಷಣೆಯೊಡನೆ ದಲಿತೇತರರ ಮನ್ನಣೆಗೆ ಪಾತ್ರವಾಗುವ ಹಂತ ತಲುಪುವವರೆಗಿನ ಇವರುಗಳ ಪ್ರಯತ್ನಗಳು ಚರಿತ್ರೆಯಲ್ಲಿ ವ್ಯವಸ್ಥಿತವಾಗಿ ದಾಖಲಿಸಲಾಗಿಲ್ಲ. ಆದರೆ ದಲಿತಪರ ಹೋರಾಟಗಳ ಮುಂಚೂಣಿಯಲ್ಲಿರುವ ಪ್ರಜ್ಞಾವಂತ ಅನೇಕರು ದಲಿತ ಮನೋಧರ್ಮದ ಸಂವೇದನೆಗಳನ್ನು ಅವುಗಳ ಸಹಜ ಸ್ಥಿತಿಯಲ್ಲಿ ತೋರಿಸುವ ನಿಟ್ಟಿನಲ್ಲಿ ಸಾಕಷ್ಟು ಯಶಸ್ವಿಯಾಗಿರುವುದು ಸಹಜವಾಗಿದೆ. ಪ್ರಸ್ತುತ ಭಾರತೀಯ ಸಮಾಜದಲ್ಲಿ ದಲಿತರ ಸಮಸ್ಯೆ ಒಂದು ಸಂಕೀರ್ಣ ಸಮಸ್ಯೆಯಾಗಿಯೇ ಉಳಿದುಕೊಂಡಿದ್ದು ಹೊಸ ಸಂಘರ್ಷಗಳನ್ನು ಎದುರಿಸಲು ದಲಿತವರ್ಗದವರು ಸಜ್ಜುಗೊಳ್ಳಬೇಕಾದ ಅನಿವಾರ್ಯತೆ ಇದೆ.

ದಲಿತ ಚಳುವಳಿಯು ಪ್ರಾರಂಭವಾಗಿದ್ದ ಸ್ವಾತಂತ್ರ್ಯದ ಪೂರ್ವದಲ್ಲಿಯೇ ಎಂದು ಗುರುತಿಸಲಾಗಿದೆ. ಅಂದು ದಲಿತರು ಅನುಭವಿಸುತ್ತಿದ್ದ ಎಲ್ಲಾ ಶೋಷಣೆಯನ್ನು ಹತ್ತಿಕ್ಕಲು ಪ್ರತಿಭಟಿಸುವ ನೆಲೆಯಲ್ಲಿ ಹೋರಾಟ ಮಾಡತೊಡಗಲಾಯಿತು. ೧೯೨೦ರ ತರವಾಯ ಆದಿಕರ್ನಾಟಕ ಚಳುವಳಿಗಳು ಕರ್ನಾಟಕದಲ್ಲಿ ನಡೆಯಲು ಪ್ರಾರಂಭಗೊಂಡವು. ಇಂತಹ ಸಂದರ್ಭದಲ್ಲಿ “ಆದಿದ್ರಾವಿಡ ಸಂಘ, ಮಾದಿಗರ ಪ್ರತಿನಿಧಿಯುಳ್ಳ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈ ಸಂಘಟನೆಗಳ ನೇತೃತ್ವವನ್ನು ವಹಿಸಿದ ನಾಯಕರಾದ ಚಿಕ್ಕಹನುಮಂತಯ್ಯ, ಚೆನ್ನಿಗರಾಯ, ಬ್ರಾಹಣೇತರ ತಮಿಳುರಾಗಿದ್ದು ಮುರುಗೇಶ ಪಿಳ್ಳೈ ಸುಮಾರು ಮೂರು ದಶಕಗಳ ಕಾಲ ದಲಿತರ ಪರವಾಗಿ ಹೋರಾಡಿದವರು”.[೫೮]

ಡಾ.ಬಿ.ಆರ್. ಅಂಬೇಡ್ಕರ್ ಪ್ರಭಾವ ಮತ್ತು ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನ ಪ್ರಭಾವದಿಂದ ಕರ್ನಾಟಕದಲ್ಲಿ ದಲಿತ ಚಳುವಳಿಯು ಚಿಗುರೊಡೆಯಲು ಪ್ರಾರಂಭಿಸಿತು. ಕಾರಣ ವರ್ಣಾಶ್ರಮ ಆಧಾರಿತ ಜಾತಿಪದ್ಧತಿಯಿಂದ ಕೂಡಿದ ಭಾರತೀಯ ಸಮಾಜ ವ್ಯವಸ್ಥೆಯಲ್ಲಿನ ಉಚ್ಚ ಮತ್ತು ನೀಚ ಎಂದು ವರ್ಗೀಕರಿಸಿರುವ ಹಿನ್ನೆಲೆಯಲ್ಲಿ ಹಿಂದು ಧರ್ಮವು ದಲಿತರನ್ನು ವಿವಿಧ ನೆಲೆಯಲ್ಲಿ ಶೋಷಣೆ ಮಾಡುತ್ತಿದ್ದ ವಿರುದ್ಧವಾಗಿ ದೇಶಾದ್ಯಂತ ಜಾಗೃತಿ ಉಂಟಾಗತೊಡಗಿತ್ತು.

ಕನ್ನಡ ಸಾಹಿತ್ಯದ ಪುಟಗಳನ್ನು ತಿರುವು ಹಾಕಿದಾಗ ಜಾತೀಯತೆ ಅಸ್ಪೃಶ್ಯತೆಗಳ ವಿರುದ್ಧ ಸಾಹಿತಿಗಳು ಧ್ವನಿ ಎತ್ತಿರುವುದನ್ನು ಗಮನಿಸಬಹುದು. ಕುಲಂ ಕುಲಮಲ್ತು ಛಲಂ ಕುಲಂ ಬಲಂ

ಕುಲಂ.... 'ಮಾನವ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತುಗಳಲ್ಲಾಗಲಿ, ಸರ್ವಜ್ಞನ 'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ' ಎಂಬ ಮಾತುಗಳು ದಲಿತ ಸಮುದಾಯದವರಲ್ಲಿ ಮತ್ತಷ್ಟು ಜಾಗೃತಿಯನ್ನುಂಟು ಮಾಡಿತ್ತು.

ಸಾವಿರಾರು ವರ್ಷಗಳಿಂದ ಬಡತನ ಮತ್ತು ಅಸ್ಪೃಶ್ಯತೆಯ ನೋವನ್ನನ್ನುಭಿಸುತ್ತಿರುವ ದಲಿತ ಸಮುದಾಯವು ೧೯೭೦ರ ತರುವಾಯ ಐತಿಹಾಸಿಕ ದಾಖಲೆಗೆ ಕಾರಣವಾಯಿತು. ಕಾಂಗ್ರೆಸ್ ಆಡಳಿತದಿಂದ ಕರ್ನಾಟಕ ಮತ್ತು ದೇಶದ ಬೇರೆ ಬೇರೆ ಭಾಗಗಳಲ್ಲಿ ಬ್ರಾಹ್ಮಣೇತರ ಭೂಮಾಲೀಕ ಜಾತಿಗಳ ಕೈಯಲ್ಲಿ ಅಧಿಕಾರವಿತ್ತು. ಹೀಗಾಗಿ ಲೋಹಿಯಾವಾದಿಗಳ ಚಳುವಳಿ ಕರ್ನಾಟಕದಲ್ಲಿ ನವ ನಿರ್ಮಾಣ ಕ್ರಾಂತಿಯನ್ನುಂಟು ಮಾಡಿತು. ನಂತರ ಜೆ.ಪಿ. ಚಳುವಳಿಗಳಂತಹ ಕಡೆಗೆ ತಮ್ಮ ನೆಲೆಯನ್ನು ಹುಡುಕುವ ಪ್ರಯತ್ನ ಮಾಡತೊಡಗಿದರು. ಇತ್ತ ಕರ್ನಾಟಕದಲ್ಲಿ ಇನ್ನು ಅಸ್ತಿತ್ವವನ್ನೇ ಕಾಣದ ಕಮ್ಯುನಿಸ್ಟ್ ಚಳುವಳಿ ಮತ್ತು ಸ್ಪಷ್ಟ ಕಾರ್ಯಕರ್ತರ ನಿರ್ದಿಷ್ಟ ಕಾರ್ಯಕ್ರಮವಿಲ್ಲದ ಸೋಷಿಯಲಿಸ್ಟ್ ಚಳುವಳಿ ಎರಡೂ ದಲಿತರನ್ನು ತಮ್ಮ ಜೊತೆ ಸೆಳೆಯಲಿಲ್ಲವಾಗಿ ದಲಿತ ಸಂಘಟನೆಯ ಅಸ್ತಿತ್ವ ಅನಿವಾರ್ಯವಾಗಿ ಪ್ರತ್ಯೇಕ ಸಂಘಟನೆಯಾಗ ಬಯಸಿತು. ದಲಿತ ವಿದ್ಯಾವಂತರೂ ಅಂಬೇಡ್ಕರ್ ಸಂದೇಶದಂತೆ ಸ್ವತಂತ್ರವಾದ ದಲಿತ ಸಂಘಟನೆಯನ್ನು ಕರ್ನಾಟಕದಲ್ಲಿ ಕಟ್ಟಿದರು.

"ದಲಿತ ಬರಹಗಾರರ ಸಂಘಟನೆಯಾಗಿ ಬೆಳೆದ ಚಳುವಳಿ ಬೂಸಾ ಸಾಹಿತ್ಯ ಗಲಾಟೆಯಿಂದ ಪ್ರಜ್ಞೆಯುಳ್ಳ ಜನತೆಯ ಚಳವಳಿಯಾಯಿತು. ಕರ್ನಾಟಕದ ದಲಿತ ಚಳುವಳಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನಿಂದ ಸ್ಫೂರ್ತಿ ಪಡೆದಿದೆ. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ ಇಂಡಿಯಾದ ದಲಿತ ಸಂಘಟನೆಗಳಲ್ಲೆಲ್ಲ ಬಹಳ ಬಲಿಷ್ಠವಾದ ಸಂಘಟನೆಯಾಗಿತ್ತು".[೫೯] ಈ ಮಹಾರಾಷ್ಟ್ರದ ದಲಿತ ಚಳುವಳಿಯ ಪರಿಣಾಮ "ಪ್ರಥಮ ಬಾರಿಗೆ ದಲಿತ ಹಾಗೂ ಶೋಷಿತ ಸಮುದಾಯಗಳ ಜೀವನದ ಪ್ರತಿಯೊಂದು ಸಂವೇದನೆಗಳು ಮರಾಠಿ ಸಾಹಿತ್ಯದಲ್ಲಿ ದಾಖಲಾಗ ತೊಡಗಿದವು".[೬೦] ಇವುಗಳ ಪ್ರಭಾವದಿಂದ ಕನ್ನಡದ ದಲಿತ ಸಾಹಿತ್ಯದ ಹುಟ್ಟಿಗೆ ಕಾರಣವಾಯಿತು. ಸಾಹಿತ್ಯ ಮತ್ತು ಚಳುವಳಿಯಲ್ಲಿ ದಲಿತ ಬರಹಗಾರರು ಚಳುವಳಿಗೆ ಸಜ್ಜಾಗಿ ನಿಂತರು. ಈ ಮೇಲಿನ ಕಾರಣಗಳಿಂದ ಅಂಬೇಡ್ಕರ್ ಕಂಡ ಆಶಯದ ಅಂಶಿಕ ರೂಪವಾಗಿ ಸಾಮಾಜಿಕ ಚಳುವಳಿ ರೂಪಗೊಂಡಿತು. ಅದೇ ಸಮಯದಲ್ಲಿ ಮಾಡಿದ ಪ್ರಗತಿಪರ ಪತ್ರಿಕೆಗಳಾದ ಪಂಚಮ, ದಲಿತ, ಆಂದೋಲನ, ಶೂದ್ರ, ಸಂಕ್ರಮಣ ಮುಂತಾದ ಪತ್ರಿಕೆಗಳು ೭೦ರ ದಶಕದಲ್ಲಿ ದಲಿತರ ಅಭಿಪ್ರಾಯಗಳಿಗೆ ಆಕಾರ ನೀಡಿದವು.

೧೯೭೩ರಲ್ಲಿ ಡಿ. ದೇವರಾಜ ಅರಸು ಅವರ ಸಚಿವ ಸಂಪುಟದ 'A ಗ್ರೇಡ್' ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರು ಕಂದಾಯ ಸಚಿವರು ಹಾಗೂ ಪೌರಾಡಳಿತ ಸಚಿವರಾಗಿದ್ದರು. ಈ ಸಂದರ್ಭದಲ್ಲಿ ದಲಿತರು ತಲೆಯ ಮೇಲೆ ಮಲ ಹೊರುವುದನ್ನು ನಿಲ್ಲಿಸಲು ಕೂಗೆಬ್ಬಿಸಿದರು. ಇದರ ಜೊತೆಗೆ ದೇವರು ಧರ್ಮ ಜಾತಿಯ ವಿರುದ್ಧ ಕರ್ನಾಟಕದ ಯುವ ಜನತೆ ಕೂಗೆಬ್ಬಿಸಿತು. ಇದರ ಪರಿಣಾಮವಾಗಿ ೧೯೭೩ ನವೆಂಬರ್ ೧೮ರಂದು ಮೈಸೂರು ವಿಶ್ವವಿದ್ಯಾನಿಲಯವು ವಿಚಾರ ಸಂಕಿರಣವನ್ನು ಏರ್ಪಡಿಸಿತು. ಇದರಲ್ಲಿ ಮಾತನಾಡಲು ಬಿ.ಬಸವಲಿಂಗಪ್ಪನವರನ್ನು ಆಹ್ವಾನಿಸಿತು. "ಈ ದೇಶದ ಮೂಲಭೂತವಾದಿಗಳನ್ನು ಕುರಿತು ಮಾತನಾಡುತ್ತ ಸಮಾಜದಲ್ಲಿ ಶೋಷಿತ ಸಮುದಾಯಗಳ ಸ್ಥಿತಿ ಏನಾಗಿದೆ? ಸಮಾಜದ ಪ್ರತಿಬಿಂಬಿತವಾಗಿರುವ ಕನ್ನಡ ಸಾಹಿತ್ಯದಲ್ಲಿ ಏನಿದೆ? ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯ ಎಂದು ಟೀಕಿಸಿದರು. ಇದು ಶೋಷಿತರ ದಮನಿತರ ಮಿಡಿತವನ್ನು ಹಿಡಿದು ಹೇಳಿತಾದರೂ ನಂತರದಲ್ಲಿ ಇದು ತನ್ನದೇ ಆದ ರಾಜಕೀಯ ಆಯಾಮವನ್ನು ಪಡೆಯಿತು. 'ಯಾವ ಸಾಹಿತ್ಯ ಜನರ ನೋವು ನಲಿವು, ದುಃಖ-ದುಮ್ಮಾನಗಳನ್ನು ಪ್ರತಿಬಿಂಬಿಸುವುದಿಲ್ಲವೋ ಅಂತಹ ಸಾಹಿತ್ಯವು ನಿಷ್ಪ್ರಯೋಜಕವಾದದ್ದು, ಅದು ಸಾಹಿತ್ಯವೇ ಅಲ್ಲ, ಅದು ರಾಶಿ ಬಿದ್ದ ಬೂಸಾ ಎಂದರು".[೬೧] ಇದಕ್ಕೆ ಪ್ರತಿಕ್ರಿಯ ನೀಡುತ್ತಾ ಬಿ. ಬಸವಲಿಂಗಪ್ಪನವರು ಸೋಮಶೇಖರ ಇಮ್ರಾಪುರ ಹಾಗೂ ಇತರೊಡನೆ ಈ ರೀತಿಯಲ್ಲಿ ನಾನು ಮಾತನಾಡಿದ್ದು ಎಂದು ಹೇಳುತ್ತಾರೆ "ನಾನು ಮೈಸೂರಲ್ಲಿ New Wave (ಹೊಸ ಅಲೆಯ) ಕುರಿತು ಮಾತನಾಡುವ ಸಂದರ್ಭ ಸಂಪ್ರದಾಯಬದ್ಧ ಸಾಮಾಜಿಕ ವ್ಯವಸ್ಥೆಯ ಕುರಿತು ಮಾತನಾಡುತ್ತಿದ್ದೆ. ಈ ವ್ಯವಸ್ಥೆಯನ್ನು ಮಾಡಿದವರು ಯಾರೋ ಕೆಲವೇ ಜನಮಾತ್ರ ಇದನ್ನ ನಿರ್ಮಿಸಿದವರು ಬಡವರು ಅಲ್ಲವೇ ಅಲ್ಲ. ಬಡಜನರು ತಮ್ಮದಲ್ಲದ ಈ ಸಾಮಾಜಿಕ ವ್ಯವಸ್ಥೆಯನ್ನು ತಡೆಯಬೇಕು. ಕೆಲವೇ ಜನರಿಗೆ ಮಾತ್ರ ಲಾಭದಾಯಕ ಹಾಗೂ ಸ್ವಂತಕ್ಕೆ ಉಪಯೋಗವಾಗುವ ವ್ಯವಸ್ಥೆಯಿಂದ ಪ್ರಯೋಜನವೇನು? ಯಾರು ನಿರ್ಮಿಸಿದ ಚೌಕಟ್ಟಿನಲ್ಲಿ ಸಿಕ್ಕಿದ್ದೇವೆ. ಆ ಚೌಕಟ್ಟಿನಿಂದ ಪಾರಾಗುವುದೇ ಹೊಸ ಅಲೆ. ಈ ಪ್ರಗತಿಯ ವಿಚಾರವನ್ನೇ ನಾನು ಮೈಸೂರಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದೆ ಜೊತೆಗೆ ಈ ವಿಷಯ ಕುರಿತು ಸಾಹಿತ್ಯ ಶ್ರೀಮಂತವಾಗಬೇಕು, ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳಲ್ಲಿ ಪರಾಕ್ರಮ ದೇಶಭಕ್ತಿ, ಸಮಾಜವಾದಿ ಸಮಾಜ ರಚನೆಗೆ ಸಹಾಯಕವಾಗುವ ವಿಚಾರಗಳು ಲಭ್ಯವಾಗಲಾರವು. ಅವುಗಳಲ್ಲಿ ಕೇವಲ ಹಳೇವಾದ ಶೋಷಣೆಯವಾದ, ಶುಷ್ಕವಾದ ಕಂಡು ಬರುತ್ತದೆ. ನಮ್ಮ ವಿದ್ಯಾರ್ಥಿಗಳು ಬೇರೆ ಬೇರೆ ದೇಶದ ಕ್ರಾಂತಿಕಾರಕ ಪುಸ್ತಕಗಳನ್ನು ಓದಿ ಕನ್ನಡ ಭಾಷೆಗಳನ್ನು ಶ್ರೀಮಂತಗೊಳಿಸಬೇಕು. ಇದಿಲ್ಲದ ಸಾಹಿತ್ಯ ಬೂಸಾ ಎಂದು ನಾನು ಸಾಂದರ್ಭಿಕವಾಗಿ ಹೇಳಿದೆ"[೬೨] ಎಂದು

ಬಸವಲಿಂಗಪ್ಪನವರೇ ಸಂದರ್ಶನದ ಸಮಯದಲ್ಲಿ ಹೇಳಿದ್ದಾರೆ. ಈ ಹೇಳಿಕೆಯ ಪರಿಣಾಮದಿಂದ ಬಸವಲಿಂಗಪ್ಪನವರು ಮಂತ್ರಿ ಪದವಿಯಿಂದ ಇಳಿಯಬೇಕಾಯಿತು.

೧೯೭೪ ರಿಂದ ೧೯೯೪ರವರೆಗಿನ ಕಾಲವನ್ನು ಕರ್ನಾಟಕದಲ್ಲಿ ಸಂಘಟನೆಗಳ ಕಾಲವೆನ್ನಬಹುದು "ಕನ್ನಡ ಸಾಹಿತ್ಯದಲ್ಲಿ ಬೂಸಾ ಇದೆ ಎಂಬ ಮಾಹಿತಿಯೊಡನೆ ಆಗಿನ ಮಂತ್ರಿಮಂಡಲದ ಸದಸ್ಯರೂ ಆದ ಬಿ. ಬಸವಲಿಂಗಪ್ಪರು ಅನೌಪಚಾರಿಕವಾಗಿ ದಲಿತ ಚಳುವಳಿಯನ್ನು ಉದ್ಘಾಟಿಸಿದರು. ಆಗ ಕೆರಳಿದ ಸವರ್ಣೀಯ ಮನಸ್ಸುಗಳು ಬಸವಲಿಂಗಪ್ಪರ ವಿರುದ್ಧ ಹೋರಾಡಿ ಅವರನ್ನು ಪದಚ್ಯುತಗೊಳಿಸಿದವು. ಆಕ್ರೋಶವಶರಾದ ಸವರ್ಣೀಯರ ಹೋರಾಟಕ್ಕೆ ಕಾರಣ, ಮಡಿ ಮೈಲಿಗೆಗಳಿಂದ ಮಲಿನವಾದ ಅವರ ಜಾತಿವಾದಿ ಮನಸ್ಸುಗಳು, ಅವರ ಅವಿವೇಕ ಮತ್ತು ಅಲ್ಪತೆಗಳ ವಿರುದ್ಧವಾಗಿ ದಲಿತ ಪ್ರಜ್ಞೆ ವಿಕಾಸಗೊಂಡಿತು. ದಲಿತ ಪ್ರಜ್ಞೆ ವಿಕಾಸಗೊಂಡಿತು. ದಲಿತ ಪ್ರಜ್ಞೆಯ ಪರಿಣಾಮವೇ ದಲಿತ ಚಳುವಳಿ".[೬೩]

ಜಾತಿ ವಿನಾಶಕ್ಕಾಗಿ ಸಮಾನತೆಯ ಸೃಷ್ಟಿಗಾಗಿ ಹುಟ್ಟಿದ ದ.ಸಂ.ಸ ಜಾತಿವಾದಿ ಸಂಘಟನೆಗಳ ಉಗಮಕ್ಕೆ ಕಾರಣವಾದದ್ದು, ನಮ್ಮ ದಲಿತ ಚಳುವಳಿಯ ಅತ್ಯಂತ ವಿಪರ್ಯಾಸವೆನ್ನಬಹುದು. ದಸಂಸ ಅನೇಕ ವಿಭಿನ್ನ ಶಾಖೆಗಳಾಗಿ ಒಡೆದು ಹೋಗಿದ್ದರೂ ಅದು ಉಂಟಾಗಿಸಿದ ದಲಿತ ಪ್ರಜ್ಞೆ ನಾಶವಾಗಿಲ್ಲ. ವಿವಿಧ ಕಾರಣಗಳಿಂದಾಗಿ ಒಡೆದು ಹೋದ ದಲಿತ ಸಂಘಟನೆಗಳನ್ನು ಒಗ್ಗೂಡಿಸಲು ಬದನವಾಳು ದುರಂತವು ಒಂದು ನೆಪವಾಯಿತು. ಬಿ. ಬಸವಲಿಂಗಪ್ಪನವರು ಮೊದಲಬಾರಿಗೆ ದಲಿತ ಚಳುವಳಿ ಉಗಮಕ್ಕೆ ಕಾರಣವಾದರೆ, ಶ್ರೀನಿವಾಸ ಪ್ರಸಾದರು ದಲಿತ ಚಳುವಳಿಯ ಪುನರ್‌ಜನ್ಮಕ್ಕೆ ಕಾರಣರಾದರು.

ಬೂಸಾ ಪ್ರಕರಣದಿಂದ ಬಿ. ಬಸವಲಿಂಗಪ್ಪನವರು ಶಕ್ತಿ ರಾಜಕಾರಣ ವಿರುದ್ಧ ಸೋತು ರಾಜಿನಾಮೆಯನ್ನು ನೀಡಬೇಕಾದ ಪರಿಸ್ಥಿತಿ ಉದ್ಭವವಾಯಿತು. ದೇವರಾಜು ಅರಸು ಸರಕಾರ ಜಾರಿಗೆ ತಂದ ಸುಧಾರಣೆಗಳ ಹಿನ್ನೆಲೆಯಲ್ಲಿ ಬಸವಲಿಂಗಪ್ಪನವರ ಪ್ರಕರಣವನ್ನು ತಪ್ಪಾಗಿ ಗ್ರಹಿಸಿದುದು ಅಥವಾ ವಿಪರೀತವಾಗಿ ಕಲ್ಪಿಸಿಕೊಂಡದ್ದು ಈ ಘಟನೆಗೆ ಕಾರಣವೆನ್ನಬಹುದು. ಈ ಸಂದರ್ಭದಲ್ಲಿ ಇಡೀ ರಾಜ್ಯವೇ ಜಾತಿ ಪರ ಮತ್ತು ಜಾತಿ ವಿರೋಧಿ ಹಾಗೂ ಪ್ರಗತಿಪರ ಪ್ರಗತಿ ವಿರೋಧಿ ಗುಂಪುಗಳ ನಡುವಣ ಘರ್ಷಣೆಯ ರಂಗವಾಗಿ ಏರ್ಪಟ್ಟಿತು. ಡಾ.ಬಿ.ಎಂ ಪುಟ್ಟಯ್ಯನವರು ಈ ಪ್ರಕರಣವನ್ನು ವ್ಯಾಖ್ಯಾನಿಸುವಂತೆ ಈ ಘಟನೆ ಮೂಲತಃ ಬಸವಲಿಂಗಪ್ಪನವರ ಭಾಷಣದಿಂದಲೇ ಆಯಿತು ಎಂದರೆ ಪ್ರಕರಣವನ್ನು ಸರಳೀಕರಿಸಿದಂತೆ ಆಗುತ್ತದೆ. ಅದೇ ಬಸವಲಿಂಗಪ್ಪನವರು ಕರ್ನಾಟಕದಲ್ಲಿ ಮಲ ಹೊರುವ ಪದ್ಧತಿ ಸತ್ತ ದನ ಹೊರುವ ಪದ್ಧತಿ,

ಮೇಲು ಜಾತಿಯವರು ಸತ್ತಾಗ ಗುಂಡಿ ತೋಡುವುದು, ಹೆಣ ಹೊರುವುದು, ವಾದ್ಯ ತಮಟೆ ಬಾರಿಸುವುದು ಈ ಮುಂತಾದವುಗಳ ವಿರುದ್ಧ ಬಲವಾದ ಕೂಗೆಬ್ಬಿಸಿದ್ದರು. ಇದು ದಲಿತ ಸಮುದಾಯದಲ್ಲಿ ಬಹುತೇಕ ಸಫಲತೆಯನ್ನು ಸಾಧಿಸಿತು. ಈ ಸಿಟ್ಟು ಭೂಮಾಲೀಕ ವರ್ಗದಲ್ಲಿ ಮಡುಗಟ್ಟಿತು. ಹಾಗೆಯೇ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇದು ಒಮ್ಮೊಮ್ಮೆ ಆಕ್ಷೇಪಿಸಲು ಕಾರಣವಾಯಿತು. ಈ ಕಾರಣದಿಂದ ದಲಿತ ಸಮುದಾಯದಲ್ಲಿ ದಲಿತಚಳುವಳಿ ಮೊಳಕೆಯೊಡೆದು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಹಿತಿಕವಾಗಿ, ಸೈದ್ಧಾಂತಿಕವಾಗಿ ವಿವಿಧ ನೆಲೆಯಲ್ಲಿ ಸ್ವರೂಪ ಪಡೆದುಕೊಳ್ಳಲು ಸಾಧ್ಯವಾಯಿತು.

ಇದೆಲ್ಲದರ ಪರಿಣಾಮವಾಗಿ ದೇವರು ಧರ್ಮ ಜಾತಿಯ ವಿರುದ್ಧ ಕರ್ನಾಟಕದ ಯುವ ಜನತೆ ಕೂಗೆಬ್ಬಿಸಿದರು. ೧೯೭೩ರಲ್ಲಿ ಆಗಸ್ಟ್ ೨೫-೨೬ರಂದು ಮೈಸೂರಿನಲ್ಲಿ ಜಾತಿ ವಿನಾಶ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ಹಿಂದೆ ಲೋಹಿಯಾ ಅವರ ವೈಚಾರಿಕತೆ ಇತ್ತು. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ರಾಮದಾಸ್, ಆಲನಹಳ್ಳಿ ಕೃಷ್ಣ, ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಹೆಚ್.ಗೋವಿಂದಯ್ಯ, ಜನಾರ್ಧನ (ಜೆನ್ನಿ) ಮೊದಲಾದವರು ಈ ಸಮ್ಮೇಳನದಲ್ಲಿ ಪಾಲ್ಗೊಂಡು ಕರ್ನಾಟಕದ್ಯಾದಂತ ಒಂದು ಬಗೆಯ ರೋಮಾಂಚನ ಉಂಟು ಮಾಡಿದರು. ೧೯೭೪ರಲ್ಲಿ ಏಪ್ರಿಲ್ ೨೦-೨೧ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ರಚಿಸಿಕೊಂಡು ಮೈಸೂರಿನಲ್ಲಿ ಸಮ್ಮೇಳನ ಮಾಡಿದರು. ಶೂದ್ರ ಪ್ರಜ್ಞೆ ಇನ್ನೊಮ್ಮೆ ಸ್ವಾಭಿಮಾನದ ಸಂಕೇತವಾಯಿತು. ಕನ್ನಡ ಸಾಹಿತ್ಯದಲ್ಲಿ ಇರುವುದೆಲ್ಲ ಬೂಸಾ ಎಂದು ಹೇಳಿದ ಬಸವಲಿಂಗಪ್ಪನವರು ಆ ಕಾರಣದಿಂದಾಗಿ ತಮ್ಮ ಮಂತ್ರಿ ಪದವಿಯನ್ನು ಕಳೆದುಕೊಂಡರೂ ಸ್ವಸ್ಥಚಿತ್ತರಾಗಿ ನಿದ್ರಿಸುತ್ತಿದ್ದ ಸಾಂಪ್ರದಾಯಕ ಸಾಹಿತಿಗಳ ಚಿತ್ತವನ್ನು ಕೆಡಿಸುವುದರಲ್ಲಿ ಯಶಸ್ವಿಯಾದರು. ಜಡವಾಗಿದ್ದ ದಲಿತ ಸಾಹಿತಿಗಳ ಸಮುದಾಯವು ಮೈಕೊಡವಿ ನಿಲ್ಲುವಂತಾಯಿತು. ದಲಿತರಲ್ಲಿ ಉಂಟಾದ ಎಚ್ಚರದಿಂದ ೧೯೭೪ರಲ್ಲಿ ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ ದಲಿತ ಸಂಘರ್ಷ ಸಮಿತಿ ರೂಪುಗೊಂಡಿತು. ಬೆಂಗಳೂರಿನಲ್ಲಿ ದಲಿತ ಕ್ರಿಯಾ ಸಮಿತಿ, ಮೈಸೂರು, ಕೋಲಾರಗಳಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟಗಳು ಪ್ರಾರಂಭವಾದವು. ಸಾಹಿತ್ಯ ಕ್ಷೇತ್ರದಲ್ಲಿ ಬೆರಳೆಣಿಕೆಯಷ್ಟಿದ್ದ ದಲಿತ ಬರಹಗಾರರಾದ ದೇವನೂರ ಮಹಾದೇವ, ಸಿದ್ದಲಿಂಗಯ್ಯ, ದೇವಯ್ಯ ಹರವೆ, ಅರವಿಂದ ಮಾಲಗತ್ತಿ, ಮನಜ, ಮುಳ್ಳೂರು ನಾಗರಾಜು, ತುಂಬಾಡಿ ರಾಮಯ್ಯ, ಹೆಚ್.ಗೋವಿಂದಯ್ಯ, ಲಕ್ಷ್ಮಣ್, ಮುನಿವೆಂಕಟಪ್ಪ ಮುಂತಾದ ಬರಹಗಾರರು ೧೯೭೬ ಡಿಸೆಂಬರ್‌ನಲ್ಲಿ ದಲಿತ ಲೇಖಕರ ಮತ್ತು ಕಲಾವಿದರ ಯುವ ಸಂಘಟನೆ ಸಮ್ಮೇಳನವನ್ನು ಭದ್ರಾವತಿಯಲ್ಲಿ ನಡೆಸುವುದರ ಮೂಲಕ

ಎಲ್ಲರ ಗಮನವನ್ನು ಸೆಳೆದರು"[೬೪]. ಈ ಸಂಘಟನೆಯು ದಲಿತ ಶೋಷಿತ ವರ್ಗಕ್ಕೆ ಅನಿವಾರ್ಯ ಮತ್ತು ಅವಶ್ಯಕವಾದ ಸಂಘಟನೆಯಾಗಿದೆ ಎಂಬುದನ್ನು ಮನಗಾಣಬೇಕಾಗಿದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಚಳುವಳಿಗೆ ಪೂರಕವಾಗಿ ರಚನೆಗೊಂಡ ಇನ್ನೊಂದು ಸಂಸ್ಥೆ, ದಲಿತ ಮಹಿಳಾ ಒಕ್ಕೂಟ. ಸ್ವಯಂ ಸ್ಫೂರ್ತಿಯಿಂದ ದಲಿತರ ಸೇವೆಗೆ ಮುಂದೆ ಬಂದ ದಲಿತ ಮಹಿಳಾ ಕಾರ್ಯಕರ್ತೆಯರು ಇದರಲ್ಲಿದ್ದರು. ಶಿಬಿರಗಳನ್ನು ಸಂಘಟಿಸಿ ಹಲ್ಲೆಗಳನ್ನು ಪ್ರತಿಭಟಿಸಿ ಸರ್ಕಾರದ ಮೇಲೆ ಒತ್ತಡ ತರುವಲ್ಲಿ ಇವರು ಶ್ರಮಿಸಿದರು. ದಲಿತ ಚಳುವಳಿಯು ಎಷ್ಟರ ಮಟ್ಟಿಗೆ ಬೆಳವಣಿಗೆಯಾಗಿದೆ ಎಂದರೆ ಮಹಿಳೆಯರನ್ನು ಅದರಲ್ಲೂ ದಲಿತ ವರ್ಗದ ಮಹಿಳೆಯರನ್ನು ಶೋಷಣೆಯ ವಿರುದ್ಧ ಹೋರಾಡಲು ತೀವ್ರ ತರವಾದ ಪ್ರೇರಣೆಯನ್ನು ನೀಡಿತು. ಇದಕ್ಕೆ ಪೋಷಕವಾಗಿ ರಾಜ್ಯ ದಲಿತ ಮಹಿಳಾ ಒಕ್ಕೂಟದ ಸಂಚಾಲಕಿ ಶ್ರೀಮತಿ ಗಂಗಮ್ಮನವರ ಹೇಳಿಕೆಯನ್ನು ಉಲ್ಲೇಖಿಸಬಹುದಾಗಿದೆ. "ಮಹಿಳೆಯರು ಮನಸ್ಸು ಮಾಡಿದರೆ ಅಸಾಧ್ಯವಾದುದನ್ನು ಮಾಡಬಹುದೆಂದು ಇಂದು ಮಹಿಳೆಯರ ಮೇಲೆ ಅದರಲ್ಲೂ ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಶೋಷಣೆ ಹೆಚ್ಚಾಗುತ್ತಿದೆ. ಇದನ್ನು ತಪ್ಪಿಸಲು ತಾಲ್ಲೂಕು ಮಟ್ಟದಲ್ಲಿಯೂ ದಲಿತ ಮಹಿಳಾ ಒಕ್ಕೂಟ ಸ್ಥಾಪನೆಯಾಗಬೇಕು. ಅದರ ಮುಖಾಂತರ ಮಹಿಳೆಯರೆಲ್ಲ ಸಂಘಟಿರಾಗಿ ತಮ್ಮ ಮೇಲಿನ ಶೋಷಣೆ, ಅತ್ಯಾಚಾರ, ಅವಮಾನವೇ ಮುಂತಾದಪ್ರಸಂಗಗಳನ್ನುತಪ್ಪಿಸಬೇಕೆಂದುಅವರುಕರೆಕೊಟ್ಟರು".[೬೫]ಈಮೇಲೆ ಉಲ್ಲೇಖಿತಗೊಂಡಿರುವ ಹೇಳಿಕೆಗೆ ಪೂರಕವಾಗಿ ಕರ್ನಾಟಕದಾದ್ಯಂತ ಇರುವ ಮಹಿಳಾ ಒಕ್ಕೂಟಗಳನ್ನು ಹೆಸರಿಸುವುದಕ್ಕೆ ಮುಂಚೆ ಶ್ರೀಮತಿ ಗಂಗಮ್ಮನವರು ಕರ್ನಾಟಕ ದಲಿತ ಮಹಿಳೆಯರಿಗೆ ಸ್ಫೂರ್ತಿ ನೀಡಿದ ಮೊಟ್ಟಮೊದಲ ದಲಿತ ಮಹಿಳೆಯಾಗಿದ್ದಾರೆ.

ತದನಂತರ ದಲಿತ ಸಂಘರ್ಷ ಸಮಿತಿಯ ಬೆಳವಣಿಗೆಯ ತೀವ್ರತೆಗಾಗಿ ೧೯೭೮ರಲ್ಲಿ ಸಾಂಸ್ಕೃತಿಕ ಚಳುವಳಿಯನ್ನು ಹಮ್ಮಿಕೊಳ್ಳಲು ದಲಿತ ಸಮುದಾಯವು ದಲಿತ ಕಲಾ ಮಂಡಳಿಯನ್ನು ಆರಂಭಿಸಿತು. ಕೋಟಗಾನಹಳ್ಳಿ ರಾಮಯ್ಯ, ಕರ್ನಲ್ ನಾರಾಯಣಸ್ವಾಮಿ, ಮುನಿಸ್ವಾಮಿ, ಪಿಚ್ಚಳ್ಳಿ ಶ್ರೀನಿವಾಸ್, ಬಾನಂದೂರು ಕೆಂಪಯ್ಯ, ಮುನಿಮಲ್ಲಪ್ಪ, ಜನಾರ್ಧನ, ಅಪ್ಪಗೆರೆ ತಿಮ್ಮರಾಜು ಆರ್.ಮಾನಸಯ್ಯರಂತ ನೂರಾರು ಕಲಾವಿದರು ಸೇರಿ ದಲಿತ ಯುವ ಪ್ರತಿಭೆಗೆ ವೇದಿಕೆಯನ್ನು ಸಂಘಟಿಸಿದ್ದರು. ಜನರನ್ನು ಚಳುವಳಿ, ಸಂಘಟನೆ, ಹಾಗೂ ಜನಜಾಗೃತಿ ಮಾಡುವ ಉದ್ದೇಶದಿಂದ ಜನಪದರ ಶೈಲಿಯಲ್ಲಿ ಹಾಡುಗಳನ್ನು ಹಾಡುತ್ತಾ ದಲಿತ ಬದುಕಿನ ಬವಣೆಗಳನ್ನು ಹಾಗೂ ಅಂಬೇಡ್ಕರ್ ಅವರ ತತ್ವಗಳನ್ನು ನೋಡುವವರ ಮೈ ಮನ ನವಿರೇಳುವಂತೆ ಅಭಿನಯದಲ್ಲಿ

ಪ್ರದರ್ಶಿಸುತ್ತಿದ್ದರು. ನೂರಾರು ಹೋರಾಟದ ಗೀತೆಗಳನ್ನು ರಾಜ್ಯದಾದ್ಯಾಂತ ಹಾಡುತ್ತಾ ಅಭಿನಯ ಮಾಡುತ್ತಾ ದಲಿತ ಸಮುದಾಯದಲ್ಲಿ ಜನಜಾಗೃತಿಯನ್ನುಂಟು ಮಾಡುವುದರ ಮೂಲಕ ದಲಿತ ಸಾಂಸ್ಕೃತಿಕ ಜಗತ್ತನ್ನು ಶ್ರೀಮಂತಗೊಳಿಸುವಲ್ಲಿ ದಲಿತ ಸಾಂಸ್ಕೃತಿಕ ಕಲಾಬಳಗವು ದಲಿತ ಚಳುವಳಿಗೆ ಪೂರಕವಾಗಿ ಬೆಂಬಲವನ್ನು ನೀಡುತ್ತಾ ಬಂದಿದೆ.

ಭದ್ರಾವತಿಯಲ್ಲಿ ನಡೆದ ದಲಿತ ಯುವ ಲೇಖಕರ ಸಮ್ಮೇಳನದ ತರುವಾಯ ಎಡಪಂಥೀಯ ಚಿಂತಕರುಗಳು ಒಂದೆಡೆ ಸೇರಿ ೧೯೭೯ರ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಹಿಷ್ಕರಿಸಿ ಪ್ರತಿಭಟಿಸಿದ್ದರು. ಈ ಹಿನ್ನೆಲೆಯಿಂದ ದಲಿತ ಬಂಡಾಯ ವೇದಿಕೆಯನ್ನು ನಿರ್ಮಾಣ ಮಾಡಿದ್ದರು. ಇವೆಲ್ಲದರ ಸಹಾಯದಿಂದ ದಲಿತ ಸಾಹಿತ್ಯ ಚಳುವಳಿಗೆ ಸೈದ್ಧಾಂತಿಕ ಗತಿ ಪಡೆಯುವ ನೆಲೆಯಲ್ಲಿ ೧೯೮೩ ಡಿಸೆಂಬರ್ ೧೦-೧೧ರಂದು ಧಾರವಾಡದಲ್ಲಿ ಸಮ್ಮೇಳನ ನಡೆಯಿತು. ಈ ಸಮ್ಮೇಳನದ ನಿಲುವುಗಳೆಂದರೆ ದಲಿತ ಸಾಹಿತ್ಯದ ಸಮಸ್ಯೆಗಳನ್ನು ಕುರಿತು ವಿಚಾರ ಸಂಕಿರಣ ಏರ್ಪಡಿಸುವುದು, ಕವಿ ಸಮ್ಮೇಳನಗಳನ್ನು ಸಂಘಟಿಸುವುದು. ಯುವ ಸಾಹಿತಿ ಕಲಾವಿದರನ್ನು ತರಬೇತಿಗೊಳಿಸಲು ಶಿಬಿರಗಳನ್ನು ಏರ್ಪಡಿಸುವುದು, ದಲಿತ ಲೇಖಕರ ಕೃತಿಗಳನ್ನು ಪ್ರಕಟಿಸುವುದು, ಈ ಯೋಜನೆಗಳನ್ನು ರೂಪಿಸಲಾಯಿತು. ಇಂಧೂದರ ಹೊನ್ನಾಪುರ, ವಿ.ಮುನಿವೆಂಕಟಪ್ಪ, ಸಿದ್ದಲಿಂಗಯ್ಯ, ಬೊಳ್ಳುಮಂಡೆಪ್ಪ, ಬಿ.ಕೃಷ್ಣಮೂರ್ತಿಯವರು ಈ ಯೋಜನೆ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

ದಲಿತ ಸಾಹಿತ್ಯದ ಮೇಲೆ ಪ್ರೇರಣೆ ಪ್ರಭಾವಗಳು ಉಂಟಾಗಿದೆ ಎಂಬುದು ಸತ್ಯ. ದಲಿತ ಸಾಹಿತ್ಯ ಮತ್ತು ಚಳುವಳಿಗಳು ಅವಿನಾಭಾವ ಸಂಬಂಧದೊಂದಿಗೆ ರೈಲಿನ ಎರಡು ಅಳಿಗಳಂತೆ ನಿರಂತರವಾಗಿ ಮುಂದುವರಿಯುತ್ತಾ ಬಂದಿದೆ. ಇದರಿಂದಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ವಿಭಿನ್ನ ವಿಶಿಷ್ಟವೆನ್ನುವಂತಹ ಚಳುವಳಿಯ ಮತ್ತು ಸಾಹಿತ್ಯ ಕೃತಿಗಳು ಪ್ರಕಟಗೊಂಡವು. "ದಲಿತ ಸಾಹಿತ್ಯದ ಸೃಷ್ಟಿಕ್ರಿಯೆ ವ್ಯಕ್ತಿ ಕೇಂದ್ರಿತವಾಗಿರದೆ ಸಮಾಜ ಕೇಂದ್ರಿತವಾದದ್ದು ಇಲ್ಲಿಯ ವರ್ಗ ಹೋರಾಟ ಒಂದೆಡೆಯಿಂದ ಮೇಲೋಗರವಾಗಿ ಎದ್ದು ಬಂದರೆ, ಒಂದೊಂದು ಜಾತಿಗಳೇ ಒಂದೊಂದು ವರ್ಗವಾಗಿದೆ ಎಂದು ಗುರುತಿಸುತ್ತಾ ಗೋಪುರ ವ್ಯವಸ್ಥೆಯ ಆರ್ಥಿಕ ನೀತಿಯನ್ನು ಆಳಕ್ಕಿಳಿದು ಗುರುತಿಸಲಾಗಿದೆ".[೬೬] ಅಂತೆಯೇ ಮಾರ್ಕ್ಸ್‌ವಾದ ಅಂಬೇಡ್ಕರ್ ವಾದದ ವಿಚಾರಗಳು ಆಳವಾಗಿ ಬೇರು ಬಿಟ್ಟಿರುವುದು ಸಾಹಿತ್ಯದ ಅಧ್ಯಯನದಿಂದ ಗುರುತಿಸಬಹುದು. ಸಾಹಿತ್ಯದ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಹೇಳಲೇಬೇಕಾದ ಇನ್ನೊಂದು ವಿಚಾರವೆಂದರೆ ಸೃಜನಶೀಲ ಸಾಹಿತ್ಯದ ನಾಲ್ಕು ಪ್ರಕಾರಗಳಲ್ಲಿ ತುಂಬ ಸಮೃದ್ಧವಾದ ಹಿನ್ನಲೆಯಲ್ಲಿ ದಲಿತ ಸಾಹಿತ್ಯ

ಹೊರಬಂದಿದೆ. ದಲಿತ ಚಳುವಳಿಯ ನಿಷ್ಠೆಯಿಂದ ದುಡಿದ ತರುಣ ಸಾಹಿತಿಗಳ ಕೊಡುಗೆ ಅಪಾರವಾಗಿದೆ. ಇವರುಗಳು ತಮ್ಮ ಸಮಾಜದ ಮೇಲಾಗುತ್ತಿದ್ದ ಅನ್ಯಾಯಗಳನ್ನು ಪ್ರಶ್ನಿಸುವ ವಿಮರ್ಶಿಸುವ ಮೂಲಕ ಹೊಸ ಹೊಸ ಕೃತಿಗಳನ್ನು ರಚಿಸಿದರು. ಸಿದ್ದಲಿಂಗಯ್ಯನವರ ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ಹಾಡು, ಊರುಕೇರಿ ಆತ್ಮಕಥನ, ಏಕಲವ್ಯ (ನಾಟಕ), ದೇವನೂರ ಮಹಾದೇವ ಅವರ ದೇವನೂರು ಕಥೆಗಳು, ಅರವಿಂದ ಮಾಲಗತ್ತಿಯವರ ಮೂಕನಿಗೆ ಬಾಯಿ ಬಂದಾಗ, ಕಪ್ಪುಕಾವ್ಯ, ಮಸ್ತಕಾಭಿಷೇಕ, ಗೌರ್ಮೆಂಟ್ ಬ್ರಾಹ್ಮಣದಂತಹ ಕೃತಿಗಳು, ಮ.ನ.ಜವರಯ್ಯ ಅವರ 'ಕೇಳು ಜಗಮಾದಿಗರ ಹೊಲೆಯ', 'ವಿದ್ರೋಹ', 'ಅತ್ತೆ-ಸೊಸೆ' ಆತ್ಮಕಥೆ ಕೃತಿಗಳು ಬಹು ಪ್ರಮುಖವಾಗಿವೆ. ಇವರಷ್ಟೆ ಅಲ್ಲದೆ ಕೆ.ಬಿ. ಸಿದ್ದಯ್ಯ, ಮುನಿವೆಂಕಟಪ್ಪ, ಮುಳ್ಳೂರು ನಾಗರಾಜು, ಬಿ.ಕೃಷ್ಣಪ್ಪ, ಇಂಧೂದರ ಹೊನ್ನಪುರದಂತಹ ಹಲವಾರು ದಲಿತ ಸಾಹಿತ್ಯ ಲೇಖಕರಿಗೆ ದಲಿತ ಚಳುವಳಿಯು ಅನನ್ಯವಾದ ಕೊಡುಗೆಯನ್ನು ನೀಡಿದೆ. ಇವುಗಳ ಹಿಂದೆ ಚಳುವಳಿಯ ಅನುಭವವಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಒಟ್ಟಾರೆ ದಲಿತ ಚಳುವಳಿಯಿಂದ ದಲಿತರಲ್ಲಿ ದಲಿತ ಪ್ರಜ್ಞೆಯು ಜಾಗೃತಗೊಂಡಿತು. ದಲಿತ ಚಳುವಳಿಯ ನೆಲೆಯಿಂದ ದಲಿತ ಸಂಘರ್ಷ ಸ್ಥಾಪನೆಗೊಂಡರು ಅಷ್ಟೇ ವೇಗವಾಗಿ ದಲಿತ ಸಂಘರ್ಷ ಸಮಿತಿಯು ಹಲವಾರು ಪಂಗಡಗಳಾಗಿ ಪಡೆದು ಹೋಯಿತು. ಅಂತಯೇ ಇಂದು ವಿವಿಧ ಸಂಘಟನೆಗಳಾಗಿ ಕರ್ನಾಟಕದಾದ್ಯಂತ ಕಂಡು ಬರುತ್ತಿದೆ. ಏನೇ ಆದರೂ ಕನ್ನಡ ದಲಿತ ಸಾಹಿತ್ಯ ಮತ್ತು ದಲಿತ ಆತ್ಮಕಥೆಗಳ ಮೇಲೆ ಕರ್ನಾಟಕದ ದಲಿತ ಚಳುವಳಿಯು ಅಗಾಧವಾಗಿ ಪ್ರಭಾವ ಬೀರಿದೆ. ಕನ್ನಡ ದಲಿತ ಆತ್ಮಕಥನಕಾರರಾದ ಅರವಿಂದ ಮಾಲಗತ್ತಿ, ಮುಳ್ಳೂರು ನಾಗರಾಜು, ಸಿದ್ದಲಿಂಗಯ್ಯ, ತುಂಬಾಡಿ ರಾಮಯ್ಯ, ದು.ಸರಸ್ವತಿ, ಲಕ್ಷ್ಮಣ್, ಕೆ. ಗೋವಿಂದರಾಜ, ಕೆ.ಕೆ.ಯಲ್ಲಪ್ಪ, ಸಂಜೀವರಾಯ, ಪರಶಿವಮೂರ್ತಿಯವರುಗಳ ಮೇಲೆ ದಲಿತ ಚಳುವಳಿ ಅಗಾಧವಾದ ಪ್ರಭಾವ ಬೀರಿದೆ. ಈ ಎಲ್ಲ ಪ್ರಭಾವದ ಸಾಧ್ಯತೆಗಳನ್ನು 'ದಲಿತ ಆತ್ಮಕಥೆಗಳ ಸಂಘರ್ಷದ ನೆಲೆ'ಯ ಅಧ್ಯಾಯದಲ್ಲಿ ತುಂಬಾ ವಿವರಣಾತ್ಮಕವಾಗಿ ಚರ್ಚಿಸಲಾಗುವುದು. ಈ ಸಾಧ್ಯತೆಗಳ ಹಿನ್ನೆಲೆಯಲ್ಲಿ ಕನ್ನಡ ದಲಿತ ಆತ್ಮಕಥೆಗಳ ಮೇಲೆ ದಲಿತ ಚಳುವಳಿಯ ಪ್ರೇರಣೆ ಪ್ರಭಾವ ಆಗಾಧವಾಗಿ ಪರಿಣಾಮವನ್ನುಂಟು ಮಾಡಿದೆ.

ಕಾವ್ಯದ ತರುವಾಯ ದಲಿತ ಕಥಾ ಸಂಕಲನಗಳು ದಲಿತ ಚಳುವಳಿಯ ಪ್ರೇರಣೆ ಪ್ರಭಾವದಿಂದ ಹುಟ್ಟಿಕೊಂಡಿವೆ. ದಲಿತ ಬದುಕಿನ ನಿಜ ಸ್ಥಿತಿಯ ಅಂತರಂಗದ ಸ್ಥಿತಿಯಲ್ಲಿ ಮೊದಲ ತಲೆಮಾರಿನ ಹಾಗೂ ಚಳುವಳಿಯ ಸಂದರ್ಭದ ದಲಿತ ಕಥೆಗಾರರು ಕಥೆಗಳ

ಮೂಲಕ ಕಟ್ಟಿಕೊಟ್ಟಿದ್ದಾರೆ. ಚನ್ನಣ್ಣ ವಾಲೀಕಾರರ 'ಕುದ್ದವರ ಕಥೆಗಳು', ದೇವನೂರು ಮಹಾದೇವ ಅವರ 'ದ್ಯಾವನೂರು', ಅರವಿಂದ ಮಾಲಗತ್ತಿ ಅವರ 'ಮುಗಿಯದ ಕಥೆಗಳು', ಮ.ನ.ಜವರಯ್ಯನವರ 'ಬುರುಡೆಗೆ ಸ್ವರ್ಗ', ಮೊಗಳ್ಳಿ ಗಣೇಶ್ ಅವರ 'ಬುಗುರಿ', 'ಭೂಮಿ', ಜನಾರ್ಧನ ಎರ್ಫಕಟ್ಟೆಯವರ 'ಪ್ರಕ್ರಿಯೆ', 'ತಿರಸ್ಕೃತರು', 'ಕಾಯುತ್ತಿದೆ ಈ ನೆಲ', ಭದ್ರಯ್ಯನವರ 'ತಿಮ್ಮಸಂದ್ರ', 'ಬಾಗಿಲ ಬೀಗ' ಮತ್ತು 'ರೇಣು', ಎಚ್. ಬಾಲರಾಜು ಅವರ 'ಸೂರ್ಯ ಕತ್ತಲು ಬೆಳಕು', ಹೊಂಗಳ್ಳಿ ಸೋಮಣ್ಣನವರ 'ತಮ್ಮಟೆ', ಮುಳ್ಳೂರು ನಾಗರಾಜ್ ಅವರ 'ಸಿಂಗಳಿಕ', ಬಿ.ಟಿ.ಲಲಿತನಾಯಕ್ ಅವರ 'ಹಬ್ಬ ಮತ್ತು ಬಲಿ', 'ಭಟನ ಕನಸು', ವೆಂಕಟೇಶಮೂರ್ತಿಯವರ 'ಗುದ್ದು', ಸಣ್ಣರಾಮ ಅವರ 'ಶೇಮ್ಮಾವು' – ಹೀಗೆ ಹಲವು ಕಥಾ ಸಂಕಲನಗಳು ದಲಿತ ಪ್ರಜ್ಞೆಯ ಹಿನ್ನೆಲೆಯಲ್ಲಿ ರೂಪುಗೊಂಡ ಕಥೆಗಳಾಗಿ ದಲಿತ ಸಾಮಾಜಿಕ ಬದುಕಿನ ನಿಜ ಚಿತ್ರಣವನ್ನು ಅನಾವರಣಗೊಳಿಸಿವೆ ಈ ಎಲ್ಲಾ ಕಥೆಗಳು ಹುಟ್ಟಲಿಕ್ಕೆ ಕಾರಣ ದಲಿತ ಚಳುವಳಿಯ ಪ್ರೇರಣೆ. ಇವುಗಳು "ದಲಿತರು ಸೃಷ್ಟಿಸಿಕೊಂಡ ಬದುಕಿನ ಅಮಾಯಕತೆಯನ್ನು ಗುರುತಿಸುವ ಕತೆಗಳು"[೬೭] ಎಂದು ದಲಿತ ಕಥೆಗಳ ಅಂತರಾತ್ಮದ ವಸ್ತು ವೈವಿಧ್ಯತೆಯ ನೆಲೆಯಲ್ಲಿ ಚರ್ಚಿಸಿದ್ದಾರೆ.

ರಹಮತ್ ತರಿಕೆರೆ ಅವರು ದಲಿತ ಕಥೆಗಳನ್ನು ಕುರಿತಂತೆ ಹೇಳಿರುವ ಮಾತುಗಳು ಕಥೆಗಳು ಹಂದರವನ್ನು ಸ್ಪಷ್ಟಪಡಿಸುತ್ತವೆ. ದಲಿತ ಬದುಕಿನ ಹತಾಶಯಗಳನ್ನು ಚಿತ್ರಿಸುವ ಕಥೆಗಳು, ದಲಿತರ ಒಳಗಡೆಯೇ ದುರ್ಬಲರನ್ನು ಕಾಡುತ್ತಿರುವ ದಲಿತರ ಕ್ರೌರ್ಯವನ್ನು ಗುರುತಿಸುವ ಕಥೆಗಳು, ದಲಿತರ ಮೇಲೆ ದಲಿತೇತರರು ನಡೆಸುತ್ತಿರುವ ದೌರ್ಜನ್ಯಗಳನ್ನು ಕಥೆಗಳು ಬಿಚ್ಚಿಡುತ್ತವೆ. ಹಾಗೆ ಕಾವ್ಯದ ನೆಲೆಯಲ್ಲಿ ಹಂಪಣ್ಣನವರ ದನಿಗಳು ಆದಿಮಕನ್ಯೆ, ಅರವಿಂದ ಮಾಲಗತ್ತಿಯವರ 'ಕಪ್ಪು ಕಾವ್ಯ', ಸತ್ಯಾನಂದ ಪಾತ್ರೋಟ ಅವರ 'ಕರಿನೆಲದ ಕಲೆಗಳು', ಮುನಿವೆಂಕಟಪ್ಪನವರ 'ಕೆಂಡದ ನಡುವೆ', 'ಸ್ವಾಭಿಮಾನದ ಬೀಡಿಗೆ', ಎಲ್. ಹನುಮಂತಯ್ಯನವರ 'ಕಪ್ಪು ಕಣ್ಣಿನ ಹುಡುಗಿ', 'ಅವ್ವ ಅಕ್ಷರವೇ', ಗಂಗಾರಾಂ ಚಂಡಾಳರ 'ಚಂಡಾಳರ ಕೂಗು', ಇವರೊಟ್ಟಿಗೆ ಎಂ.ಲೋಕೇಶ್, ಮೋಹನ ನಾಗಮ್ಮ, ದೊಡ್ಡಣ್ಣ ಭಜಂತ್ರಿ, ಕೆ.ಎಸ್. ದೊಡ್ಡಮನಿ, ದೊಡ್ಡಬಸವ, ಮೋಹನ ಕುರುಡುಗಿ, ಹೂಸೂರು ಮುನಿಶ್ಯಾಮಪ್ಪ, ಸಕಲವಾರ ಕಾವೇರಪ್ಪ, ಕೆ. ಗೋವಿಂದರಾಜು ಮುಂತಾದವರು ಮೊದಲಿಗರಾಗಿ ಗುರುತಿಸಬಹುದಾಗಿದೆ. ದಲಿತ ಮಹಿಳೆಯರು ಸಹ ಕಾವ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಸುಕನ್ಯಾ ಮಾರುತಿ, ಮಲ್ಲಿಕಾ ಘಂಟಿ, ಲಲಿತಾನಾಯಕ, ದು. ಸರಸ್ವತಿ, ಉಮಾ, ಸಮತಾ ದೇಶಮಾನೆ ಬಿ.ಟಿ.ಜಾಹ್ನವಿ, ವೀಣಾ ಮೇಟುಕರ್ಕೆ, ಅನುಸೂಯ ಕಾಂಬಳೆಯವರು ಕಾವ್ಯದ ಕಡಲ ತೆರೆಗಳಲ್ಲಿ ಒಂದಾಗಿದ್ದಾರೆ. ಹೀಗೆ ಕಾವ್ಯದ

ಮೂಲಕ ಕನ್ನಡ ದಲಿತ ಆತ್ಮಕಥೆಗಳ ಲೋಕ ಮೊಟ್ಟ ಮೊದಲು ಮಾತನಾಡತೊಡಗಿತ್ತು. "ಹತ್ತು ವರ್ಷಗಳ ಮೊದಲ ಅವಧಿಯಲ್ಲಿ ಬರೆದ ಕವಿಗಳಲ್ಲಿ ಹೆಚ್ಚಿನವರು ಬಿಡಿಬಿಡಿಯಾದ ಕವನಗಳನ್ನು ಬರೆದಿದ್ದಾರೆ. ಹೆಚ್ ಗೋವಿಂದಯ್ಯ, ರಾಮದೇವ ರಾಕೆ, ಕೆ.ರಾಮಯ್ಯ, ವೆಂಕಟಸ್ವಾಮಿ, ಬಾನಂದೂರು ಕೆಂಪಯ್ಯ, ಅಪ್ಪಗೆರೆ ತಿಮ್ಮರಾಜು, ಇಂಥಹ ಕೆಲವು ಕವಿಗಳು ಬಿಡಿ ಬಿಡಿ ಕವನಗಳನ್ನು ಬರೆದು ಚಳುವಳಿಯ ಚಾಲನೆಗೆ ಕಾರಣರಾಗಿದ್ದಾರೆ"[೬೮.] ಹೀಗೆ ಬಿಡಿ ಬಿಡಿ ಕವಿತೆಗಳಿಂದ ಪ್ರಾರಂಭಗೊಂಡ ದಲಿತ ಸಾಹಿತ್ಯ ಇಂದು ಹೆಮ್ಮರವಾಗಿ ರೂಪ ತಳೆದುಕೊಂಡಿದೆ ಎಂದರೆ ಅದು ದಲಿತ ಚಳುವಳಿಯ ದಟ್ಟ ಪ್ರೇರಣೆ ಪ್ರಭಾವ ಎಂದು ಗುರುತಿಸಲು ಸಾಧ್ಯವಿದೆ. ಇದರ ಮುಂದುವರಿದ ಭಾಗವಾಗಿ ದಲಿತ ಆತ್ಮಕಥೆಗಳು ಕನ್ನಡ ಸಾಹಿತ್ಯದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿವೆ.

೧.೩.೩ ಕಪ್ಪು ಸಾಹಿತ್ಯ

ಭಾರತೀಯ ದಲಿತ ಸಾಹಿತ್ಯ ಸಂದರ್ಭದ ಪ್ರೇರಣೆ ಮತ್ತು ಪ್ರಭಾವದ ಹಿನ್ನೆಲೆಯನ್ನು ಗುರುತಿಸಿದಾಗ ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯ ದಟ್ಟ ಪ್ರಭಾವವನ್ನುಂಟು ಮಾಡಿದೆ. ಅಂತೆಯೇ ದಲಿತ ಬರಹಗಾರರಲ್ಲಿ ಸಾಹಿತ್ಯ ಮತ್ತು ಚಳುವಳಿಯ ರಚನೆಯಲ್ಲಿ ಆಗಾಧವಾದ ಪ್ರೇರಣೆ ಆಗಿದೆ. ಕಾರಣ ಯುರೋಪ್ ತನ್ನ ವಸಾಹತುಶಾಹಿ ಎಂಬ ದುರಾಡಳಿತದ ಮುಖಾಂತರ ಆಫ್ರಿಕನ್ ಪ್ರಜ್ಞೆಯನ್ನು ಆಕ್ರಮಿಸಿತು. ಆಫ್ರಿಕಾವನ್ನು ಅದು ತನ್ನ ಸಿದ್ಧಾಂತಗಳಲ್ಲಿ ಬಿಂಬಿಸಿಕೊಂಡಿತ್ತು. ಆಫ್ರಿಕಾದ ಮೂಲ ಸಂಸ್ಕೃತಿಗಳು ಮತ್ತು ಆಚರಣೆಗಳು ಬಹಳ ಬರ್ಬರವಾಗಿದ್ದವು. ನಮ್ಮದು ಮಮತೆಯ ದೇವರು ಎಂದು ಹೇಳುವುದರ ಮೂಲಕ ಆಫ್ರಿಕನ್ನರ ಇಡೀ ಸಮುದಾಯ ಸಂಸ್ಕೃತಿಗಳ ಮೇಲೆ ಯುರೋಪ್ ದಾಳಿ ಮಾಡಿದುದರ ಜೊತೆಗೆ ಅಖಂಡ ದಕ್ಷಿಣ ಆಫ್ರಿಕಾದ ಮೇಲೆ ಪ್ರಭುತ್ವವನ್ನು ಸಾಧಿಸಿದ ನಂತರ ಅದು ಮಾಡಿದ ಕೆಲಸ ಬಿಳಿಯರು ಶ್ರೇಷ್ಠ, ಕರಿಯರು ಕನಿಷ್ಠ ಎನ್ನುವ ದಬ್ಬಾಳಿಕೆ. ಈ ಮೂಲಕ ಕರಿಯರನ್ನು ತನ್ನ ಗುಲಾಮರನ್ನಾಗಿಸಿಕೊಳ್ಳುವ ಕಾರಣಕ್ಕಾಗಿಯೇ ಅವರ ಮೇಲೆ ಅನೇಕ ರೀತಿಯ ಕಾನೂನುಗಳನ್ನು ಜಾರಿ ಮಾಡಿದರು. ಈ ಅನೀತಿಯ ವಿರುದ್ಧ ದಕ್ಷಿಣ ಆಫ್ರಿಕಾದ ಪ್ರಜ್ಞಾವಂತ ಸಮುದಾಯವು ಪ್ರತಿಭಟನೆಯನ್ನು ಮಾಡುವುದರ ಮುಖಾಂತರ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಯಿತು. "ದಕ್ಷಿಣ ಆಫ್ರಿಕಾದ ಜನರ ದೇಹವು ಕಪ್ಪು ಬಣ್ಣವನ್ನು ಗುರಿಯಾಗಿಸಿಕೊಂಡು ಬಿಳಿಯರು ಮಾಡಿದ ಅಮಾನುಷತನಗಳ ವಿರುದ್ಧ ಆಫ್ರಿಕಾದ ಕರಿಯರು ಬುಹುದೊಡ್ಡ ಹೋರಾಟವನ್ನು ಮಾಡಿದರು"[೬೯]. ಈ ಹೋರಾಟದ ಪ್ರಯತ್ನದಿಂದ ಕಪ್ಪು ಜನರು ತಮ್ಮ ಸ್ವಾಭಿಮಾನದ ಬದುಕಿಗೆ ಮರಳುವುದರ ಜೊತೆಗೆ ಇಲ್ಲಿ

ಇದ್ದ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿಕೊಳ್ಳುವುದು ಇವರ ಮೂಲ ಉದ್ದೇಶವಾಗಿತ್ತು. ಇದೇ ಸಂದರ್ಭದಲ್ಲಿ ಅನೇಕ ಕಪ್ಪು ಬರಹಗಾರರು ತಮ್ಮ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯ ಮಾಡುವ ಅಭಿಮಾನದಿಂದ ಕಪ್ಪುತನದ ಸಾಚತನವನ್ನು ಕುರಿತಂತೆ ಸಾಹಿತ್ಯ ಸೃಷ್ಟಿಸಿದ್ದರು.

ಆಗಾಧವಾದ ಲೋಕಾನುಭವವನ್ನು ತನ್ನ ಗರ್ಭದಲ್ಲಡಗಿಸಿಕೊಂಡಿರುವ ಆಫ್ರಿಕಾವನ್ನು ಯುರೋಪಿನವರು ಪೂರ್ಣ ಪ್ರಮಾಣದಲ್ಲಿ ಅರಿತುಕೊಳ್ಳದ ಕಾರಣ ಇವರು ಹೊರಜಗತ್ತಿಗೆ ಆಫ್ರಿಕಾ ಸಮುದಾಯ ಸಂಸ್ಕೃತಿಯನ್ನು ತಪ್ಪು ತಪ್ಪಾಗಿ ಅರ್ಥೈಸುತ್ತಿದ್ದರು. ಈ ತಪ್ಪಿನಿಂದ ಎಚ್ಚೆತ್ತ ದಕ್ಷಿಣ ಆಫ್ರಿಕಾದ ಬರಹಗಾರರು ತಮ್ಮ ಕಥೆಯ, ಸಂಸ್ಕೃತಿಯನ್ನು ಹೇಳಲು ಮುಂದಾದರು. ಯುರೋಪಿಯನ್ನರು ಮಾಡಿದ ತಪ್ಪು ವ್ಯಾಖ್ಯಾನಗಳನ್ನು ಸರಿಪಡಿಸುವ ಹೊಣೆಗಾರಿಕೆಯನ್ನು ಹೊತ್ತರು ಕಾವ್ಯ, ಕಾದಂಬರಿ, ನಾನಾ ಪ್ರಕಾರಗಳಲ್ಲಿ ಅರಿವು ಮೂಡಿಸುವ ಸಾಹಿತ್ಯವನ್ನು ರಚನೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಾದ ಭಾಷೆಗಳಿಂದ ನಮ್ಮ ಕನ್ನಡ ಭಾಷೆಗೆ ಸಾಹಿತ್ಯ ಅರಿಯಲು ಇಂಗ್ಲಿಷ್ ಭಾಷೆಯ ಸಹಾಯವನ್ನು ಪಡೆಯಲಾಯಿತು.

"ಕನ್ನಡ ಸಾಹಿತ್ಯಲೋಕ ಕನಿಷ್ಠ ಪಕ್ಷ ಕಳೆದ ಎರಡು ದಶಕಗಳಿಂದಲಾದರೂ ಆಫ್ರಿಕಾ ಖಂಡದ ಸಾಹಿತ್ಯದೊಡನೆ ಸಂಪರ್ಕಸಾಧಿಸಿಕೊಂಡು ಅಲ್ಲಿನ ವಾಸ್ತವತೆಯನ್ನು ತಿಳಿಯಲೆತ್ನಿಸಿದೆ. ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ನಡೆದಿರುವ ವಿಚಾರ ಸಂಕಿರಣಗಳು, ನಿಯತಕಾಲಿಕೆಗಳು ಹಾಗೂ ಸಾಹಿತ್ಯ ಪತ್ರಿಕೆಗಳು ಪ್ರಕಟಿಸುತ್ತಾ ಬಂದಿರುವ ಆಫ್ರಿಕದ ಸಾಹಿತ್ಯವನ್ನು ಕುರಿತ ಪ್ರಬಂಧಗಳು, ಅನುವಾದಗಳು, ಕನ್ನಡ ಸಾಹಿತ್ಯಾಸಕ್ತರ ಗಮವನ್ನು ಸೆಳೆದಿವೆ"[೨೦] ಎನ್ನಬಹುದಾಗಿದೆ. ಸಮಕಾಲೀನ ಸಂಗತಿಗಳ ಬಗೆಗೆ ದಕ್ಷಿಣ ಆಫ್ರಿಕಾದ ಜಿನುವ ಅಚಿಬೆ, ಓಲೆ ಶೋಯಿಂಕಾ, ಒಕಾಟ್, ಪಿ. ಬಿಟಿಕ್ ಗೇಬ್ರಿಯಲ್, ಒಕಾರ ಮುಂತಾದ ಕವಿ ಸಾಹಿತಿಗಳನ್ನು ದಾಖಲಿಸಬಹುದಾಗಿದೆ.

"ಚಿನುವ ಅಚಿಬೆ ತನ್ನ "ಥಿಂಗ್ಸ್ ಪಾಲ್ ಅಪಾರ್ಟ್" ಎಂಬ ಕಾದಂಬರಿಯನ್ನು ಬಿಳಿಯರು ಕರಿಯರ ಬಗ್ಗೆ ಬರೆದಿರುವ ಕಟ್ಟುಕಥೆಗಳ ವಿರುದ್ಧ ಇಡೀ ಜಗತ್ತಿಗೆ ಕರಿಯ ಜನಾಂಗದ ವಾಸ್ತವ ಸಂಸ್ಕೃತಿಗಳ ಪರಿಚಯಿಸುವ ಕೆಲಸ ಮಾಡಿದ್ದಾರೆ".[೨೧] ಈ ರೀತಿಯಾಗಿ ದಕ್ಷಿಣ ಆಫ್ರಿಕಾದಲ್ಲಿ ಸಾಹಿತ್ಯ ಮತ್ತು ಕಪ್ಪು ಜನಾಂಗಿಯ ಹೋರಾಟಗಳು ಜೊತೆ ಜೊತೆಯಾಗಿ ಬಂದವು. ಇದರೊಂದಿಗೆ ಬೇರೆ ಬೇರೆ ದೇಶಗಳಿಗೂ ಸಹ ಸಾಹಿತ್ಯಿಕ ಹಾಗೂ ಹೋರಾಟೀಯ ಪ್ರೇರಣೆಗಳು ಉಂಟಾಗಿವೆ.

"ನೈಜಿರಿಯಾದ ಬರಹ ಅಂತರ್ ವೀಕ್ಷಣೆಯಲ್ಲಿ ನಿರತವಾದರೆ ಘಾನಾ ದೇಶದ ಬರವಣಿಗೆ ಅಂತರಾಷ್ಟ್ರೀಯ ಕಪ್ಪು ಪ್ರಜ್ಞೆಯ ಪರಂಪರೆಯ ಹಿನ್ನೆಲೆಯನ್ನು ಹೊಂದಿದೆ. ನೈಜೀರಿಯಾಕ್ಕಿಂತ ಭಿನ್ನವಾಗಿ ಘಾನಾ, ವೆಸ್ಟ್ ಇಂಡೀಸ್ ಮತ್ತು ಕಪ್ಪು ಅಮೇರಿಕಾದ ಸುದೀರ್ಘ ಸಂಪರ್ಕವನ್ನು ಹೊಂದಿದೆ. ಅಖಿಲ – ಆಫ್ರಿಕನ್‌ವಾದವೆಂಬ ಪರಿಕಲ್ಪನೆಯನ್ನು ಲೇಖಕರಾದ ಆಯಿಕೈ ಅರ್ಮಾ ಮತ್ತು ಕೋಫಿ ಚಾಲ್ತಿಗೆ ತಂದರು. ಗುಲಾಮರ ಮಾರಾಟ, ವಸಾಹತುಶಾಹಿ, ಪಾರಂಪರಿಕ ಆಫ್ರಿಕಾದ ವಿನಾಶ – ಇವುಗಳನ್ನೆಲ್ಲ ಈ ಲೇಖಕರು ಬಲ್ಲವರಾಗಿದ್ದರು. ಈ ನೆಲೆಯಲ್ಲಿ ಸಾಹಿತ್ಯಿಕ ರೂಪ ಮತ್ತು ಶೈಲಿಯನ್ನು ಅತ್ಯಂತ ಪ್ರಜ್ಞಾಪೂರ್ವಕವಾಗಿ ರಚನೆ ಮಾಡತೊಡಗಿದ್ದರು"[೭೨]

ಈ ಎಲ್ಲಾ ಹಿನ್ನೆಲೆಯಲ್ಲಿ ಕಪ್ಪು ಸಾಹಿತ್ಯವು ಕಥೆಯಾಗಿ, ಕಾದಂಬರಿಯ ಸ್ವರೂಪವನ್ನು ಪಡೆದುಕೊಂಡು, ಕಾವ್ಯವಾಗಿ ಬೆಳೆದು ಹತ್ತೊಂಬತ್ತನೆಯ ಶತಮಾನದಿಂದ ಆತ್ಮಚರಿತ್ರೆ ಆಫ್ರಿಕನ್ ಸಾಹಿತ್ಯದ ಒಂದು ಪ್ರಕಾರವಾಗಿ ಮೂಡಿಬಂತು. ಇಂದಿಗೂ ಕೂಡ ಇದು ಒಂದು ಪ್ರಧಾನ ಸಾಹಿತ್ಯ ಪ್ರಕಾರವಾಗಿ ಮುಂದುವರಿದಿದೆ. "ವ್ಯಕ್ತಿ ಬೇರೆ ಬೇರೆ ಸಂಸ್ಕೃತಿಗಳ ನಡುವೆ ಸಂಚರಿಸುತ್ತಾ ಕಳೆದು ಹೋದ ಗತವನ್ನು ಮರಳಿ ಪಡೆಯಲು ಯತ್ನಿಸುತ್ತಾ ಆಸ್ಮಿತೆಯ ಬೆಳವಣಿಗೆಯನ್ನು ಚೆನ್ನಾಗಿ ದಾಖಲಿಸುವುದರಿಂದ ಎಕಮರಾಲಾಯೆ ಪೀಟರ್ ಏಬ್ರಹಾಮ್ಸ್, ಎಜಿಕೀಲ್ ಮಫಲೀಲೆ ಹಾಗೂ ಬ್ಲೋಕ್ ಮೋಡಿಸಾನೆ ಅವರ ಆತ್ಮಚರಿತ್ರೆಗಳಲ್ಲಿ ನಾಗರೀಕ ಜಗತ್ತಿನಲ್ಲಿ ಬೆಳೆಯುತ್ತಾ ಬಿಟ್ಟು ಬಂದ ಗ್ರಾಮೀಣ ಬಾಲ್ಯವನ್ನು ನೆನೆಯುವ ರೀತಿಯಲ್ಲಿ ಚಿತ್ರಿತವಾಗಿದೆ. ಉಪನಗರಗಳ ಬೆಚ್ಚಗಿನ ವಾತಾವರಣವನ್ನು ದಾಖಲಿಸುತ್ತಲೇ ಈ ಆತ್ಮಚರಿತ್ರೆಗಳು ಹೆಚ್ಚುತ್ತಿರುವ ಬಡತನ, ಕೊಳಕು ಮತ್ತು ನಗರ ಜೀವನದ ಒರಟುತನವನ್ನು ಪ್ರತಿಫಲಿಸುತ್ತವೆ. ಅಂತೆಯೇ ಜೇಮ್ಸ್ ಒಲ್ನಿ ಎಂಬುವವರು ಬರೆದಿರುವಂತೆ ದಕ್ಷಿಣ ಆಫ್ರಿಕಾದ ಆತ್ಮಚರಿತ್ರೆಗಳು ಉಪನಗರಗಳ ಬದುಕು ಅರ್ಥ ಕಳೆದುಕೊಂಡಿರುವಂಥದ್ದು ಎಂಬುದಾಗಿ ಚಿತ್ರಿಸಿವೆ".೭೩ ಹೀಗೆ ದಕ್ಷಿಣ ಆಫ್ರಿಕಾದ ಆತ್ಮಕಥನಕಾರು ಸಾಮಾನ್ಯ ಜೀವನದ ಚಿತ್ರಣದೊಂದಿಗೆ ಅವರುಗಳು ಅನುಭವಿಸಿದ ನೋವು, ಸಂಕಟ, ಅಪಮಾನ, ಅಸ್ಪೃಶ್ಯತೆ, ಜಾತೀಯತೆಯ ಕರಾಳ ರೂಪವನ್ನು ಬಿಚ್ಚಿಡುತ್ತಾರೆ. ಈ ಬಗೆಯ ಸಾಹಿತ್ಯದ ಸೂಕ್ಷ್ಮ ನೋಟಗಳು ಸಹ ಕನ್ನಡ ದಲಿತ ಲೇಖಕರಿಗೆ ಪ್ರಭಾವ ಉಂಟು ಮಾಡದೆ ಇರಲಾರವು. ಸಾಹಿತ್ಯ ಮತ್ತು ಹೋರಾಟ ಜೊತೆ ಜೊತೆಯಾಗಿ ಮೂಡಿಬಂದಿವೆ.

ಬೆಂಜಮಿನ್ ಮೆಲಾಯಿಸ್ ಎಂಬ ಹೋರಾಟಗಾರನು ಬರೆದ ಕವಿತೆ ಹೀಗಿದೆ

"ಹೆಮ್ಮೆ ನನಗೆ ಹೀಗಿರುವುದಕ್ಕೆ
ಎದೆತಟ್ಟಿಕೊಳ್ಳುವೆ ನಾನು ಮಾಡಿದ್ದಕ್ಕೆಲ್ಲ
ಮಳೆಯಂತೆ ನನ್ನ ನಾಡಿನ ಮೇಲೆ
ಚೆಲ್ಲಿಹುದು ನನ್ನ ರಕ್ತ
ನಾನು ಹೊರಟಿರುವೆ ಬಿಡುಗಡೆಗಾಗಿ
ಇರುವುದೊಂದು ಬದುಕು ಕೊಡುವೆ ಸ್ವಾತಂತ್ರ್ಯಕ್ಕಾಗಿ"[೭೪]

ಎನ್ನುವ ಈ ಬಗೆಯ ನೂರಾರು ಕವಿತೆಗಳು ದಕ್ಷಿಣ ಆಫ್ರಿಕಾದ ಬರಹಗಾರರಲ್ಲಿ ಮತ್ತಷ್ಟು ಚಿಂತನೆ ಮಾಡುವುದರ ಜೊತೆಗೆ ಬಿಡುಗಡೆಯ ನೆಲೆಯನ್ನು ಕಾಣುವಂತೆ ಮಾಡಿದವು. ಈ ಎಲ್ಲಾ ಪ್ರೇರಣೆಯಿಂದ ಭಾರತೀಯ ಸಾಹಿತ್ಯ ಸಮಾಜದೊಂದಿಗೆ ಕರ್ನಾಟಕದ ಕನ್ನಡ ದಲಿತ ಸಾಹಿತ್ಯದ ಮೇಲು ಪ್ರಭಾವನ್ನು ಗುರುತಿಸಬಹುದಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯೂ ಬೃಹತ್ ಅಸಮಾನತೆಯಿಂದ ಕೂಡಿದ ಈ ಸಮಾಜದಲ್ಲಿ ಸಾಮಾಜಿಕ ಸುಧಾರಕರು ಸಮ-ಸಮಾಜದ ಪರಿಕಲ್ಪನೆಯನ್ನು ಹುಟ್ಟು ಹಾಕುವಲ್ಲಿ ಪ್ರಯತ್ನಪಟ್ಟರು. ಅಂತೆಯೇ ದೀನ ದಲಿತರಿಗೆ, ಹಿಂದುಳಿದ ಜನಾಂಗದವರಿಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸ್ಥಾನಮಾನವನ್ನು ಕಲ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಮಹಾತ್ಮ ಜ್ಯೋತಿಬಾಫುಲೆ, ಮಹಾತ್ಮಗಾಂಧಿ, ಅಂಬೇಡ್ಕರ್, ರಾಮ ಮನೋಹರ ಲೋಹಿಯಾ ಮತ್ತು ಕಾರ್ಲ್‌ಮಾರ್ಕ್ಸ್ ಮೊದಲಾದವರು. ಇವರುಗಳ ಚಿಂತನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತಂದು ಆ ವ್ಯಕ್ತಿ ತನ್ನ ನೆಲೆಯನ್ನು ಕಟ್ಟಿಕೊಳ್ಳುವಲ್ಲಿ ಪ್ರೇರಣೆಯನ್ನುಂಟು ಮಾಡುವುದೇ ಆಗಿತ್ತು. ಇದರೊಂದಿಗೆ ಭಾರತೀಯ ದಲಿತ ಸಾಹಿತ್ಯವು ಮತ್ತಷ್ಟು ಬೆಳೆಯಲು ಇವರ ಚಿಂತನೆಗಳು ಪ್ರೇರಣೆಯನ್ನುಂಟು ಮಾಡಿವೆ. ಹಾಗಾಗಿ ಈ ಸಾಮಾಜಿಕ ಚಿಂತಕರ ಚಿಂತನೆಗಳನ್ನು ಕುರಿತಂತೆ ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು.

೧.೩.೪ ಮಹಾತ್ಮ ಜ್ಯೋತಿ ಬಾಫುಲೆ

ಆಧುನಿಕ ಭಾರತದಲ್ಲಿ ಸನಾತನೀಯ ಸಂಪ್ರದಾಯಸ್ಥ ಸಾಮಾಜಿಕ ವ್ಯವಸ್ಥೆಯ ರಚನೆಯ ವಿರುದ್ಧ ಬಂಡಾಯದ ಬಾವುಟ ಹಾಗೂ ಧ್ವನಿ ಎತ್ತಿರುವ ಮೊಟ್ಟ ಮೊದಲ ಮಹಾಪುರುಷ ಮಹಾತ್ಮ ಜ್ಯೋತಿ ಬಾಫುಲೆಯವರು. ಇವರು ಮಹಾರಾಷ್ಟ್ರ ರಾಜ್ಯದ ಸತಾರಾದ ಸುಮಾರು ೪೦ ಕಿ.ಮೀ. ದೂರದಲ್ಲಿರುವ ಕುಟಗುಣ ಗ್ರಾಮದ ಗೋವಿಂದರಾವ್ ಮತ್ತು ಚಿಮಣಾಬಾಯಿ ಎಂಬ ದಂಪತಿಗಳ ಮಗನಾಗಿ ೧೮೨೭ ಫೆಬ್ರವರಿ ೩೦ ರಂದು ಜನಿಸಿದರು. ಇವರು

ಹಿಂದುಳಿದ 'ಮಾಲಿ' ಜಾತಿಯ ಮೂಲದವರಾಗಿದ್ದು ಹೂ ಮಾರುವುದರಲ್ಲಿ ಪರಿಣಿತರು. ಆದ್ದರಿಂದ ಇವರ ವಂಶವನ್ನು "ಫುಲೆ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು.

ಜ್ಯೋತಿಬಾಫುಲೆಯ ಬಾಲ್ಯದ ದಿನಗಳು ಬಹಳ ಕಷ್ಟಕರವಾಗಿ ಕಂಡುಬರುತ್ತವೆ. ತಂದೆ ಗೋವಿಂದರಾವ್ ಬಹಳ ಬುದ್ಧಿವಂತರು. ಸಾಕಷ್ಟು ಅನುಕೂಲಸ್ಥರಾಗಿದ್ದರು. ಈ ಹಿನ್ನೆಲೆಯಲ್ಲಿ ಬಾಲಕನಾದ ಜ್ಯೋತಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಿಸುತ್ತಾರೆ. ಓದಿನಲ್ಲಿ ಮುಂದೆ ಇದ್ದ ಜ್ಯೋತಿಯ ಸಾಧನೆಯನ್ನು ಕಂಡು 'ಗೋವಿಂದರಾವ್ ಅವರ ಅಂಗಡಿಯಲ್ಲಿ ಕೆಲಸಕ್ಕಿದ್ದಂತಹ ವೈದಿಕ ಗುಮಾಸ್ತನೊಬ್ಬನು ಜ್ಯೋತಿಬಾಫುಲೆಯವರ ವಿದ್ಯಾಭ್ಯಾಸಕ್ಕೆ ಕಲ್ಲು ಹಾಕುತ್ತಾನೆ. "ಗೋವಿಂದರಾಯರೇ ಹುಡುಗನನ್ನು ಯಾಕೆ ಸುಮ್ಮನೆ ಶಾಲೆಗೆ ಸೇರಿಸಿ ಹಾಳು ಮಾಡುತ್ತೀರಾ? ಮುಂದೆ ಹೆಚ್ಚು ಓದಿದರೆ ನಿಮ್ಮ ಹೊಲಗದ್ದೆ ಅಂಗಡಿಗಳನ್ನು ಯಾರು ನೋಡಿಕೊಳ್ಳುತ್ತಾರೆ. ಮದುವೆ ಮಾಡಿಬಿಡಿ. ಶೂದ್ರರು ಓದಿದರೆ ನಿಮಗೇ ಕೇಡು"[೭೫] ಎಂದು ಪಿತೂರಿ ಮಾಡಿ ಬಾಫುಲೆಯನ್ನು ಶಾಲೆಯಿಂದ ಬಿಡಿಸುತ್ತಾನೆ. ಆದರೆ ಫುಲೆಗೆ ತುಂಬಾ ಬೇಸರವಾಗಿ ಛಲ ಬಿಡದೆ ಜ್ಞಾನದಾಸೋಹವನ್ನು ತಣಿಸಿಕೊಳ್ಳುತ್ತಿದ್ದರು. ಬಾಲಕನ ಆಸಕ್ತಿಯನ್ನು ಗಮನಿಸಿದ ಜ್ಯೋತಿ ಬಾಫುಲೆಯವರ ಶಿಕ್ಷಕರಾಗಿದ್ದ ಗಫಾರ್ ಮುನ್ಷಿ ಬೇಗ್ ಮತ್ತಲೇಗಿಟ್ ಎಂಬುವರು ಮತ್ತೆ ಫುಲೆಯವರನ್ನು ಶಾಲೆಗೆ ಸೇರಿಸಿದರು. ಈ ಬಗೆಯ ಪರಿಸ್ಥಿತಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ನಮ್ಮ ಕನ್ನಡ ದಲಿತ ಆತ್ಮಕಥನಕಾರರು ಇಂತಹ ಸನ್ನಿವೇಶಗಳನ್ನು ಎದುರುಸಿದ್ದಾರೆ. ಹಾಗೂ ಇಂದು ನಮ್ಮ ನಮ್ಮ ಶಾಲೆಯಲ್ಲಿ ಶಿಕ್ಷಕರಾಗಿದ್ದ ಕೆಲವು ಗುರುಗಳ ಆಶೀರ್ವಾದದಿಂದ ಅವರ ಪ್ರೀತಿಯ ರಕ್ಷಣೆಯಿಂದ ದಲಿತ ವಿದ್ಯಾರ್ಥಿಗಳು ಹಾಗೂ ಹಿಂದುಳಿದ ವಿದ್ಯಾರ್ಥಿಗಳು ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮುಂದೆ ಬರುತ್ತಿರುವುದನ್ನು ಕಾಣಬಹುದಾಗಿದೆ. ಅಂತೆಯೇ ಜ್ಯೋತಿ ಬಾಫುಲೆಯವರು ೧೩ನೇ ವಯಸ್ಸಿಗೆ ೯ನೇ ವರ್ಷದ ಸಾವಿತ್ರಿಬಾಯಿ ಅವರನ್ನು ಬಾಲ್ಯವಿವಾಹ ಮಾಡಿಕೊಂಡರು. ಹೀಗಿದ್ದರೂ ಸಹ ೧೮೪೧ರಲ್ಲಿ ಮತ್ತೇ ಶಾಲೆಗೆ ಸೇರಿ ವಿದ್ಯಾಭ್ಯಾಸದಲ್ಲಿ ಆಸಕ್ತಿ ತೋರಿ ಇಂಟರ್ ಮೀಡಿಯಟ್‌ನ್ನು ಮೊದಲ ದರ್ಜೆಯಲ್ಲಿ ಉತ್ತೀರ್ಣರಾಗುತ್ತಾರೆ.

ಇಂತಹ ಸಂದರ್ಭದಲ್ಲಿ ಜ್ಯೋತಿ ಬಾಫುಲೆಯವರ ಜೀವನದಲ್ಲಿ ಒಂದು ಅವಮಾನಕರವಾದ ಘಟನೆ ನಡೆಯುತ್ತದೆ. ವೈದಿಕ ಸ್ನೇಹಿತನೊಬ್ಬನ ಮದುವೆಯ ಮೆರವಣಿಗೆಯಲ್ಲಿ ಗಂಡಿನ ದಿಬ್ಬಣದಲ್ಲಿ ಭಾಗವಹಿಸುತ್ತಾರೆ. ವೈದಿಕರ ಜೊತೆಯಲ್ಲಿ ಶೂದ್ರನೊಬ್ಬನು ಸೇರಿಕೊಂಡು ಸರಿಸಮಾನವಾಗಿ ನಡೆಯುತ್ತಿರುವುದನ್ನು ಗಮನಿಸಿದ ಮತಾಂಧ ವೈದಿಕರು ಕೆಂಡಮಂಡಲವಾಗುತ್ತಾರೆ.

ವ್ಯಗ್ರಗೊಂಡ ಈ ಪುರೋಹಿತರು ಜ್ಯೋತಿ ಬಾಫುಲೆ ಅವರನ್ನು "ಎಲಾ ಕೆಳಜಾತಿ ಶೂದ್ರ ಮುಂಡೇದೇ ನೀನೆಲ್ಲಿ, ಶ್ರೇಷ್ಠರಾದ ನಾವೆಲ್ಲಿ! ಜಾತಿ ಕುಲಗೋತ್ರ ಕೆಡಿಸೋಕೆ ನಮ್ಮ ಜೊತೆಗೆ ಬರೋಷ್ಟು ಧೈರ್ಯ ಬಂತೇನೋ ನಿನಗೆ"[೭೬] ಎಂದು ಮೆರವಣಿಗೆಯಿಂದ ಆಚೆಗೆ ದರದರನೆ ಎಳೆದುಕೊಂಡು ಥಳಿಸಿ ಹೊರದಬ್ಬುತ್ತಾರೆ. ಈ ಅವಮಾನದಿಂದ ಕುಗ್ಗಿ ಹೋದ ಫುಲೆಯವರು ತಂದೆಯ ಬಳಿ ಕಣ್ಣೀರು ಸುರಿಸಿಕೊಂಡು ತಮ್ಮ ನೋವನ್ನು ಹಾಗೂ ಅವಮಾನವನ್ನು ಹೇಳಿಕೊಳ್ಳುತ್ತಾರೆ. ಇಂತಹ ಅವಮಾನ, ನಿಂದನೆ ಅಸಮಾನತೆಗಳು ವಿಶ್ವದ ಪ್ರತಿಯೊಬ್ಬ ಸಮಾಜ ಸುಧಾರಕರಿಗೆ ಆಗಿರುವುದು ಇತಿಹಾಸದಲ್ಲಿ ದಾಖಲಾಗಿದೆ. "ಮಗು ನಾವು ಕೆಳಜಾತಿಯ ಶೂದ್ರರು ಶ್ರೇಷ್ಠರಾದ ವೈದಿಕರ ಜೊತೆ ಅಲ್ಲ! ಅವರ ಹತ್ತಿರಾನೂ ಹೋಗಬಾರದು ನೀನು ಹೋಗಿ ತಪ್ಪು ಮಾಡಿದ್ದಿಯಾ ನಿನ್ನನ್ನು ಅವರು ಸುಮ್ಮನೆ ಬಿಟ್ಟಿರುವುದೇ ಹೆಚ್ಚು"[೭೭] ಎಂದು ತಂದೆ ಸಮಾಧಾನಪಡಿಸುತ್ತಾರೆ. ಈ ಸಮಾಧಾನದಿಂದ ತೃಪ್ತನಾಗದ ಫುಲೆ ಅವರು ಸಮೀಪದ ನದಿಯ ತೀರು ಕುಳಿತುಕೊಂಡಿರುವಾಗ ಅಸ್ಪೃಶ್ಯ ಮಹಾರ್ ಮಾಂಗ್ ಜಾತಿಯವರು ಮಧ್ಯಾಹ್ನ ಊರಿನೊಳಗೆ ಪ್ರವೇಶಿಸಲು ಕತ್ತಿಗೆ ಕಂಡಿಕೆ ಹಾಗೂ ಸೊಂಟಕ್ಕೆ ಪೊರಕೆ ಕಟ್ಟಿಕೊಂಡು ಯಾವುದೋ ಮದುವೆ ಸಂಭ್ರಮಕ್ಕೆ ಹೋಗುವವರ ಹಾಗೇ ತಯಾರಾಗುತ್ತಿರುವ ಸಂದರ್ಭವನ್ನು ಗಮನಿಸುತ್ತಾರೆ. ಆಗ ಫುಲೆಯವರು "ನನಗೆ ಮದುವೆಯ ಮನೆಯಿಂದ ಹೊರಹಾಕಿದ್ದಕ್ಕೆ ಅವಮಾನ ಸಂಕಟವಾಗುತ್ತಿದೆ. ಆದರೆ ಈ ಜನರನ್ನು ಊರಿಂದ ಆಚೆಗೆ ಹಾಕಿ ನಾಯಿ – ನರಿ – ಹಂದಿಗಳಿಗಿಂತಲೂ ಕೀಳಾಗಿ, ಕ್ರೂರವಾಗಿ ಅವಮಾನ, ಅಸಹ್ಯಗಳಿಂದ ಕಂಡರೂ ಸಹ ಈ ಸಮುದಾಯಕ್ಕೆ ಅದ್ಯಾವುದರ ಅರಿವೆ ಇಲ್ಲದೆ ಸ್ವಾಭಿಮಾನ ರಹಿತವಾಗಿ ಪ್ರಾಣಿಗಳಂತೆ ಜೀವಿಸುತ್ತಿದ್ದಾರಲ್ಲ, ಎಂದು ತಮ್ಮ ಮನಸ್ಸಿನಲ್ಲಿಯೇ ಪ್ರಶ್ನಿಸಿಕೊಂಡು ಇವರು ನಾವೆಲ್ಲ ಹಿಂದೂಗಳು, ಆದರೂ ಮೇಲು ಕೀಳು ಇದೆಲ್ಲಾ ಏಕೆ, ಬೇಧ – ಭಾವಗಳು ತುಂಬಿವೆ! ಇದರ ಮೂಲವೇನು? ಇದರ ನಿವಾರಣೆ ಹೇಗೆ"[೭೮] ಎಂದು ಆಲೋಚನೆ ಮಾಡಿ ಈ ಅಸ್ಪೃಶ್ಯ ಜನರ ಈ ಸಮಸ್ಯೆಗೆ ಮುಕ್ತಿ ನೀಡಬೇಕೆಂದು ಚಿಂತಿಸಿದ್ದರು. ಈ ಸಮಸ್ಯಗೆ ಪರಿಹಾರ ಶಿಕ್ಷಣವೇ ಮದ್ದು ಎಂದು ತಿಳಿದಿದ್ದರು. ಈ ಅಸ್ಪೃಶ್ಯರು ಅನುಭವಿಸುತ್ತಿದ್ದ ಅವಮಾನವನ್ನು ಕಂಡ ಫುಲೆಯವರು ಹಿಂದೂ ಧರ್ಮವನ್ನು ಕುರಿತು ವಿಲ್ಸನ್ ವಿಲಿಯಂ ಜೋನ್ಸ್ ಬರೆದಿರುವಂತಹ ಗ್ರಂಥಗಳನ್ನು ಕುರಿತು ಅಧ್ಯಯನ ಮಾಡಿ, ವೈದಿಕರು ತಮ್ಮ ಸ್ವಾರ್ಥಕ್ಕಾಗಿ ಶೂದ್ರಾತೀಶೂದ್ರರಿಗೆ ವಿದ್ಯೆಯನ್ನು ನಿಷೇಧಿಸಿ, ಕಗ್ಗತ್ತಲಿನಲ್ಲಿ ಇಟ್ಟಿರುವುದು ಮನವರಿಕೆಯಾಗುತ್ತದೆ. ಈ ಶೋಷಣೆಯಿಂದ ಶೂದ್ರಾತಿ ಶೂದ್ರರಿಗೆ ವಿದ್ಯೆಯನ್ನು ನೀಡಲು ತಮ್ಮ ಜೀವಮಾನವನ್ನು ಮೀಸಲಿಡುತ್ತಾರೆ. ಹೀಗೆ ಇವರ ಜೀವನಕ್ರಮವು ದಲಿತರಿಗೆ ಪರಿಪಾಠವಾಗುತ್ತದೆ. ಅಂತಯೇ ಇವರ ಪ್ರೇರಣೆಯಿಂದ ನಮ್ಮ

ಕನ್ನಡ ದಲಿತ ಸಾಹಿತ್ಯವು ಶ್ರೀಮಂತವಾಗಿದೆ. ಫುಲೆಯ ಚಿಂತನೆಗಳನ್ನು ನಮ್ಮ ದಲಿತ ಬರಹಗಾರರು ಧ್ಯಾನೀಸಿ ಸಾಹಿತ್ಯದಲ್ಲಿ ಬಳಸಿ ಇಡೀ ಸಮುದಾಯವೇ ಎಚ್ಚರಿಕೆಯಿಂದ ಜೀವನ ಸಾಗಿಸಲು ಪರಿಹಾರಗಳನ್ನು ಹುಡುಕುವ ಜಾಗೃತ ಪ್ರಜ್ಞೆಯನ್ನು ಬೆಳಸಿದೆ ಎಂದು ಗ್ರಹಿಸಬಹುದು.

೧.೩.೫. ಮಹಾತ್ಮಗಾಂಧಿ

ಭಾರತೀಯ ಸಾಮಾಜಿಕ ಸುಧಾರಕರಲ್ಲಿ ಹಾಗೂ ಭಾರತ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖ ವ್ಯಕ್ತಿ ಮಹಾತ್ಮಗಾಂಧಿ. ಇವರು ಮೂಲತಃ ಬನಿಯಾ ಜಾತಿಯ ಮನೆತನದವರು. ದಿನಾಂಕ ೦೨ ಅಕ್ಟೋಬರ್ ೧೮೬೯ರಂದು ಪೋರಬಂದರ್‌ನಲ್ಲಿ ಕರಮಚಂದ್ರಗಾಂಧಿ ಮತ್ತು ಪುತಲಿಬಾಯಿಯವರ ಮಗನಾಗಿ ಜನಿಸಿದರು. ಇವರು ಬಾಲ್ಯದಿಂದ ಹಿಡಿದು ತಮ್ಮ ಜೀವಿತಾವಧಿಯವರೆಗೆ ಸಾಮಾಜಿಕ ಕಳಕಳಿ ಹಾಗೂ ರಾಷ್ಟ್ರಪ್ರೇಮವನ್ನು ಬೆಳೆಸಿಕೊಂಡವರು. ಇಂತಹ ಮಹಾನ್ ಚಿಂತಕನ ಚಿಂತನೆಗಳು ಭಾರತೀಯ ದಲಿತ ಸಾಹಿತ್ಯದ ಮೇಲೆ ಹಾಗೂ ಕನ್ನಡ ದಲಿತ ಸಾಹಿತ್ಯ ಹಾಗೂ ಆತ್ಮಕಥೆಗಳ ಮೇಲೆ ಅಗಾಧವಾದ ಪ್ರಭಾವ ಬೀರಿರುವುದನ್ನು ಗುರುತಿಸಲು ಸಾಧ್ಯವಿದೆ.

ಅರವಿಂದ ಮಾಲಗತ್ತಿಯವರ ಮೇಲೆ ಗಾಂಧೀಜಿಯವರ ಬಾಲ್ಯವು ಪ್ರಭಾವ ಬೀರಿರುವುದನ್ನು ಗುರುತಿಸಬಹುದು. ಮಾಲಗತ್ತಿಯವರು ತಮ್ಮ ಆತ್ಮಕಥನವಾದ ಗೌರ್ಮೆಂಟ್ ಬ್ರಾಹ್ಮಣದಲ್ಲಿ ಧೈರ್ಯದಿಂದ ಪ್ರಾಮಾಣಿಕವಾಗಿ ತಮ್ಮ ಹೆಸರನ್ನು ಕಪ್ಪು ಹಲಗೆಯ ಮೇಲೆ ಬರೆಯುವುದನ್ನು ಕಾಣಬಹುದು. ನಾಳಿನ ಕಸದ ಪಾಳಿ : ಮಾಲಕತ್ತಿ ಎಂದು ಬರೆಯಲಾಗಿತ್ತು. ಇದರಿಂದ ಬೇಸರಗೊಂಡಿದ್ದ ಆತ್ಮಕಥನಕಾರರಾದ ಅರವಿಂದ ಮಾಲಗತ್ತಿಯವರು ಕರಿಹಲಗೆಯ ಮೇಲೆ ಮಾಲಕತ್ತಿ ಎಂದು ಬರೆದಿದ್ದ ಮೇಸ್ತ್ರ ಬರಹವನ್ನು ತಿದ್ದುವ ಪ್ರಯತ್ನ ಮಾಡುತ್ತಾರೆ. “ಮುಂಚಿತವಾಗಿ ಕಸಗುಡಿಸುವ ಹೋದರೂ ಅಂದು ಗುರುಗಳ ಅನುಮತಿ ಪಡೆದು ಮಂತ್ರಿವರ್ಯರು ಕೊಟ್ಟಿದ್ದು. ಗುರುಗಳ ಕುರ್ಚಿಯನ್ನು ಸರಿಸಿ ಅದರ ಮೇಲೆ ನಿಂತು “ಮಾಲಕತ್ತಿ” ಎಂದು ಬರೆದಿದ್ದನ್ನು ಅಲ್ಲಿಯ ‘ಕ’ಕಾರ ತೆಗೆದು ‘ಗ’ ಕಾರ ಬರೆಯಲು ಹವಣಿಸುತ್ತಿದ್ದರು. ಇದನ್ನು ಗುರುತಿಸಿದ ಜಾತಿವಾದಿ ಶಿಕ್ಷಕರು “ಕತ್ತಿ” ಅಂತ ಬರೆದ್ರ ಏನಾಯ್ತು? ಗತ್ತಿ ಅಂತ ಮಾಡಕ ಹೋಗಿದ್ಯಾ? ಮಗಾ ಬರ್‍ಯಾಕ ಬಂತು ಅಂತ ತಿದ್ದಾಕ ಹೋಗ್ಯಾನ ..... ಕತ್ತಿ ...... ಕತ್ತಿನೇ ..... ಕತ್ತೆಲ್ಲರ ಕುದುರ್‍ಯಾಕ್ಕದೇನ ...... ಕತ್ತಿಗೆಲ್ಲ ಯಾಕಬೇಕು. ಹತ್ತಿ ಕಾಳ ನೀರ? ಎಂದು ಮನ ತುಂಬುವವರೆಗೆ ಹೊಡೆದರು”[೬] ಈ ರೀತಿ ಅವಮಾನವನ್ನು ಎದುರಿಸುತ್ತಾರೆ. ಆದರೆ ಈ ಎಲ್ಲಾ

ರೀತಿಯ ಬಿಚ್ಚು ನುಡಿಗಳನ್ನು ಕನ್ನಡ ದಲಿತ ಆತ್ಮಕಥನಕಾರರು ಯಾವುದೇ ಸಂಕೋಚ ಸ್ವಭಾವವಿಲ್ಲದೆ ಬಿಚ್ಚಿಡುತ್ತಾರೆ. ಮಹಾತ್ಮಗಾಂಧಿಯವರು ಬಾಲ್ಯಶಿಕ್ಷಣದ ಸಂದರ್ಭದಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸಂದರ್ಭದಲ್ಲಿ ವಿಷಯತಜ್ಞರು ಪರಿಶೀಲನೆಗಾಗಿ ಶಾಲೆಗೆ ಬಂದಿರುತ್ತಾರೆ. ಇಂತಹ ಸಂದರ್ಭದಲ್ಲಿ ಗಾಂಧೀಜಿಗೆ ೫ ಪದಗಳನ್ನು ಬರೆಯಲು ಹೇಳುತ್ತಾರೆ. ಆದರೆ ಗಾಂಧಿ ಬೇರೆಯ ಬಳಿ ನಾನು ನೋಡಿ ಬರೆಯಲು ನನ್ನ ಮನಸ್ಸು ಒಪ್ಪುವುದಿಲ್ಲ ಎಂದು ಗುರುಗಳಿಗೆ ಹೇಳುತ್ತಾರೆ. ಇಂತಹ ಹಲವಾರು ಘಟನೆಗಳು ಭಾರತೀಯ ದಲಿತರ ಸಾಹಿತ್ಯದ ಮೇಲೆ ಪ್ರಭಾವ ಬೀರುತ್ತವೆ.

ಭಾರತೀಯ ಜನಜೀವನದ ಮೇಲೆ ಗಾಂಧೀಜಿಯವರ ಪ್ರಭಾವ ದಟ್ಟವಾದುದು. ಗಾಂಧೀಜಿಯವರ ಹೋರಾಟ ಮುಖ್ಯವಾಗಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸುವ ಉದ್ದೇಶ ಹೊಂದಿತ್ತು. ಇವರು ಒಬ್ಬ ಚಿಂತನಶೀಲ ವ್ಯಕ್ತಿಯಾಗಿದ್ದುದರಿಂದ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳನ್ನು ರೂಪಿಸುವಾಗ ಭಾರತೀಯ ಜನಜೀವನದ ಸ್ಥಿತಿಗತಿಗಳನ್ನು ಚೆನ್ನಾಗಿಯೇ ಅರಿತಿದ್ದರು. ಉನ್ನತ ವ್ಯಾಸಾಂಗಕ್ಕಾಗಿ ದಕ್ಷಿಣ ಆಫ್ರಿಕಾಕ್ಕೆ ಹೋಗಿ ಅಲ್ಲಿ ಕಾನೂನು ವಿಷಯದ ಅಧ್ಯಯನ ಮಾಡುವಾಗಲೇ ಅಲ್ಲಿನ ವರ್ಣಭೇದ ನೀತಿಯ ವಿರುದ್ಧ ಹೋರಾಟ ಮಾಡಿದ್ದರು. ದಕ್ಷಿಣ ಆಫ್ರಿಕಾದಲ್ಲಿರುವಾಗಲೇ ಅಸಹಕಾರ ಚಳುವಳಿ ಸತ್ಯಾಗ್ರಹ, ಕರನಿರಾಕರಣೆ ಮತ್ತು ಉಪವಾಸ ಮುಂತಾದ ಹೋರಾಟದ ಅಸ್ತ್ರಗಳನ್ನು ಗಾಂಧೀಜಿ ಕಂಡುಕೊಂಡಿದ್ದು ಗಾಂಧೀಜಿ ಅವರು ಭಾರತಕ್ಕೆ ಬಂದ ಮೇಲೆ ಸ್ವಾತಂತ್ರ್ಯ ಚಳುವಳಿಗೆ ಧುಮುಕುವಾಗ ಭಾರತದ ಸಾಂಪ್ರದಾಯಿಕ ಮತ್ತು ಸರಳ ವಸ್ತ್ರಕ್ಕೆ ಮೊರೆ ಹೋದರು. ಈ ಹಿನ್ನೆಲೆಯನ್ನು ಗಮನಿಸಿದಾಗ ಬರಗೂರು ರಾಮಚಂದ್ರಪ್ಪರ ಮಾತು ಬಹಳ ಮುಖ್ಯವೆನಿಸುತ್ತದೆ. "ಗುಜರಾತಿ ಪೇಟದಿಂದ ಖಾದಿ ಟೋಪಿಗೆ ಪುಲ್ ಸೂಟಿನಿಂದ ಅರಬೆತ್ತಲೆ ಉಡುಪಿಗೆ ಆದ ಸ್ಥಿತ್ಯಂತರವನ್ನು, ಹಾಗೂ ನನ್ನ ದೃಷ್ಟಿಯಲ್ಲಿ ಇದು ಕೇವಲ ಉಡುಪಿನ ಬದಲಾವಣೆ ಅಲ್ಲ; ಚಿಂತನೆಗಳ ಬದಲಾವಣೆ, ಚಾರಿತ್ರಿಕ ಸ್ಥಿತ್ಯಂತರ".[೮೦] ಈ ಸ್ಥಿತ್ಯಂತರದ ಹಿನ್ನೆಲೆಯನ್ನು ಗಮನಿಸಿದಾಗ ಧೋತಿ ನಿಲುವಂಗಿ ಮತ್ತು ಪಟಗಳನ್ನು ಸುತ್ತಿಕೊಂಡು, ಭಾರತದ ಧರ್ಮಗಳು ಸಾವಿರಾರು ವರ್ಷ ಬೋಧಿಸಿದ ಸತ್ಯ, ಅಹಿಂಸೆ ಮತ್ತು ಉಪವಾಸಗಳೆಂಬ ಧಾರ್ಮಿಕ ಆಯುಧಗಳಿಗೆ ರಾಜಕೀಯದ ಲೇಪನ ಮಾಡಿ ಅಸಹಕಾರವೆಂಬ ಹರತಾಲವೆಂಬ ತೀರಾ ಮೃದುವೂ ನಿರುಪಾಯವೂ ಮತ್ತು ಬಲಶಾಲಿಯೂ ಆದ ವೈರಿಯನ್ನು ಕಂಗಾಲು ಮಾಡುವಂತಹ ಹೊಸ ಆಯುಧಗಳನ್ನು ಗಾಂಧಿ ಅನುಷ್ಠಾನಕ್ಕೆ ತಂದರು. ತೀರಾ ದುರ್ಬಲವೂ, ಅಸಹಾಯಕರ ಅಸ್ತ್ರಗಳೂ ಎಂದು ಗುರುತಿಸಲ್ಪಟ್ಟಿದ್ದ ಅಹಿಂಸೆ, ಬ್ರಹ್ಮಚರ್ಯ, ಸಂಯಮ, ಸತ್ಯಾಗ್ರಹಗಳು ಗಾಂಧೀಜಿಯವರ ಕೈಯಲ್ಲಿ ಪರಿಣಾಮಕಾರಿ ಸಶಕ್ತ ಅಸ್ತ್ರಗಳಾಗಿ ಪರಿವರ್ತನೆಗೊಂಡವು.

"ಗಾಂಧೀಜಿಯವರ ಬದುಕಿನ ಅರ್ಥವನ್ನು ತಿಳಿಯಲು ಅವರ ಜೀವನ ಹಾಗೂ ಕಾರ್ಯಕ್ರಮಗಳಿಗೆ ಹೋಗಬೇಕೇ ಹೊರತು ಅವರ ಮಾತು ಹಾಗೂ ಬರವಣಿಗೆಗಳಿಗಲ್ಲ. ಏಕೆಂದರೆ ಅದು ಅವರ ಜೀವನದ ವಿವರಣೆ ಮಾತ್ರವಾಗಿರದೆ. ಅವರ ಜೀವನ ಕ್ರಮದಿಂದ ಒಂದು ಸಿದ್ಧಾಂತವನ್ನು ರೂಪಿಸಲು ಇನ್ನೂ ಯತ್ನಗಳನ್ನು ಮಾಡಬಹುದಾಗಿದೆ".[೮೧] ಗಾಂಧೀಜಿಯವರ ವ್ಯಕ್ತಿತ್ವವೇ ವಿಶಿಷ್ಠವಾದುದು. ವೇಷಭೂಷಣದಲ್ಲಿ ಅಪ್ಪಟ ಗ್ರಾಮೀಣ ವ್ಯಕ್ತಿ ಎಂಬಂತೆ ಕಂಡರೂ ಅವರು ಪಾಶ್ಚಾತ್ಯ ಮತ್ತು ಭಾರತೀಯ ತತ್ವಶಾಸ್ತ್ರ, ಧರ್ಮ, ಇತಿಹಾಸಗಳನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿದ್ದರು. ಧರ್ಮದ ವಿಷಯಗಳಲ್ಲಿ ಅವರೊಬ್ಬ ಸಂತನಾಗಿ ಕಂಡರೆ, ರಾಜಕೀಯ ಚಿಂತನೆಗಳಲ್ಲಿ ತತ್ವನಿಷ್ಟ ರಾಜಕಾರಣಿಯಾಗಿದ್ದರು. ವೈಯಕ್ತಿಕ ಜೀವನದಲ್ಲಿಯೂ ಸಹ ಅವರೊಬ್ಬ ಪ್ರಾಮಾಣಿಕ, ನಿಸ್ಪೃಹ ವ್ಯಕ್ತಿಯಾಗಿದ್ದರು. ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡಿದ್ದ ಸರಳತೆ, ಬ್ರಹ್ಮಚರ್ಯ ಪಾಲನೆ, ಸತ್ಯ ನಿಷ್ಠುರತೆಗಳಂತಹ ತತ್ವಗಳು ಅವರ ವ್ಯಕ್ತಿತ್ವಕ್ಕೆ ಹೆಚ್ಚು ಗಾಂಭೀರ್ಯವನ್ನು ತಂದುಕೊಟ್ಟಿದ್ದವು.

ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ನಿರಂತರವಾಗಿ ಅಧ್ಯಯನ ಮತ್ತು ಬರವಣಿಗೆಗಳಲ್ಲಿ ತೊಡಗಿಕೊಂಡಿದ್ದರಿಂದ ಅವರು ಹಲವು ಮೌಲಿಕ ಕೃತಿಗಳನ್ನು ರಚನೆ ಮಾಡಿದ್ದಾರೆ. ತಮ್ಮ ಬಾಲ್ಯದಿಂದ ಹಿಡಿದು ಸ್ವಾತಂತ್ರ್ಯದ ದಿನಗಳವರೆಗೆ 'ನನ್ನ ಸತ್ಯಾನ್ವೇಷಣೆ' ಎಂಬ ಆತ್ಮಕಥೆಯನ್ನು ಬರೆದಿದ್ದಾರೆ. ಇದಲ್ಲದೆ ಗಾಂಧೀಜಿ ಬ್ರಿಟಿಷರ ವಿರುದ್ಧ ನಡೆಸಿದ ಸತ್ಯಾಗ್ರಹಗಳು, ಚಳುವಳಿಗಳು, ಸಾರ್ವಕಾಲಿಕ ಮಹತ್ವವನ್ನು ಪಡೆದಿವೆ. ಈ ಕಾರಣಗಳಿಂದ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಅವರ ಚಿಂತನೆಗಳು ಭಾರತೀಯ ಜನಜೀವನದ ಮೇಲೆ ಅದರಲ್ಲೂ ದಲಿತರ ಜೀವನದ ಬರಹಗಾರರ ಮೇಲೆ ಪ್ರಭಾವ ಬೀರಿದೆ. ಗಾಂಧೀಜಿಯವರು ಭಾರತದ ಉದ್ದಗಲಕ್ಕೂ ಓಡಾಡಿ ಆಯಾ ಪ್ರದೇಶಗಳ ಜನರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಹುರಿದುಂಬಿಸಿದರು. ಕರ್ನಾಟಕವೂ ಸೇರಿದಂತೆ ದಕ್ಷಿಣದ ಎಲ್ಲಾ ರಾಜ್ಯಗಳು ಅವರ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾಗಿವೆ.

ಗಾಂಧೀಜಿಯವರು ತಮ್ಮ ಒಟ್ಟಾರೆ ಬದುಕಿನಲ್ಲಿ ಪ್ರಬಲವಾಗಿ ನಂಬಿದ ಮತ್ತು ಪ್ರತಿಪಾದಿಸಿದ ತತ್ವಗಳಲ್ಲಿ 'ಸತ್ಯ'ವೂ ಒಂದು. ಸತ್ಯಕ್ಕಾಗಿ ಆಗ್ರಹಿಸುವುದೇ 'ಸತ್ಯಾಗ್ರಹ'. ಈ ಸತ್ಯಾಗ್ರಹದ ಕಲ್ಪನೆಯನ್ನು ಗಾಂಧೀಜಿಯವರು ಬೌದ್ಧ ಹಾಗೂ ಜೈನ ತತ್ವಗಳಿಂದ ಎತ್ತಿಕೊಂಡರು. ಅಹಿಂಸೆ ಹಾಗೂ ಉಪವಾಸಗಳಂತೂ ಜೈನ ಧರ್ಮದ ಮೂಲತತ್ವಗಳು ಆಗಿವೆ.

“ಸತ್ಯಾಗ್ರಹವನ್ನು ಅಹಿಂಸಾತ್ಮಕವಾಗಿ ರೂಪಿಸುವಲ್ಲಿ ಗಾಂಧೀಜಿಯವರು ನೀಡುವ ಸಮರ್ಥನೆ ತುಂಬಾ ಮಹತ್ವವಾಗಿದೆ. ‘ಮನುಷ್ಯ ಜೀವನದ ಬಗ್ಗೆ ಅಂಥ ಗೌರವವಿದ್ದುದರಿಂದಲೇ ಗಾಂಧಿ ಹಿಂಸಾತ್ಮಕ ಪದ್ಧತಿಗಳಿಗೆ ವಿರೋಧಿಯಾಗಿದ್ದರು. ಯಾವುದೊಂದು ಪದ್ಧತಿಯಲ್ಲಿರುವ ದೋಷಗಳಿಗಾಗಿ ಆ ಪದ್ಧತಿಯ ಅಂಗಗಳಾಗಿರುವ ವ್ಯಕ್ತಿಗಳನ್ನು ದಂಡಿಸಬಾರದು. ನಾಶಗೊಳಿಸಬಾರದು ಎಂದೂ ಆತ ಒತ್ತಾಯಿಸಿದರು. ಆದ್ದರಿಂದ ಅವರ ಹಿಂಸಾತ್ಮಕ ಹೋರಾಟದ ಕ್ರಮ ಪಾಶವೀಶಕ್ತಿಯನ್ನು ಅವಲಂಬಿಸಿದ್ದಾಗಿರದೆ, ಒಲಿಸಿಕೊಳ್ಳುವ ಉಪಾಯವನ್ನು ಅವಲಂಬಿಸಿತ್ತು. ಆದರೆ ಅವರ ಈ ಒಲಿಸಿಕೊಳ್ಳುವ ಉಪಾಯ ಬುದ್ಧಿಯ ಮಾಧ್ಯಮದ ಮೂಲಕ ಮಾತ್ರವೇ ಸಾಧಿತವಾಗುವಂಥದಲ್ಲ; ಅದಕ್ಕಿಂತ ಹೆಚ್ಚಾಗಿ ಎದುರಾಳಿಯ ಅಂತಃಪ್ರಜ್ಞೆಯನ್ನು ಬಡಿದೆಬ್ಬಿಸುವ ಸ್ವಯಂ ತಪದಿಂದ ತಾನೇ ನೋವು ಪಟ್ಟು ಮಾಡಿಕೊಳ್ಳುವ ಕ್ರಿಯೆಯಿಂದ ಹಾರ್ದಿಕ ಸಾಧಿತವಾಗುವಂತದ್ದು”[೮೨]

ಗಾಂಧೀಜಿಯವರು ಹಿಂಸೆ, ಅಹಿಂಸೆಗಳ ಮಾರ್ಗಗಳಲ್ಲಿ ಅಹಿಂಸೆಯನ್ನು ಆಯ್ಕೆ ಮಾಡಿಕೊಳ್ಳಲು ಇನ್ನೂ ಕೆಲವು ಕಾರಣಗಳಿದ್ದವು. “ಹಿಂಸಾತ್ಮಕ ಕ್ರಾಂತಿಗಳಲ್ಲಿ ಜನತೆಯಲ್ಲಿನ ಬಹುಸಂಖ್ಯಾತರು ನಿಜವಾಗಿಯೂ ಪಾಲ್ಗೊಂಡಿರುವುದಿಲ್ಲ ಎನ್ನುವುದನ್ನು ಗಾಂಧಿ ಅನುಭವದಿಂದ ಕಲಿತುಕೊಂಡರು. ಒಂದು ಅಲ್ಪಸಂಖ್ಯಾತ ವರ್ಗ ಕ್ರಾಂತಿಯಲ್ಲಿ ಪಾಲ್ಗೊಳ್ಳುತ್ತದೆ ಮತ್ತು ಆ ಅಲ್ಪಸಂಖ್ಯಾತರಲ್ಲಿ ಅತ್ಯಲ್ಪ ಸಂಖ್ಯೆಯ ಒಂದು ವರ್ಗ ಅಧಿಕಾರವನ್ನು ಆಕ್ರಮಿಸಿಕೊಂಡು ಜನತೆಯ ಹೆಸರಿನಲ್ಲಿ ಸರ್ವಾಧಿಕಾರವನ್ನು ಸ್ಥಾಪಿಸುತ್ತದೆ. ಕ್ರಾಂತಿಯಲ್ಲಿ ಹಾಗೂ ಆನಂತರದ ಪುನರ್‌ನಿರ್ಮಾಣದ ಘಟ್ಟದಲ್ಲಿ ಎರಡರಲ್ಲೂ ವಿಶಾಲವಾದ ಜನವರ್ಗ ನಿಷ್ಕ್ರೀಯ ಪ್ರೇಕ್ಷಕನಂತಿರುತ್ತದೆ. ಒಂದು ಪಕ್ಷ ಕ್ರಾಂತಿ ವಿಫಲಗೊಂಡಿತೆಂದರೆ ಆಗ ಭಯಂಕರವಾದ ನೈತಿಕ ಪತನ ಸಂಭವಿಸುತ್ತದೆ ಹಾಗೂ ಅದರ ಪರಿಣಾಮವಾಗಿ ದಮನ ಸಂಭವಿಸುತ್ತದೆ. ಅದರಿಂದ ಮುಂದೆ ದೀರ್ಘಕಾಲ ಕ್ರಾಂತಿ ಯೋಜನೆಯ ಹಳಿಯೇ ತಪ್ಪಿಹೋದಂತಾಗುತ್ತಿದೆ”.[೮೩]

ಗಾಂಧೀಜಿಯವರು ರೂಪಿಸಿದ ಈ ಸತ್ಯಾಗ್ರಹದ ತಂತ್ರ ಹಲವು ವ್ಯಕ್ತಿಗಳ ಕ್ರಿಯೆಗಳಿಗೆ ಮಾತ್ರ ಸೀಮಿತಗೊಳಿಸಲಿಲ್ಲ. ಅವರು ಅದನ್ನು ರಾಜಕೀಯ ಕ್ಷೇತ್ರ ಹಾಗೂ ಸಾಮೂಹಿಕ ಕ್ರಿಯೆಗಳಿಗೆ ವಿಸ್ತರಿಸಿದರು. ಆರ್ಥಿಕ ಶೋಷಣೆಗಳ, ಸಾಮಾಜಿಕ ಶೋಷಣೆಗಳ ವಿರುದ್ಧವೂ ನ್ಯಾಯಬದ್ಧವಾಗಿ ಹೋರಾಟ ಮಾಡಲಿಕ್ಕೆ ಈ ತಂತ್ರವನ್ನು ಬಳಸಿದರು. ಸಾಮೂಹಿಕವಾದ ನಾಗರಿಕ ನಿರಾಕರಣ ಚಳುವಳಿ, ಅಸಹಕಾರ ಚಳುವಳಿ, ಕರಾನಿರಾಕರಣ ಚಳುವಳಿ, ಮುಷ್ಕರಗಳು, ಹರತಾಳಗಳು ಮುಂತಾದವು ಗಾಂಧೀಜಿಯ ಹೋರಾಟದ ಮಾರ್ಗಗಳಾದವು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಈ ಮಾರ್ಗಗಳ ಸಾಮರ್ಥ್ಯ ರುಜುವಾತುಗೊಂಡಿತು.

ಸತ್ಯಾಗ್ರಹದ ಈ ತನ್ನ ಅಭಿಜಾತ ಸಾಧನವನ್ನು ಗಾಂಧಿ ಬ್ರಿಟಿಷ್ ಆಡಳಿತದ ಅಡಿಯಲ್ಲಿಯೇ ರೂಪುಗೊಳಿಸಿದ್ದಾಗಲೂ ಅದು ತನ್ನ ಆಡಳಿತವೊಂದರ ವಿರುದ್ಧ ಬಳಸಬಹುದಾದಂತೆ ಸ್ವತಂತ್ರ ರಾಷ್ಟ್ರದಲ್ಲೂ ಬಳಸಬಹುದಾದದ್ದು, ಈ ಸತ್ಯಗ್ರಹ ತತ್ವ ಹೀಗೆ ಸಾರ್ವಕಾಲಿಕ ಮತ್ತು ಸಾರ್ವತ್ರಿಕ ಮಹತ್ವವನ್ನು ಪಡೆದುಕೊಂಡಿತ್ತು. ಈ ತಂತ್ರವನ್ನು ರಾಜಕೀಯ ಕ್ಷೇತ್ರದಲ್ಲಿ ಯಾಕೆ ಬಳಸಬೇಕೆಂಬುದನ್ನು ಹೀಗೆ ಸ್ಪಷ್ಟಗೊಳಿಸಿದ್ದಾರೆ.

"ರಾಜಕೀಯ ಕ್ಷೇತ್ರದಲ್ಲಿ ಜನತಾ ಪರವಾದ ಹೋರಾಟವೆನ್ನುವುದು ಮುಖ್ಯವಾಗಿ ಅನ್ಯಾಯದ ಕಾನೂನು ಮಾಡುವವರಿಗೆ ಅದರಲ್ಲಿರುವ ಪ್ರಮಾದಗಳನ್ನು ಅರ್ಜಿಗಳ ಮೂಲಕವೋ ಅಥವಾ ಅಂಥಹ ಇತರ ಉಪಾಯಗಳ ಮೂಲಕವೋ ಮನವರಿಕೆ ಮಾಡಿಕೊಡುವುದು ಸಾಧ್ಯವಾಗದೇ ಹೋದಾಗ, ಹಾಗೂ ಅದಕ್ಕೆ ತಲೆಬಾಗಿ ಶರಣಾಗಿ ಬಿಡುವುದಕ್ಕೆ ನಿಮಗೆ ಇಚ್ಚೆಯಿಲ್ಲದಿರುವಾಗ ನಿಮಗೆ ತೆರೆದಿರುವ ಒಂದೇ ದಾರಿ – ಅವರು ತಾವು ವಿಧಿಸಿದ ಕಾನೂನುಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವುದು. ನೀವೇ ಸ್ವಯಂ ನೋವುಂಟು ಮಾಡಿಕೊಳ್ಳುವ ಮೂಲಕ ಎಂದರೆ ಕಾನೂನು ಮೀರಿ ಹಾಗೆ ಮೀರಿದ್ದಕ್ಕಾಗಿ ನೀವೇ ದಂಡವನ್ನು ಆಹ್ವಾನಿಸಿಕೊಳ್ಳುವ ಮೂಲಕ ನಿರ್ಧರಿಸಲಾಗುತ್ತದೆ".[೮೪] ಈ ಬಗೆಯ ಚಳುವಳಿ, ಅದು ಯಶಸ್ವಿಯಾಗಬೇಕಾದರೆ ಅದರಲ್ಲಿ ವಿಶಾಲವಾದ ಜನವರ್ಗ ಪಾಲ್ಗೊಳ್ಳುವಂತೆ ಮಾಡಬೇಕಾಗುತ್ತದೆ. ಜನತೆಯ ವಿವಿಧ ವರ್ಗಗಳಿಗೆ ಎಟಕುವಂತೆ ವಿವಿಧ ಕಾರ್ಯಕ್ರಮಗಳನ್ನು ಅದರಲ್ಲಿ ಜೋಡಿಸಬೇಕಾಗುತ್ತದೆ. ಈ ಕಾರಣದಿಂದಲೇ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಖಾದಿ ಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ, ರಾಷ್ಟ್ರಭಾಷೆಯ ಪ್ರಸಾರ ಹಾಗೂ ಮೂಲಶಿಕ್ಷಣ ಮುಂತಾದ ವಿಧೇಯಕಗಳನ್ನು ರೂಪಿಸಿದರು. "೧೯೨೦ರಲ್ಲಿ ಗಾಂಧೀಜಿ ಜಾತಿಪದ್ಧತಿಯು ಹೋಗುವುದಿಲ್ಲವೆಂದೂ ಅದಕ್ಕೆ ಅವರದೇ ಆದ ತಾತ್ವಿಕತೆಯಿದೆಯೆಂದೂ ನಂಬಿದಲ್ಲದೆ ಜಾತಿ ವಿನಾಶ ಹೋರಾಟಕ್ಕೆ ವಿರುದ್ಧವಾಗಿದ್ದರು"[೮೫] ಅಂತೆಯೇ ಬಹಳ ಪ್ರಮುಖವಾಗಿ ನಲವತ್ತರ ದಶಕದಲ್ಲಿ ಗಾಂಧೀಜಿಯವರು "ಜಾತಿ ರಹಿತ, ವರ್ಗರಹಿತ ಇಂಡಿಯಾವನ್ನು ಸ್ಥಾಪಿಸಲು ನಾನು ಬದ್ಧನಾಗಿದ್ದೇನೆ ಎಂದು ಪ್ರತಿಪಾದಿಸುತ್ತಾರೆ".[೮೬] ಹಿಂದೆ ಅವರೂ ಹಿಂದೂ ಸಮಾಜದ ಭದ್ರತೆಗೆ ಜಾತಿ ಪದ್ಧತಿ ಸಹಕಾರಿ ಎಂದು ಭಾವಿಸಿದ್ದರು. ಆನಂತರ ನಿಧಾನವಾಗಿ ಅವರ ಅಭಿಪ್ರಾಯವನ್ನು ಬದಲಾಯಿಸಿದರು. "ನನ್ನ ಕನಸಿನ ಸ್ವರಾಜ್ಯದಲ್ಲಿ ಆಸ್ತಿ ಸ್ವಂತದ್ದಾಗಬಾರದು, ಅದು ಸಮಾಜ ಸೇವೆಗಾಗಿ ಎಂದು ತಿಳಿಯಬೇಕು. ಅದು ಸಾಧ್ಯವಾದರೆ ಆಗ ಯಾರೂ ಶ್ರೀಮಂತರಿರುವುದಿಲ್ಲ, ಯಾರು ಬಡವರಿರುವುದಿಲ್ಲ. ನನ್ನ ಕನಸಿನ ಸ್ವರಾಜ್ಯದಲ್ಲಿ ಸಮಸ್ತ

ಧರ್ಮಗಳೂ ಸಮಾನ; ಅಲ್ಲಿ ಧರ್ಮ, ಜಾತಿ ಮತ್ತು ಆರ್ಥಿಕ ಅಸಮಾನತೆಗಳ ಅಂತ್ಯವಾಗುತ್ತವೆ ಎಂದು ಪ್ರತಿಪಾದಿಸಿದರು. ಅಂತೆಯೇ ಆದರ್ಶ ಸಮಾಜವಾಗಿ ರೂಪುಗೊಳ್ಳಬೇಕೆಂದು ಆಶಯ ಹೊಂದಿದ್ದರು”.[೮೭] ಜನತಂತ್ರದಲ್ಲಿ ಸಾರ್ವಭೌಮತ್ವ ಆಗಿದ್ದರೂ ಜನಗಳ ಮೂಲಕ ಚುನಾವಣೆಗಳಲ್ಲಿ ಆಯ್ಕೆಯಾಗಿ ಬಂದ ಜನಪ್ರತಿನಿಧಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ಅನ್ಯಾಯವನ್ನೇ ಮಾಡತೊಡಗಿದಾಗ ಜನ ಅದನ್ನು ನಿವಾರಿಸಿಕೊಳ್ಳಲು ಸತ್ಯಾಗ್ರಹವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಹೀಗಾಗಿ ಯಾವುದೇ ರೀತಿಯ ಸರಕಾರವಿರಲಿ ಅದು ಜನಹಿತಕ್ಕೆ ವಿರುದ್ಧವಾಗಿ ವರ್ತಿಸತೊಡಗಿದಾಗ ಜನ ಸತ್ಯಾಗ್ರಹದ ಮೂಲಕ ಹೋರಾಟ ಮಾಡಬೇಕಾಗುತ್ತದೆ.

ಸತ್ಯಾಗ್ರಹ ಅಥವಾ ಅಹಿಂಸಾತ್ಮಕವಾದ ನೇರ ಕ್ರಿಯೆಯೆನ್ನುವ ಈ ಸಾಧನವನ್ನು ಗಾಂಧೀಜಿ ಮೊತ್ತ ಮೊದಲ ಬಾರಿಗೆ ರೂಪಿಸಿದ್ದು ದಕ್ಷಿಣ ಆಫ್ರಿಕಾದಲ್ಲಿ ಜನಾಂಗದ ವಿಭೇದದ ನೀತಿಗೆ ಬಲಿಯಾಗಿದ್ದ ಅಲ್ಲಿನ ಭಾರತೀಯರ ನ್ಯಾಯಬದ್ಧ ಆಕಾಂಕ್ಷೆಗಳನ್ನು ಸ್ಫುಟಗೊಳಿಸುವ ಪ್ರಯತ್ನದಲ್ಲಿ ಇದು ರೂಪಗೊಂಡಿತು. ಈ ಸತ್ಯಾಗ್ರಹದ ಸಾಧನ ದಕ್ಷಿಣ ಆಫ್ರಿಕಾದಲ್ಲಿ ೧೯೧೪ರಲ್ಲಿ ವಿಜಯ ಸಾಧಿಸಿಕೊಂಡಿತು. ಜನಾಂಗ ವಿಬೇಧದ ದರ್ಪಕ್ಕೆ ಸಂಕೇತದಂತಿದ್ದ ಜನರಲ್ ಸ್ಮಿಥ್ಸ್ ಆಗ ತನ್ನ ಹೆಜ್ಜೆಗಳನ್ನು ಹಿಂದಕ್ಕೆಳೆದುಕೊಳ್ಳಬೇಕಾಯಿತು. ಪುನಃ ೧೯೧೭ರಲ್ಲಿ 'ಚಂಪಾರಣ್ಯ'ದಲ್ಲಿ ಗಾಂಧಿಯ ನಾಯಕತ್ವದಲ್ಲಿ ನಡೆದ ಸತ್ಯಾಗ್ರಹದ ಅಹಿಂಸಾತ್ಮಕ ಹೋರಾಟ ನೀಲಿ ತೋಟದ ಮಾಲೀಕರ ಹಿಂಸೆಯನ್ನು ಕೊನೆಗೊಳಿಸಿ ಯಶಸ್ವಿಯಾಯಿತು. ೧೯೧೮ರಲ್ಲಿ ನಡೆದ ಬಾರ್ದೋಲಿಯ ರೈತರ ಹೋರಾಟದ ರಾಷ್ಟ್ರದ ಉದ್ದಗಲವು ಪ್ರತಿಧ್ವನಿಸಿತು. ಇಂತಹ ಹಲವಾರು ಘಟನೆಗಳು ಭಾರತೀಯ ಚಳುವಳಿಗಳ ಮೇಲೆ ನೇರವಾದ ಪ್ರಭಾವ ಬೀರಿವೆ. ಅಂತೆಯೇ ದಲಿತ ಹೋರಾಟಗಾರರ ಮೇಲೆ ಗಾಂಧೀಜಿಯವರ ಪ್ರಭಾವ ಬೀರಿರುವ ಅಂಶಗಳನ್ನು ಕಾಣಲಿಕ್ಕೆ ಸಾಧ್ಯವಿದೆ.

ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟವು ಪರಿಣಾಮಕಾರಿಯಾಗಲು ಇನ್ನೂ ಹಲವು ಕಾರಣಗಳಿದ್ದವು. ಅವರ ಪ್ರಕಾರ ಯಾವುದೇ ಅಂತರರ್ಜಾತೀಯ ವಿವಾಹಗಳನ್ನು ಒಪ್ಪದೆ ಇದ್ದ ಗಾಂಧೀಜಿ ನಲವತ್ತರ ದಶಕದ ವೇಳೆಗೆ ತಮ್ಮ ನಿಲುವನ್ನು ಬದಲಾಯಿಸಿಕೊಂಡರು. “ಸವರ್ಣೀಯ ಹಿಂದೂ ಮತ್ತು ಹರಿಜನರ ನಡುವೆ ನಡೆಯುವ ಮದುವೆಗಳಲ್ಲಿ ನಾನು ಭಾಗವಹಿಸುತ್ತೇನೆ. ನೀವು ಹರಿಜನ ಹೆಣ್ಣುಮಗಳನ್ನು ಮದುವೆಯಾಗದಿದ್ದರೆ ನನ್ನ ಆಶೀರ್ವಾದ ಕೇಳಬೇಡಿ”[೮೮] ಎಂದು ಖಂಡತುಂಡವಾಗಿ ಹೇಳಿದರು. ಕಾರಣ ಗಾಂಧೀಜಿಯವರು ನಿಧಾನವಾಗಿ ಅಂಬೇಡ್ಕರ್ ಅವರ ಪ್ರಭಾವಕ್ಕೆ ಒಳಗಾಗಿದ್ದರೂ ಎಂಬುವುದು ಈ ಮೇಲಿನ ಮಾತುಗಳಿಂದ ಸಾಕ್ಷೀಕರಿಸಬಹುದಾಗಿದೆ. ಅಂತರ್ಜಾತಿವಿವಾಹ ಮತ್ತು ಅಂತರ್ ಭೋಜನವನ್ನು ಒಪ್ಪಿರದಿದ್ದ ಗಾಂಧೀಜಿಯವರು

ಅಂತರ್ಜಾತಿವಿವಾಹ ಮತ್ತು ಭೋಜನವು ಇಂದಿನ ಆಧುನಿಕ ಸಮಾಜದಲ್ಲಿ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು.

"ಸಾಮಾಜಿಕ ಹೋರಾಟಗಾರರಾದ ಗೋರಾ ಅವರ ಅಳಿಯನಿಗೆ ಗಾಂಧೀಜಿಯವರು ಹೀಗೆ ಬರೆಯುತ್ತಾರೆ. ನೀನು ಅಂಬೇಡ್ಕರ್ ಅವರಂತೆ ಆಗಬೇಕು. ಅಸ್ಪೃಶ್ಯತೆ ಹಾಗೂ ಜಾತಿ ವಿನಾಶಕ್ಕಾಗಿ ಕೆಲಸ ಮಾಡಬೇಕು ಯಾವ ಬೆಲೆ ತೆತ್ತರೂ ಸರಿಯೆ ಅಸ್ಪೃಶ್ಯತೆ ಅಳಿಯಬೇಕು"[೮೯] ಎಂದು ಸಕಾರಾತ್ಮಕ ಧೋರಣೆಗಳನ್ನು ದಲಿತರ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಬದಲಾವಣೆಯ ಆಶಯಗಳನ್ನು ಅಭಿವ್ಯಕ್ತಿಸುತ್ತಾರೆ. ಹೀಗೆ ಮಹಾತ್ಮ ಗಾಂಧೀಜಿಯವರ ಹಲವಾರು ಪ್ರಗತಿಪರ ಚಿಂತನೆಗಳು ಭಾರತೀಯ ಮತ್ತು ಕನ್ನಡ ದಲಿತ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ.

೧.೩.೬ ಡಾ. ಬಿ.ಆರ್.ಅಂಬೇಡ್ಕರ್

ವಿಶ್ವದ ಶ್ರೇಷ್ಠ ಮಹಾಮಾನವತಾವಾದಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಾನವ ಜನಾಂದ ಹಕ್ಕು – ಬಾಧ್ಯತೆಗಳಿಗಾಗಿ ಹೋರಾಟವನ್ನು ಮಾಡಿರುವಂತಹ ಕ್ರಾಂತಿಕಾರಿ ಪುರುಷ. ಭಾರತ ಸ್ವಾತಂತ್ರವಾದರಷ್ಟೇ ಸಾಲದು; ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಆರ್ಥಿಕ ವಿಷಯಗಳು ಭರತಖಂಡದಲ್ಲಿ ಜನಿಸಿದವರೆಲ್ಲ ಸಮಾನ ಹಕ್ಕುಳ್ಳವರಾಗಿರಬೇಕು ಎಂಬ ದೃಢ ಸಂಕಲ್ಪದಿಂದ ಶೋಷಿತರ, ದೀನದಲಿತರ ನೊಂದ ಸಮುದಾಯಗಳ, ಮಹಿಳೆಯರ ಹಾಗೂ ಹಿಂದುಳಿದ ಜಾತಿಗಳ ವಿಕಾಸಕ್ಕಾಗಿ ಶ್ರಮಿಸಿದ ಸಂವಿಧಾನ ಶಿಲ್ಪಿ ಅಂಬೇಡ್ಕರ್.

ಅಂಬೇಡ್ಕರ್ ಅವರ ಮನೆತನವು ಮಹಾರಾಷ್ಟ್ರದ ಕೊಂಕಣ ಪ್ರದೇಶಕ್ಕೆ ಸೇರಿದವರಾಗಿದ್ದು, ಇವರ ಪೂರ್ವಿಕರು ಮಹಾರಾಷ್ಟ್ರದ ಖೇಡ ತಾಲ್ಲೋಕಿನ 'ಅಂಬೇವಾಡಿ' ಎಂಬ ಗ್ರಾಮದಲ್ಲಿ ನೆಲೆಸಿದವರು. ಅಂಬೇಡ್ಕರ್ ಅವರ ಮನೆತನದ ಹೆಸರು 'ಸಕ್ಪಾಲ್' ಎಂಬುದಾಗಿತ್ತು. ಇವರೆಲ್ಲರೂ ಅಕ್ಷರಸ್ಥರು ಹಾಗೂ ಸುಸಂಸ್ಕೃತರಾಗಿದ್ದರು. ಇವರು ಕಬೀರ್ ಪಂಥದ ಅವಲಂಬಿಗಳಾಗಿದ್ದು, ಇವರಿಗೆ ಭಕ್ತಿ ಮಾರ್ಗದ ಪ್ರಭಾವವು ಬೀರಿರುತ್ತದೆ. ಸುಭೇದಾರ್ ರಾಮಾಜೀ ಸಕ್ಪಾಲ್ ಮತ್ತು ಭೀಮಬಾಯಿ ದಂಪತಿಗಳಿಗೆ ೧೪ನೇ ಮಗುವಾಗಿ ಜನಿಸಿದವರು ಭೀಮರಾವ್. ಇವರು ಮಧ್ಯಪ್ರದೇಶದ ಇಂದೂರು ಜಿಲ್ಲೆಗೆ ಸೇರಿದ 'ಮಾಹು' ಎಂಬ ಮಿಲಿಟರಿ ಕ್ಯಾಂಪ್‌ನಲ್ಲಿ ೧೮೯೧ನೇ ಏಪ್ರಿಲ್ ೧೪ ರಂದು ಜನಿಸುತ್ತಾರೆ. ಅಂಬೇಡ್ಕರ್ ಅವರಿಗೆ ತಾಯಿ, ತಂದೆ ಮತ್ತು ಊರಿನ ಹೆಸರು ಸೇರಿ 'ಭೀಮರಾವ್ ರಾಮಜೀ ಅಂಬೇವಾಡೇಕರ್' ಎಂಬ ಹೆಸರಿನಲ್ಲಿ ಇಡಲಾಗುತ್ತದೆ. ಈ ಭಾರತದ ದೇಶದ ಜಾತಿ ವ್ಯವಸ್ಥೆಯ ದಳ್ಳುರಿಯಲ್ಲಿ ಅಡಿಗಡಿಗೂ

ಅವಮಾನವನ್ನು ಅನುಭವಿಸಿದವರು. ಆ ಅಪಮಾನದ ವಿರುದ್ಧ ಅದನ್ನು ಪೋಷಿಸಿದ ಹಿಂದೂ ಧಾರ್ಮಿಕ ವ್ಯವಸ್ಥೆಯ ವಿರುದ್ಧ ತಮ್ಮ ಹೋರಾಟವನ್ನು ೨೦ನೇ ಶತಮಾನದ ಎರಡನೇ ದಶಕದಿಂದಲೇ ಪ್ರಾರಂಭಿಸಿ ತಾವು ಕೊನೆಯುಸಿರೆಳೆದ ೧೯೫೬ರ ಡಿಸೆಂಬರ್ ೦೬ರ ತನಕ ನಿರಂತರವಾಗಿ ಹೋರಾಟವನ್ನು ನಡೆಸಿದರು. ಇವರ ಹೋರಾಟದ ಸಿದ್ಧಾಂತವನ್ನು 'ಅಂಬೇಡ್ಕರ್‌ವಾದ' ಎಂದು ಕರೆಯಬಹುದು.

ಭಾರತ ದೇಶದ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಎಲ್ಲ ಅವಕಾಶಗಳಿಂದ ವಂಚಿತರಾಗಿದ್ದಾರೆ. ಊರ ಹೊರಗಿದ್ದು ಪ್ರಾಣಿಗಳಿಗಿಂತ ಕಡೆಯಾಗಿ ಇಂದಿಗೂ ಜೀವನ ಸಾಗಿಸುತ್ತಿದ್ದಾರೆ. ಹೆಚ್ಚು ಕಡಿಮೆ ಶೂದ್ರರ ಸ್ಥಿತಿಯೂ ಹಾಗೇ ಇತ್ತು. ಆದರೆ ಅವರು ಆರ್ಥಿಕವಾಗಿ ಅಸ್ಪೃಶ್ಯರಿಗಿಂತ ಮೇಲ್ಮಟ್ಟದಲ್ಲಿದ್ದರು. ಈ ಅಸ್ಪೃಶ್ಯ ಮತ್ತು ಶೂದ್ರರು ತಮ್ಮ ಈ ಹೀನ ಸ್ಥಿತಿಗೆ ಹಿಂದಿನ ಜನ್ಮದ ಪಾಪದ ಫಲ ಮತ್ತು ಹಣೆಬರಹ ಕಾರಣವೆಂದು ಪುರೋಹಿತ ವ್ಯವಸ್ಥೆಯ ಹುಸಿ ನಂಬಿಕೆಗಳಿಗೆ ಮೂಢರಾಗಿ ನಂಬಿಕೊಂಡಿದ್ದಾರೆ. ಇಂತಹ ಈ ಅವ್ಯವಸ್ಥೆ ವೇದಗಳ ಕಾಲದಿಂದ ಹಿಡುದು ಇಂದಿನ ಆಧುನಿಕ ಕಾಲದವರೆಗೂ ನಿರಂತರವಾಗಿ ಸಾಗಿ ಬಂದಿದೆ. ಇದನ್ನು ಪ್ರಾರಂಭದಿಂದಲೂ ಹಲವಾರು ಮಾನವತಾವಾದಿಗಳು, ಸಮಾಜ ಚಿಂತಕರು, ಕ್ರಾಂತಿಕಾರಿಗಳು, ಆಯಾ ಕಾಲಘಟ್ಟದಲ್ಲಿ ಪ್ರತಿಭಟಿಸುತ್ತ ಮಾನವೀಯ ನೆಲೆಗಳನ್ನು ಗಟ್ಟಿಗೊಳಿಸಲು ಈ ಕ್ರೂರ ವ್ಯವಸ್ಥೆಯ ಜೊತೆ ಹೋರಾಟ ಮಾಡಿದ್ದಾರೆ. ಆ ಪರಂಪರೆಯಲ್ಲಿ ಬುದ್ಧ, ಚಾರ್ವಾಕರು, ಜೈನರು, ವೀರಶೈವ ಶರಣರು, ಹಾಗೂ ಆಧುನಿಕ ಭಾರತದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು, ಜ್ಯೋತಿಬಾಫುಲೆ, ಶಾಹುಮಹಾರಾಜರು, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಅಂಬೇಡ್ಕರ್, ದೇವರಾಯ ಇಂಗಳೆ ನಾರಾಯಣಗುರು, ಲೋಹಿಯಾ ಪ್ರಮುಖರಾಗಿದ್ದಾರೆ.

ಆಧುನಿಕ ಭಾರತದಲ್ಲಿ ಬ್ರಾಹ್ಮಣವಾದವನ್ನು ಅಂದರೆ ಪುರೋಹಿತ ವ್ಯವಸ್ಥೆಯನ್ನು ವಿರೋಧಿಸಿದವರಲ್ಲಿ ಸ್ವಾಮಿ ವಿವೇಕಾನಂದರು ಮೊದಲಿಗರು. ಆದರೆ ಬ್ರಾಹ್ಮಣ ವ್ಯವಸ್ಥೆಯನ್ನು ಚಳುವಳಿ ರೂಪದಲ್ಲಿ ಬಲವಾಗಿ ವಿರೋಧಿಸಿದವರಲ್ಲಿ ಮೊದಲ ನೇತಾರ ಮಹಾರಾಷ್ಟ್ರದ ಜ್ಯೋತಿಬಾಫುಲೆಯವರು. ೧೮೭೩ರಲ್ಲಿ 'ಸತ್ಯಶೋಧಕ ಸಮಾಜ' ಹುಟ್ಟು ಹಾಕುವುದರ ಮೂಲಕ ಬ್ರಾಹ್ಮಣೇತರ ಚಳುವಳಿಗೆ ಅಡಿಪಾಯ ಹಾಕಿದರು. ಮಹಾರಾಷ್ಟ್ರಕ್ಕೆ ಮಾತ್ರ ಸೀಮಿತವಾಗಿದ್ದ ಈ ಚಳುವಳಿಗೆ ಡಾ ಬಿ.ಆರ್.ಅಂಬೇಡ್ಕರ್ ಅವರು ೧೯೨೦ ಮತ್ತು ೩೦ರ ದಶಕದಲ್ಲಿ ಭಾರತದಾದ್ಯಂತ ಅದರ ಕಿಚ್ಚನ್ನು ಪ್ರಜ್ವಲಿಸುವಂತೆ ಮಾಡಿದರು.

ಡಾ. ಅಂಬೇಡ್ಕರ್ ಅವರ ಹೋರಾಟ ಮೊದಮೊದಲು ಮಹಾರಾಷ್ಟ್ರದ ಮಹಾರ್ ಜನಾಂಗದ ಸಮಸ್ಯೆಗಳಿಗಷ್ಟೇ ಸೀಮಿತಗೊಂಡಿದ್ದರೂ ಮುಂದೆ ಆ ಹೋರಾಟದ ಸಫಲತೆಗಾಗಿ ಕೆಳವರ್ಗದ ಎಲ್ಲಾ ಶೋಷಿತರ ಪರವಾಗಿ ಹೋರಾಟ ಚುರುಕುಗೊಂಡಿತು. ೧೯೨೭ ಮಾರ್ಚ್ ೧೯, ೨೦ರಲ್ಲಿ ಹಮ್ಮಿಕೊಂಡ ಮಹಾರ್ ಕೆರೆಯ ನೀರನ್ನು ಬಳಸಿದ್ದು ಮತ್ತು ಆ ಸಂದರ್ಭದಲ್ಲಿ ಮನುಸ್ಮೃತಿಯನ್ನು ತನ್ನ ೨೫ ಸಾವಿರ ಅನುಯಾಯಿಗಳ ಸಮ್ಮುಖದಲ್ಲಿ ಸುಟ್ಟಿದ್ದು, ಈ ಘಟನೆಗಳು ಮಹಾರಾಷ್ಟ್ರದ ತುಂಬಾ ತೀವ್ರತರವಾಗಿ ಹಬ್ಬಲು ಕಾರಣವಾಯಿತು. ಹಾಗೆಯೇ ೧೯೩೦ ರ ಮಾರ್ಚ್ ೨ ರಂದು ನಡೆಸಿದ ನಾಸಿಕದ ಕಾಳರಾಮ ದೇವಾಲಯ ಪ್ರವೇಶದ ಸತ್ಯಾಗ್ರಹ ಕೂಡ ಪ್ರಮುಖವಾದುದು. ಇವುಗಳಿಂದ ದಲಿತರ ಉದ್ಧಾರ ಸಾಧ್ಯವಿಲ್ಲದಿದ್ದರೂ ಹಿಂದೂ ಪುರೋಹಿತ ವ್ಯವಸ್ಥೆಯು ಅಘಾತಕ್ಕೊಳಗಾಗುವಂತೆ ಮಾಡಿದ ಪ್ರಯತ್ನ ಯಶಸ್ವಿಯಾಯಿತು. ಅಂಬೇಡ್ಕರ್ ಅವರು ರಾಷ್ಟ್ರಮಟ್ಟದಲ್ಲಿ ಅಸ್ಪೃಶ್ಯರ ಪರವಾಗಿ ರಾಷ್ಟ್ರ ನಾಯಕರಾಗಿ ರೂಪುಗೊಂಡಿದ್ದು ಮೀಸಲಾತಿ ಹೋರಾಟದ ಮೂಲಕ. ೧೯೩೦ ರಿಂದ ೩೨ರ ಅವಧಿಯಲ್ಲಿ ಲಂಡನ್‌ನಲ್ಲಿ ಬ್ರಿಟಿಷ್ ಸರ್ಕಾರ ನಡೆಸಿದ ಮೂರು ದುಂಡು ಮೇಜಿನ ಪರಿಷತ್ತುಗಳಿಗೆ ಅಸ್ಪೃಶ್ಯರ ಪ್ರತಿನಿಧಿಯಾಗಿ ಭಾಗವಹಿಸಿ ಅವರ ಜನಸಂಖ್ಯೆಗನುಸಾರವಾಗಿ ಅಸೆಂಬ್ಲಿಗಳಲ್ಲಿ ಪ್ರಾತಿನಿಧ್ಯ ನೀಡಬೇಕೆಂಬ ರಾಜಕೀಯ ಹಕ್ಕುಗಳನ್ನು ಮಂಡಿಸಿ ಬ್ರಿಟಿಷ್ ಸರ್ಕಾರವನ್ನು ಒಪ್ಪಿಸಿದರು. ಆದರೆ ಗಾಂಧೀಜಿ ಇದನ್ನು ವಿರೋಧಿಸಿ ಪೂನಾ ಯರವಾಡಾ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಗಾಂಧೀಜಿಯವರನ್ನು ಪ್ರಾಣಾಪಾಯದಿಂದ ಪಾರು ಮಾಡಲು ೧೯೩೨ ಸೆಪ್ಟೆಂಬರ್ ೨೪ರಂದು ಒಂದು ಒಪ್ಪಂದಕ್ಕೆ ಬರಲಾಯಿತು. ಪ್ರತ್ಯೇಕ ಮತದಾನದ ಹಕ್ಕುಗಳ ಬದಲಾಗಿ ಜಂಟಿ ಮತದಾನದ ಹಕ್ಕುಗಳನ್ನು ನೀಡುವ ಒಪ್ಪಂದವಾಯಿತು. ಇದುವೇ “ಪೂನಾ ಒಪ್ಪಂದ”ವೆಂದು ಪ್ರಸಿದ್ಧವಾಯಿತು.

“ಚರಿತ್ರೆಯನ್ನು ಸಾಫಲ್ಯ ವೈಫಲ್ಯಗಳ ನಡುವೆ ಅಸ್ಪೃಶ್ಯರ ಕತ್ತಲು ಪಯಣಕ್ಕೆ ದಿಕ್ಕಾದವರು ಅಂಬೇಡ್ಕರ್ ಅವರು. ಇವರು ರಾಷ್ಟ್ರಮಟ್ಟದಲ್ಲಿನ ೧೯೨೦ ರಿಂದ ೧೯೪೬ರವರೆಗಿನ ಹೋರಾಟಗಳು ಕರ್ನಾಟಕದಲ್ಲಿಯೂ ಅವರ ಪ್ರಭಾವ ಮೇಲ್ಮಟ್ಟದಲ್ಲಷ್ಟೇ ಉಳಿದು ರಾಜಕೀಯ ಪ್ರವೇಶಿಸಿದವರಿಗಷ್ಟೇ ಸ್ಫೂರ್ತಿ ಆಗಿದ್ದರು. ಮುಂದಿನ ದಶಕಗಳಲ್ಲಿ ಅವರ ಸ್ಫೂರ್ತಿ ತಳಕ್ಕೆ ಪ್ರವೇಶಿಸಿತು”.[೮೦] ಈ ವೇಳೆಗೆ ಅಂಬೇಡ್ಕರ್ ರಾಷ್ಟ್ರಮಟ್ಟದಲ್ಲಿ ದಲಿತ ಮತ್ತು ಕಾರ್ಮಿಕ ನಾಯಕರಾಗಿ ರೂಪುಗೊಂಡಿದ್ದರು. ಇದರ ಪ್ರೇರಣೆ ಪ್ರಭಾವ ಭಾರತದ ಬಹುತೇಕ ರಾಜ್ಯಗಳ ಮೇಲೂ ಆಯಿತು. ಮಹಾರಾಷ್ಟ್ರವನ್ನು ಬಿಟ್ಟರೆ ಅಂಬೇಡ್ಕರ್ ಪ್ರಭಾವ ಮೊಟ್ಟ ಮೊದಲಾದುದು

ಕರ್ನಾಟಕಕ್ಕೆ. ಅದರಲ್ಲೂ ಉತ್ತರ ಕರ್ನಾಟಕ ಭಾಗವು ಅಂಬೇಡ್ಕರ್ ಅವರ ಪ್ರಭಾವಕ್ಕೆ ಒಳಗಾಯಿತು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೋಕಿನ ಇಂಗಳಿ ಗ್ರಾಮದಲ್ಲಿ ಅಸ್ಪೃಶ್ಯ ಜಾತಿಯ ಮಹಾರ್ ಮನೆತನದಲ್ಲಿ ೧೮೮೯ರ ಜುಲೈ ತಿಂಗಳಲ್ಲಿ ಜನಿಸಿದ ಶ್ರೀ ದೇವರಾಯ ಇಂಗಳೆ ಮೊದಲ ತಲೆಮಾರಿನ ದಲಿತ ಲೇಖಕ ಹಾಗೂ ಚಳುವಳಿಗಾರ ಎಂದು ಹೆಸರಿಸಬಹುದು. ಇವರು ಜ್ಯೋತಿ ಬಾಫುಲೆಯವರ ಪ್ರಭಾವಕ್ಕೆ ಒಳಗಾಗಿದ್ದರು. ಬೆಳಗಾವಿ ಜಿಲ್ಲೆಯಲ್ಲಿ ದಲಿತ ಜಾಗೃತಿಗೆ ಅಂಬೇಡ್ಕರ್ ಅವರು ತಮ್ಮ 'ಬಾರ್ ಆ್ಯಟ್ ಲಾ' ಪದವಿಯನ್ನು ಮುಗಿಸಿಕೊಂಡು ಬರುವ ಹೊತ್ತಿಗೆ ಶ್ರೀದೇವರಾಯ ಇಂಗಳೆಯವರು ಬೆಳಗಾವಿ ಜಿಲ್ಲೆಯಾದ್ಯಂತ ಸಾಮಾಜಿಕ ಕ್ರಾಂತಿಯ ಕಿಚ್ಚು ನೀಗಿಸಿರುವಂತೆ ನೋಡಿಕೊಂಡಿದ್ದರಲ್ಲದೆ, ಸ್ವಾತಂತ್ರವಾಗಿ ದಲಿತ ಚಳುವಳಿಯನ್ನು ಕಟ್ಟಿದ್ದರು. ದೇವರಾಯ ಇಂಗಳೆಯವರು ಪ್ರಪ್ರಥಮವಾಗಿ ಡಾ. ಅಂಬೇಡ್ಕರ್ ಅವರನ್ನು ಸನ್ಮಾನಿಸಿದರು. ಡಾ. ಅಂಬೇಡ್ಕರ್‌ರು ತಮ್ಮ ಚಳುವಳಿಯನ್ನು ಪ್ರಾರಭಿಸಬೇಕೆನ್ನುವ ಪೂರ್ವದಲ್ಲಿಯೇ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಅಸ್ಪೃಶ್ಯತಾ ವಿರೋಧಿ ಚಳುವಳಿಯನ್ನು ಒಂದು ಹಂತಕ್ಕೆ ಮುನ್ನಡೆಸಿವ ವಿವರವನ್ನು ಸಂವಿಧಾನ ಶಿಲ್ಪಿಗೆ ದೇವರಾಯ ಇಂಗಳೆ ಪರಿಚಯಿಸಿದರು. ನಂತರ "ಅಂಬೇಡ್ಕರ್ ಅವರು ದಲಿತರ ಪರವಾದ ಕಾರ್ಯಕ್ರಮಗಳನ್ನು ರೂಪಿಸುತ್ತಾರೆ. ಜಾತಿವಾಚಕ ಅಡ್ಡ ಹೆಸರಿನ ನಿರ್ಮೂಲನೆ, ಸತ್ತ ದನದ ಮಾಂಸ ಭಕ್ಷಣೆ ತಡೆಗಟ್ಟುವುದು, ಅಸ್ಪೃಶ್ಯತಾ ವಿರುದ್ಧದ ಹೋರಾಟ ಮತ್ತು ದೇವದಾಸಿ ಪದ್ಧತಿಯ ವಿರುದ್ಧದ ಹೋರಾಟ ಪ್ರಾರಂಭಿಸಿದ್ದರು"[೧.] ತದನಂತರ ಅಂಬೇಡ್ಕರ್ ಅವರು ಹುಬ್ಬಳ್ಳಿ – ಧಾರವಾಡ, ಕೆ.ಜಿ.ಎಫ್–ಬೆಂಗಳೂರುಗಳಿಗೆ ಭೇಟಿ ಕೊಟ್ಟು ಅಸ್ಪೃಶ್ಯರ ದಾಸ್ಯದ ಬಿಡುಗಡೆಯ ಹಿನ್ನಲೆಯಲ್ಲಿ ಚಳುವಳಿಯ ಚಿಂತನೆ ನಡೆಸಿದ್ದರು.

ದಲಿತ ಪ್ಯಾಂಥರ್ಸ್ ಚಳುವಳಿಯ ಹಿಂದೂ ಧರ್ಮದ ಅನಿಷ್ಟಗಳಾದ ಚಾತುರ್ವರ್ಣ ಜಾತೀಯತೆ, ಅಸ್ಪೃಶ್ಯತೆ, ದೇವರ ಪರಿಕಲ್ಪನೆ, ಢಂಬಾಚಾರ, ಧರ್ಮದ ದುರ್ಬಳಕೆ ಅಮಾಯಕರ ಮೇಲೆ ದೌರ್ಜನ್ಯ ಮತ್ತು ಬ್ರಾಹ್ಮಣರು ಬ್ರಾಹ್ಮಣೇತರರನ್ನು ವಂಚಿಸುವುದರ ವಿರುದ್ಧ ಪ್ರತಿಭಟನೆ ನಡೆಸುವ ಚಳುವಳಿಯಾಗಿದೆ. ಅಂಬೇಡ್ಕರ್ ಕನಸಿನ ಕೂಸಾದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ನಾಯಕತ್ವದ ಗೊಂದಲದಲ್ಲಿ ದಲಿತರ ಹಿತಾಸಕ್ತಿ ಕಡೆಗಣಿಸಿದಾಗ ಇದನ್ನು ವಿರೋಧಿಸಿ ಪ್ಯಾಂಥರ್ಸ್ ದಲಿತ ನಿಷ್ಠೆಯಿಂದ ಕ್ರಿಯಾಶೀಲವಾಗಬೇಕಾಯಿತು. ಜಮೀನ್ದಾರಿ, ಬಂಡವಾಳಶಾಹಿ, ನೌಕರಿಶಾಹಿ ಮತ್ತು ಸವರ್ಣೀಯರ ದೌರ್ಜನ್ಯಗಳನ್ನು ಎದುರಿಸಲು ಈ ಸಂಘಟನೆ ವ್ಯಾಪಕ ಕಾರ್ಯಕ್ರಮವನ್ನು ರೂಪಿಸಿಕೊಂಡಿತು. "ಎಪ್ಪತ್ತರ ದಶಕದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ವರಿಷ್ಠ

ಅಧಿಕಾರಿಗಳು ನಿದ್ರೆಗೆಡಬೇಕಾದ ಪರಿಸ್ಥಿತಿ ಎದುರಾಯಿತು. ಮಹಾರಾಷ್ಟ್ರದ ವಿದ್ಯಾವಂತ ದಲಿತರು, ವಿದ್ಯಾರ್ಥಿಗಳು ಹಾಗೂ ಚಳುವಳಿಗಾರರು ಅಂಬೇಡ್ಕರ್‌ರ ಹೆಸರಿಗೆ ಸವರ್ಣೀಯ ಹಿಂದೂಗಳಿಂದ ಅವಮಾನವಾದಾಗ ತಮ್ಮ ಜೀವನದ ಹಂಗು ತೊರೆದು ಹೋರಾಡಲು ಸಿದ್ಧರಾದ ಸಾಕಷ್ಟು ಉದಾಹರಣೆಗಳನ್ನು ಕಾಣಬಹುದು”.[೯೨] ದಲಿತ ಪ್ಯಾಂಥರ್ಸ್ ಬರೀ ಚಳುವಳಿಗೆ ಮಾತ್ರ ಸೀಮಿತವಾಗಿರದೆ ದಲಿತರ ಎದೆಯ ಧನಿಗಳು ಮಾತಾನಾಡುವಂತೆ ಮಾಡಿದಿದ್ದು ಅಂಬೇಡ್ಕರ್ ಅವರ ಚಿಂತನೆಯ ಬರಹಗಳು ಮತ್ತು ಭಾಷಣಗಳು. ಇದರೊಂದಿಗೆ ಹೋರಾಟ ಮತ್ತು ಸಾಹಿತ್ಯದ ಪ್ರಭಾವ ಕರ್ನಾಟಕ ದಲಿತ ಚಳುವಳಿಗೆ ಹಾಗೂ ದಲಿತ ಸಾಹಿತ್ಯದ ಮೇಲೆ ಅದರಲ್ಲೂ ಕನ್ನಡ, ಮರಾಠಿ ದಲಿತ ಆತ್ಮಕಥೆಗಳ ಮೇಲೆ ಆಗಾಧವಾದ ಪ್ರಭಾವವನ್ನುಂಟು ಮಾಡಿರುವುದು ಕಂಡುಬರುತ್ತದೆ.

“ದಲಿತ ಸಂಘರ್ಷ ಸಮಿತಿ ಬರುವುದಕ್ಕಿಂತ ಮುಂಚಿತವಾಗಿ ದಲಿತರಲ್ಲಿ ಯಾವುದೇ ಸಂಘಟನೆಗಳು ಇರಲಿಲ್ಲವೆಂದಲ್ಲವಾದರೂ, ಜಯಭೀಮಸಂಘ, ಅಂಬೇಡ್ಕರ್ ಸಂಘ, ಹರಿಜನಾ ಭಜನಾ ಮಂಡಳಿ, ಭೀಮಸೇನ ಹೀಗೆ ಬೇರೆ ಬೇರೆ ಹೆಸರುಗಳಿಂದ ಸಂಘಟನೆಗಳು ಅಂಬೇಡ್ಕರ್ ಅವರ ಪ್ರಭಾವದಿಂದ ಹುಟ್ಟಿಕೊಂಡಿದ್ದವು. ಇವುಗಳು ಹೆಚ್ಚಾಗಿ ಸರ್ಕಾರಿ ಸೌಲಭ್ಯ ಪಡೆಯುವುದಕ್ಕಾಗಿ ದೈವಿಕಾ ಕ್ರಿಯಾ ಆರಾಧನೆಗಾಗಿ ಸೀಮಿತವಾಗಿದ್ದಂತವುಗಳು. ಕರ್ನಾಟಕದಲ್ಲಿ ನಡೆದ ಬೂಸಾ ಪ್ರಕರಣದ ತರುವಾಯ ಹುಟ್ಟಿಕೊಂಡ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನಂತರ ಬೇರೆ ಬೇರೆ ಸ್ವರೂಪವನ್ನು ಈ ಸಂಘಟನೆಗಳು ಪಡೆದುಕೊಂಡವು”.[೯೩]

ರಾಜಕೀಯವಾಗಿ ಅಂಬೇಡ್ಕರ್‌ರವರ ವಿಚಾರಧಾರೆಯಿಂದ ಪ್ರೇರಣೆ ಪಡೆದ ಬಸವಲಿಂಗಪ್ಪನವರು ಕರ್ನಾಟಕದಲ್ಲಿ ಅಂಬೇಡ್ಕರ್ ವಿಚಾರ ಧಾರೆ ಮತ್ತು ಚಿಂತನೆಗಳನ್ನು ಅರ್ಥ ಮಾಡಿಕೊಂಡು ಪ್ರಚಾರ ಮಾಡಿದ್ದರು. “ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಕೇವಲ ರಾಜಕೀಯ ವಿಚಾರಗಳಲ್ಲಿ ದಲಿತರು ಹೋರಾಟ ನಡೆಸಿದರು. ಅದಕ್ಕೆ ಹೊಸ ರಂಗು ಬಂದದ್ದು ದೇವರಾಜ ಅರಸರ ಆಡಳಿತದ ಕಾಲದಲ್ಲಿ, ಆಗ ಬಂದ ಹಾವನೂರು ಆಯೋಗದ ವರದಿ ಮಹತ್ವದ ಬದಲಾವಣೆಯನ್ನು ತಂದಿತು. ೧೯೭೪ರಲ್ಲಿ ಅಂಬೇಡ್ಕರ್ ಜಯಂತಿಯಂದು ಈ ವರದಿಗೋಸ್ಕರವಾಗಿ ವ್ಯವಸ್ಥಿತವಾದ ಆಂದೋಲನಕ್ಕೆ ಅವಕಾಶ ಸಿಕ್ಕಂತಾಯಿತು. ಇದರಲ್ಲಿ ಬಿ. ಬಸವಲಿಂಗಪ್ಪ, ಎಲ್.ಜಿ. ಹಾವನೂರ, ಎಂ. ಮಲ್ಲಿಕಾರ್ಜುನಸ್ವಾಮಿ ಮುಂತಾದವರು ನೇತೃತ್ವ ವಹಿಸಿದರು. ಇದರ ಫಲವಾಗಿ ದಲಿತ ಸಾಹಿತ್ಯ ಮತ್ತು ಚಳುವಳಿಯಲ್ಲಿ ಹೊಸ ಸಂಚಲನವೇ ಉಂಟಾಯಿತು”.[೯೪]

ಡಾ. ಅಂಬೇಡ್ಕರ್ ವಿಚಾರಧಾರೆಯು ಕರ್ನಾಟಕದಲ್ಲಿ ದಲಿತ ಚಳುವಳಿಯ ಹುಟ್ಟು ಹಾಕಲು ಕಾರಣವಾದ ಘಟನೆಗಳನ್ನು ಗಂಗಾರಂ ಚಾಂಡಳರು ಹೀಗೆ ದಾಖಲಿಸುತ್ತಾರೆ.

"ಚಳುವಳಿಯು ಬೂಸಾ ಪ್ರಕರಣದಿಂದ ಪ್ರೇರಣೆ ಪಡೆಯಿತು. ದಲಿತ ಯುವ ಜನತೆ ಚಳುವಳಿ ಕಾವಿಗೆ ಮೊಟ್ಟೆ ಇಡಲು ಪ್ರಾರಂಭಿಸಿದರು. ಅದೇ ಕಾಲದಲ್ಲಿ ಕನ್ನಡದಲ್ಲಿ ಅಂಬೇಡ್ಕರ್ ಸಾಹಿತ್ಯ ಅನುವಾದಗೊಂಡು ಪ್ರಕಟಣೆಗೊಳ್ಳುತ್ತಿತ್ತು. ಎಂ.ಎನ್. ಜವರಯ್ಯ (ಮನಜ)ರವರು ಅನುವಾದಿಸಿ ಪ್ರಕಟಿಸಿದ ಸಾಹಿತ್ಯ ಅಂಬೇಡ್ಕರ್ ವಿಚಾರಗಳು ಹರಡುವಿಕೆಗೆ ಕಾರಣವಾಯಿತು. ಇತರ ದಲಿತ ಬರಹಗಾರರು ತಮ್ಮ ಸಮಿತಿಯಲ್ಲಿ ಪುಸ್ತಕ ಪ್ರಕಟಿಸುತ್ತಿದ್ದು ದಲಿತ ಸಮೂಹ ಎಚ್ಚರಗೊಳ್ಳುವಲ್ಲಿ ಕಣ್ಣು ಬಿಟ್ಟು ತಮ್ಮ ದೇಹ ಮನಸ್ಸು, ಕೈಕಾಲು ನೋಡಿಕೊಳ್ಳುವಲ್ಲಿ ಸಹಕಾರಿಯಾಯಿತು"[೯೫]. ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್‌ನ ಪ್ರೇರಣೆ ಮತ್ತು ಪ್ರಭಾವದಿಂದ ಮರಾಠಿ ಸಾಹಿತ್ಯವು ರಚನೆಗೊಂಡಿತು. ಹಾಗೆಯೇ ಆಂಧ್ರದ ದಲಿತ ಸಾಹಿತ್ಯ ಅದರಲ್ಲೂ ನಕ್ಸಲೀಯ ಚಳುವಳಿಯ ಹಾಡುಗಳು ತಮ್ಮದೇ ಆದ ಪ್ರಭಾವ ಬೀರಿ ದಲಿತರನ್ನು ಸಂಘಟಿತರಾಗುವಂತೆ ಪ್ರೇರೇಪಿಸಿತು. ತಮಿಳುನಾಡಿನಲ್ಲಿ ಕೊನೆಯ ಹಂತದಲ್ಲಿದ್ದ ಪೆರಿಯಾರ ಚಳುವಳಿ, ತಮಿಳು ದಲಿತರ ಮೇಲೆ ವೈಚಾರಿಕತೆಯ ಛಾಪು ಮೂಡಿಸಿತು.

ಈ ಮೇಲಿನ ಕಾರಣಗಳಿಂದ ಅಂಬೇಡ್ಕರ್ ಕಂಡ ಆಶಯದ ಆಂಶಿಕ ರೂಪವಾಗಿ ಸಾಮಾಜಿಕ ಚಳುವಳಿ ರೂಪುಗೊಂಡಿತು. ಉತ್ತರ ಕರ್ನಾಟಕದ ಮಹಾರಾಷ್ಟ್ರ ಗಡಿಯ ಬೆಳಗಾವಿ–ಬಿಜಾಪುರ ಜಿಲ್ಲೆಗಳಲ್ಲಿ ದಲಿತ ಪ್ಯಾಂಥರ್ಸ್ ಶಾಖೆಗಳು ಹುಟ್ಟಿಕೊಂಡವು. ೧೯೭೪ರ ಸಂದರ್ಭದಲ್ಲಿ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ಪ್ರಾರಂಭವಾದರೆ, ಬೆಂಗಳೂರಲ್ಲಿ ದಲಿತ ಕ್ರಿಯಾ ಸಮಿತಿ, ಮೈಸೂರು ಕೋಲಾರಗಳಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟಗಳ ಪ್ರಾರಂಭವಾದವು. ಅಂಬೇಡ್ಕರ್ ಸಾಹಿತ್ಯದಿಂದ ಸಾಮಾಜಿಕ ಸಂಘರ್ಷಣೆಯಲ್ಲಿ ಚಿಗುರೊಡೆಯುತ್ತಿದ್ದ ವಿದ್ಯಾರ್ಥಿ ಯುವ ಸಮೂಹ ಸುಡುವ ಸಮಸ್ಯೆಗಳನ್ನು ಎದುರಿಸಿ ಹೋರಾಟದ ಪಾಠಗಳನ್ನು ಕಲಿತರು. ಆ ಹೋರಾಟಗಳಲ್ಲಿ ವಿದ್ಯಾರ್ಥಿ ಸಮಸ್ಯೆ, ಹಳ್ಳಿಯ ಜನರ ಮೇಲಿನ ಹಲ್ಲೆ, ದೌರ್ಜನ್ಯ ಸಮಸ್ಯೆ ಹಾಗೂ ಭೂ ಸಮಸ್ಯೆಗಳು ಹೋರಾಟದ ಭಾಗಗಳಾಗಿದ್ದವು.

ಈ ಎಲ್ಲಾ ವಿಚಾರಗಳು ಕರ್ನಾಟಕದ ದಲಿತ ಸಾಹಿತ್ಯ ಮತ್ತು ಕನ್ನಡ ದಲಿತ ಆತ್ಮಕಥೆಗಳ ಮೇಲೆ ಪ್ರಭಾವ ಬೀರಲು ಅಂಬೇಡ್ಕರ್ ಅವರ ವಿಚಾರಧಾರೆಯು ಅಷ್ಟೇ ಪ್ರಮುಖವಾಗಿದೆ. ಇವರ ಬರಹಗಳು ಕನ್ನಡದಲ್ಲಿ ಅನುವಾದಗೊಂಡಿದ್ದು ಪ್ರಮುಖವಾದ ಕಾರಣ. ಶ್ರೀ ಫುಲೆಯವರಿಂದ ೧೯ನೇ ಶತಮಾನದಲ್ಲಿ ಪ್ರಾರಂಭವಾದ ಬ್ರಾಹ್ಮಣ ವಿರೋಧಿ ಚಳುವಳಿಯ ನಂತರ ೨೦ನೇ ಶತಮಾನದಲ್ಲಿ ಅಂಬೇಡ್ಕರ್ ವಿಚಾರ ಚಳುವಳಿಯು ಚಿಂತನೆಗಳನ್ನು ಕನ್ನಡ ಸಾಹಿತ್ಯದಲ್ಲಿ ರಚಿಸತೊಡಗಿದ್ದರು. ಜಾತೀಯತೆಯಿಂದ ಅಸ್ಪೃಶ್ಯರನ್ನು ಹೀನಾಯವಾಗಿ ಕಾಣುವ

ಹಿಂದೂ ಧರ್ಮದ ವಿರುದ್ಧ ತಮ್ಮ ಹೋರಾಟವನ್ನು ಪತ್ರಿಕೆಗಳ ಮೂಲಕ ಪ್ರಾರಂಭಸಿದ್ದರು. ಅಂಬೇಡ್ಕರ್‌ರು ಮೂಕನಾಯಕ, (೧೯೨೦), ಬಹಿಷ್ಕೃತ ಭಾರತ (೧೯೨೭), ಜನತಾ (೧೯೩೦) ಮತ್ತು ಪ್ರಬುದ್ಧ ಭಾರತ (೧೯೫೦) ಪತ್ರಿಕೆಗಳಲ್ಲಿ ಹಿಂದೂ ಧರ್ಮದ ಮತ್ತು ಅದರ ಅನುಯಾಯಿಗಳ ಕಾರ್ಯ; ಅವೈಜ್ಞಾನಿಕ ಜಾತೀಯತೆ, ದಲಿತರ ಶಿಕ್ಷಣ ಸಂಘಟನೆ ಮತ್ತು ಹೋರಾಟಗಳನ್ನು ಕುರಿತು ಬರೆದರು.

ಇದರಿಂದಾಗಿ ಕರ್ನಾಟಕದಲ್ಲು ಈ ಪ್ರಭಾವ ಪ್ರೇರಣೆ ಹೆಚ್ಚಳವಾಗಿ ಕಾಣುತ್ತದೆ. ಅಂಬೇಡ್ಕರ್‌ರ ಕುರಿತು ಕನ್ನಡದಲ್ಲಿ ಮೊಟ್ಟಮೊದಲು ಬಂದ ಕೃತಿಯೆಂದರೆ “ಭಾರತದ ಮೂರ್ತಿ ಭಂಜಕ”. ಇದು ೧೯೪೮ರಲ್ಲಿ ಬಂದ ಇಪ್ಪತ್ತು ಪುಟಗಳ ಚಿಕ್ಕ ಕೃತಿ. ಆಚಾರ್ಯ ಪಿ.ಕೆ.ಅತ್ರೆಯವರು ಡಾ. ಅಂಬೇಡ್ಕರ್‌ರವರ ಐವತ್ತೈದನೆಯ ಜಯಂತಿ ಪ್ರಯುಕ್ತ ಬರೆದ ಲೇಖನವನ್ನು ಬಾಗಲಕೋಟೆಯಲ್ಲಿ ಶಿಕ್ಷಕರಾಗಿದ್ದು ಗೌರ ಗುರೂಜಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. “ಅತ್ರೆಯವರು ಈ ಪುಸ್ತಕ ಅಂದು ಸವರ್ಣೀಯರು ದಲಿತ ಸಮಾಜ, ದಲಿತ ಚಳುವಳಿ ಮತ್ತು ಡಾ. ಅಂಬೇಡ್ಕರ್‌ರ ಕುರಿತು ಹೊಂದಿದ್ದ ಪೂರ್ವಾಗ್ರಹಗಳನ್ನು ಕಿತ್ತೊಗೆಯುತ್ತದೆ. ಇದನ್ನು ಅನುವಾದಿಸಿದ ಗೌರ ಗುರೂಜಿ ‘ನಿದ್ರೆಯ್ಲಲಿದ್ದ ಅಸ್ಪೃಶ್ಯ ಜನಾಂಗವನ್ನು ಬಡಿದೆಬ್ಬಿಸಿ ಅವರಲ್ಲಿ ನವಚೈತನ್ಯವನ್ನುಂಟು ಮಾಡಿದ ಮಹಾಪುರುಷರು ಅಂಬೇಡ್ಕರ್ ಎಂದಿದ್ದಾರೆ”.[೯೬]

೧೯೫೯ರಲ್ಲಿ ಶ್ರೀ ಕುಮಾರ ವೆಂಕಣ್ಣನವರು ‘ಅಸ್ಪೃಶ್ಯರು’ ಗ್ರಂಥವನ್ನು ಅನುವಾದಿಸಿದರು. ಇದರಿಂದ ಸಂಪ್ರದಾಯವಾದಿಗಳಿಗೆ ಕಸಿವಿಸಿ ಉಂಟಾಯಿತು. ಆ ಕುರಿತು ವೆಂಕಣ್ಣನವರು ಹೀಗೆ ಹೇಳುತ್ತಾರೆ. “ಈ ಪುಸ್ತಕ ಅನುವಾದಿಸಿ ಪ್ರಕಟಿಸಿದ ಲೇಖಕರನ್ನು ನಿಂದಿಸಿದವರು ಕೆಲವರು. ಇದರಲ್ಲಿ ಬಸವಣ್ಣನವರ ವಿಚಾರ ಇಲ್ಲ ಎಂದರು. ಬ್ರಾಹ್ಮಣರ ವಿರೋಧ ವಿಚಾರವಿದೆ ಎಂದು ಇನ್ನೊಬ್ಬರು ಟೀಕೆ ಬರೆದರು. ಸಮಾಜ ಕಲ್ಯಾಣ ಹಾಗೂ ಪಠ್ಯಪುಸ್ತಕ ಸಮಿತಿಗಳು ಪುಸ್ತಕ ಕೊಳ್ಳದಂತೆ ಅಡ್ಡಿಪಡಿಸಲಾಯಿತು. ಅಂದಿನ ಸಮಾಜ ಕಲ್ಯಾಣ ಸಚಿವರು, ಹರಿಜನರಿಗೆ ಬೇಕಾದುದು ಅನ್ನ.. ಪುಸ್ತಕವಲ್ಲ ಎಂದು ವಾದಿಸಿ ಈ ಪುಸ್ತಕಕ್ಕೆ ಅಡ್ಡಿ ತಂದರು”[೯೭] ಅಂದರೆ ಅಸ್ಪೃಶ್ಯರು ಎಂಬ ಪುಸ್ತಕವನ್ನು ಕೊಂಡು ಓದಿದ್ದ ಹಿಂದುಳಿದ ಮತ್ತು ದಲಿತ ಸಮುದಾಯದವರಲ್ಲಿ ಜಾಗೃತಿಯುಂಟಾಗುವುದನ್ನು ಬಹಳ ನಿಯೋಜಿತವಾಗಿ ತಪ್ಪಿಸಿದಂತೆ ಮಾಡಿದ್ದರು ಎಂದು ಈ ಮೇಲಿನ ಅಂಶಗಳಿಂದ ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಅಂಬೇಡ್ಕರ್ ಅವರ ವಿಚಾರಧಾರೆಯ ಹಿನ್ನೆಲೆಯಲ್ಲಿ ಹಲವಾರು ಕೃತಿಗಳು ರಚನೆಗೊಂಡವು. ಕರ್ನಾಟಕ ದಲಿತ ಸಾಹಿತ್ಯ (೧೯೭೮), ಮನಜ ಅವರ ಡಾ. ಅಂಬೇಡ್ಕರ್

(೧೯೭೦), ಎಸ್. ರಾಜಶೇಖರ್ ಅವರ ಅಸ್ಪೃಶ್ಯತೆ (೧೯೭೩), ವಸಂತ ಪ್ರಕಾಶನದ 'ಡಾ. ಅಂಬೇಡ್ಕರರು', 'ಅಸ್ಪೃಶ್ಯರು', ಕೆ. ನಾರಾಯಣಸ್ವಾಮಿ ಅವರು ಅನುವಾದಿಸಿದ 'ದಲಿತ ಕೈಪಿಡಿ' (೧೯೭೫), ಅಂಬೇಡ್ಕರ್ ವಾಣಿ '೧೯೭೫), ಎಚ್.ಜೆ. ಲಕ್ಕಪ್ಪಗೌಡ ಅವರಿಂದ 'ದಲಿತ ಸೂರ್ಯ', ವಿ.ಎಂ. ಇನಾಂದಾರರ 'ಅಂಬೇಡ್ಕರ್ ವ್ಯಕ್ತಿ ಮತ್ತು ವಿಚಾರ' (೧೯೮೧), ದೇ. ಜವರೇಗೌಡರ 'ಕ್ರಾಂತಿಕಾರಿ ಡಾ. ಅಂಬೇಡ್ಕರ್' (೧೯೮೯), ಅರವಿಂದ ಮಾಲಗತ್ತಿ ಅವರು ಸಂಪಾದಿಸಿರುವ 'ಅಂಬೇಡ್ಕರ್ ವಿಚಾರಧಾರೆ (೧೯೯೧), ಸಂಕ್ರಮಣದ 'ಅಂಬೇಡ್ಕರ್ ವಿಶೇಷಾಂಕ' (೧೯೮೧), ಕರ್ನಾಟಕ ಸರ್ಕಾರ ಡಾ. ಅಂಬೇಡ್ಕರ್ ಬರಹ ಭಾಷಣಗಳ ಅನುವಾದ ಸಂಪುಟಗಳನ್ನು ಪ್ರಕಟಿಸತೊಡಗಿತು (೧೯೮೭). ಇದಲ್ಲದೆ, ದಲಿತ ಸಂಘಟನೆ ಮತ್ತು ಸಾಹಿತ್ಯ ಬೆಳವಣಿಗೆಗೆ ನೇರವಾಗಿ ತೆಲಗು ಹಾಡುಗಳನ್ನು ವಿಫುಲವಾಗಿ ಕನ್ನಡಿಸಿದ್ದಾರೆ. ಇವರ ಪರಿಶ್ರಮದಿಂದ ಸಂಗ್ರಹಗೊಂಡ ದಲಿತ ಸಂಘರ್ಷ ಸಮಿತಿ ಪ್ರಕಟಿಸಿದ 'ಹೋರಾಟದ ಹಾಡುಗಳು' (೧೯೮೦) ಕರ್ನಾಟಕ ದಲಿತ ಚಳುವಳಿ ಮತ್ತು ದಲಿತ ಸಾಹಿತ್ಯದ ಜೀವನಾಡಿಯಾದವು. ಈ ಎಲ್ಲ ಕೃತಿಗಳೊಂದಿಗೆ ನೂರಾರು ಕವಿಗಳು ಅಂಬೇಡ್ಕರ್‌ರವರನ್ನು ಕುರಿತು ಕವಿತೆಗಳನ್ನು ರಚಿಸಿರುವುದು ಸಹ ಇವರ ಚಿಂತನೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಇದರಿಂದ ಕರ್ನಾಟಕದ ದಲಿತರಿಗೆ ಹಾಗೂ ಪ್ರಗತಿ ಚಿಂತಕರಿಗೆ ಹೊಸ ನಿಧಿ ಸಿಕ್ಕಂತಾಗುತ್ತದೆ. ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು ಆರಂಭಿಸಿದ ಅಂಬೇಡ್ಕರ್ ಅಧ್ಯಯನ ಕೇಂದ್ರಗಳು ಕನ್ನಡ ದಲಿತ ಸಾಹಿತ್ಯ ಮತ್ತಷ್ಟು ಬೆಳೆಯಲು ಕಾರಣವಾಗಿವೆ.

೧.೩.೭ ಕಾರ್ಲ್‌ಮಾರ್ಕ್ಸ್

ಜರ್ಮನಿಯ ಪ್ರಖ್ಯಾತ ತತ್ವಜ್ಞಾನಿಯಾದ 'ಕಾರ್ಲ್ ಮಾರ್ಕ್ಸ್' ಜಾಗತಿಕ ಸಮಾಜದ ಮೇಲೆ ಪ್ರಭಾವ ಬೀರಿದ ಪ್ರಮುಖ ವ್ಯಕ್ತಿ. ಈತನದು ಆರ್ಥಿಕ ಮೂಲವಾದ ಸಮಾಜವಾದಿ ದೃಷ್ಟಿಕೋನವಾಗಿದೆ. ಬಂಡವಾಳಶಾಹಿಗಳು ಮತ್ತು ಕಾರ್ಮಿಕರ ನಡುವಿನ ಸಂಬಂಧಗಳನ್ನು ಆರ್ಥಿಕ ಅಂಶಗಳ ಆಧಾರದ ಮೇಲೆ ವಿಶ್ಲೇಷಣೆ ನಡೆಸಿ, ಕಾರ್ಮಿಕರು ತಮ್ಮ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ಬಂಡೇಳುವುದು ಸಹಜ ಎಂಬುದನ್ನು ಪ್ರತಿಪಾದಿಸಿದ. "ತತ್ವಜ್ಞಾನಿಗಳು ಪ್ರಪಂಚವನ್ನು ಕುರಿತು ಬೇರೆ-ಬೇರೆ ರೀತಿಗಳಲ್ಲಿ ವ್ಯಾಖ್ಯಾನ ಮಾತ್ರ ಮಾಡಿದ್ದಾರೆ. ಆದರೆ ಪ್ರಪಂಚವನ್ನು ಬದಲಾವಣೆ ಮಾಡುವುದು ಮುಖ್ಯ ವಿಷಯ ಎಂದ ಮಾರ್ಕ್ಸ್ ಪ್ರಪಂಚವನ್ನು ಬದಲು ಮಾಡಲು ಮೂಲಭೂತವಾದ ಪಲ್ಲಟಗಳನ್ನು ವೈಜ್ಞಾನಿಕವಾಗಿ ರೂಪಿಸಲು ಅಗತ್ಯವಾದ ಚಿಂತನಾಧಾರೆಯನ್ನು ಜನತೆಯ ಮುಂದಿಟ್ಟ ಇದನ್ನು ಸಮಾಜವಾದ, ಸೌಮ್ಯವಾದ ಎಂದು

ಕರೆದ. ಸಮಾಜದ ಆರ್ಥಿಕ ಬುನಾದಿಯ ಬದಲಾವಣೆಯಿಂದ ಅದರ ರಾಜಕೀಯ, ವೈಚಾರಕ ರಚನೆಗಳು ಬದಲಾವಣೆ ಹೊಂದುತ್ತವೆ ಎಂದು ಹೇಳಿದನಲ್ಲದೆ ಸಮಾಜವನ್ನು 'Basic Structure' ಮತ್ತು 'Super Structure' ಎಂದು ವಿಂಗಡಿಸಿದ".[೮]

ಮಾರ್ಕ್ಸ್ ತನ್ನ ವಿಚಾರಗಳನ್ನು ಕಲ್ಪನೆಯ ಆಧಾರದ ಮೇಲೆ ಮಂಡಿಸದೆ, ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿದ್ದಾನೆ. ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳನ್ನು ಕುರಿತು ಆತ ವಿಚಾರ ಮಾಡಿರುವ ರೀತಿ ತುಂಬಾ ವೈಜ್ಞಾನಿಕವಾಗಿದೆ. ಮಾರ್ಕ್ಸ್ ಪ್ರಕಾರ ಇತಿಹಾಸವೆಂಬುದು ಒಂದು ಪಾಠವಾಗಿ ಅದು ವರ್ತಮಾನದ ಮೇಲೆ ಪ್ರಭಾವ ಬೀರುತ್ತದೆ. ಅಷ್ಟೇ ಅಲ್ಲ ಭವಿಷ್ಯವನ್ನು ರೂಪಿಸುವಲ್ಲಿಯೂ ಭೂತವು ಮಹತ್ವದ ಪಾತ್ರವಹಿಸುತ್ತದೆ ಎಂಬ ಸಿದ್ಧಾಂತವನ್ನು ಮಂಡಿಸಿದ. ಆತನ ಪ್ರಕಾರ ಇತಿಹಾಸವೆಂದರೆ ರಾಜರುಗಳ ಏಳು ಬೀಳಿನ ಸೋಲು – ಗೆಲುವಿನ ವೀರಗಾಥೆ ಅಲ್ಲ ಅಥವಾ ಇತಿಹಾಸದ ಚಲನಶೀಲತೆಗೆ ಸಂಭವಿಸದ ಘಟನೆಗಳಿಗೆ, ತಿರುವುಗಳಿಗೆ ಕಾರ್ಯಕಾರಣ ಸಂಬಂಧವಾಗಲಿ ಅಥವಾ ಆಧ್ಯಾತ್ಮಿಕತೆಯಾಗಲಿ ಕಾರಣವಲ್ಲ. ಇತಿಹಾಸದಲ್ಲಿ ಸಂಭವಿಸಿದ ಎಲ್ಲಾ ಬಗೆಯ ರಾಜಕೀಯ, ಸಾಮಾಜಿಕ, ಆರ್ಥಿಕ ಬದಲಾವಣೆಗಳಿಗೆ ಭೌತಿಕವಾದ ಕಾರಣಗಳೇ ಮುಖ್ಯ. ಭೌತಿಕವಾದ ಕಾರಣಗಳೆಂದರೆ,

೧. ಸಂಪತ್ತಿನ ಉತ್ಪಾದನೆ ಮತ್ತು ವಿತರಣೆ.
೨. ಪ್ರಾಕೃತಿಕ ಸಂಪನ್ಮೂಲಗಳು.
೩. ಯಂತ್ರ ಕೌಶಲ್ಯಗಳು.
೪. ಮಾನವ ಸಂಪನ್ಮೂಲಗಳು.
೫. ವಸ್ತುಗಳ ಉತ್ಪಾದನೆಯ ವ್ಯಯವಾದ ಕಾಲ.

ಮಾರ್ಕ್ಸ್‌ನ ಪ್ರಕಾರ ಯಾವುದೇ ಒಂದು ಯುಗದಲ್ಲಿ ಒಂದು ಸಮಾಜ ತನ್ನ ಜೀವನಾವಶ್ಯಕತೆಗಳನ್ನು ಹೇಗೆ ಉತ್ಪಾದಿಸುತ್ತದೆ ಮತ್ತು ಹೇಗೆ ಹಂಚಿಕೊಳ್ಳುತ್ತದೆ ಎನ್ನುವ ಭೌತಿಕ ಸ್ಥಿತಿಗತಿಗಳನ್ನು ಅನುಸರಿಸಿ ಅದಕ್ಕೆ ತಕ್ಕಂತೆ ವಿವಿಧ ವರ್ಗಗಳು ಹುಟ್ಟಿಕೊಳ್ಳುತ್ತವೆ. ಹಿಂದಣ ಇತಿಹಾಸವನ್ನು ಗಮನಿಸಿದರೆ ಪ್ರತಿಯೊಂದು ಸಮಾಜದ ಇತಿಹಾಸವು ವರ್ಗ ಸಂಘರ್ಷದ ಇತಿಹಾಸವೇ ಆಗಿದೆ. ಸ್ವಾತಂತ್ರ್ಯ ವ್ಯಕ್ತಿ ಮತ್ತು ಗುಲಾಮ ಮಾನ್ಯ ಮತ್ತು ಸಾಮಾನ್ಯ, ಧಣಿ ಮತ್ತು ಒಕ್ಕಲು, ಒಡೆಯ ಮತ್ತು ಆಳುಗಳು ಮುಂತಾಗಿ ಒಂದು ಶೋಷಕ ವರ್ಗ ಹಾಗೂ ಇನ್ನೊಂದು ಶೋಷಿತ ವರ್ಗ ಈ ಎರಡು ಒಂದಕ್ಕೊಂದು ವಿರುದ್ಧವಾಗಿ ನಿಂತು ಕೆಲವೊಮ್ಮೆ

ಗುಪ್ತವಾಗಿ ಅಖಂಡ ಹೋರಾಟ ನಡೆಸುತ್ತಲೇ ಬಂದಿದೆ. ಪ್ರತಿಯೊಂದು ಸಲವೂ ಈ ಹೋರಾಟದ ಅಂತ್ಯದಲ್ಲಿ ಸಮಗ್ರ ಇತಿಹಾಸದ ಕ್ರಾಂತಿಕಾರಕ ಪರಿವರ್ತನೆ ಸಂಭವಿಸಿದೆ. ಇಲ್ಲವೆ ಸೆಣಸಿ ನಿಂತ ವರ್ಗಗಳ ಸಮಗ್ರ ವಿನಾಶ ಸಂಭವಿಸಿದೆ.

"ಮಾರ್ಕ್ಸ್‌ವಾದಿ ಇತಿಹಾಸದ ಸಿದ್ಧಾಂತದ ಪ್ರಕಾರ ಪ್ರಪಂಚದ ಇತಿಹಾಸವು ವರ್ಗ ಸಂಘರ್ಷದ ಇತಿಹಾಸವೇ ಆಗಿದೆ. ಇದು ನಿರಂತರವಾಗಿ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗುತ್ತಿರುತ್ತದೆ. ಬಂಡವಾಳಶಾಹಿಗಳು ದೊಡ್ಡ ದೊಡ್ಡ ಯಂತ್ರಗಳನ್ನು ಹಾಕುತ್ತಾರೆ. ಅಲ್ಲಿ ಬಹಳಷ್ಟು ಜನ ಕೂಲಿಗಳು ಒಟ್ಟಿಗೆ ಕೆಲಸ ಮಾಡುತ್ತಾರೆ. ಹೆಚ್ಚುತ್ತಿರುವ ಕೂಲಿಗಳನ್ನು ಕುರಿತು ಬರೆಯುತ್ತಾ, 'ಇವರು ಬಂಡವಾಳಶಾಹಿಗಳ ಸಮಾಧಿಯ ಗುಂಡಿಗಳನ್ನು ತೆಗೆಯುವರು' ಎಂದು ಕಾಲಮಾರ್ಕ್ಸ್ ಹೇಳಿದ್ದಾರೆ.[೯೯] ಮಾರ್ಕ್ಸ್‌ವಾದದಲ್ಲಿ ಲೇಖಕರನ್ನು ಆಕರ್ಷಿಸಿದ ಅಂಶಗಳು ಮುಖ್ಯವಾಗಿ ಕಾರ್ಮಿಕ ವರ್ಗಕ್ಕೆ ಸಂಬಂಧಿಸಿವೆ. ಅದರಲ್ಲೂ ಪ್ರತಿಯೊಂದು ಸಮಾಜದಲ್ಲೂ ಬಡವ – ಶ್ರೀಮಂತ ಎಂಬ ಭೇದ ಹಿಂದಿನಿಂದಲೂ ಇದೆ. ಸಾಹಿತ್ಯ ಯಾವತ್ತೂ ದುಡಿಯುವ ವರ್ಗದವರ ಪರವಾಗಿ ಧ್ವನಿಯೆತ್ತಿದೆ ಈ ಕಾರಣದಿಂದ ಮಾರ್ಕ್ಸ್‌ವಾದದ ಮೂಲಕವೇ ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಲು ಸಾಧ್ಯವೆಂಬುದನ್ನು ಗುರುತಿಸಬಹುದು.

"ಕಾರ್ಲ್‌ಮಾರ್ಕ್ಸ್ ಭಾರತದಲ್ಲಿ ಜಾತಿವ್ಯವಸ್ಥೆ ಸಂಪೂರ್ಣವಾಗಿ ನಿರ್ನಾಮವಾಗಬೇಕೆಂದು ಬಯಸಿದವರು. ಆ ಮೂಲಕ ತಳವರ್ಗದ ಸಮುದಾಯಗಳೆಲ್ಲ ಉನ್ನತ ಪ್ರಾತಿನಿಧ್ಯ ಪಡೆದು ಅಧಿಕಾರದ ಹುದ್ದೆಯನ್ನು ಪಡೆದರೇ ಸಮಾನತೆ ಕಾಣಲು ಸಾಧ್ಯ ಎಂಬ ಅಂಶವನ್ನು ಮನಗಂಡಿದ್ದರು. ವರ್ಗ ಮತ್ತು ಜಾತಿಯನ್ನು ನಿರ್ಮೂಲಗೊಳಿಸುವ ಕೆಲಸ ಆಗಬೇಕಿದೆ. ಸಮಿತಿಗಳನ್ನು ರಚಿಸುವಾಗ ಶೂದ್ರ, ಹರಿಜನ ಮತ್ತು ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಅಗಸ, ಕ್ಷೌರಿಕ, ಗಾಣಿಗ, ಕಮ್ಮಾರ ಮತ್ತು ಇತರೆ ಹಿಂದುಳಿದ ಜಾತಿಗಳಲ್ಲಿ ನೂರಾರು ಬಗೆಯ ಸಮಸ್ಯೆಗಳಿವೆ. ಅವರ ಕೇರಿಗಳಿಗೆ ಒಳ್ಳೆಯ ರಸ್ತೆ ಆಗಬೇಕು. ಸುಲಭ ಬೆಲೆಗೆ ಕಚ್ಚಾಮಾಲುಗಳು ದೊರೆಯಬೇಕು. ಪೋಲಿಸರ ದಬ್ಬಾಳಿಕೆ ನಿಲ್ಲಬೇಕು. ಇವರಿಗೆ ಎಲ್ಲ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಆ ಮೂಲಕ ಅವರ ವಿಶ್ವಾಸವನ್ನು ಗಳಿಸಿಕೊಂಡು ಈ ನತದೃಷ್ಟ ಜಾತಿಗಳ ಸಂಘಟನೆಯನ್ನು ರಾಜಕೀಯ ಕ್ಷೇತ್ರದೊಳಗೆ ತರುವುದರಿಂದ ಬಹುಜನ ಸಮಾಜ ರೂಪಿತವಾಗಬಲ್ಲದು"[೧೦೦] ಮುಂದುವರೆದು ರಾಮ ಮನೋಹರ ಲೋಹಿಯಾರವರು "ನಾನೆಂದೂ ಬ್ರಾಹ್ಮಣ ವಿರೋಧಿಯಾಗಿಲ್ಲ, ಆದರೆ ಯಾವತ್ತೂ ಜಾತಿ ವಿರೋಧಿಯಾಗಿದ್ದೇನೆ"[೧೦೧] ಎಂದೂ ಎಲ್ಲಾ ಜಾತಿಯ ವರ್ಗದವರನ್ನು ಸಮಾನ ರೀತಿಯಿಂದ ಕಾಣುತ್ತಿದ್ದ ಅವರು

ಬ್ರಾಹ್ಮಣ್ಯದ ವಿರೋಧಿಯಾಗಿದ್ದರೆ ವಿನಃ ಎಂದು ಬ್ರಾಹ್ಮಣ ವಿರೋಧಿಯಾಗಿರಲಿಲ್ಲ ಎಂಬದನ್ನು ಘಂಟಾಘೋಷವಾಗಿ ಹೇಳುತ್ತಾರೆ. ಇವರ ಮುಖ್ಯ ಉದ್ದೇಶವೇ ಮಾರ್ಕ್ಸ್‌ವಾದದಂತೆ ವರ್ಗ ಸಮಾನತೆಯನ್ನು ಕಾಣುವುದಾಗಿದೆ. ಈ ಮೂಲಕ ಮಾನವ ಜಗತ್ತಿಗೆ ಕಾರ್ಲ್‌ಮಾರ್ಕ್ಸ್ ನೀಡಿದ ಬಹುದೊಡ್ಡ ಕೊಡುಗೆಯನ್ನು ಮೆಚ್ಚಿಕೊಳ್ಳುತ್ತಾರೆ. ಮಾರ್ಕ್ಸ್ ಎಂದೂ ವ್ಯಕ್ತಿ ಪೂಜೆಯನ್ನು ಒಪ್ಪಿರಲಿಲ್ಲ. ಆರಂಭದ ಕ್ರಾಂತಿಯಿಂದಿಡಿದು ಕೊನೆಯವರೆಗೂ ಸಮಷ್ಠಿ ಹೋರಾಟವಾಗಿ ಆತನ ಆಲೋಚನೆಗಳು ಮೂಡಿಬಂದವೇ ಹೊರತು ವ್ಯಕ್ತಿಯೊಬ್ಬನ ಏಳಿಗೆ ಸಮಾಜದ ಏಳಿಗೆ ಎಂದು ಭಾವಿಸದೇ ಸಮಾಜದ ಏಳಿಗೆ ವ್ಯಕ್ತಿಯೊಬ್ಬನ ಏಳಿಗೆ ಎಂದು ಭಾವಿಸಿದ್ದ.

ಮಾರ್ಕ್ಸ್‌ವಾದದ ನೆಲೆಯಲ್ಲಿ ಸಾಹಿತ್ಯ ಕೂಡ ಸಮಾಜದಲ್ಲಿ ಉತ್ಪಾದನೆಯಾಗುವ ವಿಷಯವಾಗಿದೆ. ಒಂದು ಸಮಾಜದಲ್ಲಿ ವ್ಯಕ್ತಿಯಿಂದ ಅಥವಾ ಸಮುದಾಯದಿಂದ ಉತ್ಪಾದನೆಯಾಗುವ ಸಾಹಿತ್ಯ, ಅಲ್ಲಿನ ಸಾಮಾಜಿಕ ಸಂಬಂಧ ಮತ್ತು ಒತ್ತಡಗಳ ಹಿನ್ನೆಲೆಯಲ್ಲಿ ರೂಪ ಪಡೆಯುತ್ತದೆ. "ಸಾಹಿತ್ಯ ರಚನೆ ಎಂಬುದು ಒಂದು ಉತ್ಪಾದನೆ ಇದ್ದಂತೆ. ಘರ್ಷಣೆ, ದ್ವಂದ್ವ, ವೈರಾಗ್ಯದಿಂದ ಕೂಡಿದ್ದು, ಅದು ಸರಳ ರೇಖಾತ್ಮಕವಾಗಿರುವುದಿಲ್ಲ. ಈಗಾಗಲೇ ಸಂಕುಚಿತಗೊಂಡ ಸಾಮಾಜಿಕ ಹಿನ್ನೆಲೆಯಿಂದಲೇ ಸಾಹಿತ್ಯ ಉತ್ಪಾದನೆ ನಡೆಯುತ್ತಿರುತ್ತದೆ. ಈಗ ಬರೆಯಲಾಗಿರುವುದನ್ನು ಮಾತ್ರ ಸಾಹಿತ್ಯವೆಂದು ಕರೆಯುತ್ತೇವೆ. ಮೌಖಿಕವಾಗಿರುವುದನ್ನು ಅನೇಕ ಸಂದರ್ಭಗಳಲ್ಲಿ ಸಾಹಿತ್ಯವಂದೇ ಪರಿಗಣಿಸುವುದಿಲ್ಲ. ಆದರೆ ಪ್ರತಿಯೊಂದು ಸಾಹಿತ್ಯ ಕೃತಿಯೂ ಕೂಡ ಪರಸ್ಪರ ಸಂವಾದವನ್ನು ಬಯಸುತ್ತದೆ. ಬರಹ ರೂಪಗಳು ನಿರ್ಣಾಯಕ ಓದುಗನನ್ನು ಬಯಸುತ್ತವೆ. ಮೌಖಿಕವಾದ ಸಾಹಿತ್ಯ ಪ್ರಕಾರಗಳು ಕೇಳುಗನನ್ನು ಅವಲಂಬಿಸಿವೆ. ಉದಾಹರಣೆಗೆ, ನಮ್ಮಲ್ಲಿರುವ ಅನೇಕ ಪತ್ರಿಕೆಗಳು ಓದುಗರನ್ನು ಅವಲಂಬಿಸಿಕೊಂಡಿವೆ. ಹಸ್ತ ಪ್ರತಿಯೊಂದು ಮುದ್ರಣ ಸಂಸ್ಕೃತಿಯ ಕಡೆಗೆ ತಿರುಗುವಾಗ ಅನೇಕ ಮಾದರಿಯ ಶ್ರಮವನ್ನು ಬಯಸುತ್ತದೆ. ಓದುಗರು ಈ ರೀತಿಯ ಸಂಸ್ಕೃತಿಯಲ್ಲಿ ಕೊಳ್ಳುವರಾಗಿರುತ್ತಾರೆ. ಅನೇಕ ರೀತಿಯ ಓದುಗರು ಒಂದೇ ಕೃತಿಯನ್ನು ಬೇರೆ – ಬೇರೆ ಜಾಗಗಳಲ್ಲಿ ಬೇರೆ – ಬೇರೆ ರೀತಿಯಲ್ಲಿ ಓದುತ್ತಾರೆ. ಮುದ್ರಣ ಸಂಸ್ಕೃತಿಯಲ್ಲಿ ಸಾಹಿತ್ಯ ಕೃತಿಗಳು ಸಾವಿರಾರು ಪ್ರತಿಯಾಗಿ ಹಂಚಲ್ಪಡುತ್ತವೆ. ಓದುಗರಿಗೂ ಒಂದು ಮಿತಿ ಎಂಬುದಿಲ್ಲ. ಇದು ವಿಶಿಷ್ಟವಾದ ಸಾಮಾಜಿಕ ಸಂಬಂಧವಾಗಿ ಪರಿವರ್ತನೆಗೊಂಡಿದೆ".[೧೦೨]

ಮಾರ್ಕ್ಸ್‌ವಾದದ ಪ್ರಕಾರ ಸಾಹಿತ್ಯ ಕೃತಿಗಳನ್ನು ಸಾಮಾನ್ಯ ಉತ್ಪಾದನೆಗಳಿಂದ ಭಿನ್ನವೆಂದು ಹೇಳಲು ಬರುವುದಿಲ್ಲ. ಒಂದೊಂದು ಕಾಲಘಟ್ಟದ ಸಾಹಿತ್ಯವು ಆಯಾಕಾಲದ ಸಾಮಾಜಿಕ,

ರಾಜಕೀಯ ಮತ್ತು ಆರ್ಥಿಕ ಸಂಬಂಧಗಳ ಪ್ರಭಾವದಿಂದಲೇ ಸೃಷ್ಟಿಯಾಗುತ್ತದೆ. ಸಾಹಿತ್ಯದಲ್ಲಿಯೂ ಪ್ರಭುತ್ವ ಮತ್ತು ಸಾಮಾನ್ಯ ಜನತೆಗಳ ನಡುವೆ ಉಂಟಾದ ಸಂಘರ್ಷಗಳು ವಿಶ್ಲೇಷಣೆಗೆ ಒಳಪಟ್ಟಿವೆ. ಸಾಹಿತ್ಯದಿಂದ ಸಮಾಜದ ಮೇಲೆ ಉಂಟಾಗುವ ಪರಿಣಾಮವನ್ನು ಮಾರ್ಕ್ಸ್ ಈ ಹಿನ್ನೆಲೆಯಲ್ಲಿಯೇ ವಿಶ್ಲೇಷಣೆ ಮಾಡಿದ. ಕಿ.ಶ. ೧೮೪೮ರಲ್ಲಿ ಪ್ರಕಟವಾದ ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯಲ್ಲಿ ಈ ಅಂಶಗಳನ್ನು ಸ್ಪಷ್ಟಪಡಿಸಲಾಗಿದೆ. "ಪ್ರತಿಯೊಂದು ಐತಿಹಾಸಿಕ ಯುಗದ ಆರ್ಥಿಕ ಉತ್ಪಾದನೆಯು ಮತ್ತು ಅದರಿಂದ ಅವಶ್ಯಕವಾಗಿಯೇ ಉದ್ಭವಿಸುವ ಸಮಾಜ ರಚನೆಯು ಆ ಯುಗದ ರಾಜಕೀಯ ಹಾಗೂ ಬೌದ್ಧಿಕ ಇತಿಹಾಸದ ತಳಪಾಯವಾಗಿರುತ್ತದೆ. ಹಸ್ತಪ್ರತಿಯೊಂದು ಮುದ್ರಣ ಸಂಸ್ಕೃತಿಯಲ್ಲಿ ಕೊಳ್ಳುಗರಾಗಿರುತ್ತಾರೆ. ಅನೇಕ ರೀತಿಯ ಓದುಗರು ಒಂದೇ ಕೃತಿಯನ್ನು ಬೇರೆ ಬೇರೆ ಜಾಗಗಳಲ್ಲಿ ಬೇರೆ – ಬೇರೆ ರೀತಿಯಲ್ಲಿ ಓದುತ್ತಾರೆ. ಮುದ್ರಣ ಸಂಸ್ಕೃತಿಯಲ್ಲಿ ಸಾಹಿತ್ಯ ಕೃತಿಗಳು ಸಾವಿರಾರು ಪ್ರತಿಯಾಗಿ ಹಂಚಲ್ಪಡುತ್ತವೆ. ಓದುಗರಿಗೂ ಒಂದು ಮಿತಿ ಎಂಬುದಿಲ್ಲ. ಇದು ವಿಶಿಷ್ಟವಾದ ಸಾಮಾಜಿಕ ಸಂಬಂಧವಾಗಿ ಪರಿವರ್ತನೆಗೊಂಡಿದೆ"[೧೦೩]

ಮಾರ್ಕ್ಸ್‌ವಾದದ ಪ್ರಕಾರ ಸಾಹಿತ್ಯ ಕೃತಿಗಳನ್ನು ಸಾಮಾನ್ಯ ಉತ್ಪಾದನೆಗಳಿಂದ ಭಿನ್ನವೆಂದು ಹೇಳಲು ಬರುವುದಿಲ್ಲ. ಒಂದೊಂದು ಕಾಲಘಟ್ಟದ ಸಾಹಿತ್ಯವು ಆಯಾ ಕಾಲದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಂಬಂದಗಳ ಪ್ರಭಾವದಿಂದಲೇ ಸೃಷ್ಟಿಯಾಗುತ್ತದೆ. ಸಾಹಿತ್ಯದಲ್ಲಿಯೂ ಪ್ರಭುತ್ವ ಮತ್ತು ಸಾಮಾನ್ಯ ಜನತೆಗಳ ನಡುವೆ ಉಂಟಾದ ಸಂಘರ್ಷಗಳು ವಿಶ್ಲೇಷಣೆಗೆ ಒಳಪಟ್ಟಿವೆ. ಸಾಹಿತ್ಯದಿಂದ ಸಮಾಜದ ಮೇಲೆ ಉಂಟಾಗುವ ಪ್ರಭಾವವನ್ನು ಮಾರ್ಕ್ಸ್ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದ. ಕ್ರಿ.ಶ. ೧೮೪೮ರಲ್ಲಿ ಪ್ರಕಟವಾದ ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯಲ್ಲಿ ಈ ಅಂಶಗಳನ್ನು ಸ್ಪಷ್ಟಪಡಿಸಲಾಗಿದೆ. "ಪ್ರತಿಯೊಂದು ಐತಿಹಾಸಿಕ ಯುಗದ ಆರ್ಥಿಕ ಉತ್ಪಾದನೆಯು ಮತ್ತು ಅದರಿಂದ ಅವಶ್ಯಕವಾಗಿಯೆ ಉದ್ಭವಿಸುವ ಸಮಾಜ ರಚನೆಯು ಆ ಯುಗದ ರಾಜಕೀಯ ಹಾಗೂ ಬೌದ್ಧಿಕ ಇತಿಹಾಸದ ತಳಾಯವಾಗಿರುತ್ತದೆ. ಇತಿಹಾಸದ ಉದ್ದಕ್ಕೂ ಶೋಷಕರು ಹಾಗೂ ಶೋಷಿತರು, ಪರಸ್ಪರ ವಿರೋಧವಾಗಿ ನಿಂತು ಹೋರಾಡುತ್ತಾ ಬಂದಿದ್ದಾರೆ. ಈ ಹೋರಾಟವು ಕೆಲವೊಮ್ಮೆ ಬಹಿರಂಗವಾಗಿಯೂ ಕೆಲವೊಮ್ಮೆ ತೆರೆಮರೆಯಲ್ಲಿಯೂ ನಡೆಯುತ್ತದೆ. ಈ ಹೋರಟವು ಒಂದೇ ಇಕ್ಕಡೆಗಳು ನಾಶಹೊಂದುವುದರಲ್ಲಿ ಪರ್ಯಾವಸಾನ ಹೊಂದುತ್ತದೆ. ಅಲ್ಲವಾದರೆ ಇಡೀ ಸಮಾಜವೇ ಅಮೂಲಾಗ್ರವಾಗಿ ಪುನರ್ ರಚನೆಯಾಗುವ ಪರಿಣಾಮವನ್ನುಂಟು ಮಾಡುತ್ತದೆ".[೧೦೪]

ಸಾಹಿತ್ಯ ರಚನೆಯಲ್ಲಿ ಎರಡು ರೀತಿಯ ವಾದಗಳಿವೆ. ಅವುಗಳಲ್ಲಿ ಒಂದು ಸಾಹಿತ್ಯವು ಲಲಿತ ಕಲೆಗಳಲ್ಲಿ ಒಂದಾಗಿದ್ದು, ಅದು ಕಲಾತ್ಮಕ ಅಂಶಗಳನ್ನು ಪ್ರಧಾನವಾಗಿ ಹೊಂದಿರಬೇಕು. ಆ ಮೂಲಕ ಜನಗಳಿಗೆ ಮನರಂಜನೆಯನ್ನು ಕೊಡುವುದು ಅದರ ಮುಖ್ಯವಾದ ಉದ್ದೇಶ. ಇದನ್ನು 'ಕಲೆಗಾಗಿ ಕಲೆ' ಎಂಬ ವಾದವಾಗಿಯೂ ಗುರುತಿಸಲಾಗಿದೆ. ಮತ್ತೊಂದು ಎಂದರೆ ಸಾಹಿತ್ಯವು ಒಂದು ಸಮಾಜದಲ್ಲಿ ಸೃಷ್ಟಿಯಾಗುವ ಒಂದು ಮಾಧ್ಯಮವಾಗಿದೆ. ಇದಕ್ಕೆ ಸ್ಪಷ್ಟವಾದ ಸಾಮಾಜಿಕ ಉದ್ದೇಶಗಳಿವೆ. ಯಾವ ಸಮಾಜದಲ್ಲಿ ಇದು ರಚನೆಯಾಗುತ್ತದೆಯೋ ಆಯಾ ಸಮಾಜದ ಅಥವಾ ಸಮುದಾಯದ ಸುಧಾರಣೆಗಾಗಿ ಜನಗಳನ್ನು ಜಾಗೃತಿಗೊಳಿಸುವುದು ಇದರ ಕಾರ್ಯವಾಗಿದೆ. ಕಲಾತ್ಮಕ ಅಂಶಗಳೇ ಇಲ್ಲಿ ಮುಖ್ಯವಲ್ಲ. ಯಾವುದೇ ಒಂದು ಸಾಹಿತ್ಯ ಕೃತಿ ಕಲಾತ್ಮಕವಾಗಿ ಎಷ್ಟೇ ದೊಡ್ಡದಾಗಿದ್ದಾಗಲೂ, ಅದು ಸಾಮಾಜಿಕವಾದ ಬದ್ಧತೆಯನ್ನು ಒಳಗೊಳ್ಳದೆ ಹೋದರೆ ಅದಕ್ಕೆ ಯಾವುದೇ ಬೆಲೆಯಿರುವುದಿಲ್ಲ. ಈ ಕಾರಣದಿಂದ ಸಾಹಿತ್ಯವನ್ನು ರಚಿಸುವ ಲೇಖಕನಿಗೂ ಸಾಮಾಜಿಕವಾದ ಜವಾಬ್ದಾರಿಗಳಿವೆ ಎಂಬುದನ್ನು ಈ ವಾದ ಸ್ಪಷ್ಟೀಕರಿಸುತ್ತದೆ. ಈ ಅಂಶಗಳಿಂದ ಕನ್ನಡದಲ್ಲಿ ದಲಿತ ಆತ್ಮಕಥನಕಾರರು ಸಾಮಾಜಿಕ ಜವಾಬ್ದಾರಿಯಿಂದ ಆತ್ಮಕತೆಗಳನ್ನು ರಚಿಸಿರುವುದು ಕಂಡುಬರುತ್ತದೆ. ದಲಿತ ಸಾಹಿತ್ಯದ ಪ್ರಾರಂಭದಲ್ಲಿ ಮಾರ್ಕ್ಸ್‌ವಾದದ ಪ್ರಭಾವ ದಟ್ಟವಾಗಿತ್ತು. ಸಿದ್ದಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಡಿ.ಆರ್.ನಾಗರಾಜು, ಸಿ.ಜಿ.ಕೃಷ್ಣಸ್ವಾಮಿ, ದೇವನೂರು ಮಹಾದೇವ, ಹನುಮಂತರಾವ್, ಅರವಿಂದ ಮಾಲಗತ್ತಿ, ಲಕ್ಷ್ಮಣ್ ಹೀಗೆ ಮುಂತಾದ ಲೇಖಕರೆಲ್ಲ ಮಾರ್ಕ್ಸ್‌ವಾದದ ಪ್ರಭಾವಕ್ಕೆ ಒಳಗಾಗಿ ಸಾಹಿತ್ಯ ರಚನೆಗೆ ತೊಡಗಿದ್ದರು. "ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು; ಅಲ್ಲದೆ ಅಸ್ಪೃಶ್ಯತೆ, ಜಾತಿಪದ್ಧತಿ, ಲಿಂಗಭೇದ ಮತ್ತು ವರ್ಣಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಎಲ್ಲಾ ಜನಪರ ನಿಲುವುಗಳಿಗೆ ನಮ್ಮ ಬೆಂಬಲ. ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಹೋರಾಟದ ಮುಖ್ಯ ದಾಖಲೆ"[೧೦೫] ಎಂದಿದ್ದಾರೆ. ಈ ಎಲ್ಲಾ ಆಶಯಗಳ ನೆಲೆಯಲ್ಲಿ ಮಾರ್ಕ್ಸ್‌ವಾದವು ದಲಿತ ಸಾಹಿತ್ಯ ಸಾಹಿತ್ಯದ ಮೇಲೆ ಆಗಾಧವಾದ ಪ್ರಭಾವ ಬೀರಿರುವುದು ತಿಳಿದು ಬರುತ್ತದೆ.

೧.೩.೮. ರಾಮಮನೋಹರ ಲೋಹಿಯಾ

ಆಧುನಿಕ ಕನ್ನಡ ಸಾಹಿತ್ಯದ ಬಹುಪಾಲು ಲೇಖಕರನ್ನು ಪ್ರಭಾವಿಸಿದ ಮತ್ತೋರ್ವ ಚಿಂತಕರೆಂದರೆ ರಾಮಮನೋಹರ ಲೋಹಿಯಾ ಅವರು. ಸಮಾಜವಾದಿ ಚಿಂತನೆಯಿಂದಾಗಿ ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದ ಲೋಹಿಯಾ ಆನಂತರದ ದಿನಗಳಲ್ಲಿ ಕಮ್ಯುನಿಸ್ಟ್ ಸಿದ್ಧಾಂತಗಳಿಂದ ಹೊರಬಂದರು. ಲೋಹಿಯಾ ಅವರು ಮುಖ್ಯವಾಗಿ ರಾಜಕಾರಣಕ್ಕೆ ಸಾಮಾಜಿಕ ಬದ್ಧತೆ, ಪ್ರಾಮಾಣಿಕತೆ ಮತ್ತು ತಾತ್ವಿಕತೆಯನ್ನು ಸೇರ್ಪಡೆ ಮಾಡಿದರು. ಲೋಹಿಯಾ ಅವರ ಆಸಕ್ತಿಗಳು ವೈವಿಧ್ಯಮಯವಾಗಿವೆ. ಸಾಮಾಜಿಕ ವ್ಯವಸ್ಥೆ ಅದರಲ್ಲಿಯೂ ಜಾತಿಪದ್ಧತಿ, ಲಿಂಗ ಸಮಾನತೆ, ಸ್ತ್ರೀ ಪುರುಷರ ಸಮಸ್ಯೆಗಳು ಧರ್ಮ, ಭಾಷೆ, ಸಂಸ್ಕೃತಿ ಹೀಗೆ ಹಲವು ವಿಷಯಗಳಲ್ಲಿ ಅವರಿಗೆ ಪರಿಜ್ಞಾನ ಇತ್ತು. ಇದರಿಂದಾಗಿ ದೇಶದ ಗಂಭೀರ ಸಮಸ್ಯೆಗಳನ್ನು ಕುರಿತು ಹೆಚ್ಚಿನ ಅಧ್ಯಯನ ನಡೆಸಿದ್ದರು. ಲೋಹಿಯಾ ಅವರು ಯಾವುದೇ ರೀತಿಯ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವಾಗ ಅದಕ್ಕೆ ಬೇಕಾದ ಆಧಾರಗಳನ್ನು ಶೋಧಿಸುತ್ತಿದ್ದರು. ಈ ಕಾರಣಕ್ಕೆ ಅವರೊಬ್ಬ ಸಂವೇದನಾಶೀಲ ಲೇಖಕರಾಗಿ ಕಂಡುಬರುತ್ತಾರೆ.

ಭಾರತದ ಜಾತಿ ವ್ಯವಸ್ಥೆಯನ್ನು ಖಂಡಿಸಿ ಅದನ್ನು ನಿರ್ಮೂಲನೆ ಮಾಡುವಲ್ಲಿ ಸತತ ಹೋರಾಟ ಮಾಡಿದಂತಹ ಪ್ರಮುಖರಲ್ಲಿ ಅಂಬೇಡ್ಕರ್‌ರನ್ನು ಬಿಟ್ಟರೆ ಲೋಹಿಯಾ ಅವರೇ ಮುಖ್ಯ ಎನ್ನಬಹುದು. ಭಾರತದ ಜಾತಿಪದ್ಧತಿಯ ದೋಷಗಳನ್ನು ಕುರಿತು ಹೇಳುತ್ತಾ, "ಜಾತಿಯು ಈ ದೇಶವನ್ನು ಛಿದ್ರಗೊಳಿಸುತ್ತದೆ. ಅದು ತೃಪ್ತಿ ರೂಢಿ–ಕೊಳಚೆಗಳ ಕಿರು ಹೊಂಡಗಳನ್ನು ನಿರ್ಮಿಸುತ್ತದೆ. ಪ್ರತಿಯೊಂದು ನೀರು ಹೊಂಡವೂ ತನ್ನ ಯೋಗ–ಕ್ಷೇಮಗಳ ಕಿರು ಎಲ್ಲೆಯ ಮಟ್ಟಿಗೆ ಆಸಕ್ತಿ ಹೊಂದಿರುತ್ತದೆ. ಮೌಲ್ಯಮಾಪನದ ಆದಾವುದೋ ವಿಚಿತ್ರ ಅದ್ಭುತ ಕ್ರಮವು ಪ್ರತಿಯೊಂದು ಜಾತಿಯನ್ನು ಇನ್ನು ಕೆಲವು ಬೇರೆ ಜಾತಿಗಳಿಂದ ಮೇಲಕ್ಕಿಟ್ಟಿರುತ್ತದೆ"[೧೦೬] ಎಂದು ಶ್ರೇಣೀಕೃತ ಜಾತಿವ್ಯವಸ್ಥೆ ನಿರ್ಮಿಸಿದ ಮೇಲು–ಕೀಳುಗಳ ಬಗೆಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಭಾರತದ ಸಂಪೂರ್ಣ ಅವನತಿಗೆ ಜಾತಿಪದ್ಧತಿಯೇ ಕಾರಣ ಎನ್ನುವ ಲೋಹಿಯಾ ಅವರು ಭಾರತದಲ್ಲಿ ಆಳುವ ವರ್ಗಗಳ ಮೂರು ವಿಶಿಷ್ಟ ಲಕ್ಷಣಗಳನ್ನು ಹೀಗೆ ಗುರುತಿಸುತ್ತಾರೆ. ೧. ಉಚ್ಚ ಜಾತಿ ೨. ಇಂಗ್ಲಿಷ್ ಶಿಕ್ಷಣ ೩. ಸಂಪತ್ತು ಈ ಮೂರರಲ್ಲಿ ಯಾವುದಾದರೂ ಎರಡನ್ನು ಪಡೆದ ವ್ಯಕ್ತಿ ಆಳುವ ವರ್ಗಕ್ಕೆ ಸೇರುತ್ತಾರೆ ಎಂದು ಪ್ರತಿಪಾದಿಸುತ್ತಾರೆ. ಹೀಗಾಗಿ ಅವರು ಈ ಮೂರು ಸಂಗತಿಗಳ ವಿರುದ್ಧ ಅವ್ಯಾಹತವಾಗಿ ಹೋರಾಟ, ಚಿಂತನೆಗಳನ್ನು

ನಡೆಸಿದರು. ಸಾರ್ವಜನಿಕ ಸಭೆಗಳಲ್ಲಿ ಅವರು ಯಾವ ಮುಲಾಜಿಲ್ಲದೆ ಇಂತಹ ವ್ಯವಸ್ಥೆಯನ್ನು ಟೀಕಿಸುತ್ತಿದ್ದರು.

"ಜಾತಿಯ ಗುಣಕರ್ಮದೊಂದಿಗೆ ಸಂಬಂಧ ಹೊಂದಿಲ್ಲ. ವರ್ಗವು ಜಡವಾದಾಗ ಅದು ಜಾತಿಯ ಗುಣಗಳನ್ನು ಆವಾಹಿಸಿಕೊಳ್ಳುತ್ತ ಹೋಗುತ್ತದೆ. ಸಂಪತ್ತು, ಬುದ್ಧಿ, ಪದವಿ ಆಧಾರಗಳ ಮೇಲೆ ಸಮಾಜದಲ್ಲಿ ಗುಂಪುಗಳಾಗುತ್ತವೆ. ಕ್ರಮೇಣ ಇವೇ ವರ್ಗಗಳಾಗುತ್ತವೆ. ಗೌರವ ಮತ್ತು ಸಂಪತ್ತು ಸಾಮಾನ್ಯವಾಗಿ ಜೊತೆ ಜೊತೆಯಲ್ಲಿ ಸಾಗುತ್ತವೆಯಾದರೂ ಅನೇಕ ಸಲ ಅದು ನಿಜವಾಗುವುದಿಲ್ಲ. ಒಂದೇ ಸಮಾಜದಲ್ಲಿನ ಎಲ್ಲಾ ವ್ಯಕ್ತಿಗಳು ಐಶ್ವರ್ಯ ಹೊಂದಿದ ಆಳುವ ವರ್ಗದ ಉಳ್ಳವರು ಮತ್ತು ಶೋಷಣೆಗೊಳಗಾಗುವ ಶೋಷಿತ ವರ್ಗವಿದೆ".[೧೦೭] ಜಾತಿ ವ್ಯವಸ್ಥೆಯ ಕುರಿತು ರಾಮಮನೋಹರ ಲೋಹಿಯಾ ಅವರು ತುಂಬಾ ವಸ್ತುನಿಷ್ಟವಾಗಿ ವಿಚಾರ ಮಾಡಿದ್ದಾರೆ. ಜಾತಿ ವ್ಯವಸ್ಥೆಯಿಂದ ಕೆಲವೇ ಜಾತಿ, ವ್ಯಕ್ತಿಗಳು ಮತ್ತು ಸಮುದಾಯಗಳು ಅವನತಿ ಹೊಂದಿಲ್ಲ. ಇದು ಎಲ್ಲರನ್ನೂ ಗುಲಾಮಗಿರಿಗೆ ತಳ್ಳಿದೆ, ಎಂದು ಲೋಹಿಯಾ ಅಭಿಪ್ರಾಯಪಡುತ್ತಾರೆ. ಮೇಲ್ಜಾತಿಯ ಒಬ್ಬ ನಾಯಕ ಹೀಗೆ ಜಾತಿಯನ್ನು ಎಲ್ಲರೂ ವಿರೋಧಿಸುತ್ತಾರೆ. ಆದರೆ ಅದೊಂದು ಕಪಟವಾದ ಹುಂಬ ವೈಚಾರಿಕತೆಯ ತೆಳುವಾದ ಮೇಲು ಪದರದಂತೆ ಪ್ರತಿಕ್ರಿಯೆಗಳ ವಿಚಾರವಾಗಿತ್ತು. ಇಂತಹ ಡಂಭಾಚಾರಗಳನ್ನು ಡಾಂಭಿಕರನ್ನು ಲೋಹಿಯಾ ಭದ್ರವಾಗಿ ವಿರೋಧಿಸುತ್ತಿದ್ದರು. ಅವರ ಪ್ರಕಾರ ಮೂರು ಬಗೆಯ ಜಾತಿ ವಿರೋಧವನ್ನು ಗಮನಿಸಬಹುದು. ಮೊದಲನೆಯದಾಗಿ ಶಾಬ್ಧಿಕ, ಎರಡನೆಯದಾಗಿ ಕೆಳಮಟ್ಟ ಮಿಶ್ರ ವಿರೋಧ, ಮೂರನೆಯದಾಗಿ ನೈಜ ವಿರೋಧ, ಹೆಚ್ಚಾಗಿ ಉಚ್ಚಜಾತಿಗಳಿಂದ ಕೂಡಿದ ಭಾರತದ ಬುದ್ಧಿ ಜೀವಿಗಳ ವರ್ಗದ ಆಲೋಚನಾ ಬುನಾದಿ, ಜಾತಿ ಜಾತಿಯಲ್ಲದೆ ಭಾಷೆಯ ವಿಷಯದಲ್ಲಿ ಆಮೂಲಾಗ್ರ ಬದಲಾವಣೆ ತರಬಲ್ಲ ಭೌತಿಕ ಸಾಮಾಜಿಕ ಕ್ರಾಂತಿಯ ಮಾತನ್ನೇ ಸಹಿಸುತ್ತಿಲ್ಲ. ಈ ಬುದ್ಧಿ ಜೀವಿಗಳ ವರ್ಗ ಜಾತಿಯನ್ನು ವಿರೋಧಿಸಿ ತಾತ್ವಿಕವಾಗಿ ಮಾತ್ರ ವಾದಿಸುತ್ತದೆ.

ಜಾತಿಯ ವ್ಯವಸ್ಥೆ ನಿವಾರಣೆಯಾಗದ ಹೊರತು ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ಅಸಾಧ್ಯವೆಂದು ಲೋಹಿಯಾ ಹೇಳುತ್ತಿದ್ದರು. ಜಾತಿ ವ್ಯವಸ್ಥೆಯ ನಿವಾರಣೆಗಾಗಿ ಅವರು ಈ ಕೆಳಗಿನ ಸಲಹೆಗಳನ್ನು ನೀಡಿದ್ದಾರೆ. ಈ ಎಲ್ಲಾ ಅಂಶಗಳು ಕನ್ನಡ ದಲಿತ ಬರಹಗಾರರ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು.

೧. ದಲಿತ, ಹಿಂದುಳಿದ ಪಂಗಡಗಳಾದ ಸ್ತ್ರೀಯರು, ಶೂದ್ರರು, ಆದಿವಾಸಿಗಳು ಹಾಗೂ ಮತೀಯ ಅಲ್ಪಸಂಖ್ಯಾತರೊಳಗಿನ ಹಿಂದುಳಿದ ಜಾತಿಯವರಿಗೆ ರಾಜಕೀಯ ಪಕ್ಷಗಳು ರಾಷ್ಟ್ರೀಯ ಅರ್ಥವ್ಯವಸ್ಥೆ ಹಾಗೂ ಸರ್ಕಾರಿ ಸೇವೆಯಲ್ಲಿ ಆದ್ಯತೆಯ ಅವಕಾಶಗಳನ್ನು ನೀಡತಕ್ಕದ್ದು.

೨. ಅಂತರ್ಜಾತಿ ಇಲ್ಲವೆ ಅಂತರ್ಪಂಗಡಗಳ ಮದುವೆ ಸರಕಾರಿ ಸೇವೆಗೆ ಅಗತ್ಯ ಕರಾರು ಆಗಬೇಕು.

೩. ಕಡ್ಡಾಯವಾಗಿ ಇಂಗ್ಲೀಷ್ ಹೊರತುಪಡಿಸಿ ಮಿಕ್ಕೆಲ್ಲ ವಿಷಯಗಳಲ್ಲಿ ಪಾಸಾದ ವಿದ್ಯಾರ್ಥಿಗಳನ್ನು ತಮ್ಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರೆಂದು ಘೋಷಿಸತಕ್ಕದ್ದು.

೪. ಭಾರತ ದೇಶ ಪರಕೀಯರ ಸತತ ದಾಳಿಗೆ ತುತ್ತಾಗಲು ಕಾರಣ ಜನರ ನಿರಾಸಕ್ತಿಯೇ ವಿನಃ ನಾಯಕರೊಳಗಿನ ಅನೈತಿಕತೆಯಲ್ಲ.

೫. ಭಾರತದ ಪ್ರಾತಿನಿಧಿಕ ಸ್ತ್ರೀ ದ್ರೌಪದಿಯೇ ವಿನಃ ಸಾವಿತ್ರಿಯಲ್ಲ.

೬. ಚರ್ಮದ ಬಣ್ಣ ಸೌಂದರ್ಯದ ಆಧಾರವಲ್ಲ.

೭. ಸಮಾನತೆಯ ಸಾಧನೆಗಾಗಿ ಜಾತಿ ಹೋರಾಟ ಹಾಗೂ ವರ್ಗ ಹೋರಾಟವೆರಡೂ ಅಹಿಂಸೆಯನ್ನೇ ಅವಲಂಬಿಸತಕ್ಕದಾದರೂ ಎರಡು ಅಷ್ಟೇ ಮಹತ್ವದ ಹೋರಾಟಗಳಾಗಿವೆ. ಹೀಗೆ ಲೋಹಿಯಾ ಅವರು ದೇಶದ ಪ್ರಗತಿಯನ್ನು ಕುರಿತು ಚಿಂತಿಸುವಾಗ ಅದಕ್ಕೆ ಅಡ್ಡಿಯಾಗುವ ಸಂಗತಿಗಳ ಬಗೆಗೆ ಅಮೂಲಾಗ್ರವಾಗಿ ವಿಚಾರ ಮಾಡಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಲೋಹಿಯಾವಾದವು ದಲಿತ ಸಾಹಿತ್ಯಕ್ಕೆ ಮೂಲ ಪ್ರೇರಣೆಯಾಗಿದೆ.

ಡಾ. ರಾಮಮನೋಹರ ಲೋಹಿಯಾ ಅವರ ಚಿಂತನೆಗಳು ನೇರವಾಗಿ ಸಾಹಿತ್ಯಕ್ಕೆ ಸಂಬಂಧಿಸಿದಂತೆಯೇ ಅವುಗಳ ಪ್ರಭಾವ ಸಾಮಾಜಿಕ ಮತ್ತು ರಾಜಕೀಯ ರಂಗದ ಮೇಲೆ ಗಾಢವಾಗಿದೆ. ದಲಿತ ಸಾಹಿತ್ಯವು ಪ್ರಧಾನವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಸಮಾನತೆಯನ್ನು ಪ್ರತಿಪಾದಿಸುವುದರಿಂದ ಲೋಹಿಯಾ ಚಿಂತನೆಗಳು ಈ ಸಾಹಿತ್ಯದ ಮೇಲೆ ನೇರವಾಗಿ ಪ್ರಭಾವ ಬೀರಿವೆ. ಅವುಗಳೆಂದರೆ,

- ಲೋಹಿಯಾ ಚಿಂತನೆ ಇತರರಿಗಿಂತ ಶೂದ್ರರಿಗೆ ಆಪ್ತವಾಯಿತು.
- ಜಮೀನನ್ನು ಹೊಂದಿದವರು ಮತ್ತು ಹೊಂದದವರು ಸಹ ಲೋಹಿಯಾ ವಾದವನ್ನು ಹಿಡಿದರು.
- ಮಾರ್ಕ್ಸ್‌ವಾದದ ಪ್ರಭಾವ ಭೂಮಿಯನ್ನು ಬಿಟ್ಟುಕೊಡುವುದಾಗಿದ್ದರೆ, ಲೋಹಿಯಾವಾದ ಶೂದ್ರರ ಮೇಲೆ ಪ್ರಭಾವ ಬೀರಿ ತಡೆಯುವುದಾಗಿತ್ತು.

- ಶೂದ್ರ ಚಳವಳಿ ತಲೆ ಎತ್ತಿ ನಿಂತಾಗ ಹೊಸ ಆಯಾಮ ಕಂಡುಬಂದಿತು.
- ಮಾರ್ಕ್ಸ್ ಮತ್ತು ಲೋಹಿಯಾ ಕರ್ನಾಟಕಕ್ಕೆ ಜೊತೆ ಜೊತೆಯಾಗಿ ಭೇಟಿಕೊಟ್ಟರು. ಅಂಬೇಡ್ಕರ್ ಹೆಚ್ಚು ಪರಿಚಿತರಾದಂತೆ ಮಾರ್ಕ್ಸ್ ಮತ್ತು ಲೋಹಿಯಾ ಹಿಂದೆ ಸರಿದರು. ಹೀಗೆ ಕನ್ನಡ ದಲಿತ ಸಾಹಿತ್ಯದ ಮೇಲೆ ಈ ಚಿಂತಕರ ಪ್ರಭಾವವಿದೆ.

೧.೩.೯ ಪೆರಿಯಾರ್ ರಾಮಸ್ವಾಮಿ ನಾಯ್ಕರ್

ದಕ್ಷಿಣ ದ್ರಾವಿಡ ಭಾಷೆಯ ಸೋದರ ಭಾಷೆಗಳಾದ ತಮಿಳು ಮತ್ತು ಕನ್ನಡ ಸಾಹಿತ್ಯದ ಮೇಲೆ ಪೆರಿಯಾರ್ ಚಿಂತನೆಗಳು ಪ್ರಭಾವ ಬೀರಿವೆ. ಇವರು ಅಚ್ಚ ಕನ್ನಡಿಗರಾಗಿದ್ದವರು ತಮಿಳು ಹಾಗೂ ದ್ರಾವಿಡ ನಾಡಿನಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದುಕೊಂಡಿದ್ದವರು. ತಮಿಳು ಹಾಗೂ ಕನ್ನಡ ಜನಾಂಗದಲ್ಲಿ ಆವರಿಸಿಕೊಂಡಿದ್ದು ಅಂಧಕಾರ ಮೂಢನಂಬಿಕೆಯ ಕರಾಳ ಮೌಢ್ಯದ ಸಂಕೋಲೆಯನ್ನು ಒಡೆದು ನುಚ್ಚುನೂರು ಮಾಡಿ ಪರಂಪರಾಗತ ಬೌದ್ಧಿಕ ಅಡಿಯಾಳುತನಗಳಿಂದ ಬಿಡಿಸುವ ಸಾಹಸ ಕಾರ್ಯಗಳಿಗೆ ತಳಹದಿಯಾಗಿ ನಿಂತವರು ಪೆರಿಯಾರ್ ರಾಮಸ್ವಾಮಿ ನಾಯ್ಕರ್‌ರವರು.

ಪೆರಿಯಾರ್ ಅವರು ಬಾಲ್ಯ ಜೀವನದಲ್ಲಿ ಹಲವಾರು ಸಾಮಾಜಿಕ ಪಿಡುಗುಗಳನ್ನು ಎದುರಿಸಿದ್ದಾರೆ. ಇವರು ಶಾಲೆಗೆ ಹೋಗುವ ಸಂದರ್ಭದಲ್ಲಿ "ಇವರ ಶಾಲೆಯ ಸುತ್ತಮುತ್ತ ಅಸ್ಪೃಶ್ಯ ಜನರಿದ್ದರು. ಅವರ ಮನೆಯಲ್ಲಿ ನೀರನ್ನು ಕುಡಿಯಬೇಡ. ಬೇಕಾದರೆ ಮಾಸ್ತರ ಮನೆಯವರಲ್ಲಿ ಕೇಳಿ ಕುಡಿ ಎಂದು"[೧೦೮] ಹೇಳುತ್ತಿದ್ದರು. ಈ ಸಮಾಜದಲ್ಲಿ ನಡೆಯತ್ತಿದ್ದ ಅಸ್ಪೃಶ್ಯತೆ ಅಸಮಾನತೆಗಳನ್ನು ಹೋಗಲಾಡಿಸಲು ಅಂದಿನಿಂದಲೇ ಕಂಕಣಬದ್ಧರಾಗಿದ್ದರು ಎಂದು ತಿಳಿದು ಬರುತ್ತದೆ. ಅಂತೆಯೇ ವೈಚಾರಿಕ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದರು. ಇವರ ತಂದೆ ತಾಯಿಗಳು ಮಗನ ವೈಚಾರಿಕ ಚಿಂತನೆಗಳನ್ನು ವಿರೋಧಿಸುತ್ತಿದ್ದರು. ಆದರೆ ಪೆರಿಯಾರ್ ಚಿಂತನೆ ಭಿನ್ನವಾಗಿತ್ತು. "ಮಗ ವಾದದಲ್ಲಿ ಪಂಡಿತರನ್ನೆದುರಿಸುವಾಗ ಪಾಪ ಶಂಕೆ ಇವರನ್ನು ಕಾಡುತ್ತಿತ್ತು. ಬ್ರಾಹ್ಮಣರ ತಂತ್ರ ಮಂತ್ರಗಳನ್ನು ವೇದಾಗಮವಾಗಿ ಪರಿಗಣಿಸಿ ಪ್ರತಿಭಟನೆಯೇ ಇಲ್ಲದೆ ಚಕಾರವೆತ್ತದೇ ನಂಬಿಕೊಳ್ಳಬೇಕೆಂದು ಅವರ ಸಂಕಲ್ಪ. ಆದರೆ ನಾಯಕರು ಪಂಡಿತರೊಡನೆ ಚರ್ಚಿಸುವಾಗ ಪುರಾಣಗಳಲ್ಲಿ ಕಂಡುಬರುವ ದೋಷಗಳನ್ನು ವಿರೋಧಾಭಾಸಗಳನ್ನು ಹಾಗೂ ಮಿಥ್ಯಗಳನ್ನು ಅವರು ನಿರ್ಭಯವಾಗಿ ಎತ್ತಿ ತೋರಿಸುತ್ತಿದ್ದರು. ಮತಾಚರಣೆಗಳಲ್ಲಿ ಬಿಸುಗುಡುತ್ತಿದ್ದ ಮೂಢನಂಬಿಕೆಗಳನ್ನು ನಿರ್ಭೀತಿಯಿಂದ ನಿಂದಿಸುತ್ತಿದ್ದರು.

ಎಂತಹುದೇ ಕಠಿಣ ಸಂದರ್ಭಗಳಲ್ಲಿಯೂ ತಮ್ಮ ವಿಚಾರ ಧೋರಣೆಯಿಂದ ವಿಚಲಿತರಾದವರಲ್ಲ”.[೧೦೯] ಹೀಗೆ ಪೆರಿಯಾರ್ ಅವರ ಚಿಂತನೆಗಳು ಮೌಢ್ಯ ಮತ್ತು ಕಂದಾಚಾರದ ವಿರುದ್ಧ ದನಿ ಎತ್ತುತ್ತಿದ್ದರು.

ಪೆರಿಯಾರ್‌ರವರು ಎಲ್ಲಾ ಧರ್ಮಗಳ ಹಾಗೂ ಎಲ್ಲಾ ಜಾತಿಯವರ ಸಂಬಂಧವನ್ನು ಇಟ್ಟುಕೊಂಡಿದ್ದರು. ಸಮಾಜದಲ್ಲಿ ಮೇಲು ಕೀಳು ಮಾಡದೇ ಸಮ ಸಮಾಜದ ಪರಿಕಲ್ಪನೆಯನ್ನು ಮೈಗೂಡಿಸಿಕೊಂಡಿದ್ದರು. “ಎಲ್ಲಾ ಧರ್ಮದ ಹಾಗೂ ಎಲ್ಲಾ ತರಹದ ಜನವರ್ಗದವರ ಮನೆಗಳಲ್ಲಿ ನಡೆಯುವಂತಹ ಶುಭಾಶುಭ ಕಾರ್ಯಗಳಲ್ಲಿ ಸ್ವತಃ ರಾಮಸ್ವಾಮಿಯವರೇ ನಿಂತು ಮುಂದಾಳುತನ ವಹಿಸಿ ನಡೆಸುತ್ತಿದ್ದರು”[೧೧೦] ಈ ಸಮಾಜಮುಖಿ ಚಿಂತನೆಯು ಕನ್ನಡ ಸಾಹಿತ್ಯದಲ್ಲಿ ಪ್ರಭಾವ ಬೀರಿರುವುದನ್ನು ಕಾಣಲಿಕ್ಕೆ ಸಾಧ್ಯವಿದೆ.

ಜಾತಿಪದ್ಧತಿ ನಿಸರ್ಗಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದರು. “ಹುಟ್ಟಿನಿಂದಲೇ ತಾವು ಉತ್ತಮರ ವರ್ಣದವರೆನಿಸಿಕೊಂಡಿರುವವರು ಅಂದರೆ ನಾವು ಹೇಗೆ ಹುಟ್ಟಿರುವ ನೆಪದಿಂದಲೇ ಉಳಿದವರನ್ನೂ ಕೀಳು ಜಾತಿಯವರೆಂದೆಣಿಸಿಕೊಂಡಿರುವ ಜನರನ್ನು ಕೀಳು ಜಾತಿಯವರೆಂದು ಪರಿಗಣಿಸಲಾಗಿರುವ ಅವರ ಅಸಹ್ಯ ಜಿಗುಪ್ಸೆಯಿಂದ ಕಾಣದೇ ಸುಮ್ಮನೇ ಸಹಿಸಿಕೊಂಡಿದ್ದಾರೆ ಎಂದು ಭಾವಿಸುವುದಾದರೆ ಸರಿಯಾಗುವುದಿಲ್ಲ”[೧೧೧]ಎಂದು ವಿರೋಧಿಸುತ್ತಿದ್ದರು. ಅಂತೆಯೇ ಕುರುಡು ನಂಬಿಕೆ, ಮೂಢನಂಬಿಕೆ, ಅಂಧಶ್ರದ್ಧೆಯ ನಿರ್ಮೂಲನೆಯನ್ನು ಮಾಡಿ ಜನರಲ್ಲಿ ಜಾಗೃತಿಯ ಪ್ರಜ್ಞೆಯನ್ನು ಬಿತ್ತುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ಸಮಾಜದಲ್ಲಿನ ಶೋಷಿತರ ಪರವಾಗಿ ಹಲವಾರು ಚಿಂತನೆಗಳನ್ನು ಪ್ರಚುರಪಡಿಸಿದ್ದರು.

೧. ಯಾವ ಹಿಂದೂ ದೇವಾಲಯಕ್ಕಾಗಲೀ ಹಿಂದುಳಿದ ಶೋಷಿತರೆನಿಸಿಕೊಂಡಿರುವ ಯಾರೂ ಕೂಡ ಹೋಗಬಾರದು.
೨. ಹಿಂದೂ ಧರ್ಮದ ಯಾವ ದೇವರಿಗೂ ವಂದಿಸಬಾರದು.
೩. ಹಿಂದೂ ಧರ್ಮಕ್ಕೆ ಸಂಬಂಧಿಸಿದ ಹಬ್ಬ ಹರಿದಿನಗಳನ್ನು ಆಚರಿಸಬಾರದು.
೪. ಹಣೆಯಲ್ಲಿ ಯಾವ ವಿಧವಾದ ಚಿಹ್ನೆಗಳನ್ನು ಧರಿಸಬಾರದು.
೫. ವೈದಿಕ ಧರ್ಮಾಚರಣೆಗೆ ಸಂಬಂಧಿಸಿದ ಯಾವುದನ್ನು ಕೂಡ ಮಾಡಬಾರದು.
೬. ನಿಮ್ಮ ಮನೆಗಳಲ್ಲಿ ನಡೆಸುವ ಶುಭ, ಅಶುಭ ಕಾರ್ಯಗಳಲ್ಲಿ ಹಾರುವನಿಂದ ಪೌರೋಹಿತ್ಯ ಮಾಡಿಸಿಕೊಳ್ಳಬಾರದು.

ಈ ಬಗೆಯ ಚಿಂತನೆಗಳನ್ನು ಬಿತ್ತುವುದರ ಮೂಲಕ ವೈಚಾರಿಕ ಚಿಂತನೆಗಳಿಗೆ ಅಡಿಪಾಯ ಹಾಕಿದರು.

ಅಡಿಟಿಪ್ಪಣಿಗಳು

೧. ಡಾ. ಸರಜೂ ಕಾಟ್ಕರ್ : **ಕನ್ನಡ ಮರಾಠಿ ದಲಿತ ಸಾಹಿತ್ಯ** ; ಪುಟ-೨೧.

೨. ಡಾ. ನಾರಾಯಣಸ್ವಾಮಿ ಜಿ. : **ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ** ; ಪುಟ-೧೯.

೩. ಗುರುನಾಥ ಜೋಷಿ ಮತ್ತು ಅಶ್ವತ್‌ನಾರಾಯಣರಾವ್ : **ಕನ್ನಡ-ಕನ್ನಡ ಶಬ್ದಕೋಶ** ; ಪುಟ-೩೬೧.

೪. ಡಾ. ನಾರಾಯಣಸ್ವಾಮಿ ಜಿ. : **ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ** ; ಪುಟ-೨೦.

೫. (ಸಂ.) ಅರವಿಂದ ಮಾಲಗತ್ತಿ : **ದಲಿತ ಮಾರ್ಗ** ; ಪುಟ-೦೪.

೬. ಡಾ. ಸರಜೂ ಕಾಟ್ಕರ್ : **ಕನ್ನಡ ಮರಾಠಿ ದಲಿತ ಸಾಹಿತ್ಯ** ; ಪುಟ-೪

೭. ಅರವಿಂದ ಮಾಲಗತ್ತಿ : **ದಲಿತ ಮಾರ್ಗ (ಕೇಶವಮೇಶ್ರಮ ಮಹಾಬಳೇಶ್ವರ ಸಾಹಿತ್ಯ ಸ. ಚರ್ಚಾಗೋಷ್ಠಿಯಲ್ಲಿ ಹೇಳಿದ್ದು)** ; ಪುಟ-೦೫.

೮. ಡಾ. ಶಿವರುದ್ರಪ್ಪ ಜಿ.ಎಸ್. : **ಉದ್ಧರಣೆ, ಎಲ್. ಹನುಮಂತಯ್ಯ ದಲಿತಲೋಕದ ಒಳಗೆ** ; ಪುಟ-೦೩.

೯. ಹನುಮಂತಯ್ಯ ಎಲ್. : **ದಲಿತಲೋಕದ ಒಳಗೆ** ; ಪುಟ-೫.

೧೦. ಅರವಿಂದ ಮಾಲಗತ್ತಿ : **ದಲಿತ ಸಾಹಿತ್ಯ ಚಳುವಳಿ ಲೌಕಿಕ ಚಿಂತನೆ** ; ಪುಟ-೧೫.

೧೧. ಷಣ್ಮುಖಸುದರಂ : **ದಲಿತ್ತಿಯಮ್** ; ಪುಟ-೫೬

೧೨. (ಸಂ.) ಡಾ. ಮಲ್ಲಿಕಾ ಘಂಟಿ : **ದಲಿತ ಸಾಹಿತ್ಯ ಚಳುವಳಿ** ; ಪ್ರೊ. ಬಿ.ಬಿ. ವೀರಭದ್ರಪ್ಪ, ಪುಟ-೦೪.

೧೩. ಡಾ. **ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ** ; ಪುಟ-೪.

೧೪. ದೇವಯ್ಯ ಹರವೆ : **ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು** ; ಪುಟ-೨.

೧೫. ಡಾ. **ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ** ; ಪುಟ-೦೪.

೧೬. ಡಾ. ಹೊನ್ನಯ್ಯ ಸಿ.ಬಿ. : **ಕನ್ನಡ ಸಣ್ಣಕತೆಗಳಲ್ಲಿ ದಲಿತ ಸಂಸ್ಕೃತಿ** ; ಪುಟ-೦೮.

೧೭. ದೇವನೂರ ಮಹಾದೇವ : **ಮಾನವೀಯತೆ ಅಂತಾರಲ್ಲ ಅದರ ಬಗ್ಗೆ ಸಂಕ್ರಮಣ-೮೭-೮೮** ; ಪುಟ-೫೪.

೧೮. ಡಾ. ಸಿದ್ಧಲಿಂಗಯ್ಯ : **ಉರಿಕಂಡಾಯ** ; ಪುಟ-೩೨.

೧೯. ಡಾ. ಅರವಿಂದ ಮಾಲಗತ್ತಿ : **ದಲಿತ ಮಾರ್ಗ**, ಲೇಖನ ಗಣೇಶನ್ ಎಸ್. : **ದಲಿತರ ಮೇಲಿನ ದೌರ್ಜನ್ಯಗಳು** ; ಪುಟ-೬೯

೨೦. ಡಾ. **ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ** ; ಪುಟ -೧೯೨.

೨೧. ಡಾ. ಅರವಿಂದ ಮಾಲಗತ್ತಿ : **ದಲಿತ ಮಾರ್ಗ** ; ಪುಟ-೧೦೬.

೨೨. ರಾಜ್ ಗೌತಮನ್ : **ದಲಿತ್ತಿಯ ವಿಮರ್ಶನ ಕಟ್ಟುರೈಗಳ್** ; ಪುಟ-೫೧.

೨೩. (ಸಂ.) ಶ್ರೀಪಾದಶೆಟ್ಟಿ : **ಆಲಯಗಳ ಬಯಲು** ; ಪುಟ-೦೯.

೨೪. ಗುಂಡಣ್ಣ ಪಿ. : **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ** ; ಪುಟ-೩೩೪.

೨೫. ಡಾ. ಎಂ.ಎಸ್.ಶೇಖರ್ (ಸಂ.), **ಡಿ. ಗೋವಿಂದದಾಸ್ ಸಮಗ್ರ ಸಾಹಿತ್ಯ** ; ಪ್ರಸ್ತಾವನೆ ಪುಟ-೧೧೧.

೨೬. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಓದುವ ಮುನ್ನ ಓದುಗರೊಂದಿಗೆ ಮುನ್ನುಡಿ ಭಾಗದಲ್ಲಿ.

೨೭. ದೇ.ಜ.ಗೌ : **ಹೋರಾಟದ ಬದುಕು** ; ಮೊದಲ ಮಾತು.

೨೮. (ಸಂ.) ಅಪ್ಪಗೆರೆ.ಡಿ.ಸೋಮಶೇಖರ್, ಮಲ್ಲಿಗೆಹಳ್ಳಿ ನರೇಂದ್ರಕುಮಾರ್ : **ನೋವು ಹೆತ್ತ ಪ್ರೀತಿ ಹಸ್ತ ಪ್ರತಿ ; ಪುಟ**-೨೩.

೨೯. ಡಾ. ಸರಜೂ ಕಾಟ್ಕರ್ : **ಕನ್ನಡ ಮರಾಠಿ ದಲಿತ ಸಾಹಿತ್ಯ** ; ಪುಟ ೧೮೨.

೩೦. ಅದೇ : ಪುಟ-೧೮೧.

೩೧. ಗಿರಡ್ಡಿ ಗೋವಿಂದರಾಜ : **ಪ್ರಜಾವಾಣಿ ಪತ್ರಿಕೆ, ಭಾನುವಾರ ಸಂಚಿಕೆ** ; ೧೦.೧.೧೯೯೩, ಪುಟ-೫

೩೨. ಡಾ. ತಿಪ್ಪೇಸ್ವಾಮಿ ಜಿ.ಆರ್. : **ಸಾಹಿತ್ಯ ಮತ್ತು ಕ್ರಿಯಾಶೀಲತೆ** ; ಪುಟ-೨೧೨

೩೩. (ಸಂ.) ಅಪ್ಪಗೆರೆ.ಡಿ.ಸೋಮಶೇಖರ್, ಮಲ್ಲಿಗೆಹಳ್ಳಿ ನರೇಂದ್ರಕುಮಾರ್ : **ನೋವು ಹೆತ್ತ ಪ್ರೀತಿ** ; ಪುಟ-೪೯

೩೪. ಸಿದ್ದಲಿಂಗಯ್ಯ : **ಹೊಲೆಮಾದಿಗರ ಹಾಡು, ನನ್ನ ಜನಗಳು** ; ಪುಟ-೫೭

೩೫. **ಅದೇ : ಬೀಳು** ; ಪುಟ-೨೭

೩೬. **ಅದೇ :** ಒಂದು ಪದ ; ಪುಟ-೧೦.

೩೭. **ಅದೇ :** ಬೆಟ್ಟಯ ಹಾಡು ; ಪುಟ-೩.

೩೮. ಡಾ. ಕುಶಾಲ ಬರಗೂರು : **ಅರವಿಂದ ಮಾಲಗತ್ತಿಯವರ ಕಾವ್ಯ ಅನುಸಂಧಾನ** ; ಪುಟ-೨.

೩೯. ಡಾ. ಜವರಯ್ಯ ಮ.ನ. : **ವಿದ್ರೋಹ ಕವನ ಸಂಕಲನ** ; ಮುನ್ನುಡಿಯಿಂದ

೪೦. **ಅದೇ :**

೪೧. ಮುನಿವೆಂಕಟಪ್ಪ : **ಸ್ವಾಭಿಮಾನದ ಬೀಡಿಗೆ ಕವನಸಂಕಲನ ಕೊರಗು** ; ಪುಟ-೧೨

೪೨. **ಅದೇ :** ತಾಯಿ ನೆನಪಿಗೆ ; ಪುಟ-೨೫

೪೩. **ಅದೇ : ಕೆಂಡದ ನಡುವೆ** ; ಪುಟ. ೨೮

೪೪. (ಸಂ.) ಡಾ. ಅರ್ಜುನ ಗೊಳಸಂಗಿ : ದಲಿತಜ್ಞ ; ರಹಮತ್ ತರೀಕೆರೆ, **ಮುಟ್ಟಿದರೆ ಮಿಡಿದ ಗೌರ್ಮೆಂಟ್ ಬ್ರಾಹ್ಮಣ.** ಪುಟ. ೧೬೧.

೪೫. (ಸಂ.) ಡಾ. ಅರ್ಜುನ ಗೊಳಸಂಗಿ : ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ನೀಲಗಿರಿ ಕಾಳವಾರ, ಕ.ದ. ಆತ್ಮ ; ಪುಟ. ೮೩

೪೬. (ಸಂ.) ಅಪ್ಪಗೆರೆ.ಡಿ.ಸೋಮಶೇಖರ್, ಮಲ್ಲಿಗೆಹಳ್ಳಿ ನರೇಂದ್ರಕುಮಾರ್ : **ನೋವು ಹೆತ್ತ ಪ್ರೀತಿ** ; ಹಮೀದ್, ಎರಡು ಆತ್ಮಕಥೆಗಳ ಕುರಿತಾಗಿ ; ಪುಟ–೨೨

೪೭. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಮುನ್ನುಡಿ

೪೮. ಡಾ. ಅರವಿಂದ ಮಾಲಗತ್ತಿ : **ದಲಿತ ಮಾರ್ಗ**, ರಹಮತ್ ತರೀಕೆರೆ, **ಗೌರ್ಮೆಂಟ್ ಬ್ರಾಹ್ಮಣ** ಪುಟ. ೩೬೨.

೪೯. ಲಕ್ಷ್ಮಣ ಗಾಯಕವಾಡ : ಉಚಲ್ಯಾ ; ಪುಟ–೬

೫೦. ಸರ್ದೇಸಾಯಿ ; **ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ** ; ಪುಟ–೫೪.

೫೧. ಡಾ. **ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ** ; ಪುಟ–೨೯.

೫೨. ಜನಾರ್ಧನ ಎರ್ಪಕಟ್ಟೆ : ದಲಿತ ಚಿಂತನೆ ; ಪುಟ–೩೨.

೫೩. ದಯಾನಂದ ಮಾನೆ : **ದಲಿತ ಪ್ಯಾಂಥರ್ಸ್ ಚಳುವಳಿ** ; ಪುಟ. ೩೧.

೫೪. ಕೆ.ಪಿ. ಮಹಾಲಿಂಗು ಕಲ್ಕುಂದ : **ದಲಿತ ಚಳುವಲಿಯ ಅನಿವಾರ್ಯತೆ** ; ಪುಟ. ೪೯.

೫೫. ಕೆ.ಎಸ್. ಹೆಗಡೆ : **ಮಹಾರಾಷ್ಟ್ರದಲ್ಲಿ ದಲಿತ ಚಳುವಳಿ** ; ಪುಟ–೬೧.

೫೬. ಅದೇ : ಪುಟ–೮೧.

೫೭. ಅದೇ : ಪುಟ–೯೬.

೫೮. ಡಾ. ವಿ. ಮುನಿವೆಂಕಟಪ್ಪ : **ದಲಿತ ಚಳುವಳಿ ಚರಿತ್ರೆ** ; ಪ್ರೊ. ಲಕ್ಷ್ಮಣ ತೆಲಗಾವಿ, **ದಲಿತ ಚಳುವಳಿಯ ವಿವಿಧ ನೆಲೆಗಳು,** ಪುಟ–೨೦೨.

೫೯. ಡಾ ಡಿ. ಗುರುರತ್ನಬಾಬು : **ದಲಿತ ಚಳುವಳಿಯ ಪರಿಣಾಮಗಳು** ; ಪುಟ–೩೬.

೬೦. (ಸಂ.) ಡಾ. ಮಲ್ಲಿಕಾಘಂಟಿ : ದಲಿತ ಸಾಹಿತ್ಯ ಚಳುವಳಿ ; ಹೊರೆಯಾಲ ದೊರೆಸ್ವಾಮಿ, ದಲಿತ ಚಳುವಳಿ ಮತ್ತು ಭೂ ಹೋರಾಟಗಳು

೬೧. ಡಾ. ಹೆಚ್.ಟಿ. ವೆಂಕಟೇಶಮೂರ್ತಿ, **ಸಮಾಜ ಪರಿವರ್ತನಾ ಚಳುವಳಿ ಮತ್ತು ಕರ್ನಾಟಕ ದಲಿತ ಚಳುವಳಿ,** ಪುಟ. ೧೧೯.

೬೨. ಅರವಿಂದ ಮಾಲಗತ್ತಿ : **ದಲಿತ ಮಾರ್ಗ** ; ಪುಟ-೪೩೪.

೬೩. ಮುಳ್ಳೂರು ನಾಗರಾಜ್ : ಬದನವಾಳು ದುರಂತ ; ಪುಟ-೪೪

೬೪. ಚಂಡಾಳ : **ಕರ್ನಾಟಕ ದಲಿತ ಚಳುವಳಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್** ; ಪುಟ-೨೮.

೬೫. ಡಾ ಡಿ. ಗುರುರತ್ನಬಾಬು : **ದಲಿತ ಚಳುವಳಿಯ ಪರಿಣಾಮಗಳು** ; ಪುಟ-೪೬.

೬೬. ಅದೇ : ಪುಟ-೪೭.

೬೭. (ಸಂ.) ಅರವಿಂದ ಮಾಲಗತ್ತಿ : **ದಲಿತ ಮಾರ್ಗ** ; ಪುಟ-೩೦

೬೮. ಅರವಿಂದ ಮಾಲಗತ್ತಿ : **ದಲಿತ ಸಾಹಿತ್ಯ ಪರ್ವ** ; ಪುಟ-೨೫.

೬೯. ನಾರಾಯಣಸ್ವಾಮಿ : **ಶೋಧನ ನಡಿಗೆ** ; ಪುಟ-೨೨೫.

೭೦. ನಾಗಣ್ಣ ಸಿ. : **ಕಪ್ಪು ಸಾಹಿತ್ಯದ ತತ್ವ ಮತ್ತು ಸತ್ವ** ; ಪುಟ-೩.

೭೧. ನಾರಾಯಣಸ್ವಾಮಿ : **ಶೋಧನ ನಡಿಗೆ** ; ಪುಟ-೨೨೫.

೭೨. ನಾಗಣ್ಣ ಸಿ. : **ಕಪ್ಪು ಸಾಹಿತ್ಯದ ತತ್ವ ಮತ್ತು ಸತ್ವ** ; ಪುಟ-೧೨.

೭೩. ಅದೇ : ಪುಟ-೧೬.

೭೪. ನಾರಾಯಣಸ್ವಾಮಿ : **ಶೋಧನ ನಡಿಗೆ** ; ಪುಟ-೨೨೬.

೭೫. ರಾಜಪ್ಪಾಜಿ : **ಮಾನವತೆಯ ಕಡಲು** ; ಪುಟ-೧೦೧,.

೭೬. ಅದೇ : ಪುಟ-೧೦೨.

೭೭. ಅದೇ : ಪುಟ-೧೦೨.

೭೮. ಅದೇ : ಪುಟ-೧೦೨.

೭೯. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ-೮

೮೦. ಬರಗೂರು ರಾಮಚಂದ್ರಪ್ಪ : **ದೇವರ ಗುಟ್ಟು** ; ಪುಟ-೩೨.

೮೧. ಡಾ. ರಾಮ ಮನೋಹರ ಲೋಹಿಯಾ : **ಮಾರ್ಕ್ಸ್, ಗಾಂಧಿ ಸಮಾಜವಾದ ಭಾಗ ೧, ಸಂ. ೬.** ; ಪುಟ-೨೦೩.

೮೨. ಮಧು ದಂಡವತಿ : **ಮಾರ್ಕ್ಸ್ ಮತ್ತು ಗಾಂಧಿ** ; ಪುಟ-೪೩.

೮೩. ಅದೇ : ಪುಟ-೪೩.

೮೪. ಮಧು ದಂಡವತಿ : **ಮಾರ್ಕ್ಸ್ ಮತ್ತು ಗಾಂಧಿ** ; ಪುಟ-೪೫.

೮೫. ಬರಗೂರು ರಾಮಚಂದ್ರಪ್ಪ : **ದೇವರ ಗುಟ್ಟು** ; ಪುಟ-೩೩.

೮೬. ಅದೇ : ಪುಟ-೩೩.

೮೭. ಅದೇ : ಪುಟ-೩೩.

೮೮. ಅದೇ : ಪುಟ-೩೩.

೮೯. ಅದೇ : ಪುಟ-೩೪.

೯೦. ಚಂಡಾಳ : **ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ್** ; ಪುಟ. ೧೭.

೯೧. ಮಂಗಲಾಕಾಳೆ : **ಸ್ತ್ರೀ ವಿಮೋಚನಾ ಹೋರಾಟಗಳು** ; ಪುಟ. ೬೫

೯೨. ಡಾ. ಸರಜೂ ಕಾಟ್ಕರ್ : **ಕನ್ನಡ ಮರಾಠಿ ದಲಿತ ಸಾಹಿತ್ಯ** ; ಪುಟ-ಪುಟ. ೨೦

೯೩. ಡಾ. **ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ** ; ಪುಟ-೫೨.

೯೪. ಡಾ. ಅನುಸೂಯ ಕಾಂಬಳೆ : **ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ** ; ಪುಟ-೩೩.

೯೫. ಚಂಡಾಳ : **ಕನ್ನಡ ದಲಿತ ಚಳುವಳಿ ಮತ್ತು ಅಂಬೇಡ್ಕರ್** ; ಪುಟ. ೨೭.

೯೬. ಡಾ. ಅನುಸೂಯ ಕಾಂಬಳೆ : **ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ** ; ಪುಟ ೩೯

೯೭. ಸಂ. ಎಂ. ರಾಚಪ್ಪಾಜಿ, ಎಸ್. ನಾಗರಾಜು : **ವಿಮೋಚನಾ ಹಾದಿ**, ದೇವಿಹಳ್ಳಿ ಮಂಜು, **ದಲಿತರ ಸರ್ವತೋಮುಖ ಅಭಿವೃದ್ಧಿಗೆ ಅಂಬೇಡ್ಕರ್ ಚಿಂತನೆಯೇ ಪ್ರೇರಕ ಶಕ್ತಿ** ; ಪುಟ-೨೫೭.

೯೮. Mukhi H.R. : **The Simple Book of Political Thought** ; Page-೧೭೧.

೯೯. ರಾಮಮನೋಹರ ಲೋಹಿಯಾ ಬರಹಗಳು : **ಉತ್ತರ ದಕ್ಷಿಣ, ಸಂಪುಟ – ೨** ; ಪುಟ-೧೩೫.

೧೦೦. ರಾಮಮನೋಹರ ಲೋಹಿಯಾ ಬರಹಗಳು : **ಕಣ್ಣೆದುರಿನ ಪ್ರಶ್ನೆಗಳು, ಸಂ. ೫** ; ಪುಟ-೧೩೭.

೧೦೧. ಡಾ. ಕೇಶವ ಶರ್ಮ ಕೆ. : ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ ; ಪುಟ-೨೨.

೧೦೨. ಅದೇ : ಪುಟ-೨೨.

೧೦೩. ಡಾ. ಪ್ರಹ್ಲಾದ ಅಗಸನಕಟ್ಟೆ : **ದಲಿತ ಬಂಡಾಯ ಕಾವ್ಯ ವಿಚಾರವಾದಗಳು** ; ಪುಟ-೧೭೨.

೧೦೪. ಬರಗೂರು ರಾಮಚಂದ್ರಪ್ಪ : **ಬಂಡಾಯ ಸಾಹಿತ್ಯ ಚಳುವಳಿ** ; ಪುಟ-೨

೧೦೫. ಡಾ. ಪ್ರಹ್ಲಾದ ಅಗಸನಕಟ್ಟೆ : **ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು** ; ಪುಟ-೧೯೭

೧೦೬. ಲೋಹಿಯಾ : ಉತ್ತರ ದಕ್ಷಿಣ ; ಪುಟ-೧೩೦.

೧೦೭. ವೇಮಣ್ಣ : ಪೆರಿಯಾರರ ಜೀವನ ಚರಿತ್ರೆ ; ಪುಟ-೦೬.

೧೦೮. ಡಾ ದೇವರಾಜು ಪಿ. : ಸ್ವಾಭಿಮಾನಿ ಪೆರಿಯಾರ್ ; ಪುಟ-೦೫.

೧೦೯. ಅದೇ : ಪುಟ-೦೮

೧೧೦. ಅದೇ : ಪುಟ-೧೪

೧೧೧. ಅದೇ : ಪುಟ-೨೧

ಅಧ್ಯಾಯ ೨

ಭಾರತೀಯ ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳು

ಭಾರತೀಯ ಸಾಹಿತ್ಯ ಪ್ರಕಾರಕ್ಕೆ ಅನನ್ಯ ಕೊಡುಗೆಯಾಗಿ ಸೇರ್ಪಡೆಯಾಗಿದ್ದು ದಲಿತ ಸಾಹಿತ್ಯ. ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕತೆಗಳು ವಿಶಿಷ್ಟವಾದ ಸ್ಥಾನ ಪಡೆದುಕೊಂಡಿವೆ. ದಲಿತ ಸಾಹಿತ್ಯದ ಸಾಮಾನ್ಯ ಸ್ಥಾಯಿಭಾವ ಸಮ–ಸಮಾಜದ ಆಶಯವಾಗಿದೆ. ಇದು ದಲಿತ ಸಾಹಿತ್ಯದಲ್ಲಿ ಅಂತರ್ಗತವಾಗಿರಲು ಕಾರಣವೂ ಇದೆ. ಭಾರತೀಯ ದಲಿತ ಆತ್ಮಕತೆಗಳು ಭಾರತದ ಸಂಕೀರ್ಣ ಚರಿತ್ರೆಯ ಜೀವಂತ ದಾಖಲೆಗಳು. ಭಾರತೀಯ ಸಮಾಜ ವ್ಯವಸ್ಥೆಯಲ್ಲಿನ ನರಕಸದೃಶ ಬದುಕಿನ ಅನಾವರಣಗಳು ಆತ್ಮಕಥೆಗಳಲ್ಲಿ ಅಭಿವ್ಯಕ್ತವಾಗುತ್ತವೆ. ಇಲ್ಲಿ ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ಧಾರ್ಮಿಕ ದಬ್ಬಾಳಿಕೆಗಳ ಅನುಭವಾತ್ಮಕ ನಿದರ್ಶನಗಳಿವೆ. "ರಾಷ್ಟ್ರಪ್ರೇಮಿ ಕವಿ ಇಕ್ಬಾಲ್ ಅವರ 'ಸಾರೆ ಜಹಾಂಸೆ ಅಚ್ಚಾ ಹಿಂದೂಸ್ತಾನ್ ಹಮಾರಾ' ಕವಿತೆ ನಮ್ಮ ಹೃದಯದಲ್ಲಿ ಸುಂದರ ಭಾವನೆಗಳ ಸಕಾರಾತ್ಮಕ ಪುಳಕ ಉಂಟು ಮಾಡಿದರೆ, ದಲಿತ ಆತ್ಮಕತೆಗಳು ನಮ್ಮ ಹೃದಯದಲ್ಲಿ ಅತೀವ ವೇದನೆ, ಕಳವಳವನ್ನು ಉಂಟು ಮಾಡುತ್ತವೆ".[೧] ಎಂಬ ನಿಲುವು ಸಹ ಅಕ್ಷರಸಹ ಸತ್ಯವಾಗಿದೆ.

ಭಾರತೀಯ ದಲಿತ ಆತ್ಮಕಥೆಗಳು ಪ್ರಭಾವಶಾಲಿಯಾಗಿ ವ್ಯಕ್ತವಾಗಿವೆ. ಉತ್ಪ್ರೇಕ್ಷೆಯ ಅಂಶ ಇಲ್ಲಿರದೆ ಎಲ್ಲವೂ ನೈಜತೆಯನ್ನು ಒಳಗೊಂಡಿದೆ. ಭಾರತೀಯ ಭಾಷೆಯ ಕೆಲವು ದಲಿತ ಆತ್ಮಕತೆಗಳನ್ನು ಓದಿದಾಗ ನಮ್ಮ ಮನಸ್ಸು ವಿಹ್ವಲಗೊಂಡು ದೀರ್ಘ ನಿಟ್ಟುಸಿರು ಹೊರಹೊಮ್ಮುತ್ತದೆ. ಕಾಲಚಕ್ರದ ಗತಿಯಲ್ಲಿ ಹಲವು ಹತ್ತು ಬದಲಾವಣೆಗಳೊಂದಿಗೆ ಮುಂದೆ ಸಾಗಿದ ಸವರ್ಣೀಯ ಸಮಾಜ ಹಾಗೂ ದಲಿತ ಸಮಾಜದ ನವಪೀಳಿಗೆಯಲ್ಲಿ ಸ್ವಾಭಿಮಾನದ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಧಾರ್ಮಿಕ ಪರಿಧಿಯೊಳಗೆ ದಲಿತರನ್ನು ತುಳಿದ ದುಷ್ಟ ವ್ಯವಸ್ಥೆಯ ವಿರುದ್ಧ ನಿಷ್ಠುರಭಾವ ಭಾರತೀಯ ದಲಿತ ಆತ್ಮಕತೆಗಳಲ್ಲಿ ಕಂಡುಬರುತ್ತದೆ. ಕಠೋರ ಸಾಮಾಜಿಕ ಶೋಷಣೆಯ ವಿರುದ್ಧ ತೀವ್ರ ಆಕ್ರೋಶವಿದೆ. ಈ ಆಕ್ರೋಶ ಸ್ಫೋಟಗೊಂಡು ಪ್ರತಿಭಟನೆ ವ್ಯಕ್ತವಾದ ಘಟನೆಗಳು ಹಾಗೂ ಅಸಮಾನತೆಯ ವಿರುದ್ದ ಹೋರಾಡಲು ಸಾಧ್ಯವಾಗದ ಪ್ರಸಂಗಗಳು ದಲಿತ ಆತ್ಮಕಥೆಗಳಲ್ಲಿ ಕಂಡುಬರುತ್ತವೆ. ತಮ್ಮ ನೋವು ಸಂಕಟ ಅಪಮಾನಗಳನ್ನು ಸಹಿಸಿಕೊಂಡು ಸನ್ನಿವೇಶಗಳನ್ನು ಕಾಣಬಹುದು. ಈ ಎಲ್ಲಾ ಪ್ರಸಂಗಗಳ ವಿರುದ್ದ ಬಂಡೆದ್ದ

ದಲಿತರು ತಮ್ಮ ಸ್ವಾಭಿಮಾನದ ಜೀವನ ನಡೆಸಲು ದಲಿತ ಚಳುವಳಿಗೆ ಪ್ರೇರಕ ಶಕ್ತಿಯಾಗಿ ನಿಂತರು. ಈ ಬಗೆಯ ನೂರಾರು ಘಟನೆಗಳನ್ನು ಭಾರತೀಯ ದಲಿತ ಆತ್ಮಕಥನಕಾರರು ತಮ್ಮ ತಮ್ಮ ಆತ್ಮಕತೆಗಳಲ್ಲಿ ದಾಖಲಿಸಿದ್ದಾರೆ.

ಭಾರತೀಯ ದಲಿತ ಸಾಹಿತ್ಯದಲ್ಲಿ ಕನ್ನಡ ದಲಿತ ಸಾಹಿತ್ಯಕ್ಕೆ ವಿಶೇಷವಾದ ಸ್ಥಾನವಿದೆ. ಹೊಸ ಬಗೆಯ ನೆಲ ಮೂಲ ಸಂಸ್ಕೃತಿಯ ಚಿಂತನೆಗಳೊಂದಿಗೆ ಕನ್ನಡ ದಲಿತ ಸಾಹಿತ್ಯ ಬೆಳೆದು ಹೆಮ್ಮರವಾಗಿದೆ. ಕನ್ನಡ ಭಾಷೆಯೊಂದಿಗೆ ಹಿಂದಿ, ಬೆಂಗಾಳಿ, ಗುಜರಾತಿ, ಪಂಜಾಬಿ, ತೆಲಗು, ಮರಾಠಿ, ತಮಿಳು, ತುಳು, ಮಲಯಳಂ ಭಾಷೆಗಳಲ್ಲಿಯೂ ದಲಿತ ಸಾಹಿತ್ಯದ ಹೊಸ ಬಗೆಯ ನಡಿಗೆಯನ್ನು ದಾಖಲಿಸಬಹುದು. ಕೆಲವೆಡೆ ಭರದ ನಡಿಗೆ ಇದ್ದರೆ, ಇನ್ನು ಕೆಲವೆಡೆ ಮಂದ ನಡಿಗೆ ಇದೆ. ಇನ್ನು ಕೆಲವೆಡೆ ಕಲಿಕೆಯ ನಡಿಗೆಯ ಗುಣವೂ ಇದೆ. ಈ ಸ್ವರೂಪ ಏನೇ ಇದ್ದರೂ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿಯ ದಲಿತ ಸಾಹಿತ್ಯ ಹೆಚ್ಚು ಪ್ರಖರವಾದುದಾಗಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಸಣ್ಣಕತೆ ಹಾಗೂ ಆತ್ಮಕಥೆಯ ಪ್ರಕಾರದಲ್ಲಿ ಸಾಹಿತ್ಯ ಬೆಳವಣಿಗೆ ಮೂಡಿ ಬಂದಿದೆ.

೨.೧ ಮರಾಠಿ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು:

ಮರಾಠಿ ದಲಿತ ಸಾಹಿತ್ಯವು ೧೯೭೦ರ ದಶಕದ ನಂತರ ಹೆಚ್ಚು ಪ್ರವರ್ಧಮಾನಕ್ಕೆ ಬಂದಿದ್ದರೂ ಅದರ ಕುರುಹುಗಳನ್ನು ಡಾ. ಅಂಬೇಡ್ಕರ್ ಅವರ ಚಳುವಳಿಯಲ್ಲಿಯೇ ಗುರುತಿಸಬಹುದು. ೧೯೨೦ರ ಸಂದರ್ಭದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮಹಾರಾಷ್ಟ್ರದಲ್ಲಿ ದಲಿತ ಸಮಾಜಕ್ಕಾಗಿ ಸ್ವಾಭಿಮಾನ ಮತ್ತು ವೈಚಾರಿಕ ಆಂದೋಲನವನ್ನು ಆರಂಭಿಸಿದರು. ಈ ಆಂದೋಲನ ಮಹಾರಾಷ್ಟ್ರದಲ್ಲಿ ಹೊಸ ಸಾಹಿತ್ಯ ಪರಂಪರೆಯೊಂದಕ್ಕೆ ಎಡೆ ಮಾಡಿಕೊಟ್ಟಿತು. ದಲಿತ ಲೇಖಕರು ತಾವು ಅನುಭವಿಸಿದ ಅನುಭವಗಳ ಮತ್ತು ನೋವು–ನಲಿವುಗಳನ್ನು ಬರಹರೂಪಕ್ಕೆ ಇಳಿಸುವ ಪ್ರಯತ್ನ ಮಾಡಿದರು. ಆದರೆ ಸಮಕಾಲೀನ ಮಾಧ್ಯಮಗಳು ಅವರ ಬರಹಗಳನ್ನು ಓದುಗ ಲೋಕಕ್ಕೆ ತಲುಪಿಸಲು ನಿರಾಕರಿಸಿದವು. ಆ ಸಂದರ್ಭದಲ್ಲಿ ಗಂಗಾಧರ ಪಾನತಾವಣೆ ಅವರ 'ಅಸ್ಮಿತಾ ದರ್ಶನ ಪತ್ರಿಕೆ'ಯನ್ನು ಪ್ರಾರಂಭಿಸಿದ್ದರು. ಇದು ಉದಯೋನ್ಮುಖ ಬರಹಗಾರರಿಗೆ ವೇದಿಕೆಯನ್ನು ಕಲ್ಪಿಸಿಕೊಟ್ಟಿತು. ಮರಾಠಿ ದಲಿತ ಸಾಹಿತ್ಯವು ಮೊದಲು ತೆರೆದುಕೊಂಡಿದ್ದು ಈ ಪತ್ರಿಕೆಯ ಮೂಲಕವೆಂಬುದು ಚಾರಿತ್ರಿಕ ಅಂಶವಾಗಿದೆ.

ಮರಾಠಿ ದಲಿತ ಸಾಹಿತ್ಯಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು ಮುಖ್ಯ ಪ್ರೇರಣೆಗಳಾದವು. ಡಾ.ಬಿ.ಆರ್. ಅಂಬೇಡ್ಕರ್ ಅವರು ೧೯೪೬ರಲ್ಲಿ "People Education

Society" ಸ್ಥಾಪಿಸಿ ಮುಂಬೈನಲ್ಲಿ ಸಿದ್ಧಾರ್ಥ ಕಾಲೇಜನ್ನು ಆರಂಭಿಸಿದ್ದರು. ೧೯೫೦ರಲ್ಲಿ ಸಾಹಿತ್ಯಕ ಚಟುವಟಿಕೆಗಳಿಗೋಸ್ಕರ 'ಸಿದ್ಧಾರ್ಥ ಸಾಹಿತ್ಯ ಸಂಘ' ಪ್ರಾರಂಭವಾಯಿತು. ವಾಸ್ತವವಾಗಿ ಈ ಸಂಘ ಮುಂದೆ ೧೯೫೩ರಲ್ಲಿ ಮಹಾರಾಷ್ಟ್ರ ದಲಿತ ಸಾಹಿತ್ಯ ಸಂಘ ಎಂಬ ಹೆಸರನ್ನು ಪಡೆದು ದಲಿತ ಸಾಹಿತ್ಯದ ನಿರ್ಮಾಣಕ್ಕೆ ನಾಂದಿ ಹಾಡಿತು.

ಮರಾಠಿ ದಲಿತ ಸಾಹಿತ್ಯದಲ್ಲಿ ಬಹುಮುಖ್ಯವಾಗಿ ಗೌರವಿಸಲ್ಪಡುವ ದಲಿತ ಸಾಹಿತಿ ಅಣ್ಣಭಾವು ಸಾಠೆ ಅವರು. ೧೯೫೩-೫೪ರಲ್ಲಿ ಸಾಠೆಯವರು ದಲಿತರ ಜೀವನದ ನೈಜವಾದ ಚಿತ್ರಣವನ್ನು ಬಿಂಬಿಸುವ ಸಾಹಿತ್ಯವನ್ನು ರಚನೆ ಮಾಡಿದರು. ಸಾಠೆಯವರ ಬರವಣಿಗೆಯ ಮೇಲೆ ಕಮ್ಯೂನಿಸ್ಟ್ ತತ್ವದ ಪ್ರಭಾವ ಹೆಚ್ಚಿರುವುದನ್ನು ಕಾಣಬಹುದು. ಸುಮಾರು ೩೦೦ ಕಥೆಗಳು ೯೬ ದಲಿತ ಕಾದಂಬರಿಗಳನ್ನು ರಚಿಸಿರುವ ಅಣ್ಣಭಾವ ಸಾಠೆಯವರನ್ನು ಮರಾಠಿಯ ಪ್ರಪಥಮ ಶ್ರೇಷ್ಠ ದಲಿತ ಸಾಹಿತಿ ಎಂದು ಗುರುತಿಸಲಾಗಿದೆ.

ಮಹಾರಾಷ್ಟ್ರದ ದಲಿತ ಸಾಹಿತ್ಯ ಸಂಘ ಮುಂಬೈಯಲ್ಲಿ ೧೯೫೮ರ ಮಾರ್ಚ್ ೨ರಂದು ದಲಿತ ಸಾಹಿತ್ಯ ಸಮ್ಮೇಳನವೊಂದನ್ನು ಆಯೋಜಿಸಿತು. ಈ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಪದದ ವಿವರಣೆ; ಅದರ ನೆಲೆ-ನಿಲುವುಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಿತು. ಆದಾದನಂತರ ಅನೇಕ ದಲಿತ ಸಮ್ಮೇಳನಗಳು ನಡೆದವು. ೧೯೬೦ರ ನಂತರ ಮರಾಠಿ ದಲಿತಸಾಹಿತ್ಯ ವಿಫಲವಾಗಿ ಬೆಳೆಯಿತು. ಮುಖ್ಯವಾಗಿ ಕಥೆಗಳು, ಕವಿತೆಗಳು, ನಾಟಕಗಳು, ವಿಮರ್ಶೆ, ಕಾದಂಬರಿ ಹಾಗೂ ಆತ್ಮಕಥೆಯ ಪ್ರಕಾರಗಳಲ್ಲಿ ದಲಿತ ಸಾಹಿತ್ಯ ಬೆಳೆಯತೊಡಗಿತು.

ದಲಿತ ಸಾಹಿತ್ಯ ಮತ್ತು ದಲಿತ ಚಳುವಳಿ ಜೊತೆ ಜೊತೆಯಾಗಿ ಇಂದು ನಾಣ್ಯದ ಎರಡು ಮುಖಗಳಂತೆ ಸಾಗಿದ್ದನ್ನು ಕಾಣುತ್ತೇವೆ. ದಲಿತ ಚಳುವಳಿಯ ಉದ್ದೇಶಗಳೇ ಸಾಹಿತ್ಯ ಚಳುವಳಿಯ ಉದ್ದೇಶವು ಆಗಿತ್ತು. ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಡಾ. ಅಂಬೇಡ್ಕರ್ ಅವರ ಮಹಾಪರಿನಿರ್ವಾಣದ ನಂತರ ಭಾರತಾದ್ಯಂತ ಹರಡುತ್ತಿದ್ದ ದಲಿತ ಚಳುವಳಿಗೆ ಮಂಕು ಕವಿಯಿತು. ನಂತರದ ಸಂದರ್ಭದಲ್ಲಿ ೧೯೭೦ರ ದಶಕದಲ್ಲಿ ದಲಿತರ ಶೋಷಣೆ ಹೆಚ್ಚಾಯಿತು. ದಲಿತರ ಸಮಸ್ಯೆಗಳು ಪ್ರಜ್ಞಾವಂತ ದಲಿತ ಮಂದಿಯನ್ನು ಮತ್ತೇ ವಿವೇಚನೆಗೆ ಒಳಗುಮಾಡಿತು. ಇದರ ಫಲವೇ ೧೯೭೨ರ ಜುಲೈ ೯ರಂದು ಮುಂಬೈಯ ಸಿದ್ಧಾರ್ಥ ಕಾಲೇಜಿನಲ್ಲಿ ದಲಿತ ಪ್ಯಾಂಥರ್ಸ್ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಈ ಸಂಘಟನೆ ಮಹಾರಾಷ್ಟ್ರ ಅಷ್ಟೇ ಅಲ್ಲದೆ ಇಡೀ ಭಾರತದಾದ್ಯಂತ ದಲಿತ ಸಾಹಿತ್ಯ ಮತ್ತು ಚಳುವಳಿಗೆ ಹೊಸ ಸ್ಫೂರ್ತಿ ಒದಗಿಸಿತು.

ಮರಾಠಿ ದಲಿತ ಸಾಹಿತ್ಯದಲ್ಲಿ ಕಾವ್ಯ ಪ್ರಕಾರ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿ ಬಳಕೆಯಾಯಿತು. ಗದ್ಯ ಪರಿಣಾಮಕಾರಿಯಾಗಿ ಕಂಡು ಬಂದರೂ ಗದ್ಯ ಬರಹಗಾರರುಗಳಿಗಿಂತ ಕಾವ್ಯ ಕವಿಗಳ ಸಂಖ್ಯೆ ಹೆಚ್ಚಾಗಿದೆ. ಇದು ಎಲ್ಲ ಕಾಲಕ್ಕೂ ಎಲ್ಲಾ ಸಾಹಿತ್ಯ ಪ್ರಕಾರಕ್ಕೂ ಅನ್ವಯಿಸುವ ಮಾತು. ಮರಾಠಿ ದಲಿತ ಕಾವ್ಯದ ಧ್ಯೇಯ–ಧೋರಣೆಗಳು ಅರ್ಥವಾಗುತ್ತವೆ. ನಾವು ವಾಸಿಸುವ ದೇಶ, ಅನ್ನ ನೀಡುವ ಈ ಭೂಮಿ ಸರ್ವರಿಗೂ ಶ್ರೇಷ್ಠವೇ ಅದ್ದರಿಂದಲೇ ಅನೇಕ ಮಂದಿ ಮಹಾಕವಿಗಳು ತಮ್ಮ ತಾಯಿ ನಾಡನ್ನು ಹಾಡಿ ಹೊಗಳುತ್ತಾರೆ. ಅಂತೆಯೇ ದಲಿತಾನುಭವದ ಸಂವೇದನೆಗಳನ್ನು ತಾನು ಅನುಭವಿಸಿದ ತಲ್ಲಣಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿಪಡಿಸುತ್ತಾರೆ. ಕಾವ್ಯದೊಟ್ಟಿಗೆ ಕಥೆ, ಕಾದಂಬರಿ, ನಾಟಕ, ಆತ್ಮಕತೆಗಳನ್ನು ಸಾಕಷ್ಟು ಮರಾಠಿ ಸಾಹಿತ್ಯ ಕೃಷಿ ಬೆಳೆದು ಬಂದಿದೆ.

ಕಿಸನಧೌಗೊಬನ ಸೋಡೆಯೊಂದಿಗೆ ನಾರಾಯಣ ಸುರ್ವೆ, ನಾಮದೇವ ಢಸಾಳ, ದಯಾ ಪವಾರ, ಲಿಂಬಾಳಕರ್, ಕೇಶವಮೇಶ್ರಾಮ ಮುಂತಾದವರು ಬಾಬಾಸಾಹೇಬರ ಚಿಂತನೆಗಳು, ಬುದ್ಧನ ತತ್ವಗಳು, ಕಾರ್ಲ್‌ಮಾರ್ಕ್ಸ್‌ನ ವಿಚಾರಧಾರೆಗಳನ್ನು ತಮ್ಮ ಸಾಹಿತ್ಯ ಬರವಣಿಗೆಯಲ್ಲಿ ಕೃಷಿ ಮಾಡಿದ್ದಾರೆ. ಮರಾಠಿ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗೆ ವಿಶಿಷ್ಟವಾದ ಸ್ಥಾನವಿದೆ. ಏಕೆಂದರೆ ದಲಿತರ ಅಂತರಂಗದ ಭಾವನೆಗಳನ್ನು ಅಭಿವ್ಯಕ್ತ ಮಾಡಲು ರೂಪುಗೊಂಡ ಮಾಧ್ಯಮ. ಯಾವುದೇ ಸಂಕೋಚವಿಲ್ಲದೆ ನಿರ್ಭೀತೆಯಿಂದ ತಮ್ಮ ಎಲ್ಲಾ ಕಹಿ–ಸಿಹಿ ಅನುಭವಗಳು ಬಿಚ್ಚಿಡುತ್ತಾ ಹೋಗುತ್ತಾರೆ. ಶಂಕರರಾವ್ ಖರಾತ್ ಅವರ 'ತರಾಳ ಅಂತರಾಳ', ನಾಮದೇವವ್ಹಟಕರ್ ಅವರ 'ಕಥಾಯಾರ್ಝುಜಿನ್ಮಾಚೀ', ಪ್ರೊ.ಕೇಶವಮೇಶ್ರಾಂ 'ಹಕೀಕತ್‌ಕಣಿ ಜಟಾಯು', ದಯಾಪವಾರ್ ಅವರ 'ಬಲೂತ', ಲಕ್ಷ್ಮಣಮಾನೆಯವರ 'ಉಪಾರಾ', ಪ್ರೊ. ಸೋನಕಾಂಬಳೆಯವರ 'ಆಠವಣಿಂಚೆ ಪಕ್ಷಿ', ಮಾಧವಕೊಂಡ ವಿಲಕರ ಅವರ 'ಮುಕ್ಕಾಮುದೇವಾಚೆಗೋಡಣೆ', ದಾದಾಸಾಹೇಬ ಮಲಾರ ಮೋರೆಯವರ 'ಗಬಾಳ', ಶರಣಕುಮಾರ ಲಿಂಬಾಳೆಯವರ 'ಅಕ್ಕರಮಾಶಿ ಸಂತಾನ', ಲಕ್ಷ್ಮಣಗಾಯಕವಾಡ ಅವರ 'ಉಚಲ್ಯಾ', ಹೀಗೆ ಹಲವಾರು ಮರಾಠಿಯ ಆತ್ಮಕತೆಗಳು ಮರಾಠಿ ಭಾಷೆಯ ಸಾಹಿತ್ಯ ಕೃಷಿ ಮಾಡಿವೆ. ಉತ್ತಮ ಬಂಡುತುಪ್ಪೆ ಅವರ 'ಕಾಟ್ಯಾವರಚಿ ಪೊಟ', ಪಾರ್ಥಪೊಳಕೆಯವರ 'ಆಭರಣ', ಮಲಿಕಾ ಅಮರಶೇಟ್ ಅವರ 'ಮಲಾಲುಧ್ವಸ್ತಹ್ಯಾಯಚ', ಹಾಗೂ ಮಾಧವಿ ದೇಸಾಯಿ ಅವರ 'ಕುಣಿಯ ಘುಮಾ', 'ಹುಲಿಯ ನೆರಳಿನೊಳಗೆ' ಅಂಬೇಡ್ಕರ್ ವಾದಿಯ ಆತ್ಮಕಥನ, ನಾಮದೇವ ನೀಮ್ಗಾಡೆ, 'ವೀಸಾದ ನೀರಿಕ್ಷೆಯಲ್ಲಿ – ನೆನಪುಗಳು', ಡಾ.ಬಿ.ಆರ್.ಅಂಬೇಡ್ಕರ್, 'ವಾಲ್ಮೀಕಿ', ಡಾ.ಭೀಮರಾವ್ ಗಸ್ತಿ, 'ನನ್ನ ಜನುಮದ

ದುರಂತ ಕಥೆ', ಶಾಂತ ಬಾಯಿ ಕೃಷ್ಣಾಜೀ ಕಾಂಬಳಡ, 'ನೆನಪಿನ ಹಕ್ಕಿ', ಈ ಸೋನ ಕಾಂಬಳೆ, ಹೀಗೆ ಇಲ್ಲಿಯವರೆಗೆ ಸುಮಾರು ಎಂಬತ್ತೈದು ಮಾರಾಠಿ ಆತ್ಮಕತೆಗಳು ಪ್ರಕಟಗೊಂಡಿವೆ.

೨.೨. ತಮಿಳು ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು

ಭಾರತೀಯ ಭಾಷೆಯಲ್ಲಿ ತಮಿಳು ಭಾಷೆ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದೆ. ವಾಸ್ತವವಾಗಿ ಕ್ರಿಸ್ತಶಕದ ಆರಂಭದಿಂದಲೇ ತಮಿಳು ಸಾಹಿತ್ಯ ಚರಿತ್ರೆ ಆರಂಭವಾಗುತ್ತದೆ. "ಪ್ರಾರಂಭದ ದಲಿತ ಸಾಹಿತ್ಯದ ಕಾವ್ಯಗಳಲ್ಲೂ ದಲಿತರು ನಾಯಕರಾಗಿಲ್ಲ. ಪ್ರಾಚೀನ ಸಾಹಿತ್ಯದಲ್ಲಿ ದಲಿತರ ಉಲ್ಲೇಖ ಬಂದಿದ್ದರೂ ಅವರ ಬದುಕಿನ ಹೀನಾಯ ಸ್ಥಿತಿಯನ್ನಷ್ಟೇ ಅವು ದಾಖಲಿಸಿವೆ"[೨] ಎಂಬ ಮಾಹಿತಿಯನ್ನು ತಮಿಳ್ ಸೆಲ್ವಿಯವರು ಉಲ್ಲೇಖಿಸುತ್ತಾರೆ. ಭಕ್ತಿಯುಗದ ಮಹತ್ವದ ಕವಿಗಳಾದ ತಿರುಪ್ಪಾಣಿ ಅಳ್ವಾರ್ ಹಾಗೂ ನಂದನ ನಾಯನಾರ್ ಇವರಿಬ್ಬರೂ ದಲಿತ ವರ್ಗಕ್ಕೆ ಸೇರಿದವರಾಗಿದ್ದರು. ಇವರು ಅನುಭವಿಸಿದ ಅಸ್ಪೃಶ್ಯತೆ, ಅಸಮಾನತೆಗಳು ಅಂದಿನಿಂದ ಇಂದಿನವರೆಗೂ ಈ ಅಸಮಾನತೆಯ ಸಮಾಜ ಜೀವಂತಿಕೆಯನ್ನು ಕಾಪಾಡಿಕೊಂಡು ಬರುತ್ತಿದೆ.

ತಮಿಳುನಾಡಿನಲ್ಲಿ ಅಸ್ಪೃಶ್ಯತೆ, ಶೋಷಣೆ, ಮೂಢನಂಬಿಕೆಗಳ ವಿರುದ್ಧ ರಚನಾತ್ಮಾಕ ಚಳುವಳಿಯನ್ನು ಆರಂಭಿಸಿದವರು ತಂದೆ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರು. ಇವರು ದಕ್ಷಿಣ ಭಾರತದಾದ್ಯಂತ ಶೋಷಿತ ವರ್ಗದಲ್ಲಿ ಅರಿವು ಮೂಡಿಸಲು ಸತತ ಪ್ರಯತ್ನ ನಡೆಸಿದರು. ವೈದಿಕ ವ್ಯವಸ್ಥೆಯ ಅಸಮಾನತೆಯ ವಿರುದ್ಧ ಸ್ವಾಭಿಮಾನದ ಅಲೆಯನ್ನು ದ್ರಾವಿಡರಲ್ಲಿ ಮೂಡಿಸಿದರು. ದಲಿತ ಸಂವೇದನೆಯ ಆಶಯಗಳು ಜಾರಿಗೊಳ್ಳಲು ಪೆರಿಯಾರ್ ನಿಲುವು ಆದರ್ಶನೀಯ.

ಇವರಿಂದ ಪ್ರಭಾವಿತರಾದ ತಮಿಳುನಾಡಿನ ವಿದ್ಯಾವಂತ ದಲಿತರು ತಮಿಳುನಾಡಿನ ನಗರದಲ್ಲಿ ಪೆರಿಯಾರ್ ಮಹಾಜನ ಸಭಾ (ಹೊಲೆಯರ ಮಹಾಜನ ಸಭೆ)ವನ್ನು ಪ್ರಾರಂಭಿಸಿದರು. ಇದುವೇ ಮುಂದೆ ೧೯೧೦ರಲ್ಲಿ ಆದಿ ದ್ರಾವಿಡ ಮಹಾಜನ ಸಭಾ ಎಂಬ ಹೊಸ ಹೆಸರನ್ನು ಪಡೆಯಿತು. ಇದರ ಮುಂದಾಳತ್ವವನ್ನು ಮುಖ್ಯವಾಗಿ ದ್ರಾವಿಡರು ವಹಿಸಿದ್ದರು. ಅವರಲ್ಲಿ ಪ್ರಮುಖರೆಂದರೆ, ವಿ.ಸಿ.ರಾಜಾ, ರಟ್ಟಮಲ್ಯೆ, ಶ್ರೀನಿವಾಸನ್, ವಿ.ಐ.ಮುನಿಸ್ವಾಮಿ ಪಿಳ್ಳೈ, ಧರ್ಮಲಿಂಗಂ ಪಿಳ್ಳೈ, ಎನ್. ಶಿವರಾಜ್ ಮುಂತಾದವರು ವಹಿಸಿದ್ದರು.

೧೯೯೦ರ ದಶಕದಿಂದ ತಮಿಳು ದಲಿತ ಸಾಹಿತ್ಯ ರೂಪುಗೊಳ್ಳಲು ಪ್ರಾರಂಭವಾಯಿತು. ಈ ತಮಿಳು ದಲಿತ ಸಾಹಿತ್ಯವು ಹುಟ್ಟಲಿಕ್ಕೆ ಕಾರಣಕರ್ತರು ಮತ್ತು ಪ್ರೇರಕರು ಮಹಾತ್ಮ ಜ್ಯೋತಿ

ಬಾಫುಲೆ, ಡಾ.ಬಿ.ಆರ್.ಅಂಬೇಡ್ಕರ್, ಆಯೋತ್ತಿ ದಾಸ್ ಪಂಡಿತರ್, ತಂದೆ ಪೆರಿಯಾರ್ ರಾಮಸ್ವಾಮಿ ನಾಯಕರ್, ರಟ್ಟೈ, ಮಲೈ ಶ್ರೀನಿವಾಸನ್ ಪ್ರಮುಖರು. ಇದೇನೇ ಇದ್ದರೂ ತಮಿಳುನಾಡಿನಲ್ಲಿದ್ದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಿನ್ನೆಲೆಗಳು ಈ ಸಾಹಿತ್ಯ ಹುಟ್ಟಲು ಕಾರಣವಾಗಿವೆ ಎಂಬುವುದು ಸ್ಪಷ್ಟವಾದ ಸಂಗತಿಯಾಗಿದೆ. ಇದರೊಟ್ಟಗೆ ಮರಾಠಿ ಸಾಹಿತ್ಯ ಉಚ್ಛ್ರಾಯ ಸ್ಥಿತಿಯಲ್ಲಿ ಇರಲು ಅಂಬೇಡ್ಕರ್ ಅವರ ಚಿಂತನೆಗಳು, ಪೆರಿಯಾರರ ಹೋರಾಟಗಳು, ಮಾರ್ಕ್ಸ್‌ವಾದದ ಆಶಯಗಳು ತಮಿಳು ದಲಿತ ಸಾಹಿತ್ಯ ರೂಪುಗೊಳ್ಳಲು ಕಾರಣವಾಯಿತು.

ತಮಿಳು ದಲಿತ ಸಾಹಿತ್ಯವು ಮರಾಠಿ ಸಾಹಿತ್ಯದ ಪ್ರೇರಣೆಯಂತೆಯೇ ಆಫ್ರಿಕನ್ ಸಾಹಿತ್ಯದಿಂದಲೂ ಪ್ರೇರಣೆ ಪಡೆಯಿತು. ಆರಂಭದಿಂದಲೂ ದಲಿತ ಸಂವೇದನೆಗಳನ್ನು ಒಳಗೊಂಡ ಹಲವು ಕವಿಗಳು ಬಿಡಿ ಬಿಡಿ ಕವನಗಳನ್ನು ಹಲವು ಪತ್ರಿಕೆಗಳಲ್ಲಿ ಪ್ರಕಟಗೊಳಿಸಿದರು. ದಲಿತ ಸಿದ್ಧಾಂತಗಳನ್ನು ಮೈಗೊಡಿಸಿಕೊಂಡು ಮೊದಲ ಬಾರಿಗೆ ಕವನ ಸಂಕಲವನ್ನು ಹೊರತಂದವರು ಕವಿ ಇಂದ್ರನ್ ಅವರು. ೧೯೮೨ರಲ್ಲಿ ಇವರ ಮೊದಲ ಕವನ ಸಂಕಲನ 'ಅನ್ನಿಯನ್' (ಮತ್ತೊಬ್ಬ ಅನ್ಯ ವ್ಯಕ್ತಿ) ಪ್ರಕಟವಾಯಿತು. ಎನ್.ಡಿ. ರಾಜ್‌ಕುಮಾರ್ ಅವರು ೧೯೯೮ರಲ್ಲಿ ತೆರಿ (ಚೆದುರು) ೧೯೯೯ರಲ್ಲಿ ಒಡಕ್ಕು (ಒಡಕು) ೨೦೦೧ರಲ್ಲಿ ರಕ್ತ ಚಂದನಪ್ಪಾವೈ, (ರಕ್ತಸಿಕ್ತನೆಲ), ೨೦೦೩ರಲ್ಲಿ ಕಟ್ಟಾಳನ್ (ಒರಡಾಳು), ೨೦೦೧ರಲ್ಲಿ ಕಲ್‌ವಿಳಕ್ಕು (ಕಲ್ಲು ದೀಪಾ) ವಿ.ಳ.ಪಾ.ಇದಯವೇಂದನ್ ಅವರು ೨೦೦೨ರಲ್ಲಿ ಕನವುಗಳ್ ವಿರಿಯುಮ್ (ಕನಸುಗಳು ವಿಸ್ತರಿಸುವುದು), ಅಳಗಿಯ ಪೆರಿಯನ್ ಅವರು ೨೦೦೦ರಲ್ಲಿ ನೀ ನಿಗಾಳ್‌ಂದ ಪೋದು (ನೀನು ಕಣ್ಣುಬಿಟ್ಟಾಗ), ೨೦೦೫ರಲ್ಲಿ ಅರೊಬ ನಂಜು (ಹುದುಗಿನ ವಿಷ) ಅಭಿಮಾನಿಯವರು ೨೦೦೪ರಲ್ಲಿ ಕಾವ್ಯಂ, ೨೦೦೬ರಲ್ಲಿ ಮದಿವಣ್ಣನ್ ಅವರು ನಮಕ್ಕಿಡೈಯಿಲಾನ ತೊಲೈವು (ನಮ್ಮ ನಡುವಿರುವ ಅಂತರ) ಸುಕೀರ್ತರಾಣಿಯವರು ೨೦೦೪ರಲ್ಲಿ ಇರವುಮಿರುಗಮ್ (ರಾತ್ರಿ ಮೃಗು) ಎಂಬ ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಕೆ.ಎ.ಗುಣಶೇಖರನ್, ದಲಿತ ಸುಬ್ಬಯ್ಯ, ರಾಜಮುರುಗುಪಾಂಡಿ, ಪ್ರದೀಪ್ ಜಯಚಂದಿರನ್, ಕಂದಸ್ವಾಮಿ, ಇಳಂದುರುವಿ ಪುರುಟ್ಚಿ ಕವಿದಾಸನ್, ತಿರುನಾವುಕರಸು, ಮುಂತಾದವರು ತಮಿಳು ದಲಿತ ಕಾವ್ಯ ಪ್ರಕಾರದಲ್ಲಿ ಹೆಸರು ಮಾಡಿದ ಕವಿಗಳಾಗಿದ್ದಾರೆ.

ತಮಿಳು ದಲಿತ ಸಾಹಿತ್ಯವು ಕಥಾಕ್ಷೇತ್ರದಲ್ಲಿಯೂ ಸಾಹಿತ್ಯದ ಬೆಳವಣಿಗೆಯನ್ನು ಕಾಣಬಹುದು. ವಿ.ಳ.ಪಾ ಇದಯವೇಂದನ್ ಮುಖ್ಯರಾದವರು. ನಂದನಾರ್‌ತೆರು (ಹೊಲೆಗೇರಿ) ವದೈಪಡುಮ್ ವಾಳ್ವು (ತುಳಿತಕ್ಕೊಳಪಟ್ಟ ಜೀವನ) ತಾಯ್ ಮಗ್ (ಮಾತೃಭೂಮಿ, ಸಿನೇಗಿದನ್) ಸ್ನೇಹಿತ ಉಯಿರಿಳ್ಳೈ, ಅಮ್ಮಾವಿನ್ ನಿಳಲ್ (ತಾಯಿಯ ಆಶ್ರಯ) ಸಗಡೈ (ತೇರಿಲ್ಲದ ರಥ) ಇರುಳ್ ತೀ

(ರಾತ್ರಿ ಬೆಂಕಿ) ಮುಂತಾದ ಕಥಾಸಂಕಲನಗಳನ್ನು ಹೊರತಂದಿದ್ದಾರೆ. ಅಂತೆಯೇ ಅಳಗಿಯ ಪೆರಿಯವನ್ ಅವರು ತೀಟು (ಮಡಿ ಮೈಲಿಗೆ). ಅಭಿಮಾನಿ ಅವರು ನೋಕ್ಕಾಡು, ಇಂದಿರನ್ ಅವರ ಪಿಣತ್ತೈ ಎರಿತ್ತೇ ವೆಳ್ಳಿಚ್ಚಮ್ (ಹಣವನ್ನು ಸುಟ್ಟೀ ಬೆಳಕು) ಮುಂತಾದ ಕೃತಿಗಳು ಹೊರ ಬಂದಿವೆ. ಪೆರುಮಾಳ್, ಮುರುಗನ್, ಕೆ.ಎ.ಗುಣಶೇಖರನ್, ಇಮಯುಂ, ರವಿಕುಮಾರ್, ರಾಜ್‌ಕುಮಾರ್, ಇವರುಗಳು ಇಂದಿಗೂ ಕಥಾಕ್ಷೇತ್ರದಲ್ಲಿ ಸಾಹಿತ್ಯ ರಚಿಸುತ್ತಿದ್ದಾರೆ.

ಕಾದಂಬರಿಯ ಕ್ಷೇತ್ರದಲ್ಲಿ ಪೂಮಣಿ ಅವರು ೧೯೭೯ರಲ್ಲಿ ಹೊರತಂದ (ಪಿರುಗು ಅನಂತರ) ಪ.ಶಿವಗಾಮಿಯವರು. ೧೯೮೯ರಲ್ಲಿ ಪಳೈಯನ ಕಳಿದಲುಮ್ (ಹಳೆಯನ್ನು ಕಳೆಯುವುದು) ಬಾಮಾರವರ ಕರುಕ್ಕು (ಕರಕಲಾದ) ಮತ್ತು ಸಂಗದಿ (ಸಂಗತಿ) ಎಂಬ ಕಾದಂಬರಿಗಳು ಹೊರಬಂದಿವೆ.

ತಮಿಳು ದಲಿತ ನಾಟಕ ಕ್ಷೇತ್ರದಲ್ಲಿ ಜ್ಞಾನ ಪ್ರಕಾಶ್ ಮತ್ತು ಕೆ.ಎ.ಗುಣಶೇಖರನ್ ಪ್ರಮುಖ ನಾಟಕಕಾರರಾಗಿ ಗುರುತಿಸಲಾಗುತ್ತದೆ. ಜ್ಞಾನಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಜರುಗುತ್ತಿರುವ 'ಸೆಮ್ಮಣಿ' ಎಂಬ ಕಲಾತಂಡ ನಾಟಕೀಯ ಶೈಲಿಯನ್ನು ಕಾಲಕಾಲಕ್ಕೆ ತಕ್ಕಂತೆ ಹಲವು ಬದಲಾವಣೆಗಳನ್ನು ಮಾಡಿಕೊಂಡು ಪ್ರದರ್ಶನ ನೀಡುತ್ತಿವೆ. ಇವರ ನಾಟಕಗಳು ಪ್ರಾರಂಭವಾಗುವುದು ಒಪ್ಪಾರಿ (ಸಾವಿನ ಹಾಡು) ಎಂಬ ಹಾಡಿನ ಮೂಲಕ, ಅಂತೆಯೇ ನಾಟಕ ನಾಟಕದ ವೇದಿಕೆಯ ಒಂದು ಭಾಗದಲ್ಲಿ ಚಪ್ಪಲಿ ಕಾಣುವ ದೃಶ್ಯ ಇರುತ್ತದೆ. ಈ ರೀತಿಯ ದೃಶ್ಯಗಳನ್ನು ಒಳಗೊಂಡು ರಚನೆಯಾದ ನಾಟಕಗಳೆಂದರೆ ಬಲಿಪೀಡಂ (ಬಲಿಪೀಠ) ಅಮೈದಿ ಅರಸು (ಶಾಂತಿಯುತ ಸರ್ಕಾರ) ಪ್ರಳಯನ್ (ಪ್ರಳಯಾಂತಕ) ನಾಟಕಗಳು ಮುಖ್ಯವಾದವುಗಳು.

ತಮಿಳು ದಲಿತ ಸಾಹಿತ್ಯದ ವಿಮರ್ಶಾ ಕ್ಷೇತ್ರದಲ್ಲೂ ಸಾಕಷ್ಟು ಸಾಹಿತ್ಯ ಕೆಲಸ ನಡೆದಿದೆ. ರಾಜ್‌ಗೌತಮಾನ್,ಎಂ.ಎಲ್.ಎ.ರವಿಕುಮಾರ್,ಇಂದಿರನ್,ಅಳಗಿಯ ಪೆರಿಯವನ್. ಮೊದಲಾದವರು ದಲಿತ ಬರಹಗಳಿಗೆ ವಿಮರ್ಶೆಯ ಸ್ಪರ್ಶ ನೀಡಿದರು. ರಾಜ್‌ಗೌತಮಾನ್ ಅವರು ದಲಿತ ಸಂಪ್ರದಾಯ ಮತ್ತು ತಮಿಳು ಸಂಪ್ರದಾಯ ದಲಿತ್‌ಪಾನ್ ಪಾಡು (ದಲಿತ ಸಂಪ್ರದಾಯ) ಎಂಬ ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಸ್ಟಾಲಿನ್ ರಾಜಾಂಗಂ ಅವರು ದಲಿತ ಇತಿಹಾಸ ಸಂಬಂಧೀ ಲೇಖನಗಳನ್ನು ಬರೆಯುತ್ತಿದ್ದಾರೆ. ಮಾರ್ಕ್ಸ್ ಎಂ. ಕೃಷ್ಣನ್ ಮೊದಲಾದವರು ಈ ವಿಮರ್ಶಾ ಕ್ಷೇತ್ರದಲ್ಲಿ ಸಾಹಿತ್ಯ ಸೇವೆ ಮಾಡುತ್ತಿದ್ದಾರೆ.

ಭಾರತದ ದಲಿತ ಸಾಹಿತ್ಯವನ್ನು ಅವಲೋಕಿಸಿದರೆ, ಅದು ಆತ್ಮಕಥೆಯ ಪ್ರಕಾರವನ್ನು ಪ್ರಧಾನವಾಗಿ ಆಯ್ಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ. ದಲಿತರು ತಮ್ಮ ಬದುಕಿನ ನೋವು ನಲಿವುಗಳನ್ನು ಹೇಳಿಕೊಳ್ಳಲು ಶತಮಾನಗಳಿಂದ ಅನುಭವಿಸಿದ ಯಾತನೆಯನ್ನು ಒಂದೇ ಬಾರಿಗೆ ತೆರದಿಡಲು ಆತ್ಮಚರಿತ್ರೆಯ ವಿಶಾಲ ವೇದಿಕೆಯನ್ನು ಬಳಸಿಕೊಂಡರು. "ರಟ್ಟಮಲ್ಲೈ ಶ್ರೀನಿವಾಸನ್ ಅವರು ರಚಿಸಿರುವ 'ಜೀವನ ಚರಿತ್ತಿರ ಸುರಕ್ಕಂ (ಸಂಕ್ಷಿಪ್ತ ಜೀವನ ಚರಿತ್ರೆ) ಕೆ.ವಿ. ಗುಣಶೇಖರನ್ ಅವರ 'ವಡು' (ಗಾಯದ ಗುರುತು) ಇವು ಪ್ರಾರಂಭದಲ್ಲಿ ಬಂದ ಪ್ರಮುಖ ಆತ್ಮಕಥೆಗಳಾಗಿವೆ"[೩]. ದಲಿತ ಆತ್ಮಕಥೆಗಳು ತಮಿಳು ಸಾಹಿತ್ಯ ಪರಂಪರೆಗೆ ಹೊಸಬಗೆಯ ಅನುಭವಲೋಕವನ್ನು ಪರಿಚಯಿಸಿದವು. ಕಾವ್ಯ, ನಾಟಕ, ಕಾದಂಬರಿ, ಕಥೆಗಳಂತೆಯೇ ಆತ್ಮಕಥೆಗಳಲ್ಲೂ ದಲಿತೀಯ ತಾಜಾತನದ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಶೋಷಿತ ಸಮುದಾಯಕ್ಕೆ ದೊರೆತ ಅಕ್ಷರ ಪ್ರಜ್ಞೆಯು ಹೇಗೆ ಇಡೀ ಬದುಕನ್ನೇ ಸೃಜನಶೀಲ ಅಭಿವ್ಯಕ್ತಿಯನ್ನಾಗಿಸಿದೆ ಎಂಬುದಕ್ಕೆ ಈ ಮೇಲಿನ ಆತ್ಮಕಥೆಗಳು ಸಾಕ್ಷಿಯಾಗಿವೆ. ಇದೇ ಸಾಲಿನಲ್ಲಿ ಕಂಡು ಬರುವ ಮತ್ತೊಂದು ದಲಿತ ಆತ್ಮಕಥೆಯೆಂದರೆ ಭಾಮಾ ಅವರ 'ಕರಕ್ಕು' "ಭಾಮಾ ಅವರ ಕರಕ್ಕು (ತಾಳೆಗರಿ) ತನ್ನ ಸಾಚಾತನದಿಂದಾಗಿ ಮರಾಠಿ ಆತ್ಮಕಥನವನ್ನು ನೆನಪಿಗೆ ತಂದರೆ ಆಶ್ಚರ್ಯವೇನಿಲ್ಲ ಇದರಲ್ಲಿ ದಲಿತ ಸಮೂಹವನ್ನು ಪ್ರತಿನಿಧಿಸುವ ಅವರ ಪ್ರಯತ್ನ ಸಂಪೂರ್ಣ ಯಶಸ್ವಿಯಾಗಿದೆ. ಮಹಿಳೆಯಾಗಿ ಅದರಲ್ಲೂ ದಲಿತ ಮಹಿಳೆಯಾಗಿ ಅವರು ಎದುರಿಸಿದ ತಲ್ಲಣಗಳು, ಅವಮಾನಗಳು, ಅವರ ಆಕಾಂಕ್ಷೆ ಸಾಧನೆ, ನಿರಾಸೆ ಎಲ್ಲವನ್ನು ಹಿಡಿದಿಟ್ಟಿರುವ ಪರಿ ಓದುಗರ ವಲಯದಲ್ಲಿ ಒಂದು ಹೊಸ ಅಲೆಯನ್ನೇ ಎಬ್ಬಿಸಿದೆ".[೪] ಹೀಗೆ ದಲಿತ ಮಹಿಳೆಯರು ಆತ್ಮಕಥನವನ್ನು ಬರೆದದ್ದು ಭಾಮ ಅವರ ಹೆಗ್ಗಳಿಕೆಯಾಗಿದೆ.

ದಲಿತೇತರ ಆತ್ಮಕಥೆಗಳು ಆಯಾ ವ್ಯಕ್ತಿಯ ವೈಯಕ್ತಿಕ ವಿವರ ಸಾಧನೆಗಳ ದಾಖಲೆಗಳಾದರೆ; ದಲಿತ ಆತ್ಮಕಥೆಗಳು ವ್ಯಕ್ತಿಯ ವೈಯಕ್ತಿಕ ಸಂಬಂಧಗಳನ್ನು ಕಟ್ಟಿಕೊಡುವುದರ ಜೊತೆಗೆ ಆತ ಬೆಳೆದು ಬಂದ ದಲಿತ ಸಮುದಾಯದ ಬದುಕನ್ನು ಪರಿಚಯಿಸುತ್ತದೆ. ದಲಿತ ಲೇಖಕನೊಬ್ಬ ತಮ್ಮ ಬಾಲ್ಯದಿಂದ ಕಾಡುತ್ತಿರುವ ಜಾತೀಯತೆ ಮತ್ತು ಅಸ್ಪೃಶ್ಯತೆಯ ಅನುಭವಗಳ ನಿರ್ಭೀಡತೆಯಿಂದ ಬಿಚ್ಚಿಡಲು ಪ್ರಯತ್ನಿಸುತ್ತಾನೆ.

೨.೩. ತೆಲಗು ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು

ಭಾರತೀಯ ಸಾಹಿತ್ಯವನ್ನು ಅವಲೋಕಿಸಿದಾಗ ದಕ್ಷಿಣ ಭಾರತೀಯ ಸಾಹಿತ್ಯವು ವಿಶಿಷ್ಟವಾದ ಸಾಹಿತ್ಯ ಕೃಷಿಯಲ್ಲಿ ಮನ್ನಣೆ ಪಡೆದುಕೊಂಡಿದೆ. ತಮಿಳು, ಕನ್ನಡ, ಮಲಯಾಳಂ

ಸಾಹಿತ್ಯದಂತೆ ತೆಲಗು ಸಾಹಿತ್ಯವು ಎಲ್ಲಾ ಪ್ರಕಾರಗಳಲ್ಲಿಯೂ ಸಾಹಿತ್ಯ ಕೃಷಿ ಮಾಡಿದೆ. ಅದರಲ್ಲಿ ಆತ್ಮಕಥಾ ಪ್ರಕಾರವು ಒಂದಾಗಿದೆ. "೧೯ನೇ ಶತಮಾನದ ಸಂದರ್ಭದಲ್ಲಿ ರಾಜಾರಾಮ ಮೋಹನರಾಯರು ಸ್ತ್ರೀ ಸಮಾಜವನ್ನು ಉದ್ಧಾರ ಮಾಡಲು ಹೊರಟರು. ಕಲ್ಕತ್ತದಲ್ಲಿ ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ವೀರೇಶಲಿಂಗಂ ಅವರೂ ಸಂಪ್ರದಾಯದ ಮಾರ್ಗದಲ್ಲಿಯೇ ಶಿಕ್ಷಿತರಾದವರಾದರೂ ಬ್ರಹ್ಮಸಮಾಜಿಯಾಗಿ ಸಮಾಜ ಸಂಸ್ಕರಣ ಕಾರ್ಯದಲ್ಲಿ ತೊಡಗಿದರು. ವೀರೇಶಲಿಂಗಂ ಅವರ ಕಾರ್ಯ ಅಲ್ಲಿಗೇ ನಿಲ್ಲಲಿಲ್ಲ. ಅವರು 'ತೆಲಗುಕವುಲು' ಎಂಬ ಪ್ರಪ್ರಥಮ ತೆಲಗು ಸಾಹಿತ್ಯ ಚರಿತ್ರೆಯನ್ನು ತಮ್ಮ ಆತ್ಮಚರಿತ್ರೆಯನ್ನು ಬರೆದಿದ್ದಾರೆ".[೨] ತೆಲುಗು ಸಾಹಿತ್ಯವು ೧೯ನೇ ಶತಮಾನದಲ್ಲಿ ವೀರೇಶಲಿಂಗಂರವರ ಪ್ರೇರಣೆ ಪ್ರಭಾವದಿಂದ ಹಲವಾರು ವ್ಯಕ್ತಿಗಳು ಆತ್ಮಕಥನಗಳನ್ನು ರಚನೆ ಮಾಡಿರುವುದು ಕಂಡುಬರುತ್ತದೆ. ಇವರಲ್ಲಿ ದಲಿತರು ಹಾಗೂ ದಲಿತೇತರ ಸಾಹಿತಿಗಳು ತಮ್ಮ ಜೀವನದ ವಿಶಿಷ್ಟ ಅನುಭವಗಳನ್ನು ದಾಖಲೆ ಮಾಡಿರುವುದು ತಿಳಿದು ಬರುತ್ತದೆ.

ಆಧುನಿಕ ತೆಲಗು ಸಾಹಿತ್ಯ ರಚನೆಗೆ ವೀರೇಶಲಿಂಗಂ ಪಂತುಲು ಅವರು ಕಾರಣೀಭೂತರು. ಏಕೆಂದರೆ ಭಾರತೀಯ ಸಾಹಿತ್ಯ ಚರಿತ್ರೆಯ ಇತಿಹಾಸವನ್ನು ಗಮನಿಸಿದಾಗ, ತೆಲಗು ದಲಿತ ಸಾಹಿತ್ಯವು ವಿಭಿನ್ನ ನೆಲೆಯಲ್ಲಿ ಕಾಣಿಸಿಕೊಳ್ಳುತ್ತದೆ. ಶೋಷಣೆಗೆ ಸಂಬಂಧಿಸಿದ ಅಂಶಗಳ ಮೇಲೆ ಮೇಲ್ಜಾತಿಯ ರಾಷ್ಟ್ರೀಯವಾದ, ಉದಾರವಾದ ಮೇಧಾವಿಗಳು ಆಂಧ್ರ ಸಮಾಜವನ್ನು ಪೀಡಿಸುತ್ತಿದ್ದ ವಿವಿಧ ದುರಾಚಾರಗಳ, ಕಂದಾಚಾರಗಳ ಮೇಲೆ ದೃಷ್ಠಿ ಹರಿಸಿ ತೆಲಗು ಸಾಹಿತ್ಯ ಸಂಪ್ರದಾಯವನ್ನು ತ್ಯಜಿಸಿ, ಆಧುನಿಕ ಸಮಾಚಾರ ಸಾಧನವಾಗಿ ರೂಪಾಂತರ ಹೊಂದಿತು. ಇದರಲ್ಲಿ ದಲಿತ ಸಾಹಿತ್ಯ ಒಂದಾಗಿದೆ. ದಲಿತ ಚಳುವಳಿಯ ಸುದೀರ್ಘವಾದ ಪಯಾಣದಿಂದ ದಲಿತ ಸಾಹಿತ್ಯ ಹುಟ್ಟಿಕೊಳ್ಳಲಿಕ್ಕೆ ಕಾರಣವಾಯಿತು. ಆಂಧ್ರದಲ್ಲಿ ನಡೆದ ಅನೇಕ ದಲಿತರ ಹೋರಾಟಗಳು ದಲಿತ ಸಾಹಿತ್ಯ ರಚನೆಗೆ ಪ್ರೇರಣೆಯಾಗಿವೆ. ಚಳುವಳಿ ಮತ್ತು ಸಾಹಿತ್ಯಕ್ಕೆ ಅನುಭಾವ ಸಂಬಂಧವನ್ನು ಹೊಂದಿವೆ. ದಲಿತರ ಮೇಲಿನ ದೌರ್ಜನ್ಯ ಶೋಷಣೆ, ಅಸ್ಪೃಶ್ಯತಾಚರಣೆ, ಮೂಲ ಸೌಕರ್ಯಗಳ ನಿರ್ಬಂಧ, ಅಸಮಾನತೆ ಈ ಮುಂತಾದ ಅಂಶಗಳೇ ಕಾರಣವಾಗಿದೆ.

ಕನ್ನಡ ದಲಿತ ಸಾಹಿತ್ಯ ಹುಟ್ಟಲಿಕ್ಕೆ ದಲಿತ ಚಳುವಳಿಯು ಎಷ್ಟು ಪ್ರಮುಖ ನೆಲೆಯಾಗಿತ್ತೋ ಅಷ್ಟೇ ಪ್ರಮಾಣದಲ್ಲಿ ತೆಲಗು ದಲಿತ ಸಾಹಿತ್ಯ ರಚನೆಗೆ ಆಂಧ್ರದ ದಲಿತ ಚಳುವಳಿಯೂ ಅಷ್ಟೇ ಪ್ರಮುಖವಾಗಿದೆ. "ದಲಿತರು ತಮ್ಮ ಹಕ್ಕು ಸಾಧನೆಗಾಗಿ ಮತ್ತು ತಮ್ಮ ಮೇಲೆ ನಡೆಯುತ್ತಿದ್ದ

ಶೋಷಣೆಗಳನ್ನು ವಿರೋಧಿಸಲು ಸಾಹಿತ್ಯ ಮಾಧ್ಯಮವನ್ನು ಬಳಸಬೇಕಾಯಿತು".[೬] ಪ್ರತಿಭಟನೆಯ ಅಸ್ತ್ರವನ್ನಾಗಿ ಸಾಹಿತ್ಯವನ್ನು ದಲಿತರು ಬಳಸಿಕೊಳ್ಳುವಾಗ ಅವರ ಗುರಿ ಮೇಲ್ಜಾತಿ ಹಿಂದೂಗಳು ವರ್ಣವ್ಯವಸ್ಥೆಯ ಹೆಸರಿನಲ್ಲಿ ನಡೆಸುತ್ತಿದ್ದ ದುರಾಚರಣೆಗಳನ್ನು ಕಿತ್ತೆಸೆಯುವುದಾಗಿತ್ತು. ಏಕೆಂದರೆ ಮೇಲ್ಜಾತಿಯವರು ಅಸ್ಪೃಶ್ಯತೆಯ ಮೂಲಕ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ನಿಯಂತ್ರಣವನ್ನು ಮಾಡುತ್ತಿದ್ದರು. ಈ ಮೇಲ್ಜಾತಿಯರ ಮೇಲೆ ಸೈದ್ಧಾಂತಿಕವಾಗಿ ಹೋರಾಡುವುದೇ ನಮ್ಮ ದಲಿತ ಚಳುವಳಿ ಮತ್ತು ಸಾಹಿತ್ಯದ ಉದ್ದೇಶವೆಂದು ದಲಿತರು ಭಾವಿಸಿದ್ದರು.

ದಲಿತ ಸಮುದಾಯದವರು ಹಿಂದೂ ಧರ್ಮದ ಕೆಟ್ಟ ಸಂಪ್ರದಾಯದ ವಿರೋಧದೊಂದಿಗೆ ಜಾತಿ ವ್ಯವಸ್ಥೆಯನ್ನು ವಿರೋಧಿಸಿರು. ಈ ಹಿನ್ನೆಲೆಯಲ್ಲಿ ಸಾಹಿತ್ಯದ ಪ್ರಕಾರಗಳಾದ ಕಾವ್ಯ, ನಾಟಕ, ಕಾದಂಬರಿ ಈ ಮುಂತಾದವುಗಳ ಮೂಲಕ ಸೈದ್ಧಾಂತಿಕ ಪ್ರತಿಭಟನೆಯನ್ನು ಅಭಿವ್ಯಕ್ತಿಸಿದ್ದಾರೆ. ಹಾಗಾಗಿ ತೆಲಗಿ ಪ್ರಖ್ಯಾತ ಸಾಹಿತಿಯಾದ ಗುರುಜಾಡರು ತಮ್ಮ ಸಾಹಿತ್ಯ ರಚನೆಯೊಂದರಲ್ಲಿ ಅಸ್ಪೃಶ್ಯತೆಯನ್ನು ತೀವ್ರವಾಗಿಯೇ ಖಂಡಿಸಿದ್ದಾರೆ.

"ಮಂಚಿಡ್ಡಲು ಮನುಜುಲುಂದುನ
ಯೆಂಚಿಚೂಡಗ ರೆಂಡೆ ಕುಲಮುಲು
ಮಂಚಿಚೂಡಗ ಮಾಲಯೈತೆ
ಮಾಲನೆ ಆಗುದುನ್!"[೭]

ಒಳ್ಳೆಯದು ಕೆಟ್ಟದೆಂದು ಮನುಷ್ಯರಲ್ಲಿ ನೋಡುವುದಾದರೆ ಎರಡೆ ಕುಲಗಳು, ಒಳ್ಳೆಯದು ಅನುವುದೆ ಹೊಲೆಯನಾದರೆ ಹೊಲೆಯೆನೆ ಆಗುವೆನು, ಎಂದಿದ್ದಾರೆ. ಹೀಗೆ ಮೇಲ್ಜಾತಿಯವರೇ ತಮ್ಮ ರಚನೆಗಳಲ್ಲಿ ಅಸ್ಪೃಶ್ಯತೆಯನ್ನು ವಿರೋಧಿಸುವ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಬಯಸಿದರು.

ಆಂಧ್ರದಲ್ಲಿ ದಲಿತ ಚಳುವಳಿ ಕುಲಾಧಿಪತ್ಯದಿಂದ, ಜಾತಿಭೇದ ಭಾವದಿಂದ ದಲಿತರನ್ನು ವಿಮೋಚನೆಗೊಳಿಸಲು ಒಂದು ರ್‍ಯಾಡಿಕಲ್ ಹೋರಾಟಕ್ಕೆ ನಾಂದಿ ಹಾಡಿತು. ಆ ಕ್ರಮದಲ್ಲೇ ದಲಿತರು ಅನೇಕ ರಚನೆಗಳನ್ನು ಮಾಡಿದ್ದಾರೆ. ದಲಿತರ ಸಾಹಿತ್ಯ ರಚನೆಗಳೆಲ್ಲವು ಸೈದ್ಧಾಂತಿಕ ಹೋರಾಟ ಮಾತ್ರವಲ್ಲದೆ ಸಾಂಸ್ಕೃತಿಕ ತಿರುಗೇಟು ಕೂಡ ಆಗಿದೆ. ಮೇಲ್ಜಾತಿಯವರ ಸಾಮಾಜಿಕ ಸಾಂಸ್ಕೃತಿಕ ಯಜಮಾನಿಕೆಯನ್ನು ವಿರೋಧಿಸುವುದಾಗಿತ್ತು. ೨೦ನೇ ಶತಮಾನದ ೭೦ರ ದಶಕದಲ್ಲಿ ದಲಿತರಲ್ಲಿ ಹೆಚ್ಚಾಗುತ್ತಿರುವ ಚೈತನ್ಯವು, ಪ್ರತಿಭಟನೆಯು ಅವರ ಸಾಹಿತ್ಯಕ್ಕೆ

ಸ್ಫೂರ್ತಿಯಾಗಿದೆ. ಕಾವ್ಯ ಕಾದಂಬರಿ, ನಾಟಕ ಮತ್ತು ಸಣ್ಣಕಥೆ ಹಾಗೂ ಆತ್ಮಕಥನ ಸಾಹಿತ್ಯರೂಪಗಳಲ್ಲಿ ದಲಿತ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ. ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರು ದಲಿತ ಸಾಹಿತ್ಯಕ್ಕೆ ಪ್ರೇರಕವಾಗಿದ್ದಾರೆ.

ಕುಸುಮಧರ್ಮನಂ, ಗುರಂ ಜಾಷುವಾ, ಬೋಯಿ ಭೀಮನ್ನ, ಜಾಲಾ ರಂಗಸ್ವಾಮಿ ಮುಂತಾದ ದಲಿತಕವಿಗಳು ತಮ್ಮ ಸಾಹಿತ್ಯ ರಚನೆಗಳ ಮೂಲಕ ಅಸ್ಪೃಶ್ಯರ ನೋವು-ನಲಿವುಗಳನ್ನು ಹೊರಹಾಕಿದ್ದಾರೆ. ಹಾಗೆಯೇ ಸಮಾಜ ವ್ಯವಸ್ಥೆಯ ವಿರುದ್ಧ ತಮ್ಮ ಆಕ್ರೋಶವನ್ನು ಮತ್ತು ವೇದನೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ವೈದಿಕ ದೇವತೆಗಳನ್ನು, ಹಿಂದೂಧರ್ಮ ಶಾಸ್ತ್ರಗಳನ್ನು ವಿಮರ್ಶಿಸಿದರು. ಆ ಹೆಸರಿನಲ್ಲಿ ನಡೆಯುತ್ತಿದ್ದ ದಲಿತರ ಮೇಲಿನ ದಾಳಿ, ದೌರ್ಜನ್ಯಗಳನ್ನು ಇವರು ತೀವ್ರವಾಗಿ ಖಂಡಿಸಿದರು. ದಲಿತರು ಕಷ್ಟಗಳಿಂದ ತೀರಬೇಕಾದರೆ, ಹಿಂದೂ ಸಂಪ್ರದಾಯ ಮತ್ತು ಮತದಿಂದ ಹೊರಬರಬೇಕು. ತಮ್ಮ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಳ್ಳಲು ದಲಿತರೆಲ್ಲ ಒಂದಾಗಿ ಹೋರಾಡಬೇಕೆಂದು ಕರೆ ನೀಡಿದರು.

ತೆಲುಗು ದಲಿತ ಸಾಹಿತ್ಯದಲ್ಲಿ ಮೊದಲು ಕಾವ್ಯ ಕೃಷಿ ಅಗಾಧವಾಗಿದೆ. ಜಾಷುವಾ ಕವಿತೆಗಳಲ್ಲಿ ದಲಿತರ ಆಗ್ರಹ, ಆವೇದನೆ, ನಿರಾಶೆ, ಕಹಿ ಅನುಭವಗಳು ಮೇಲ್ಜಾತಿಯವರ ವಿಧ ವಿಧವಾದ ದರೋಡೆತನ ಈ ಮುಂತಾದವುಗಳು ಕಾವ್ಯದಲ್ಲಿ ಅಭಿವ್ಯಕ್ತಗೊಂಡಿದ್ದರೂ ಸಹ ದಲಿತರ ಅಂತರಂಗದ ಆತ್ಮಭಾವನೆಗಳೇ ಆಗಿ ರೂಪುಗೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಗಬ್ಬಿಲಂ, ಸ್ವಪ್ನಕಥ, ಫಿರದೋಸಿ, ಮಂಟಾಜಮಹಾಲು, ಕಾಂದಿಶಿಕುಡು, ಬಾಪೂಜಿ, ನೇತಾಜಿ, ನಾ ಕಥ, ನಾಗಾರ್ಜುನ ಸಾಗರ ಮತ್ತು ಖಂಡಕಾವ್ಯಗಳು ಇವುಗಳು ಆತ್ಮಕಥನ ಪ್ರಕಾರದಲ್ಲಿ ರೂಪುಗೊಂಡಿವೆ. ಈ ಖಂಡಕಾವ್ಯಗಳಲ್ಲಿ ಸಮಾಜದ ಹೀನಾಯ ಸ್ಥಿತಿ, ದಾರಿದ್ರ್ಯ, ಅಸಮಾನತೆ, ಅಸ್ಪೃಶ್ಯತೆ ದುರಾಚಾರಗಳನ್ನು ತನ್ನ ರಚನೆಗಳಲ್ಲಿ ಖಂಡಿಸಿದ್ದಾರೆ. ಗೌರವಯುತವಾಗಿ ಬಾಳಬೇಕು. ಆತ್ಮಗೌರವ ಸ್ವಾಭಿಮಾನ, ಸಾಮಾಜಿಕ ಸಮಾನತೆಗಳಂತಹ ಅಂಶಗಳು ಈ ಕವಿಯ ಕವಿತೆಗಳಲ್ಲಿ ಕಂಡು ಬರುತ್ತವೆ. ದಲಿತರ ದುರ್ಭರ ಸ್ಥಿತಿಯನ್ನು ಕವಿ ಹೀಗೆ ಚಿತ್ರಿಸಿದ್ದಾರೆ.

"ವಾನಿ ರೆಕ್ಕಲ ಕಷ್ಟಂಬು ಲೇನಿನಾಡು
ಸಸ್ಯರಮ ಪಂಡಿ ಪುಲಕಿಂಪ ಸಂಶಯಿಂಚು
ವಾಡು ಚೆಮ್ಮಟಲೊಟ್ಟಿ ಪ್ರಪಂಚಮುನಕು
ಭೋಜನಮು ಬೆಟ್ಟುವಾನಿಕಿ ಭುಕ್ತಿಲೇದು ಗಬ್ಬಿಲಂ"[೮]

ಈ ಕವಿತೆಯಲ್ಲಿ ಅಸ್ಪೃಶ್ಯತಾ ಸಮಸ್ಯೆಯನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಇದಲ್ಲದೆ ಈ ಅನಿಷ್ಟ ಪದ್ಧತಿಯನ್ನು ಖಂಡಿಸಿದ್ದಾರೆ. ಕವಿಯೊಳಗೆ ಬೆಳೆಯುತ್ತಿದ್ದ ಚೈತನ್ಯ, ಪ್ರತಿಭಟನೆ, ಉನ್ನತ ಮಾನವೀಯತೆಗಾಗಿ ಪಡುವ ಸಂಕಥನಗಳು ಈ ಗಬ್ಬಿಲಂ ಕೃತಿಯಲ್ಲಿ ಪ್ರಕಟವಾಗಿವೆ.

ತೆಲಗು ದಲಿತಸಾಹಿತ್ಯದ ಮತ್ತೊಬ್ಬ ಕವಿ ಕುಸುಮ ಧರ್ಮನ್ನ ಅವರು ದಲಿತರ ಮೇಲೆ ನಡೆಯುತ್ತಿದ್ದ ದಾಳಿಗಳೇ ದಲಿತ ಸಾಹಿತಿಗಳು ಸಾಹಿತ್ಯ ರಚನೆ ಮಾಡಲಿಕ್ಕೆ ಪ್ರೇರಣೆಗಳಾದವು ಎಂದು ಅಭಿವ್ಯಕ್ತಿಸುತ್ತಾರೆ. ದಲಿತರ ಅಸಲಿ ನೋವು– ನಲಿವುಗಳನ್ನು ವಸ್ತುವನ್ನಾಗಿಸಿಕೊಂಡು ಅವರ ಬದುಕನ್ನು ಅನಾವರಣ ಮಾಡಿದ ಕವಿ ಧರ್ಮನ್ನ ಅವರಾಗಿದ್ದಾರೆ.

ಮಾಕೊದ್ದೀ ನಲ್ಲ ದೊರೆತನಮು (ನಮಗೆ ಬೇಡ ಈ ಕಪ್ಪು ದೊರೆತನ) ಎಂಬ ಸುದೀರ್ಘವಾದ ಕವಿತೆಯಲ್ಲಿ ದಲಿತರ ದಯನೀಯ ಪರಿಸ್ಥಿತಿಗಳನ್ನು ಹೃದಯ ಸ್ಪರ್ಶಿಯಾಗಿರುವಂತೆ ಚಿತ್ರಿಸಿದ್ದಾರೆ. ಮೇಲ್ಜಾತಿಯವರು ದಲಿತರನ್ನು ಎಷ್ಟು ಕಡಿಮೆಗೊಳಿಸಿ ನೋಡುತ್ತಾರೆ ಎಂಬುದನ್ನು ಹೃದಯ ಕರಗುವಂತೆ ವರ್ಣಿಸಿದ್ದಾರೆ.

"ಕುಕ್ಕ ನಕ್ಕಲಕಂಟೆ ತಕ್ಕೂವಗ ಜೂಚಿ
ನಿಕ್ಕಿ ತಕ್ಕಿ ನಿಗುಡುತಾರು
ಸಾನಿ ಪ್ರಕ್ಕ ಚೇರ ಸಾಗುತ್ತಾರು
ಕುಷ್ಠರೋಗಿ ಸರಸ ಕೊರ್ಚುಂಟಾರು,
ಕುಕ್ಕ ಕೋತಿನಿ ಕೋರಿ ಪೆಂಚೇರು,
ಪಿಲ್ಲಿ, ಪಿಟ್ಟಾಲ ಪ್ರೇಮಿಂಚುತಾರು,
ಪಂದಿಗುನ್ನಾಲು ಬಾಧಿಂಪರಾರು,
ಕಾಕಿ ನೀಟನಿ ತಾಗನಿಸ್ತಾರು,
ಮಾಮ್ಮು ದರಕಿ ಚೇರನೀರು, ದಡದಡ ತಿಟ್ಟೇರು
ಮಾಕೋದ್ದೀ ನಲ್ಲ ದೊರೆತನಮು"

ನಾಯಿ ನರಿಗಳಿಗಿಂತ ಕನಿಷ್ಠವಾಗಿ ದಲಿತರನ್ನು ಮೇಲ್ಜಾತಿಯವರು ಕಾಣುತ್ತಾರೆ. ವೇಶ್ಯೆಯರ ಪಕ್ಕಸೇರಿ ಸಾಗುವರು, ಕುಷ್ಠರೋಗಿಯ ಜೊತೆ ಕುಳಿತು ಮಾತಾಡುವರು, ನಾಯಿ ಕೋತಿಯನ್ನು ಬೇಕಾಗಿ ಸಾಕುವರು, ಬೆಕ್ಕು ಹಕ್ಕಿಗಳನ್ನು ಪ್ರೀತಿಸುವರು, ಹಂದಿಗೂ ಹಿಂಸಿಸರು, ಕಾಗೆಗೆ ನೀರು ಕುಡಿಯಲು ಬಿಡುವರು ಆದರೆ ನಮ್ಮ ದಲಿತರ ಉದರಕ್ಕೆ ಕೆರೆ ನೀರ ಕುಡಿದರೆ ದಡದಡ ಬಯ್ಯುವರು' ಎಂದಿದ್ದಾರೆ. ಇದರಿಂದ ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗುವುದೆನೆಂದರೆ, ದಲಿತರನ್ನು ಪಶು ಪ್ರಾಣಿ ಪಕ್ಷಿಗಳಿಗಿಂತ ಕೀಳಾಗಿ ಕಾಣುವ ಮೇಲ್ಜಾತಿಯವರ ನೀಚ ಪ್ರವೃತ್ತಿಯನ್ನು

ತೆರೆದಿಡಲಾಗಿದೆ. ದಲಿತರು ತಮ್ಮ ಮೂಲಭೂತ ಹಕ್ಕುಗಳನ್ನು ಅರಿತುಕೊಂಡು ಮಾನಸಿಕ ಗುಲಾಮಗಿರಿಯಿಂದ ಹೊರಬರುವಂತೆ ಜಾಗೃತಗೊಳಿಸಿರುವಂತಹ ಕವಿತೆಗಳನ್ನು ಗಮನಿಸಬಹುದು. ಇಲ್ಲಿ ಜಮೀನ್ದಾರಿ ವ್ಯವಸ್ಥೆಯಲ್ಲಿ ನಡೆಯುವ ದಾಳಿ ಅದರ ಭಾಗವಾಗಿಯೇ ಇರುವ ಕುಲಭೇದಗಳನ್ನು ಕವಿ ವಿಮರ್ಶಿಸಿದ್ದಾರೆ.

ಹೊಸ ತಲೆಮಾರಿನಲ್ಲಿ ಅನೇಕ ದಲಿತ ಸಾಹಿತಿಗಳು ಕಾವ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಕಾಲ ಬದಲಾದಂತೆ ದಲಿತರ ಸಮಸ್ಯೆಗಳು ಬದಲಾಗುತ್ತಿವೆ. ಅವುಗಳಿಗೆ ಅನುಗುಣವಾಗಿ ಸಾಹಿತ್ಯ ಹುಟ್ಟಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಹಲವು ದಲಿತ ಕಾವ್ಯಗಳು ಹುಟ್ಟಿಕೊಳ್ಳುತ್ತವೆ. ಡಾ. ಕೊಂಡಪಲ್ಲಿ ಸುದರ್ಶನರಾಜು 'ದಲಿತ ಕಲಾಮಂಡಳಿ ಪಾಟಲು' ದಳಿತ ಗೀತಾಲು ದಳಿತ ಮಾನಿಫೆಸ್ಟೋ ಮುಂತಾದವು. ಶಿವಸಾಗರ ಬರೆದ 'ಉದ್ಯಮಂ ನೆಲ ಬಾಲುಡು' ಈ ಕವಿತೆಗಳಲ್ಲಿ ವಿಪ್ಲವ ಪಂಥ ಬಂತು. ಬೊಜ್ಜಾತಾರಕಂ ಅವರು ದಲಿತ ಚಳುವಳಿಯನ್ನು ಮುಂದಕ್ಕೆ ತೆಗೆದುಕೊಂಡು ಬಂದವರು. ಇದರೊಂದಿಗೆ ಪದ್ಮಾರಾವು ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. 'ಪಾಲೇರು' (ಜೀತದಾಳು), ಕೂಲಿರಾಜು (ಕೂಲಿರಾಜ), 'ರಾಘವಪ್ಷಂ ವಿಪ್ಲವ' ಕಾವ್ಯದಲ್ಲಿ ಜನಪ್ರಿಯತೆಯನ್ನು ಗಳಿಸಿದ ಗದ್ದರ್ ಕೂಡ ದಲಿತ ಪ್ರಸಿದ್ಧ ಕವಿ. ಮತ್ತೊಬ್ಬ ಕವಿಯಾದ ಗೊಂಟಿವೆಂಕನ್ನ ಆಶುಕವಿಯಾಗಿದ್ದಾರೆ. ತೆಲಂಗಾಣದ ಹಳ್ಳಿಯ ಬದುಕು, ದಲಿತರ ನೋವು ನಲಿವುಗಳನ್ನು ಹೃದಯಂಗಮವಾಗಿ ಚಿತ್ರಿಸಲಾಗಿದೆ. ಎಂಡ್ಲೂರಿ ಸುಧಾಕರರ 'ವರ್ತಮಾನ' ಸತೀಶ್‌ಚಂದರ್‌ರ ಪಂಚಮವೇದ, ಮದ್ದೂರಿ ನಾಗೇಶ್ ಬಾಬು ಅವರ ವೆಲಿವಾಡ ಜಾಲೂರಿ ಗೌರಿಶಂಕರರ ಪಾದಮುದ್ರ, ಪೋಲಿಕಟ್ಟೆ, ಹೀಗೆ ತೆಲಗು ದಲಿತ ಸಾಹಿತ್ಯದಲ್ಲಿ ಕಾವ್ಯ ಕೃಷಿ ಬೆಳೆಯುತ್ತಾ ಸಾಗುತ್ತದೆ.

ತೆಲಗು ದಲಿತ ಸಾಹಿತ್ಯವು ನಾಟಕ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದೆ. ೧೯೩೩ರಲ್ಲಿ ಉನ್ನವ ಲಕ್ಷ್ಮೀನಾರಾಯಣರ 'ಹರಿಜನ ನಾಟಕಂ', ಬೋಯಿ ಭೀಮನ್ನ ದಲಿತ ಪ್ರಮುಖ ನಾಟಕಕಾರರಲ್ಲಿ ಒಬ್ಬರಾಗಿದ್ದಾರೆ. ಇವರು ೧೦ಕ್ಕಿಂತ ಹೆಚ್ಚು ನಾಟಕಗಳನ್ನು ರಚನೆ ಮಾಡಿದ್ದಾರೆ. ಪಾಲೇರು, ಕೂಲಿರಾಜ, ನಾಟಕಗಳು ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ, ನ್ಯಾಯಕ್ಕಾಗಿ ಹೋರಾಡುವುದನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ಆಚಾರ್ಯ ಕೊಲಕಲೂರಿ ಇನಾಕ್ ಅವರು ಬರೆದ 'ಮುನಿವಾಹನುಡು' ಇದು ದಲಿತರ ಸ್ಥಿತಿಗತಿಗಳನ್ನು ಬಿಚ್ಚಿಡುತ್ತದೆ. ಬರ್ರೆ ಭೀಮಯ್ಯನ 'ಆಬರಿಮೆಟ್ಟು, ಅರಮಟಿ ಶ್ರೀನಿವಾಸರ 'ಈ ಕಥ ಮಾರ್ಜಂಡಿ' ಕಾಮೇಶ್ವರರಾವರ 'ಕುಲಂಲೇನಿ

ಪಿಲ್ಲ' ಪೋಲವರವು ಶ್ರೀ ಹರಿರಾವರ 'ಗ್ರಾಮಾಯಣಂ' ನಾಟಕಗಳು ದಲಿತಸಾಹಿತ್ಯದ ಆಶಯಕ್ಕೆ ಪೂರಕವಾದ ಸಂಗತಿಗಳನ್ನು ಬಿಚ್ಚಿಡುತ್ತವೆ.

ಕಾವ್ಯ, ನಾಟಕ, ಕಾದಂಬರಿಯ ಸಾಲಿನಂತೆ ಕಥಾ ಸಾಹಿತ್ಯವು ತೆಲಗು ದಲಿತ ಸಾಹಿತ್ಯದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಕಥಾಕಾರರಲ್ಲಿ ಶ್ರೀಪಾದ ಸುಬ್ರಹ್ಮಣಂ, ಚಲಂ ಬೋಯ ಜಂಗಯ್ಯ, ಬಿ.ಎಸ್. ರಾಮುಲು, ಕೊಲಕಲೂರಿ ಇನಾಕ್ ಮುಂತಾದವರು. ಇನಾಕ್‌ರವರಲ್ಲಿ ಹಳ್ಳಿ ಬದುಕಿನ ನೈಜ ಚಿತ್ರಣವನ್ನು ಕಾಣಬಹುದು. ಲೋಕಂಪೋಕಡಂ ಈ ಕಥಾ ಸಂಕಲನದಲ್ಲಿ ಜೀತಗಾರರ ಚೈತನ್ಯವಿದೆ. ಊರಬಾವಿ ಕೃತಿಯಲ್ಲಿ ದಲಿತರ ನೀರಿನ ಸಮಸ್ಯೆಯನ್ನು ಎತ್ತಿ ಚರ್ಚಿಸಲಾಗಿದೆ. ಇದರೊಂದಿಗೆ ತೆಲಗಿನ ಸಾಹಿತ್ಯದಲ್ಲೂ ಆತ್ಮಚರಿತ್ರೆಗಳು ಕಾವ್ಯರೂಪದಲ್ಲಿ ರಚನೆಗೊಂಡಿರುವುದನ್ನು ಕಾಣಬಹುದು. ನನ್ನಯ್ಯ ಅವರು ಆತ್ಮಚರಿತ್ರೆ, ಶ್ರೀ ಕುಂದುಕೊರಿ ವೀರೇಶ್‌ಲಿಂಗಮ್ ಪಂತಲು ಅವರು ಆತ್ಮಚರಿತ್ರೆಯನ್ನು ಬರೆದುಕೊಂಡಿದ್ದಾರೆ. ರಾಯಸಮ್ 'ಆತ್ಮಚರಿತಮು' ಎ.ಕಾಲೇಶ್ವರರಾವ್ ಅವರ 'ನಾ ಜೀವಿತಮು ನವ್ಯಾಂಧ್ರಮು' ಆಂಧ್ರ ಕೇಸರಿ, ಟಿ. ಪ್ರಕಾಶಮ್ ಅವರ 'ನಾ ಜೀವಿತಯಾತ್ರಾ' ಅಚಂತ ಜಾನಕಿರಾಮ್ ಅವರ 'ನಾ ಸ್ಮೃತಿಪಥಮೂಲೋ ಸಾಗು ತುನ್ನ ಯಾತ್ರಾ' ಆತ್ಮಚರಿತ್ರೆಗಳನ್ನು ಪ್ರಮುಖವಾಗಿವೆ.

ಒಟ್ಟಾರೆಯಾಗಿ ತೆಲಗು ದಲಿತ ಸಾಹಿತ್ಯ ಚಳುವಳಿಯೊಂದಿಗೆ ಅನನ್ಯವಾದ ಸಂಬಂಧವಿಟ್ಟುಕೊಂಡು ದಲಿತರನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾಗಿದೆ. ಸಾಹಿತ್ಯದ ಕಾವ್ಯ, ಕಥೆ, ನಾಟಕ, ಕಾದಂಬರಿ, ಆತ್ಮಚರಿತ್ರೆ ಹಾಗೂ ಇನ್ನಿತರ ಪ್ರಕಾರಗಳಲ್ಲಿ ತೆಲಗು ಸಾಹಿತ್ಯ ಹುಲುಸಾಗಿ ಬೆಳೆದಿದೆ. ಎಂಬುವುದು ಸಹ ಸ್ವಾಗತಾರ್ಹವಾದ ಸಂಗತಿಯಾಗಿದೆ. ಇದರೊಂದಿಗೆ ಸಮಕಾಲೀನ ತೆಲಗು ಸಾಹಿತ್ಯದ ಸಂವೇದನೆ ಎಂದರೆ ಪ್ರಜಾಕವಿಗಳ ಕ್ರಾಂತಿಕಾರಿ–ರಾಜಕೀಯ ಹೋರಾಟವೇ ಹೊರತು ದಲಿತ ಜನಾಂಗದ ಸಂವೇದನೆಯ ಚಳುವಳಿಯಲ್ಲ. ಆದರೆ ದಲಿತ ವರ್ಗದಿಂದ ಬಂದ ಗದ್ದರ್‌ನಂತಹ ದಲಿತ ಸಾಹಿತಿಗಳ ರಚನೆಗಳು ದಲಿತ ಸಂವೇದನೆಯ ಆಶಯಗಳನ್ನು ಈಡೇರಿಸುವುದು ಪ್ರಮುಖವಾದ ಅಂಶವಾಗಿರುತ್ತದೆ.

೨.೪. ಮಲಯಾಳಂ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು

ಭಾರತದ ಕೇರಳ ನಾಡಿನಲ್ಲಿ ಮಲಯಾಳಂ ಸಾಹಿತ್ಯಕ್ಕೆ ೧೫೦ ವರ್ಷಗಳ ಇತಿಹಾಸವಿದೆ. ಆದರೆ ಮಲಯಾಳಂ ದಲಿತ ಸಾಹಿತ್ಯದ ಇತಿಹಾಸವನ್ನು ಅಧ್ಯಯನ ಮಾಡುತ್ತಾ ಬಂದಂತೆ ಕನ್ನಡ ಸಾಹಿತ್ಯದಷ್ಟು ಇತಿಹಾಸ ಇಲ್ಲದಿರುವುದು ಕಂಡುಬರುತ್ತದೆ. ಆದರೂ ಕೇರಳದ ನಾಡಿನಲ್ಲಿ

ದಲಿತರಷ್ಟೇ ಶೋಷಣೆಗೆ ಒಳಗಾದ ನಂಬೂದಿರಿಗಳು, ನಾಯರುಗಳು, ತಂಬುರಾನರನ್ನು ಬಿಟ್ಟರೇ ತಿಯರ್, ಅರಯರ್, ಪುಲಯರ್, ಪರಯರ್, ಕುವರ್ ವೇಲರ್, ಪಾಣರ್, ವೇಡರ್ ಮೊದಲಾದ ಶೂದ್ರರು ಸಹ ಶೋಷಿತ ವರ್ಗಕ್ಕೆ ಒಳಪಟ್ಟಿದ್ದವರು. ಇವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಗುಲಾಮಗಿರಿಯ ಜೀವನವನ್ನು ನಡೆಸಿದವರು. ನಿತ್ಯಯಾತನೆಯನ್ನ ಅನುಭವಿಸುತ್ತ ಪಶುಗಳಿಗಿಂತಲೂ ಕಡೆಯದಾಗಿ ದುಡಿಯುತ್ತ ಜೀವನವನ್ನು ಸಾಗಿಸಿದವರು. ಈ ಶೋಷಿತರ ದಲಿತರ ನೋವಿನ ಪದಗಳು ಮಲಯಾಳಂ ದಲಿತ ಸಾಹಿತ್ಯದ ಪ್ರಣಾಳಿಕೆಗಳು ಆದವು.

ಕೇರಳ ನಾಡಿನಲ್ಲಿ ದಲಿತರ ಸ್ಥಿತಿಯು ಬಹಳ ಶೋಚನೀಯವಾಗಿದೆ. ತಾವು ಅನುಭವಿಸಿದ ನೋವು ಯಾತನೆಗಳು ಅಪಮಾನಗಳನ್ನು ತಮ್ಮ ಲೇಖನಗಳಲ್ಲಿ ಬರೆದಿದ್ದಾರೆ. 'ಮಾಡಾಯಿ ಮಂದನ್ ಗುರುಕ್ಕಳ್' ಊದಿದ ದಲಿತ ಜಾಗೃತಿಯ ಕಹಳೆಯ ಧ್ವನಿಯನ್ನು ಕೇಳಿ ಜಾತೀಯತೆಗೆ ವಿರುದ್ಧವಾಗಿ ಚಳುವಳಿಗೆ ನಿಂತ ಕುಞಿಬಾಪ್ಪಾ ಗುರುಕ್ಕಳ್, ನರಿಕುನಿ ಉನ್ನೀರಿಕಟ್ಟಿವೈದ್ಯನ್, ವೇಳುತ್ತೇರಿ ಕೇಶವನ್ ವೈದ್ಯನ್, ಪೆರುನೆಲ್ಲಿ ಕೃಷ್ಣನ್ ವೈದ್ಯನ್ ಮೊದಲಾದ ದಲಿತ ಕವಿಗಳೆಲ್ಲ ಮುಖ್ಯವಾಹಿನಿಯಲ್ಲಿ ಕಾವ್ಯರಚನೆ ಮಾಡಿ ಕೇರಳದ ದಲಿತ ಸಮುದಾಯದವರಲ್ಲಿ ಶೋಷಣೆ, ಜಾತೀಯತೆ ಅಸ್ಪೃಶ್ಯತೆ, ಅಪಮಾನದ ವಿರುದ್ಧ ಜಾಗೃತಿಯನ್ನು ಮೂಡಿಸಿದ ಸಾಹಿತ್ಯದ ಕಣ್ಮಣಿಗಳಾಗಿದ್ದಾರೆ.

ಕುರುಪ್ಪನ್ ಕವಿ 'ಉದ್ಯಾನ ವಿರುನ್ನು' ಎನ್ನುವ ಗೀತೆಗಳನ್ನು ರಚಿಸಿದ್ದಾರೆ. ಜಾತೀಯತೆಗೆ ವಿರುದ್ಧವಾಗಿ ಲೇಖನಿಯನ್ನು ಬಳಸಿದ ಮತ್ತೊಬ್ಬ ಕವಿ ಮಹಾಕವಿ ಪಳ್ಳತ್ತು ರಾಮನ್ ಅವರು

"ನಶಿಚ್ಚ ಭಾರತಂ ಪುರುತ್ತ ಕೇರಳಂ
ವಿಶಿಷ್ಟ ಮದ್ವೈತಂ ವಿರುಞಣ್ಣಭೂಮಿಪೋಲ್"[೧೦]

ಜಾತೀಯತೆಯಿಂದ ನಾಶವೊಂದಬೇಕು ಎಂದು ಚಿಂತಿಸುತ್ತಿರುವಾಗ ಕೊಳತು ನಾರುತ್ತಿರುವ ಜಾತಿಯ ಹಂಗಿನಲ್ಲೆ ಬೆಂದು ಬೇಯುತ್ತಿರುವ ಈ ಕೇರಳದ ನಾಡಿನಲ್ಲಿ ವಿಶಿಷ್ಟವಾದ ಅದ್ವೈತ ಮತ ಹುಟ್ಟಿ ಜಾತೀಯತೆಯ ಬೇರು ಆಳವಾಗುವಂತೆ ಮಾಡುತ್ತಿದೆ ಎಂದು ಉಲ್ಲೇಖಿಸಿದ್ದಾರೆ. ಇದರೊಂದಿಗೆ ಕುಮಾರನ್ ಆಶಾನ್ ಎಂಬ ಕವಿ ಸವರ್ಣೀಯರನ್ನು ಸಂಭೋಧಿಸಿ ಶೋಷಿತರ ಬಗೆಗೆ ಹೇರಿರುವ ಕಟ್ಟಳೆಗಳನ್ನು ಬದಲಿಸದಿದ್ದಲ್ಲಿ ಸಮಾಜದಲ್ಲಿ ಅಹಿತಕರವಾದ ಸಂಘರ್ಷಗಳು ಉಂಟಾಗುತ್ತವೆ ಎಂದು ಎಚ್ಚರಿಕೆಯ ನುಡಿಯನ್ನು ತಮ್ಮ ಕಾವ್ಯ ಭಾಗದಲ್ಲಿ ತಿಳಿಸಿದ್ದಾರೆ.

"ಮಾಟ್ಟುವಿನ್ ಚಟ್ಟಂಗಳ್ ಸ್ವಯಂ ಅಲ್ಲೆಂಗಿಲ್
ಮಾಟ್ಟುಮದುಗಳೀ ನಿಂಗಳೇ ತಾನ್
ಮಾಟ್ಟೊಲಿಕೊಂಡೀ ಮೊಳಿ ತಂಡೆ ಸರ್ವದಾ
ಕಾಟ್ಟರಂಬುನ್ನು ಇನ್ನೂ ಕೇರಳತ್ತಿಲ್"[೧೧]

ಉನ್ನತ ವರ್ಗದವರನ್ನು ಕುರಿತಂತೆ ನೀವು ವಿಧಿಸಿರುವ ಕಟ್ಟಳೆಗಳನ್ನು ನೀವಾಗಿ ಬದಲಾಯಿಸಿ ಬಿಡಿ, ಇಲ್ಲದಿದ್ದಲ್ಲಿ ನೀವು ಸೃಷ್ಟಿಸಿದ ಕಟ್ಟಳೆಗಳೇ ನಿಮ್ಮನ್ನು ಬದಲಾಯಿಸಿ ಬಿಡುತ್ತವೆ. ಈ ಧ್ವನಿಯು ಕೇರಳದ ಮೂಲೆ ಮೂಲೆಗಳಲ್ಲು ಮಾರ್ದನಿಸುತ್ತದೆ. ಅಂತೆಯೇ ದಲಿತ ಸಮಾಜವನ್ನು ಹೇಗಾದರೂ ಜಾಗೃತಿಗೊಳಿಸಬೇಕು ಹಾಗೂ ಮೇಲೆತ್ತಬೇಕು ಎನ್ನುವ ಕಳಕಳಿಯನ್ನು ಕುಮಾರನ್ ಆಶಾನ್ ಅವರು 'ಸಿಂಹನಾದಂ' ಕವಿತೆಯಲ್ಲಿ ಅಭಿವ್ಯಕ್ತಪಡಿಸುತ್ತಾರೆ.

"ನರನು ನರನ ಶುದ್ಧ ವಸ್ತು ಪೋಲುಂ
ಧರಯಿಲ್ ನಡಪ್ಪದು ವೇಂಡಲಾಣು ಪೋಲುಂ
ನಶಕಮಿವಿಡಮಾಣು ಹಂತ ಕಷ್ಟ
ಹರಹರ ಇಙ್ಙನೆವಲ್ಲ ನಾಡು ಮುಂಡೋ"[೧೨]

ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು ಅಂತೆಯೇ ಪ್ರೀತಿಸಬೇಕು. ಈ ಸಂದರ್ಭದಲ್ಲಿ ಪ್ರೀತಿ ಪ್ರೇಮವನ್ನು ಹೊರತುಪಡಿಸಿ ಅಸ್ಪೃಶ್ಯತೆ ಎಂಬ ನರಕ ಎನ್ನುವುದು ಇನ್ನೊಂದು ಇದೆಯೇ? ಎಂದು ದೇವರನ್ನು ಪ್ರಶ್ನೆ ಮಾಡುವುದನ್ನು ಗಮನಿಸಬಹುದಾಗಿದೆ.

ಇವುಗಳ ನಡುವೆ ಆಧುನಿಕ ದಲಿತ ಸಾಹಿತ್ಯ ಎಂಬುದಾಗಿ ಕರೆಯಲ್ಪಡುವ ಸಾಹಿತ್ಯ ಪ್ರಕಾರ ರೂಪು ಪಡೆದುಕೊಂಡಿದ್ದು ಬಹಳ ತಡವಾಗಿಯೇ. ನಿಜವಾಗಿ ಅರ್ಥೈಸಿದಾಗ ಅದು ಮುಖ್ಯವಾಹಿನಿಯ ಸಾಹಿತ್ಯವೇ ಆದರೂ ಅದಕ್ಕಿಂತ ಭಿನ್ನ ಅನುಭವವನ್ನು ಮಲಯಾಳಂ ದಲಿತ ಸಾಹಿತ್ಯ ನೀಡುತ್ತದೆ. ಕನ್ನಡ ದಲಿತ ಸಾಹಿತ್ಯದ ಹುಟ್ಟಿನ ಕಾಲಘಟ್ಟದಲ್ಲಿ ಅನಿವಾರ್ಯವಾಗಿ ಕಾಣಿಸಿಕೊಂಡ ಘೋಷಣೆಗಳ ರೀತಿಯಲ್ಲಿ ಮಲಯಾಳಂ ದಲಿತ ಸಾಹಿತ್ಯ ಕಾಣಿಸಿಕೊಳ್ಳಲಿಲ್ಲ. ಅದಕ್ಕೆ ಅದರದೇ ಆದ ಸಾಹಿತ್ಯ ಶಕ್ತಿ ಇದೆ ಅನ್ನುವುದು ಅಷ್ಟೇ ಸತ್ಯ.

ಮಲಯಾಳಂ ದಲಿತ ಸಾಹಿತ್ಯ ಕಥೆ, ಕಾದಂಬರಿ, ನಾಟಕ, ಕಾವ್ಯ ಪ್ರಬಂಧ ಮಾದರಿಯಲ್ಲಿ ಸಾಹಿತ್ಯ ಕೃಷಿ ಮಾಡಿದೆ. ಪ್ರಮುಖ ದಲಿತ ಬರಹಗಾರರಾದ ಪಿ. ಅಯ್ಯಪ್ಪನ್ ಬರೆದ 'ಉಚ್ಚ ಮಯಕತ್ತಿಲೆ ಸ್ವಪ್ನಂಜಳ್ (ಮಧ್ಯಾಹ್ನ ನಿದ್ರೆಯ ಕನಸುಗಳು) ಹಾಗೂ ಜಂದುಕ್ಕಳ್ (ಜಂತುಗಳು) ದಲಿತ ಸಾಹಿತ್ಯಕ್ಕೆ ಮುಖ್ಯ ತಿರುವು ನೀಡಿದ ಕೃತಿಗಳು. ಎಸ್ ಜೊಸೆಫ್,

ಎಂ.ಬಿ.ಮನೋಜ್, ಟಿಸಿಕೆ ವಡುದಲ, ಎಮ್.ಆರ್. ರೇಣುಕುಮಾರ್ ಪಿ.ಎ.ಉತ್ತಮನ್, ಕೆ.ಪಿ.ಕರುಪ್ಪನ್ ಮೊದಲಾದವರೆಲ್ಲ ದಲಿತ ಸಾಹಿತ್ಯಕ್ಕೆ ದೇಣಿಗೆ ನೀಡಿದ ಸಾಹಿತಿಗಳು. ಪೌಲ್ ಚಿರಕ್ಕರೋಡ್ ಬರೆದ ಪುಲಯತ್ತರ (ಹೊಲೆಯರ ಭೂಮಿ) ದಲಿತ ಕ್ರೈಸ್ತರ ಬದುಕನ್ನು ಕುರಿತ ಕಾದಂಬರಿ ಕತೆ ರಚನೆಯಾದ ಪ್ರಸ್ತಾವ ಕೂಡ ಮಲಯಾಳದಲ್ಲಿ ಸಿಗುತ್ತದೆ. ಕೇರಳದ ಇಡುಕ್ಕಿಯ ಆದಿವಾಸಿ ಕುಟುಂಬವೊಂದರಲ್ಲಿ ಜನಿಸಿ ಮೊದಲ ಬಾರಿಗೆ ಹತ್ತನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ನಾರಾಯಣ್ ಕಳೆದ ದಶಕದಲ್ಲಿ ಪ್ರಕಟಿಸಿದ 'ಕೊಚ್ಚಾರೇತ್ರಿ" ಕಾದಂಬರಿ ಕೇಂದ್ರ ಸಾಹಿತ್ಯ ಅಕಾಡಮಿಗೆ ಭಾಜನವಾಯಿತು. ಆದಿವಾಸಿಯೊಬ್ಬ ಆದಿವಾಸಿಗಳ ಬಗ್ಗೆಯೇ ಬರೆದ ಕಾದಂಬರಿಯದು.

ಮಲಯಾಳಂ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳು ಬಹಳ ನಿರೀಕ್ಷೆಯ ಮಟ್ಟದಲ್ಲಿ ನಮಗೆ ದೊರೆತಿಲ್ಲ. ಕಾರಣವೇನೆಂದರೆ ದಲಿತರ ಅಸಲಿ ಬದುಕಿನ ಸಂಕಟಗಳನ್ನು ಕಾವ್ಯದ ಮೂಲಕ ಅಭಿವ್ಯಕ್ತ ಪಡಿಸಿರುವುದು ಕಂಡುಬರುತ್ತದೆ. ದಲಿತೇತರರು ೧೯ನೇ ಶತಮಾನದ ಆದಿಯಿಂದ ಆತ್ಮಕಥೆಗಳನ್ನು ಬರೆದಿರುವುದು ಮಲಯಾಳಂ ಸಾಹಿತ್ಯ ಚರಿತ್ರೆಯಿಂದ ತಿಳಿದುಬರುತ್ತದೆ ಒಟ್ಟಾರೆಯಾಗಿ ಭಾರತೀಯ ದಲಿತ ಸಾಹಿತ್ಯ ಪರಂಪರೆಯ ಇತಿಹಾಸದಲ್ಲಿ ಮಲಯಾಳಂ ದಲಿತ ಸಾಹಿತ್ಯವು ಸಾಧ್ಯವಾದ ಮಟ್ಟಿಗೆ ಸಾಹಿತ್ಯ ಕೃಷಿ ನೇಯ್ದಿರುವುದು ಸಂತೋಷಕರವಾದ ಬೆಳವಣಿಗೆಯಾಗಿದೆ.

ಮಲಯಾಳಂ ದಲಿತ ಸಾಹಿತ್ಯ ಆತ್ಮಕತೆಗಳಲ್ಲಿ ಸ್ತ್ರೀಯರು ಆತ್ಮಕಥೆಗಳನ್ನು ಬರೆದಿರುವುದು ತಿಳಿದುಬರುತ್ತದೆ. ಮಾಧವಿ ಕುಟ್ಟಿಯವರ 'ನೀರ್ಮಾದಳಂ ಪೊತ್ತಕಾಲಂ' ಇಲ್ಲಿ ಮಾಧವಿ ಕುಟ್ಟಿಯವರು ತಮ್ಮ ಹದಿಹರೆಯದ ಆರಂಭದ ವರ್ಷಗಳಲ್ಲಿ ತಾವು ಕಂಡ ಜಗತ್ತನ್ನು ಮತ್ತು ಆ ಜಗತ್ತು ಇವರ ಮೇಲೆ ಬೀರಿದ ಪ್ರಭಾವವನ್ನು ವಿವಿಧ ಘಟನೆಗಳ ವರ್ಣನೆಯೊಂದಿಗೆ ಅಭಿವ್ಯಕ್ತಿಸಿದ್ದಾರೆ. ಇದಲ್ಲದೆ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಸಿದ ದೌರ್ಜನ್ಯ ದಬ್ಬಾಳಿಕೆಗಳ ವಿರುದ್ಧ ಹೋರಾಟದ ಕಥೆಯನ್ನು ಗಂಭೀರವಾಗಿ ಹೇಳುವ ಹಂದರ ಮಾಧವಿಕುಟ್ಟಿಯವರ ಆತ್ಮಕಥೆಯಲ್ಲಿ ಕಾಣಬಹುದು.

೨.೫. ಪಂಜಾಬಿ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು

ಭಾರತ ಮತ್ತು ಪಾಕಿಸ್ತಾನಗಳಲ್ಲಿ ವಾಸಮಾಡುವ ಸುಮಾರು ಎರಡುಕೋಟಿಗಿಂತ ಹೆಚ್ಚಿನ ಹಿಂದು ಮುಸಲ್ಮಾನ್ ಮತ್ತು ಸಿಖ್ಖರು ಮಾತನಾಡುವ ಭಾಷೆ ಪಂಜಾಬಿ. ಪಂಜಾಬಿ ಸಾಹಿತ್ಯ

ಚರಿತ್ರೆಯು ಬಹಳ ಪ್ರಾಚೀನವೂ ಹಾಗೂ ಶ್ರೀಮಂತವೂ ಆಗಿಲ್ಲದಿದ್ದರೂ ಸಹ ಸಾಹಿತ್ಯ ಕೃಷಿಯಲ್ಲಿ ಮುಂದಿದೆ. ಈ ಸಾಹಿತ್ಯದ ಇತಿಹಾಸ ಬಹಳ ಹಳೆಯದೇನಲ್ಲ. ಆದರೂ ಮಧ್ಯಯುಗದ ಕಾಲದಿಂದ ಬಹಳ ಪ್ರಭಾವ ಶಾಲಿಯಾಗಿ ಬೆಳೆದು ಬಂದಿದೆ. ಸಿಖ್ ಧರ್ಮದ ಎರಡನೇ ಗುರು ಶ್ರೀ ಅಂಗದೇವ ಅವರಿಂದ ಬೆಳವಣಿಗೆ ಹೊಂದಿದ ಪಂಜಾಬಿ ಸಾಹಿತ್ಯ ಸಿಖ್ ಧರ್ಮದಿಂದ ಪ್ರಭಾವ ಹೊಂದಿದೆ.

ಪಂಜಾಬಿ ಸಾಹಿತ್ಯ ಲೋಕದಲ್ಲಿ ದಲಿತ ಸಾಹಿತ್ಯವು ಅತಿಮುಖ್ಯವಾದ ಸಾಹಿತ್ಯ ಪ್ರಕಾರವಾಗಿದೆ. ದಲಿತ ಸಾಹಿತ್ಯದ ರಚನೆಗಳು ಮುಖ್ಯವಾಗಿ ಸೂಫಿ ಮತ್ತು ಸಿಖ್ ಧರ್ಮದಿಂದ ಪ್ರಭಾವಗೊಂಡಿದೆ ಎಂದು ಕಂಡುಬರುತ್ತದೆ. ಮಧ್ಯಯುಗದ ಕಾಲದಿಂದ ದಲಿತ ಸಾಹಿತ್ಯ ರಚನೆಗೊಂಡಿದೆ ಅವರಲ್ಲಿ ಪ್ರಮುಖರೆಂದರೆ ಭಾಯಿ ಜೈತಾ ಜೀವನ್‌ಸಿಂಗ್ (೧೬೫೫–೧೭೦೫) ಇವರು ದಲಿತ ಸಾಹಿತ್ಯ ರಚನೆಯ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ. ಇವರ ತರುವಾಯ ಸಾಧುವಧೀರಸಂಗ್ (೧೭೯೦–೧೮೫೯) ಎರಡನೇ ಪ್ರಮುಖ ದಲಿತ ಬರಹಗಾರರಾಗಿದ್ದಾರೆ. ಇವರನ್ನು ಬ್ರಹ್ಮಗ್ಯಾನಿ ಎಂದು ಕರೆಯಲಾಗಿದೆ. ಪಂಜಾಬಿ ದಲಿತ ಸಾಹಿತ್ಯದಲ್ಲಿ ಬಹಳ ಹೆಸರು ಮಾಡಿದ ಸಾಹಿತಿ ಎಂದರೆ 'ಗ್ಯಾನಿದಿತ್ತಸಿಂಗ್' ಅವರು. ಇವರು ಕವಿಯಾಗಿ, ಶಿಕ್ಷಕರಾಗಿ, ಪತ್ರಕರ್ತರಾಗಿ ಸೇವೆ ಸಲ್ಲಿಸಿದವರು. 'ಖ್ಯಾಲ್ಸಾ ಅಕ್ಯಾರ' ಎಂಬ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ ದಲಿತರ ಸಂವೇದನೆಯ ಹಿನ್ನೆಲೆಯಲ್ಲಿ ಓದುಗ ಸಹೃದಯರಲ್ಲಿ ದಲಿತರ ಹಕ್ಕು ಬಾಧ್ಯತೆಗಳು ಹಾಗೂ ಜಾಗೃತಿಯ ಅರಿವನ್ನು ಮೂಡಿಸಿದ್ದಾರೆ.

ಅತಿ ಬಡತನದ ಕುಟುಂಬದಲ್ಲಿ ಜನಿಸಿದ 'ದಲಿತ ಕವಿ' ದಯಾಸಿಂಗ್ ಅವರು ವಿವಿಧ ಭಾಷೆಗಳ ಪಾಂಡಿತ್ಯವನ್ನು ಪಡೆದುಕೊಂಡಿದ್ದರು. ೨೦ನೇ ವಯಸ್ಸಿನಲ್ಲಿ 'ಫರ್ಹಾಹರ್ ಮಶನ್' ಎಂಬ ಕಾವ್ಯವನ್ನು ಪ್ರಕಟಿಸಿದರು. ೧೯೬೦ರಲ್ಲಿ ಪಂಜಾಬದಲ್ಲಿ ನಡೆದ ನಕ್ಸಲ್‌ವಾದಿ ವಿಚಾರಧಾರೆ ಸಹಿತ ಅನೇಕ ಕ್ರಾಂತಿಕಾರಿ ದಲಿತ ಸಾಹಿತ್ಯಗಾರರ ಉದಯಕ್ಕೆ ಕಾರಣವಾಯಿತು. ಅವರಲ್ಲಿ ಅತಿ ಪ್ರಮುಖರು ರಾಮ ಉದಾಸಿ. ಇವರ ಬರಹಗಳು ಮೇಲ್ಜಾತಿಯವರ ಶೋಷಣೆ ವಿರುದ್ಧ ಸಿಡಿದೆದ್ದರಿಂದ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಯಿತು. ಇವರಿಗೆ ಜೈಲಿನಲ್ಲಿ ನಾನಾ ರೀತಿಯ ಚಿತ್ರಹಿಂಸೆಯನ್ನು ನೀಡಲಾಯಿತು. ಈ ಘಟನೆಯಿಂದ ಪಂಜಾಬಿನ ದಲಿತರು ತಮ್ಮ ಅಸಹನೆ–ಬೇಸರವನ್ನು ಕವಿತೆಯ ಮೂಲಕ ವ್ಯಕ್ತಪಡಿಸಿದ್ದಾರೆ.

"ಕರವಾ ದೇ ವರ್ತಾ ತೊಲೇ ಆಯೇ ತಲ್ವಾರ್ ಮಾ

ಸೂಟ್ ದಾ ರಿವಾಜ್ ಹುನ್ ದಿಯಾ"[೧೩]

ಅಂದರೆ ಜಾತ್ರೆಯಿಂದ ತರುವುದಾದರೆ ಖಡ್ಗವನ್ನೇ ತಾ ನನಗೆ ಬಟ್ಟೆ ಖರೀದಿಸಬೇಕೆಂದು ಹಂಬಲ ಎಂದೋ ಮರೆತು ಹೋಗಿದೆ. ಕವಿತೆಗಳು ದಲಿತ ಸಾಹಿತ್ಯದಲ್ಲಿ ರಚನೆಗೊಂಡಿವೆ. ಲಾಲಸಿಂಗ್ ದಿಲ್ ಕ್ರಾಂತಿ ಕಿಡಿ ಹಚ್ಚಿದ ಕವಿತೆಗಳನ್ನು ರಚನೆ ಮಾಡಿದ್ದಾರೆ. ರಾಮದಾಸಿಯ ಎಂಬ ದಲಿತ ಕವಿ 'ಸತ್ಯಜದಿ ಹವಾ' ಎಂಬ ಕಾವ್ಯವನ್ನು ಪ್ರಕಟಿಸಿದ್ದಾರೆ.

ಆಧುನಿಕ ಪಂಜಾಬಿ ದಲಿತ ಲೇಖಕರಾದ ಬಲಬೀರ, ಮಾಧುಪುರಿ, ಸಿರಿರಾಮಅರ್ಸಿ, ಮನಮೋಹನ, ಪ್ರೇಮಕ ಗೊರ್ಬಿ, ಅತ್ತರ ಜೀವ ಸರುಪ ಸೈಲ್ಯಾ, ದೇಸರಾಜ ಶಾಲಿ, ಪ್ರಮುಖರಾಗಿದ್ದಾರೆ. ಇವರು ತಮ್ಮ ಕಾವ್ಯದ ಮುಖಾಂತರ ದಲಿತರ ನೋವು-ಸಂಕಟ ಅವಮಾನ ಅಸ್ಪೃಶ್ಯತೆಯ ನೋವು ನಲಿವುಗಳನ್ನು ತೆರೆದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಕಾವ್ಯಕ್ಷೇತ್ರವಷ್ಟೇ ಅಲ್ಲದೆ ಕಥಾ ಸಾಹಿತ್ಯದಲ್ಲೂ ಸ್ವಲ್ಪ ಮಟ್ಟಿಗಿನ ಸಾಹಿತ್ಯ ಕೃಷಿ ನಡೆದಿದೆ. ಅತ್ತರ ಜೀತ ಎಂಬ ಕಥೆಗಾರರಿಂದ 'ಮಾಸ್ ಖೋರ್ (೧೯೭೦) ಕಥಾಸಂಕಲನವನ್ನು ಹೊರತಂದಿದ್ದಾರೆ. ಈ ಕಥಾ ಸಂಕಲನದಲ್ಲಿ ದಲಿತರ ಜೀವನ ಶೈಲಿ ಹಾಗೂ ದಲಿತರ ಪಾತ್ರಚಿತ್ರಣವನ್ನು ಚಿತ್ರಿಸಿದ್ದಾರೆ. ಇವರಷ್ಟೇ ಅಲ್ಲದೇ ಅನೇಕ ಆಧುನಿಕ ಸಾಹಿತ್ಯಗಾರರು ದಲಿತರ ಸಮಸ್ಯೆಗಳನ್ನು ತಮ್ಮ ಬರವಣಿಗೆಯಲ್ಲಿ ಬಿಚ್ಚಿಡಲು ಪ್ರಯತ್ನಿಸಿದ್ದಾರೆ. ಅವರಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕಾರ ಪಡೆದ ಗುರುದಯಾಲಸಿಂಗ್ ಅವರ ಬರಹಗಳ ಕೇಂದ್ರ ದಲಿತರ ಬದುಕೇ ಆಗಿದೆ. ಪಂಜಾಬಿ ದಲಿತರ ಜೀವನ ಕಥೆಗಳೇ ಅವರನ್ನು ಜ್ಞಾನಪೀಠದವರೆಗೂ ಕರೆದೊಯ್ದಿವೆ.

ಪಂಜಾಬಿ ದಲಿತ ಸಾಹಿತ್ಯ ಲೋಕದಲ್ಲಿಯೂ ದಲಿತ ಆತ್ಮಕಥೆ ಬರೆಯುವ ರೂಢಿ ಇದೆ. ಇದೊಂದು ಪ್ರಮುಖವಾದ ಸಾಹಿತ್ಯ ಪ್ರಕಾರವಾಗಿದೆ. ಪಂಡಿತರಾಮ ರಚಿಸಿದ 'ಮೇರಾಜೀವನ ಸಂಘರ್ಷ' ಎಂಬ ಆತ್ಮಕಥೆಯು ಪ್ರಸಿದ್ಧವಾಗಿದ್ದರೂ ಕೆಲವರಿಂದ ಟೀಕೆಗೆ ಒಳಗಾಗಿದೆ. ಇವರ ನಂತರ ಲಾಲಸಿಂಗ್ ಅವರು ಬರೆದ 'ದಾಸ್ತಾನ' (೧೯೮೮) ರಲ್ಲಿ ರಚನೆಗೊಂಡ ಈ ದಲಿತ ಆತ್ಮಕಥೆ ಅತ್ಯಂತ ಜನಪ್ರಿಯವಾಯಿತು. ತರುವಾಯ ಬಲ್‌ಬೀರ್ ಮದಹೊಪುರಿಯವರ 'ಚಂಗಿಯೂ ರುಕಾ' (೨೦೦೩) ಎಂಬ ಆತ್ಮಕಥೆಯನ್ನು ರಚಿಸಿದ್ದಾರೆ. ಪಂಜಾಬಿಯ ದಲಿತ ಆತ್ಮಕಥೆಗಳಲ್ಲಿ ಬಹಳ ಪುರುಷರೇ ರಚನೆ ಮಾಡಿದ್ದಾರೆ. ಆದರೆ ಪಂಜಾಬಿ ದಲಿತ ಸಾಹಿತ್ಯದಲ್ಲಿ

ಮಹಿಳೆಯರಿಂದ ಸಾಹಿತ್ಯ ಕೃಷಿ ಆಗದಿರುವುದು ವಿಷಾದದ ಸಂಗತಿಯಾಗಿದೆ. ಏನೇ ಆದರೂ ಪಂಜಾಬಿ ದಲಿತ ಸಾಹಿತ್ಯ ಭಾರತೀಯ ದಲಿತ ಸಾಹಿತ್ಯಕ್ಕೆ ತನ್ನದೆ ಆದ ಕೊಡುಗೆ ನೀಡಿದೆ.

೧೯೯೪ರಲ್ಲಿ ಪಂಜಾಬಿಯಲ್ಲಿ ಮೊತ್ತ ಮೊದಲ ದಲಿತ ಆತ್ಮಚರಿತ್ರೆ ಗೈರ್‌ಹಾಜರ್ ಆದಮಿ ಪ್ರಕಟಗೊಂಡಿತು. ಈ ಆತ್ಮಕಥನದಲ್ಲಿ ಪಂಜಾಬಿ ದಲಿತ ಜೀವನದ ಹೆಚ್ಚು ರಮ್ಯ ಚಿತ್ರಣವಾಗಿದೆ. ಏಕೆಂದರೆ ದಲಿತರ ಬದುಕು ನೋವು–ನಲಿವುಗಳಿಂದ ಕೂಡಿದ್ದರೂ ಅದನ್ನು ಕಲಾತ್ಮಕವಾಗಿ ನಾಟಕೀಯವಾಗಿ ರಚಿಸಿದ್ದಾರೆ.

ಆಧುನಿಕ ಪಂಜಾಬಿ ಸಾಹಿತ್ಯದಲ್ಲಿ ಕಂಡುಬರುಬ ಕಥಾಪ್ರಕಾರದಲ್ಲಿ ದಲಿತ ಪಾತ್ರಗಳನ್ನು ಗುರುತಿಸಬಹುದಾಗಿದೆ. ಪ್ರಿನ್ಸಿಪಾಲ್ ಸುಜನ್ ಸಿಂಘ್‌ರವರನ್ನು ದಲಿತಧ್ವನಿಯ ದೂತವೆಂದು ಪರಿಗಣಿಸಲಾಗಿದೆ. ಇವರ ಸಣ್ಣಕಥೆಗಳಲ್ಲಿ ಬಡತನದ ನೋವು ಸಂಕಷ್ಟಗಳನ್ನು ಚಿತ್ರಿಸುವುದಾಗಿದೆ. ಪ್ರೇಮ್‌ಗೊರ್ಬಿ, ಕಿರ್ಪಾಲ್‌ರಜಕ್, ಅತ್ತರ್‌ಜಿತ್, ಬೂರಾ ಸಿಂಘ್‌ಕಲೇರ್ ಲಾಲ್‌ಸಿಂಗ್ ಮೊದಲಾದವರು ಸಣ್ಣಕತೆಗಳಲ್ಲಿ ದಲಿತ ಅನನ್ಯತೆಯನ್ನು ಬಿಂಬಿಸಿದ ಕಥಾಗಾರರಾಗಿದ್ದಾರೆ.

ಪಂಜಾಬಿ ದಲಿತ ಕಾದಂಬರಿಗಳಲ್ಲಿ ನಾನಕ್‌ಸಿಂಘ್, ಜಸವಂತ್ ಸಿಂಘ್ ಕನ್ವಾಲ್, ಕರ್ತಾರ್ ಸಿಂಗ್‌ದುಗ್ಗಲ್, ಸುರಿಂದರ್ ಸಿಂಘ್ ಮೊದಲಾದವರು ದಲಿತ ಜೀವನದ ಸಂಕಷ್ಟಗಳನ್ನು ಚಿತ್ರಿಸಿದ್ದಾರೆ. ಸೋಹನ್ ಸಿಂಘ್ ಸೀತಲ್ ಅವರ ಕಾದಂಬರಿಗಳಲ್ಲಿ ದಲಿತ ಜೀವನದ ಪ್ರತಿಯೊಂದು ತಲ್ಲಣಗಳನ್ನು ಚಿತ್ರಿಸಿದ್ದಾರೆ. ಟೂಟಲ್ ವಾಲಾಖೂ ಮತ್ತು ಜುಗ್‌ಬದಲ್ ಗಯಾ ಇವರ ಪ್ರಸಿದ್ಧ ಕಾದಂಬರಿಗಳಾಗಿವೆ. ಇದಲ್ಲದೆ ಜಸವಂತ್ ವಿರ್ದಿಯವರ 'ನಿಹಚಲ್‌ನಹಿ ಚೀಟ್' ನಿಂದರ್‌ಗಿಲ್‌ರವರ 'ದಾಸ್ತಾನ್ ದಲಿತಾನ್ ದೀ' ನಚ್ಚತರ್‌ರವರ 'ಬಕಿದಸಚ್' ಕಾದಂಬರಿಗಳು ದಲಿತರ ಜೀವನಕ್ಕೆ ಸಂಬಂಧಿಸಿದ ಕಾದಂಬರಿಗಳಾಗಿವೆ.

೨.೬ ಹಿಂದಿ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು

ಭಾರತೀಯ ಭಾಷೆಗಳಲ್ಲಿ ಹಿಂದಿ ಭಾಷೆಯು ರಾಷ್ಟ್ರಭಾಷೆಯಾಗಿ ಮಾನ್ಯತೆ ಪಡೆದುಕೊಂಡಿದೆ. ಭಾರತೀಯ ಸಾಹಿತ್ಯ ಚರಿತ್ರೆಗೆ ಅನನ್ಯವಾದ ರೀತಿಯಲ್ಲಿ ಹಿಂದಿಯಲ್ಲಿ ಸಾಹಿತ್ಯ ಕೃಷಿ ನಡೆದಿದೆ. ಅಂತೆಯೇ ಹಿಂದಿ ಭಾಷೆಯು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಆಗಾಧವಾದ ಸಾಹಿತ್ಯ ಸಂಪತ್ತು ಇದೆ. ಏಕೆಂದರೆ ಭಾರತದ ೩೦ ಪ್ರಾಂತ್ಯಗಳಲ್ಲಿ ಬಿಹಾರ್, ಉತ್ತರ ಪ್ರದೇಶ, ಮಧ್ಯಪ್ರದೇಶ, ಪೂರ್ವಪಂಜಾಬ್ ಮೊದಲಾದ ೧೧ ಪ್ರಾಂತ್ಯಗಳಲ್ಲಿ ಮಾತನಾಡುವ ಹಾಗೂ ಆಡಳಿತವಾಗಿ, ಸಾಹಿತ್ಯವಾಗಿ ವ್ಯವಹರಿಸುವ ಭಾಷೆ ಹಿಂದಿಯಾಗಿರುತ್ತದೆ.

ಹಿಂದಿ ಸಾಹಿತ್ಯದ ಉಗಮ ೮ನೇ ಶತಮಾನದಿಂದ ಗುರುತಿಸಬಹುದು. ಹಿಂದಿ ಭಾಷೆಯು ರಾಜಮಹಾರಾಜರ ಹಾಗೂ ಮುಸ್ಲಿಂ ರಾಜರುಗಳ ತಾಯಿ ಭಾಷೆಯಾಗಿ ಕಂಡುಬರುತ್ತದೆ. (ಉದಾ: ಅಕ್ಬರ್, ಪೃಥ್ವಿರಾಜ್, ಮಹಮ್ಮದ್ ಬಿನ್ ತೊಗಲಕ್ ಇತ್ಯಾದಿ) ಇವರುಗಳು ತಮ್ಮ ಅಸ್ಥಾನದ ಕವಿಗಳಿಗೆ ಪ್ರೋತ್ಸಾಹ ನೀಡುವುದರ ಮುಖಾಂತರ ಹಿಂದಿಭಾಷೆಯಲ್ಲಿ ಸಾಹಿತ್ಯ ರಚನೆಗೆ ಕಾರಣೀಭೂತರಾಗಿದ್ದಾರೆ. ಇದರೊಂದಿಗೆ ದಾಸಸಾಹಿತ್ಯ ಪರಂಪರೆಯನ್ನು ಹಿಂದಿ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ರಮಾನಂದ, ಕಬೀರ್‌ದಾಸ್, ಗುರುನಾನಕ್, ಗುರುಗೋವಿಂದ ಸಿಂಗ್, ವಿದ್ಯಾಪತಿಥಾಕೂರ್, ನಂದದಾಸ್, ಸೂರದಾಸರಂತಹ ಚಿಂತಕರು ಹಿಂದಿಸಾಹಿತ್ಯ ಅಭಿವೃದ್ಧಿ ಹೊಂದಲು ತಳಪಾಯ ಹಾಕಿದವರು. ಈ ಹಿನ್ನೆಲೆಯಲ್ಲಿ ೧೫-೧೬ನೇ ಶತಮಾನದ ಸಂದರ್ಭದಲ್ಲಿ ಹಿಂದಿಯ ಸಾಹಿತ್ಯದಲ್ಲಿ ಭಕ್ತಿಸಾಹಿತ್ಯಕ್ಕೆ ವಿಶಿಷ್ಠವಾದ ಕೊಡುಗೆ ನೀಡಿರುವುದು ಇತಿಹಾಸವೇ ಸರಿ.

ಆಧುನಿಕ ಸಂದರ್ಭದಲ್ಲಿ ಹಿಂದಿ ಸಾಹಿತ್ಯ ದಲಿತೇತರರಿಂದ ಕಥೆ, ಕಾದಂಬರಿ, ಕಾವ್ಯ, ಪ್ರವಾಸಕಥನ, ನಾಟಕ, ಆತ್ಮಕಥನ, ಹೀಗೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ನಡೆದಿದ್ದರೂ ಸಹ ದಲಿತ ಸಾಹಿತಿಗಳು ಹಿಂದಿಯಲ್ಲಿ ಆಗಾಧವಾದ ಸಾಹಿತ್ಯ ಕೃಷಿ ಮಾಡಿರುವುದು ಸಂತಸದ ಸಂಗತಿಯಾಗಿದೆ. ಈ ಸಂಗತಿಗೆ ಮೂಲ ಪ್ರೇರಕ ಶಕ್ತಿಗಳು ಈ ದೇಶದ ಸಂವಿಧಾನದ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಜ್ಯೋತಿಬಾಫುಲೆಯವರು. ಇವರುಗಳ ಪ್ರಭಾವದಿಂದ ದಲಿತ ಪ್ರಜ್ಞೆ ಜಾಗೃತಗೊಂಡು ಉಚ್ಚ ವರ್ಗದವರ ಶೋಷಣೆಯನ್ನು ತಿರಸ್ಕಾರವನ್ನು ಪ್ರತಿಭಟಿಸಿ ಅನ್ಯಾಯ, ಅಪಮಾನವನ್ನು ದಿಟ್ಟತನದಿಂದ ವಿರೋಧಿಸಿ ಹೋರಾಟ ಮತ್ತು ದಲಿತ ಸಂವೇದನೆಯ ಸಾಹಿತ್ಯ ರಚನೆಯಾಗತೊಡಗಿತು. ದಲಿತ ಸಾಹಿತಿಗಳು ತಾವು ಅನುಭವಿಸಿದ ತಮ್ಮ ನೋವಿನ ಅಂತರಾಳವನ್ನು ಅನುಭವಿಸಿದ ಯಾತನೆಯ ಚಿತ್ರಣವನ್ನು, ಸಂಕರದ ಸಂಕಷ್ಟಗಳನ್ನು ಕುರಿತು ನಿರ್ಭೀತಿಯಿಂದ ಬರೆಯತೊಡಗಿದರು.

ಹಿಂದಿ ಭಾಷೆಯ ದಲಿತ ಸಾಹಿತ್ಯಕ್ಕೆ ಮೂಲ ಪ್ರೇರಣೆ ದಕ್ಷಿಣ ಭಾರತೀಯ ಸಾಹಿತ್ಯ ಪ್ರಭಾವವನ್ನುಂಟು ಮಾಡಿದೆ. ಅಂಬೇಡ್ಕರ್ ಅವರ ವಿಚಾರಧಾರೆಯ ಪ್ರಭಾವವೇ ದಲಿತ ಪ್ರಜ್ಞೆ ಹಿಂದಿಯ ದಲಿತ ಸಾಹಿತ್ಯದ ಬರಹಗಾರರಲ್ಲಿ ತೀವ್ರಗೊಳ್ಳಲು ಕಾರಣವಾಗಿದೆ. ೧೯೭೦ರ ನಂತರ ಹಿಂದಿ ದಲಿತ ಸಾಹಿತ್ಯದಲ್ಲಿ ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕತೆಗಳ ಮೂಲಕ ತಮ್ಮ ಮೂಖ ಸಂವೇದನೆಗಳನ್ನು ಅಭಿವ್ಯಕ್ತಿಪಡಿಸಲು ಮಾಧ್ಯಮವಾಗಿ ಬಳಸಿಕೊಂಡರು. ಅವರಲ್ಲಿ ಡಿ.ಪಿ.ವರುಣ್, ಜಯಪ್ರಕಾಶ್ ಕರ್ದಮ್, ಓಂ ಪ್ರಕಾಶ್ ವಾಲ್ಮೀಕಿ, ಸತ್ಯಪ್ರಕಾಶ್, ಮೋಹನ್‌ದಾಸ್ ನೈಮಿಶರಾಯ್, ಪ್ರೊ. ಚಮನ್‌ಲಾಲ್, ಪ್ರೇಮ್ ಕಪಾಡಿಯ, ತೇಜಸಿಂಹ್,

ಸೂರ್‌ಜ್‌ಪಾಲ್ ಚೌಹಾಣ್ ಮೊದಲಾದವರನ್ನು ಹಿಂದಿ ದಲಿತ ಸಾಹಿತಿಗಳ ಪಂಕ್ತಿಗಳಲ್ಲಿ ಗುರುತಿಸಲಾಗಿದೆ.

ಭಾರತೀಯ ಯಾವ ಭಾಷೆಗಳ ದಲಿತ ಸಾಹಿತ್ಯವನ್ನು ಅವಲೋಕಿಸಿದಾಗ ಮೊದಲಿಗೆ ಭಾಷೆಯ ಕಾವ್ಯ ಪ್ರಕಾರದಿಂದಲೇ ದಲಿತ ಸಾಹಿತ್ಯ ಕೃಷಿಯನ್ನು ಆರಂಭಿಸಿದೆ. ಅಂತೆಯೇ ಹಿಂದಿ ದಲಿತ ಸಾಹಿತ್ಯದಲ್ಲಿ ೧೯೬೦–೭೦ರ ಸರಿಸುಮಾರಿನಲ್ಲಿ ದಲಿತಕಾವ್ಯದ ಬಗ್ಗೆ ಕವಿ ಮೋಹನ್‌ದಾಸ್ ನೈಮಿಶರಾಯ್ ಅವರು ಈ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. "ದಲಿತ ಸಾಹಿತ್ಯ ಸಾಮಾಜಿಕ ಹೋರಾಟದ ಸಾಮಾಜಿಕ ಪ್ರತಿಫಲನ. ಅದರದು ಬದುಕಿನ ನೆಲದ ಜೊತೆಗಿನ ಸಂಬಂಧ, ದಲಿತ ಸಾಹಿತ್ಯದಲ್ಲಿ ಅನುಭವಿಸಿದ ಯಾತನೆಯ ನೈಜತೆ ಹಾಗೂ ಅನುಭೂತಿಯ ತಾಪವಿರಬೇಕು"[೧೪] ಎಂದಿದ್ದಾರೆ. ದಲಿತರ ಸಾಮಾಜಿಕ ಬದುಕು ಬಹಳ ಶೋಚನೀಯವಾದ ಸಂಕಷ್ಟದ ಬದುಕಾಗಿದೆ. ಈ ಸಾಮಾಜಿಕ ವ್ಯವಸ್ಥೆಯ ತಳಹದಿಯಲ್ಲಿ ಅನುಭವಿಸುವ ನೋವಿನ ಅಪಮಾನದ ಯಾತನೆಯನ್ನು ಸ್ಪಷ್ಟವಾಗಿ ನಿರ್ಭೀಡೆಯಿಂದ ವ್ಯಕ್ತಪಡಿಸುವುದೇ ದಲಿತ ಸಾಹಿತ್ಯದ ಪ್ರಮುಖ ಉದ್ದೇಶವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಗಣಪತಿ ಪತಮಾರ್ ಅವರು ದಲಿತ ಕಾವ್ಯ ಸಂಕಲನವನ್ನು ಹಿಂದಿಯಲ್ಲಿ ಮೊದಲ ಬಾರಿಗೆ ಪ್ರಕಟಿಸಿದರು. ಸ್ವಾಮಿ ಅಚ್ಚುತಾನಂದ 'ಹರಿಹರ್' ಅವರು ಆದಿ ಹಿಂದೂ ಮಹಾಸಭೆಯ ಸಂಸ್ಥಾಪಕರಲ್ಲದೆ ಖ್ಯಾತಕವಿಗಳು ಆಗಿದ್ದರು. ಇವರ 'ಆದಿ ವಂಶಕಾ ಢಂಕಾ' ಕವನಸಂಕಲನವು ದಲಿತರು ಭಾರತದ ಮೂಲ ನಿವಾಸಿಗಳು ಹಾಗೂ ಶ್ರಮಜೀವಿಗಳು ಎಂಬುದನ್ನು ಹೇಳುತ್ತದೆ. ಇವರೊಂದಿಗೆ ಮಹಾತ್ಮಗ್ಯಾನದಾಸರು 'ವಿವೇಕ ಭೂಷಣ' ಬಿಹಾರೀಲಾಲ್ ಹರಿತ್ ಅವರು ಆಜಾದೀ ಕೀ ಲಡಾಯಿ, ಡಾ. ಪುರುಷೋತ್ತಮ ಅವರು 'ಸತ್ಯ ಪ್ರೇಮಿ' ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ದಲಿತ ಆಕಾಂಕ್ಷೆಗಳು ಗರಿಗೆದರಿದ ರೀತಿಯಲ್ಲಿ ಬಣ್ಣಿಸಿದ್ದಾರೆ.

"ನಮ್ಮ ಆಕಾಂಕ್ಷೆಗಳು
ನೆಲದ ತನುವಿನಿಂದೆದ್ದು
ಸಮುದ್ರದ ತರಳ ವಿಸ್ತಾರದ ಕಡೆಗೆ
ದ್ವೀಪಗಳ ಆಸೆಯಿಂದ ಮುಂದಾದಾಗ
ಬದುಕುವುದೆಂದರೆ
ಕೇವಲ ಉಸಿರಾಡುವುದಲ್ಲ
ಆಡುವುದು ನಗುವುದೂ ಅಲ್ಲ
ಅದು ಧರ್ಮಯುದ್ಧ"[೧೫]

ಎಂದು ತಮ್ಮ ಕವಿತೆಯಲ್ಲಿ ದಲಿತ ಪ್ರಜ್ಞೆಯ ಸಂವೇದನೆಯನ್ನು ಚಿತ್ರಿಸಿದ್ದಾರೆ. ಕಲುರಾಮ್ ಚಾಟಿಯ ಹಿಂದಿಯ ಪ್ರಥಮದಲಿತ ಕವಿ ಎಂದು ಗುರುತಿಸಲಾಗಿದೆ. ದಲಿತರ ದಮನಿತ ಆಕ್ರೋಶವನ್ನು ಕವಿಲಾಲ್ ಚಂದ್ ರಾಹಿ ಹೀಗೆ ಹೊರಗೆಡುತ್ತಾರೆ.

"ಬದುಕನ್ನು ಹೊಲಿಯಲು
ಚರ್ಮ ಕತ್ತರಿಸುವನವನು
ಯಾರ ಜೇಬು ಅಥವಾ ಕುತ್ತಿಗೆಯನ್ನಲ್ಲ"[೧೬]

ಎಂದಿದ್ದಾರೆ. ಜಯಪ್ರಕಾಶ ವಾಲ್ಮೀಕಿಯವರು 'ಕಹಾ ಹೈ ಈಶ್ವರ್ ಕೇ ಹಸ್ತಾಕ್ಷರ್' ಎಂಬ ಕವನಸಂಕಲನವನ್ನು ಹೊರತಂದಿದ್ದಾರೆ. ಹೀಗೆ ಹತ್ತು ಹಲವಾರು ಪ್ರಜ್ಞಾವಂತ ದಲಿತ ಕವಿಗಳಿಂದ ಹಿಂದಿ ದಲಿತ ಸಾಹಿತ್ಯದ ಕಾವ್ಯ ಬರವಣಿಗೆಯು ಬೇರೆ ಬೇರೆ ಭಾಷೆಯ ಸಾಹಿತ್ಯದ ಮೇಲೆ ಪ್ರಭಾವವನ್ನುಂಟು ಮಾಡತೊಡಗಿದೆ.

ಹಿಂದಿ ದಲಿತ ಸಾಹಿತ್ಯದಲ್ಲಿ ಕಾವ್ಯದಷ್ಟೇ ಪ್ರಾಮುಖ್ಯತೆಯನ್ನು ಕಾದಂಬರಿ ಕ್ಷೇತ್ರವು ಪಡೆದುಕೊಂಡಿದೆ. ಪ್ರೇಮ್ ಅವರ 'ಛಪ್ಪರ್ (ಹುಲ್ಲು ಹೊದಿಸಿದ ಗುಡಿಸಲು) ೧೯೯೪ರಲ್ಲಿ ಪ್ರಕಟಗೊಂಡ ಮೊದಲ ದಲಿತ ಕಾದಂಬರಿ. ಈ ಕೃತಿಯಲ್ಲಿ ದಲಿತರು ಸುಂಕ ವಸೂಲಿ ಮಾಡುವವರ ಬಲೆಯಲ್ಲಿ ಬಿದ್ದಾಗ ಅನುಭವಿಸಿದ ಬವಣೆಯ ನೈಜ ಚಿತ್ರಣವು ಇಲ್ಲಿದೆ. ಕಪಾಡಿಯಾ ಅವರ 'ಮಿಟ್ಟೀಕಾ ಗಂಧ' (ಮಣ್ಣಿನ ವಾಸನೆ) ಎಂಬ ಕಾದಂಬರಿಯಲ್ಲಿ ದಲಿತರೊಂದಿಗೆ ದಲಿತೇತರ ಸಮಾಜದ ಅನೇಕ ಸಮಸ್ಯೆಗಳನ್ನು ಕುರಿತು ಚಿಂತನೆ ನಡೆಸುವ ಪ್ರಸಿದ್ಧ ಕಾದಂಬರಿಯಾಗಿದೆ. ಸತ್ಯಪ್ರಕಾಶ್ ಅವರ 'ಜಸ್‌ತಸ್ ಭಯಿಸವೇರಾ (ಅಂತೂ ಬೆಳಗಾಯಿತು) ಕಾದಂಬರಿಯನ್ನು ಗುರುತಿಸಬಹುದಾಗಿದೆ. ಈ ಕಾದಂಬರಿಯಲ್ಲಿ ಅಶಿಕ್ಷಿತ ದಲಿತರ ಜೀವನದ ಬವಣೆಗಳು, ಭಗತ್ ಪಂಡೆ ಪರೋಹಿತರ ದ್ವೇಷ, ಸಾಮಂತರ ಶೋಷಣೆ, ಧಾರ್ಮಿಕ ಕುರುಡು ಕಂದಾಚಾರಕ್ಕೆ ಬಲಿಯಾದ ದಲಿತರ ಗೋಳಿನ ಚಿತ್ರಣ ಈ ಕಾದಂಬರಿಯ ಹಂದರವಾಗಿ ಕಂಡುಬರುತ್ತದೆ. ಇದಲ್ಲದೇ ಧಾರ್ಮಿಕ ಅಂಧಾಚರಣೆ ದಲಿತ ಹೆಣ್ಣುಮಕ್ಕಳ ಶೋಷಣೆಯ ನೈಜ ಚಿತ್ರಣವನ್ನು ಸತ್ಯಪ್ರಕಾಶ್ ಅವರು ಕಟ್ಟಿಕೊಟ್ಟಿದ್ದಾರೆ.

ಮೋಹನ್‌ದಾಸ್ ನೈಮಿಶಾರಾಯ್ ಅವರು ಹಿಂದಿ ದಲಿತ ಸಾಹಿತ್ಯದ ಆತ್ಮಕಥನಕಾರರಲ್ಲಿ ಬಹಳ ಪ್ರಮುಖರು. ಅಲ್ಲದೆ 'ಬಯಾನ್' ಪತ್ರಿಕೆಯ ಸಂಪಾದಕರೂ ಕೂಡ, ಕವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ ಹಾಗೂ ನಾಟಕಕಾರರಾಗಿ ಹಿಂದಿ ದಲಿತ ಸಾಹಿತ್ಯದಲ್ಲಿ ಗುರುತಿಸಿಕೊಂಡವರು. ಇವರ 'ಮುಕ್ತಪರ್ವ' ಪ್ರಸಿದ್ಧ ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ

ಕೋಮು ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಚರ್ಚೆ ಮಾಡಿದ್ದಾರೆ. ಈ ಕಾದಂಬರಿಯಲ್ಲಿ ಬರುವ ರಾಮಲಾಲ್ ಎಂಬ ವ್ಯಕ್ತಿ ದಲಿತರಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿ ದಲಿತರು ಗುಲಾಮಗಿರಿಯಿಂದ ಮುಕ್ತಿ ಹೊಂದುವಂತೆ ಮಾಡಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುವಂತೆ ಪ್ರೇರೇಪಿಸುವ ಮಹತ್ತರವಾದ ಬದಲಾವಣೆಯನ್ನು ಈ ಕಾದಂಬರಿಯು ಹೊಂದಿದೆ. ಈ ಕಾದಂಬರಿಯಲ್ಲಿ ದೇವಸ್ಥಾನ ಮತ್ತು ಮಸೀದಿ ಎಂಬ ಎರಡು ಧಾರ್ಮಿಕ ಸ್ಥಳಗಳು ಇವೆ. ಆದರೆ ದಲಿತರಲ್ಲಿ ಜಾಗೃತಿಯನ್ನು ಮೂಡಿಸುವ ಸಂದರ್ಭದಲ್ಲಿ ದಲಿತರಿಗೆ ಪ್ರಮುಖವಾಗಿ 'ದೇವಸ್ಥಾನ ಮತ್ತು ಮಸೀದಿಯ ಅಗತ್ಯಕ್ಕಿಂತ ಅಕ್ಷರ ನೀಡುವ ಶಾಲೆಯೇ ದೇಗುಲವಿದ್ದಂತೆ' ಎಂಬ ಹಿನ್ನೆಲೆಯಲ್ಲಿ ಶಾಲೆಯ ಮಹತ್ವವನ್ನು ಈ ಕಾದಂಬರಿಯು ತಿಳಿಸಿಕೊಡುತ್ತದೆ.

ಪುರುಷ ದಲಿತ ಬರಹಗಾರಷ್ಟೇ ಹಿಂದಿ ದಲಿತ ಸಾಹಿತ್ಯದ ಕಾದಂಬರಿಯ ಕ್ಷೇತ್ರದಲ್ಲಿ ಮಹಿಳಾ ಕಾದಂಬರಿಗಾರ್ತಿಯರನ್ನು ಕಾಣಬಹುದು. ಭಜಂತ್ರಿ, ಹೇಮಲತಾಮಹೀಶ್ವರ್, ಕಾವೇರಿ, ರಜನೀ ತಿಲಕ, ರಜನೀ ಡಿ ಸೌದಿಯ ಪ್ರಮುಖ ಮಹಿಳಾ ಕಾದಂಬರಿಗಾರ್ತಿಯರು. ಕಾವೇರಿ ಪ್ರಮುಖ ದಲಿತ ಕಾದಂಬರಿಗಾರ್ತಿ. ಇವರು 'ಮಿಸ್‌ಮಿಯಾ' ಎಂಬ ಕಾದಂಬರಿಯನ್ನು ೨೦೦೫ರಲ್ಲಿ ಪ್ರಕಟಿಸಿದ್ದಾರೆ. ಈ ಕಾದಂಬರಿಯಲ್ಲಿ ದಲಿತ ಮಹಿಳೆಯ ಸಂಘರ್ಷದೊಂದಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ಅಸ್ತಿತ್ವವನ್ನು, ಸಂವೇದನೆಯನ್ನು ತೆರೆದಿಡುವ ಕಾದಂಬರಿಯಾಗಿದೆ.

ಹಿಂದಿ ದಲಿತ ಸಾಹಿತ್ಯದಲ್ಲಿ ನಾಟಕಗಳ ಪಾತ್ರ ಗಮನಾರ್ಹವಾದುದ್ದಾಗಿದೆ. ಸರಿಸುಮಾರು ೨೦೦ ನಾಟಕಗಳು ದಲಿತ ಸಾಹಿತಿಗಳಿಂದ ರಚಿತವಾಗಿರುವುದು ತಿಳಿದು ಬರುತ್ತದೆ. ೧೯೬೨-೭೭ರಲ್ಲಿಯೇ ಸಂತ ಅಚ್ಚುತಾನಂದರಿಂದ 'ಶಂಭೂಕಮುನಿ' ನಾಟಕ ರಚನೆಯಾಯಿತು. ಈ ಶಂಭೂಕ' ನಾಟಕದ ಕಥಾವಸ್ತುವನ್ನು ಆಧಾರವಾಗಿಟ್ಟುಕೊಂಡು ದಲಿತ ನಾಟಕಕಾರರಲ್ಲೆ ೨೭ ನಾಟಕಗಳು ರಚನೆಯಾಗಿರುವುದು ವಿಶೇಷ. ರತ್ನಾಕರ ಬಂಧು ತ್ರಿಶರಣರವರಿಂದ 'ಹಮಾರಾ ಸಮಾಜ್' (ನಮ್ಮ ಸಮಾಜ) ಮತ್ತು ಅಪನಾದೇಶ್ (ನಮ್ಮ ದೇಶ) ನಾಟಕಗಳು ಪ್ರಕಟಗೊಂಡವು. ಶಿವ ಪ್ರಸನ್ನದಾಸರು 'ಹರಿಜನ' ನಾಟಕ ಮತ್ತು ಭೀಮಸೇನ ಸಂತೋಷ ಅವರ 'ಕರ್ಮಯೋಗಿ' ನಾಟಕವು ಅಂಬೇಡ್ಕರ್ ಅವರ ಜೀವನವನ್ನು ಆಧರಿಸಿ ರಚನೆ ಮಾಡಿದ್ದಾರೆ. ೧೯೭೫ರಲ್ಲಿ ಮಾತಪ್ರಸಾದ್ ಅವರು 'ಅಚೂತ್‌ಕಾ ಬೇಟಾ' (ಅಸ್ಪೃಶ್ಯನ ಮಗ) ಮತ್ತು ಓಂಪ್ರಕಾಶ್ ವಾಲ್ಮೀಕಿ ಅವರು ದೋ ಶಹರ್ (ಎರಡು ನಗರಗಳು) ನಾಟಕಗಳನ್ನು ಪ್ರಕಟಿಸಿದ್ದಾರೆ. ಪ್ರೇಮಶಂಕರ್ ಅವರು 'ಗರೀಬ್' ಎಂಬ ನುಕ್ಕಡ ನಾಟಕ (ಬೀದಿ ನಾಟಕ) ವನ್ನು ರಚಿಸಿದ್ದಾರೆ.

ಹಿಂದಿ ದಲಿತ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳು ಓದುಗರನ್ನು ಬಹಳ ಆಕರ್ಷಿಸುತ್ತವೆ. ಕಾರಣ ಅವುಗಳಲ್ಲಿ ಮೂಡಿಬರುವ ಬಡತನ, ವ್ಯವಸ್ಥೆಯ ವಿಕೃತರೂಪ, ಶೋಷಣೆ, ಅತ್ಯಾಚಾರಗಳ ವಿಭಿನ್ನ ರೂಪಗಳ ಪ್ರಾಮಾಣಿಕ ನೈಜ ಚಿತ್ರಣ, ಪ್ರತಿಯೊಬ್ಬ ದಲಿತ ಲೇಖಕನು ತಾನುಂಡ ನೋವಿನ ತೀವ್ರತೆಯನ್ನು ಸಹಜವಾಗಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಹಿಂದಿಯ ಮೊದಲ ದಲಿತ ಆತ್ಮಕಥೆ ಮೋಹನದಾಸ್ ನೈಮಿಶರಾಯ್ ಅವರ 'ಅಪನೆ ಅಪನೆ ಪಿಂಜರೆ' (ತಮ್ಮ ತಮ್ಮ ಪಂಜರ) ನಂತರದ ಓಂ ಪ್ರಕಾಶ್ ವಾಲ್ಮೀಕಿಯವರ 'ಜೂಡಾನ್' (ಎಂಜಲು) ಹಾಗೂ ಶೈರಾಜ್ ಸಿಂಹ 'ಬೇಚೈನ್' ಹಾಗೂ ಮೇರಾ ಬಚಪನ್ ಮೇರೆ ಕಂದೋಂಪರ್ (ನನ್ನ ಬಾಲ್ಯ ನನ್ನ ಹೆಗಲ ಮೇಲೆ) ೨೦೦೨ರಲ್ಲಿ ಪ್ರಕಟಗೊಂಡ ಸುರಾಜಾಪಾಲ್ ಚೌಹನ್ ಅವರ 'ತಿರಸ್ಕೃತ' ಹಿಂದಿ ದಲಿತ ಆತ್ಮಕಥೆಗಳು ಪ್ರಮುಖವಾಗಿವೆ. ಡಾ. ತುಲಸೀರಾಮ್ ಅವರ 'ಮುರ್ದಹಿಯ' ಆತ್ಮಕಥೆ ಬೇರೆಯೇ ತೆರನಾದದ್ದು ಇಲ್ಲಿ ಇತರೆ ಆತ್ಮಕಥೆಗಳಂತೆ ಲೇಖಕರ ವೈಯಕ್ತಿಕ ಸಂಘರ್ಷದ ಮತ್ತು ಪಡೆದ ಶ್ರೇಯಸ್ಸಿನ ವಿವರಣೆ ಮಾತ್ರವಲ್ಲ, ಸಂಪೂರ್ಣ ಊರಿನ ಸಮಸ್ಯೆಗಳನ್ನು ನಿರೂಪಿಸಲಾಗಿದೆ. ಧರ್ಮವೀರ್ ಅವರ 'ಮೇರಿ ಪತ್ನಿ ಜಾರ್ ಭೇಡಿಯಾ' (ನನ್ನ ಪತ್ನಿ ಮತ್ತು ತೋಳ) ಆತ್ಮಕಥೆ ದಲಿತ ಸಾಹಿತ್ಯದಲ್ಲಿ ಬಹಳ ಚರ್ಚೆಗೆ ಒಳಗಾದ ಮತ್ತು ವಿವಾದಕ್ಕೆ ಆಸ್ಪದಕೊಟ್ಟ ಕೃತಿ.

ಹೀಗೆ ಹಿಂದಿ ದಲಿತ ಸಾಹಿತ್ಯದಲ್ಲಿ ಕಾವ್ಯ, ಕಥೆ, ಕಾದಂಬರಿ, ನಾಟಕ ಹಾಗೂ ಆತ್ಮಕಥೆಯ ಪ್ರಕಾರದಲ್ಲಿ ದಕ್ಕು ಬಗೆಯ ಸಾಹಿತ್ಯ ಕೃಷಿ ಅಗಿರುವುದು ಮಹತ್ವಪೂರ್ಣವಾದ ಸಂಗತಿಯಾಗಿದ್ದರೂ ಸಹ ದಕ್ಷಿಣ ಭಾರತೀಯ ಸಾಹಿತ್ಯದಷ್ಟು ಹುಲಸಾಗಿ ಬೆಳೆದಿಲ್ಲ ಎಂಬ ಮಾತು ಸಹ ಅಷ್ಟೇ ಸತ್ಯವಾಗಿದೆ.

೨.೭. ಕನ್ನಡ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳು

ಪ್ರಾಚೀನ ಕನ್ನಡ ಸಾಹಿತ್ಯದಿಂದ ಹಿಡಿದು ಆಧುನಿಕ ಕನ್ನಡ ದಲಿತ ಸಾಹಿತ್ಯದ ವರೆಗೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಲಿತ ಸಂವೇದನೆಗಳನ್ನು ಗುರುತಿಸಬಹುದಾಗಿದೆ. ದಲಿತ ಸಂವೇದನೆ ಎಂದರೆ "ಆರ್ಥಿಕ-ಸಾಮಾಜಿಕ, ರಾಜಕೀಯ ಶೋಷಣೆಗೆ ಒಳಗಾದ ಪಂಚಮರು ಬಹಿಷ್ಕೃತರೆಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರನ್ನು ಹಾಗೂ ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರ ಹಾಗೆ ಆರ್ಥಿಕ-ಸಾಮಾಜಿಕ-ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಜನರ ವಿಚಾರಗಳನ್ನು ತಿಳಿದುಕೊಳ್ಳುವಿಕೆ, ಅವರ ಬಗ್ಗೆ ಹೆಚ್ಚಿನ ಜ್ಞಾನ, ಅನುಭವಗಳನ್ನು ಸೂಚಿಸುವಿಕೆಯನ್ನು ದಲಿತ ಸಂವೇದನೆ"[೧೭] ಎಂದು ಕರೆಯುತ್ತಾರೆ. ಮೇಲಿನ ತಾತ್ವಿಕ ಅಂಶಗಳು ಕನ್ನಡ ಸಾಹಿತ್ಯ

ಮತ್ತು ಸಂಸ್ಕೃತ ಸಾಹಿತ್ಯದ ವೇದ ಉಪನಿಷತ್‌ಗಳಲ್ಲಿಯೂ ಕಂಡುಬರುತ್ತವೆ. ಆರ್ಯರು ಇಂದ್ರನನ್ನು ಆರಾಧಿಸುತ್ತಿದ್ದು ಯಜ್ಞಯಾಗಾದಿಗಳ ನೆಪದಲ್ಲಿ ಅಶ್ವಗಳನ್ನು ಬಲಿಕೊಡುತ್ತಿದ್ದರು. ಇದನ್ನು ಛಾರ್ಯವಾಕನು ಪ್ರಶ್ನಿಸಿದನು. ಕಾಲಾಂತರದಲ್ಲಿ ತಮ್ಮ ಧರ್ಮದ ಉಳುವಿಗಾಗಿ ಬೌದ್ಧಧರ್ಮದ ಪ್ರಭಾವವನ್ನು ತಡೆಗಟ್ಟಲು ಮಾಂಸಾಹಾರವನ್ನು ತ್ಯಜಿಸಿದರು. ನಂತರ ದ್ರಾವಿಡರನ್ನು ಅಸ್ಪೃಶ್ಯರನ್ನಾಗಿ ಕಾಣಲಾರಂಭಿಸಿದರು. ಇದರೊಂದಿಗೆ ವರ್ಣವ್ಯವಸ್ಥೆಯನ್ನು ಹುಟ್ಟು ಹಾಕಿದರು.

"ವೇದಗಳಲ್ಲಿ ಕಂಡುಬರುವ ವ್ಯವಸ್ಥೆ ಮುಂದೆ ಜಾತಿಗಳಿಗೆ ಎಡೆ ಮಾಡಿಕೊಟ್ಟಿತು ಎಂದು ಸಾಮಾನ್ಯವಾಗಿ ಎಲ್ಲ ವಿದ್ವಾಂಸರ ನಂಬಿಕೆ. ಋಗ್ವೇದದಲ್ಲಿ ಬ್ರಾಹ್ಮಣ, ಕ್ಷತ್ರಿಯ ವರ್ಣಗಳ ಉಲ್ಲೇಖವಿದೆ ಮತ್ತು ಋಗ್ವೇದಕ್ಕೆ ಸೇರ್ಪಡೆಯಾಯಿತೆನ್ನಲಾದ ಪುರುಷಸೂಕ್ತದಲ್ಲಿ ವೈಶ್ಯ, ಶೂದ್ರವರ್ಣಗಳ ಉಲ್ಲೇಖವಿದೆ"[೧೮]. ಆರಂಭದಲ್ಲಿ ವರ್ಣವ್ಯವಸ್ಥೆಯ ಕಲ್ಪನೆಯಲ್ಲಿ ಮೇಲುಕೀಳು ಎಂಬ ಭಾವನೆ ಮೈತಳೆದು ನಿಂತಿವೆ. ಈ ಸಮಾಜದಲ್ಲಿ ಅಸ್ಪೃಶ್ಯನೆನಿಸಿಕೊಂಡ ದಲಿತನನ್ನು ಸಾಹಿತ್ಯದ ಸಂದರ್ಭದಲ್ಲಿ ಅಸ್ಪೃಶ್ಯರಾಗಿಯೇ ದೂರ ಉಳಿಸಲಾಗಿದೆ. ಏಕೆಂದರೆ ಕನ್ನಡದ ಕವಿರಾಜಮಾರ್ಗದಿಂದ ಹಿಡಿದು ದಲಿತ ಸಾಹಿತ್ಯದ ಹುಟ್ಟಿನವರೆಗೂ ದಲಿತರ ಬದುಕು, ಅತ್ಯಲ್ಪ ಪ್ರಮಾಣದಲ್ಲಿ ದಾಖಲುಗೊಂಡಿದ್ದರೂ ಮೇಲ್ಜಾತಿಯವರ ಸೇವಕರಾಗಿ, ಕೊಳಕರಾಗಿ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ. ಪ್ರಾಚೀನ ಸಾಹಿತ್ಯದಲ್ಲಿ ದಲಿತರ ಪ್ರಸ್ತಾಪವೇ ಅಪರೂಪವಾಗಿರುವಾಗ ದಲಿತರ ಸಂಸ್ಕೃತಿ ದಾಖಲೀಕರಣ ಎನ್ನುವುದು ದೂರದ ಮಾತಾಗಿಯೇ ಉಳಿಯಿತು. ಆದರೂ ದಲಿತರಲ್ಲಿನ ಜಾತಿಗಳ ಬಗ್ಗೆ ಅವರ ಆಚರಣೆಯ ಬಗ್ಗೆ, ಆಹಾರ ಪಾನೀಯ ವೇಷಭೂಷಣ ಇತ್ಯಾದಿಗಳ ಬಗ್ಗೆ ಅಲ್ಲೊಂದಿಲ್ಲೊಂದರಂತೆ ಪ್ರಸ್ತಾಪಿಸಲಾಗಿದೆ. ದಲಿತತ್ವವನ್ನು ಎತ್ತಿ ಹಿಡಿಯುವ ಬ್ರಾಹ್ಮಣತ್ವವನ್ನು ಖಂಡಿಸುವ ಧ್ವನಿಗಳು ಅಲ್ಲಲ್ಲಿ ಕೇಳಿ ಬರುತ್ತವೆ. ಸಮಕಾಲೀನ ಸಮಾಜದ ಪ್ರತಿಬಿಂಬದಂತಿರುವ ಸಾಹಿತ್ಯ ಕೃತಿಗಳ ಮೂಲಕ ಆಯಾ ಕಾಲದ ಜನರ ಸಾಹಿತ್ಯ ಸಂಸ್ಕೃತಿಯ ದಲಿತ ಸಂವೇದನೆಯನ್ನು ತಿಳಿಯುವುದಾಗಿದೆ.

೧೦ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಜೈನಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಈ ಜೈನಧರ್ಮವೇ ದಲಿತರ ಬಗ್ಗೆ ಕೀಳು ಅಭಿಪ್ರಾಯವನ್ನು ಹೊಂದಿತ್ತು. ಈ ಧರ್ಮದಲ್ಲಿರುವ ಭವಾವಳಿಯಲ್ಲಿ ಮಾದಿಗನಾಗಿ ಹುಟ್ಟುವುದು ಘೋರ ಪಾಪದ ಫಲ. ಮನುಷ್ಯನು ಮಾಡಿದ ಕರ್ಮದ ತುತ್ತತುದಿಯ ಫಲ. ಕತ್ತೆ, ಹಂದಿಯಾಗಿ ಹುಟ್ಟುವುದಕ್ಕಿಂತಲೂ ಹೀನಸ್ಥಿತಿ ಮಾದಿಗನಾಗಿ ಹೊಲೆಯಾಗಿ ಹುಟ್ಟುವುದು ಎಂದು ಉಲ್ಲೇಖಿಸಿದ್ದಾರೆ. ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕಥೆಯಲ್ಲಿ ಕಾಣಬಹುದು. "ವಿದ್ಯೆಯನ್ನು ಕಲಿಸಿದ ಗುರುವನ್ನೇ ನಿಂದಿಸುವ ವಾಯುಭೂತಿ

ಅವನ ಅಣ್ಣ ಅಗ್ನಿಭೂತಿ ಹೆಂಡತಿಯನ್ನು ಬೈದು ಒದೆಯುವನು. ಈ ಘೋರ ಪಾಪಕ್ಕಾಗಿ ವಾಯುಭೂತಿ ಕುಷ್ಠರೋಗಿಯಾಗಿ ಸತ್ತು, ಹೆಣ್ಣು ಕತ್ತೆಯಾಗಿ ಹುಟ್ಟುವನು. ಮುಂದಿನ ಜನ್ಮದಲ್ಲಿ ಹಂದಿಯಾಗಿ ಜನಿಸುವನು. ನಂತರ ನಾಯಿಯಾಗಿ ಹುಟ್ಟಿ ಮುಂದೆ ಹುಟ್ಟು ಕುರುಡಿಯಾಗಿ ಹುಟ್ಟಿ ಅಂತಿಮವಾಗಿ ಮಾದಿಗ ಮತ್ತು ಮಾದೆಗಿಯರಿಗೆ ಪೊಲತಿಯಾಗಿ ಜನಿಸುತ್ತಾನೆ. ಮಾದಿಗ ಅಥವಾ ದಲಿತ, ಹೊಲಸು ಪ್ರಾಣಿ ಎನಿಸಿಕೊಂಡ ಹಂದಿಗಿಂತಲೂ ಕೀಳಾಗಿ ಪರಿಣಮಿಸಿದ್ದಾನೆ"[೧೯]. ಇದು ಆ ಕಾಲದ ಸಮಾಜದ ದೃಷ್ಟಿಕೋನವಾಗಿ ಈ ಕಥೆಗಳಲ್ಲಿ ಕಂಡುಬರುತ್ತವೆ. ಹೀಗೆ ವಡ್ಡಾರಾಧನೆಯ ಇನ್ನಿತರ ಕಥೆಗಳಾದ ಗುರುದತ್ತ ಭಟ್ಟಾರಕರ ಕಡೆ, ವೃಷಭಸೇನ ರಿಸಿಯ ಕತೆ, ಕಾರ್ತಿಕ ಋಷಿಯ ಕತೆ ಭದ್ರಬಾಹು ಭಟರಾರ ಕತೆ, ಕೃತ್ತಿಕೆಯ ಕತೆ, ಸಿರಿದಿಣ್ಣ ಭಟಾರಕತೆ, ಚಾಣಕ್ಯ ರಿಸಿಯ ಕತೆ, ವಿದ್ಯುಚೋರ ರಿಸಿಯ ಕಥೆಗಳಲ್ಲಿ ಬಹುತೇಕ ಸಂದರ್ಭಗಳಲ್ಲಿ ದಲಿತ ಸಂವೇದನೆಯ ಚಿತ್ರಣಗಳನ್ನು ಗುರುತಿಸಬಹುದು.

ಶಿವಕೋಟ್ಯಾಚಾರ್ಯನ ತರುವಾಯ ಕನ್ನಡದ ಆದಿಕವಿ ಪಂಪನ ಕೃತಿಯಾದ ಪಂಪಭಾರತ ಮತ್ತು ಆದಿಪುರಾಣದ ಕೃತಿಗಳಲ್ಲಿ ದಲಿತನು ಮತ್ತು ದಲಿತ ಸಂಸ್ಕೃತಿಯ ವಿಷಯಕ್ಕೆ ಹೆಚ್ಚು ಆಸಕ್ತಿ ತೋರಿದಂತೆ ಕಂಡುಬರುವುದಿಲ್ಲ. ಆದರೆ ಪಂಪ ದಲಿತಪರ ಕಾಳಜಿಯೊಂದಿಗೆ ಪಾತ್ರಗಳ ಮೂಲಕ ಮೇಲ್ವರ್ಗವನ್ನು, ಪುರೋಹಿತಶಾಹಿ ವ್ಯವಸ್ಥೆಯನ್ನು ಹಾಗೂ ನಿರಂಕುಶ ಪ್ರಭುತ್ವವನ್ನು ಟೀಕಿಸಿದ್ದಾನೆ. ಅನ್ನದ ಋಣಕ್ಕಾಗಿ ಅರಿಕೇಸರಿಯನ್ನು ಹೊಗಳಿಬರೆದರೂ ತನ್ನ ಧೋರಣೆಯನ್ನು ಕರ್ಣನ ಪಾತ್ರದ ಮೂಲಕ ವ್ಯಕ್ತಪಡಿಸಿದ್ದಾರೆ. ದ್ರೋಣಾಚಾರ್ಯರು ತುಂಬಿದ ಸಭೆಯಲ್ಲಿಯೇ ಕರ್ಣನನ್ನು ಕುಲಹೀನ ಎಂದು ನಿಂದಿಸಿದಾಗ

"ಕುಲಮನೆ ಮುನ್ನ ಮುಗ್ಗಡಿಪಿರೇಂಗಳೇ? ನಿಮ್ಮ ಕುಲಂಗಳಾಂತು ಮಾರ್ ಮಲೆವನನಟ್ಟಿ ತಿಂಬುವೆ? ಕುಲಂ ಕುಲಮಲ್ತುಂ; ಛಲಂಕುಲಂಗುಣಂ ಕುಲಮಭಿಮಾನವೊಂದೆ ಕುಲಮಣ್ಬುಕುಲಂ! ಬಗೆವಾಗಳೀ ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗಂ"[೨೦]

ಎಂದು ಕರ್ಣ ಪ್ರತಿಕ್ರಿಯಿಸುತ್ತಾನೆ. ಕುಲದಿಂದ ವ್ಯಕ್ತಿಯನ್ನು ಅಳೆಯುವ ಬದಲು ಅರ್ಹತೆ ಸ್ವಭಾವಗಳಿಂದ ವ್ಯಕ್ತಿಯನ್ನು ಅಳೆಯಬೇಕೆಂದು ಕರ್ಣ ತನ್ನ ತಾನು ಸಮರ್ಥಿಸಿಕೊಳ್ಳುತ್ತಾನೆ. ಹೀಗೆ ಪಂಪಕವಿಯು ಕರ್ಣನ ಮೂಲಕ ವೈದಿಕ ಪರಂಪರೆ ಹುಟ್ಟುಹಾಕಿದ ಜಾತಿ ವ್ಯವಸ್ಥೆಯನ್ನು ಖಂಡಿಸುತ್ತಾನೆ. ಅಂತಯೇ ಹತ್ತನೇ ಶತಮಾನದ ರನ್ನ ಪೊನ್ನ ನಯಸೇನ, ಜನ್ನನಂತಹ ಹಲವು ಪ್ರಮುಖ ಕವಿಗಳು ತಮ್ಮ ಮೌಲ್ಯಯುತ ಕೃತಿಗಳಲ್ಲಿ ದಲಿತ ಸಂವೇದನೆಯ ನೆಲೆಯಲ್ಲಿ ಅಲ್ಲಲ್ಲಿ ಚರ್ಚಿಸಿದ್ದಾರೆ.

ಹನ್ನೆರಡನೆಯ ಶತಮಾನದವರೆಗೆ ದಲಿತರು ಬಾಯಿ ಇಲ್ಲದೆ ಬಲಿಪಶುಗಳಾಗಿದ್ದರು ಒಂದೆರಡು ಕಡೆ ದಲಿತಪರ ಧೋರಣೆಯನ್ನು ಕಂಡರೂ ದಲಿತನನ್ನು ಪ್ರಾಣಿಗಿಂತಲೂ ಕೀಳಾಗಿ ಕಂಡಿರುವುದನ್ನು ಅನೇಕ ಕೃತಿಗಳಲ್ಲಿ ಮನಗಾಣಬಹುದು. ೧೦ ಮತ್ತು ೧೧ನೇ ಶತಮಾನದ ಸಾಹಿತ್ಯ ಪಾಂಡಿತ್ಯ ಪ್ರಧಾನವಾಗಿದ್ದುದರಿಂದ ಪಾಂಡಿತ್ಯ ಪ್ರದರ್ಶನಕ್ಕೆ ಮೀಸಲಾಯಿತು. ಅಲ್ಲದೆ ದಲಿತನಿಗೆ ಅಕ್ಷರಭ್ಯಾಸ ನಿಷಿದ್ಧವಾಗಿದ್ದರಿಂದ ದಲಿತನ ಬಗ್ಗೆ ಬರೆದಿದ್ದರೂ ಅದು ಅವನನ್ನು ತಲುಪುವ ಸಂದರ್ಭವೇ ಬರಲಿಲ್ಲ. ಆದರೆ ೧೨ನೇ ಶತಮಾನದ ವಚನ ಸಾಹಿತ್ಯ ಜನಸಾಮಾನ್ಯರ ಸಾಹಿತ್ಯವಾಯಿತು. ಸಮಾಜದ ಅಂಕುಡೊಂಕನ್ನು ತಿದ್ದುವತ್ತ ವಾಲಿ ಸಮಾಜಮುಖಿಯಾಯಿತು. ದಲಿತರ ಬಗ್ಗೆ ಮಾತನಾಡುವುದೇ ಮೈಲಿಗೆ ಎನಿಸಿಕೊಂಡ ಆ ಸಂದರ್ಭದಲ್ಲಿ ದಲಿತರೇ ವಚನ ಚಳುವಳಿಯಲ್ಲಿ ಪಾಲ್ಗೊಂಡು ತಮ್ಮ ಬದುಕಿ ಪ್ರಜ್ಞೆಯನ್ನು ಹೊರಹಾಕಿದ್ದಾರೆ. ಕೇವಲ ದಲಿತರಷ್ಟೇ ಅಲ್ಲದೆ ೧೨ನೇ ಶತಮಾನದ ದಲಿತೇತರ ವಚನಕಾರರು ಸಹ ಶೋಷಿತ ಪರವಾದ ಧ್ವನಿ ಎತ್ತಿದ್ದಾರೆ.

ಅಲ್ಲಮಪ್ರಭು, ಸಿದ್ಧರಾಮ, ಹಡಪದಅಪ್ಪಣ್ಣ, ಅಂಬಿಗರ ಚೌಡಯ್ಯ, ಅನಾಮಿಕ ನಾಚಯ್ಯ, ಅಮುಗಿ ದೇವಯ್ಯ, ಉಗ್ಗಡಿಸುವ ಗಟ್ಟಿದೇವಯ್ಯ, ಎಲೆಗಾರ ರಾಮಣ್ಣ, ಏಲೇಶ್ವರ ಕೇತಯ್ಯ, ಒಕ್ಕಲಿಗ ಮುದ್ದಣ್ಣ, ಕೀಲಾರದ ಭೀಮಣ್ಣ, ಕೂಗಿನ ಮಾರಯ್ಯ, ಗಾಣದ ಕಣ್ಣಪ್ಪ, ಗಾವುದಿ ಮಾಚಯ್ಯ, ಜಗಳಗಂಟಿ ಕಾಮಣ್ಣ, ಜೇಡರ ದಾಸಿಮಯ್ಯ, ಜೋದರ ಮಾಯಣ್ಣ, ತಳವಾರ ಕಾಮಿದೇವ, ತುರುಗಾಹಿ ರಾಮಣ್ಣ, ಬಹುರೂಪಿ ಚೌಡಯ್ಯ, ಬಾಚಿಕಾಯಕದ ಬಸವಣ್ಣ, ಬಿಕ್ಷದ ಸಂಗಯ್ಯ, ಭಿಕಾರಿ ಭೀಮಯ್ಯ, ಮಡಿವಾಳ ಮಾಚಿದೇವ, ಲದ್ದೆಯ ಸೋಮಣ್ಣ ಉರಿಲಿಂಗಪೆದ್ದಿ, ವೀರ ಗೊಲ್ಲಾಳ, ಹೆಂಡದ ಮಾರಯ್ಯ, ಹೊಡೆಹುಲ್ಲ ಬಂಕಣ್ಣ ಇನ್ನೂ ಅನೇಕ ವಚನಕಾರರು ಕೆಳವರ್ಗದಿಂದ ಬಂದವರೇ ಆಗಿದ್ದಾರೆ. ಅಕ್ಕಮ್ಮ, ಅಮುಗೆ ರಾಯಮ್ಮ, ಲಕ್ಷ್ಮಮ್ಮ ಮಸಣ್ಣಮ್ಮ, ರೆಮ್ಮವ್ವೆ, ರೇಚವ್ವೆ, ಕಾಳವ್ವೆ, ಕಾಮಮ್ಮ, ಸೋಮಮ್ಮ, ಗೊಗ್ಗವ್ವೆ, ದುಗ್ಗಳೆ, ರೇಕಮ್ಮ, ಸತ್ಯಕ್ಕ, ಗಂಗಮ್ಮ ಇನ್ನು ಮುಂತಾದ ವಚನಕಾರ್ತಿಯರು ದುಡಿಯುವ ತಳವರ್ಗದಿಂದ ಬಂದವರಾಗಿದ್ದಾರೆ.

ದಲಿತ ಮತ್ತು ದಲಿತೇತರ ವಚನಕಾರರ ಮೂಲ ಉದ್ದೇಶವೆನೆಂದರೆ ಜಾತಿರಹಿತ ಸಮಾಜದ ಕಲ್ಪನೆ ಕರ್ನಾಟಕದ ಜನ ಸಮುದಾಯವನ್ನು ಆಕರ್ಷಿಸಿದ ರೀತಿ ಹಿಂದೆಂದೂ ಆಗದ ರೀತಿಯಲ್ಲಿತ್ತೆಂದು ಕಾಣುತ್ತದೆ. ವಿಶೇಷವಾಗಿ ಕೆಳವರ್ಗದ ಕೀಳುಜಾತಿಯ ಜನರನ್ನು ಜಾತಿರಹಿತ ಸಮಾಜದ ಕಲ್ಪನೆ ಬಹುವಾಗಿ ಆಕರ್ಷಿಸಿತು. ತಮ್ಮ ಜಾತಿಯ ಕಾರಣದಿಂದ ಕೀಳಾಗಿ ಪರಿಗಣಿತರಾಗಿದ್ದ ಜನಕ್ಕೆ ವಚನಯುಗ ಹೊಸದೊಂದು ಆಶಾಭಾವನೆಯನ್ನು ಮೂಡಿಸಿರಬೇಕು,

ತಾವೂ ಇತರ ಎಲ್ಲರೊಡನೆ ಸಮಾನತೆಯಿಂದ ಬದುಕುವ ಕಲ್ಪನೆಯೇ ಅಂತವರಲ್ಲಿ ಹೊಸ ಬೆಳಕನ್ನು ಹೊತ್ತಿಸಿರಬೇಕು. ವಚನಕಾರರ ಬಳಗವನ್ನು ಗಮನಿಸಿದರೆ ಸಾಕು ಈ ಅಂಶ ಪ್ರತಿಯೊಬ್ಬರಿಗೂ ಗೋಚರವಾಗುತ್ತದೆ. ಅಂತಯೇ ಅಂದಿನ ಸಮಾಜದ ಪಾರದರ್ಶಕತೆ ತಿಳಿದು ಬರುತ್ತದೆ. ಆಗಿನ ಸಮಾಜದ ಎಲ್ಲಾ ವರ್ಗ ಜಾತಿಗಳ ಜನರು ಇಲ್ಲಿ ಪ್ರತಿನಿಧಿಸಲ್ಪಟ್ಟಿದ್ದಾರೆ. ಜಾತಿ ಸಮಾಜದಲ್ಲಿ ಈ ಸಾಮುದಾಯಿಕ ಸಾಮರಸ್ಯ ಸಾಧನೆ ಸಾಮಾನ್ಯವಾದದ್ದಲ್ಲ.

ಬಸವಣ್ಣರಂತಹ ಹಲವಾರು ದಲಿತೇತರ ವಚನಕಾರರ ಆಶಯವು ಸಮ-ಸಮಾಜದ ಕನಸಾಗಿತ್ತು. ಈ ಶರಣಕುಲಕ್ಕೆ ಹೊಲೆಯ ಮಾದಿಗರಂತಹ ಯಾವ ಜಾತಿಯವರು ಬಂದರೂ ಅವರನ್ನು ತಮಗೆ ಸರಿ-ಸಮಾನವೆಂದು ಅರಿತಿದ್ದರು

> **"ಹೊಲೆಯ ಮಾದಿಗ ಭಕ್ತನಾದರೆ ಆತನ ಮನೆಯ ಸೊಣಗಂಗೆ**
> **ಪಂಚ ಮಹಾ ವಾದ್ಯದಲ್ಲಿ ಸನ್ಮಾನನೆಯ ಮಾಡನೆ? ನೆಲವ**
> **ನುಗ್ಗಡಿಪೆ 'ಉಘೇ, ಚಾಂಗುಭಲರೇ! ಎಂದು ಕುಲದಲಧಿಕ**
> **ಹಾರುವ ಸಿದ್ಧಿಗೆಯ್ಯಸಲೆ ನಿಮ್ಮ ಶರಣರ ಮಹಿಮೆ**
> **ಘನಕ್ಕೆ ಘನ ಎಲೆ ಕೂಡಲಸಂಗಮದೇವ ನಿಮ್ಮ**
> **ನಂಬದವ ಹೊಲೆಯ"**[೨೧]

ವಚನ ಸಾಹಿತ್ಯದ ತರುವಾಯ ಹರಿಹರ, ರಾಘವಾಂಕ, ಭೀಮಕವಿಗಳು ತಮ್ಮ ಸಾಹಿತ್ಯ ಕೃತಿಗಳಲ್ಲಿ ದಲಿತ ಸಂವೇದನೆಯ ನೆಲೆಯಲ್ಲಿ ಕೆಲವಾರು ಸನ್ನಿವೇಶಗಳನ್ನು ಚರ್ಚಿಸಿರುವುದು ಕಂಡುಬರುತ್ತದೆ. ಹರಿಹರನ ಬಸವದೇವರ ರಗಳೆ, ಕೆಂಬಾವಿ ಭೋಗಣ್ಣನ ರಗಳೆ, ಕೇಶಿರಾಜ ಜೊಮ್ಮಣ್ಣರ ಕತೆಗಳು, ಮಾದರ ಚನ್ನಯ್ಯನ ಕತೆ, ಶ್ವಪಚಯ್ಯನ ಕತೆ ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ಹಾಗೂ ಬಸವ ಪುರಾಣದಲ್ಲಿ ದಲಿತ ಸಂವೇದನೆಯ ನೆಲೆಗಳನ್ನು ಗುರುತಿಸಬಹುದು.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಎರಡು ಭಕ್ತಿ ಪಂಥಗಳು ಕಾಣಿಸಿಕೊಳ್ಳುತ್ತವೆ. ಒಂದು ಶರಣರ ಭಕ್ತಿಪಂಥ ಮತ್ತೊಂದು ದಾಸರ ಭಕ್ತಿಪಂಥ, ಶರಣರದು ಭಕ್ತಿ ಪಂಥವಾಗಿರುವುದರ ಜೊತೆಗೆ ಚಳುವಳಿಯಾಗಿ ಬೆಳೆದು ನಿಂತಿತು. ದಾಸರು ತಾಳ-ತಂಬೂರಿ ಹಿಡಿದು ಮನೆಮನೆಗೆ ತಿರುಗಿ ಜನಸಾಮಾನ್ಯರಿಗೆ ಭಕ್ತಿಯ ಪರಿಗಳನ್ನು ತಿಳಿಸಿಕೊಟ್ಟರು. ವಚನ ಚಳುವಳಿಯ ಸಂದರ್ಭದಲ್ಲಿ ಬಹುಸಂಖ್ಯೆಯ ಜನ ಕೆಳವರ್ಗದ ವಚನಕಾರರಾಗಿದ್ದಾರೆ. ದಾಸ ಪಂಥದಲ್ಲಿ ಕೇವಲ ಕನಕದಾಸರು ಮಾತ್ರ ಕೆಳವರ್ಗದ ಪ್ರತಿನಿಧಿಯಾಗಿದ್ದರು, ವ್ಯಾಸಕೂಟವನ್ನು ಧಿಕ್ಕರಿಸಿ ದಾಸಕೂಟ

ಹುಟ್ಟಿಕೊಂಡದ್ದು ಎಷ್ಟು ಸ್ವಾಗತಾರ್ಹ ಸಂಗತಿಯೋ ದಾಸಕೂಟದಲ್ಲಿದ್ದ ದ್ವಂದ್ವಗಳನ್ನು ಎತ್ತಿ ತೋರಿಸಿ ಪ್ರತಿಭಟನೆ ಮಾಡಿದವರಲ್ಲಿ ಕನಕದಾಸನ ಪಾತ್ರ ತುಂಬ ಮಹತ್ವದ್ದಾಗಿದೆ. ರಾಮಧಾನ್ಯ ಚರಿತ್ರೆಯಂತಹ ಕಾವ್ಯಕೃತಿಯಲ್ಲಿ ವರ್ಗಸಂಘರ್ಷದ ಆಶಯಗಳನ್ನು ಕಟ್ಟಿಕೊಟ್ಟವರು. ಕುಲಕುಲವೆಂದು ಹೊಡೆದಾಡದಿರಿ' ಎಂದು ಸಮಾಜದಲ್ಲಿನ ಅಸಮಾನತೆಯನ್ನು ಕುರಿತಂತೆ ಮಾತನಾಡಿ ಸಮಾನತೆಯ ಕನಸಿನ ಮೊಳಕೆ ಹುಟ್ಟಿಸಿದವರು ಇವರಾಗಿದ್ದಾರೆ, ಇವರ ಕೀರ್ತನೆಗಳಲ್ಲಿ ಹಾಗೂ ಸಾಹಿತ್ಯ ಕೃತಿಗಳಲ್ಲಿ ದಲಿತ ಸಾಹಿತ್ಯದ ಸಂವೇದನೆಗಳ ನೆಲೆಗಳನ್ನು ಗುರುತಿಸಬಹುದಾಗಿದೆ. ದಾಸ ಸಾಹಿತ್ಯದ ತರುವಾಯ ಕುಮಾರವ್ಯಾಸ, ಲಕ್ಕಣದಂಡೇಶ, ಮಗ್ಗೆಯ ಮಾಯಿದೇವನ ಶತಕಗಳು, ಮಂಗರಸನ ಸಾಹಿತ್ಯ ಕೃತಿಗಳಲ್ಲಿ ಹಾಗೂ ನಂಜುಂಡನ ರಾಮನಾಥ ಚರಿತದಲ್ಲಿ ದಲಿತ ಸಂವೇದನೆಯ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಸರ್ವಜ್ಞನ ವಚನಗಳಲ್ಲೂ ಸಹ ದಲಿತ ಸಂವೇದನೆಯಿದೆ. ಈ ಸಮಾಜದಲ್ಲಿ ಬದುಕಿರುವ ಜನರನ್ನು ಅನ್ಯಾಯವಾಗಿ ಬಡಜನರನ್ನಾಗಿ ಮಾಡಿ ಹಾಳು ಮಾಡುವವರು ಹೊಲೆಯರಿಗಿಂತ ಕೀಳಾದವರೆಂದು ತಮ್ಮ ವಚನಗಳಲ್ಲಿ ಹೇಳಿದ್ದಾನೆ.

"ಸತ್ತುದನ್ನು ತಿಂಬಾತ ಎತ್ತಣದ ಹೊಲೆಯನು
ಬತ್ತಿ ಜೀವವನ್ನು ಕೊಣಿ ಕೊಣಿದು ತಿಂಬಾತ
ನುತ್ತಮದ ಹೊಲೆಯ ಸರ್ವಜ್ಞ"[೨೨]

ಇವರ ಪ್ರಕಾರ ನಿಜವಾದ ಯೋಗಿಗೆ ಕುಲ ಎಂಬುದಿಲ್ಲ. ಅಷ್ಟೇ ಅಲ್ಲ ಸ್ವರ್ಗದಲ್ಲಿ ಹೊಲೆಗೇರಿ ಎಂಬುದೇ ಇಲ್ಲ. ಜ್ಞಾನಿಗಳು ಕಲ್ಪಿಸಿರುವ ದಿವ್ಯ ಲೋಕದಲ್ಲಿ ಹೊಲೆಯಗೇರಿಯಿಲ್ಲ. ಹೊಲೆಗೇರಿ ಮನುಷ್ಯ ನಿರ್ಮಿಸಿದ್ದು, ಒಂದು ಕೃತಕ ವ್ಯವಸ್ಥೆ ಎಂದಿದ್ದಾರೆ. ಈ ಬಗೆಯ ಹಲವಾರು ವಚನಗಳಲ್ಲಿ ದಲಿತ ಸಾಹಿತ್ಯದ ನೆಲೆಗಳನ್ನು ಕಾಣಬಹುದಾಗಿದೆ.

ಹದಿನೆಂಟು-ಹತ್ತೊಂಬತ್ತನೆಯ ಶತಮಾನದ ಸಂದರ್ಭದಲ್ಲಿ ನೂರಾರು ನದಿಗಳಂತೆ ಹರಿದು ಬಂದ ತತ್ತ್ವಪದ ಸಾಹಿತ್ಯ ಪರಂಪರೆಯಲ್ಲಿ ಬಹು ಸಂಖ್ಯೆಯ ಅನುಭಾವಿ ಕವಿಗಳು ಕೆಳವರ್ಗದವರೇ ಆಗಿದ್ದಾರೆ. ಶಿಶುನಾಳ ಶರೀಫ, ಕೈವಾರ ನಾರಣಪ್ಪ, ರಾಮಪುರದ ಬಕ್ಕಪ್ಪ, ಕಡಕೋಳ ಮಡಿವಾಳಪ್ಪ, ಚೆನ್ನೂರ ಜಲಾಲಸಾಬ, ಕಡ್ಲೆವಾಡ ಸಿದ್ದಪ್ಪ, ಮೋಚನಹಳ್ಳಿ ಹಸನಸಾಬ, ದೇಗಾವಿ ಗುಂಡಪ್ಪ, ನರೋಣಾದ ಹೈದರಲಿ, ರಸ್ತಾಪುರ ಭೀಮಕವಿ, ವಡಗೇರಿ ಭೀಮಶ್ಯಾ, ಕಾಳಗಿ ಮಶಾಕಸಾಬ, ಅಮ್ಮಾಪುರದ ಹನುಮಂತ, ಬೇನೂರ ಭಗವಾನ್‌ಸಿಂಗ್, ಸಿರಗಾಪುರ ಬಂಡೆಪ್ಪ, ಜಂಬಗಿ ಶರಣ, ದೇಗಾವಿ ಹಜರತ್‌ಸಾಬ, ಸಾವಳಗಿ ಮಹಮ್ಮದ್

ಬೆಡಜುರಗಿ ಬಕ್ಸಾರಿ, ಸಲ್ಲರದ ಸಿದ್ರಾಮಪ್ಪ, ಕೋನಾಪುರದ ರಾಮಪ್ಪ, ಸಲ್ಲರದ ಲಕ್ಷ್ಮಣ, ಮಹಾಗಾಂವ ಮೀರಸಾಬ, ಯನಗುಂಟೆ ವೀರಮ್ಮ, ರಾಯಚೂರ ಹನುಮಂತಪ್ಪ, ನಿಂಬೋಳಿ ತಿಪ್ಪಣ್ಣ, ಗಬ್ಬೂರು ಹಂಪಣ್ಣ, ಅರವಲಿ ಬಿಜಲಿ, ವೆಂಕಟಾಪುರದ ಖೇಮಣ್ಣ, ಅಯ್ಯಪ್ಪ ಪಂಥೋಜಿ, ತಾಳಪಲ್ಲಿ ವೆಂಕಯ್ಯ, ಗಬ್ಬೂರ ಮಾರ್ತಾಂಡಪ್ಪ, ಹೊಸೂರು ತಿಪ್ಪಣ್ಣ, ಕಲ್ಮಲಾದ ತಾಯಣ್ಣ ಹೀಗೆ ನೂರಾರು ತತ್ತ್ವಪದಕಾರರು ಕೆಳವರ್ಗದಿಂದ ಬಂದವರು. ಈ ತತ್ತ್ವಪದಕಾರರಲ್ಲಿ ಕೆಳವರ್ಗ–ಕೆಳಜಾತಿ ಹಾಗೂ ಅಲ್ಪಸಂಖ್ಯಾತ ಸಮುದಾಯದ ಪ್ರತಿಭೆಗಳಿರುವುದು ಮಹತ್ವದ ಸಂಗತಿಯಾಗಿದೆ. ತತ್ವಪದಕಾರರು ತಮ್ಮ ಅನುಭವದ ಕಥನದೊಂದಿಗೆ ಸಾಮಾಜಿಕ ವ್ಯವಸ್ಥೆಯಲ್ಲಿನ ಅಸಮಾನತೆಯ ತಲ್ಲಣಗಳ ಕುರಿತಂತೆ ಹಾಡಿ ಜನಸಾಮಾನ್ಯರಲ್ಲಿ ಸಮ–ಸಮಾನತೆಯ ಜಾಗೃತಿಯನ್ನುಂಟು ಮಾಡುವ ಕಾಯಕದಲ್ಲಿ ತೊಡಗಿಕೊಳ್ಳುತ್ತಾರೆ.

"ಪಂಪ, ರನ್ನ, ಬಸವ, ಅಲ್ಲಮ, ಅಕ್ಕ ಮೊದಲಾದ ವಚನಕಾರರು, ಕನಕದಾಸರು, ಕುಮಾರವ್ಯಾಸ ಹಾಗೂ ತತ್ತ್ವಪದಕಾರರು ದಲಿತ ಸಂವೇದನೆಯನ್ನು ರೂಪುಗೊಳಿಸುವ ಸಂದರ್ಭದಲ್ಲಿ ಹಲ–ಕೆಲವು ನೆಲೆಗಳಲ್ಲಿ ಕಾಡುವುದು ಮತ್ತು ಅವರಿಂದಲೇ ಪ್ರೇರಿತವಾದ ಹಲವು ಸಿದ್ಧಾಂತಗಳ ಹಿನ್ನೆಲೆಯಲ್ಲಿ ಆಧುನಿಕತೆಯಲ್ಲಿ ಸಮನ್ವಯಗೊಳಿಸಿದ್ದಾರೆ".[೨೩] ಇದರಿಂದ ಕನ್ನಡ ಸಾಹಿತ್ಯವು ೧೯ನೇ ಶತಮಾನದಿಂದ ಹಿಡಿದು ೨೧ನೇ ಮಹಿಳಾ ಸಾಹಿತ್ಯದ ವರೆಗೂ ಕನ್ನಡ ಸಾಹಿತ್ಯದೊಟ್ಟಿಗೆ ದಲಿತ ಸಾಹಿತ್ಯದ ಸಂವೇದನೆಯ ತರಂಗಗಳು ಬಿತ್ತರಗೊಂಡವು.

ಹೊಸಗನ್ನಡ ಅರುಣೋದಯದ ಸಾಹಿತ್ಯದ ಸಂದರ್ಭದಲ್ಲಿ ಬಿ.ಎಂ.ಶ್ರೀಯಿಂದ ಮೊದಲಗೊಂಡು ಕುವೆಂಪು, ಬೇಂದ್ರೆ, ಮಧುರಚನ್ನ, ವಿ.ಕೃ. ಗೋಕಾಕ್, ಡಿ.ವಿ.ಜಿ., ಪು.ತಿ.ನ., ಶಿವರಾಮಕಾರಂತ, ಅನಕೃ, ತರಾಸು, ಮೊದಲಾದ ಹಲವಾರು ನವೋದಯ ಕವಿಗಳಾದಿಯಾಗಿ ಕಥೆ, ಕಾವ್ಯ, ಕಾದಂಬರಿ, ನಾಟಕ, ಪ್ರವಾಸಕಥನ, ಆತ್ಮಕಥನ, ವಿಮರ್ಶೆಯ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ನವೋದಯದ ಕವಿಗಳಾಗಿಯೂ ನವ್ಯ, ಪ್ರಗತಿಶೀಲ ಸಾಹಿತ್ಯ ಕೃಷಿ ಮಾಡಿದ್ದಾರೆ. ಇಂತಹ ಸಾಹಿತಿಗಳ ಸಾಹಿತ್ಯ ಕೃತಿಗಳಲ್ಲಿ 'ದಲಿತ ಸಂವೇದನೆಯ' ಚಿತ್ರಣಗಳನ್ನು ಕಾಣಬಹುದು. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಶೂದ್ರತಪ್ಪಸ್ವಿ, ಜಲಗಾರದಂತಹ ಸಾಹಿತ್ಯ ಕೃತಿಗಳಲ್ಲಿ ಅಗಾಧ ದಲಿತ ಸಂವೇದನೆ ಕಂಡುಬರುತ್ತದೆ. ಶಿವರಾಮ ಕಾರಂತರ ಚೋಮನ ದುಡಿಯು ಬಹಳ ಪ್ರಮುಖ ದಲಿತ ಸಂವೇದನೆಯ ಕೃತಿಯಾಗಿ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ದಲಿತೇತರ ಸಾಹಿತ್ಯ ಕೃತಿಗಳಲ್ಲಿ ದಲಿತ ಸಾಹಿತ್ಯದ ಆಶಯ ಹಾಗೂ ಧೋರಣೆಗಳನ್ನು ಗುರುತಿಸಬಹುದು.

“ಶ್ರೀ ಸಾಮಾನ್ಯ, ನೇಗಿಲಯೋಗಿ, ಗೊಬ್ಬರಗಳೆಲ್ಲಾ ಅವರ ಕಾವ್ಯದ ಕಲ್ಪನೆಗಳಾದಂತೆಯೇ ಜಲಗಾರ, ಶೂದ್ರತಪಸ್ವಿ, ಏಕಲವ್ಯ ಮೊದಲಾದವರು ಸಾಂಸ್ಕೃತಿಕ ನಾಯಕರಾಗಿ ನ್ಯಾಯದ ಹರಿಕಾರರಾಗಿ ಸಾಹಿತ್ಯದಲ್ಲಿ ಪ್ರತಿಸ್ಥಾಪಿಸಲ್ಪಟ್ಟರು. ಇವರೊಂದಿಗೆ ಗುತ್ತಿ–ತಿಮ್ಮಿ, ಐತ–ಪೀಂಚಲುವಿನಂತಹ ದಲಿತ–ಶೂದ್ರ ಪಾತ್ರಗಳು ಕಾದಂಬರಿಯ ಮುಖ್ಯ ಪಾತ್ರಗಳಾಗಿಯೂ ಸಾಹಿತ್ಯವನ್ನು ಸಂಚಲವನ್ನು ಸೃಷ್ಟಿಸಿದವು. ಇಲ್ಲೆಲ್ಲ ಕುವೆಂಪುವಿನ ಆದರ್ಶ ಮತ್ತು ಕನಸುಗಾರಿಕೆಯಲ್ಲಿ ಅಂಬೇಡ್ಕರ್ ಚಿಂತನೆಗಳ ಫಸಲನ್ನೇ ಕಾಣಬಹುದು”.[೨೪]

ಕನ್ನಡದ ಬಹಳಷ್ಟು ದಲಿತ–ಬಂಡಾಯದ ಸಾಹಿತಿಗಳಿಗೆ ಲೇಖಕರಿಗೆ ಮಾನವಪರ ಕಾಳಜಿಯುಳ್ಳ ಎಲ್ಲರಿಗೂ ಕುವೆಂಪು ಬದ್ಧತೆಯ ಪ್ರತಿಕ್ರಿಯೆಯಾಗಿಯೇ ಕಾಣಿಸುತ್ತಾರೆ. ಬಂಡಾಯ ದಲಿತ ಚಳುವಳಿಯ ಆರಂಭದ ಕಾಲದಲ್ಲಿಯೂ ಅವರಿಂದ ನೈತಿಕ ಸ್ಥೈರ್ಯವನ್ನು ಸಾಹಿತ್ಯ ಸಂಘಟನೆಯು ಪಡೆದುಕೊಂಡಿತ್ತೆನ್ನುವುದು ಅಂತೆಯೇ ಮೇಲೆ ಗಮನಿಸಿದ ಆಧುನಿಕ ಸಾಹಿತ್ಯದ ಎಲ್ಲಾ ಘಟ್ಟಗಳಿಗೂ ಸಾಕ್ಷಿಯಾದಂತೆ ಬದುಕಿದ ಕುವೆಂಪು ತಮ್ಮ ನಂಬಿಕೆ ಆಲೋಚನೆಗಳಿ–ಗನುಗಣವಾಗಿಯೇ ಬದುಕಿದವರು.

ಕುವೆಂಪು ಅವರಿಗಿಂತ ಮೊದಲೇ ‘ಕನ್ನಡ ದಲಿತ ಸಾಹಿತ್ಯದ ಲೋಕದಲ್ಲಿ ಮೊದಲ ತಲೆಮಾರಿನ ದಲಿತ ಸಾಹಿತಿಗಳನ್ನು ಹೆಸರಿಸಬಹುದು. ಈ ಮೊದಲ ತಲೆಮಾರಿನ ದಲಿತ ಸಾಹಿತಿಗಳು ಮೊಟ್ಟಮೊದಲ ಬಾರಿಗೆ ಅಕ್ಷರ ಕ್ರಾಂತಿ ಮಾಡುವುದರ ಮುಖಾಂತರ ದಲಿತ ಸಮುದಾಯದವರಲ್ಲಿ ಜಾಗೃತಿಯ ಪ್ರಜ್ಞೆಯನ್ನು ಮೂಡಿಸಿದವರು. ಅವರುಗಳಲ್ಲಿ ದೇವರಾಯ ಇಂಗಳೆ, ಡಿ. ಗೋವಿಂದದಾಸ್, ಸೋಸ್ಲೆ.ಎಸ್.ಸಿದ್ದಪ್ಪ, ಬಿ.ಶ್ಯಾಮಸುಂದರ, ಜಿ. ವೆಂಕಟಯ್ಯ, ಎನ್. ನರಸಿಂಹಯ್ಯ, ಕುಮಾರ ಕಕ್ಕಯ್ಯ ಪೋಳ, ಸಿ.ಎಂ. ದೇವೇಂದ್ರ ನಾಯಕ್ ಇವರುಗಳು ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಹಾಗೂ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಜನಿಸಿದ ಇವರು ಶೋಷಿತರ ಪರವಾಗಿ, ಬಹಳ ದೊಡ್ಡ ಧ್ವನಿಯಾಗಿ ಕೆಲಸ ಮಾಡಿದವರು. ಆಧುನಿಕ ಕನ್ನಡ ಸಾಹಿತ್ಯದ ಹೊಸಗನ್ನಡದ ಅರಣೋದಯ ಕಾಲ ಘಟ್ಟದಲ್ಲಿಯೆ ಸಾಮಾಜಿಕ ಆರೋಗ್ಯವನ್ನು ಬಯಸುವ ಸಮ–ಸಮಾಜದ ಹಿನ್ನೆಲೆಯಲ್ಲಿ ಸಾಹಿತ್ಯ ಕೃಷಿ ಮಾಡಿದವರು ಇವರಾಗಿದ್ದಾರೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ನಿಕಟವರ್ತಿಗಳಾಗಿದ್ದ ಬೆಳಗಾವಿಯ ಜಿಲ್ಲೆಯ ಇಂಗಳೆ ಗ್ರಾಮದ ಶ್ರೀದೇವರಾಯ ಇಂಗಳೆಯವರು ಬಡತನ, ಅಪಮಾನ, ಹಿಂಸೆಗಳನ್ನು ಅನುಭವಿಸುತ್ತಲೇ ಅಕ್ಷರ ಕಲಿತವರು. ಶಿಕ್ಷಣದ ಅರಿವಿಲ್ಲದ ಮುಗ್ಧ ದಲಿತರಿಗೆ ಅರಿವು

ಮೂಡಿಸಲು ಬರವಣಿಗೆಯನ್ನು ಮಾಧ್ಯಮವಾಗಿ ಬಳಸಿಕೊಂಡವರು. ಬೀದಿನಾಟಕಗಳನ್ನು ಸರಳ ಕವಿತೆಗಳನ್ನು ಬರೆದು ಅವುಗಳನ್ನು ದಲಿತಕೇರಿಗಳಲ್ಲಿ ಹಾಡಿ ಸ್ವಾಭಿಮಾನದ ಕಿಡಿಯನ್ನು ಹಚ್ಚಿದವರು. ಯಲ್ಲಮ್ಮ, ರೈತನ ಮಗಳು, ಸೂಳೆಯ ಮಗಳು ಎಂಬ ಮೂರು ಮಹತ್ವದ ನಾಟಕಗಳನ್ನು ಬರೆದಿದ್ದಾರೆ.

ಶ್ರವಣಬೆಳಗೊಳದ ಸಮೀಪದ ದಮ್ಮನಿಂಗಳದ ಡಿ. ಗೋವಿಂದ ದಾಸ್ ಅವರು ಕಡುಕಷ್ಟದಲ್ಲಿಯೇ ಅಕ್ಷರ ಕಲಿತು ಜಾಗೃತರಾಗಿ ಇಂಟರ್‌ಮೀಡಿಯಟ್‌ವರೆಗೂ ಓದಿ ನೊಂದವರ ಪರ ಕಾಳಜಿಯಿಂದ ಸಾಮಾಜಿಕ ಸುಧಾರಣೆಯ ಕೆಲಸಗಳನ್ನು ಕೈಗೊಳ್ಳುತ್ತ ಸಾಹಿತ್ಯ ಕೃಷಿ ಮಾಡಿದ್ದಾರೆ. ಹರಿಜನಾಭ್ಯುದಯ ಎಂಬ ಕವನ ಸಂಕಲನ, ನಡುನೀರ ಹಡಗು ಎಂಬ ನಾಟಕ, ಅಂಬೇಡ್ಕರ್ ಅವರ ಜೀವನ ಚರಿತ್ರೆ ಮತ್ತು ಆತ್ಮಕಥನವನ್ನು ರಚನೆ ಮಾಡಿದ್ದಾರೆ. ಈ ಮುಖಾಂತರ ಮೊದಲ ತಲೆಮಾರಿನ ದಲಿತ ಸಾಹಿತಿಗಳಲ್ಲಿ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ.

ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೋಕಿನ ಸೋಸಲೆ ಎಂಬ ಗ್ರಾಮದ ಬಡಕುಟುಂಬದಲ್ಲಿ ಜನಿಸಿದ ಇವರು ಬಹಳ ಕಷ್ಟದಲ್ಲಿಯೇ ಓದಿ ದಲಿತರ ಪಾಲಿಗೆ ಆಶಾಕಿರಣರಾಗಿದ್ದಾರೆ. ಇವರು ಹದಿನಾರು ಕೃತಿಗಳನ್ನು ರಚಿಸಿದ್ದಾರೆ. ಇವುಗಳು "ದಲಿತ ಸಮುದಾಯಕ್ಕೆ ಸಾಂಸ್ಕೃತಿಕ ಘನತೆ ಮತ್ತು ಆತ್ಮವಿಶ್ವಾಸವನ್ನು ತಂದು ಕೊಡುವಂತಹವು" ಇವುಗಳಲ್ಲಿ ಚಾಂಗದೇವನ ಚರಿತೆ, ಆಳುವ ಮಹಾಸ್ವಾಮಿಯವರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಗೋವುಗಳ ಗೋಳಾಟ, ಮತ ಸುಧಾರಣೆ, ಬಡವನ ಭಾಗ್ಯದಂತಹ ಕೃತಿಗಳನ್ನು ದಲಿತ ಸಂವೇದೆಯ ನೆಲೆಯಲ್ಲಿ ಗುರುತಿಸಬಹುದಾಗಿದೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಹೆಮ್ಮನಹಳ್ಳಿಯಲ್ಲಿ ಜನಿಸಿದ ಜಿ. ವೆಂಕಟಯ್ಯನವರು ಗೋಪಾಲಸ್ವಾಮಿ ಅಯ್ಯರ್, ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದವರು. ಈ ಹಿನ್ನೆಲೆಯಿಂದ ದಲಿತ ಜನಾಂಗದ ಅಭಿವೃದ್ಧಿಗೆ ಸಂಕಲ್ಪ ಮಾಡುತ್ತಾರೆ. ಇವರು ಕಥೆ, ಕಾದಂಬರಿ, ಪ್ರವಾಸ ಕಥನ ಹೀಗೆ ಹತ್ತು ಕೃತಿಗಳನ್ನು ರಚನೆ ಮಾಡಿದ್ದಾರೆ. ಮುರಿದ ಮದುವೆ, ಚಿನ್ನದ ಗಿರಿಯಾತ್ರೆ, ಬುದ್ಧದೇವ, ನೊಂದಜೀವ, ಚಂದನದ ಕೊರಡು ಪ್ರಮುಖ ಕೃತಿಗಳಾಗಿವೆ. ನೊಂದಜೀವ ಕಾದಂಬರಿಯನ್ನು ಕುರಿತಂತೆ ತ.ಸು.ಶಾಮರಾಯರ ಅಭಿಪ್ರಾಯ ಶ್ಲಾಘನೀಯ : "ನೊಂದ ಜೀವವನ್ನು ಓದಿದ ಮೇಲೆ ನಮ್ಮ ಕಣ್ಣಿಗೆ ಕಟ್ಟಿ ನಿಲ್ಲುವುದು ಇಲ್ಲಿಯ ಪ್ರಣಯ ಜೀವನವಲ್ಲ. ಅಜ್ಞಾನದ ಕುಂಡದಲ್ಲಿ ಅರೆಬೆಂದು ನಿಂತಿರುವ ನೊಂದಜೀವ. ಜಿ.ವೆಂಕಟಯ್ಯನವರು ತಮ್ಮ ಕಾದಂಬರಿಯಲ್ಲಿ ಸಾಹಿತ್ಯ ಜಗತ್ತಿಗೆ ಅಜ್ಞಾತರಾದ ಹರಿಜನರ ನಿತ್ಯ ಜೀವನದ ನೈಜ ಚಿತ್ರವನ್ನು

ಕನ್ನಡಿಸಿದ್ದಾರೆ. ಅನುಭವವೇದ್ಯವಾದ ಸತ್ಯ ಜೀವವಾಗಿ ರೂಪ ತಾಳಿದೆ ಇಲ್ಲಿ"[೨೫] ಎಂದು ಜಿ.ವೆಂಕಟಯ್ಯನವರ ಸೃಜನಶೀಲ ದಲಿತಸಾಹಿತ್ಯದ ಸಂವೇದನೆಯ ನೆಲೆಗಳನ್ನು ತ.ಸು.ಶಾಮರಾಯರು ಗುರುತಿಸಿದ್ದಾರೆ.

ಬಿ. ಶ್ಯಾಮಸುಂದರ್ ಅವರು ಮಹಾರಾಷ್ಟ್ರದ ಔರಂಗಬಾದ್‌ನಲ್ಲಿ ಜನಿಸಿದರು. ಇವರು ಬಾಬಾಸಾಹೇಬ ಅಂಬೇಡ್ಕರ್ ಅವರ ಕಿರಿಯ ಸಮಕಾಲೀನರಾಗಿ ಶೋಷಿತ ವರ್ಗದ ಪರವಾಗಿ ಹೋರಾಡಿದ ಧೀಮಂತ ನಾಯಕರಾಗಿದ್ದಾರೆ. "ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಈ ಮೂರು ರಾಜ್ಯಗಳಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರ ತತ್ವಚಿಂತನೆಗಳನ್ನು ಪ್ರಚುರ ಪಡಿಸಿದವರು. ಸಾಂಪ್ರದಾಯಿಕ ವ್ಯವಸ್ಥೆಯನ್ನು ಧಿಕ್ಕರಿಸುವುರ ಮೂಲಕ ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ದುಡಿದವರು. ಸಾಮಾಜಿಕ ನೆಲೆಯಲ್ಲಿ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗೆ ಸವಾಲಾಗಿ ನಿಂತವರು. ಸಮಾಜದ ಕಟ್ಟಕಡೆಯ ಮನುಷ್ಯರ ಪರವಾಗಿ ಧ್ವನಿ ಎತ್ತಿದ ವೀರ ಹೋರಾಟಗಾರ, ಸಮಾಜ ಸುಧಾರಕ ಹಾಗೂ ಸಾಹಿತಿಯಾಗಿ ಬಹುಭಾಷಾ ಪಂಡಿತರು ಆಗಿದ್ದಾರೆ".[೨೬] ಇವರು ಇಂಗ್ಲೀಷ್ ಸಾಹಿತ್ಯದಲ್ಲಿ ಮತ್ತು ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಕೃತಿಗಳನ್ನು ರಚಿಸಿದ್ದಾರೆ. They Burn, Mool Bharati's (ಮೂಲ ಭಾರತೀಯರು) ದೀಕ್ಷಾ, ನಾಲ್ಕು ಅವಶ್ಯಕ ಬೇಡಿಕೆಗಳು, ದಲಿತಸ್ಥಾನ ಮುಂತಾದ ಕೃತಿಗಳು ಮುಖ್ಯವಾಗಿವೆ.

ಮೊದಲ ತಲೆಮಾರಿನ ಮತ್ತೊಬ್ಬ ದಲಿತ ಕಾದಂಬರಿಕಾರರೆಂದರೇ ಎನ್. ನರಸಿಂಹಯ್ಯನವರು ಇವರನ್ನ ಪತ್ತೆದಾರಿ ಕಾದಂಬರಿಕಾರರೆಂದೇ ಕನ್ನಡ ಸಾಹಿತ್ಯ ರಂಗದಲ್ಲಿ ಗುರುತಿಸಿಕೊಂಡವರಾಗಿದ್ದಾರೆ. ಎನ್. ನರಸಿಂಹಯ್ಯನವರು ಬೆಂಗಳೂರಿನ ಸುಲ್ತಾನ್ ಪೇಟೆಯಲ್ಲಿ ಜನಿಸಿದರು. ಶಾಲೆ ಕಲಿತದ್ದು ನಾಲ್ಕನೇ ತರಗತಿ ಆದರೆ ಬರೆದಿದ್ದು ೫೫೦ಕ್ಕೂ ಅಧಿಕ ಕಾದಂಬರಿಗಳು. ಇವರ ಕಾದಂಬರಿಗಳನ್ನು ೫ ವಿಧಗಳಾಗಿ ಅಧ್ಯಾಯನ ಮಾಡಬಹುದು. ಎನ್. ನರಸಿಂಹಯ್ಯನವರ ಸಾಹಸ ಪತ್ತೇದಾರಿ ಕಾದಂಬರಿಗಳು, ಪರಿಶೋಧನಾ ಚತುರತೆಯ ಪತ್ತೇದಾರಿ ಕಾದಂಬರಿಗಳು, ವಿಕ್ರಮಪತ್ತೇದಾರಿ ಕಾದಂಬರಿಗಳು ಹಾಗೂ ಸಾಮಾಜಿಕ ಕಾದಂಬರಿಗಳು ಎಂದು ವಿಂಗಡಿಸಿ ಈ ಕಾದಂಬರಿಗಳು ಬಹುತೇಕ ಶೋಷಿತ ನೆಲೆಯಲ್ಲಿನ ಪ್ರತಿಯೊಂದು ರಂಗಗಳನ್ನು ಕಾದಂಬರಿಯ ಪ್ರಕಾರದಲ್ಲಿ ಸೆರೆಹಿಡಿದಿದ್ದಾರೆ.

ಹೀಗೆ ಮೊದಲ ತಲೆಮಾರಿನಿಂದ ದಲಿತ ಸಾಹಿತಿಗಳು ನವೋದಯ ಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯ ಕೃಷಿ ಮಾಡಿದ್ದರೂ ಇವರು ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳಲಿಲ್ಲ.

ಅಂದರೆ ಅಂದಿನ ಸಾಮಾಜಿಕ ವ್ಯವಸ್ಥೆಯ ಅತಿಕ್ರಮಣ ವ್ಯವಸ್ಥೆಯನ್ನು ಗುರುತಿಸಬಹುದು. ಏಕೆಂದರೆ ಜಾತಿಯತೆಯ ಸೋಂಕು ಮೊದಲ ತಲೆಮಾರಿನ ದಲಿತ ಸಾಹಿತಿಗಳ ಮೇಲೆ ಗಾಢವಾಗಿ ನೋಯಿಸಿರುವುದನ್ನು ಗಮನಿಸಬಹುದು. ಉದಾ: ಎನ್. ನರಸಿಂಹಯ್ಯನವರ ಕಾದಂಬರಿಗಳನ್ನು ಓದಿದ ಕೆಲವರು ಇವರನ್ನು ಮಾತನಾಡಿಸಲು ಹೋದಾಗ "ನನ್ನನ್ನು ದಲಿತ ಅಂತ ಯಾಕೆ ಗುರುತಿಸುತ್ತೀರಿ ಎಂದು ಹಲವು ಪ್ರಶ್ನೆಗಳ ಸುರಿಮಳೆಯನ್ನು ಸುರಿಯುತ್ತಾರೆ".[೨೭] ಜೀವನದ ಸಂಕಷ್ಟಗಳ ನಡುವೆ ಬದುಕಿದ ನರಸಿಂಹಯ್ಯನವರು ಸಹಜ ಪ್ರತಿಭೆಗಳನ್ನು ಕಾಲಕಸದಂತೆ ಕಾಣುವ ಈ ಕ್ರೂರ ಜಾತಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸುತ್ತಾರೆ.

ನವೋದಯದ ಸಂದರ್ಭದಲ್ಲಿ ಚೋಮನದುಡಿ, ಕಾನೂರು ಹೆಗ್ಗಡತಿ, ಹೇಮಾವತಿ, ಮಾದನಮಗಳು, ಗ್ರಾಮಾಯಣ, ಮಲೆಗಳಲ್ಲಿ ಮದುಮಗಳು, ಪ್ರಗತಿಶೀಲ ಘಟ್ಟದ ನೀ ನನ್ನ ಮುಟ್ಟಬೇಡ, ದಂಬನನಾಯಿ, ಹರಿಜನಾಯಣ, ನವ್ಯದ ಭಾರತೀಪುರ, ದಾಟು, ಬಂಡಾಯ ಘಟ್ಟದ ಒಂದು ಊರಿನ ಕತೆ, ವೈಶಾಖ, ಸೂರ್ಯ, ಕೊಟ್ರ ಹೈಸ್ಕೂಲಿಗೆ ಸೇರಿದ್ದು, ಬದುಕು, ದೇವದಾಸಿ ಮೊದಲಾದ ಪ್ರಮುಖ ಕಾದಂಬರಿಗಳಲ್ಲಿ ದಲಿತರ ಬದುಕು ಅಂಶಿಕವಾಗಿ ಬಿಂಬಿತಗೊಂಡಿದೆ. ದಲಿತರ ಪ್ರಸ್ತಾಪಗಳನ್ನಷ್ಟೇ ಕಾಣುವ ನವೋದಯ ಕಾದಂಬರಿಗಳಲ್ಲಿ ದಲಿತರಿಗೆ ಅಸ್ಪೃಶ್ಯತೆ ಕರ್ಮಸಿದ್ಧಾಂತದ ಫಲವಾಗಿ ಕಂಡುಬಂದಿದೆ. "ಮತಾಂತರ ಮತ್ತು ಭೂ ಒಡೆತನದ ಪ್ರಶ್ನೆ ಲೇಖಕರ ಕಾದಂಬರಿಗಳಲ್ಲಿ ಹೆಚ್ಚಾಗಿ ಕಾಡಿವೆ. ಅವಮಾನ, ಹಿಂಸೆಗಳನ್ನು ಸಹಿಸಿಕೊಂಡೇ ದಲಿತರು ಬದುಕು ಸಾಗಿಸುವುದನ್ನು ಪ್ರಗತಿಶೀಲ ಕಾದಂಬರಿಗಳು ಬಿಂಬಿಸಿವೆ".[೨೮]

ಪಾಶ್ಚಾತ್ಯ ಬದುಕಿನ ದಟ್ಟ ಪ್ರಭಾವವಿದ್ದ ನವ್ಯ ಲೇಖಕರು ದಲಿತರನ್ನು ಸುಧಾರಿಸುವ ನೆಪದಲ್ಲಿ ಕಾದಂಬರಿಗಳಲ್ಲಿ ಸವರ್ಣೀಯರ ಹಿತಾಸಕ್ತಿಗಳನ್ನು ಪ್ರಚುರಪಡಿಸಿದರು. "ದಲಿತ ಸಾಹಿತ್ಯದ ಜೊತೆ ಜೊತೆಯಲ್ಲಿಯೇ ಬೆಳೆದ ಬಂಡಾಯ ಸಾಹಿತ್ಯ ಪ್ರಜ್ಞಾವಂತಗೊಳ್ಳುತ್ತಿರುವ ದಲಿತನ ಅವಸ್ಥೆ ಮತ್ತು ಪ್ರಜ್ಞಾವಂತಗೊಂಡ ಕೆಲ ದಲಿತರು ಸ್ವಸಮುದಾಯದ ಶೋಷಕರಾಗಿ ಮಾರ್ಪಾಟಾಗಿರುವುದನ್ನು ಬಿಂಬಿಸಿದೆ"[೨೯]. ದಲಿತೇತರ ಲೇಖಕರ ಕಾದಂಬರಿ, ಕಥೆ, ಕಾವ್ಯ ಪ್ರಕಾರಗಳಲ್ಲಿ ವ್ಯಕ್ತಗೊಂಡ ದಲಿತ ಸಂವೇದನೆಗಳ ಚರ್ಚೆ ಪ್ರಧಾನವಾಗಿದ್ದು, ಮೇಲ್ವರ್ಗದ ಲೇಖಕರ ಧೋರಣೆ, ಮೇಲ್ಜಾತಿಯ ಶೋಷಣೆಯಿಂದ ದಲಿತನಲ್ಲುಂಟಾದ ವೇದನೆ, ಶಿಕ್ಷಣ ಪಡೆಯಲಾರಂಭಿಸಿದ ದಲಿತನಲ್ಲಾದ ಬದಲಾವಣೆಯನ್ನು ಚರ್ಚಿಸುವ ಪ್ರಮುಖವಾದ ಅಂಶವಾಗಿದೆ.

ಒಟ್ಟು ಕನ್ನಡ ಸಾಹಿತ್ಯದಲ್ಲಿ ಪಂಪನಾದಿಯಿಂದ ಪ್ರಾರಂಭಗೊಂಡು ವಚನಸಾಹಿತ್ಯ, ದಾಸಸಾಹಿತ್ಯ ಹಾಗೂ ಹೊಸಗನ್ನಡ ಸಾಹಿತ್ಯದ ನವೋದಯ, ನವ್ಯ, ಪ್ರಗತಿಶೀಲ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹೇಗೆ ದಲಿತ ಸಂವೇದನೆಯ ಆಶಯಗಳು ಅಭಿವ್ಯಕ್ತಗೊಂಡಿವೆ ಎಂಬುವುದನ್ನು ಸೂಕ್ಷ್ಮವಾಗಿ ಹೀಗೆ ಅವಲೋಕನ ಮಾಡಬಹುದಾಗಿದೆ. ಹೀಗೆಯೇ ಮುಂದುವರಿದಂತೆ ದಲಿತ ಸಾಹಿತ್ಯವು ಪ್ರಾರಂಭಗೊಂಡ ಹಿನ್ನೆಲೆ ಹಾಗೂ ದಲಿತ ಸಾಹಿತ್ಯದ ಬೆಳವಣಿಗೆಯ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ಪ್ರಮುಖವಾಗಿ ಕನ್ನಡ ದಲಿತಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳ ಸಂಕ್ಷಿಪ್ತ ನೋಟವನ್ನು ಚಿತ್ರಿಸುವುದು ಭಾರತೀಯ ದಲಿತ ಸಾಹಿತ್ಯದ ಪ್ರಾಮುಖ್ಯತೆ ಹಾಗೂ ದಲಿತ ಆತ್ಮಕಥೆಗಳ ಸೂಕ್ಷ್ಮ ನೆಲೆಗಳನ್ನು ಗುರುತಿಸುವುದು ಈ ಅಧ್ಯಯದ ಪ್ರಮುಖ ವಿಚಾರವಾಗಿರುತ್ತದೆ.

ಅರವತ್ತರ ದಶಕದ ಅಂತ್ಯ ಮತ್ತು ಎಪ್ಪತ್ತರ ದಶಕದ ಆರಂಭದ ಕಾಲ ಸಾಂಸ್ಕೃತಿಕವಾಗಿ ತಲ್ಲಣಗೊಂಡ ಕಾಲವಾಗಿದೆ. ದಲಿತಯುಗದ–ದಲಿತೋದಯದ ಕಾಲ. ಕನ್ನಡ ಸಾಹಿತ್ಯದಲ್ಲಿ ದಲಿತ ಎಂಬ ಪ್ರಜ್ಞೆ ಮಹಾರಾಷ್ಟ್ರದಿಂದ ಪ್ರಭಾವಿಸಿದ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಪ್ರಜ್ಞಾವಂತ ಜನ ಸಮುದಾಯದಲ್ಲಿ ಚಳುವಳಿ ಪ್ರಜ್ಞೆ ಹಾಗೂ ಸಾಹಿತ್ಯ ದೃಷ್ಟಿಯ ಸಂಚಲನ ಉಂಟಾಯಿತು. ೧೯೭೪ರ ಬಸವಲಿಂಗಪ್ಪನವರ 'ಬೂಸ ಪ್ರಕರಣ'ದಿಂದ "ಬಿ.ಬಸವಲಿಂಗಪ್ಪನವರು ಮೈಸೂರಿನ ಇಂಜಿನಿಯರಿಂಗ್ ಕಾಲೇಜಿನ ಸಮಾರಂಭವೊಂದರಲ್ಲಿ ದಲಿತರನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತ 'ಕನ್ನಡ ಸಾಹಿತ್ಯದಲ್ಲಿ ಬಹುಪಾಲು ಬೂಸಾ ಇದೆ' ಎಂದು ಹೇಳಿದರು".[೩೦] "ಇದರ ಪರಿಣಾಮವಾಗಿ ಬಿ.ಬಸವಲಿಂಗಪ್ಪನವರು ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕಾಯಿತು. ತದನಂತರ ಕರ್ನಾಟಕದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಶೂದ್ರಪ್ರಜ್ಞೆ ಹಾಗೂ ಬ್ರಾಹ್ಮಣ ಪ್ರಜ್ಞೆ ಮತ್ತು ದಲಿತ ಪ್ರಜ್ಞೆಗಳ ಸಾಮಾಜಿಕ ಹೊಯ್ದಾಟಗಳು ಶುರುಗೊಂಡವು. ಈ ಎಲ್ಲಾ ಹೊಯ್ದಾಟಗಳ ಪರಿಣಾಮದಿಂದ ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿ ರಚನೆಗೊಂಡಿತು. ದಲಿತರು–ದಲಿತೇತರು ಒಂದೆಡೆ ಸೇರಿ ಬಂಡಾಯ ವೇದಿಕೆ ರೂಪಿಸಿಕೊಂಡರು. ತದನಂತರ ದಲಿತರೇ ಪ್ರತ್ಯೇಕವಾಗಿ ದಲಿತ ಸಮಾವೇಶಗಳನ್ನು ವಿಚಾರಸಂಕಿರಣಗಳನ್ನು ಆರಂಭಿಸಿದರು. ಮೊದಲ ತಲೆಮಾರಿನ ದಲಿತರ ಬದುಕಿನ ಸ್ವಾಭಿಮಾನದ ಕಿಡಿ ಅಂಕುರಿಸಿ ಸಾಹಿತ್ಯ ಕೃಷಿಯ ಮುಖಾಂತರ ತಮ್ಮ ಅಂತಃಕರಣ, ನೋವು, ಸಿಟ್ಟು, ಆಕ್ರೋಶ, ಹಸಿವು, ಸಂಕಟ, ಬಡತನ, ಅಸ್ಪೃಶ್ಯತೆಯ ವಿವಿಧ ಆಯಾಮಗಳನ್ನು ಕಥೆ, ಕಾದಂಬರಿ, ಕಾವ್ಯ, ನಾಟಕ, ಆತ್ಮಕಥೆಗಳ ಮುಖಾಂತರ ಅಭಿವ್ಯಕ್ತಿಪಡಿಸಲು ಮಾಧ್ಯಮವಾಗಿ ಬಳಸಿಕೊಂಡರು.

ಮಾನವೀಯ ಹಂಬಲದ ಸಾಹಿತ್ಯ ಕೃಷಿಯನ್ನು ದಲಿತ ಸಾಹಿತ್ಯಗಳು ಆರಂಭಿಸಲು ಪ್ರಭಾವ ಅಂಬೇಡ್ಕರ್ ಅವರ ವಿಚಾರಧಾರೆಗಳು. “ಮೊದಲ ತಲೆಮಾರಿನ ಅಕ್ಷರಸ್ಥ ದಲಿತರು ಹೊರಬಂದು ಲೇಖನಿ ಹಿಡಿದದ್ದು, ಕತ್ತಲಾವರಿಸಿದ ಸಾಹಿತ್ಯರಂಗಕ್ಕೆ ಹೊಸ ಆಶಾಕಿರಣಗಳು ಮೂಡುವಂತಾದವು. ಗ್ರಾಮೀಣ ಪರಿಸರದಿಂದ ಬಂದ ದಲಿತರಿಗೆ ಅನುಭವದ ಸಾಂದ್ರತೆ ಅಧಿಕವಾಗಿತ್ತು. ಇದರೊಂದಿಗೆ ಜಾನಪದ ಅಧ್ಯಯನ, ಜನಾಂಗಿಕ ಅಧ್ಯಯನಗಳು ದಲಿತಸಾಹಿತ್ಯಕ್ಕೆ ಹೊಸ ಆಯಾಮವನ್ನು ಒದಗಿಸುವಲ್ಲಿ ಸಹಕರಿಸಿದವು. ಕುದುರೆಮೋತಿ ಪ್ರಕರಣ, ಬೆಲ್ಚಿ ಪ್ರಕರಣ, ಕಾರಂಚೇಡು ಪ್ರಕರಣ, ಮೀಸಲಾತಿ ವಿರೋಧಿ ಪ್ರಕರಣ ಮುಂತಾದ ಪ್ರಕರಣಗಳು ಸಾಹಿತ್ಯದ ಚಟುಟಿಕೆಗಳಿಗೆ ಎಣ್ಣೆಯಂತೆ ಕೆಲಸ ಮಾಡಿವೆ”.[೩೧] ಹೀಗೆ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿದ ದಲಿತ ಸಾಹಿತಿಗಳು ಮೊದಲಿಗೆ ಕಾವ್ಯ ಕ್ಷೇತ್ರವನ್ನು ಮಾಧ್ಯಮವಾಗಿ ಬಳಸಿಕೊಂಡರು. ಕಾವ್ಯದ ತರುವಾಯ ಕಥೆ, ಕಾದಂಬರಿ, ನಾಟಕ, ಆತ್ಮಕಥನ ವಿಮರ್ಶೆಯ ಕ್ಷೇತ್ರದಲ್ಲಿ ಕೆಲಸ ಮಾಡಿರುವವರನ್ನ ಈ ಮುಂದಿನಂತೆ ಗುರುತಿಸಲಾಗಿದೆ.

ದಲಿತ ಚಳುವಳಿ ಮತ್ತು ಸಾಹಿತ್ಯದೊಂದಿಗೆ ಗುರುತಿಸಿಕೊಂಡಿರುವ ಚಳುವಳಿಗಾರರು ಸಾಹಿತಿಗಳು. ಈ. ವೆಂಕಟಯ್ಯ, ಬಿ. ಕೃಷ್ಣಪ್ಪ, ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ ಚನ್ನಣ್ಣವಾಲೀಕಾರ, ಹೆಚ್.ಗೋವಿಂದಯ್ಯ, ಮುನಿವೆಂಕಟಪ್ಪ ಮುಳ್ಳೂರು ನಾಗರಾಜು, ಗಂಗಾರಾಂ ಚಾಂಡಾಳ, ಕೋಟಗನಹಳ್ಳಿ ರಾಮಯ್ಯ, ಇಂಧೂದರ ಹೊನ್ನಾಪುರ, ದೇವಯ್ಯ ಹರವೆ, ಎಸ್. ಗಣೇಶನ್, ಬೋಳು ಬಂಡೆಪ್ಪ, ಕೆ.ಬಿ.ಸಿದ್ದಯ್ಯ, ಎಲ್. ಹನುಮಂತಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಶ್ರೀಧರ ಕಲಿವೀರ, ಟಿ. ಎಲ್ಲಪ್ಪ ಭೂತಯ್ಯ. ಬಿ. ಕೃಷ್ಣಮೂರ್ತಿ, ರಾಮದೇವರಾಕೆ, ಮೊಗಳ್ಳಿ ಗಣೇಶ್, ಎಂ.ಎಸ್. ಶೇಖರ್, ಡಾ. ಎಸ್. ತುಕಾರಾಮ್, ಸುಬ್ಬು ಹೊಲೆಯಾರ್, ಹೆಬ್ಬಾಲೆ ಲಿಂಗರಾಜು, ಎಂ.ಲೋಕೇಶ್, ಹೆಚ್.ರಾಮಕೃಷ್ಣ, ಸತ್ಯಾನಂದ ಪಾತ್ರೋಟ, ಎಂ. ವೆಂಕಟಸ್ವಾಮಿ ಬಿ.ಎಂ. ಪುಟ್ಟಯ್ಯ, ಜಂಬಣ್ಣ ಅಮರಚಿಂತ, ಶಿವರುದ್ರಕಲ್ಲೇಳಕರ್, ಕಕ್ಕಯ್ಯಪೋಳ, ಸೋಮಣ್ಣ ಹೊಂಗಳ್ಳಿ, ಸುಕನ್ಯಾ ಮಾರುತಿ, ಬಿ.ಟಿ. ಲಲಿತಾನಾಯಕ್, ಕೆ.ಆರ್. ದುರ್ಗಾದಾಸ್, ಲಕ್ಷ್ಮಣ್ ತೆಲಗಾವಿ, ಡಾ. ಡಿ.ಬಿ. ನಾಯಕ್, ಎಲ್ ಹನುಮಂತಯ್ಯ, ಟಿ.ಎಂ.ಬಾಸ್ಕರ್, ಎನ್.ಕೆ. ಹನುಮಂತಯ್ಯ, ಶಿವರಾಮ ಅಸುಂಡಿ, ಅರ್ಜುನ ಗೊಳಸಂಗಿ, ಮಂಜುಳ ಸದಾಶಿವ, ಎನ್. ಚಿನ್ನಸ್ವಾಮಿ ಸೋಸಲೆ, ನಲ್ಲಿಕಟ್ಟೆ ಸಿದ್ದೇಶ್, ಹೆಚ್.ಟಿ. ವೆಂಕಟೇಶಮೂರ್ತಿ, ಎಸ್. ಚಂದ್ರಕಿರಣ್, ಇಂದಿರಮ್ಮ, ಲಲಿತಾ ಪೂಜಾರ್, ಮಮತಾ ಬೇಗಂ, ದು. ಸರಸ್ವತಿ, ಬಿ.ಟಿ. ಜಾಹ್ನವಿ. ಮೋಹನ ನಾಗಮ್ಮನವರ,

ಅಭಯಕುಮಾರ, ಸಿ.ಬಿ. ಹೊನ್ನಯ್ಯ, ಸರಜೂ ಕಾಟ್ಕರ್ ಎಚ್.ಟಿ. ಪೋತೆ, ಶರಣಮ್ಮ ಗೋರೆಬಾಳ, ಕುಕ್ಕರಳ್ಳಿ ಬಸವರಾಜು, ಲಕ್ಷ್ಮಣ್, ಶಿರಗಾನಹಳ್ಳಿ ಶಾಂತನಾಯಕ್, ಎ.ಎಂ.ಮದರಿ ಹೀಗೆ ಹಲವಾರು ದಲಿತ ಸಾಹಿತಿಗಳು ಕನ್ನಡದ ಆತ್ಮಧ್ವನಿಯಾದ ದಲಿತ ಸಾಹಿತ್ಯದಲ್ಲಿನ ಕಥೆ, ಕಾವ್ಯ, ಕಾದಂಬರಿ, ನಾಟಕ, ಆತ್ಮಕಥನ, ವಿಮರ್ಶೆಯ ಪ್ರಕಾರಗಳಲ್ಲಿ ಕೆಲಸ ಮಾಡಿದ ಸಾಹಿತಿಗಳಾಗಿದ್ದಾರೆ.

ಈ ಮೇಲಿನ ಎಲ್ಲಾ ದಲಿತ ಸಾಹಿತಿಗಳು ಆಯಾಯ ಸಾಹಿತ್ಯ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿರುತ್ತಾರೆ. ಇಲ್ಲಿ ಪ್ರಮುಖವಾಗಿ ದಲಿತ ಆತ್ಮಕಥನಗಳ ರಚನಕಾರರ ಸಂಕ್ಷಿಪ್ತ ನೋಟ ಮುಖ್ಯವಾಗಿದ್ದು, ಈ ಸಂದರ್ಭದಲ್ಲಿ ಅಕ್ಷರ ಕಲಿತ ದಲಿತ ಆತ್ಮಕಥನಕಾರ ಆತ್ಮಕಥೆಗಳು ಹಾಗೂ ಅಕ್ಷರ ವಂಚಿತ ದಲಿತ ಆತ್ಮಕಥನಕಾರರು ರಚಿಸಿರುವ ಕೃತಿಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.

ಕನ್ನಡ ದಲಿತ ಸಾಹಿತ್ಯದಲ್ಲಿ ಇದುವರೆಗೆ ಬಂದಿರುವ ದಲಿತ ಆತ್ಮಕಥೆಗಳೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಡಿ.ಗೋವಿಂದದಾಸ್ ಅವರ ಆತ್ಮಕಥನ, ನಂತರ ಕನ್ನಡದ ಮೊದಲ ದಲಿತ ಆತ್ಮಕಥೆ ಎಂದೇ ಕರೆಯುವ ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ (೧೯೯೪), ತುಂಬಾಡಿ ರಾಮಯ್ಯನವರ ಮಣೆಗಾರ (೧೯೯೯), ಸಿದ್ದಲಿಂಗಯ್ಯನವರ ಊರುಕೇರಿ (೨೦೦೦), ಗೋವಿಂದರಾಜು ಅವರ ಮನವಿಲ್ಲದವರ ಮಧ್ಯೆ (೨೦೦೦), ದು. ಸರಸ್ವತಿಯವರ ಈಗೇನ್ ಮಾಡಿರಿ? (೨೦೦೧), ಲಕ್ಷ್ಮಣ್ ಅವರ ಸಂಬೋಳಿ (೨೦೦೩), ಕೋಟಗಾನಹಳ್ಳಿ ರಾಮಯ್ಯನವರು ಸಂಪಾದಿಸಿರುವ ಮುಳ್ಳೂರು ನಾಗರಾಜು ಅವರ 'ಮಾಮರದ ಮೇಲೊಂದು ಕೋಗಿಲೆ' (೨೦೦೪), ತಲಪರಿಗೆ (೨೦೦೫)ಯಲ್ಲಿ ದಾಖಲಾಗಿರುವ ಬಿ.ಡಿ.ನಾರಾಯಣ್‌ದಾಸ್ ಅವರ ಅಪ್ಪನ ಸಾಲ ತೀರಿಸಿದೆ, ಎನ್.ಕೆ ಹನಮಂತಯ್ಯ ಅವರ ಹೊಲಗೇರಿ ಹಾದಿಯಲ್ಲಿ ಸೋಬಾನೆ ದೀಪಗಳು, ನೇತ್ರ ಅವರ ಒಕ್ಕಲಿಗರ ಮನೆಯಲ್ಲಿ ಹುಟ್ಟಿದಿದ್ರೆ. ಇದರೊಂದಿಗೆ ಸಿದ್ದಲಿಂಗಯ್ಯನವರ ಎರಡನೇ ಭಾಗ ಊರು ಕೇರಿ (೨೦೦೬), ತುಂಬಾಡಿ ರಾಮಯ್ಯನವರ ಮುತ್ತಿನಜೋಳ (೨೦೦೭), ಡಾ.ಜೆ. ಸೋಮಣ್ಣ ಸಂಪಾದಿಸಿರುವ ದಲಿತ ಲೋಕದ ನೋವು ನಲಿವು (೨೦೦೭), ಡಾ.ಎಲ್ಲಪ್ಪ.ಕೆ.ಕೆ.ಪುರ ಅವರ ಕೇರಿಯಿಂದ ತೇರಿಗೆ (೨೦೦೯), ಹನುಮಂತರಾವ್ ಬಿ. ದೊಡ್ಡಮನಿಯವರ ಪಂಚಮ (೨೦೦೯) ಎಂ.ಎಸ್. ಪರಶಿವಮೂರ್ತಿಯವರ ಗೆರೆದಾಟಿದ ಮೇಲೆ (೨೦೦೯), ಡಾ. ಶಿರಗಾನಹಳ್ಳಿ ಶಾಂತನಾಯ್ಕರ 'ಲಮಾಣಿ' (ಆತ್ಮಕಥನ ಕಾವ್ಯ, ೨೦೧೦), ಡಾ.ಜೆ.ಸಂಜೀವರಾಯ ಅವರ ಹೊರಬೀಡು (೨೦೧೧), ಎ.ಎಂ.ಮದರಿಯ ಅವರ

ಗೊಂದಲಿಗ್ಯಾ, ಸಿ.ಜಿ.ಕೆಯವರ, 'ಕತ್ತಾಳೆ ಬೆಳದಿಂಗಳೊಳಗ' ಎಂಬ ಈ ಮೇಲಿನ ಎಲ್ಲಾ ದಲಿತ ಆತ್ಮಕಥನಗಳು ಅಕ್ಷರ ಬಲ್ಲಂತಹ ದಲಿತ ಆತ್ಮಕಥನಕಾರರು ರಚಿಸಿರುವ ದಲಿತ ಆತ್ಮಕಥೆಗಳಾಗಿವೆ. ಇದರೊಂದಿಗೆ ಅಕ್ಷರರಹಿತ ದಲಿತ ಸಮುದಾಯದ ಮೊದಲ ತಲೆಮಾರಿನ ದಲಿತ ಜನಪದಗಾರರು ತಮ್ಮದೇ ಆದ ದಲಿತ ಲೋಕದ ನೋವು ನಲಿವುಗಳನ್ನು ಮುಕ್ತಮನಸ್ಸಿನಿಂದ ಹೇಳಿಕೊಂಡಿರುವ ಆತ್ಮಕಥನವನ್ನು 'ಗರಿಗೆದರಿದ ನವಿಲು' ಎಂಬ ಕೃತಿಯಲ್ಲಿ ಪ್ರೊ. ಕಾಳೇಗೌಡ ನಾಗವಾರ ಹಾಗೂ ಜಿ.ವಿ.ಆನಂದಮೂರ್ತಿಯವರು ಸಂಪಾದಿಸಿಕೊಟ್ಟಿದ್ದಾರೆ. ಮುನಿವೆಂಕಟಪ್ಪ ಅವರ 'ಅಂತ್ಯಜನ ಅಂತರಂಗ' ಆತ್ಮಕಥೆ ಧಾರವಾಹಿಯಾಗಿ ಪ್ರಕಟಗೊಂಡಿದೆ. ದಲಿತ ಚಳವಳಿಯಲ್ಲಿ ಹೋರಾಡಿದ, ಹಾಡಿದ ಹಾಗೂ ಆತ್ಮಕಥನೇತರ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ ಇನ್ನು ಅನೇಕರು ಆತ್ಮಕಥೆಗಳನ್ನು ಬರೆಯುವ ಸೂಚನೆಗಳನ್ನು ನೀಡಿದ್ದಾರೆ. ಡಾ. ಎಲ್. ಹನುಮಂತಯ್ಯನವರು 'ಅಗ್ನಿ' ಪತ್ರಿಕೆಯಲ್ಲಿ ತಮ್ಮ ಆತ್ಮಕಥನದ ಭಾಗಗಳನ್ನು ಧಾರವಾಹಿಯಾಗಿ ಪ್ರಕಟಿಸಿದ್ದಾರೆ. ಇದು ಇಂದು 'ಒಂಟಿ ಕಾಲೀನ ನಡಿಗೆ' ಎಂಬ ಆತ್ಮಕಥನವಾಗಿ ಮೂಡಿ ಬಂದಿದೆ. ಹೀಗೆ, ದಲಿತ ಪ್ರಾಜ್ಞರು ಸಾಮಾಜಿಕ ಸತ್ಯಗಳನ್ನು ತಮ್ಮ ಅನುಭವ ಮೂಸೆಯಿಂದ ದರ್ಶಿಸಿ ಸೃಜಿಸುವ ಧ್ಯಾನದಲ್ಲಿ ಇನ್ನೂ ಅನೇಕ ಆತ್ಮಕಥೆಗಳು ಬರದಿದ್ದು ಕನ್ನಡ ಸಾಹಿತ್ಯವು ಅವುಗಳ ನಿರೀಕ್ಷೆಯಲ್ಲಿದೆ.

ಅಡಿಟಿಪ್ಪಣಿಗಳು

೧. ಮಂಗ್ಳೂರು ವಿಜಯ : **ಮಾಸಿ ಹೋಗದ ನೆನಪು** ; ಪುಟ–VI.

೨. ಡಾ. ತಮಿಳ್‌ಸೆಲ್ವಿ : **ತಮಿಳು ದಲಿತ ಸಾಹಿತ್ಯ** ; ಮಯೂರ ಆಗಸ್ಟ್, ೨೦೧೨, ಪುಟ. ೧೦.

೩. ಅದೇ : ಪುಟ–೨೦.

೪. ಅದೇ : ಪುಟ–೨೦.

೫. ಅನಂತರಂಗಾಚಾರ್ ಎನ್.: **ಸಾಹಿತ್ಯಭಾರತೀ** ; ಪುಟ–೪೭೯.

೬. ಡಾ. ಲಿಂಗಣ್ಣ ಗೋನಾಳ : **ಮಯೂರ, ಅಕ್ಟೋಬರ್, ೨೦೧೨** ; ಪುಟ–೧೨.

೭. ಅದೇ : ಪುಟ–೧೩

೮. ಅದೇ : ಪುಟ–೧೭

೯. ಅದೇ : ಪುಟ–೧೩

೧೦. (ಸಂ.) ಅರವಿಂದ ಮಾಲಗತ್ತಿ : **ದಲಿತ ಮಾರ್ಗ** ; ಪುಟ–೨೭೧.

೧೧. ಅದೇ : ಪುಟ–೨೭೧.

೧೨. ಅದೇ : ಪುಟ–೨೭೧.

೧೩. ಪಂಡಿತರಾವಧರೆಣ್ಣ : **ಮಯೂರ, ಸೆಪ್ಟೆಂಬರ್, ೨೦೧೩** ; ಪುಟ–೩೦.

೧೪. ಡಾ. ಪ್ರಭಾಶಂಕರ ಟಿ.ಜಿ. : **ಮಯೂರ, ಡಿಸೆಂಬರ್ ೧೨** ; ಪುಟ–೨೯.

೧೫. ಅದೇ : ಪುಟ–೩೦

೧೬. ಅದೇ : ಪುಟ–೩೦

೧೭. ಡಾ. ನಾರಾಯಣ ಜಿ. : **ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ : ಒಂದು ಅಧ್ಯಯನ** ; ಪುಟ–೩.

೧೮. ಡಾ. ಚಿದಾನಂದಮೂರ್ತಿ : **ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅನನ್ಯತೆ** ; ಪುಟ–೭.

೧೯. ಡಾ. ಶಿವರಾಮ ಅಸುಂಡಿ : **ತಳಸಂಸ್ಕೃತಿ** ; ಪುಟ–೧೯೦.

೨೦. ಬಸವರಾಜು ಎಲ್. : **ಪಂಪನ ವಿಕ್ರಮಾರ್ಜುನ ವಿಜಯ** ; ಪುಟ–೧೦–೨ ಸಂಧಿ.

೨೧. ನಾರಾಯಣಸ್ವಾಮಿ ಜಿ. : **ಮತಾಕಸಾ, ದಲಿತ ಸಾಹಿತ್ಯ ಒಂದು ಅಧ್ಯಯನ** ; ಪುಟ–೬೫.

೨೨. ಡಾ. ಎಂ. ಚಿದಾನಂದ ಮೂರ್ತಿ : **ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ** ; ಪುಟ–೧೮೧.

೨೩. ಡಾ. ಪ್ರಶಾಂತ ನಾಯಕ ಜಿ. : **ಕನ್ನಡ ಸಾಹಿತ್ಯ ಮತ್ತು ದಲಿತ ಪರಂಪರೆ** ;ಪುಟ–೫೪.

೨೪. ಅದೇ : ಪುಟ–೪೯.

೨೫. (ಸಂ.) ಶೇಖರ್ ಎಂ.ಎಸ್. : **ಮೊದಲ ತಲೆಮಾರಿನ ದಲಿತ ಸಾಹಿತಿಗಳು** ; ಮುನ್ನುಡಿ, xv.

೨೬. ಅದೇ : **ಬಿ. ಶ್ಯಾಮಸುಂದರ ಅವರ ಸಾಹಿತ್ಯ ಮತ್ತು ಚಿಂತನೆ** ; ಹೆಚ್.ಟಿ. ಪೋತೆ, ಪುಟ–೭೧.

೨೭. ಅದೇ, ಪುಟ–೭೧.

೨೮. ಡಾ. ಶಿವರಾಜ ಅಸುಂಡಿ : **ಕನ್ನಡ ಕಾದಂಬರಿಗಳ ಸಂದರ್ಭದಲ್ಲಿ ದಲಿತ ಸಂವೇದನೆಗಳು** ; ಪುಟ–೧೮.

೨೯. ಅದೇ, ಪುಟ–೧೮.

೩೦. (ಸಂ.) ಅರವಿಂದ ಮಾಲಗತ್ತಿ : ದಲಿತ ಮಾರ್ಗ, ಲೇಖನ, ದಲಿತ ಸಾಹಿತ್ಯದ ತಾತ್ವಿಕ ನೆಲೆ – ನಿಲುವುಗಳು, ಪುಟ–೨೮.

೩೧. ಅದೇ : ಪುಟ–೩೧.

ಅಧ್ಯಾಯ ೩

ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಮಾಜಿಕ ನೆಲೆಗಳು

ಭಾರತೀಯ ಸಾಹಿತ್ಯದಲ್ಲಿ ಕಂಡು ಬರುಹ ಹಲವಾರು ಭಾಷೆಗಳಲ್ಲಿ ಭಿನ್ನ ಭಿನ್ನವಾದ ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಸಾಂಸ್ಕೃತಿಕ ಅಧ್ಯಯನಗಳು ನಡೆಯುತ್ತಾ ಬಂದಿವೆ. ಇಂತಹ ಸಂದರ್ಭದಲ್ಲಿ ಹಲವು ಭಾರತೀಯ ಭಾಷೆಗಳಲ್ಲಿನ ಕೆಲವು ಸಾಹಿತ್ಯದ ಭಾಷೆಗಳನ್ನು ಕೇಂದ್ರವಾಗಿ ಇಟ್ಟುಕೊಂಡು ಸಾಮಾಜಿಕ ಸ್ಥಿತ್ಯಂತರದ ನೆಲಗಳನ್ನು ಕುರಿತಂತೆ ಅಧ್ಯಯನಗಳು ನಡೆಯುತ್ತಾ ಬಂದಿವೆ. ಹಾಗಾಗಿ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳು ಈ ವಿಷಯದಲ್ಲಿ ಭಿನ್ನವಾಗಿಲ್ಲ. ಭಾರತೀಯ ದಲಿತ ಆತ್ಮಕಥೆಗಳಲ್ಲಿ ಸಾಮಾಜಿಕನೆಲೆಯು ಅತ್ಯಂತ ಪ್ರಮುಖವಾಗಿರುವಂತದ್ದು. ಏಕೆಂದರೆ ದಲಿತರ ಅನುಭವಗಳು ಮತ್ತು ಭವಣೆಗಳು, ದುಃಖ ದುಮ್ಮಾನಗಳು ಅಭಿವ್ಯಕ್ತವಾಗುವುದೇ ಈ ಅಸಮಾನತೆಯ ಸಮಾಜದಲ್ಲಿ. ಹಾಗಾಗಿ ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಇತ್ತೀಚೆಗೆ ನಡೆಯುತ್ತಿರುವ ಸಂಶೋಧನೆಗಳು ಸಾಮಾಜಿಕ ದೃಷ್ಟಿಕೋನವನ್ನು ಹೆಚ್ಚಾಗಿ ಅನುಸರಿಸಿವೆ. ಇದು ಒಂದು ಬಗೆಯ ಬೆಳವಣಿಗೆಯೂ ಆಗಿರುವುದು ಗುರುತರವಾದುದ್ದಾಗಿದೆ. ಭಾರತೀಯ ಸಾಹಿತ್ಯ ಪರಂಪರೆಗೆ ಸುದೀರ್ಘ ಇತಿಹಾಸವಿದ್ದರೂ ಇಲ್ಲಿ ನಡೆದ ಸಂಶೋಧನೆಗಳು ಹೆಚ್ಚಾಗಿ ಲಿಖಿತ ಪರಂಪರೆಯನ್ನು ಲಕ್ಷಿಸಿವೆ. ಅದರಲ್ಲೂ ಮೇಲ್ವರ್ಗದ ಲೇಖಕರು ಪಾಲ್ಗೊಂಡಿರುವ ಸಾಹಿತ್ಯ ಹೆಚ್ಚು ಚರ್ಚೆಗೆ ಬಂದಿದೆ. ಆದರೆ ಕೆಳವರ್ಗದ ಲೇಖಕರು ಸಾಹಿತ್ಯ ರಚನೆಯಲ್ಲಿ ಪಾಲ್ಗೊಂಡಿರುವುದು ತುಂಬ ವಿರಳವಾಗಿರುವುದೇ ಇದಕ್ಕೆ ಕಾರಣವಿರಬಹುದು.

ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಅದರಲ್ಲೂ ಸ್ವಾತಂತ್ರ್ಯೋತ್ತರ ಘಟ್ಟದಲ್ಲಿ ಮರಾಠಿ ಮತ್ತು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ತೀವ್ರತರವಾದ ಬದಲಾವಣೆಗಳಾದವು. ಸ್ವಾತಂತ್ರ್ಯಾ ನಂತರ ಭಾರತೀಯ ಸಮಾಜದಲ್ಲಿ ಜಾಗೃತಿಯ ಗಾಳಿ ಬೀಸಲಾರಂಭಿಸಿತು. ಅದುವರೆಗೆ ಶಿಕ್ಷಣದಿಂದ ವಂಚಿತವಾಗಿದ್ದ ದಲಿತ ಮತ್ತು ಹಿಂದುಳಿದ ಸಮುದಾಯಗಳಿಗೆ ಶಿಕ್ಷಣದ ಸೌಲಭ್ಯಗಳು ದೊರಕಿದ ಮೇಲೆ ಅವುಗಳಲ್ಲಿ ತಮ್ಮ ತನದ ಅರಿವು ಮೂಡತೊಡಗಿತು. ಹಾಗೆಯೇ ಜ್ಯೋತಿಬಾ ಫುಲೆ, ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ಪೆರಿಯಾರ್ ನಾರಾಯಣಗುರು, ಲೋಹಿಯಾ, ಜಯಪ್ರಕಾಶ ನಾರಾಯಣ ಮುಂತಾದವರ ಚಿಂತನೆಗಳು ಸಮಾಜದ ಮೇಲೆ ಪರಿಣಾಮಗಳನ್ನು

ಉಂಟುಮಾಡಿದ್ದವು. ಅದುವರೆಗೆ ಅಲಕ್ಷ್ಯಕ್ಕೆ ಒಳಗಾಗಿದ್ದ ದಲಿತ ಸಾಹಿತ್ಯ ಸಂಸ್ಕೃತಿಯ ಕಡೆಗೆ ಹೆಚ್ಚು ಹೆಚ್ಚು ಆಸಕ್ತಿ ಮತ್ತು ಸಂಶೋಧನೆಗಳು ನಡೆಯಲು ಪ್ರಾರಂಭವಾಯಿತು.

ದಲಿತ ಬರಹಗಾರರ ಸಂಘಟನೆಯಾಗಿ ಬೆಳೆದ ದಲಿತ ಚಳವಳಿ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನಿಂದ ಸ್ಫೂರ್ತಿ ಪಡೆದಿದೆ. ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ ಇಂಡಿಯಾದ ದಲಿತ ಸಂಘಟನೆಗಳೆಲ್ಲ ಬಹಳ ಬಲಿಷ್ಠವಾದ ಸಂಘಟನೆಯಾಗಿತ್ತು. ಈ ಮಹಾರಾಷ್ಟ್ರದ ದಲಿತ ಚಳುವಳಿಯ ಪರಿಣಾಮ ಪ್ರಥಮ ಬಾರಿಗೆ ದಲಿತ ಹಾಗೂ ಶೋಷಿತ ಸಮುದಾಯಗಳ ಜೀವನದ ಪ್ರತಿಯೊಂದು ಸಂವೇದನೆಗಳು ಮರಾಠಿ ಸಾಹಿತ್ಯದಲ್ಲಿ ದಾಖಲಾಗ ತೊಡಗಿದವು. ಜೊತೆಗೆ ಬೂಸಾ ಸಾಹಿತ್ಯ ಪ್ರಕರಣದಿಂದ ಪ್ರಜ್ಞೆಯುಳ್ಳ ಜನತೆಯ ಚಳವಳಿಯಾಯಿತು. ಕರ್ನಾಟಕದ ದಲಿತ ಚಳುವಳಿ ಇವುಗಳ ಪ್ರಭಾವದಿಂದ ಕನ್ನಡದ ದಲಿತ ಸಾಹಿತ್ಯದ ಹುಟ್ಟಿಗೆ ಕಾರಣವಾಯಿತು. ಸಾಹಿತ್ಯ ಮತ್ತು ಚಳುವಳಿಯಲ್ಲಿ ದಲಿತ ಬರಹಗಾರರು ಚಳುವಳಿಗೆ ಸಜ್ಜಾಗಿ ನಿಂತರು. ಈ ಮೇಲಿನ ಕಾರಣಗಳಿಂದ ಅಂಬೇಡ್ಕರ್ ಕಂಡ ಆಶಯದ ಅಂಶಿಕ ರೂಪವಾಗಿ ಸಾಮಾಜಿಕ ಚಳುವಳಿ ರೂಪುಗೊಂಡಿತು. ಅದೇ ಸಮಯದಲ್ಲಿ ಮೂಡಿದ ಪ್ರಗತಿಪರ ಪತ್ರಿಕೆಗಳಾದ ಪಂಚಮ, ದಲಿತ, ಆಂದೋಲನ, ಶೂದ್ರ ಸಂಕ್ರಮಣ ಮುಂತಾದ ಪತ್ರಿಕೆಗಳು ೭೦ರ ದಶಕದಲ್ಲಿ ದಲಿತರ ಅಭಿಪ್ರಾಯಗಳಿಗೆ ಆಕಾರ ನೀಡಿದವು.

ಬೂಸಾ ಪ್ರಕರಣದಿಂದ ಬಿ. ಬಸವಲಿಂಗಪ್ಪನವರು ಶಕ್ತಿ ರಾಜಕಾರಣ ವಿರುದ್ಧ ಸೋತು ರಾಜೀನಾಮೆಯನ್ನು ನೀಡಬೇಕಾದ ಪರಿಸ್ಥಿತಿ ಉದ್ಭವವಾಯಿತು. ದೇವರಾಜ ಅರಸು ಸರಕಾರ ಜಾರಿಗೆ ತಂದ ಭೂ ಸುಧಾರಣೆಗಳ ಹಿನ್ನೆಲೆಯಲ್ಲಿ ಬಸವಲಿಂಗಪ್ಪನವರ ಪ್ರಕರಣವನ್ನು ತಪ್ಪಾಗಿ ಗ್ರಹಿಸಿದ್ದು ಈ ಘಟನೆಗೆ ಕಾರಣವೆನ್ನಬಹುದು. ಈ ಸಂದರ್ಭದಲ್ಲಿ ಇಡೀ ರಾಜ್ಯವೇ ಜಾತಿ ಪರ ಮತ್ತು ಜಾತಿ ವಿರೋಧಿ ಹಾಗೂ ಪ್ರಗತಿಪರ ಮತ್ತು ಪ್ರಗತಿ ವಿರೋಧಿ ಗುಂಪುಗಳ ನಡುವಣ ಘರ್ಷಣೆಯ ರಂಗವಾಗಿ ಏರ್ಪಟ್ಟಿತು. ಡಾ.ಬಿ.ಎಂ ಪುಟ್ಟಯ್ಯನವರು ಈ ಪ್ರಕರಣವನ್ನು ವ್ಯಾಖ್ಯಾನಿಸುವಂತೆ ಈ ಘಟನೆ ಮೂಲತಃ ಬಸವಲಿಂಗಪ್ಪನವರ ಭಾಷಣದಿಂದಲೇ ಆಯಿತು ಎಂದರೆ ಪ್ರಕರಣವನ್ನು ಸರಳೀಕರಿಸಿದಂತೆ ಆಗುತ್ತದೆ. ಅದೇ ಬಸವಲಿಂಗಪ್ಪನವರು ಕರ್ನಾಟಕದಲ್ಲಿ ಮಲ ಹೊರುವ ಪದ್ಧತಿ, ಸತ್ತ ದನ ಹೊರುವ ಪದ್ಧತಿ, ಮೇಲು ಜಾತಿಯವರು ಸತ್ತಾಗ ಗುಂಡಿ ತೋಡುವುದು, ಹೆಣ ಹೊರುವುದು, ವಾದ್ಯ, ತಮಟೆ ಬಾರಿಸುವುದು ಈ ಮುಂತಾದವುಗಳ ವಿರುದ್ಧ ಬಲವಾದ ಕೂಗೆಬ್ಬಿಸಿದ್ದರು. ಇದು ದಲಿತ ಸಮುದಾಯದಲ್ಲಿ ಬಹುತೇಕ ಸಫಲತೆಯನ್ನು ಸಾಧಿಸಿತು. ಈ ಸಿಟ್ಟು ಭೂಮಾಲೀಕ ವರ್ಗದಲ್ಲಿ ಮಡುಗಟ್ಟಿತು. ಹಾಗೆಯೇ ನುಂಗಲಾರದ

ತುತ್ತಾಗಿ ಪರಿಣಮಿಸಿತು. ಇದು ಒಮ್ಮೊಮ್ಮೆ ಆಕ್ಷೇಪಿಸಲು ಕಾರಣವಾಯಿತು. ಈ ಕಾರಣದಿಂದ ದಲಿತ ಸಮುದಾಯದಲ್ಲಿ ದಲಿತಚಳುವಳಿ ಮೊಳಕೆಯೊಡೆದು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ, ಸೈದ್ಧಾಂತಿಕವಾಗಿ ವಿವಿಧ ನೆಲೆಯಲ್ಲಿ ಸ್ವರೂಪ ಪಡೆದುಕೊಳ್ಳಲು ಸಾಧ್ಯವಾಯಿತು. ಈ ಮೇಲಿನ ಘಟನೆಗಳ ಹಿನ್ನೆಲೆಯಲ್ಲಿ ಮರಾಠಿ ಮತ್ತು ಕನ್ನಡ ಆತ್ಮಕಥನಕಾರರು ತಮ್ಮ ಆತ್ಮಕಥೆಗಳಲ್ಲಿ ಸಾಮಾಜಿಕ ನೆಲೆಗಳನ್ನು ಬಹಳ ಭಿನ್ನವಾಗಿ ಕಟ್ಟಿಕೊಟ್ಟಿದ್ದಾರೆ.

ದಲಿತ ಆತ್ಮಕಥನಕಾರರು ಭಾರತದ ಅಖಂಡತೆಯೊಳಗೆ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಂಡು ಅರಿವು ಮತ್ತು ನೋವುಗಳನ್ನು ಸೃಜನಶೀಲತೆಯಲ್ಲಿ ಅಭಿವ್ಯಕ್ತಿಗೊಳಿಸುವ ಮೂಲಕ ಸಾಂಸ್ಕೃತಿಕ ಚರಿತ್ರೆಗೆ ಹೊಸ ಇತಿಹಾಸವನ್ನು ಬರೆದಿದ್ದಾರೆ. ಪರಂಪರೆಯಿಂದಲೂ ತುಚ್ಛೀಕರಿಸಲ್ಪಟ್ಟು ದಲಿತರು ಆಧುನಿಕ ಸಂದರ್ಭದಲ್ಲೂ ಹಲವಾರು ಬಗೆಯ ಹಿಂಸೆಯನ್ನು ಅನುಭವಿಸಿರುವ ಸಂಗತಿಗಳನ್ನು ನಿರ್ಭಿಡೆಯಿಂದ ಸಮಾಜದ ಮುಂದೆ ಪ್ರಸ್ತುತಪಡಿಸಿದ್ದಾರೆ. ಪ್ರಚಲಿತ ಸಾಮಾಜಿಕ ಸಂರಚನೆಯಲ್ಲಿ ತಮ್ಮ ಸ್ಥಾನಮಾನ, ಸ್ವಾಭಿಮಾನಗಳು ಎಂತವು ಎಂಬುದನ್ನು ನಿವೇದಿಸಿಕೊಂಡಿದ್ದಾರೆ. ಈವರೆಗೂ ತಾವು ಅನುಭವಿಸಿದ ಹಸಿವು, ಅವಮಾನ, ಬಡತನ, ನೋವು, ಅಸ್ಪೃಶ್ಯತೆ, ಅನ್ಯಾಯ, ಅಸಮಾನತೆ ಮೊದಲಾದ ಸಾಮಾಜಿಕ ತಲ್ಲಣಗಳನ್ನು ಆರೋಪಕ್ಕೆ ಬದಲಾಗಿ ವಿಷಾದ ಮತ್ತು ಅರಿವಿನ ನೆಲೆಯಲ್ಲಿ ಅನಾವರಣಗೊಳಿಸಿದ್ದಾರೆ. ದಲಿತ ಮಹಿಳೆಯರು ಜೀವಕಾರುಣ್ಯ ಮತ್ತು ಸಹನೆಯ ನಡುವೆಯೂ ಸಾಮಾಜಿಕವಾಗಿ, ಕೌಟುಂಬಿಕವಾಗಿಯೂ ದೌರ್ಜನ್ಯಕ್ಕೊಳಗಾಗಿರುವ ಅಸಂಖ್ಯ ದಾಖಲೆಗಳನ್ನೂ ಆತ್ಮಕಥೆಗಳು ಗರ್ಭೀರಿಕರಿಸಿಕೊಂಡಿವೆ. ಹೀಗೆ ಇದುವರೆಗೂ ಈ ಸಮಾಜವು ಹೇಳದೆ ಇದ್ದ ಸತ್ಯಗಳನ್ನು ಬಿಚ್ಚಿ ತೋರುವ ಮೂಲಕ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಸಾಮಾಜಿಕ ಅಂತಃಸಾಕ್ಷಿಯಾಗಿ ದಲಿತ ಆತ್ಮಕಥನಕಾರರು ಓದುಗರ ಮುಂದೆ ತೆರದಿಟ್ಟಿದ್ದಾರೆ.

೩.೧. ಜಾತೀಯತೆ ಮತ್ತು ಅಸ್ಪೃಶ್ಯತೆ

ನಮ್ಮ ಭಾರತದ ಹಿಂದೂ ಧರ್ಮವೆಂಬುದು ಮೂಲತಃ ಒಂದು ವೈದಿಕ ಸಂಸ್ಕೃತಿ ನೆಲೆಯದ್ದಾಗಿದೆ. ಅದು ತನ್ನ ವಿಸ್ತಾರ ಮತ್ತು ಹುನ್ನಾರದ ಪ್ರಕ್ರಿಯೆಯಲ್ಲಿ ಈ ನೆಲದ ನೂರಾರು ಅನನ್ಯತೆಯುಳ್ಳ ಜನಸಮುದಾಯಗಳನ್ನು ನಯವಾಗಿ ವಂಚಿಸಿ ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಕಾಲಾನಂತರ ಈ ಜನಸಮುದಾಯಗಳನ್ನು ಅವುಗಳ ಕಸುಬುಗಳ ಆಧಾರದ ಮೇಲೆ ಜಾತಿ, ವರ್ಣಗಳಾಗಿ ವಿಂಗಡಿಸಿ ಪೂರ್ವಕರ್ಮಕೃತ ಎಂದು ನೀರೆರದಿದೆ. ಪುರಾತನ ವೈದಿಕ ಶಾಹಿತ್ವದ

ಕಪಿಮುಷ್ಠಿಯಲ್ಲಿ ಜನಸಮುದಾಯಗಳು 'ಜಾತಿ'ಗಳಾಗಿ ಒಡೆಯಲ್ಪಟ್ಟು ತಮ್ಮ ಸೋಪಜ್ಞತೆ ನೆಲಮೂಲ ಅಸ್ತಿತ್ವ ಮತ್ತು ಸ್ಮೃತಿಗಳಿಂದ ಬೇರ್ಪಡೆಗೊಂಡಿದೆ.

ವೈದಿಕಶಾಹಿಯ ಸ್ವಾರ್ಥ, ನಯವಂಚಕತನಗಳು ಅಂದಿನಿಂದ ಇಂದಿನವರೆಗೂ ಅವ್ಯಾಹತವಾಗಿ ಬೆಳೆದ ಪರಿಣಾಮವಾಗಿ ಜಾತಿಗಳು 'ಅಸ್ಪೃಶ್ಯತೆ' ಮತ್ತು 'ವೈರತ್ವ'ದ ಬೇರುಗಳನ್ನು ತಮ್ಮೊಳಗೆ ಪರಸ್ಪರ ಬಲವಾಗೇ ವೃದ್ಧಿಸಿಕೊಂಡಿವೆ. ಇದು ಈ ನೆಲದ 'ಜಾತ್ಯಾತೀತ ಆಶಯದ ನಿಜತತ್ವಗಳನ್ನು ನಿರ್ನಾಮ ಮಾಡಿರುವುದರ ದುರಂತ ಸತ್ಯವಾಗಿದೆ. ಇಂಥ ಅಸ್ಪೃಶ್ಯತೆಗೆ ಕಾರಣವಾದ ಜಾತಿಯ ವಿಷವನ್ನು ತೊಡೆಯಲು ಸುಧಾರಕರು, ಸಂತರು ನಿರಂತರವಾಗಿ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಜಾತಿಯು ವಿಷಬಳ್ಳಿಯಂತೆ ಹಬ್ಬಿ ಜನರ ಸಂಬಂಧಗಳನ್ನು ಒಡೆಯುತ್ತಿದ್ದುದರ ವಿರುದ್ಧ ಕಾಲಕಾಲಕ್ಕೆ ಈ ನೆಲದಲ್ಲಿ ಪ್ರತಿಭಟನಾ ದನಿಗಳು ಕ್ರಿಯಾಶೀಲಗೊಂಡಿವೆ. ಭಾರತದಲ್ಲಿ ಜಾತಿವಿನಾಶದ ಹಾದಿಯೂ ನಿರ್ಭಿಡೆಯಿಂದ ಸಾಗಿಬಂದಿದೆ. ಇದಕ್ಕೆ ಬುದ್ಧ ಪೂರ್ವದಿಂದ ಇಂದಿನವರೆಗೂ ನಡೆಯುತ್ತಾ ಬಂದಿರುವ ಹೋರಾಟಗಳು, ಆಂದೋಲನಗಳು ಆ ಮೂಲಕ ಮೂಡಿರುವ ಅರಿವು, ಅಂತಃಕರಣ, ಸಮತಾ ಮನೋಭಾವ, ಬದ್ಧತೆ, ವೈಚಾರಿಕತೆಗಳೇ ಸಾಕ್ಷಿ. ಜಾತಿ ಎಂಬ ಈ ರೋಗವನ್ನು ನಾಶ ಮಾಡುವ ನಿಟ್ಟಿನಲ್ಲಿ ನಡೆದ ಅನೇಕ ಕ್ರಾಂತಿಕಾರಕ ನಡೆ-ನುಡಿಯ ಸಂಚಲನಗಳು ಇಂದಿಗೂ-ಮುಂದಿಗೂ ಚಲನಶೀಲಗೊಳ್ಳಬೇಕಾದ ಅಗತ್ಯ ಹಾಗೂ ಅನಿವಾರ್ಯತೆ ಇದೆ. ಪ್ರತಿಯೊಬ್ಬ ಮನುಷ್ಯರು ಜಾತಿಯ ಮೇಲರಿಮೆ-ಕೀಳರಿಮೆಗಳನ್ನು ಬಿಟ್ಟು ಆಳವಾಗಿ ಬೇರೂರುತ್ತಿರುವ ಜಾತಿಯತೆಯನ್ನು ವಿನಾಶ ಮಾಡಬೇಕಾದದ್ದು ನಮ್ಮೆಲ್ಲರ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಬಾಬಾಸಾಹೇಬ್ ಅಂಬೇಡ್ಕರ್ ಹೇಳುವಂತೆ, "ಜಾತಿ ಎನ್ನುವುದು ಇಟ್ಟಿಗೆಯ ಗೋಡೆ ಅಥವಾ ಮುಳ್ಳು ತಂತಿಯ ಬೇಲಿಯಂತಹ ಒಂದು ಭೌತಿಕ ವಸ್ತುವಲ್ಲ. ಹಿಂದುಗಳು ಪರಸ್ಪರ ಬೆರೆಯುವುದನ್ನು ತಡೆಯುತ್ತಿರುವುದರಿಂದ ಈ ಭೌತಿಕ ತಡೆಯನ್ನು ಕೆಡವಬೇಕೆನ್ನುವುದು ಸರಿಯಾಗದು. ಜಾತಿ ಎನ್ನುವುದು ಒಂದು ಮಾನಸಿಕ ಕಲ್ಪನೆಯಾಗಿದೆ. ಅದೊಂದು ಮಾನಸಿಕ ಸ್ಥಿತಿಯಾಗಿದೆ. ಆದ್ದರಿಂದ, ಜಾತಿಯ ವಿನಾಶವೆಂದರೆ ಒಂದು ಭೌತಿಕ ತಡೆಯ ನಾಶವೆಂದು ಅರ್ಥವಲ್ಲ. ಅದೊಂದು ಮಾನಸಿಕ ಸ್ಥಿತಿಯ ಬದಲಾವಣೆ ಎಂದು ಅರ್ಥ".[೧] ಅಸ್ಪೃಶ್ಯತೆ ಮತ್ತು ಜಾತೀಯತೆಯನ್ನು ತಡೆಯಬೇಕಾದರೆ ಪ್ರತಿಯೊಂದು ಮೇಲು ವರ್ಗದ ಜನ ಸಮುದಾಯದವರಲ್ಲಿ ಸಮಾನತೆಯ ಪರಿಕಲ್ಪನೆ ಹುಟ್ಟಬೇಕು. ಯಾವ ವ್ಯಕ್ತಿಯ ಮಾನಸಿಕ ಸ್ಥಿತಿ ಸಮಸಮಾಜದ ನೆಲೆಯಲ್ಲಿ ಚಿಂತನೆಯನ್ನು ಮಾಡುತ್ತದೆಯೋ ಅಂತಹ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಚಿಂತನೆಗೆ ಮನ್ನಣೆ ದೊರೆಯುತ್ತದೆ. ಆಗ ಆ

ವ್ಯಕ್ತಿಯ ಬೌದ್ಧಿಕ ಮನಸ್ಸು ಚಲನಶೀಲತೆ ಬದಲಾವಣೆಯ ಹಾದಿಯನ್ನು ಹುಡುಕುತ್ತದೆ ಎಂಬುವುದು ಡಾ. ಅಂಬೇಡ್ಕರ್ ಅವರ ಚಿಂತನೆಯಾಗಿದೆ..

ಸಂಸ್ಕೃತಿ ಚಿಂತಕರಾದ ಕೋಟಗಾನಹಳ್ಳಿ ರಾಮಯ್ಯ ಅವರು ಆಧುನಿಕೋತ್ತರ ಸಂದರ್ಭದಲ್ಲಿ ಭಾರತದ ಯಾವ ವ್ಯಕ್ತಿಯನ್ನಾದರೂ ಕೇಳಿದರೆ ಪ್ರತಿಯೊಬ್ಬ ಭಾರತೀಯನೂ ಕೂಡ ಜಾತಿ ಆಧಾರಿತವಾದ ತಾರತಮ್ಯವನ್ನು ಸಾರ್ವಜನಿಕವಾಗಿ ತಪ್ಪು ಎನ್ನುತ್ತಾನೆ. ಆದರೆ ವೈಯುಕ್ತಿಕ ನೆಲೆಯಲ್ಲಿ ಅದನ್ನು ಯಾವ ದ್ವಂದ್ವವೂ ಇಲ್ಲದೆ 'ಸರಿ' ಎಂಬಂತೆ ಆಚರಿಸುತ್ತಾನೆ. ಇಂತಹ ಅಪ್ಪಟ ಆತ್ಮವಂಚನೆಯ ಮನಸ್ಸನ್ನು ಪರಿಶುದ್ಧಗೊಳಿಸಿ ಮಾನವೀಯಗೊಳಿಸುವುದು ಹೇಗೆ? ಇದುವರೆಗಿನ ಸಂತರು, ಮಹಾತ್ಮರು, ಸುಧಾರಕರು, ಚಳುವಳಿಗಾರರು, ಆಯಾಯ ಕಾಲಘಟ್ಟದಲ್ಲಿ ಸಾಮಾಜಿಕ ಆಂದೋಲನಗಳನ್ನು ನಡೆಸಿದ್ದಾರೆ. ಈ ಮೂಲಕ 'ಆಗು' ಮಾಡಿದ್ದು ಮರೆವಿಗೆ ಸರಿದು 'ಏನೂ ಆಗಿಯೇ ಇಲ್ಲ' ಎಂಬಂತೆ ನಿರುಮ್ಮಳವಾಗಿರುವ ಸಮಷ್ಠಿಪ್ರಜ್ಞೆಯ 'ಅಸೂಕ್ಷ್ಮತೆ'ಯನ್ನು ಸೂಕ್ಷ್ಮಗೊಳಿಸುವುದು ಹೇಗೆ? ಭೇದವು ಹೊರಗೆಲ್ಲೋ ಕಾಣುವಂತಿದ್ದರೆ ಅದಕ್ಕೊಂದು ಪರಿಹಾರ ಮಾರ್ಗವೂ ಸಾಧ್ಯವಾಗಬಹುದಿತ್ತೇನೋ? ಆದರೆ ಅದರ ಬೇರಿರುವುದು ಮನಸ್ಸಿನಲ್ಲಿ ಮತ್ತು ನೆನಪಿನಲ್ಲಿ. ಆದ್ದರಿಂದಲೇ ಅಸ್ಪೃಶ್ಯತೆಯ ನಿರ್ಮೂಲನ ಕಾರ್ಯ ಹುತ್ತ ಬಡಿಯುವ ಮಾದರಿಗಳಿಂದ ತುಂಬಿಹೋಗಿದೆ”[೨] ಎಂದಿದ್ದಾರೆ.

ಜಾತಿಪದ್ಧತಿ ಮನುಷ್ಯನಿಗೆ ಒಂದು ಬಗೆಯ ಅಸ್ತಿತ್ವದ ಸ್ಮೃತಿ. ಇದು ಮೇಲ್ವರ್ಗಗಳಿಗೆ ಆನಂದ ಹಾಗೂ ಅಧಿಕಾರದ ಸ್ಮೃತಿಯಾದರೆ, ಅಸ್ಪೃಶ್ಯರಿಗೆ ಆತಂಕ ಹಾಗೂ ಅವಮಾನದ ಸ್ಮೃತಿಯಾಗಿದೆ. ವ್ಯಕ್ತಿಯನ್ನು ಕೀಳರಿಮೆಯ ಉರಿಗೆ ತಳ್ಳುವ ಮೇಲ್ಜಾತಿ ವರ್ಗಗಳ ವೈಯಕ್ತಿಕ ಹಾಗೂ ಸಾಮಾಜಿಕ ಸ್ಮೃತಿಯೇ ಅಸ್ಪೃಶ್ಯತೆ. ಎಲ್ಲರಂತೆ ನಾನೂ ಮನುಷ್ಯ ಎಂದು ಭಾವಿಸಲಾರದ ಮನೋವ್ಯಾಧಿಯನ್ನು ತಣ್ಣಗೆ ಅನುಭವಿಸಲೇಬೇಕಾದ ಅನಿವಾರ್ಯತೆ ಅಸ್ಪೃಶ್ಯನದ್ದಾಗಿದೆ. ದೇಹ ಹಾಗೂ ಮನಸ್ಸುಗಳಿಗೆ ಅಂಟಿಕೊಂಡ ಚಿತ್ರಹಿಂಸೆ ಈ ಅಸ್ಪೃಶ್ಯತೆ. ದಲಿತ ಆತ್ಮಕಥನಕಾರರು ಇಂಥ ಜಾತಿಕೃತ ಅಸ್ಪೃಶ್ಯತೆಯ ಭಿನ್ನಭಿನ್ನ ಬಗೆಗಳನ್ನು ತಮ್ಮ ಜೀವನದುದ್ದಕ್ಕೂ ಅನುಭವಿಸಿದ್ದು, ನೊಂದನೋವನ್ನು ಅನುಭವದ ಆಳದಿಂದ ಅಭಿವ್ಯಕ್ತಿಸಿದ್ದಾರೆ.

ದಲಿತ ಜನರು ಶಾಲೆಯಿಂದ ಕಲಿತು ಉನ್ನತ ಹುದ್ದೆಯನ್ನು ಗಳಿಸಿ ಸಾಧನೆ ಮಾಡಿ ಸಮಾಜದಲ್ಲಿ ತಲೆಯೆತ್ತಿ ಸಬಲೀಕರಣಗೊಂಡರೂ ಜಾತಿಯ ಕಾರಣದಿಂದ ನಿರಂತರವಾಗಿ ಅಸ್ಪೃಶ್ಯತೆಯ ನೋವು ಅಪಮಾನವನ್ನು ಅನುಭವಿಸುತ್ತಲೇ ಇದ್ದಾರೆ. ದಲಿತ ಆತ್ಮಕಥನಕಾರರು ವಿದ್ಯಾರ್ಥಿ ದೆಸೆಯಲ್ಲಿ ಅನುಭವಿಸಿದ ನೋವು, ಅಪಮಾನ, ಹಸಿವು, ಬಡತನ, ಅಸ್ಪೃಶ್ಯತೆ,

ಹೋರಾಟದ ಪ್ರಸಂಗವನ್ನು ಓದಿದ ಯಾರೊಬ್ಬರ ಮನಸ್ಸು ಒಂದರೆಕ್ಷಣ ತಲ್ಲಣಕ್ಕೆ ಒಳಗಾಗುತ್ತದೆ. ಇವರದು ನೋವು, ಅಪಮಾನ, ಸಂಕಷ್ಟಗಳ ನಡುವೆ ರೂಪಿತಗೊಂಡ ವ್ಯಕ್ತಿತ್ವವಾಗಿದೆ. 'ಗೌರ್ಮೆಂಟ್ ಬ್ರಾಹ್ಮಣ'ದಲ್ಲಿ ಅರವಿಂದ ಮಾಲಗತ್ತಿ ಅವರು ಅಸ್ಪೃಶ್ಯರೆಂಬ ಕಾರಣಕ್ಕಾಗಿ ಶಾಲೆಯಲ್ಲಿ ಮೇಲುವರ್ಗದ ಹುಡುಗರು ಕುಳಿತುಕೊಳ್ಳುವ ಮಣೆಯ ಮೇಲೆ ಸರಿಸಮನಾಗಿ ಕುಳಿತುಕೊಳ್ಳುವ ಅವಕಾಶವನ್ನು ಕಳೆದುಕೊಂಡರು. ಇವರನ್ನು ಗೋಣಿಚೀಲದ ಮೇಲೆ ಕೂರಿಸಲಾಗುತ್ತಿತ್ತು. ಶಾಲೆಯಲ್ಲಿ ದಲಿತ ವಿದ್ಯಾರ್ಥಿಗಳಿಗೆ ಮಾತ್ರ ಕಸಗುಡಿಸುವ ಕೆಲಸ ಮೀಸಲಾಗಿತ್ತು. ಅರವಿಂದ ಮಾಲಗತ್ತಿ ಅವರು ತರಗತಿಯ ಕೋಣೆಯಲ್ಲಿ ಕಸ ಗುಡಿಸುವ ಕರ್ತವ್ಯವನ್ನು ಮೀರಿದಾಗಲೂ ಕೂಡ ಭೀಕರ ಶಿಕ್ಷೆಯನ್ನು ಅನುಭವಿಸಿದ್ದಾರೆ. ಇಂತಹ ಶಿಕ್ಷೆಗಳು ದಲಿತ ಮಕ್ಕಳು ಮನೆಯಲ್ಲಿ ಹೇಳಿದ ಪಾಠವನ್ನು ಓದಿಕೊಂಡು ಬರಲಿಲ್ಲ ಎಂದಲ್ಲ. ಶಾಲೆಯಲ್ಲಿ ಪ್ರಾರ್ಥನೆಯಾಗುವುದಕ್ಕಿಂತ ಮುಂಚೆಯೇ ಅವರು ಬಂದು ತರಗತಿಯ ಕಸ ಗುಡಿಸಬೇಕು. ಬೇಗನೆ ಬಂದು ಕಸ ಗುಡಿಸದಿದ್ದರೆ ಈ ಪರಿಯ ಶಿಕ್ಷೆ ಕಟ್ಟಿಟ್ಟ ಬುತ್ತಿಯಾಗಿತ್ತು. ಈ ಬಗೆಯ ಶಿಕ್ಷೆಗಳು ಇಂದಿಗೂ ಶಾಲೆಗಳಲ್ಲಿ ನಡೆಯುತ್ತಿವೆ. ಭಾರತದ ಶ್ರೇಣೀಕೃತ ಜಾತಿ ವ್ಯವಸ್ಥೆಯು ಶೋಷಿತನೊಬ್ಬ ಅಕ್ಷರವಂತನಾಗುವುದನ್ನು ಸಹಿಸುವುದಿಲ್ಲ. ಜಾತಿಯ ಕಾರಣದಿಂದ ಅಲಕ್ಷಿತನಾದ ವ್ಯಕ್ತಿ ಪ್ರಜ್ಞಾವಂತನಾಗಲು ಸ್ವ-ಸಾಮರ್ಥ್ಯದಿಂದ ಶಕ್ತಿ ಮೀರಿ ಪ್ರಯತ್ನಿಸಿದ್ದೇ ಆದರೆ ಆತ ಎದುರಿಸಬೇಕಾದ ಘೋರಸ್ಥಿತಿಗೆ ಹಲವು ಕಾರಣಗಳನ್ನು ಕೊಡಬಹುದು. ಪುರಾಣ ಮೂಲದ ಶಂಭೂಕನ ವಧೆ, ಏಕಲವ್ಯನ ದುರಂತ ಇಂದಿಗೂ ಸುಡುಸತ್ಯವಾಗಿ ನಮ್ಮ ಕಣ್ಣ ಮುಂದಿವೆ. ಈ ಬಗೆಯ ಬಿಸಿ ಅರವಿಂದ ಮಾಲಗತ್ತಿಯವರನ್ನು ಬಿಟ್ಟಿಲ್ಲ. ಶಾಲೆಯ ಕರಿಹಲಗೆ ಮೇಲೆ ತಪ್ಪಾಗಿ ಬರೆದಿದ್ದ ತಮ್ಮ ಹೆಸರನ್ನು ತಿದ್ದಲು ಹೋದ ಆತ್ಮಕಥನಕಾರರನ್ನು ಸವರ್ಣೀಯ ಉಪಾಧ್ಯಾಯರು "ಕತ್ತಿ ಅಂತ ಬರದ್ರು ಏನಾಯ್ತು? ಗತ್ತಿ ಅಂತ ಮಾಡಾಕ ಹೋಗಿದ್ಯಾ? ಮಗಾ ಬರ್ರ್ಯಾಕ ಬಂತು ಅಂತ ತಿದ್ದಾಕ ಹೋಗ್ಯಾನ . . . ಕತ್ತಿ . . . ಕತ್ತಿನೇ. . . ಕತ್ತೆಲ್ಲರ ಕುದುರ್ಯಾಕ್ಕದೇನಾ? . . . ಕತ್ತಿಗೆಲ್ಲ ಯಾಕೆ ಬೇಕು ಹತ್ತಿಕಾಳ ನೀರ? . . .".[೩] ಎಂದು ಛೇಡಿಸುತ್ತಾ ಹೊಡೆದಾಗ ಆತ್ಮಕಥನಕಾರರು ಅಳುತ್ತ ತಮ್ಮ ಅಂಗಿಯನ್ನು ಕಳಚಿ ಕುರ್ಚಿಯನ್ನು ಒರೆಸುತ್ತಾರೆ. ಇಂತಹ ಪ್ರಸಂಗಗಳು ಈ ಆಧುನಿಕ ಸಮಾಜದಲ್ಲಿ ಇಂದಿಗೂ ನಡೆಯುತ್ತಿವೆ.

ವಿದ್ಯಾರ್ಥಿಯ ಈ ಬಗೆಯ ಅವಮಾನಗಳನ್ನು ಅನುಭವಿಸಿದ್ದು ಒಂದು ಬಗೆಯಾದರೆ, ಒಬ್ಬ ದಲಿತ ಅಧಿಕಾರಿ ಕಛೇರಿಗೆ ಹೋದಾಗ ಅನುಭವಿಸಿದ ಅನುಭವವೇ ಬೇರೆಯಾಗಿದೆ. ಅಂತಹ ಸನ್ನಿವೇಶವನ್ನು ಬಿ.ಡಿ.ನಾರಾಯಣದಾಸ್ ಅವರು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

“ನಾನು ಮಿಡ್ಲಸ್ಕೂಲ್ ಎರಡನೇ ತರಗತಿಯಲ್ಲಿದ್ದಾಗ ಡಿ. ದಾಸಪ್ಪ ಎಂಬ ಎರಡನೇ ದರ್ಜೆ ಗುಮಾಸ್ತರು ಚನ್ನರಾಯಪಟ್ಟಣದ ತಾಲ್ಲೋಕು ಆಫೀಸಿನಲ್ಲಿದ್ದರು. ಹೇಗೋ ಅವರ ಪರಿಚಯವಾಯಿತು. ನಾನು ಮೊದಲು ಅವರನ್ನು ತಾಲ್ಲೋಕು ಆಫೀಸಿನಲ್ಲಿ ನೋಡಿದಾಗ, ಅವರು ನೆಲದ ಮೇಲೆ ಒಂದು ಗೋಣಿಚೀಲದ ಮೇಲೆ ಮುಂದುಗಡೆ ಒಂದು ಡೆಸ್ಕ್ ತರಹದ ಮರದ ಪೆಟ್ಟಿಗೆಯನ್ನಿಟ್ಟುಕೊಂಡು ಆಫೀಸ್ ಕೆಲಸ ಮಾಡುತ್ತಿದ್ದರು. ಇದಕ್ಕೆ ಕಾರಣ ಅವರು ಆದಿಕರ್ನಾಟಕ ಜಾತಿಯವರಾಗಿದ್ದದ್ದು. ಇವರ ದರ್ಜೆಯ ಇತರ ಸವರ್ಣೀಯರಿಗೆ ಕುರ್ಚಿ, ಟೇಬಲ್. ಆದರೆ ಹೊಲೆ, ಮಾದಿಗರಿಗೆ ಒಂದು ಮೂಲೆಯಲ್ಲಿ ಗೋಣಿಚೀಲದ ಮೇಲೆ ಕೂರಿಸುತ್ತಿದ್ದರು. ಇದನ್ನ ನಾನು ಈಗ ಯಾರಿಗಾದರು ಹೇಳಿದರೆ ನಂಬವುದೇ ಕಷ್ಟ. ಆದರೆ ಇದು ನನ್ನ ಕಣ್ಣಾರೆ ಕಂಡ ಕಟುಸತ್ಯ”[೪] ಎಂಬ ಈ ಅಂಶವನ್ನು ದಾಖಲಿಸುತ್ತಾರೆ. ಮನುಷ್ಯನಾಗಿ ಹುಟ್ಟಿದ ಮೇಲೆ ಎಲ್ಲರು ಸಮಾನರು ಎಂಬ ಅರಿವೆ ಇಲ್ಲದೆ ವರ್ತನೆ ಮಾಡುವುದು ಈ ಅಸಮಾನತೆಯ ಸಮಾಜದ ದುರಂತವೇ ಸರಿ. ಇಂತಹ ಸನ್ನಿವೇಶವನ್ನು ಅಂಬೇಡ್ಕರ್ ಅವರು ಓದುವಾಗ, ನಂತರ ಬರೋಡ ಮಹಾರಾಜರ ಸಂಬಂಧಿಸಿದ ಆಡಳಿತ ಶಾಖೆಯಲ್ಲಿ ಉನ್ನತ ಹುದ್ದೆಯನ್ನು ಪಡೆದು ಸೇವೆಸಲ್ಲಿಸುವಾಗಲೂ ಮೇಲ್ಜಾತಿಯ ಜನರಿಂದ ಅವಮಾನವನ್ನು ಅನುಭವಿಸಿದ್ದಾರೆ.

ಎಷ್ಟೋ ದಲಿತ ವಿದ್ಯಾರ್ಥಿಗಳು ಹೀಗೆ ಶಾಲೆಯಲ್ಲಿ ನರಳಿ ಅರಳಿದ್ದಾರೆ ಇಂದಿಗೂ ಅರಳುತ್ತಿದ್ದಾರೆ. ದು.ಸರಸ್ವತಿಯವರು ಎಂಟನೆ ಕ್ಲಾಸಿನಿಂದ ಇಂಗ್ಲೀಷ್ ಮೀಡಿಯಂನಲ್ಲಿ ಓದುತ್ತಿರುತ್ತಾರೆ. ಇಂಗ್ಲೀಷ್‌ನಲ್ಲಿ ಮಾತಾಡಲು ಅವರಿಗೆ ಕಷ್ಟವಾಗಿತ್ತು. ಒಂದು ದಿನ ಗಣಿತದ ಟೀಚರ್ ಈ ಸೂತ್ರವನ್ನು $(a+b)^2$ ಬಿಡಿಸಿ ಹೇಳು ಅನ್ನುತ್ತಾರೆ. ಏನೂ ಸರಿಯಾಗಿ ಅರ್ಥವಾಗದ ಸರಸ್ವತಿ ಅವರು ಸುಮ್ಮನೆ ನಿಂತಾಗ ಟೀಚರ್, “ತಲೆ ಒಳ್ಗೆ ಸೆಗ್ಣಿ ತುಂಬಿದೆ. ಒಂದ್ ಸಣ್ ಪ್ರಶ್ನೆಗೆ ಉತ್ರ ಕೊಡೋಕೆ ಬರಲ್ಲ, ಎದೆ ಸೀಳಿದ್ರೆ ನಾಕ್ ಅಕ್ಷರ ಇಲ್ಲ ಜಾತಿ ಹೆಸ್ರು ಹೇಳ್ಕೊಂಡು ಬಂದ್ ಬಿಡ್ತಿರ ಶಾಲೆ ಮಾರ್ಯಾದೆ ತೆಗ್ಯೋಕೆ”[೫] ಎಂದು ಅವಮಾನಿಸುತ್ತಾರೆ. ಇದು ಕೇವಲ ದು.ಸರಸ್ವತಿಯವರನ್ನು ಅವಮಾನ ಮಾಡಿದ್ದಲ್ಲ ಇಡೀ ದಲಿತ ಸಮುದಾಯದ ಅನಕ್ಷರ ಸಮುದಾಯವನ್ನು ಅವಮಾನಿಸಿದ್ದು. ಇವರ ಉದ್ದೇಶ ದುಡಿಯುವವರು ದುಡಿಯುತ್ತಲೇ ಇರಬೇಕು. ಆಳುವವರು ಆಳುತ್ತಲೇ ಇರಬೇಕು ಎಂಬಂತೆ ಇದೆ. ದುಡಿಯುವ ದಲಿತ ಮಕ್ಕಳು ಶಾಲೆಯಲ್ಲಿ ಪ್ರಶ್ನೆಗೆ ಉತ್ತರಿಸದಿದ್ದರೆ ತಲೆಯಲ್ಲಿ ಸೆಗಣಿ ತುಂಬಿದೆ ಎಂದು ಅವಮಾನಿಸುವುದರಿಂದ ದಲಿತರ ಜೀತಗಾರಿಕೆಯನ್ನು ಮುಂದಿನ ಪೀಳಿಗೆಗೂ ವಿಸ್ತರಿಸಿದಂತೆ ಆಗುತ್ತದೆ. ಆಗ ಸರಸ್ವತಿಯವರು “ನಂಗು

ಕೂಗ್ಬೇಕು ಅನ್ಸಿತ್ತು. (a+b)=a^2+2ab+b^2 ಅಂತ, ಆದ್ರೆ ಇಂಗ್ಲೀಷ್‌ನಲ್ಲಿ ಕೂಗೋಕೆ ತೋಚ್ದೆ ಕಣ್ಣಲ್ಲಿ ನೀರ್ ಬಂತು. ಅವಮಾನದ ಕಪ್ಪುಬಣ್ಣ ಭಯವಾಗಿ ನುಸುಳಿತ್ತು".[೬] ಎಂದು ಜಾತಿಯ ಕಾರಣದಿಂದಾದ ಅವಮಾನದಿಂದ ನೊಂದುಕೊಳ್ಳುತ್ತಾರೆ.

ಶಾಲೆಗಳಲ್ಲಿ ಜಾತಿ–ಅಸ್ಪೃಶ್ಯತೆಯ ಅಪಮಾನಗಳನ್ನು ಅನುಭವಿಸಿದ ದಲಿತರು ದಿಟ್ಟವಾಗಿಯೂ ತಲೆಯೆತ್ತಿದ ಪ್ರಸಂಗಗಳು ಇಂದಿಗೂ ನಮ್ಮ ಕಣ್ಣ ಮುಂದಿವೆ. ಮುಳ್ಳೂರು ನಾಗರಾಜ್ ಅವರು ದಲಿತ ಎಂಬ ಪದ ಕೂಡಾ ಚಾಲ್ತಿಯಲ್ಲಿರದಿದ್ದ ಸಂದರ್ಭದಲ್ಲಿ ಶಾಲೆಯಲ್ಲಿ ಓದುತ್ತಿರುತ್ತಾರೆ. ಜಾತಿಯ ಕುರಿತು ತಿಳಿಯದಿದ್ದರೂ ಜಾತಿಯ ಕಾರಣದಿಂದ ನೋವನ್ನು ಅನುಭವಿಸುತ್ತಾರೆ. ಆತ್ಮಕಥನಕಾರರು ಹೇಳುವಂತೆ, "ಹರಿಜನ ಗಿರಿಜನ ಎಂಬ ಪದ ಆಗಲೇ ಬಳಸಿ ಸವಕಲಾಗಿತ್ತು. ನನಗೂ ಅದಕ್ಕೂ ಸಂಬಂಧವಿದೆ ಎಂದು ನನಗೆ ಗೊತ್ತಿರಲಿಲ್ಲ. ಹಲವರು ನನ್ನನ್ನು ಕುರಿತು ಹರಿಜನ ಎಂಬ ಪದವನ್ನು ಬಳಸುತ್ತಿದ್ದುದು ನೆನಪಿದೆ. ಆದರೆ ಅದಕ್ಕೂ ನನಗೂ ಯಾವ ಸಂಬಂಧವೂ ಇಲ್ಲವೆಂಬ ನಿರ್ಭಾವುಕ ಸ್ಥಿತಿಯು ನನ್ನದಾಗಿತ್ತು. ಮನೆಯಲ್ಲಾಗಲಿ, ಸ್ಕೂಲಿನಲ್ಲಾಗಲಿ ಯಾರೂ ಜಾತಿಗಳನ್ನು ಕುರಿತು ಚರ್ಚಿಸುತ್ತಿರಲಿಲ್ಲ. ಹಾಗಾಗಿ ಜಾತಿಗಳನ್ನು ಕುರಿತ ನನ್ನ ತಿಳುವಳಿಕೆಯು ಕೇವಲ ಸೊನ್ನೆಯಾಗಿತ್ತು. ಒಂದು ದಿನ ನಾನು ಹೇರ್ ಕಟಿಂಗ್ ಮಾಡಿಸಿಕೊಂಡಿದ್ದೆ. ಸ್ನಾನವನ್ನು ಆತುರವಾಗಿ ಮಾಡಿಕೊಂಡು ಸ್ಕೂಲಿಗೆ ಹೋಗಿದ್ದೆ ಕಿವಿಯ ಹಿಂಬದಿಯಲ್ಲಿ ಒಂಚೂರು ಕೂದಲು ಅಂಟಿಕೊಂಡಿತ್ತು. ಅದನ್ನು ನೋಡಿದ ನಮ್ಮ ಕೆಂಪಯ್ಯ ಮೇಷ್ಟ್ರು: 'ಏನೋ ಕೂದಲು ಕತ್ತರಿಸಿದ ಮೇಲೆ ನಿಮ್ಮ ಜಾತಿಯವರು ಸ್ನಾನ ಮಾಡುವುದಿಲ್ಲವೆ?' ಅಂದರು. ನಾನು ಕೊಂಚ ಕಕ್ಕಾಬಿಕ್ಕಿಯಾದೆ. ತಕ್ಷಣವೆ ಸಾವರಿಸಿಕೊಂಡು 'ಜಾತಿ ಎಂದರೇನು ಸಾರ್?' ಎಂದೆ. ನನಗಿಂತ ಹೆಚ್ಚಾಗಿ ಆ ಮೇಷ್ಟ್ರಗೆ ಅವಮಾನವಾದಂತಾಗಿ: 'ಸುಮ್ಮನೆ ಕೂರು ಅಧಿಕ ಪ್ರಸಂಗಿ' ಅಂದರು. ಬೀದಿಯಲ್ಲಿ ನನ್ನನ್ನು ಕಂಡೊಡನೆ ಗುರ್ರ್ ಅನ್ನುವ ನಾಯಿಯ ನೆನಪಾಯಿತು. ಆದರೆ ಆ ಪ್ರಶ್ನೆಯಿಂದ ನಾನು ಸಾಕಷ್ಟು ಕಸಿವಿಸಿಗೊಂಡಿದ್ದೆ. ನನಗೆ ಅರ್ಥವೇ ಆಗದ ಒಂದು ಪದವು ನನ್ನನ್ನು ಅಷ್ಟೊಂದು ಘಾಸಿಗೊಳಿಸಿದ್ದು ಅದೇ ಮೊದಲು"[೭] ಹೀಗೆ ಜಾತಿಯೇ ಗೊತ್ತಿರದ ಮಕ್ಕಳ ಮನಸುಗಳನ್ನು ಘಾಸಿಗೊಳಿಸುವಂತೆ ಪಾಠ ಮಾಡುವ ಶಿಕ್ಷಕರೇ ಜಾತಿಯ ಮಾತೆತ್ತಿ ಮಾತನಾಡಿ ಅವಮಾನಿಸುವುದಲ್ಲದೆ ಜಾತಿಯ ವಿಷವನ್ನು ತರಗತಿಯಲ್ಲೆಲ್ಲ ಬಿತ್ತುವುದು ಅಮಾನವೀಯ.

ಇಂತಹ ಸಂದರ್ಭದಲ್ಲಿ ಯು.ಆರ್.ಅನಂತಮೂರ್ತಿಯವರು ಹೇಳುವಂತೆ: "ಈ ಅಸ್ಪೃಶ್ಯತೆ ಅನ್ನೋದು ಬರಿ ಹರಿಜನರ ಮಟ್ಟಿಗೆ ಸೇರಿದ್ದಲ್ಲ. ಎಲ್ಲಿಯವರೆಗೆ ಜಾತಿಯ ಪ್ರಶ್ನೆ

ಜೀವಂತವಾಗಿರುತ್ತದೆಯೋ ಅಲ್ಲಿಯವರೆಗೆ ಅಸ್ಪೃಶ್ಯ ಎಲ್ಲ ಹಂತಗಳಲ್ಲೂ ಉಳಿಯುತ್ತಾನೆ; ಯಾವ ಮೇಲ್ಜಾತಿಯವನಿಗೂ ಅವನ ಕೆಳ ಜಾತಿಯವನು ಅಸ್ಪೃಶ್ಯನೇ ಆಗಿರುತ್ತಾನೆ. ಕೆಳಕೆಳಗಿನ ಹಂತದಲ್ಲೂ ಅಸ್ಪೃಶ್ಯರೂ ಕೂಡ ಅಸ್ಪೃಶ್ಯರನ್ನು ಸೃಷ್ಟಿಸಿಕೊಂಡಿರುತ್ತಾರೆ"೮. ಹೀಗೆ ಪ್ರತಿಯೊಂದು ಜಾತಿಯಲ್ಲೂ ಈ ತಾರತಮ್ಯತೆಗಳನ್ನು ಹೋಗಲಾಡಿಸಬೇಕಾಗಿದೆ. ಈ ಬಗೆಯ ನಿಲುವುಗಳಿಂದ ಇಡೀ ಸಮುದಾಯವೇ ಜಾತಿ ಎಂಬ ಸಂಕೋಲೆಯಿಂದ ಹೊರಬರಬೇಕಾಗಿದೆ.

ಆತ್ಮಕಥನಕಾರ್ತಿಯಾದ ನೇತ್ರಾವತಿಯವರು ಶಾಲೆಯನ್ನು ಮುಗಿಸಿಕೊಂಡು ಎತ್ತುಗಳಿಗೆ ಹುಲ್ಲು ತರಲು ತನ್ನ ಗೆಳತಿಯರೊಂದಿಗೆ ಹೋಗುತ್ತಾರೆ. ಅಲ್ಲಿನ ಅಸ್ಪೃಶ್ಯತೆ ಮತ್ತು ಜಾತೀಯತೆಯ ಮನಸ್ಸುಗಳನ್ನು ಬಿಚ್ಚಿಡುತ್ತಾರೆ. ನೇತ್ರಾವತಿಯವರು ಹುಲ್ಲಿಗೆ ಹೋಗಲು ತನ್ನ ಗೆಳತಿ ಲಕ್ಷ್ಮಿ ಮನೆಗೆ ಹೋದಾಗ ಅವರಿಗೆ ಹೊರಗಡೆ ಕಿಟಕಿಯಲ್ಲಿಟ್ಟ ಗ್ಲಾಸಿನಲ್ಲೇ ಕಾಫಿ ಕೊಡುತ್ತಾರೆ. ಒಂದೊಂದು ಸಾರಿ ಗ್ಲಾಸಿನಲ್ಲಿ ಧೂಳು ಬಿದ್ದಿದ್ದರೂ, ನೋಡಿದರೂ ನೋಡದ ಹಾಗೆ ಅದರಲ್ಲೇ ಹಾಕುತ್ತಿರುತ್ತಾರೆ. ಬೇಡ ಎಂದರೆ ಎಷ್ಟು ಧಿಮಾಕು ಎಂದು ತಿಳಿಯುತ್ತಾರೆ ಅಂತ ಹಾಗೆಯೇ ಕುಡಿದುಬಿಡುತ್ತಾರೆ. ಮತ್ತೆ ಗ್ಲಾಸನ್ನು ತೊಳೆದು ಅಲ್ಲಿಯೇ ಇಡುತ್ತಾರೆ. ಈ ರೀತಿಯ ಅಸ್ಪೃಶ್ಯತೆಯನ್ನು ಅನುಭವಿಸಿದ ನೇತ್ರಾವತಿಯವರಿಗೆ, ಲಕ್ಷ್ಮಿ ಮನೆ ನೋಡಲು ತುಂಬಾ ಚೆನ್ನಾಗಿದ್ದು, ಅವರ ಮನೆಯಲ್ಲೆಲ್ಲಾ ಓಡಾಡಬೇಕು ಅಂತ ಅನ್ನಿಸುತ್ತದೆ. ಆದರೆ ಅದು ಆಗುತ್ತಿರಲಿಲ್ಲ. 'ಒಕ್ಕಲಿಗರ ಮನೆಯಲ್ಲಿ ಹುಟ್ಟಿದಿದ್ದರೆ ಎಷ್ಟು ಚೆನ್ನಾಗಿರ್ತಾ ಇತ್ತು' ಅಂತ ಕನಸು ಕಾಣುತ್ತಾರೆ. ದುರಂತವೋ ಸುಖಾಂತ್ಯವೋ ಎನ್ನುವಂತೆ ನೇತ್ರಾವತಿಯವರ ಜೊತೆ ಶಾಲೆಗೆ ಬರುತ್ತಿದ್ದ "ಕೆಲವು ಗೆಳತಿಯರು ಒಕ್ಕಲಿಗರಾದರೂ ಅವರ ಮನೆಯಲ್ಲಿ ಕದ್ದು ಮುಚ್ಚಿ ಮುಕ್ತವಾಗೇ ನೀರು ಕುಡಿಯುತ್ತಾರೆ. ಅಲ್ಲದೆ, ನಾವು ನಿಮ್ಮ ಮನೆಯಲ್ಲಿ ನೀರು ಕುಡಿದಿರುವ ವಿಷಯವನ್ನು ಯಾರ ಹತ್ತಿರಾನೂ ಹೇಳಬೇಡ. ಮನೆಯಲ್ಲಿ ಗೊತ್ತಾದ್ರೆ ನಮ್ಮನ್ನ ಸಾಯಿಸಾಕ್ತಾರೆ ಎಂದು ಸೂಚಿಸುತ್ತಾರೆ. ಇದರಿಂದ ಅವರು, ನಾನೂ ಯಾರಿಗೂ ಹೇಳಿಕೊಳ್ತಾ ಇರಲಿಲ್ಲ. ಆಗ ಅಂತೂ ನನ್ನ ಫ್ರೆಂಡ್ಸ್ ಮೇಲೆ ನನಗೆ ಎಲ್ಲಿಲ್ಲದ ಅಭಿಮಾನ. ಒಕ್ಕಲಿಗರಾದರೂ ಜಾತಿ ನೋಡದೆ ನಮ್ಮ ಮನೆಯಲ್ಲಿ ನೀರು ಕುಡಿದರಲ್ಲ, ಅವರು ಎಷ್ಟು ಒಳ್ಳೆಯವರು ಅಂತ ಅನ್ನಿಸ್ತಾ ಇತ್ತು"೯ ಎಂದು ತಾವು ಒಕ್ಕಲಿಗರ ಮನೆಯ ಹೊರಗೆ ಕಂಡ ಅಸ್ಪೃಶ್ಯತೆಯನ್ನು ಮರೆತು ತಮ್ಮ ಮನೆಯಲ್ಲಿ ಒಕ್ಕಲಿಗರು ನೀರು ಕುಡಿದಿದ್ದನ್ನು ಮಾನವೀಯ ಮನಸ್ಸಿನಿಂದ ಸ್ಮರಿಸುತ್ತಾರೆ. ಇದು ಅಸ್ಪೃಶ್ಯತೆಯ ನೋವಿದ್ದರೂ ದಲಿತ ಚೇತನಕ್ಕಿರುವ ಅಂತಃಕರಣಕ್ಕೆ ದ್ಯೋತಕವಾಗಿದೆ.

ಜಾತಿಯ ಶ್ರೇಷ್ಠತೆಯ ವ್ಯಸನದ ದುಷ್ಪರಿಣಾಮಗಳು ಅಸಂಖ್ಯ. ಅಕ್ಕಪಕ್ಕದ ಸಹಮಾನವರನ್ನೇ ಸಹಿಸದಂತೆ ಮಾಡುವ ವಿಷಶಕ್ತಿ ಜಾತಿಗಿದೆ. ಹೀಗಾಗಿಯೇ ಅದು ಯಾವಾಗಲೂ ತನ್ನ ಶ್ರೇಷ್ಠತೆಯ ಅಮಲಿನಲ್ಲಿ ಅಂತವರನ್ನು ದೂರದಲ್ಲಿಟ್ಟು ನೋಡುತ್ತದೆ. ಹತ್ತಿರ ಬಂದರೆ ಕೊಲೆ ಮಾಡಲು ಹಿಂದುಮುಂದೆ ನೋಡುವುದಿಲ್ಲ. ಅಂಥ ಒಂದು ಸಂದರ್ಭವನ್ನು ಡಾ.ಜಿ.ಸಂಜೀವರಾಯ ಅವರು ತಮ್ಮ 'ಹೊರಬೀಡು' ಎಂಬ ಆತ್ಮಕಥನದಲ್ಲಿ ದಾಖಲಿದ್ದಾರೆ. ತುಮಕೂರಿನಲ್ಲಿ ಸಾಮಾನ್ಯವಾಗಿ ಗೊಲ್ಲರಹಟ್ಟಿಗಳು ಊರಿಗೆ ಮೂರು ನಾಲ್ಕು ಕಿಲೋಮೀಟರ್ ದೂರ ಇರ್ತವೆ. ಸಾದರ ಕೇರಿ ಮಧ್ಯೆ ಮಾದಿಗರ ಹಟ್ಟಿ ಕೊನೇಲಿ, ಹೊಸಕೋಟೆಯ ಗೊಲ್ರಹಟ್ಟಿಯವ್ರು ಊರಿನೊಳಕ್ಕೆ ಬಂದ್ರೆ ಮಾದಿಗರ ಹಟ್ಟಿ ರಸ್ತೆಯಲ್ಲಿ ಹೋಗುವಂತಿರಲಿಲ್ಲ. ಮಾದಿಗರು ಊರ ಹಿಂದಗಡೆ ಬಳಸ್ಕೊಂಡು ತುಮಕೂರು ಕಡೆ ಹೋಗಬೇಕು. ಕರ್ನಾಟಕದಾದ್ಯಂತ ಸರಿಸುಮಾರು ಎಲ್ಲಾ ಗೊಲ್ರಟ್ಟಿಗಳೂ ಇದೇ ಸ್ಥಿತಿಯಲ್ಲಿವೆ. ಇಂಥ ಸಾಮಾಜಿಕ ಸಂದರ್ಭದಲ್ಲಿ ಸಂಜೀವರಾಯರಿಗೆ ಆದ ಜಾತಿ–ಅಸ್ಪೃಶ್ಯತೆಯ ಅವಮಾನದನುಭವ ಹೀಗಿದೆ: "ನಾನೂ, ರಾಮ ಸೌದೆ ಕಡಿಯೋಕೆ ಹೊಸಕೋಟೆ ಗೊಲ್ರಹಟ್ಟಿಯ ಪಕ್ಕದ ಹೊಲಗಳ ಬೇಲಿ ಹತ್ರಾನೇ ಹೋದ್ವಿ. ಬೇಲಿಯಲ್ಲಿ ಸೌದೆ ಕಡಿಯೋದು ಬೇಲಿ ಬಂಕ ಅಲ್ಲಾಡುವುದನ್ನೇ ನೋಡಿದ ಗೊಲ್ರಟ್ಟಿಯ ಕರೇಕ್ಯಾತ 'ಯಾವನ್ಲೇ ಬೇಲಿ ಕಡಿಯೋನು. ಈ ಮಾದಿಗ್ರಟ್ಟಿ ಜನಗಳಿಗೆ ಮಾನಾನೂ ಇಲ್ಲ, ಮರ್ಯಾದೇನೂ ಇಲ್ಲ. ನಮ್ಹೊಲ್ದಾಗಿರೋ ಸೌದೇನೇ ಆಗ್ಬೇಕಾ?' ಎಂದು ಮಚ್ಚೆತ್ಕೊಂಡು ಒಂದೇ ಉಸಿರಿಗೆ ಓಡೋಡಿ ಬರ್ತಿದ್ದ. ಅವನು ಬರೋ ರಭಸ ನೋಡಿ ನಾನೂ, ರಾಮ ಕಡೀತಿದ್ ಸೌದೇನಾ ಅಲ್ಲೇ ಬಿಟ್ಟು ಎದ್ವೋ ಬಿದ್ವೋ ಅಂತ ಆಲದ ಮರದ ತಗ್ಗಿನ್ ಕಡೆ ಓಡ್ಬಂದು ಕದ್ರಜ್ಜನ ಹತ್ರ ಸೇರ್ಕೊಂಡ್ವಿ. 'ಯಾಕ್ರೋ ಮರೀ ಇಷ್ಟೊಂದ್ ಗಾಬ್ರಿ ಆಗಿದ್ದೀರಾ?' 'ಗೊಲ್ರಹಟ್ಟಿ ಕರೇಕ್ಯಾತ ಓಡ್ ಬತ್ತಾವ್ನೆ ಮಚ್ಚ್ ತಗೊಂಡ್ ಓಡ್ ಬತ್ತಾವ್ನೆ ಅದಿಕ್ಕೆ ಹೆದರಿ ಓಡಿ ಬಂದ್ವಜ್ಜ' 'ಆ ಕಡೆ ಯಾಕ್ ಸೌದೆ ಕಡಿಯೋಕೆ ಹೋಗಿದ್ರಿ? ಗೊಲ್ರಹಟ್ಟೇರಿಗೆ ನಮ್ಮ ಜನಗಳ್ನ ಕಂಡ್ರೆ ಅವ್ರ ದೇವ್ರ್‌ಗೆ ಮೈಲ್ಗೆ ಆಗ್ತೈತೆ ಅಂತ ಹೊಲಗಳಿಗಾಗ್ಲೀ ಅಥ್ವಾ ಅವರ ಹಟ್ಟೀಗಾಗ್ಲೀ ಬಿಟ್ಕೊಳಲಪ್ಪಾ' ಅಂತ ಸಮಾಧಾನಪಡಿಸಿದ".[೧೦] ಹೀಗೆ, ಹೊಸಕೋಟೆಯ ಗೊಲ್ರಹಟ್ಟಿಯವರು ಮಾದಿಗರನ್ನು ತಮ್ಮ ಹಟ್ಟಿಯೊಳಗೆ ಬಿಟ್ಕೊಳ್ಳೋದಿಲ್ಲ ಎಂಬ ಜಾತೀಯತೆ ಮತ್ತು ಅಸ್ಪೃಶ್ಯತೆಯ ಆಚರಣೆಯ ಪ್ರಸಂಗಗಳನ್ನು ದಾಖಲಿಸಿದ್ದಾರೆ.

ಜಾತಿಯ ಅಮಾನುಷ ವರ್ತನೆ ದಲಿತರನ್ನು ಇನ್ನಷ್ಟು ಜರ್ಝರಿತನನ್ನಾಗಿ ಮಾಡುವ ಹಲವು ಪ್ರಸಂಗಗಳು ಇವೆ. ಡಾ.ಎನ್.ಕೆ ಹನುಮಂತಯ್ಯ ಅವರು ತಮ್ಮ ಊರಿನಲ್ಲಿ ಅನುಭವಿಸಿದ ಜಾತೀಯತೆ ಮತ್ತು ಅಸ್ಪೃಶ್ಯತೆಯ ಸಂಗತಿಯನ್ನು ದಾಖಲಿಸಿದ್ದಾರೆ. ಅವರ ಊರಿನ ಲಿಂಗಾಯಿತರು

ಮೊಟ್ಟ ಮೊದಲು ಟಿ.ವಿ ತಂದಿರುತ್ತಾರೆ. ಅವರ ಮನೆಯ ಬಾಗಿಲಾಚೆ ಗುಂಪಾಗಿ ನಿಂತು ಹಟ್ಟಿಯ ಜನರೆಲ್ಲ ಟಿವಿ ನೋಡುತ್ತಿರುತ್ತಾರೆ. ಆದರೆ, ಊರ ಹುಣಿಸೆಮರದ ಕೆಳಗೆ ಬೀಡುಬಿಟ್ಟು ಕಾಗೆ, ಕೊಕ್ಕರೆಗಳನ್ನು ತಿಂದು ಜೀವಿಸುವ ಅಲೆಮಾರಿಗಳು ಸಲೀಸಾಗಿ ಲಿಂಗಾಯ್ತರ ಮನೆಯೊಳಗೆ ಪ್ರವೇಶಿಸುವ ಅವಕಾಶ ಇರುತ್ತದೆ. ಇದನ್ನು ಸ್ವಾನುಭವದಿಂದ ಕಂಡ ಲೇಖಕರು, "ನಮ್ಮಷ್ಟು ಶುಚಿ ಇಲ್ಲದ ಆ ಜನರನ್ನು ಒಳಗೆ ಬಿಟ್ಟುಕೊಂಡು ನಮ್ಮನ್ನು ಆಚೆ ನಿಲ್ಲಿಸುತ್ತಿದ್ದುದು ನನಗೆ ಕಣ್ಣೀರು ಬರಿಸುತ್ತಿತ್ತು. ಒಂದು ದಿನ ಹುಣಸೆಮರದ ಕೆಳಗೆ ಬೀಡುಬಿಟ್ಟ ಹೆಂಗಸೊಬ್ಬಳು ನಮ್ಮ ಹಟ್ಟಿಗೆ ಭಿಕ್ಷಕ್ಕೆ ಬಂದಳು. ನಮ್ಮ ಮನೆಯ ಹತ್ತಿರ ಬಂದು ಭಿಕ್ಷೆ ಕೇಳಿದಳು. ಒಳಗೆ ಅವ್ವ ರೊಟ್ಟಿ ಹಾಕುತ್ತಿದ್ದಳು. ನಾನು ಆ ಹೆಂಗಸಿಗೆ, 'ಅಮ್ಮ ಬಿಸಿರೊಟ್ಟಿಯನ್ನು ಕೊಡುತ್ತೇನೆ. ತೆಗೆದುಕೊಳ್ತೀಯಾ?' ಎಂದೆ. ಅದಕ್ಕೆ ಆ ಮುದುಕಿ ಹೆದರಿದವಳಂತೆ, 'ಅಯ್ಯೋ ಶಿವನೇ, ಎಲ್ಲಾದರೂ ಉಂಟೇ? ಮೇಲೆ ಹರಿಯೋ ನೀರು ಮೇಲೆ ಹರಿಯಬೇಕು. ಕೆಳಗೆ ಹರಿಯೋ ನೀರು ಕೆಳಗೆ ಹರಿಯಬೇಕು. ರೊಟ್ಟಿಗಿಟ್ಟಿ ಬೇಡ. ಅಕ್ಕಿ, ರಾಗಿ ಇದ್ರೆ ಕೊಡಪ್ಪ' ಎಂದಳು."[೧೧] ಹನುಮಂತಯ್ಯನವರ ನಿಲುವು ಪ್ರತಿಯೊಬ್ಬ ಮನುಷ್ಯರು ತಮ್ಮ ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಒಂದೊಂದು ಕಾಯಕ ಮಾಡುತ್ತಾರೆ. ಕೆಲಸದಲ್ಲಿ ಯಾವುದೇ ಮೇಲು ಕೀಳು ಇಲ್ಲ. ಅಂತಹ ಸನ್ನಿವೇಶದಲ್ಲಿ ಭಿಕ್ಷುಕಿಗೆ ತಂಗಳ ಅನ್ನಕ್ಕಿಂತ ಬಿಸಿ ರೊಟ್ಟಿ ಕೊಡುತ್ತೇನೆ ತಗೆದುಕೊ ಎಂದಾಗ ಆಕೆ ಅಕ್ಕಿ, ರಾಗಿ, ಕೊಡಿ ಎಂದು ಕೇಳುವುದರ ಹಿನ್ನೆಲೆಯಲ್ಲಿ ಜಾತೀಯತೆಯ ಅಂಶ ಅಡಗಿದೆ. ಈ ದಲಿತರು ಮಾಡಿದ ಅಡುಗೆ ಬೇಡ ಎಂಬ ಮನೋಧೋರಣೆಯನ್ನು ಭಿಕ್ಷುಕಿ ಹೊಂದಿರುವುದು ಒಂದು ಕಡೆ ಅದರೆ, ಲಿಂಗಾಯಿತರ ಮನೆಯಲ್ಲಿ ಟಿ.ವಿ.ನೋಡಲು ಪ್ರವೇಶ ದೊರೆಯದ ಸ್ಥಿತಿ. ಮತ್ತೊಂದು ಕಡೆಯ ಶೋಷಣೆಯಾಗಿರುವುದನ್ನು ಇಲ್ಲಿ ಕಾಣಬಹುದು. ಹೀಗೆ ಭಿಕ್ಷುಕಿಯರಿಂದ ಹಿಡಿದು ಮೇಲುವರ್ಗದವರೆಗಿನ ವಿಭಿನ್ನ ಸ್ತರದ ಜನರಲ್ಲಿ ಈ ಬಗೆಯ ಜಾತೀಯತೆಯ ಮನೋಧರ್ಮವನ್ನು ಇಂದಿಗೂ ಹಾಗೇ ಕಾಪಾಡಿಕೊಂಡು ಬರುತ್ತಿರುವಂತಹ ನಿಲುವುಗಳನ್ನು ಗುರುತಿಸಬಹುದು.

ಜಾತೀಯತೆ ಎನ್ನುವುದು ಕೆಲವೊಂದು ಸಲ ವಿಚಿತ್ರವಾದ ಹಂತಕ್ಕೆ ತಲುಪುತ್ತದೆ. ಇದು ಊಟದ ಸಮಯದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇಂತಹ ಪ್ರಸಂಗವನ್ನು ಲಕ್ಷ್ಮಣ್ ಅವರು ತಮ್ಮ 'ಸಂಬೋಳಿ' ಆತ್ಮಕಥನದಲ್ಲಿ ಈ ರೀತಿ ಹೇಳುತ್ತಾರೆ: ತರಗತಿಯ ಸಮಯದಲ್ಲಿ ಸಹಪಾಠಿಯಾದ ರಾಘವೇಂದ್ರ ಎಂಬುವವನು ಊಟದ ಸಮಯದಲ್ಲಿ ಎಲ್ಲಾ ಹುಡುಗರು ಆಚೆಗೆ ಹೋದ ಮೇಲೆ ಊಟ ಮಾಡುವ ಪರಿಪಾಠದವನಾಗಿರುತ್ತಾನೆ. "ಯಾರಾದ್ರೂ ಹುಡುಗ್ರು ಅವ್ನ ಊಟದ

ಡಬ್ಬಿ ಮುಟ್ಟುಟ್ರೆ ಅವ್ನು ಊಟನೇ ಮಾಡ್ತಿರ್ಲಿಲ್ಲ”.[೧೨] ಎಂದು ಊಟದ ಡಬ್ಬಿಯನ್ನೇ ಬಿಸಾಡುವುದು ಅಸ್ಪೃಶ್ಯತೆಯ ಕರಾಳ ರೂಪವನ್ನು ಎತ್ತಿ ತೋರಿಸುತ್ತದೆ.

ಹಾಗಂತ ಎಲ್ಲ ಜಾತಿಗಳಲ್ಲೂ ಎಲ್ಲರೂ ಕ್ರೂರಿಗಳಾಗಿರುವುದಿಲ್ಲ. ಜಾತಿಯೊಳಗಿದ್ದೂ ಮನುಷ್ಯ ಪ್ರೀತಿಯನ್ನು ತೋರಿಸುವ ಜನರೂ ಇದ್ದಾರೆ, ಇಂತಹ ಸಂದರ್ಭಗಳೂ ದಲಿತ ಆತ್ಮಕಥೆಗಳಲ್ಲಿ ದಾಖಲಾಗಿವೆ. ತುಂಬಾಡಿ ರಾಮಯ್ಯ ಅವರ ‘ಮಣೆಗಾರ’ದಲ್ಲಿ ಇಂಥ ಜನ–ಸಂಗತಿಗಳನ್ನು ಕುರಿತು ತುಂಬಾ ಆಪ್ತವಾಗಿ ಕಂಡಿರುವ ಬಗೆಯನ್ನು ನಿರೂಪಿಸಿದ್ದಾರೆ: “ನಮ್ಮ ಹಳ್ಳಿಯಲ್ಲಿ ಲಿಂಗಾಯಿತರ ಎರಡು ಮನೆ ಮತ್ತು ಜೈನರ ಎರಡು ಮನೆಗಳನ್ನು ಬಿಟ್ಟರೆ, ಉಳಿದೆಲ್ಲ ಜಾತಿಗಳವರು ಪರಸ್ಪರ ಎಲ್ಲರನ್ನೂ ಅಣ್ಣ, ತಮ್ಮ, ಅಕ್ಕ, ತಂಗಿ, ಚಿಕ್ಕಪ್ಪ, ದೊಡ್ಡಪ್ಪ, ತಾತ, ಅತ್ತೆ ಎಂದೇ ಸಂಬೋಧಿಸುತ್ತಾ ಮಾತಾಡುತ್ತಾರೆ. ಕುರುಬರ ಬೀರಯ್ಯನವರ ಹೆಂಡತಿ ಮುತ್ತಮ್ಮ ಮತ್ತು ಪುಟ್ಟರಂಗಯ್ಯನವರ ಹೆಂಡತಿ ನರಸಮ್ಮನವರು ನನಗೆ ನಮ್ಮ ಹಳ್ಳಿಯ ಸಂಪ್ರದಾಯದಂತೆ ಅತ್ತೆಯರಾಗಬೇಕು. ಅವರೂ ಕೂಡ ನನ್ನನ್ನು ‘ಅಳಿಯಾ’ ಎಂದೇ ಕೂಗುತ್ತಿದ್ದರು.....ಆದರೆ ನಮ್ಮ ಹಳ್ಳಿಯಲ್ಲಿದ್ದ ಜೈನರ ಪಾರ್ಶ್ವನಾಥಪ್ಪ ಮತ್ತು ಜ್ಯೋತಮ್ಮನವರ ಮನೆಗಳಲ್ಲಿದ್ದ ಅಂಗಡಿಗಳಿಗೆ ನಾವು ಸಾಮಾನು ಕೊಳ್ಳಲು ಹೋದರೆ, ಅವರು ತೊಣಚ ಹತ್ತಿದ ಹಸು ಎಗರಾಡುವಂತೆ, ನಮ್ಮನ್ನು ನೋಡಿದ ಕೂಡಲೇ ಎಗರಾಡುತ್ತಿದ್ದರು. ಎದ್ದು ಓಡಾಡಲಾರದಷ್ಟು ಸ್ಥೂಲದೇಹಿಯಾಗಿದ್ದ ಜ್ಯೋತಮ್ಮನವರ ತಾಯಿ ಸಿರಿದೇವಮ್ಮನವರು, ಒಂದು ಉದ್ದನೆ ಬಿದಿರುಕೋಲಿಗೆ ತಟ್ಟೆಯನ್ನು ಸಿಕ್ಕಿಸಿ ಕುಂತಲ್ಲಿಂದಲೇ ಕಿಟಕಿಯಲ್ಲಿ ನಿಂತಿರುತ್ತಿದ್ದ ನಮಗೆ ವ್ಯಾಪಾರ ಕೊಡುತ್ತಿದ್ದರು. ಅವರ ಮಕ್ಕಳು ನಮ್ಮ ಜೊತೆಯಲ್ಲಿ ಆಟವಾಡುತ್ತಿದ್ದರೆ, ಕೂಡಲೆ ಅವರನ್ನು ಎಳೆದುಕೊಂಡು ಹೋಗಿ, ಕೆನ್ನೆಗೆ ನಾಲ್ಕು ಬಿಗಿದು, ಅವರ ಕೈಕಾಲು ತೊಳೆದು ಮನೆಯೊಳಗೆ ಕರೆದುಕೊಳ್ಳುತ್ತಿದ್ದರು. ಇದೆಲ್ಲಾ ಅರ್ಥವಾಗದ ನಾವು ಬೆಪ್ಪಾಗಿ ನೋಡುತ್ತಾ ನಿಂತಿರುತ್ತಿದ್ದೆವು.”[೧೩] ಹೀಗೆ ಮೇಲ್ಜಾತಿಗಳಿಂದ ಅಸ್ಪೃಶ್ಯತೆಗೆ ಒಳಗಾದ ಮಣೆಗಾರರು, ಅಸ್ಪೃಶ್ಯತೆಯ ಕೂಪದಲ್ಲೇ ಇರುವ ದಲಿತ ಸಮುದಾಯದೊಳಗಿನ ಹೊಲೆಯರಿಂದಲೂ ಅಸ್ಪೃಶ್ಯತೆಯ ನೋವನ್ನು ಉಂಡಿದ್ದಾರೆ. ಅವರೇ ದಾಖಲಿಸಿರುವಂತೆ, “ನಮ್ಮೊಂದಿಗಿನ ಹೊಲೆಯರ ನಡವಳಿಕೆ ಇನ್ನೂ ವಿಚಿತ್ರವಾಗಿತ್ತು. ನಮ್ಮ ಹಳ್ಳಿಯಲ್ಲಿ ಮಣೆಗಾರರಿಗೆ ಒಂದು ಬಾವಿ, ಹೊಲೆಯರಿಗೇ ಒಂದು ಬಾವಿ ಇತ್ತು. ಅವರ ಬಾವಿಯಲ್ಲಿ ನಾವಾಗಲೀ ಅಥವಾ ನಮ್ಮ ಬಾವಿಯಲ್ಲಿ ಹೊಲೆಯರಾಗಲೀ ಎಂದೂ ನೀರು ಸೇದುವಂತಿರಲಿಲ್ಲ! ಹೊಲೆಯರ ಹೆಂಗಸರು ನಮ್ಮ ಹಟ್ಟಿಗೆ ಕೂಲಿಯಾಳುಗಳನ್ನು ಕರೆಯಲು ಬಂದಾಗ, ಕೆಂಡದ ಮೇಲೆ ನಡೆದು ಬರುವಂತೆ ಬಂದು ಹೋಗುತ್ತಿದ್ದರು. ತಮ್ಮ ಹಟ್ಟಿಗೆ ಹೋದಕೂಡಲೆ ಸಗಣಿ–ಗಂಜಲ ತುಳಿದು

ತಮ್ಮ ಕಾಲುಗಳನ್ನು ಪಾವನವಾಗಿಸಿಕೊಳ್ಳುತ್ತಿದ್ದರು."[೧೪] ಈ ಸಂದರ್ಭವನ್ನು ಗಮನಿಸಿದಾಗ ದಲಿತ ಸಮುದಾಯದವರಲ್ಲೇ ಎಡಗೈ (ಮಾದಿಗ) ಬಲಗೈ (ಹೊಲಯ) ಎಂಬ ಪಂಗಡಗಳು ಇದ್ದು, ನಾವು ಮಾದಿಗರಿಗಿಂತ ಶ್ರೇಷ್ಠ ಎಂಬ ನಿಲುವುವನ್ನು ಹೊಲೆಯರು ಪ್ರತಿಪಾದಿಸುತ್ತಾರೆ. ಆದರೆ ಈ ಅಸಮಾನತೆಯ ಸಮಾಜದಲ್ಲಿ ಎಲ್ಲರೂ ಸಮಾನರು. ನಾವುಗಳು ಶತಮಾನಗಳಿಂದ ಮೇಲುವರ್ಗದವರ ನಿರಂತರ ಶೋಷಣೆಯಿಂದ ನೋವನ್ನು ಅನುಭವಿಸಿಕೊಂಡು ಬಂದಿದ್ದೇವೆ ಎಂಬ ಅಂಶವನ್ನು ಅರಿತುಕೊಂಡು ಶಿಕ್ಷಣದ ಮೂಲಕ ಬಿಡುಗಡೆಯ ಹಾದಿಯನ್ನು ಈ ದಲಿತ ಸಮಾಜ ತುಳಿಯಬೇಕಿದೆ.

ಇಂತಹ ಸಮಾನತೆಯ ನಿಲುವನ್ನು ಬಿ.ಡಿ.ನಾರಾಯಣದಾಸ್ ಅವರು ತಮ್ಮ ಆತ್ಮಕಥನದಲ್ಲಿ ದಾಖಲಿಸುತ್ತಾರೆ, "ನನ್ನ ತಂದೆ ತಾಯಿಯವರಿಗೆ ನಾನು ಹೊಳೆನರಸೀಪುರದಲ್ಲಿ ಹೆಣ್ಣನ್ನು ನೋಡಿರುವುದು ಮತ್ತು ನಮಗೂ ಅವರಿಗೂ ಇರುವ ಸ್ವಲ್ಪ ಜಾತಿ ವ್ಯತ್ಯಾಸ ಎಲ್ಲವನ್ನೂ ಹೇಳಿದ್ದೆ. ಅವರು ಹಳ್ಳಿಯವರಾದರೂ ನಮ್ಮ ನಮ್ಮಲ್ಲಿರುವ ಒಳ ಜಾತಿಯ ವ್ಯತ್ಯಾಸದಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಒಂದು ಸಾರಿ ೧೯೪೨ರಲ್ಲಿ ನನ್ನ ಸ್ನೇಹಿತರಾದ ಮೂಡಲಗಿರಿಯಪ್ಪ ಎಂಬ ಮಾದಿಗರ ಹುಡುಗನನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೆ. ನನ್ನ ತಾಯಿಯವರಿಗೆ ಗುಟ್ಟಾಗಿ, 'ನೋಡವ್ವ, ಈ ಹುಡುಗ ಮಾದಿಗರವನು. ನೀನೇನೂ ತಿಳಿದುಕೊಳ್ಳಬೇಡ' ಎಂದು ಹೇಳಿದೆ. ಅದಕ್ಕೆ ಆ ದಿನ ನನ್ನ ತಾಯಿ ಹೇಳಿದ ಮಾತು ಇನ್ನೂ ನೆನಪಿದೆ. ಅದಕ್ಕೇನಂತೆ ಹೋಗೋ ಮಗ. ಅವರೇನು. ನಾವೇನು ಎಲ್ಲಾ ಮನುಷ್ಯರಲ್ಲವೇ ಎಂದು ಹೇಳಿ ನಮ್ಮಿಬ್ಬರನ್ನು ಜೊತೆಯಲ್ಲೇ ಕೂರಿಸಿ ಊಟ ಹಾಕಿ ಚೆನ್ನಾಗಿ ಉಪಚಾರ ಮಾಡಿ ಕಳುಹಿಸಿದರು"[೧೫] ಹೀಗೆ ಜಾತಿಯಿಂದ ಜಾತಿ, ಜಾತಿಯೊಳಗಿಂದ ಒಳಜಾತಿ, ಜಾತಿಯಿಂದ ಉಪಜಾತಿಗಳು ಅಸ್ಪೃಶ್ಯತೆಗೆ ಒಳಗಾಗುತ್ತಿರುವಾಗಲೇ ಪರಸ್ಪರ ಮನುಷ್ಯ ಸಂಬಂಧಗಳನ್ನು ಆಳವಾಗಿ ಅರಿತವರು ದಲಿತ ಲೋಕದಲ್ಲಿರುವ ಸಂಗತಿಯನ್ನು ದಲಿತ ಆತ್ಮಕಥನಕಾರರು ಮರೆತಿಲ್ಲ.

ಪರಂಪರಾಗತ ಸಾಂಸ್ಕೃತಿಕ ನಂಬಿಕೆಗಳ ಕಾರಣದಿಂದಾಗಿ ಒಂದು ಜಾತಿಯೊಳಗಿನ ಉಪಜಾತಿಗಳು ತಮಗೆ ತಾವು ಇತರ ಜಾತಿಗಳಿಂದ ದೂರವಿರುವ ನೀತಿ–ನಡವಳಿಕೆಗಳನ್ನು ರೂಢಿಸಿಕೊಂಡಿರುವುದೂ ಇದೆ. ಮಾದಿಗ ಸಮುದಾಯದಲ್ಲಿ ದಕ್ಕಲರು ಎಂಬುದು ಅಂಥ ಒಂದು ಉಪಜಾತಿ. ಮಣೆಗಾರರ ಕುಲಗುರುಗಳಾದ ಆದಿಜಾಂಬವ ಮುನಿಗಳು ಯಾವುದೋ ಒಂದು ಕಾಲದಲ್ಲಿ ತಮ್ಮ ಪರಿವಾರದೊಂದಿಗೆ ಕುದುರೆ ಮೇಲೆ ಬಂದು ಕಟ್ಟೆಮನೆ ಯಜಮಾನರ ಮನೆಯಲ್ಲಿ ಬಿಡಾರ ಹೂಡುತ್ತಿದ್ದರು. ಈ ಕಟ್ಟೆಮನೆಗೆ ಒಳಪಡುವ ಎಲ್ಲ ಊರುಗಳ ಹಟ್ಟಿಗಳ

ಯಜಮಾನರುಗಳು ಆದಿಜಾಂಬವ ಮುನಿಗಳಿಗೆ ಕಪ್ಪ-ಕಾಣಿಕೆಗಳನ್ನು ಒಪ್ಪಿಸಿ ಬರುತ್ತಿದ್ದರು. ಕ್ರಮೇಣ ಮಾದಿಗ ಜಾತಿಯವರಿಗೆ ಒಂದು ಹೊತ್ತಿನ ಊಟಕ್ಕೆ ಕಷ್ಟಪಡುವಂತಾದ ಮೇಲೆ ಕಪ್ಪ-ಕಾಣಿಕೆಗಳನ್ನು ಕೊಡುವುದನ್ನು ನಿಲ್ಲಿಸಿದರು. ಅಲ್ಲಿಂದಾಚೆಗೆ ಆದಿಜಾಂಬವ ಮುನಿಗಳು ಕಪ್ಪ-ಕಾಣಿಕೆಗಾಗಿ ಮಲ್ಲೇಕಾವಿಗೆ ಬರುವುದನ್ನು ನಿಲ್ಲಿಸಿರುತ್ತಾರೆ. ಇದು, ಮೇಲ್ಜಾತಿಗಳು ಜಾತಿಯ ವಿಷ ಮನಸ್ಸಿನಿಂದ ತೋರುವ ತಿರಸ್ಕೃತ ಅಸ್ಪೃಶ್ಯತೆಯ ಬದಲಾಗಿ ತಮಗೆ ತಾವೇ ನಿಷಿದ್ಧ ಹೇರಿಕೊಂಡ ಮುಗ್ಧನಂಬಿಕೆಯ ಆಹ್ವಾನಿತ ಅಸ್ಪೃಶ್ಯತೆ ಎಂದು ಕರೆಯಬಹುದು.

ದಕ್ಕಲರು ಸುಗ್ಗಿ ಕಾಲದಲ್ಲಿ ಬಂದು ಮಾದಿಗ ಮಣೆಗಾರರ ಹಟ್ಟಿಯಿಂದ ದೂರದಲ್ಲಿ ಡೇರೆ ಹಾಕಿ ನೆಲೆಗೊಳ್ಳುತ್ತಾರೆ. ದಕ್ಕಲರು ಮಣೆಗಾರರ ಮಕ್ಕಳೆಂದು ಹಿರೀಕರ ನಂಬಿಕೆ. ತುಂಬಾಡಿ ರಾಮಯ್ಯನವರು ಹೇಳುವಂತೆ, “ದಕ್ಕಲರು ಮಣೆಗಾರರ ಹಟ್ಟಿಯ ಒಳಗಡೆ ಎಂದೂ ಬರುತ್ತಿರಲಿಲ್ಲ. ದಕ್ಕಲರ ಮುಖಂಡ ನಮ್ಮ ಹಟ್ಟಿಯಿಂದ ಸ್ವಲ್ಪ ದೂರದಲ್ಲಿ ನಿಂತು ‘ಹಿಟ್ಟಪ್ಪೋ’ ಎಂದು ಜೋರಾಗಿ ಕೂಗುತ್ತಿದ್ದ. ಹಾಗೆ ಕೂಗಿದ ಮರುಗಳಿಗೆಯಲ್ಲೇ, ನಮ್ಮ ಮಣೆಗಾರರ ಹಟ್ಟಿಯ ಎಲ್ಲರೂ, ತಮ್ಮ ತಮ್ಮ ಮನೆಗಳಲ್ಲಿದ್ದ ಹಿಟ್ಟನ್ನೋ, ಸಾರನ್ನೋ ಏನಾದರೊಂದನ್ನು ತೆಗೆದುಕೊಂಡು ಹೋಗಿ ದಕ್ಕಲರ ಮುಖಂಡನಿಗೆ ಕೊಡಬೇಕಾಗುತ್ತಿತ್ತು. ಕೊಡುವುದು ಸ್ವಲ್ಪ ತಡವಾದರೂ ದಕ್ಕಲೋರೋನು ಎಲ್ಲರನ್ನೂ ಜೋರಾಗಿ ಬಯ್ಯಲು ತೊಡಗುತ್ತಿದ್ದ. ಈ ಸಂಪ್ರದಾಯ ದಕ್ಕಲರು ಹಾಗೂ ಮಣೆಗಾರರ ನಡುವೆ ಈಗಲೂ ಇದೆ”.[೧೬] ಈ ಅನಿಷ್ಠ ನಂಬಿಕೆ ಸಂಪ್ರದಾಯಗಳು ಮನುಷ್ಯ ಮನುಷ್ಯನನ್ನೇ ಕೀಳಾಗಿ ಕಾಣುವ ಪ್ರವೃತ್ತಿಯನ್ನು ಬೆಳಸಿದಂತೆ ಆಗುತ್ತದೆ. ಇಂತಹ ವಿಚಾರಗಳಿಂದ ದಲಿತರು ಮುಕ್ತಿ ಪಡೆದು ಅಂಬೇಡ್ಕರ್, ಲೋಹಿಯಾ ಚಿಂತನೆಗಳನ್ನು ಅಳವಡಿಸಿಕೊಂಡು ಸಮಾನತೆಯೆಡೆಗೆ ಸಾಗುವಂತೆ ಮಾಡುವ ಹೊಣೆಗಾರಿಕೆ ದಲಿತ ಸಮುದಾಯದ ಮೇಲಿದೆ.

ಶತ-ಶತಮಾನಗಳಿಂದ ದೇವಾಲಯ ಪ್ರವೇಶ ನಿರಾಕರಣಗೆ ಒಳಗಾಗಿದ್ದ ದಲಿತರಿಗೆ ಹಲವು ಕಾರಣಗಳಿಂದ ದೇವಸ್ಥಾನದ ಪ್ರವೇಶ ದೊರೆತಾಗ ಅವರಿಗಾಗುವ ಆನಂದ ಅಷ್ಟಿಷ್ಟಲ್ಲ. ದೇವಸ್ಥಾನದ ನಿರ್ಮಾಣೋತ್ತರದಲ್ಲಿ ದಲಿತರಿಗೆ ಜಾತಿಕಾರಣದಿಂದಾಗುವ ಅಸ್ಪೃಶ್ಯತೆಯ ಆಚರಣೆ, ದೇವಸ್ಥಾನದ ನಿರ್ಮಾಣಪೂರ್ವದಲ್ಲಿ ಅಂತಹ ಯಾವ ಜಾತಿಯ ಸೊಂಕುಗಳು ಇರುವುದಿಲ್ಲ. ಅಲ್ಲಿ ದೇವಸ್ಥಾನದ ನಿರ್ಮಾಣಕ್ಕೆ ದಲಿತರ ಕಾಯಕದ ಅವಶ್ಯಕತೆ ಇರುತ್ತದೆ. ಹೀಗಾಗಿ ಊರು ಕೇರಿಯ ಜನರನ್ನು ತನ್ನ ಆಸ್ತಿಯೆಂಬಂತೆ ದೇವರ ಸೇವೆಯ ನೆಪದಲ್ಲಿ ಬಳಸಿಕೊಳ್ಳುತ್ತಾರೆ. ತುಂಬಾಡಿ ರಾಮಯ್ಯ ಅವರ ಊರಿನಲ್ಲೊಂದು ಆಂಜನೇಯ ಸ್ವಾಮಿ ದೇವಾಲಯವಿರುತ್ತದೆ.

ಇದನ್ನು ದೊಡ್ಡಗುಡಿ ಎಂದು ಕರೆಯುತ್ತಾರೆ. ಅದು ಕಾಲಾನಂತರ ಶಿಥಿಲವಾಗಿ ಬೀಳುವ ಸ್ಥಿತಿಯಲ್ಲಿದ್ದು ಅದನ್ನು ಕಿತ್ತು ಅದೇ ಜಾಗದಲ್ಲಿ ಹೊಸ ದೇವಸ್ಥಾನ ಕಟ್ಟಲು ಊರಿನ ಜನ ತೀರ್ಮಾನಿಸುತ್ತಾರೆ. ಅದೇ ಊರಿನವರೇ ಆದ ಕಂಟ್ರಾಕ್ಟರ್ ದೊಡ್ಡಣ್ಣನವರಿಗೆ ದೇವಸ್ಥಾನ ಕಟ್ಟುವ ಜವಾಬ್ದಾರಿಯನ್ನು ವಹಿಸಲಾಗುತ್ತದೆ. ಹಳೇ ದೇವಸ್ಥಾನವನ್ನು ಕೆಡವಿ ಗರ್ಭಗುಡಿಯಿಂದ ಹೊಸದಾಗಿ ಕಟ್ಟಲು ಕೆಲಸ ಪ್ರಾರಂಭಿಸಬೇಕಾಗಿದ್ದು ಕಾಲೇಜಿಗೆ ಬೇಸಿಗೆ ರಜೆ ಇದ್ದುದರಿಂದ ದೊಡ್ಡಣ್ಣನವರ ಹತ್ತಿರ ತುಂಬಾಡಿ ರಾಮಯ್ಯ ಅವರೂ ದೇವಸ್ಥಾನ ಕಟ್ಟುವ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಈ ಕಾಯಕದ ಸಂದರ್ಭದಲ್ಲಿ ರಾಮಯ್ಯ ಅವರು ಅನುಭವಿಸಿದ ಆನಂದವನ್ನು ಅವರ ಮಾತುಗಳಲ್ಲೇ ಕೇಳಬೇಕು: “ಹಳೇ ದೇವಸ್ಥಾನದ ಗೋಡೆಯ ಕಲ್ಲುಗಳನ್ನು ಕೀಳುವ ಕೆಲಸವನ್ನು ನನಗೆ ವಹಿಸಿದ್ದರು. ಆ ಕೆಲಸವನ್ನು ಒಬ್ಬನೇ ಮಾಡಬಹುದಾದ್ದರಿಂದ, ದೊಡ್ಡಣ್ಣನವರು ನನ್ನೊಬ್ಬನನ್ನೆ ನೇಮಿಸಿದರು. ನಾನು ಹಳೇ ದೇವಸ್ಥಾನದ ಕಲ್ಲುಗಳನ್ನು ಒಂದೊಂದೆ ನಿಧಾನವಾಗಿ ಬಿಡಿಸಿ ಕೀಳುತ್ತಿದ್ದೆ. ದೇವಸ್ಥಾನ ಕಟ್ಟುವವರೆಗೂ ಆಂಜನೇಯನ ವಿಗ್ರಹ ಬಿಸಿಲಿಗೆ ಒಣಗಬಾರದೆಂದು ವಿಗ್ರಹಕ್ಕೆ ಹುಲ್ಲನ್ನು ಸುತ್ತಿದ್ದರು. ನಾನು ಸುತ್ತಿದ್ದ ಹುಲ್ಲನ್ನು ಪಕ್ಕಕ್ಕೆ ಸರಿಸಿ, ಆಂಜನೇಯನ ವಿಗ್ರಹವನ್ನು ಕೈಯಿಂದ ಮುಟ್ಟಿ ಶರಣು ಮಾಡಿಕೊಳ್ಳುತ್ತಾ ಕಲ್ಲು ಕೀಳುತ್ತಿದ್ದೆ. ಅಲ್ಲಿ ನಾನೊಬ್ಬನೆ ಕೆಲಸ ಮಾಡುತ್ತಿದ್ದರಿಂದ, ಬೇರೆಯುವರು ನೋಡುತ್ತಾರೆಂಬ ಭಯವಿರಲಿಲ್ಲ. ಆದ್ದರಿಂದ ಆಂಜನೇಯನನ್ನು ತೃಪ್ತಿಯಾಗುವವರೆಗೂ ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಿದ್ದೆ. ಯಾಕೆಂದರೆ ಆ ಆಂಜನೇಯನ ವಿಗ್ರಹವನ್ನು ಮುಟ್ಟಲು ನನಗೆ ಹಿಂದೆಂದೂ ಅವಕಾಶ ಸಿಕ್ಕಿರಲಿಲ್ಲ. ಮುಂದೆ ದೇವಸ್ಥಾನ ಸಿದ್ಧವಾದ ಮೇಲಂತೂ ಈ ಅವಕಾಶ ಶಾಶ್ವತವಾಗಿ ಇಲ್ಲವಾಗುತ್ತಿತ್ತು”[೧೭]. ಎಂಬ ಮಾತುಗಳು ರಾಮಯ್ಯ ಅವರ ಈ ದೇವಸ್ಥಾನ ಪ್ರವೇಶದ ಹಿಂದಿರುವ ನೋವು, ಸಂತೋಷಗಳು ವ್ಯಕ್ತವಾಗುತ್ತವೆ. ಶತಮಾನಗಳಿಂದ ಜಾತಿಯ ಕಾರಣಕ್ಕಾಗಿ ದೇವಾಸ್ಥಾನದ ಪ್ರವೇಶವನ್ನೇ ನಿರಾಕರಿಸಿದ ಮೇಲುವರ್ಗದ ಈ ಧೋರಣೆಗಾಗಿ ರಾಮಯ್ಯನವರು ಆಂಜನಯ್ಯನನ್ನು ಮುಟ್ಟಿ ಮಟ್ಟಿ ಸಂತೋಷಪಡುತ್ತಾರೆ. ಈ ಪ್ರಸಂಗವು ಅಂಬೇಡ್ಕರ್ ಅವರು ಆರಂಭಿಸಿದ ಸ್ವಾಭಿಮಾನೀ ಚಳವಳಿಯ ಭಾಗವಾದ ‘ಕಾಳರಾಮ ದೇವಾಲಯ ಪ್ರವೇಶ’ವನ್ನು ನೆನಪಿಸುತ್ತದೆ. ದೇವಸ್ಥಾನದ ನಿರ್ಮಾಣ ಪೂರ್ವದಲ್ಲಿ ಇಲ್ಲದ ಜಾತಿ–ಅಸ್ಪೃಶ್ಯತೆಗಳು ದೇವಸ್ಥಾನದ ನಿರ್ಮಾಣೋತ್ತರದಲ್ಲಿ ಭೂತಗಳಂತೆ ಜಾತಿ ವ್ಯವಸ್ಥೆ ಮನುಷ್ಯರನ್ನು ಶೋಷಣೆಗೆ ಒಳಗು ಮಾಡುವುದು ನಿಜಕ್ಕೂ ದುರದೃಷ್ಟಕರ ಸಂಗತಿಯಾಗಿದೆ.

ಜಾತಿ–ಅಸ್ಪೃಶ್ಯತೆಯ ಆಚರಣೆಗಳೇ ಸಾಮಾಜಿಕವಾದ ಭ್ರಷ್ಟಾಚಾರಗಳೆಂದು ಇಂದು ಮಾಧ್ಯಮ ಮತ್ತು ಪತ್ರಿಕೆಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಅದು ಸತ್ಯವೂ ಸಹ. ಆದರೆ, ಭ್ರಷ್ಟಾಚಾರಕ್ಕೆ ಜಾತಿಯೆಂಬುದಿರುವುದಿಲ್ಲ ಎಂಬ ವಿಚಾರವನ್ನು ಬಿ.ಡಿ.ನಾರಾಯಣ್‌ದಾಸ್ ಅವರು ತಾವು ಅಧಿಕಾರಿಯಾದ ನಂತರ ಅನುಭವಿಸಿದ ಅವಮಾನ ಮತ್ತು ಜಾತ್ಯಾತೀತ ಭ್ರಷ್ಟಾಚಾರದ ಪ್ರಸಂಗವನ್ನು ಕಟ್ಟಿಕೊಡುತ್ತಾರೆ. ಚನ್ನರಾಯಪಟ್ಟಣದ ತಾಲ್ಲೋಕ್ ಆಫೀಸಿನಲ್ಲಿ ಹಂಗಾಮಿಯಾಗಿ ದಫೇದಾರ್ ಕೆಲಸಕ್ಕೆ ತಿಂಗಳಿಗೆ ೧೩ ರೂ ಸಂಬಳಕ್ಕೆ ಸೇರಿರುತ್ತಾರೆ. ಆದರೆ ಸಂಪೂರ್ಣ ಕೆಲಸದಲ್ಲಿ ತೊಡಗಿಸಿಕೊಳ್ಳಲಾಗದೆ, ಸುಮ್ಮನೆ ಸಂಬಳ ತಿಂಗಳಿಗೆ ೧೩ ರೂ. ತೆಗೆದುಕೊಂಡಿರುತ್ತಾರೆ. ಸುಮ್ಮನೆ ಸಂಬಳ ತೆಗೆದುಕೊಂಡಿದ್ದಕ್ಕೆ ಒಂದು ಕಾರಣವಿದೆ. ಆತ್ಮಕಥನಕಾರರು ಹೇಳುವಂತೆ, "ದಫೇದಾರ್ ಎಂದು ಕೆಲಸ ಮಾಡಬೇಕಿದ್ದ ಕೊಠಡಿಯಲ್ಲಿ ರಾಮಾಚಾರ್ ಎಂಬ ಬ್ರಾಹ್ಮಣ ಗುಮಾಸ್ತರಿದ್ದರು. ಅವರು ಬಹಳ ಮಡಿ. ಕೆ.ಎಲ್.ರಂಗಪ್ಪ ಈತನನ್ನು ಕೆಲಸಕ್ಕೆ ಸೇರಿಸಬೇಕಾದರೆ ಈತ ಹೊಲೆಯವರನೇ ಇರಬೇಕೆಂದು' ನನ್ನನ್ನು ಒಳಗಡೆ ಕೊಠಡಿಗೇ ಸೇರಿಸಲಿಲ್ಲ. ದಫೇದಾರ್ ಒಂದ್ ಕೆಲಸವಿದ್ದಿದ್ದು ರಿಕಾರ್ಡ್ ರೂಮಿನಲ್ಲಿ. ಅಲ್ಲಿ ಮುಂದುಗಡೆ ಒಂದು ಸಣ್ಣ ರೂಮು. ಮತ್ತು ಎಲ್ಲಾ ರಿಕಾರ್ಡ್ ಇಡುತ್ತಿದ್ದ ರೂಮು ಬೇರೆ. ಆ ರೂಮಿನಲ್ಲಿಯೇ ಈ ಬ್ರಾಹ್ಮಣ ಗುಮಾಸ್ತ ರಾಮಾಚಾರಿ ಕೆಲವು ಫೋಟೋಗಳನ್ನು ಇಟ್ಟು ಪೂಜೆ ಮಾಡುತ್ತಿದ್ದ. ಪ್ರತಿ ಶುಕ್ರವಾರದ ಪೂಜೆಯನ್ನು ಈತನೇ ಮಾಡುತ್ತಿದ್ದ. ಈಗಲೂ ಎಲ್ಲಾ ತಾಲ್ಲೋಕು ಆಫೀಸುಗಳಲ್ಲಿ ಹಾಗೂ ವಿಧಾನಸೌಧದಲ್ಲೂ ಶುಕ್ರವಾರ ಪೂಜೆ ಮಾಡುವ ಪದ್ಧತಿ ಇದೆ. ಆ ರಿಕಾರ್ಡ್ ರೂಮಿನಲ್ಲಿ ದೇವರ ಪೋಟೊ ಇದ್ದುದರಿಂದ ಈ ರಾಮಾಚಾರಿ ನನ್ನನ್ನು ಆ ರೂಮಿಗೇ ಬಿಟ್ಟು ಕೊಳ್ಳುತ್ತಿರಲಿಲ್ಲ. ಆ ರೂಮಿಗೆ ಯಾವಾಗಲೂ ಅವನೊಬ್ಬನೇ ಹೋಗುತ್ತಿದ್ದ. ನನ್ನನ್ನು ಮುಂದುಗಡೆಯ ಸಣ್ಣ ರೂಮಿನಲ್ಲಿ ಕುಳ್ಳಿರಿಸಿ ಸಣ್ಣ ಪುಟ್ಟ ಕೆಲಸ ಮಾಡಿಸುತ್ತಿದ್ದ. ಅದೂ ಇಲ್ಲದಿದ್ದರೆ ನೀವೆಲ್ಲಾ ಓದುವ ಹುಡುಗರು. ನೀನು ಕೆಲಸ ಮಾಡಬೇಡ, ಸುಮ್ಮನೆ ಹಾಜರಿ ಹಾಕಿ ಅಲ್ಲಿ ಇಲ್ಲಿ ಅಡ್ಡಾಡಿ ಹೋಗು ಎಂದು ಹೇಳುತ್ತಿದ್ದ ಈ ರಾಮಾಚಾರಿ. ನಾನು ಹುಡುಗ, ನನಗೂ ಅದೇ ಬೇಕಾಗಿತ್ತು. ಆದರೆ, ರಾಮಾಚಾರಿಯ ನಿಜವಾದ ಕಾರಣ, ನಾನು ರಿಕಾರ್ಡ್ ರೂಮಿಗೆ ಹೋಗಬಾರದು ಅಷ್ಟೇ ಅವನ ಉದ್ದೇಶ. ಒಂದು ದಿನ ಗುಮಾಸ್ತ ರಾಮಾಚಾರಿ ರಜೆ ತೆಗೆದುಕೊಂಡ. ರಿಕಾರ್ಡ್ ಬೀಗ ನನ್ನ ಕೈಯಲ್ಲಿ ಕೊಡಲಿಲ್ಲ. ನಾನು ಮುಂದಿನ ರೂಮ್‌ನಲ್ಲೇ ಕೆಲಸ ಮಾಡಿದೆ. ಕೆಲಸ ಮಾಡುತ್ತಿದ್ದಾಗ ಒಬ್ಬ ಪಟೇಲರು ಬಂದು ಜನನ, ಮರಣ ಕಳುಹಿಸುವ ಫಾರಂ ಪುಸ್ತಕ ಕೇಳಿದ. ನಾನು ಅದನ್ನು ತೆಗೆದುಕೊಟ್ಟೆ, ಅವನು ನಾಲ್ಕು ಆಣೆ ದುಡ್ಡನ್ನು ಕೊಟ್ಟ, ನಾನು ಆ ಪಟೇಲರಿಗೆ ಇದಕ್ಕೆ ದುಡ್ಡಿಲ್ಲ. ಹಾಗೇ ತೆಗೆದುಕೊಂಡು ಹೋಗಿ ಎಂದು ಹೇಳಿದೆ. ಅವರು, ಪ್ರತಿ

ತಿಂಗಳು ‘ಇಲ್ಲಿ ೪ ಆಣೆ ಮಸಿಕಾಣಿಕೆ ಕೊಡುವ ಪದ್ಧತಿ ಇಟ್ಟುಕೊಳ್ಳಿ’ ಎಂದು ಮೇಜಿನ ಮೇಲೆ ಇಟ್ಟು ಹೋದರು. ಬೆಳಿಗ್ಗೆ ರಾಮಾಚಾರಿ ಬಂದರು. ಅವರಿಗೆ ಆ ಪಟೇಲ ಕೊಟ್ಟಿದ್ದ ಮಸಿಕಾಣಿಕೆಯನ್ನು ತೆಗೆದುಕೊಳ್ಳಿ ಎಂದು ಹೇಳಿದೆ. ಅವರು ಅದನ್ನು ತೆಗೆದುಕೊಂಡು, ‘ಪರವೇ ಇಲ್ಲವೇ ನೀನು ಒಳ್ಳೆಯ ಹುಡುಗನಂತೆ ಕಾಣುತ್ತೀಯೆ’ ಎಂದರು”[೧೮]. ಆರಂಭದಲ್ಲಿ ಜಾತಿಯ ಕಾರಣದಿಂದ ಕೆಟ್ಟವನಾಗಿ ಕಂಡಿದ್ದ ದಲಿತ ಯುವಕ ಭ್ರಷ್ಟಾಚಾರದ ಕಪ್ಪುಹಣವನ್ನು ಮೇಜಿನ ಮೇಲಿಟ್ಟಿದ್ದರಿಂದ ಒಳ್ಳೆಯವನಾಗಿ ಬಿಡುವ ಸೋಜಿಗ ನಿಜಕ್ಕೂ ಜಾತಿದ್ವೇಷದ ಹಾಗೂ ಧನಪ್ರೀತಿಯ ಅಕ್ರಮಮಾರ್ಗವೇ ಸರಿ ಎನಿಸುತ್ತದೆ.

ಜಾತಿಯ ಆಚರಣೆಯ ಸ್ಥಿತಿಯೆಂದರೆ ಮನುಷ್ಯ ಸಂಬಂಧಗಳ ನಾಶ. ಮನುಷ್ಯ ಪ್ರೀತಿಯ ಕಾರಣಕ್ಕಾಗಿ ದಲಿತರು ಇತರ ಜಾತಿಯವರನ್ನು ಪ್ರೀತಿಸಿದರೆ ಅದು ಜಾತಿಯ ಕೊಳಕು ಮನೋಸ್ಥಿತಿಗೆ ಸಹಿಸಲು ಅಸಾಧ್ಯವಾದುದು. ಮನುಷ್ಯ ಪ್ರೇಮವನ್ನೊಯ್ದು ಚರಂಡಿಗೆಸದ ದುರುಳರು ಕೇವಲ ವ್ಯವಹಾರ ನಿಪುಣರು. ಸಂಪ್ರದಾಯದ ಕಾಲಡಿಯಲ್ಲಿ ಪ್ರೇಮವು ಸಾಯುತ್ತಿದೆ. ಹಸಿವಿನ ಆರ್ಭಟದಲ್ಲಿ ಅಸ್ಪೃಶ್ಯತೆಯ ಗಾಢ ಅಂಧಕಾರದಲ್ಲಿ ಪ್ರೇಮವು ಜನಾಂಗೀಯ ದ್ವೇಷವಾಗಿ ಮಾರ್ಪಡುತ್ತಿದೆ. ಈ ಲೋಕವೂ ಹಸಿವನ್ನು ಮೀರದು, ಅಸ್ಪೃಶ್ಯತೆಯನ್ನು ದಾಟದು, ಪ್ರೀತಿಯನ್ನು ಪಡೆಯದು, ಪ್ರತಿಯೊಬ್ಬರ ಪ್ರೀತಿಯ ಮೇಲೆ ಕಾಲದ ಹೆಜ್ಜೆ ಗುರುತುಗಳಿವೆ. ಅಂತೆಯೇ ನಿರಂತರ ಸೋಲುಗಳ ಮುದ್ರೆಯಿದೆ. ಜಾತಿಯ ಕಾರಣದಿಂದ ದಲಿತಪ್ರೇಮವು ದುರಂತಕ್ಕೆ ಈಡಾದ ಸಂದರ್ಭಗಳು ಸಾಲುಸಾಲಾಗೇ ಈ ನೆಲದಲ್ಲಿ ನಡೆದು ಹೋಗಿವೆ, ನಡೆಯುತ್ತಿವೆ. ದಲಿತ ಜೀವವೊಂದರ ಅದಮ್ಯ ಪ್ರೀತಿಯನ್ನು ಕೆಡವಿಹಾಕಿ ಜಾತಿಯೆಂಬ ಜ್ವಾಲೆಯು ಕುಣಿದಾಡಿದ ಪ್ರಸಂಗವೊಂದನ್ನು ಮುಳ್ಳೂರು ನಾಗರಾಜು ಅವರು ಹೀಗೆ ದಾಖಲಿಸಿದ್ದಾರೆ:

“ಆಕೆಯು ಕೇಳಿದಳು:

‘ಒಂದನ್ನು ಕೇಳುತ್ತೇನೆ ನೀನು ಬೇಸರ ಪಟ್ಟುಕೊಳ್ಳಬಾರದು?’

‘ಕೇಳು ಪರವಾಗಿಲ್ಲ’

‘ನಿನ್ನ ಜಾತಿಯು ಯಾವುದು ಹೇಳು?’

ಯಾರೋ ಎದೆಗೆ ಜಾಡಿಸಿ ಒದ್ದಂತಾಯಿತು. ಆ ಪ್ರಶ್ನೆಯ ಬಾಣದೇಟಿಗೆ ನಾನು ಬಿರುಗಾಳಿಗೆ ಸಿಕ್ಕಿದ ತರಗೆಲೆಯಾದೆ. ನಾನಾಗ ಸುಖದ ಗೋಪುರದಿಂದ ದುಃಖದ ಪಾತಾಳಕ್ಕೆ

ಕುಸಿದೆ. ಜಾತಿಯನ್ನು ಯಾರೇ ಮಾಡಲಿ, ಅದು ಒಬ್ಬನ ಪಾಲಿಗೆ ತೀವ್ರ ಅವಮಾನದ ವಿಷಯವಾಗಿದ್ದರೆ, ಮತ್ತೊಬ್ಬನ ಪಾಲಿಗೆ ಘನತೆಯ ವಿಷಯವಾಗಿದೆ. ಕೇಳಬಾರದ ಹೊತ್ತಿನಲ್ಲಿ ಆಕೆ ನನ್ನ ಜಾತಿಯನ್ನು ಕೇಳಿದಳು. "ನಿನ್ನ ಹೊಲೆತನದೊಳಕ್ಕೆ ನನ್ನ ಹೊಲೆತನವು ಇಳಿದು ಹೋಗಿದೆ. ಇನ್ನು ಜಾತಿಯನ್ನು ಕಟ್ಟಿಕೊಂಡು ಏನು ಮಾಡುತ್ತೀಯಾ? ಎಂದೆ, ಹಾಗೆ ಕೇಳುತ್ತಲೇ ಅಪ್ಪುಗೆಯನ್ನು ಬಿಗಿಗೊಳಿಸುತ್ತಾ ಹೋದೆ. ಆಕೆಯ ಮೌನವೇ ನನಗೆ ಉತ್ತರವಾಯಿತು. ನಾನವಳ ಕಿವಿಯಲ್ಲಿ: "ನಾನು ಹೊಲೆಯ ನಾನು ಹೊಲೆಯ" ಎಂದು ತುಸು ಗಟ್ಟಿಯಾಗಿ ಪಿಸುಗುಟ್ಟಿದೆ. ಆಗ ಪಾತಾಳಕ್ಕೆ ಕುಸಿವ ಸರದಿ ಅವಳದಾಯಿತು. ಅದುವರೆಗೆ ಹಿತದ ಬಿಸಿಯಪ್ಪುಗೆಯಲ್ಲಿ ರೋಮಾಂಚನಗೊಳ್ಳುತ್ತ ಖುಷಿಯ ಗಣಿಯಾಗಿದ್ದವಳು ಕೂಡಲೇ ಸೆಡೆತುಕೊಂಡಳು. ಹಾವು ಮುಟ್ಟಿದವರಂತೆ, ಕೆಂಡತುಳಿದವರಂತೆ ಹೌಹಾರಿದಳು. ನಿಧಾನಕ್ಕೆ ಮಂಜುಗಡ್ಡೆಯಂತೆ ಶೀತಲಗೊಂಡಳು."[೧೯] ಇಲ್ಲಿ ಜಾತಿಯ ಸೋಂಕಿಗಿಂತ ಪ್ರೀತಿಯ ಬಂಧನವೇ ಶ್ರೇಷ್ಠವಾಗಿ ನಿಲ್ಲುತ್ತದೆ. ಆದರೆ ಈ ಸಮಾಜವೇ ಜಾತಿಯೆಂಬ ಕಾಲ್ಪನಿಕ ಸಂಕಟದ ಖೈದಿಯಾಗಿದೆ. ಮುಂದುವರಿದಂತೆ "ಆ ಮುಗುದೆಯ ಪಾಡೇನು ನಾನು ಯೋಚಿಸುವುದು ನನ್ನ ಜಾತಿಯ ನೆಲೆಯಲ್ಲಿ; ಅದೇ ರೀತಿ ಅವಳು ಯೋಚಿಸುವುದು ಅವಳ ಜಾತಿಯ ನೆಲೆಯಲ್ಲಿ. 'ಜಾತಿ' ಎಂಬುದು ಯಾರೋ ಕಟ್ಟಿದ ಗೋರಿ. ಅದನ್ನು ನಮ್ಮದನ್ನಾಗಿ ನಾವು ಮಾಡಿಕೊಂಡಿದ್ದೇವೆ. ನಾನು ನನ್ನ ಜಾತಿಯನ್ನು ಕುರಿತು ಹೇಳುವಾಗ, ಅವಳ ಮುಖದ ಮೇಲೆ ಹೊಡೆದ ಹಾಗೆ ಕಟುವಾಗಿ ಹೇಳಬಾರದಿತ್ತು. ಅವಳ ಅಹಂಕಾರವನ್ನು ಘಾತಿಸಲು ಹೋಗಿ ನಾನೂ ಅಹಂಕಾರದಿಂದಲೇ ನಡೆದುಕೊಂಡಿದ್ದೆ. ನನ್ನ ವರ್ತನೆಯಿಂದ ಆಕೆ ಜರ್ಝರಿತಗೊಂಡ ರೀತಿ ಮಾತ್ರ ಅಸಹನೀಯವಾಗಿತ್ತು. ಅವಳ ಕಣ್ಣುಗಳಲ್ಲಿ ಅಪ್ರಯತ್ನಪೂರ್ವಕವಾಗಿ ಒಂದೆರಡು ಕಂಬನಿಗಳು ಉದುರಿದವು. ಎಷ್ಟೋ ವರ್ಷಗಳ ನಂತರವೂ ಈ ದೃಶ್ಯವು ನನ್ನನ್ನು ಕಂಗೆಡಿಸಬಲ್ಲದ್ದಾಗಿದೆ. ಪ್ರೀತಿಯಿಲ್ಲದ ಕೂಡಿಕೆಯು ಜಾರ-ಜಾರಿಣಿಯರ ಕೃತಕ ಕಾರ್ಯಾಚರಣೆಯಾಗಿರುತ್ತದೆ. ಮಾನವ ಲೋಕದ ರಕ್ತ ಮಾಂಸ ಮೂಳೆಗಳೆಲ್ಲ ಜಾತಿಗಳಿಂದ ಮಲಿನಗೊಂಡಿರುವುದನ್ನು ನೋಡಿದರೆ ದುಃಖವಾಗುತ್ತದೆ. ಆ ನನ್ನ ಚಿಕ್ಕವಯಸ್ಸಿನಲ್ಲಿ ಜಾತಿಯು ನನಗೆ ನೀಡಿದ ಅವಮಾನವನ್ನು ನಾನು ಅತ್ಯಂತ ತಳಮಳದಿಂದ ತೀರಾ ಏಕಾಂಗಿಯಾಗಿ ಅನುಭವಿಸಿದೆ."[೨೦] ಎಂದು ಜಾತಿಯ ದೌರ್ಜನ್ಯಕ್ಕೆ ತುತ್ತಾದ ಜಾತ್ಯತೀತ ಪ್ರೀತಿಯ ಗಾಢವೇದನೆಯನ್ನು ನಿರೂಪಿಸಿದ್ದಾರೆ. ಕೆಲವೊಂದು ಸಂದರ್ಭದಲ್ಲಿ ಪ್ರೀತಿ ಪ್ರೇಮದ ವಿಷಯದಲ್ಲಿ ಜಾತಿ ಅಡ್ಡಬಂದರೂ ಅದನ್ನು ಮೀರಿ ಬದುಕುವ ಸ್ಥಿತಿಯನ್ನು ಲಕ್ಷ್ಮಣ್ ಅವರು ತಮ್ಮ ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ. ತಾನು ಪ್ರೀತಿಸಿದ ಮೇಲ್ಜಾತಿಯ ಕಮಲಳ ಮನೆಯಲ್ಲಿ ಹರಳೆಲೆಯಲ್ಲಿ ಕಜ್ಜಾಯ, ಉಪ್ಪಿಟ್ಟು ಕೊಡುವ ಸಂದರ್ಭದಲ್ಲಿ ಕಮಲಳ ತಾಯಿ ಆತ್ಮಕಥನಕಾರರನ್ನು

ಕುರಿತು "ಏನಪ್ಪಾ ಮರಿ ಒಳ್ಳೇರು ಅಂತ ಜಾತಿ,ಕುಲ ಬಿಡಕಾತಾದ ನೀನೇ ಹೇಳು."[೨೧] ಎಂದು ಹೇಳಿದಾಗ ಲೇಖಕರು ಏನನ್ನು ಮಾತನಾಡುವುದಿಲ್ಲ. ಆದರೆ ಎಲೆಯಲ್ಲಿ ತಿಂಡಿ ಕೊಟ್ಟಿದ್ದನ್ನು ನೋಡಿದ ಕಮಲ ತಾಯಿಯ ವಿರುದ್ದ ಪ್ರತಿಭಟಿಸುವುದನ್ನು ಕಾಣಬಹುದು. ಕಾರಣ ಕಮಲ ವಿದ್ಯಾವಂತಳಾಗಿದ್ದಳು ತಾನು ಪ್ರೀತಿಸಿದ ಹುಡುಗನಿಗೆ ಆದ ಅವಮಾನವನ್ನು ಆಕೆ ಸಹಿಸಲಿಲ್ಲ. ಹೀಗೆ ಇಂತಹ ಅನುಭವಗಳನ್ನು ಕನ್ನಡ ದಲಿತ ಆತ್ಮಕಥೆಗಳು ಕಟ್ಟಿಕೊಡುತ್ತವೆ.

ದುರಂತ ಪ್ರೇಮದ ಅನುಭವಗಳನ್ನು ಅರವಿಂದ ಮಾಲಗತ್ತಿ ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಅಸ್ಪೃಶ್ಯತಾ ಆಚರಣೆಯ ಭಿನ್ನಪದರುಗಳನ್ನು, ವಿವಿಧ ಘಟನೆಗಳನ್ನು ಬಿಚ್ಚಿಡುವುದರ ಮೂಲಕ ಗಂಭೀರವಾದ ಚಿಂತನೆಗೆ ಆಸ್ಪದ ಮಾಡಿಕೊಡಲಾಗಿದೆ. 'ನನ್ನ ಮಾಜಿ ಪ್ರೇಯಸಿ' ಘಟನೆಯಲ್ಲಿ ಆರು ವರ್ಷಗಳಿಂದ ಆತ್ಮಕಥನಕಾರರು ಪ್ರೀತಿಸಿದ ಬ್ರಾಹ್ಮಣ ಹುಡುಗಿ ದೂರವಾಗುತ್ತಾಳೆ. ಪ್ರೀತಿ ಪ್ರೇಮಗಳು ಮೊಳೆಯುವ ಹಂತದಲ್ಲಿ ಜಾತಿಗೌಣಗೊಂಡರೂ ಮದುವೆಯ ಸ್ಥಿತಿ ತಲುಪುವಾಗ ಭೂತಾಕಾರವಾಗಿ ಬೆಳೆದಿರುವ ಜಾತೀಯತೆಯು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಸಾಮಾಜಿಕ ಕಟ್ಟುಪಾಡು ಮತ್ತು ವಿಧಿ ನಿಷೇಧಗಳು ಭಿನ್ನ ಜಾತಿಯ ಪ್ರೇಮಿಗಳನ್ನು ದೂರ ಮಾಡಲು ಹವಣಿಸುತ್ತವೆ. ಇಲ್ಲಿನ ಹೆಣ್ಣು ತನ್ನ ಕುಟುಂಬದ ಹಿತಾಸಕ್ತಿಗಳನ್ನು ಮುಂದಿಟ್ಟು ಜಾತಿಯಾಧಾರಿತ ಸಾಮಾಜಿಕ ವ್ಯವಸ್ಥೆಯ ಪರದೆಯನ್ನು ಹರಿದು ಬರಲು ವಿಫಲವಾಗುತ್ತಾಳೆ. ಇದು ಬಿಗುವಿನ ವಾತವರಣದ ಸಾಮಾಜಿಕ ಸಂರಚನೆಯು ಮನುಷ್ಯನನ್ನು ಅಸಹಾಯಕ ಸ್ಥಿತಿಗೆ ಕೊಂಡೊಯ್ಯುತ್ತದೆ ಎಂಬುವುದಕ್ಕೆ ಒಂದು ನಿದರ್ಶನವಾಗುತ್ತದೆ.

ಜಾತಿಯ ವಿಷ ಭಾವನೆಯು ದಲಿತರು ಸಾಕುವ ಪ್ರಾಣಿಗಳನ್ನು ಬಿಟ್ಟಿಲ್ಲ. ಮೇಲು ವರ್ಗದವರ ಜಾತಿಯ ವಿಷದ ಮನೋಸ್ಥಿತಿಗೆ ಮನುಷ್ಯೇತರ ಪ್ರಾಣಿಗಳು ಸಹ ನರಳಿವೆ. ಇದಕ್ಕೆ ಸಾಕ್ಷಿಯಾಗಿ ಮಾಲಗತ್ತಿ ಅವರು ಬರೆದಿರುವ 'ಹಂಡ್ಯಾನ ಲಾಳಿ ಕತ್ತರಿಸಿದ ಪ್ರಸಂಗ'ವನ್ನು ನೋಡಬೇಕು. ಹಂಡ್ಯಾ ದಲಿತರ ನಾಯಿ. ಊರಿನ ಸಾಹುಕಾರನ ಮನೆಯ ಹೆಣ್ಣು ನಾಯಿಯೊಂದಿಗೆ ಸಂಭೋಗಿಸಿದ್ದೇ ತಪ್ಪಾಯಿತು. ಆ ಸಾಹುಕಾರರ ಮಗ ಇದನ್ನು ಸಹಿಸಲಾರದೇ ಸಂಭೋಗಿಸುತ್ತಿರುವಾಗಲೇ ಕುಡುಗೋಲಿನಿಂದ ಕರಕ್ಕನೆ ಹಂಡ್ಯಾನ ಲಾಳಿಯನ್ನು ಕೊಯ್ದುಬಿಟ್ಟ. ತನ್ನ ನಾಯಿ ಸತ್ತದ್ದನ್ನು ನೋಡಿದ ಅಕ್ಕದ್ಯಾವಮ್ಮ ಹೇಳುವ "ನಾನು ಇಂಥ ಕೆಳಜಾತಿಯವನಿಗೆ ಸೇರಿದವನು. ಅದರ ಮ್ಯಾಲೆ ಹತ್ತಬಾರದು, ಅದು ಮ್ಯಾಲಿನ ಜಾತಿಯವರು ಸಾಕಿದ್ದು ಅಂತ ಅದಕ್ಕೇನ ತಿಳಿತದಾ? ಮಾತ ತಿಳೆಂಗಿದ್ರ ನಾವರ ಹೇಳೇವು ಹೋಗಿ ಹೋಗಿ ಮೂಕ ಪ್ರಾಣಿ."[೨೨] ಎಂಬ ಮಾತುಗಳಲ್ಲಿ ಮನುಷ್ಯ ಕಟ್ಟಿಕೊಂಡ ಜಾತಿ ರಾಕ್ಷಸತನಕ್ಕೆ ಅಮಾಯಕ ಪ್ರಾಣಿಪಕ್ಷಿಗಳು ಬಲಿಯಾಗುವ ನೋವು

ಇಲ್ಲಿ ವ್ಯಕ್ತವಾಗುತ್ತದೆ. ವಿಪರ್ಯಾಸ ಎಂದರೆ ಆ ಸಾಹುಕಾರರ ಮನೆಯ ಹೆಣ್ಣು ನಾಯಿ ಕೂಡ ಸಣ್ಣದಿದ್ದಾಗ ದಲಿತರ ಕೇರಿಯಿಂದಲೇ ಬುಕ್ ಮಾಡಿ ತೆಗೆದುಕೊಂಡು ಹೋದದ್ದು. ಬಹುಶಃ ಮನುಷ್ಯನ ಅಮಾನವೀಯತೆಗೆ ಇದಕ್ಕಿಂತ ಬೇರೆ ಉದಾಹರಣೆ ಸಿಕ್ಕಲಾರದೇನೋ! ಮೂಲಭೂತವಾದಿ ಮನಸ್ಥಿತಿಯವರ ಪ್ರತಿಗಾಮಿತನಕೆ ಇದು ಸ್ಪಷ್ಟ ನಿದರ್ಶನವಾಗಿದೆ. ಮೇಲುಜಾತಿಯ ಹೆಣ್ಣು ನಾಯಿಯೊಡನೆ ಕೆಳಜಾತಿಯ ಗಂಡುನಾಯಿ ಸಮಾಗಮಿಸಿದಾಗ ಲಾಳಿಯನ್ನು ಕತ್ತರಿಸುವುದು, ಎಮ್ಮೆಯ ಮೇಲೆ ಕೋಣವನ್ನು ಹಾಯಿಸಲು ನಿರಾಕರಿಸುವ ಗೌಡನ ಮನಸ್ಥಿತಿ ಒಂದು ಬಗೆಯಾದರೆ, ಎಮ್ಮೆ ಹಾಗೂ ಕೋಣ ಮನುಷ್ಯನ ಕಣ್ತಪ್ಪಿಸಿ ಕೂಡುವುದು ನೈಜ ಪ್ರಕೃತಿಯಾಗಿದೆ. ಆದರೆ ಕಾಮದ ವಿಷಯದಲ್ಲಿ ಮನುಷ್ಯ ಸಂಬಂಧ ಭಿನ್ನವೇ ಆಗಿರುತ್ತದೆ. ಇಲ್ಲಿ ಜಾತಿಯ ಬಿಂಬಗಳು ಗಟ್ಟಿಯಾಗಿರುತ್ತವೆ. ಹೀಗೆ, ದಲಿತ ಆತ್ಮಕಥೆಗಳಲ್ಲಿ ಅಸ್ಪೃಶ್ಯತೆಯ ಗಾಢ ನೋವಿನ, ಕರಾಳ ಅನುಭವಗಳ ದಾಖಲೆಗಳಿವೆ. ಇಂದಿಗೂ ಜಾತಿ–ಅಸ್ಪೃಶ್ಯತೆಯ ಕ್ರೌರ್ಯಗಳು ಬೇರೆ ಬೇರೆ ರೂಪಗಳಲ್ಲಿ ಜೀವಂತಿಕೆಯಿಂದಿರುವುದು ಪ್ರಸ್ತುತ ದಿನಪತ್ರಿಕೆಗಳಲ್ಲೂ ದಾಖಲಾಗುತ್ತಿವೆ. ದಲಿತರು ಜಾತೀಯತೆಯ ಕಾರಣಕ್ಕೆ ಅನುಭವಿಸಬೇಕಾದ ಅಪಮಾನಗಳು ಭೀಕರವಾಗಿರುತ್ತವೆ. ಶ್ರೇಣೀಕೃತ ಜಾತಿವ್ಯವಸ್ಥೆ ಇನ್ನು ಭದ್ರವಾಗಿರುವ ಭಾರತದಲ್ಲಿ ಉನ್ನತ ಹುದ್ದೆಗಳು ಮೇಲ್ಜಾತಿಯ ಜನರ ಹಿಡಿತದಲ್ಲೇ ಇದೆ. ಸಂವಿಧಾನಾತ್ಮಕವಾಗಿ ಸಮಾನತೆಯನ್ನು ಘೋಷಿಸಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೀಸಲಾತಿ ಇಲ್ಲದಿದ್ದರೆ ಕಡಿಮೆ ಪ್ರಮಾಣದಲ್ಲೂ ದಲಿತರ ಪ್ರವೇಶ ಸಾರ್ವಜನಿಕ ಕ್ಷೇತ್ರಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಇಂತಹ ಸಂದರ್ಭಗಳಲ್ಲಿಯೂ ದಲಿತನೆನ್ನುವ ಕಾರಣಕ್ಕೆ ಆತ ಎದುರಿಸಬೇಕಾದ ಪರಿಸ್ಥಿತಿಗಳು ಕೆಲವೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳುವತ್ತ ದೂಡಿರುವುದಕ್ಕೂ ಅನೇಕ ದಾಖಲೆಗಳಿವೆ. ಇದೆಲ್ಲದರ ನಡುವೆಯೂ ಈ ವ್ಯವಸ್ಥೆಯಲ್ಲಿ ತಾಳಿಕೊಳ್ಳುವ ಶಕ್ತಿ ದಲಿತನಿಗೆ ಅಂತರ್ಗತವಾಗಿರುವುದು ನಿಜಕ್ಕೂ ಸೋಜಿಗದ ಸಂಗತಿ.

ವಿಶ್ವದಲ್ಲೇ ಗುಲಾಮಗಿರಿಗಿಂತಲೂ ಕ್ರೂರವಾದದ್ದು ಅಸ್ಪೃಶ್ಯತೆ ಆಚರಣೆ. ನಮ್ಮ ಧರ್ಮದ ಹಾಗೂ ಸಮಾಜದ ಒಂದು ಭಾಗವಾಗಿ ನಮ್ಮ ಜೊತೆಯಲ್ಲಿಯೇ ಬೆರತು ಹೋಗಿದೆ. ಎಷ್ಟರ ಮಟ್ಟಿಗೆ ಇದೆ ಅಂದರೆ, ಒಬ್ಬ ಮನುಷ್ಯನನ್ನು ಒಂದು ಸಮುದಾಯವನ್ನು ಯಾವ ಕಾರಣಗಳನ್ನೂ ಕೊಡದೆ, ಮುಟ್ಟಬಾರದು ಅನ್ನುವ ಸ್ಥಿತಿಯನ್ನು ಈ ಅಸಮಾನತೆಯ ಸಮಾಜ ಬಿತ್ತಿರುವುದು ನಿಜವಾದ ಅಸ್ಪೃಶ್ಯತೆಯಾಗಿದೆ. ವರ್ಣಬೇದವು ಮೈಬಣ್ಣದ ಆಧಾರದಲ್ಲಿ ರೂಪು ತಳೆದು 'ಇವನು ಕಪ್ಪು ಬಣ್ಣದವನು' ಅನ್ನುವ ವಿಕೃತ ದೃಷ್ಠಿಯಲ್ಲಿ ಮೂಡಿದೆ. ಆದರೆ ಇಲ್ಲಿ ಮನುಷ್ಯ ಎಷ್ಟೇ ಬೆಳ್ಳಗಿರಲಿ, ಎಷ್ಟೇ ಶ್ರೀಮಂತನಿರಲಿ, ಎಷ್ಟೇ ಬುದ್ಧಿವಂತನಿರಲಿ, ಹಾಗೂ ಜ್ಞಾನಿಯಿರಲಿ,

ಆತನು ಅಸ್ಪೃಶ್ಯನಾಗಿದ್ದರೆ ಆತನನ್ನು ಮುಟ್ಟಬಾರದು ಅನ್ನುವ ತೀರ್ಮಾನಕ್ಕೆ ಈ ಸಮಾಜ ಬಂದಿರುವುದು ಅಮಾನವೀಯತೆಯ ಸ್ಥಿತಿಯಾಗಿದೆ. ಚಿಂತಕರಾದ ಡಾ.ಎಲ್.ಹನುಮಂತಯ್ಯ ಅವರು ಹೇಳಿರುವಂತೆ "ಈ ಸಮಾಜದ ಅಜ್ಞಾನವೇ ಅಸ್ಪೃಶ್ಯತೆಯ ಮೂಲಕಾರಣ. ಇದರಲ್ಲಿ ಅಸ್ಪೃಶ್ಯರದು ಏನೇನೂ ತಪ್ಪಿಲ್ಲ. ಐದನೇ ಒಂದು ಭಾಗದ ಜನಸಂಖ್ಯೆ ತಮ್ಮದಲ್ಲದ ತಪ್ಪಿಗೆ ಮತ್ತು ತಮ್ಮ ಅರಿವಿಗೆ ಬಂದಿರುವ ಒಂದು ಅವಮಾನವನ್ನು ಸಾವಿರಾರು ವರ್ಷಗಳಿಂದ ನಿರಂತರವಾಗಿ ಅನುಭವಿಸಿಕೊಂಡು ಬಂದಿದೆ. ಅಸ್ಪೃಶ್ಯತೆ ನಮ್ಮ ಆರ್ಥಿಕ ಸ್ಥಿತಿಯ ಜೊತೆಗೆ ತುಳುಕು ಹಾಕಿಕೊಂಡಿದೆ. ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ನೋಡುವುದು, ಅವರನ್ನು ಸದಾಕಾಲ ಪರಾವಲಂಬಿಗಳನ್ನಾಗಿಯೇ ಮಾಡಿದೆ. ಅಸ್ಪೃಶ್ಯರು ಆಳುವ ವರ್ಗವಾಗಿದ್ದರು. ಒಂದು ವೇಳೆ ಹಾಗೆ ಅಸ್ಪೃಶ್ಯರು ಆಳುವ ವರ್ಗವಾಗಿದ್ದಿದ್ದರೆ ಅವರು ಪರಾವಲಂಬಿಗಳಾಗಬೇಕಾದಂತಹ ಅಗತ್ಯ ಇರಲಿಲ್ಲ. ಒಂದು ವೇಳೆ ಆಳುವ ವರ್ಗವಾಗಿದ್ದರೆ, ಕಾಲಾಂತರದಲ್ಲಿ ಅವರು ಮತ್ತೆ ಸೇವಕ ವರ್ಗವಾಗಲಿಕ್ಕೆ ಕಾರಣ ಏನು? ಅನ್ನುವುದನ್ನು ನಮ್ಮ ಚರಿತ್ರೆ ಇನ್ನೂ ಹೇಳಿಲ್ಲ. ಈ ದೃಷ್ಟಿಯಿಂದ ಅಸ್ಪೃಶ್ಯತೆ ಎನ್ನುವುದು ಅತ್ಯಂತ ನೀಚತನದ ಪರಮಾವಧಿಯ ಒಂದು ಅಧೋಲೋಕವಾಗಿದೆ."[೨೩] ಜಾತೀಯ ಕಾರಣದಿಂದಾಗಿ ವಿಶ್ವದಲ್ಲೇ ಇಲ್ಲದಂಥ ಜಾತಿಯ ರಾಜಕಾರಣವನ್ನು ಅಸ್ಪೃಶ್ಯತೆಗೆ ಒಳಗಾದ ಸ್ಥಿತಿ–ಗತಿಗಳನ್ನು ಗುರುತಿಸಬಹುದಾಗಿದೆ. ಅಸ್ಪೃಶ್ಯನಿಗೆ ನ್ಯಾಯವಾದ ಸಮಾನಾವಕಾಶವಾಗಲೀ, ಯೋಗ್ಯವಾದ ವ್ಯವಹಾರಗಳಾಗಲೀ ಯಾವುದೂ ಇಲ್ಲ. ಈ ದೃಷ್ಟಿಯಿಂದ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೀನವಾದದ್ದು ಮಾತ್ರವಲ್ಲ, ಅದರೊಂದಿಗೆ ಹೋಲಿಸಿದರೆ ಇದು ನಿಜಕ್ಕೂ ಕ್ರೂರವಾದದ್ದಾಗಿದೆ. ದಲಿತ ಸಮುದಾಯದವರಿಗ ಇದೊಂದು ಸಾಮಾಜಿಕ ಕಪ್ಪುಕಲೆಯಾಗಿ ಅಂಟಿಕೊಂಡೇ ಬಂದಿದೆ.

ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆಯ ನೋವಿನಲ್ಲಿ ಹುಟ್ಟಿ ಬೆಳೆದುಬಂದ ಜಾತೀಯತೆಯ ಕ್ರೌರ್ಯದ ಪರಿಸರ, ಅತಿರೇಕದ ಆಲೋಚನೆಗಳಿಗೆ ಅಸ್ಪದ ನೀಡುತ್ತದೆ. ಅತ್ಯಂತ ಸಣ್ಣ ಪ್ರಸಂಗಗಳಿಂದ ಆತ್ಮಕಥನಕಾರರು ಮಾನಸಿಕ ಹೊಯ್ದಾಟಕ್ಕೆ ಗುರಿಯಾಗಲು 'ಚಹಾ ಸಂವಾದದಲ್ಲಿ ಕಾಫಿಯಾದಾಗ'ದಲ್ಲಿನ ಘಟನೆಗಳನ್ನು ಮಾಲಗತ್ತಿಯವರು ದಾಖಲಿಸುತ್ತಾರೆ. "ನನಗೆ ಜಾತಿ ಭೇದ ಎನ್ನುವುದೇ ಇಲ್ಲ. ನನ್ನ ಮನೆಗೆ ಸಾಕಷ್ಟು ಹರಿಜನರು ಬರುತ್ತಾರೆ, ಹೋಗುತ್ತಾರೆ, ಚಹ ಕುಡಿಯುತ್ತಾರೆ, ಊಟ ಮಾಡುತ್ತಾರೆ. . . ಈ ಮಾತುಗಳನ್ನು ಕೇಳಿದಾಗ ಜರ್‍ರನೇ ಜರಿದು ಹೋದೆ. ನನ್ನನ್ನು ಇಲ್ಲಿಗೆ ಕರೆತಂದುದ್ದು ಏಕೆ? ಚಹ ಕುಡಿಸುವುದಕ್ಕಾಗಿಯೋ ಅಥವಾ ನೀನು ಹರಿಜನ ವ್ಯಕ್ತಿ ಎಂದು ನೆನಪು ಮಾಡಿಕೊಡುವುದಕ್ಕೂ.? ಇವರು ನನ್ನ ಜಾತಿಯನ್ನು ಮತ್ತೇಕೆ

ಕೆದಕಬೇಕು? ನೀನು ಹರಿಜನನಾದರೂ, ನಾನು ಕರೆದು ಚಹ ಕುಡಿಸುತ್ತಿದ್ದೇನೆ ಎಂದು ಜಂಭ ಕೊಚ್ಚಿಕೊಳ್ಳುವುದಕ್ಕಾಗಿಯೇ? ಹೀಗೆ ಪ್ರಶ್ನೆಗಳು ಎದೆಯುದ್ದಕ್ಕೂ ಎದ್ದು ನಿಂತಾಗ, ಚಳಿ ಹಿಡಿದ ನಾಯಿಯಂತೆ ಮುದ್ದೆಯಾದೆ."೨೪ ಎಂದು ಜಾತೀಯತೆಯಿಂದ ಆದ ಅವಮಾನವನ್ನು ಬಿಚ್ಚಿಡುತ್ತಾರೆ. ದಲಿತರನ್ನು ಮನೆಗೆ ಕರೆದು ಈ ರೀತಿ ಮಾತನಾಡುವ ಪ್ರಗತಿಪರರಿಂದ ಕೆಲವೊಮ್ಮೆ ಸಹಜವಾಗಿ ತಪ್ಪುಗಳು ನಡೆಯುತ್ತವೆ. ಮೊದಲ ತಲೆಮಾರಿನ ಅಕ್ಷರಸ್ಥ ದಲಿತರ ದಲಿತ ಪ್ರಜ್ಞೆ ಮತ್ತು ಸೂಕ್ಷ್ಮ ಸಂವೇದನೆಗಳು ಮನುಷ್ಯ ಸಂಬಂಧಗಳನ್ನು ಪ್ರಶ್ನಿಸುತ್ತಾ, ಆಂತರಿಕ ಸಂಘರ್ಷಗಳನ್ನು ಎದುರಿಸಲು ಇಂತಹ ಘಟನೆಗಳು ಕಾರಣವಾಗುತ್ತವೆ.

೩.೨. ಬಡತನ ಮತ್ತು ಹಸಿವು

ಜಗತ್ತಿನಾದ್ಯಂತ ಬಡತನ ಮತ್ತು ಹಸಿವು ಈ ಸಮಸ್ಯೆಗಳು ಬೇರೆ ಬೇರೆ ಸ್ವರೂಪದಲ್ಲಿ ತಾಂಡವಾಡುತ್ತಿವೆ. ಆದರೆ ವಿಶೇಷವಾಗಿ ಭಾರತದ ಜಾತಿಯಾಧಾರಿತ ಸಮಾಜದಲ್ಲಿ ನಿರಂತರವಾಗಿ ಇದು ಬೆಳೆಯುತ್ತಾ ಬಂದಿದೆ. ದಲಿತರಿಗೆ ಇದು ಇನ್ನೂ ಹೆಚ್ಚಿನ ಧಾರುಣ ಸ್ಥಿತಿಯನ್ನು ತಂದೊಡ್ಡಿದೆ. ಅನ್ನಕ್ಕಾಗಿ ಅನೇಕ ತಂತ್ರ, ಹೋರಾಟ ಮಾಡಿದ ಬಗೆಗಳನ್ನು ದಲಿತ ಆತ್ಮಕಥೆಗಳು ಬಯಲು ಮಾಡುತ್ತವೆ. ಬದುಕಿನ ಅಸ್ತಿತ್ವವನ್ನು ಕಂಗಾಲಾಗಿಸುವ ಶಕ್ತಿಯನ್ನು ಪಡೆದಿರುವ ಹಸಿವನ್ನು ನಿಗ್ರಹಿಸುವ ದಲಿತರ ಪ್ರತಿಶಕ್ತಿಯ ಬಳಕೆ ಅಪರಿಚಿತ ಲೋಕಕ್ಕೆ ಬೆರಗನ್ನು ಉಂಟು ಮಾಡಬಲ್ಲದು. ಬಡತನದ ತೀವ್ರತೆಯನ್ನು ನೀಗಿಸಿಕೊಳ್ಳಲು ನಡೆಸುವ ಸೆಣಸಾಟ ಎಲ್ಲ ಆತ್ಮಕಥೆಗಳಲ್ಲೂ ದಾಖಲಾಗಿದೆ. ಬಡತನ ಎನ್ನುವುದು, ಮೂಲಭೂತ ಅಗತ್ಯಗಳಾದ ಅನ್ನ, ಬಟ್ಟೆ, ವಸತಿಯ ಕೊರತೆಯಿಂದ ಉಂಟಾದರೆ, ಅದರ ಜೊತೆಗೆ ಅಸ್ಪೃಶ್ಯತೆಯ ಕಾರಣಕ್ಕೆ, ಸಾಮಾಜಿಕ ಅಪಮಾನಕ್ಕೆ ಗುರಿಯಾದ ನೋವು ಮಡುಗಟ್ಟಿದೆ. ಬಡತನದಿಂದುಂಟಾದ ಹಸಿವನ್ನು ನೀಗಿಸಲು ಮಾಡಿದ ಸಾಲದ ಅಪಮಾನದಿಂದ ಪ್ರಾಣವನ್ನು ಕಳೆದುಕೊಳ್ಳುವ ಚಿತ್ರಣಗಳೂ ದಲಿತ ಆತ್ಮಕಥೆಗಳಲ್ಲಿ ದಾಖಲಾಗಿವೆ. ಜೊತೆಗೆ ಇಡೀ ದಲಿತ ಸಮುದಾಯವೇ ತಮ್ಮ ಹಸಿವನ್ನು ನಿವಾರಿಸಿಕೊಳ್ಳಲು ನಿರಂತರವಾಗಿ ಬೇರೆ ಬೇರೆ ಕೆಲಸಗಳನ್ನು ಅನಿವಾರ್ಯವಾಗಿ ಮಾಡಲೇಬೇಕಾದ ಸಂದರ್ಭಗಳು ಬಂದೊದಗಿವೆ. ಒಂದೊತ್ತಿನ ಊಟಕ್ಕಾಗಿ ಪರಿತಪಿಸುವ ದಲಿತರಿಗೆ ಮೇಲು ಜಾತಿ ಎನಿಸಿಕೊಂಡ ವರ್ಗ ತನಗೆ ಸೇರಿದ ದೇವಾಲಯ, ಮಠ ಮುಂತಾದ ಕಡೆ ಮತ್ತು ಮದುವೆ, ಜಾತ್ರೆ ಸಂದರ್ಭಗಳಲ್ಲಿ ಕೊನೆಯಲ್ಲಿ ಊಟ ಹಾಕುವ ಪದ್ಧತಿಯು ತನ್ನೆಲ್ಲಾ ಕರಾಳ ಸ್ವರೂಪದಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿದೆ. ಹೊಟ್ಟೆಗಿಲ್ಲದ ಕಾರಣದಿಂದ ಅಪಮಾನ ಹಿಂದೆ ಸರಿದು ಅನ್ನಕ್ಕಾಗಿ ಕಾಯುವ ಸ್ಥಿತಿ ಸ್ವಾತಂತ್ರ್ಯ ನಂತರದಲ್ಲೂ ಭಾರತದಲ್ಲಿ ಉಳಿದಿದೆ.

ಕನ್ನಡದ ಪ್ರಸಿದ್ಧ ವಿಮರ್ಶಕರಾದ ಡಿ.ಆರ್.ನಾಗರಾಜ್ ಅವರು ಹೇಳುವಂತೆ, "ಬಡತನ ಮತ್ತು ಪ್ರತಿಭೆಗಳ ನಡುವಣದ ಸಂಬಂಧ 'ಊರು ಕೇರಿ'ಯ ಒಂದು ಮುಖ್ಯ ವಸ್ತು. ದಲಿತ ಸಾಹಿತಿಗಳ ಆತ್ಮಕಥೆ ಓದುವುದು ಏಕಕಾಲಕ್ಕೆ ಆಸಕ್ತಿ ಮತ್ತು ಆತಂಕಗಳನ್ನು ಹುಟ್ಟಿಸುತ್ತದೆ. ಒಂದು ಹೊಸ ಅನುಭವ ಲೋಕವೊಂದರ ಶೋಧನೆ ಎಂಬ ಕಾರಣಕ್ಕೆ ಆಸಕ್ತಿ. ಸವರ್ಣೀಯ ಸಮಾಜದ ಹಿಂಸೆ ಆತ್ಮಕಥನದ ಸಾಹಿತ್ಯಾಕೃತಿಯಲ್ಲಿಯೇ ಎದ್ದು ಕಾಣುತ್ತದೆ ಎಂಬ ಕಾರಣಕ್ಕೆ ಆತಂಕ. ಮಹಾರಾಷ್ಟ್ರೀಯ ಅಥವಾ ಕನ್ನಡದ ದಲಿತ ಲೇಖಕರ ಆತ್ಮಕಥನಗಳನ್ನು ಓದಿದಾಗ ಒಂದು 'ಬೋನ್ಸಾಯ್' ಮರವನ್ನು ಕಂಡ ಅನುಭವವಾಗುತ್ತದೆ. ಇಲ್ಲಿ, ಒಂದು ಚಿಕ್ಕ ಆತ್ಮಕಥನದಲ್ಲಿ ಹಲವು ಕಾದಂಬರಿಗಳೇ ಸಂಕ್ಷಿಪ್ತೀಕರಣಕ್ಕೆ ಒಳಗಾಗಿರುತ್ತವೆ."[೨೫] ಡಿ.ಆರ್.ನಾಗರಾಜ ಅವರು ಹೇಳಿರುವ ಈ ಮಾತು ಕನ್ನಡವಲ್ಲದೆ, ಭಾರತದ ಎಲ್ಲ ಆತ್ಮಕತೆಗಳಿಗೂ ಅನ್ವಯಿಸುವ ಮಾತಾಗಿದೆ. ಅವರ ಈ ಮಾತನ್ನು ಭಾರತದ ಬಹುಭಾಷಾ ಆತ್ಮಕಥನಗಳ ಜತೆಗೆ ಹೋಲಿಸಿ ಚರ್ಚಿಸಬಹುದು. ದಲಿತೇತರರ ಆತ್ಮಕಥೆಗಳಿಗಿಂತ ಊರು, ಕೇರಿ, ಕುಲ, ಅಸ್ಪೃಶ್ಯತೆ, ಬಡತನ, ಹಸಿವು, ಲೋಕದರ್ಶನ ಮತ್ತು ಸ್ವಂತ ವ್ಯಕ್ತಿತ್ವಗಳೆಲ್ಲ ಬೆರೆತು ದಲಿತ ಭಾರತದ ವಿರಾಟ್‌ಕಥನ ರೂಪದಲ್ಲಿ ಹುಟ್ಟಿರುವುದು ದಲಿತ ಆತ್ಮಕಥೆಗಳಲ್ಲಿ ಎದ್ದು ಕಾಣುತ್ತದೆ.

ಭಾರತದ ಸಾಮಾಜಿಕ ಸಂದರ್ಭದಲ್ಲಿ ದಲಿತರ ಬಡತನ ಮತ್ತು ಹಸಿವಿಗೆ ಅನೇಕ ಕಾರಣಗಳಿವೆ. ಇವು ಒಂದಕ್ಕೊಂದು ಥಳುಕು ಹಾಕಿಕೊಂಡಿವೆ. ಅಂಥ ಸಂದರ್ಭಗಳನ್ನು ತಾತ್ವೀಕರಿಸಿ ಈ ಮುಂದಿನಂತೆ ದಾಖಲಿಸಬಹುದು:

೧. ದಲಿತರ ಬಡತನಕ್ಕೆ ಕೇವಲ ಹಸಿವೇ ಮಾನದಂಡವಲ್ಲ.
೨. ದಲಿತರ ಹಸಿವು ಕೇವಲ ಬಡತನ ಮೂಲದ್ದಲ್ಲ.
೩. ದಲಿತರ ಬಡತನ ಮತ್ತು ಹಸಿವಿಗೆ ಜಾತಿಯ ಬೇರುಗಳೂ ಕಾರಣ.
೪. ದಲಿತರ ಬಡತನ ಮತ್ತು ಹಸಿವಿನ ನಿವಾರಣಾ ಮಾರ್ಗ ಕುಡಿತವಲ್ಲ.

ಶೋಷಿತರ ಹಸಿವಿಗೆ ಪ್ರತಿಭೆ, ಸ್ವಾಭಿಮಾನವನ್ನು ಕಳೆದುಕೊಳ್ಳುವ ಅನಿವಾರ್ಯತೆ ಇದೆ. ಹಾಗೆಯೇ ಅವುಗಳನ್ನು ಗಿಟ್ಟಿಸಿಕೊಳ್ಳುವ ಚೈತನ್ಯವೂ ಇದೆ. ಆದರೆ ಇಂದಿಗೂ ಸಹಾ ಹಸಿವಿನ ಕಾವಿಗೆ ಅನೇಕ ದಲಿತ ಪ್ರತಿಭೆಗಳು ಕರಗಿಹೋಗುತ್ತಿವೆ. ದಲಿತ ಆತ್ಮಕಥೆಗಳಲ್ಲಿನ ಹಸಿವಿನ ಪ್ರಸಂಗದ ನೆನಪುಗಳನ್ನು ಲೇಖಕರು ತಮ್ಮ ಬದುಕಿನ ಅಸ್ತಿತ್ವವನ್ನು ಕಟ್ಟಿಕೊಳ್ಳುವಲ್ಲಿ, ಸ್ವಾಭಿಮಾನವನ್ನು ಮೈಗೂಡಿಸಿಕೊಳ್ಳುವಲ್ಲಿ ಉತ್ತೇಜನಕಾರಿಯಾಗಿ ಬಳಸಿಕೊಂಡಿದ್ದಾರೆ. ಇಂಥ

ಹಲವಾರು ವಿಚಾರಗಳನ್ನು ಆತ್ಮಕಥೆಗಳಲ್ಲಿ ನಿರೂಪಣೆಯಾಗಿರುವ ಬಡತನ ಮತ್ತು ಹಸಿವಿನ ಸಂಗತಿಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

ಅರವಿಂದ ಮಾಲಗತ್ತಿ ಅವರ 'ಗೌರ್ಮೆಂಟ್ ಬ್ರಾಹ್ಮಣ'ದಲ್ಲಿ ಹೆಣದ ಮೇಲೆ ಹಣವನ್ನು ಬಿಸಾಡುವ, ಬಿಸಾಡಿದ ಹಣವನ್ನು ಪಡೆಯಲು ದಲಿತರು ನಡೆಸುವ ಪೈಪೋಟಿ ಆರ್ಥಿಕ ನೆಲೆಯಲ್ಲೇ ಬಂದುದಾಗಿದೆ. ಸಂಪ್ರದಾಯದ ಮುಸುಕಿನಲ್ಲಿನ ಇಂತಹ ಅನೇಕ ಆಚರಣೆಗಳು ದಲಿತರಿಗೆ ಹಣದ ಮೂಲವೆನಿಸಿದರೂ ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಾ ದಲಿತನನ್ನು ನೆಲದ ಮೂಲಕ ಚಾಚುವಂತೆ ಮಾಡುತ್ತದೆ. ದಲಿತರು ಬಂದಿರುವುದನ್ನು ಖಚಿತಪಡಿಸಿಕೊಂಡೇ ಅವರು ಹಣವನ್ನು ಹೆಣದ ಮೇಲೆ ಬಿಸಾಕುವುದನ್ನು ಗಮನಿಸಬೇಕು. ಹೆಣದ ಚಟ್ಟದ ಕೆಳಗೆ ಕಚ್ಚಾಡಿ ಎತ್ತಿಕೊಳ್ಳುವುದು, ಹಾಗೂ ದಲಿತರ ಕೆಲಸ ತೂರಿದ ಹಣ ಉರುಳುತ್ತ, ಹೆಣ ಹೊತ್ತವರ ಕಾಲಲ್ಲಿ, ಹಿಂದೆ ಅಳುತ್ತ ಬರುವವರ ಕಾಲಲ್ಲಿ ಹೋಗಬೇಕು. ಅವರು ಅದನ್ನು ದಾಟಿ ಪಾಪ ಕಳೆದುಕೊಳ್ಳಬೇಕು. ಅವರೆಲ್ಲ ತುಳಿದು ಹೋದ ಮೇಲೆ ದಲಿತ ಮಕ್ಕಳು ಅದನ್ನು ಎತ್ತಿಕೊಳ್ಳಬೇಕು. ಹೀಗೆ, ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಹೆಣದ ಮೇಲೆ ಹಣ ತೂರುವುದು ಮೇಲ್ವರ್ಗದವರ ಪ್ರತಿಷ್ಠೆಯ ಹೆಗ್ಗುರುತಾದರೆ, ಹೆಣಕ್ಕೆ ತೂರಿದ ಹಣ ನೆಲಕ್ಕೆ ಬಿದ್ದ ಮೇಲೆ ಅವರ ಕಾಲ ಸಂಧಿಯಲ್ಲಿ ತೂರಿ ಕಚ್ಚಾಡಿ ಹಣ ಎತ್ತಿಕೊಳ್ಳುವುದು ಇವರ ಕಾಯಕವಾಗಿತ್ತು. ಈ ಹಿನ್ನೆಲೆಯನ್ನು ಗಮನಿಸಿದ್ದರೇ ಇದು ದಲಿತರ ಬದುಕಿನ ಅಸ್ತಿತ್ವ ಮತ್ತು ಆರ್ಥಿಕ ದುಸ್ಥಿತಿಯನ್ನು ಕುರಿತದ್ದಾಗಿದೆ.

ಹಳ್ಳಿಗಳಲ್ಲಿ ಯಾವುದೇ ಊಟದ ಕಾರ್ಯಕ್ರಮವಿದ್ದರೂ ಈಗಲೂ ದಲಿತರದ್ದೇ ಕೊನೆಯ ಪಂಕ್ತಿ. ದಲಿತರು ಮಾತ್ರ ತಮ್ಮ ಊಟ ಮುಗಿಸಿ ಹೋಗುವಾಗ ಪಾತ್ರೆಯಲ್ಲಿಟ್ಟ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕು. ಅದರ ಅರ್ಥವೆಂದರೆ ಒಮ್ಮೆ ಊಟ ಮಾಡಿ ಹೋದ ದಲಿತರು, "ಊಟ ಮುಗಿಸಿ ಹೋಗುವಾಗ ಪಾತ್ರೆಯಲ್ಲಿಟ್ಟ ಬಣ್ಣದಲ್ಲಿ ಕೈ ಅದ್ದಿ ಹೋಗಬೇಕು..... ಚುನಾವಣೆಯ ಸಂದರ್ಭದಲ್ಲಿ ಓಟು ಹಾಕಿದ ವ್ಯಕ್ತಿಯ ಬೆರಳಿಗೆ ಗುರುತು ಬೊಟ್ಟು ಹಾಕಿದಂತೆ.....ಬಣ್ಣದಲ್ಲಿ ಕೈ ಅದ್ದುವ ಸಂದರ್ಭ ಬಂದಾಗ ಅದರಿಂದ ತಪ್ಪಿಸಿಕೊಳ್ಳಲು ಅಜ್ಜಿ ಬೇರೆ ಬೇರೆ ತಂತ್ರಗಳನ್ನು ಹುಡುಕಿದ್ದಳು ಎಂದೋ ಒಮ್ಮೆ ಎಣ್ಣೆ ಕಾಣುವ ತಲೆ ಅಂದು ಅವಶ್ಯವಾಗಿ ಎಣ್ಣೆ ಕಾಣುತ್ತಿತ್ತು. ಊಟ ಮುಗಿದಾದ ಮೇಲೆ ಬಣ್ಣದಲ್ಲಿ ಕೈ ಅದ್ದು ಸಮಯ ಬಂದಾಗ ಕೈ ಎಣ್ಣೆ ಹತ್ತಿದ ತಲೆಗೆ ತಿಕ್ಕಿ ಬಣ್ಣದ ಪಾತ್ರೆಯಲ್ಲಿ ಅದ್ದುವಂತೆ ಅಜ್ಜಿ ಮೊದಲೇ ಹೇಳುತ್ತಿದ್ದಳು. ಮೊದಲು ಹಾಗೆಯೇ ತಪ್ಪಿಸಿಕೊಂಡು ಹೊರಬರಲು ಪ್ರಯತ್ನಿಸುವುದು ಯಾರಾದರೂ ಹಿಡಿದರೆ ಆ ತಂತ್ರವನ್ನು

ಬಳಸುತ್ತಿದ್ದೆವು. ಹೊರಗೆ ಬಂದಾಕ್ಷಣ ಕೈ ಚೊಣ್ಣಕ್ಕೆ ಒರೆಸಿಕೊಂಡಾಗ ಬಣ್ಣ ಹೊರಟು ಹೋಗುತ್ತಿತ್ತು. ಅನಂತರ ಕೊನೆಯ ಪಂಕ್ತಿಯ ಊಟಕ್ಕೆ ಹಾಜರಾಗುತ್ತಿದ್ದೆವು. ಕೆಲ ಬಾರಿ ಸಿಕ್ಕಿ ಬಿದ್ದಾಗ ಕತ್ತು ಹಿಡಿದು ಹೊರಕ್ಕೆ ದಬ್ಬುತ್ತಿದ್ದರು. ಆಗ ದೇಶಾವರಿ ನಗೆ ಬೀರುತ್ತ, ಕೆಲಬಾರಿ ಅಳುತ್ತಾ ಹೊರಗೆ ಬರುತ್ತಿದ್ದೆವು."[೨೭] ಮೇಲಿನ ಈ ಸಾಲುಗಳು ದಲಿತರು ಶತಮಾನದ ಹಸಿವನ್ನು ನೀಗಿಸಿಕೊಳ್ಳಲು ಎಷ್ಟೆಲ್ಲಾ ಹೋರಾಟವನ್ನು ನಡೆಸುತ್ತಾ ಬರುತ್ತಿದ್ದಾರೆ ಎಂಬುದನ್ನು ಕಟ್ಟಿಕೊಡುತ್ತದೆ. ಆದರೂ ಶೋಷಿತ ಸಮುದಾಯ ಹಸಿವಿನ ಕಬಂದ ಬಾಹುವಿನ ಹಿಡಿತದಿಂದ ಹೊರಬರಲು ಸಾಧ್ಯವಾಗಿಲ್ಲ. ಕೆಳವರ್ಗದವರ ಬಡತನ ಮತ್ತು ಹಸಿವು ಎಷ್ಟರ ಮಟ್ಟಿನದು ಎಂದರೆ ಸತ್ತ ಪ್ರಾಣಿಯೂ ಸಹಾ ಅವರಿಗೆ ಆಹಾರದ ಮತ್ತು ಆದಾಯದ ಮೂಲವಾಗುತ್ತದೆ. (ಈ ಕುರಿತು ವಿಸ್ತೃತವಾಗಿ ಅಧ್ಯಾಯ-೪ರ ಆಹಾರಪದ್ಧತಿ ಭಾಗದಲ್ಲಿ ಚರ್ಚಿಸಲಾಗಿದೆ.) 'ಊರುಕೇರಿ'ಯಲ್ಲಿ ದಾಖಲಿಸಿರುವಂತೆ, "ಒಂದು ಸಲ ಮಂಚನಬೆಲೆಗೆ ಬೇರೆ ಊರಿನ ಎಮ್ಮೆ ತಪ್ಪಿಸಿಕೊಂಡು ಬಂತು. ಕತ್ತಲೆಯೂ ಆಗಿತ್ತು. ಊರಿನ ದಲಿತರಲ್ಲಿ ಮೂರು ನಾಲ್ಕು ಜನ ಗಟ್ಟಿಯಾಗಿದ್ದವರು. ಅದನ್ನು ಹಿಡಿದರು. ಊರ ಹಿಂದಿನ ಬಂಡೆಯ ಬಳಿಗೆ ಸಾಗಿಸಿ, ಕೊಯ್ದು ಪಾಲು ಹಾಕಿಕೊಂಡು ರಾತ್ರೆಯೆಲ್ಲಾ ಹಬ್ಬ ಮಾಡಿದರು. ಎಮ್ಮೆಯನ್ನು ಕೊಯ್ದಾಗಿನ ರಕ್ತ ಬಂಡೆಯ ಮೇಲೆಲ್ಲಾ ಚೆಲ್ಲಿ ಬಂಡೆ ಕೆಂಪಾಗಿತ್ತು. ಅದು ಕಳ್ಳತನದ ಗುರುತಿನಿಂದ ಕಾಣುತ್ತಿತ್ತು."[೨೮] ಆದರೆ ಸಿದ್ದಲಿಂಗಯ್ಯ ಅವರ ಮಾವ ಎಮ್ಮೆಯನ್ನು ಹುಡುಕ ಬಂದವರನ್ನು ಸಮಯಪ್ರಜ್ಞೆಯಿಂದ ಹಿಂದಕ್ಕೆ ಕಳಿಸುವುದು ಶ್ರೀಮಂತ ಜಾತಿಗೆ ಅರಿವಾಗುವುದಿಲ್ಲ. ಮೇಲ್ಜಾತಿ ವರ್ಗಕ್ಕೆ ಚಳ್ಳೆಹಣ್ಣು ತಿನ್ನಿಸುವ ತಂತ್ರಗಾರಿಕೆ ಕೆಳಜಾತಿಗೆ ತನ್ನ ಉಳಿವಿನ ಪ್ರಶ್ನೆಯಾಗಿರುತ್ತದೆ. ಇಲ್ಲಿನ ಈ ಬುದ್ಧಿವಂತಿಕೆಯನ್ನು ಜ್ಞಾನದ ಪರಿಧಿಯೊಳಗೆ ಶೋಷಕ ಸಮೂಹ ಎಂದು ಗುರುತಿಸುವುದಿಲ್ಲ. ಆದರೆ, ಶೋಷಿತರ ಬಡತನ ಮತ್ತು ಹಸಿವುಗಳ ಹಿಂದಿನ ಶೋಷಕರ ಶೋಷಣೆಯ ಹಿಂಸೆಯ ಪ್ರಮಾಣವನ್ನು ಗ್ರಹಿಸಲು ಸಾಧ್ಯವಿದೆ.

ದಲಿತರು ತಮ್ಮ ಹಸಿವನ್ನು ನೀಗಿಸಿಕೊಳ್ಳಲು ಕಂಡುಕೊಂಡ ಅನ್ನದ ಮಾರ್ಗಗಳು ಅನೇಕ ಮತ್ತು ಆಶ್ಚರ್ಯಕರ. ಸಿದ್ದಲಿಂಗಯ್ಯ ಅವರು ಮೋರಿಗಿಳಿದು ಕಪ್ಪುಮಣ್ಣನ್ನು ಕೆದಕಿ ತಾಮ್ರ ಹಿತ್ತಾಳೆಯ ಚೂರುಗಳನ್ನು ಸಂಗ್ರಹಿಸಿ, ಹೀಗೆ ಸಂಗ್ರಹಿಸಿದ್ದನ್ನು ಆಗಾಗ ಬರುತ್ತಿದ್ದ ಪಾಕಂಪಪ್ಪಿನವರಿಗೆ ಕೊಟ್ಟು ಪಾಕಂಪಪ್ಪನ್ನು ಪಡೆದು ತಿನ್ನುತ್ತಿದ್ದರು. ಅವರ ಪಾಲಿಗೆ ಮೋರಿಯು ಬೆಲ್ಲ ಮತ್ತು ಕಡಲೆಯಿಂದ ಮಾಡಿದ ಪಾಕಂಪಪ್ಪನ್ನು ತಂದುಕೊಡುವ ಅಮೃತ ನಿಧಿಯಾಗಿತ್ತು. ಅವರು ಅನುಭವಿಸಿದ ತೀವ್ರವಾಗಿ ಘಾಸಿಗೊಳಿಸಿದ ಬಡತನ ಮತ್ತು ಹಸಿವಿನ ಚಿತ್ರಣವೊಂದಿದೆ. ದಿನ

ಹಾಸ್ಟೆಲಿನಿಂದ ಊಟ ತರಲು ಅವರ ತಂಗಿ ಹೋಗುತ್ತಿದ್ದು. ಅಂದು ಯಾಕೋ ಊಟ ತರುವುದು ತಡವಾಯಿತು. ಇವರಿಗೆ ಶಾಲೆಗೆ ಹೊತ್ತಾಗ ತೊಡಗಿತ್ತು. ಪುಸ್ತಕದ ಚೀಲ ಹೆಗಲಿಗೇರಿಸಿಕೊಂಡು ಶಾಲೆಗೆ ಹೊರಟು, ಅರ್ಧ ದಾರಿ ನಡೆದಿದ್ದಾಗ ಎದುರಿಗೆ ತಂಗಿ ಊಟದೊಂದಿಗೆ ಮನೆಗೆ ಬರುತ್ತಾಳೆ. ಯಾವುದಾದರೂ ಅಂಗಡಿಯಲ್ಲಿ ಉಪ್ಪು ಪಡೆದು ಮಧ್ಯಾಹ್ನ ತಿನ್ನಬಹುದೆಂದು ತಂಗಿಯಿಂದ ಒಂದು ರಾಗಿ ಮುದ್ದೆಯನ್ನು ಈಸಿಕೊಂಡು ಬ್ಯಾಗಿನಲ್ಲಿ ಹಾಕಿಕೊಂಡು ಶಾಲೆಗೆ ಹೊರಡುತ್ತಾರೆ. ಮಧ್ಯಾಹ್ನ ಊಟಕ್ಕೆ ಬಿಡುವುದನ್ನೇ ನಿರೀಕ್ಷಿಸುತ್ತಿರುತ್ತಾರೆ. ಆದರೆ ಅಂದು ಒಬ್ಬ ಹುಡುಗ ಒಂದು ಕಡೆಯಿಂದ ಎಲ್ಲರ ಚೀಲಗಳನ್ನು ಪರೀಕ್ಷಿಸುತ್ತಿರುತ್ತಾನೆ. ಚೀಲದಲ್ಲಿ ಕೈ ಆಡಿಸಿ ಪುಸ್ತಕ ನೋಟುಬುಕ್ಕುಗಳನ್ನು ಹೊರಗಿಟ್ಟು ಒಳಗಿಡುವುದು ಅವನ ಪರೀಕ್ಷೆಯ ರೀತಿ. ತನ್ನ ಕಳೆದುಕೊಂಡ ಪೆನ್ಸಿಲ್ಲನ್ನು ಹುಡುಕಲು ಎಲ್ಲರ ಚೀಲ ತಪಾಸಣೆಗೆ ಅವನು ಮೇಡಂನಿಂದ ಅನುಮತಿ ಪಡೆದಿದ್ದ. ಪೆನ್ಸಿಲ್ ಕಳೆದುಕೊಂಡವನು ತಮ್ಮ ಮುದ್ದೆಯನ್ನು ಹೊರತೆಗೆದು ಪ್ರದರ್ಶನಕ್ಕೆ ಇಡಬಹುದೆಂಬ ಅನುಮಾನ ಬಂದು ಭಯಗೊಂಡು, ಬಳಿ ಬಂದಾಗ ತಮ್ಮ ಬ್ಯಾಗಿನ ಪರೀಕ್ಷೆಗೆ ಅವಕಾಶ ಕೊಡಲಿಲ್ಲ. ಇದರಿಂದ ಅವನು ಸಿದ್ದಲಿಂಗಯ್ಯನೇ ಕಳ್ಳನೆಂದು ತೀರ್ಮಾನಿಸಿ ಮೇಡಂಗೆ ದೂರಿತ್ತ. ಮೇಡಂ ಇವರ ಹತ್ತಿರ ಬಂದು ಬ್ಯಾಗು ತೆಗೆಯಲು ಒತ್ತಾಯಿಸಿದರು. ಹುಡುಗರೆಲ್ಲ ಕುತೂಹಲದಿಂದ ನೋಡ ತೊಡಗಿದರು. ಅವರಿಗೆ ಪೆನ್ನಿಲ್ಲಿನ ಸಮಸ್ಯೆ. ಇವರಿಗೆ ಮುದ್ದೆಯ ಭಯ. ಅವರು ಒತ್ತಾಯದಿಂದ ತಮ್ಮ ಬ್ಯಾಗಿನೊಳಗಿನ ವಸ್ತುಗಳನ್ನು ಹೊರತೆಗೆದರು. ಪೆನ್ಸಿಲ್ ಸಿಗಲಿಲ್ಲ. ಅವರಿಗೆ ರಾಗಿಮುದ್ದೆ ಸಿಕ್ಕಿತು. ಮೇಡಂ ಚಕಿತರಾಗುತ್ತಾರೆ. ಆದರೆ ಹುಡುಗರಿಗೆ ಇದು ಮೋಜಿನ ವಿಷಯವಾಗಿ ಮಧ್ಯಾಹ್ನ ಆಟಕ್ಕೆ ಬಿಟ್ಟಿದ್ದೇ ತಡ ಎಲ್ಲರೂ ಏಕಕಂಠದಿಂದ "ಮುದ್ದೇ ಮುದ್ದೇ" ಎಂದು ಕೂಗುತ್ತ ಹೊರಡುತ್ತಾರೆ.

ದಲಿತರು ಓದಿನ ಹಾದಿಯಲ್ಲಿ ಹೀಗೆ ಬಡತನ ಮತ್ತು ಹಸಿವಿನ ಕಾರಣಕ್ಕಾಗಿ ಹಲವಾರು ರೀತಿಯಲ್ಲಿ ಮುಜುಗರಕ್ಕೆ, ಅವಮಾನಕ್ಕೆ ಒಳಗಾಗಿದ್ದಾರೆ. ಮುಳ್ಳೂರು ನಾಗರಾಜು ಅವರು ತಮ್ಮ ಓದಿನ ಹಾದಿಯ ಹಸಿವಿನ ಸಂದರ್ಭವನ್ನು ಹೀಗೆ ನಿರೂಪಿಸಿದ್ದಾರೆ: "ನಾನು ಹೈಸ್ಕೂಲಿಗೆ ಸೇರಿದ ಮೇಲೆ ಕೆಲವು ದಿನಗಳ ನಂತರ ಯಾರದೋ ಒತ್ತಾಯದ ಮೇರೆಗೆ ನನ್ನನ್ನು ಹಾಸ್ಟಲ್‌ಗೆ ಸೇರಿಸಲಾಯಿತು. ಹಾಸ್ಟಲ್‌ನಲ್ಲಿ ನನ್ನಂತಹ ಅನೇಕ ಹುಡುಗರು ಇದ್ದರು. ಆ ವರ್ಷ ಇಡೀ ದೇಶಕ್ಕೆ ಬರಗಾಲ. ಹಾಸ್ಟಲಿನಲ್ಲಿ ಕೆಂಪು ಜೋಳದ ಮುದ್ದೆಯನ್ನೂ ಸೊಸೈಟಿ ಅಕ್ಕಿಯ ಅನ್ನವನ್ನೂ ಕೊಡುತ್ತಿದ್ದರು. ನನ್ನ ಜತೆಗಿದ್ದ ಬಹುಪಾಲು ಗೆಳೆಯರು ಬೇರೆ ಬೇರೆ ಹಳ್ಳಿಗಳಿಂದ

ಬಂದು ಸೇರಿಕೊಂಡಿದ್ದರು. ಅವರಾರಿಗೂ ಊಟ ಸಾಕಾಗುತ್ತಿರಲಿಲ್ಲ. ನಾನು ಸ್ವಲ್ಪವೇ ತಿನ್ನುತ್ತಿದ್ದೆ. ನನಗಷ್ಟೇ ಸಾಕಾಗುತ್ತಿತ್ತು. ಆ ಮುದ್ದೆಯ ತಿಂದರೆ ನನಗೆ ಹೊಟ್ಟೆಯ ನೋವು ಬರುತ್ತಿತ್ತು. ಕಾಲಕ್ರಮೇಣ ಮುದ್ದೆ ತಿನ್ನುವುದನ್ನು ಬಿಟ್ಟೆ. ಮುದ್ದೆಯನ್ನು ನನ್ನ ಪಕ್ಕದಲ್ಲಿ ಕೂತ ಗೆಳೆಯರಿಗೆ ವರ್ಗಾಯಿಸಿ ಬಿಡುತ್ತಿದ್ದೆ. ಸ್ಕೂಲಿನಲ್ಲಿ ಕೊಡುತ್ತಿದ್ದ ಮುಸುಕಿನ ಜೋಳದ ಉಪ್ಪಿಟ್ಟನ್ನೂ ಕಂಡವರಿಗೆ ದಾನ ಮಾಡಿಬಿಡುತ್ತಿದ್ದೆ. ಹಾಸ್ಟಲಿಗೆ ಸೇರಿದ್ದರೂ ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗಿ ಬರುತ್ತಿದ್ದೆ. ಈ ಪದ್ಧತಿಯು ನಾನು ಹಾಸ್ಟಲಿನಲ್ಲಿ ಇರುವವರೆಗೂ ಮುಂದುವರೆಯಿತು."[೨೮] ಈ ಬಗೆಯ ಹಸಿವಿನ ಚಿತ್ರಣ ಕೇವಲ ಒಬ್ಬ ಆತ್ಮಕಥನಕಾರರ ನಿಲುವು ಮಾತ್ರವಾಗಿರುವುದಿಲ್ಲ. ಇದು ಪ್ರತಿಯೊಬ್ಬ ದಲಿತ ವಿದ್ಯಾರ್ಥಿಯು ವಿದ್ಯಾರ್ಥಿನಿಲಯದಲ್ಲಿ ಅನುಭವಿಸುವ ಅಂತರಾಳದ ಸನ್ನಿವೇಶವೇ ಆಗಿರುತ್ತದೆ. ಶತಮಾನಗಳಿಂದ ಅಕ್ಷರ ವಂಚಿತರಾದ ದಲಿತ ಸಮುದಾಯಕ್ಕೆ ಅಕ್ಷರ ಕಲಿಯಬೇಕೆಂಬ ಅತೀವ ಆಸೆ ಚಿಗುರೊಡೆದರು ಬಡತನದ ಕಾರಣಕ್ಕೆ ಕಮರಿ ಹೋಗುತ್ತದೆ. ಈ ಬಡತನ ಹಾಗೂ ಹಸಿವಿನ ನಿವಾರಣೆಯನ್ನು ಮಾಡಿ ದಲಿತ ಸಮುದಾಯದ ವಿದ್ಯಾರ್ಥಿಗಳನ್ನು ವಿದ್ಯಾವಂತರಾಗಿ ಮಾಡಬೇಕೆಂಬ ಆಶಯದಿಂದ ಸರ್ಕಾರವು ದಲಿತರಿಗಾಗಿ ಪ್ರಾರಂಭಿಸಿರುವ ವಿದ್ಯಾರ್ಥಿನಿಲಯದಲ್ಲಿಯ ಈ ಬಗೆಯ ಸಹಜ ಸ್ಥಿತಿಯನ್ನು ತಮ್ಮ ಆತ್ಮಕಥನದಲ್ಲಿ ದಾಖಲಿದ್ದಾರೆ.

ದಲಿತ ಸಮುದಾಯದ ಶಾಲಾ ಮಕ್ಕಳ ಹಸಿವಿನ ತೀವ್ರತೆಯನ್ನು ಬಿಂಬಿಸುವ ಚಿತ್ರಣವನ್ನು ತುಂಬಾಡಿ ರಾಮಯ್ಯ ಅವರು ತಮ್ಮ ಸ್ವಾನುಭವದಲ್ಲಿ ನಿರೂಪಿಸಿದ್ದಾರೆ: "ಒಂದು ದಿನ ಕೊರಟಗೆರೆಯಿಂದ ನಾಲ್ಕು ಗಂಟೆಗೇ ಸ್ಕೂಲು ಮುಗಿಸಿಕೊಂಡು ಮನೆಗೆ ಬಂದಿದ್ದೆ. ಬಂದವನೇ ಹಿಟ್ಟಿನ ಸೋರೆ ನೋಡಿದೆ. ಖಾಲಿ ಕಂಡಿತು. ಹೊಟ್ಟೆ ತಕತಕ ಅಂತಿತ್ತು. ಯಾವ ಮಡಕೆಯಲ್ಲಾದರೂ ತಿನ್ನುವುದಕ್ಕೆ ಏನಾದರೂ ಇದೆಯೇನೊ ಅಂತ ತಡಕಿದರೆ ಏನೂ ಸಿಗಲಿಲ್ಲ. ಬೇಸಿಗೆ ಕಾಲ. ತುಂಬಾಡಿ ಕೆರೆ ತುಂಬಿದ್ದರಿಂದ ಊರಿನ ಸುತ್ತ ಕಡ್ಲೆಗಿಡ ಹಾಕಿದ್ದರು. ನಮ್ಮ ಹಟ್ಟಿಯ ಸ್ವಲ್ಪ ದೂರದಲ್ಲೇ ವಡ್ಡರ ವೆಂಕಟಪ್ಪನ ಹೊಲ. ಅವರ ಹೊಲ ಸ್ವಲ್ಪ ತಗ್ಗಿನಲ್ಲಿದ್ದುದರಿಂದ ಹೊಲದಲ್ಲಿ ಕೂತರೆ ಯಾರಿಗು ಕಾಣಿಸುತ್ತಿರಲಿಲ್ಲ. ಅವರ ಕಡ್ಲೆಗಿಡ ಇದ್ದ ಹೊಲಕ್ಕೆ ಸೀದಾ ಹೋದವನೆ ಕೊನೆ ಸೀಳಿನಲ್ಲಿ ಕುಳಿತುಕೊಂಡು ಗಿಡದಲ್ಲಿದ್ದ ಕಡ್ಲೆಕಾಯನ್ನು ಒಂದೊಂದು ಬಿಡಿಸಿ ತಿನ್ನಲು ಮುಂದಾದೆ. ಆಗ ನನಗಿದ್ದ ಹಸಿವು ಸುತ್ತಲಿದ್ದುದನ್ನೆಲ್ಲಾ ಮರೆಸಿತ್ತು. ಬಳ್ಳಿ ಗಿಡವಾದ್ದರಿಂದ ಗಿಡ ಮುರಿಯದೆ ಕಡ್ಲೆಕಾಯಿ ಬಿಡಿಸಿ ತಿಂದು, ಬೇರನ್ನು ಮೊದಲಿನಂತೆ ನೆಲ್ಲಕ್ಕೆ ಊರಿದರೆ, ಗಿಡಕ್ಕೆ ಏನೂ ಆಗಿಲ್ಲವೇನೋ ಎಂಬಂತೆ ಕಾಣುತ್ತಿತ್ತು. ಹೀಗೆ ನಾಲ್ಕೈದು ಗಿಡ ಬಿಡಿಸಿ ಕಾಯಿ ತಿಂದಿರಬೇಕು, ಏನೋ ಶಬ್ಧವಾದಂತಾಗಿ ಕತ್ತೆತ್ತಿ ನೋಡಿದೆ.

ವಡ್ಡರ ವೆಂಕಟ್ಟಪ್ಪ (ಅವರನ್ನು ಮಾಮ ಎಂದು ಕರೆಯುತ್ತಿದ್ದೆ) ನನ್ನ ಮುಂದೆ ಯಮದೂತನಂತೆ ನಿಂತಿದ್ದರು. ಅವರನ್ನು ನೋಡಿದೊಡನೆಯ ನನ್ನ ಜಂಘಾಬಲವೆಲ್ಲವೂ ಉಚ್ಚೆಹುಯ್ಯುದ್ದುಕೊಳ್ಳುವುದಕ್ಕೆ ರೆಡಿಯಾಗುತ್ತಿದ್ದೆ.... ಆದರೆ ನಾನು ನಿರೀಕ್ಷಿಸಿದಂತೆ ವೆಂಕಟಪ್ಪ ಮಾಮ. ಹೊಡೆಯಲಿಲ್ಲ. 'ಬಾ ಹೊಲೇರ ಮುದ್ದಹನುಮಪ್ಪನ ಹತ್ತಿರ ನ್ಯಾಯ ಒಪ್ಪುಸ್ತೀನಿ. ನೀನ್ ಮಾಡಿದ್ ಸರಿಯೋ!' ಅಂದರು. ಅದಕ್ಕೆ ನಾನು 'ಒಂದೇಟು ಹೊಡೆದು ಬಿಡು ಮಾಮ! ಅವ್ರು ಹತ್ತಿರ ಹೋಗೋದು ಬ್ಯಾಡ. ಅವಮಾನವಾಗ್ತ್ಯತೆ' ಅಂತ ಅಂಗಲಾಚಿ ಬೇಡಿಕೊಂಡರೂ ಕೇಳಲಿಲ್ಲ. ನನ್ನ ಕೈಹಿಡಿದು ಎಳೆಯುತ್ತಾ ಊರಕಡೆ ಹೊರಟೇಬಿಟ್ಟ."[೨೯] ಆತ್ಮಕಥನಕಾರರು ಶಾಲೆಯಿಂದ ಬಂದಾಗ ಹಸಿವನ್ನು ನಿವಾರಿಸಿಕೊಳ್ಳಲಿಕ್ಕೆ ಮನೆಯಲ್ಲಿ ಏನು ಇಲ್ಲದ ಕಾರಣ ಬೇರೆಯವರ ಹೊಲದಲ್ಲಿ ಕದಿಯಲು ಪ್ರಾರಂಭಿಸುತ್ತಾರೆ. ಈ ಬಗೆಯ ಸನ್ನಿವೇಶ ಹಲವಾರು ದಲಿತ ವ್ಯಕ್ತಿಗಳಲ್ಲಿ ಕಂಡುಬರುತ್ತದೆ. ದಲಿತ ಸಮುದಾಯದ ಬಡತನ ಮತ್ತು ಹಸಿವಿನ ತಲ್ಲಣಗಳು ಎಂಥವರ ಅಂತಃಕರಣವನ್ನೂ ಕಲಕುವಂತಿವೆ.

ಲಕ್ಷ್ಮಣ್ ಅವರ 'ಸಂಬೋಳಿ' ಆತ್ಮಕಥನದಲ್ಲಿ ಬರುವ 'ಭಿಕ್ಷೆ ಬೇಡುವ ಪ್ರಸಂಗ', 'ಕಳ್ಳತನ ಪ್ರಸಂಗ'ಗಳು ಬಡತನ ಮತ್ತು ಹಸಿವಿನ ತೀವ್ರತೆಯನ್ನು ಮತ್ತಷ್ಟು ಕಟ್ಟಿಕೊಡುತ್ತವೆ. "ಸಿಹಿ ಹುಣಸೆ ಹಣ್ಣು ಕೀಳಲು ಹೋಗಿ ವಕ್ಕಲಿಗ ನಾರಾಯಣಪ್ಪನ ಕೈಗೆ ಸಿಕ್ಕಿಕೊಂಡು ಹಸಿಹೇಲ್ಮೇಲೆ ಬಿದ್ದ ಕೆರವನ್ನು ಮೂಸ್ನೋಡುವ ಒತ್ತಡ, ತನ್ನ ಕುಡ್ತಾದಿಂದ ಹೊರೆಸಿದ ಪ್ರಸಂಗ."[೩೦] ಸರ್ಕಾರಿ ಹಳೆಕೋಟೆ ಪ್ರೌಢಶಾಲೆಯಲ್ಲಿ ಮಧ್ಯಾಹ್ನ ಊಟಕ್ಕೆ ಬಿಟ್ಟಾಗ "ನಾನು ಆಚ್ಗೆ ಹೋಗಿ ಹೊಟ್ಟೆ ತುಂಬಾ ನೀರ್ಕುಂಡ್ಕಂಡು ಬಂದು ನಾನು ಎಲ್ಲಿ ಕುಂತ್ಕಂತಿದ್ನೋ ಅಲ್ಲೇನೆ.... ಬೇಗೂರಿನ ರಾಘವೇಂದ್ರ ಗೋಡೆ ಕಡೆ ತಿರುಗಿ ಊಟ ಮಾಡ್ತಿದ್ದ. ಯಾರಾದ್ರೂ ಹುಡುಗ್ರೂ ಅವ್ನ ಊಟದ ಡಬ್ಬಿ ಮುಟ್ಬುಟ್ರೆ ಅವ್ನು ಊಟಾನೇ ಮಾಡ್ತಿರಲಿಲ್ಲ. ತಕ್ಷಣ ನಮ್ಗಳ ಕಣ್ಣೆದುರ್ಗೆನೇ ಬಿಸಾಕ್ಬುಡ್ತಿದ್ದ! ಆ ಅನ್ನ ನೋಡಿದಾಗಲೆಲ್ಲಾ 'ದೇವ್ರೇ ಇದು ನನ್ಗೆ ಸಿಕ್ಕಿದ್ರೆ ಹೊಟ್ಟೆ ತುಂಬಿಸ್ಕಂಬೋದಾಗಿತಲ್ಲಾ! ಅಂದ್ಕಂತಿದ್ದೆ. ಅದಕ್ಕಾಗಿ ಹಾಸ್ಟೆಲ್‌ಗೆ ಸೇರಿದ್ದು."[೩೧] ಈ ಎರಡು ಪ್ರಸಂಗಗಳು ಈ ಸಮಾಜದ ಅಸಮಾನತೆಯ ಚಿತ್ರಣವನ್ನು ದಾಖಲಿಸುತ್ತವೆ. ಭಾರತೀಯ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಅನ್ನಕ್ಕೆ ಯಾವುದೇ ಮಡಿ ಮೈಲಿಗೆ ಇಲ್ಲ ಎಂಬುವುದನ್ನು ಪ್ರತಿಯೊಬ್ಬರು ತಿಳಿದುಕೊಂಡಿದ್ದರು ಸಹ, ಶಾಲೆಯಲ್ಲಿ ಮೇಲ್ಜಾತಿಯ ವಿದ್ಯಾರ್ಥಿಯ ಊಟದ ಡಬ್ಬಿಯನ್ನು ಅಸ್ಪೃಶ್ಯ ವಿದ್ಯಾರ್ಥಿ ಮುಟ್ಟಿದ ಎಂಬ ಕಾರಣಕ್ಕೆ ಬಿಸಾಡಿದ ಅನ್ನ ಹಸಿವಿನಿಂದ ಬಳಲುತ್ತಿದ್ದವನಿಗೆ ಆ ಅನ್ನವನ್ನು ಅವನಿಗೆ ನೀಡಿದ್ದರೆ ಮೃಷ್ಟಾನ್ನವೇ ಆಗುತ್ತಿತ್ತು ಎಂಬ ನಿಲುವನ್ನು ಆತ್ಮಕಥನಕಾರರು

ಕಟ್ಟಿಕೊಡುತ್ತಾರೆ. ಈ ಬಗೆಯ ನಿಲುವು ಕೇವಲ ಇವರ ಅಭಿಪ್ರಾಯ ಮಾತ್ರವಾಗಿರದೇ ಹಸಿವಿನಿಂದ ಬಳಲುವ ಪ್ರತಿಯೊಬ್ಬ ವ್ಯಕ್ತಿಯ ನಿಲುವಾಗಿರುತ್ತದೆ ಎಂಬುದನ್ನು ಅರಿಯಬೇಕಾಗಿದೆ. ಹಾಗೆಯೇ ಮುಂದುವರಿದಂತೆ, 'ಊಟ ಸರ್ಕಾರಿ ಕೆಲಸ ಕಿತ್ಕಂತ್ತು' ಎಂಬ ಅಧ್ಯಾಯ ಏಕಕಾಲದಲ್ಲಿ ಹಸಿವು ಮತ್ತು ಅವಮಾನದ ಅನುಭವಗಳನ್ನು ಬಿಚ್ಚಿಡುತ್ತದೆ. ಇಲ್ಲೆಲ್ಲ ಹಸಿವಿನ ಚಿತ್ರಣಗಳು ಕರುಳನ್ನು ಹಿಂಡುವಂತೆ ಆತ್ಮಕಥನಕಾರರು ದಾಖಲಿಸಿದ್ದಾರೆ.

ಜಿ.ಸಂಜೀವರಾಯರು ಓದಿನ ಹಾದಿಯಲ್ಲಿ ತಮ್ಮ ಬಡತನ ಕಾರಣವಾಗಿ ತಮ್ಮ ಹಸಿವನ್ನು ನೀಗಿಸುತ್ತಿದ್ದ ಅನ್ನಮಾರ್ಗದ ಸನ್ನಿವೇಶವು ವಿಶೇಷತೆಯಿಂದ ಕೂಡಿದೆ ಎಂಬುದನ್ನು ಹೇಳಿದ್ದಾರೆ. ಅವರ ಹಸಿವನ್ನು ನೀಗಿಸುತ್ತಿದ್ದುದ್ದು 'ಇಕ್ಕಿಸ್‌ಕಾ ಊಟ'. ಅಂದರೇ ಉಳಿದ ರಾಗಿ ಮುದ್ದೆಗಳನ್ನು ಸಣ್ಣಸಣ್ಣ ಉಂಡೆ ಮಾಡಿ, ಒಣಗಿಸಿ, ಅವುಗಳನ್ನು ಸ್ಕೂಲಿಗೆ ಹೋಗುವಾಗ ಜೇಬಿಗೆ ಹಾಕಿಕೊಂಡು, ದಾರಿಯಲ್ಲಿ ಕುಟುಂ ಕುಟುಂ ಅಂತ ಕಡೀತಾ ಹಸಿವೆ ನೀಗಿಸಿಕೊಳ್ಳುತ್ತಿದ್ದಂತಹ ಹಟ್ಟಿಯಿಂದ ಶಾಲೆಗೆ ಹೋಗುತ್ತಿದ್ದ ಹುಡುಗರಲ್ಲಿ ಒಬ್ಬರಾಗಿದ್ದ ಸಂಜೀವರಾಯರು ತಮ್ಮ ಬಾಲ್ಯದ ಬಹು ಮುಖ್ಯ ಅನುಭವಗಳೆಲ್ಲ ಆಹಾರ ಅನ್ವೇಷಿಸುವ ಬಗೆಬಗೆಯ ಸಾಹಸಗಳಿಂದ ಕೂಡಿದ್ದ ಬಗೆಯನ್ನು ಮಂಡಿಸಿದ್ದಾರೆ: "ಹಟ್ಟಿಯಲ್ಲಿ ಜಾತ್ರೆಯ ಕೆಲ್ಸಕ್ಕೆ ಉಂಡ್ ಪಾಲಿನ ಎಂಟು ಜನ ನಿಯೋಜನೆಗೊಳ್ತಿದ್ರು! ದೇವಸ್ಥಾನದ ಕಸ ಗುಡಿಸುವುದು, ಕೊಪ್ಪಲಿಗೆ ಬಂದವ್ರಿಗೆ ಸೌದೆ ಒದಗಿಸೋದು, ಚಪ್ಪರ ಹಾಕೋದು ಮುಂತಾದ ಕೆಲಸಗಳನ್ನು ಚಾಚೂ ತಪ್ಪದೆ ಮಾಡ್ತಾ ಇದ್ರು! ಕೊಪ್ಪಲುಗಳು ಪ್ರಾರಂಭವಾದ್ರೆ ಹಟ್ಟಿಯ ಒಲೆಗಳಿಗೆಲ್ಲಾ ಒಂದ್ವಾರ ಕಾಲ ಬಿಡುವು. ಬೆಳಗ್ಗೆಯಿಂದ ಸಾಯಂಕಾಲದವರೆಗೂ ಉಣ್ಣುವ ಕೆಲಸ ನಡೆದ್ಹೋಗ್ತಿತ್ತು. ಸಾಯಂಕಾಲ ಹಿಟ್ಟಿನ ತಟ್ಟೆಗಳು ತಗೊಂದು ಇಕ್ಕಿಸ್‌ಕಾ ಊಟ ತೆಗೆದುಕೊಂಡು ಬರುವುದು ಬರಾಕೆ ಸಾಲಾಗೆ ಕೂರ್ತಾ ಇದ್ವಿ. ಜಾತ್ರೆಯಾದ ಎರಡನೇ ದಿನ ಗುಬ್ಬಿನೋರು ಕೊಪ್ಪಲು ವಿಶೇಷವಾಗಿ ಪ್ರತಿ ಮನೆಗೂ ಇಕ್ಕುತ್ತಿದ್ದ ಇಪ್ಪತ್ತು ಇಪ್ಪತ್ತು ಮುದ್ದೆ, ಅವರೆಕಾಳು ಹುಳಿ ಎಸ್ರಲ್ಲಿ ಹಸಿವಿಗೆ ಸ್ವರ್ಗವನ್ನೇ ಕಾಣ್ತಾ ಇದ್ವಿ. ಬೆಳಿಗ್ಗೆ ಉಳಿದ ಮುದ್ದೆಗಳ ಸಣ್ಣ್ ಸಣ್ಣ್ ಪಿಡ್ಸೆ ಮಾಡಿ ಬಿಸಿಲಿಗೆ ಹದವಾಗಿ ಒಣಗ್ಸಿಕೊಳ್ತಾ ಇದ್ವಿ. ನಾನು ಸ್ಕೂಲಿಗೋಗೋವಾಗ ಜೇಬ್ನಲ್ಲಿ ನಾಲ್ಕೈದು ಪಿಡ್ಸೆಗಳ (ಉಂಡೆಗಳು) ಹಾಕ್ಕೊಂಡು ಕಟುಂ... ಕುಟುಂ... ಅಂತ ಕಡ್‌ಕೊಂಡು ಹೋಗ್ತಾ ಇದ್ರೆ ಹಸಿವೆ ನೀಗ್ತಾ ಇತ್ತು. ಜಾತ್ರೆ, ಮದುವೆ, ತಿಥಿ ಮುಂತಾದ ಸಂದರ್ಭಗಳಲ್ಲಿ ಇಕ್ಕಿಸಿಕೊಂಡು ಬರುವ ಕೂಳಿನಿಂದ ಹಸಿವನ್ನು ನೀಗಿಸಿಕೊಳ್ಳುತ್ತಿದ್ದೆವು. ಹಸಿವನ್ನು ನೀಗಿಸಿಕೊಳ್ಳುವುದಕ್ಕೆ ಮಾಂಸದ ಆಹಾರ ಇನ್ನೊಂದು ಮುಖ. ಆಹಾರವನ್ನು ಹುಡುಕುವ ಪ್ರಯತ್ನ ಮತ್ತು ಹಲವಾರು ರೀತಿ, ಕೊಡೆಮ (ತೆಂಗಿನ ನಿಂದನೆಯರ ಮೀನು

ಹಿಡಿಯುವ ಸಾಧನ) ಹಾಕಿ ಹಳ್ಳ, ಕೆರೆ ಕಟ್ಟೆಗಳಲ್ಲಿ ಮೀನು ಹಿಡಿಯುವುದು, ಕಂಕೆಗಳನ್ನು (ತೊಗರಿ ಕಡ್ಡಿಗಳು) ಹಾಕಿ ಸೀಗಡಿ ಹಿಡಿಯುವುದು ಇಂಥ ಪ್ರಯತ್ನಗಳು ಬಾಲ್ಯದಲ್ಲಿ ಹಾಸುಹೊಕ್ಕಾಗಿವೆ."[೩೨] ಹೀಗೆ, ದಲಿತ ಆತ್ಮಕಥೆಗಳಲ್ಲಿ ದಲಿತರ ಹಸಿವು, ಅವಮಾನಗಳು ಪರಂಪರೆಯನ್ನು ಭಿನ್ನವಾಗಿ ನೋಡುವುದನ್ನು ಕಲಿಸಿವೆ. ಹಸಿವನ್ನು ಕುರಿತ ಚರ್ಚೆಗಳು ದಲಿತರ ಬದುಕಿನ ನಿರಂತರ ಹುಡುಕಾಟವಾಗಿವೆ. ಹಸಿವನ್ನು ಹೋಗಲಾಡಿಸಿಕೊಳ್ಳಲು ಪಟ್ಟ ಪಾಡೇ ದೊಡ್ಡ ಕಥಾನಕವಾಗಿ ಇಲ್ಲಿ ಬೆಳೆಯುತ್ತದೆ.

ಊರಿನಲ್ಲಿ ಹೀಗೆ ಹಬ್ಬ ಮುಗಿದ ನಂತರ ದಲಿತರ ಹಸಿವು ನೀಗಿಸುತ್ತಿದ್ದ ಪ್ರಸಂಗವನ್ನು ನೇತ್ರಾವತಿ ಅವರು ನಿರೂಪಿಸುತ್ತ, "ಹಲಗೆ ಹೊಡೆಯುತ್ತಿದ್ದ ಹೊಲೆಯರ ಐದಾರು ಮನೆಯವರೆಲ್ಲ ಸೇರಿ ಊರಿನ ಪ್ರತಿಯೊಂದು ಒಕ್ಕಲಿಗರ ಮನೆಗೂ ಹೋಗಿ ಊಟ ಹಾಕಿಸಿಕೊಂಡು ಬರ್ತಾ ಇದ್ವಿ. ಕೆಲವರು ಕಾಸು ಸಹ ಕೊಡ್ತಾ ಇದ್ದರು. ಯಾವಾಗಲೂ ಅಜ್ಜಿ ಜೊತೆ ನಾನೂ ಹೋಗ್ತಾ ಇದ್ದೆ. ಬೇರೆ-ಬೇರೆ ಮನೆಗಳಲ್ಲಿ ಬೇರೆ-ಬೇರೆ ತಿಂಡಿ ಹಾಕ್ತಾ ಇದ್ದಿದ್ರಿಂದ ತುಂಬಾ ಖುಷಿ ಅನ್ನಿಸ್ತಾ ಇತ್ತು. ಹಬ್ಬ ಮುಗಿದ ಎರಡು ದಿವಸ ಆದರೂ ಮನೆಯಲ್ಲಿ ಅಡುಗೇನೇ ಮಾಡ್ತಾ ಇರಲಿಲ್ಲ. ಅದನ್ನೇ ತಿಂತಾ ಇದ್ವಿ. ಊರಲ್ಲಿ ನಾಯಿ ಸತ್ತೋದರೆ ತಾತ ಅದಕ್ಕೆ ಹಗ್ಗ ಕಟ್ಟಿ ಎಳೆದುಕೊಂಡೋಗಿ ಊರಿನ ಆಚೆ ಹಾಕಿ ಬರ್ತಾ ಇದ್ರು. ನಾಯಿ ಸಾಕಿದ ಮನೆಯವರು ಉಪ್ಪು, ಹುಣಸೆಹಣ್ಣು, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಸ್ವಲ್ಪ ಸಾಸಿವೆ ಕೊಡ್ತಾ ಇದ್ರು. ಇದು ಶಾಸ್ತ್ರ. ಊರಲ್ಲಿ ಯಾರದೇ ನಾಯಿ ಸತ್ತೋದಾಗಲೂ ತಾತ ಎಳೆದು ಹಾಕಿದರೆ, ಶಾಸ್ತ್ರಕ್ಕೆ ನಾನು ಹೋಗಿ ತರುತ್ತಿದ್ದೆ. ಊರಲ್ಲಿ ಯಾರಾದರೂ ಸತ್ತುಹೋದರೆ ತಾತ ಮತ್ತು ನಮ್ಮ ಜಾತಿಯವರೇ ಆದ ಇತರರೂ ಗುಣಿ ತೋಡಲು ಹೋಗುತ್ತಿದ್ದರು. ಗುಣಿ ತೋಡಿದವರಿಗೆ ಭತ್ತ ಬೆರೆಸಿದ ರಾಗಿ, ಕಾಸು ಕೊಡ್ತಾ ಇದ್ರು. ಇದಕ್ಕೆ ಅಕ್ಕಿ ತಗೊಂಬರ್ತಾ ಇದ್ರು. ತಾತ ಗುಣಿ ತೋಡಿ ಬರುವಷ್ಟರಲ್ಲಿ ಮನೆಯನ್ನೆಲ್ಲಾ ಶುಚಿಮಾಡಿ ಹೊಸ ನೀರು ತಂದು ಹೊಸ ಅಡಿಗೆ ಮಾಡಬೇಕಾಗಿತ್ತು. ಹೆಣ ಹೂತ ಮೇಲೆಯೇ ತಾತನ ಊಟ."[೩೩] ಬಡತನದ ಕಾರಣ ದಲಿತ ಜಗತ್ತಿನ ಇಂಥ ಹಸಿವಿನ ಚಿತ್ರಣಗಳು ಜಾತಿಯೊಂದಿಗೂ ಅವರು ಮಾಡುವ ಕಾಯಕಗಳಿಗೂ ತಳುಕು ಹಾಕಿಕೊಂಡಿರುವುದನ್ನು ಕಾಣುತ್ತೇವೆ.

ಚಿಂತಕರಾದ ಬಂಜಗೆರೆ ಜಯಪ್ರಕಾಶ್ ಬಡತನದ ಇಂಥ ಪ್ರಸಂಗಗಳನ್ನು ಕುರಿತು ವಿಶ್ಲೇಷಿಸುತ್ತ, ಈ ಅನುಭವ ಸಾಮಗ್ರಿಯನ್ನು ಆತ್ಮನಕಥನಕಾರರು ಮತ್ತಷ್ಟು ವಿಸ್ತಾರವಾಗಿ ಹೇಳಬಹುದಾಗಿತ್ತು ಎಂದಿದ್ದಾರೆ. ಮುಂದುವರೆದು, "ಭಾರತವೆಂಬ ಈ 'ಶ್ರೀಮಂತ ದೇಶ'ದಲ್ಲಿ

ಹಲವು ನೂರು ವರ್ಷಗಳಿಂದ ಎಷ್ಟೊಂದು ದಲಿತ ಸಮುದಾಯಗಳು ಇಂತಹ ಆಹಾರ ಸಂಪಾದನೆಯ ಮಹಾನ್ ಸಾಹಸದಲ್ಲಿ ನಿರತರಾಗಬೇಕಾದ, ಕೆಲವೊಮ್ಮೆ ಅದರಲ್ಲಿ ಯಶಸ್ವಿಯಾಗುವುದು, ಕೆಲವೊಮ್ಮೆ ಅದೇ ಸಾಹಸದ ಪ್ರಕರಣದಲ್ಲಿ ಸಿಕ್ಕಿಬಿದ್ದು ಕಳ್ಳರ ಹಾಗೆ ಮೈ ಮುರಿದು ಒದೆ ತಿನ್ನುವುದು ಎಂಬಂತಹ ಪರಿಸ್ಥಿತಿಯಲ್ಲಿ ಉಳಿದುಕೊಂಡಿದ್ದರು ಎಂಬುದನ್ನು ಸಮಾಜವು ಅರಿತುಕೊಳ್ಳಬೇಕಾಗುತ್ತದೆ. ಹೊತ್ತಿನ ಊಟಕ್ಕಾಗಿ ಹೀಗೆ ಮದುವೆ ಮುಂಜಿಗಳ ಸಮಯದಲ್ಲಿ ತಟ್ಟೆ, ತಪ್ಪಲೆಗಳನ್ನು ಹಿಡಿದು ಅಂಗಳದಲ್ಲಿ ಸಾಲಾಗಿ ಕೂತಿರುತ್ತಿದ್ದ ದಿನಗಳು ಈಗ ಬಹುಶಃ ಬಹಳ ಕಡೆ ಉಳಿದಕೊಂಡಿಲ್ಲವೇನೋ. ಆದರೆ ಕೇವಲ ಹತ್ತಿಪ್ಪತ್ತು ವರ್ಷಗಳ ಹಿಂದೆ ಇಂತಹ ಧಾರುಣ ಹಸಿವೆಯಲ್ಲಿ ದಲಿತ ಕೇರಿಗಳು ಬೇಯುತ್ತಿದ್ದವು ಹಾಗೂ ಅದಕ್ಕೆ ಕಾರಣ ಅವರು ಸೋಂಬೇರಿಗಳಾಗಿದ್ದುದಲ್ಲ, ಬದಲಾಗಿ ಅವರ ದುಡಿಮೆಯ ಪ್ರತಿಫಲ ಅವರಿಗೆ ದಕ್ಕದೇ ಇರುವಂತಹ ವ್ಯವಸ್ಥೆ ಇತ್ತು ಎಂಬುದನ್ನು ಇಂತಹ ವ್ಯಕ್ತಿಗತ ಅನುಭವ ಕಥನಗಳ ಮೂಲಕ ಮತ್ತೆಮತ್ತೆ ನೋಡಿದಾಗ ಮಾತ್ರ ತಿಂದುಂಡು ಚೆಲ್ಲುವವರ ಮನಸ್ಸಿನ ತಾವು ಮಾಡುತ್ತಿರುವ ಪಾತಕ ಎಂತಹುದೆಂಬುದು ಅರ್ಥವಾಗುತ್ತದೆ.”[೩೪] ಎಂದಿರುವುದು ಈ ಸಾಮಾಜಿಕ ಸಂದರ್ಭಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಒಂದು ಕಾಲಕ್ಕೆ ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ವೇಳೆ ಗೋಧಿ ಉಪ್ಪಿಟ್ಟು ಕೊಡಲು ಆರಂಭಿಸಿದ್ದರು. ಅದು ಶಾಲೆಯ ದಲಿತಮಕ್ಕಳಿಗೆ ಎಲ್ಲಿಲ್ಲದ ಆನಂದದ ಸಂಗತಿ. ಮಧ್ಯಾಹ್ನದ ಖಾಲಿ ಹೊಟ್ಟೆಗೆ ಉಪ್ಪಿಟ್ಟು ಹೊಸ ಸುಖ ನೀಡತೊಡಗಿತು. ಹಲವಾರು ಬೇರೆ ಜನಾಂಗದ ಮಕ್ಕಳು ಈ ಉಪ್ಪಿಟ್ಟನ್ನು ತಿನ್ನುತ್ತಿರಲಿಲ್ಲ. ಅವರು ದಲಿತರ ಚೀಲಗಳಿಗೆ ಸುರಿದು ಮನೆಗೆ ಉಣ್ಣಲು ಹೋಗುತ್ತಿದ್ದರು. ಇಂಥ ಉಪ್ಪಿಟ್ಟಿನಿಂದ ಹಸಿವನ್ನು ನೀಗಿಸಿಕೊಳ್ಳುತ್ತಿದ್ದ ಎನ್.ಕೆ.ಹನುಮಂತಯ್ಯ ಅವರ ಬಡತನದ ಅನುಭವ ಚಿತ್ರಣವನ್ನು ಹೀಗೆ ಕಟ್ಟಿಕೊಡುತ್ತಾರೆ. “ಮೂರ್‍ನಾಲ್ಕು ಹುಡುಗರು ಕೊಟ್ಟ ಉಪ್ಪಿಟ್ಟನ್ನು ನಾನೊಬ್ಬನೇ ಖಾಲಿ ಮಾಡುತ್ತಿದ್ದೆ. ಹಟ್ಟಿಯಲ್ಲಿ ಸದಾ ಕಾಡುತ್ತಿದ್ದ ರೋಗ ಎಂದರೆ ಹಸಿವು. ಕೆಲವೊಮ್ಮೆ ಜಡಿ ಮಳೆ ಬೀಳುತ್ತಿತ್ತು. ಆಗ ಕೂಲಿಗೆ ಹೋಗದೆ ಜನ ಮನೆಯಲ್ಲಿಯೇ ಉಳಿಯುತ್ತಿದ್ದರು. ತಿನ್ನಲು ಏನೂ ಇರುತ್ತಿರಲಿಲ್ಲ. ಹಟ್ಟಿಯ ಜನ ಇಂಥ ಹೊತ್ತಿನಲ್ಲಿ ಸುರಿಯುವ ಮಳೆಗೆ ಹರಕು ಚಪ್ಪಲಿ ಎಸೆಯುವ ಹಾಗೂ ಕ್ಯಾಕರಿಸಿ ಉಗಿಯುವ ಕಾರ್ಯ ಮಾಡುತ್ತಿದ್ದರು. ಮಳೆ ನಿಂತರೆ ಕೂಳಾದರೂ ಸಿಗುತ್ತದೆ ಎಂದು. ತೆಂಗಿನ ತೋಟ ಹೊಲಗದ್ದೆ ಇರುವ ಜನರಿಗೆ ಮಳೆ ಸಂತೋಷ ತಂದರೆ ಕೂಲಿಯ ಜನರಿಗೆ ಮಳೆ ಕಣ್ಣೀರಾಗಿ ಕಾಡುತ್ತಿತ್ತು. ಎಷ್ಟೋ ದಿನ ಉಪವಾಸದಿಂದ ಬಳಲುತ್ತಿದ್ದೆವು. ಹಸಿವು ತಡೆಯಲಾರದೆ

ಊರೊಳಗಿನ ಸಾಹುಕಾರರ ಬಳಿ ಐದಾರು ಸೇರು ರಾಗಿಯನ್ನು ಸಾಲ ತಂದು ಬೀಸಿ ತಿನ್ನಬೇಕಾಗಿತ್ತು. ಹಾದಿಯಲ್ಲಿ ನಡೆಯುತ್ತಿದ್ದಾಗ ಯಾರೋ ಬಿಸಾಕಿದ ಬಾಳೆ ಹಣ್ಣಿನ ಸಿಪ್ಪೆಗಳನ್ನೆಲ್ಲಾ ಆಯ್ದು ನುಂಗಿ ಆನಂದಿಸಿದ್ದೇನೆ. ಸಿಪ್ಪೆಯನ್ನು ಬಿಸಾಡಿ ಹೋದ ಕಾಣದ ಮುಖಗಳ ಬಗ್ಗೆ ಈಗಲೂ ನಾನು ಕೃತಜ್ಞನಾಗಿದ್ದೇನೆ. ಎಲ್ಲಾದರೂ ಮದುವೆಯ ಸುದ್ದಿ ತಿಳಿದರೆ ಸಾಕು ಬೀಳಿಗೆ ರಣಹದ್ದುಗಳು ಹಾರುವಂತೆ ಓಡುತ್ತಿದ್ದೆವು. ಮೆರಣಿಗೆಯಲ್ಲಿ ಭಯಂಕರವಾಗಿ ಕುಣಿಯುತ್ತಿದ್ದೆವು. ಎಲ್ಲರ ಊಟ ಮುಗಿದು ಕಡೆಯಲ್ಲಿ ಮಿಕ್ಕಿದ್ದನ್ನು ಹಟ್ಟಿಯ ಜನರಿಗೆ ಇಕ್ಕುತ್ತಿದ್ದರು. ಅಪಾರವಾಗಿ ಉಂಡು ನೆಮ್ಮದಿಯಾಗಿ ನಿದ್ರಿಸುತ್ತಿದ್ದೆವು. ಎಲ್ಲಕ್ಕಿಂತ ವಿಶೇಷವಾಗಿ ಹಟ್ಟಿಯ ಜನರನ್ನು ಆಕರ್ಷಿಸುತ್ತಿದ್ದುದ್ದೆಂದರೆ ಬೀಳು. ಬೀಳು ಎಂದರೆ ಸತ್ತ ದನ, ಎಮ್ಮೆ ಇತ್ಯಾದಿಗಳು. ಬಾಡನ್ನು ಮಂಕರಿಯಲ್ಲಿ ತಂದು ಸಣ್ಣ ಸಣ್ಣ ಹುರಿಯಂತೆ ಸಿಗಿದು ಹಾಕುತ್ತಿದ್ದರು. ಜಾಲಿಯ ಮುಳ್ಳಿನ ಮೇಲೆ ಹಾಕಿ ಒಣಗಿಸುತ್ತಿದ್ದರು. ಒಣ ಬಾಡಿನ ಸಾರನ್ನು ನಾಲ್ಕಾರು ದಿನ ಉಂಡು ನಲಿಯುತ್ತಿದ್ದರು."[೩೫] ಹೀಗೆ ದಲಿತರ ಸಾಮಾಜಿಕ ಸ್ಥಾನಮಾನ ಕಾರಣದಿಂದಾಗಿ ಬಡತನಕ್ಕೆ ಈಡಾಗಿ, ಬಡತನದಿಂದ ಹಸಿವಿನ ತೀವ್ರತಲ್ಲಣಕ್ಕೆ ಒಳಗಾಗಿ ಕಂಡುಕೊಂಡ ಹಸಿವು ನಿವಾರಣೆಯ ಮಾರ್ಗಗಳು ವೈವಿಧ್ಯಮಯವಾಗಿವೆ. ಇದು ಹನುಮಂತಯ್ಯಅವರ ಬದುಕಿನ ಚಿತ್ರಣವೆಂದು ಭಾವಿಸಿಕೊಂಡರು ಸಹ, ಹನುಮಂತಯ್ಯನಂತಹ ಹಲವಾರು ದಲಿತ ವ್ಯಕ್ತಿಗಳ ಬದುಕಿನ ಹಸಿವು ಮತ್ತು ಬಡತನದ ಚಿತ್ರಣವೇ ಆಗಿರುತ್ತದೆ. ಇಲ್ಲಿ ನೊಂದವರ ನೋವನ್ನು ನೋಯದವರೂ ಅರಿಯಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ದಲಿತ ಆತ್ಮಕಥನಕಾರರು ತಮ್ಮ ಸಂಕಟಗಳನ್ನು ಯಾವ ಮುಲಾಜುಗಳೂ ಇಲ್ಲದಂತೆ ನಿರ್ಭಿಡೆಯಿಂದ ತಮ್ಮ ಆತ್ಮಕಥನದಲ್ಲಿ ನಿವೇದಿಸಿಕೊಂಡಿದ್ದಾರೆ.

ಬಡತನವನ್ನು ಕುರಿತು ಡಿ.ಆರ್.ನಾಗರಾಜ ಅವರು ಇದು 'ಬಡವರ ಯುಗ ಇದು' ಎಂದು ಬರೆಯ ಹೊರಡುತ್ತಾರೆ. ಆದರೆ ಆ ವಾಕ್ಯ ಬರೆಯಲಾಗಲಿಲ್ಲ ಎನ್ನುತ್ತ, ಬಡವರ ಯುಗಕ್ಕೂ, ಬಡತನದ ಯುಗಕ್ಕೂ ಅನೇಕ ವ್ಯತ್ಯಾಸಗಳಿವೆ ಎಂಬುದರ ಕಾರ್ಯಕಾರಣಗಳನ್ನು ಪ್ರಬುದ್ಧವಾಗಿ ಚಿಂತಿಸಿದ್ದಾರೆ. "ಬಡವರ ದಂಗೆಕೋರತನವನ್ನು, ಕ್ರಾಂತಿಕಾರಿಕತೆಯನ್ನು ಅನೇಕ ರಾಜಕೀಯ ಸಿದ್ಧಾಂತಗಳ ಮೂಲಕ ಈ ಯುಗ ಆರಾಧಿಸಿತು, ಸಮಾಜವಾದ ಮತ್ತು ಕಮ್ಯೂನಿಸಂ ಬಡವರ ಆಸೆಗಳಿಗೆ ಕೊಟ್ಟ ಹೆಸರು ಎಂದರೂ ನಡೆದೀತು. ಆದರೆ, ಇದೇ ಯುಗ, ಬಡವರ ಬಗ್ಗೆ ಧ್ಯಾನಿಸಿದಷ್ಟೂ ಬಡವರನ್ನು ಕುಗ್ಗಿಸುತ್ತಾ ಬಂತು. ಹೊಟ್ಟೆಯನ್ನು ನರನ ಜೀವಿತಕ್ಕೆ ಕೇಂದ್ರವಾಗಿಸಿದಷ್ಟೂ ಬಡವರ ವ್ಯಕ್ತಿತ್ವದ ಉಳಿದ ಆಯಾಮಗಳು ಕುಗ್ಗುತ್ತಾ ಹೋದವು. ಈ ಯುಗದಲ್ಲಿ ಮಾನವ ಅನ್ನದಿಂದ ಮಾತ್ರ ಬದುಕುವುದಿಲ್ಲ ಎಂಬ ಅಪ್ತವಾಕ್ಯಕ್ಕೆ ಪ್ರತಿಯಾಗಿ

ಅನ್ನವಿಲ್ಲದೆ ಬದುಕುವ ಮಾನವ ಇನ್ನೂ ಹುಟ್ಟಿಲ್ಲ ಎಂಬ ಇನ್ನೊಂದು ಆಪ್ತವಾಕ್ಯ ಸೃಷ್ಟಿಯಾಯಿತು. ಇವೆರಡನ್ನೂ ಪೂರ್ಣ ವಿರೋಧಗಳಾಗಿ ಕಾಣುವ ಅತಿರೇಕಕ್ಕೇ ಈ ಯುಗ ತಲುಪಬಾರದಿತ್ತು. ಬಡವನನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿಕೋನಗಳಲ್ಲಿ ತೀವ್ರವಾಗಿ ವ್ಯಾಖ್ಯಾನಿಸಿದಷ್ಟೂ ಆತನ ಪ್ರತಿಭಾತ್ಮಕ ಅಸ್ತಿತ್ವ ಸೀಮಿತವಾಗುತ್ತಾ ಬಂತು."[೩೬] ಎಂದು ತರ್ಕಿಸುತ್ತಾರೆ. ಇದೆಲ್ಲದರ ನಡುವೆಯೂ, ಬಡತನ, ಹಸಿವು ದಲಿತರನ್ನು ಇಂದಿಗೂ ಕಾಡುತ್ತಿರುವ ಭೀಕರ ಪೆಡಂಭೂತಗಳಾಗಿವೆ ಎಂಬುದನ್ನು ಯಾರೂ ಅಲ್ಲಗಳೆಯಲಾಗದು. ಇವು ದಲಿತರನ್ನು ಮತ್ತಷ್ಟೂ ಶೋಷಿತರನ್ನಾಗಿ ಮಾಡುವ ಮುಖ್ಯ ಸಾಧನಗಳಾಗಿ ಬಳಕೆಯಾಗುತ್ತಿರುವುದು ವಿಪರ್ಯಾಸ. ಅಸಮಾನತೆಯ ಆಧಾರದ ಮೇಲೆ ರೂಪಿತವಾಗಿರುವ ಈ ಸಾಮಾಜಿಕ ವ್ಯವಸ್ಥೆಯೊಳಗೆ ಬಹುಸಂಖ್ಯಾತ ದುರ್ಬಲ ವರ್ಗದವರ ಬದುಕು ಕೆಲವೇ ಮೂಲಭೂತವಾದಿಗಳ ಕಪಿಮುಷ್ಟಿಯಲ್ಲಿ ಸಿಕ್ಕಿ ಜರ್ಝರಿತವಾಗಿದೆ. ಇಂದಿಗೂ ಕೆಳವರ್ಗದವರ ಬದುಕನ್ನು ಮೇಲು ವರ್ಗದವರು ನಿಯಂತ್ರಿಸುತ್ತಿದ್ದಾರೆ. ಸಂಪತ್ತು ಹಾಗೂ ಭೂ ಒಡೆತನದ ಹಂಚಿಕೆಯಲ್ಲಿನ ಅಸಮಾನತೆ ಇದಕ್ಕೆ ಮೂಲಭೂತ ಕಾರಣ. ಸಂಪತ್ತಿನ ಕೇಂದ್ರೀಕರಣದಿಂದಾಗಿ ಶೋಷಕ ಮತ್ತಷ್ಟು ಬಲಿಷ್ಠನಾಗುತ್ತ, ಶೋಷಿತ ಇನ್ನಷ್ಟು ದುರ್ಬಲನಾಗುತ್ತ ನೆಲದಲ್ಲಿ ಹೂತು ಹೋಗಿದ್ದಾನೆ. ದಲಿತ ವಿಮರ್ಶಕರಾದ ಬಿ.ಎಂ ಪುಟ್ಟಯ್ಯ ನವರು ಬಡತನ ಮತ್ತು ಹಸಿವಿಗೆ ಸಂಬಂಧಿಸಿದಂತೆ ಈ ರೀತಿ ಹೇಳುತ್ತಾರೆ: "ಬಡತನ ಮತ್ತು ಹಸಿವು ಎಂಬುವುದು ಒಂದು ಜೀವನ ಕ್ರಮವೂ ಹೌದು; ಅದೇ ಕಾಲಕ್ಕೆ ಅದು ಒಂದು ಅನುಭವವೂ ಹೌದು."೩೭ ಈ ಬಗೆಯ ಬಡತನ ಮತ್ತು ಹಸಿವಿನ ನಿಲುವುಗಳು ಎಲ್ಲಾ ದಲಿತ ಆತ್ಮಕಥೆಗಳಲ್ಲಿಯು ದಾಖಲಾಗಿದೆ. ಈ ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಈ ನೆಲೆಯಲ್ಲಿ ತಮ್ಮತನವನ್ನು ಮತ್ತಷ್ಟು ಚಿಂತನೆಗೆ ಒಳಗು ಮಾಡುವಂತೆ ದಲಿತ ಆತ್ಮಕಥೆಗಳು ಎಚ್ಚರಿಕೆಯನ್ನುಂಟು ಮಾಡುತ್ತವೆ. ಬಡತನ ಮತ್ತು ಹಸಿವು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇರುತ್ತದೆ. ಆದರೆ ದಲಿತ ವ್ಯಕ್ತಿಯು ಅನುಭವಿಸುವ ಬಡತನ ಹಾಗೂ ಹಸಿವು ಬಹಳ ಭಿನ್ನವಾಗಿವೆ ಎಂಬುದನ್ನು ಪ್ರತಿಯೊಬ್ಬ ದಲಿತ ಆತ್ಮಕಥನಕಾರರು ಕಟ್ಟಿಕೊಡುತ್ತಾರೆ. ಇವರು ಅನುಭವಿಸಿದ ಹಸಿವು ಮತ್ತು ಬಡತನವನ್ನು ಪರಿಹರಿಸಿಕೊಳ್ಳಲು ಪಟ್ಟ ಹಾಡು–ಪಾಡುವಿನ ಯಾತನೆಯನ್ನು ಪ್ರತಿಯೊಬ್ಬ ದಲಿತ ಆತ್ಮಕಥನಕಾರರು ಭಿನ್ನ ಭಿನ್ನವಾಗಿ ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

೩.೩. ಕಾಯಕಗಳು ಮತ್ತು ಜೀತಗಾರಿಕೆ

ದಲಿತರು ಸದಾಕ್ರಿಯಾಶೀಲರು. ಇವರ ಕ್ರಿಯಾಶೀಲತೆಯ ಹರವು ಬಹುಮುಖಿಯಾದದ್ದು. ಬದುಕಿನ ಬಂಡಿಯನ್ನು ಸಾಗಿಸುವ ನೆಲೆಯಲ್ಲಿ ಹಲವಾರು ರೀತಿಯ ಬಹುಮುಖೀ

ಕಾಯಕಗಳನ್ನು ದಲಿತರು ಇಂದಿಗೂ ಮಾಡುತ್ತಿದ್ದಾರೆ. ದಲಿತ ಆತ್ಮಚರಿತ್ರಕಾರರು ತಮ್ಮ ಆತ್ಮಚರಿತ್ರೆಗಳಲ್ಲಿ ದಲಿತ ಸಮುದಾಯದ ವೈವಿಧ್ಯಮಯ ಕಾಯಕಗಳನ್ನು ಕುರಿತು ಅಪಾರ ಆಸ್ಥೆ ಹಾಗೂ ಆತಂಕ ಎರಡೂ ನೆಲೆಯಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣುತ್ತೇವೆ. ಬಡತನ ಹಾಗೂ ಸಾಂಸ್ಕೃತಿಕ ಸಿರಿತನ ಮೂಲದಿಂದ ಒಡಮೂಡಿರುವ ವೈವಿಧ್ಯಮಯ ಕಾಯಕಗಳನ್ನು ನಿರೂಪಿಸಿದ್ದಾರೆ.

ಆತ್ಮಕಥನಕಾರರು ದಾಖಲಿಸಿರುವಂತೆ ದಲಿತರ ವೈವಿಧ್ಯಮಯ ಕಾಯಕಗಳು:

ತಮಟೆ ಬಡಿಯುವುದು, ಚಪ್ಪಲಿ ಹೊಲಿಯುವುದು, ದನ ಮೇಯಿಸುವುದು, ಹಂದಿ ಸಾಕುವುದು, ಕಲ್ಲು ಒಡೆಯುವುದು, ಮಣ್ಣು ಹೊರುವುದು, ಸತ್ತದನ ಹೊರುವುದು, ಕೂಲಿ ಕೆಲಸ ಮಾಡುವುದು, ಭೂಮಿ ಇದ್ದರೆ ವ್ಯವಸಾಯ ಮಾಡುವುದು, ಕಪಿಲೆ ಬಾನಿಗಳನ್ನು ಹೊಲೆಯುವುದು, ಶಾಲೆಯನ್ನು ಶುಚಿ ಮಾಡುವುದು, ಸೌದೆ ಒಡೆಯುವುದು, ಚಿತ್ರ ರಚನಾ ಕಾಯಕ, ಬಟ್ಟೆ ನೇಯುವುದು, ಭತ್ತದ ಒಕ್ಕಣೆ ಮಾಡುವುದು, ಬಡಗಿ ಕೆಲಸ ಮಾಡುವುದು, ಜಾತ್ರೆ, ಸಿನಿಮಾ, ಸ್ಥಳಗಳಲ್ಲಿ ಕಸ ಗುಡಿಸುವುದು, ಡ್ಯಾಂ ಕಾರ್ಯದಲ್ಲಿ ಮರಳು, ಮಣ್ಣು, ಇಟ್ಟಿಗೆ, ಕಾಂಕ್ರೀಟ್ ಹೊರುವುದು, ರಸ್ತೆಗೆ ಟಾರ್ ಹಾಕುವುದು, ಸತ್ತದನಗಳ ಕೊಂಬಿನಿಂದ ಗೊಂಬೆಗಳನ್ನು ಕೆತ್ತನೆ ಮಾಡುವುದು, ಎಣ್ಣೆ ವ್ಯಾಪಾರ ಮಾಡುವುದು, ಚರ್ಮದ ಮಂಡಿ ವ್ಯಾಪಾರ, ಮೀನು ಹಿಡಿಯುವುದು, ಊರನ್ನು ಶುಚಿ ಮಾಡುವ ತೋಟಿಗ ಕಾಯಕ, ಟೀ ಮಾರುವುದು, ಸತ್ತವರನ್ನು ಹೂಳಲು ಗುಣಿ ತೋಡುವುದು, ಜನಪದ ವೈದ್ಯ ಕಾಯಕ, ಭಿಕ್ಷಾಟನೆ ಮಾಡುವುದು. ಹೀಗೆ ಮರಾಠಿ ಮತ್ತು ಕನ್ನಡ ಆತ್ಮಕಥೆಗಳಲ್ಲಿನ ದಲಿತರ ಜೀವನ ಯಾತ್ರೆಯಲ್ಲಿ ಬಾಲ್ಯದಿಂದಲೇ ಬಹುಕಾಯಕಗಳ ಅರಿವು ಹೊಸ ತಲೆಮಾರಿಗೆ ದಕ್ಕುತ್ತಾ ಬಂದಿದೆ. ಇದನ್ನು ದಲಿತ ಆತ್ಮಕಥನಕಾರರು ತಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಅನುಭವಗಳಿಂದ ಅರ್ಥವತ್ತಾಗಿ ನಿರೂಪಿಸಿದ್ದಾರೆ. ಓದಿದ ನಂತರ ಗಳಿಸಿದ ಸರ್ಕಾರಿ ಹುದ್ದೆಗಳು ಮತ್ತು ಸೇವೆಗಳನ್ನು ಹೊರತಾಗಿಸಿ ಈ ಮೇಲ್ಕಂಡ ಮುಖ್ಯವಾದ ಬಹುಬಗೆಯ ಕಾಯಕಗಳನ್ನು ಮಾತ್ರ ಪಟ್ಟಿ ಮಾಡಲಾಗಿದೆ. ಉಳಿದಂತೆ ಅನೇಕ ಕಾಯಕಗಳನ್ನು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಮಾಡುವುದನ್ನು ಆತ್ಮಕಥನಕಾರರು ಮರೆತಿಲ್ಲ. ಜೀತಗಾರಿಕೆಯೊಂದಿಗೆ ದಲಿತರು ಮಾಡುವ ವೈವಿಧ್ಯಮಯ ಕಾಯಕಗಳ ನೆಲೆ-ಬೆಲೆಗಳ ಮಹತ್ವವನ್ನು ವಿವೇಚನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

ಸಿದ್ಧಲಿಂಗಯ್ಯ ಅವರು ತಮ್ಮ ಬಾಲ್ಯದಲ್ಲಿ ಕಂಡ ಜೀತಗಾರಿಕೆಯ ಚಿತ್ರಣ ಹೃದಯ ಮತ್ತು ಮನಸ್ಸುಗಳಿಗೆ ತಟ್ಟವಂಥದ್ದು. "ನಮ್ಮ ಮನೆಯ ಪಕ್ಕದ ಮೋಟು ಗೋಡೆಯ ಮೇಲೆ ನಿಂತು ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ

ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನ್ನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೆ ಬಂದ ಕೆಲವು ಹೆಂಗಸರು 'ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು' ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದ ನಮ್ಮಪ್ಪ ಸಂಜೆ ಮನೆಗೆ ಬಂದಾಗ ಅವ್ವ ಅವನ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು."[೩೮] ಜೀತಗಾರಿಕೆಗೆ ಒಳಗಾಗಲು ಕಾರಣವಾದ ಬಡತನದಿಂದ ವ್ಯಕ್ತಿ ಎಂಥಾ ಕೆಲಸವನ್ನಾದರೂ ಮಾಡಲು ತಯಾರಾಗಿರುತ್ತಾರೆಂಬುದಕ್ಕೆ ಇದೊಂದು ಜೀವಂತ ದೃಶ್ಯ. ಇದು ಕೇವಲ ಒಂದು ಕೇರಿಯ ಕಥೆ ಅಲ್ಲ; ಭಾರತದ ನೂರಾರು ಸಾವಿರಾರು ಕುಟುಂಬದ ವ್ಯಥೆ ಮತ್ತು ಕಥೆ. ಸಾವಿರಾರು ವರ್ಷಗಳಿಂದ ತಲಾ ತಲಾಂತರಗಳಿಂದ ಜೀತ ಮಾಡುತ್ತಾ ಜೀವ ಸವೆಸಿದ ದಲಿತರ ಪಾಡು ಇದು. ಇಲ್ಲಿ ಎತ್ತಿನಂತೆ ಅಪ್ಪ ಹಾಗೂ ಇನ್ನೊಬ್ಬ ವ್ಯಕ್ತಿಗೆ ನೊಗವನ್ನು ಹೊರಿಸಿ ಅಯ್ಯನವರು ಹೊಲವನ್ನು ಉಳುಮೆ ಮಾಡಿಸುವುದು, ಸ್ವಾತಂತ್ರ್ಯ ನಂತರ ದಾಖಲಾಗಿರುವ ಹಿಂಸಾ ಪ್ರವೃತ್ತಿಯ ಬಗೆಗಿನ ಒಂದು ಉದಾಹರಣೆಯಷ್ಟೇ. ಇದಕ್ಕಿಂತಲೂ ಭೀಕರ ಸ್ಥಿತಿಗಳು ಇಂದಿಗೂ ಜೀವಂತವಾಗಿವೆ. ಇಂತಹ ಕ್ರೂರತನದ ಹಿಂದೆ ಜಾತಿ ಹಾಗೂ ಆರ್ಥಿಕ ಪ್ರಬಲತೆ ಕೆಲಸ ಮಾಡುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾನತೆ ವ್ಯಂಗಕ್ಕೆ ಗುರಿಯಾಗಿ ವಿವಿಧ ರೀತಿಯ ಅಸಮಾನತೆ ಹಾಸುಹೊಕ್ಕಾಗಿ ಬಿಡಿಸಲಾಗದ ಸಮಸ್ಯೆಗಳಾಗಿವೆ. ತೀರಾ ಇತ್ತೀಚಿನ ದಿನಗಳಲ್ಲಿ ಕಂಬಾಲಪಲ್ಲಿ, ಹಂಗರಹಳ್ಳಿ ಜೀತ ಪ್ರಕರಣ ಮುಂತಾದವುಗಳನ್ನು ಉದಾಹರಣೆಗಳಾಗಿ ತೆಗೆದುಕೊಂಡರೂ ಇದು ಸ್ಪಷ್ಟವಾಗುತ್ತದೆ. ಇಂತಹ ಸ್ಥಿತಿಗಳಿಗೆ ಮತ್ತು ಹಿನ್ನಲೆಗೆ ಕಾರಣವಾದರೂ ಏನೆಂಬುದನ್ನು ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ಸ್ತರದಲ್ಲಿ ನಿಂತು ಚಿಂತಿಸಬೇಕಾದ್ದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ಸಕಲ ಜೀವಿಗಳಿಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳಲ್ಲಿ ಸಮಾನತೆಯನ್ನು ರೂಪಿಸಬೇಕಾದ ಪ್ರಜಾಪ್ರಭುತ್ವದ ರಾಜಕಾರಣ ಶೋಷಕ ಸಮುದಾಯದ ಪರವಾಗಿ ನಿಂತ ಕಾರಣದಿಂದಲೇ ಸಾಮಾಜಿಕ ಆರ್ಥಿಕ ಬದಲಾವಣೆ ಇಂಡಿಯಾದಲ್ಲಿ ತೀವ್ರಗತಿಯಲ್ಲಿ ಆಗಲಿಲ್ಲ. ಅಸಂಖ್ಯ ಏರಿಕೆಗಳ ನಡುವೆಯೂ ಬದುಕನ್ನು ಕಟ್ಟಿಕೊಳ್ಳುವ ಶಕ್ತಿಯನ್ನು ದಲಿತ ಸಮುದಾಯ ಅನಿವಾರ್ಯವಾಗಿ ಪಡೆಯಬೇಕಾಯಿತು. ಇಲ್ಲದಿರುವ ಕಾರಣದಿಂದ ಅವಲಂಬಿಸಬೇಕಾದ ದಲಿತರ

ಪರಿಸ್ಥಿತಿ ಮೇಲು ಜಾತಿಯವರಿಗೆ ಪ್ರತಿಷ್ಠೆಯಾದರೆ ಕೆಳಜಾತಿ ಜನರಿಗೆ ಬದುಕಿನ ಬವಣೆಯಾಗಿದೆ. ಲೇವಾದೇವಿಗಾರರಲ್ಲಿ ಜೀತಗಾರಿಕೆ–ಸಾಲಗಾರತನದ ಸುಳಿಯಲ್ಲಿ ಸಿಕ್ಕಿ ನರಳಿದ ದಲಿತ ಕಥನವೊಂದು ಹೀಗಿದೆ: ದಲಿತ ಕೇರಿಯ ಜನ ಸಾಲಗಾರರಾಗಿದ್ದರು. ಒಬ್ಬ ಹೆಂಗಸು ಲೇವಾದೇವಿಗಾರನೊಬ್ಬನಿಂದ ಸಾಲದ ಪಡೆದಿದ್ದಳು. ಕೂಲಿ ಸರಿಯಾಗಿ ಸಿಗದೆ ಅವಳು ಬಡ್ಡಿಯನ್ನು ಕಟ್ಟಲಾಗಲಿಲ್ಲ. ಈಕೆ ವಾರದ ಬಡ್ಡಿಗೆ ಸಾಲ ಪಡೆದಿದ್ದಳು. ಮೂರು, ನಾಲ್ಕು ವಾರ ಬಡ್ಡಿ ಕಟ್ಟದೆ ಇದ್ದುದರಿಂದ ಲೇವಾದೇವಿಗಾರನು ಈಕೆಯ ಚಿಕ್ಕ ವಯಸ್ಸಿನ ಮಗನನ್ನು ಎತ್ತಿಕೊಂಡು ಹೋಗಿ ಮನೆಯಲ್ಲಿಟ್ಟುಕೊಂಡನು. ಈಕೆಯಿಂದ ಬಡ್ಡಿಯನ್ನು ಕಟ್ಟಲಾಗಲೇ ಇಲ್ಲ. ಆಗಾಗ ಲೇವಾದೇವಿಗಾರನ ಮನೆಗೆ ಹೋಗಿ ತನ್ನ ಪುಟ್ಟ ಮಗುವನ್ನು ನೋಡಿ ಕಣ್ಣೀರು ಸುರಿಸಿ ಬರುತ್ತಿದ್ದಳು. ಕೇರಿಯಲ್ಲಿ ಒಬ್ಬ ವ್ಯಕ್ತಿ ಬಹಳ ಪ್ರತಿಷ್ಠೆ ಮಾಡುತ್ತಿದ್ದನು. ಆದರೆ ಅವನನ್ನು ಬಡತನ ಕಾಡತೊಡಗಿತು. “ತನ್ನ ಮನೆಯಲ್ಲಿದ್ದ ತಾಮ್ರದ ಹಂಡೆಯನ್ನು ಗಿರವಿ ಅಂಗಡಿಯಲ್ಲಿ ಅಡವಿಡಲು ಆತ ತೀರ್ಮಾನಿಸಿದ. ಅದನ್ನು ಮಾರದೆ ವಿಧಿಯಿಲ್ಲ. ಆ ಹಿರಿಯ ನನ್ನನ್ನು ಹತ್ತಿರ ಕರೆದು ಮೈದಡವಿ ‘ನನಗೊಂದು ಕೆಲಸ ಮಾಡಿಕೊಡುತ್ತೀಯಾ’ ಎಂದು ಕೇಳಿದ. ನಾನು ‘ಏನಾಗಬೇಕು’ ಎಂದೆ. ತನ್ನ ತಾಮ್ರದ ಹಂಡೆಯನ್ನು ಮಾರವಾಡಿ ಅಂಗಡಿಗೆ ಹೊತ್ತು ತರಬೇಕೆಂದೂ ತಾನು ಅಂಗಡಿಯ ಮುಂದೆ ಕಾಯುತ್ತಿರುವುದಾಗಿಯೂ ಹೇಳಿದ. ನಾನೂ ಒಪ್ಪಿಕೊಂಡೆ. ದೊಡ್ಡದಾಗಿದ್ದ, ಪುರಾತನವಾಗಿದ್ದ ತಾಮ್ರದ ಹಂಡೆಯನ್ನು ಬೀದಿಯಲ್ಲಿ ಹೊತ್ತುಕೊಂಡು ಹೋಗುತ್ತಿರುವಾಗ ಯಾರಾದರು ನನ್ನನ್ನೇ ಕಳ್ಳನೆಂದು ಹಿಡಿಯಬಹುದೆಂದು ಭಯದಲ್ಲೇ ಅಂಗಡಿ ತಲುಪಿದೆ. ಹಿರಿಯ ಆತಂಕದಿಂದ ಕಾಯುತ್ತಿದ್ದ. ಗಿರವಿಯ ಅಂಗಡಿಯಲ್ಲಿ ತಾಮ್ರದ ಹಂಡೆಯನ್ನು ಗಿರಿವಿ ಇಟ್ಟ. ಹಣ ಜೇಬು ತುಂಬಿದ್ದರೂ ತನ್ನ ಪೂರ್ವಿಕರ ಕಾಲದ ಹಂಡೆಯನ್ನು ಮಾರಿದ ವ್ಯಥೆ ಮುಖದಲ್ಲಿ ತುಂಬಿತ್ತು. ನನ್ನ ತಂದೆ ದೊಡ್ಡ ಸಾಲಗಾರನಾಗಿದ್ದ. ಸಾಲ ತರುವುದು ಆತನಿಗೆ ನೀರು ಕುಡಿದಷ್ಟು ಸುಲಭವಾಗಿತ್ತು. ಆದರೆ ತೀರಿಸಲು ಬಹಳ ಪಡಿಪಾಟಲು ಬೀಳುತ್ತಿದ್ದ.”[೩೯] ಹೀಗೆ ತಮ್ಮ ಕೇರಿಯ ಜೀತಗಾರಿಕೆ ಹಾಗೂ ಸಾಲಗಾರತನಗಳ ನರಳಿಕೆಗಳನ್ನು ನಿರೂಪಿಸುತ್ತ, ಆತ್ಮಕಥನಕಾರರು ತಮ್ಮ ತಂದೆಯೂ ಅಂತಹ ನರಳಿಕೆಗೆ ಒಳಗಾದ ಸಂದರ್ಭವನ್ನೂ ನೆನೆಯುತ್ತಾರೆ. “ಒಂದು ದಿನ ಇಬ್ಬರು ಧಾಂಡಿಗರು ಬೀದಿಯಲ್ಲಿ ನಮ್ಮ ತಂದೆಯನ್ನು ಹೊಡೆಯುತ್ತಿದ್ದರು. ಈತ ಗೋಳಾಡುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಹೀಗೆ ಪ್ರಯತ್ನಿಸಿದಷ್ಟೋ ಅವರು ಜೋರಾಗಿ ಹೊಡೆಯುತ್ತಿದ್ದರು. ನಾವೆಲ್ಲ ಗಾಬರಿಯಾಗಿ ಹತ್ತಿರ ಹೋದೆವು. ಕೆಲವರು ಬಿಡಿಸಿದ್ದರಿಂದ ತಂದೆಗೆ ಭಾರೀ ಹೊಡೆತಗಳು ತಪ್ಪಿದವು. ಮೈಯೆಲ್ಲ ಗಾಯವಾಗಿ, ಬಟ್ಟೆ ಹರಿದಿತ್ತು. ಆ ಧಾಂಡಿಗರು ಲೇವಾದೇವಿಗಾರನ ಏಜೆಂಟರು. ಸಾಲ

ಹಿಂದಿರುಗಿಸುವುದು ನಿಧಾನವಾದ್ದರಿಂದ ತಂದೆಯ ಮೇಲೆ ಹೀಗೆ ಹಲ್ಲೆ ನಡೆಸಿದ್ದರು. ಆ ದಿನ ರಾತ್ರಿಯೇ ತಂದೆ ಅವಮಾನ ತಾಳಲಾರದೆ ಮನೆಯಲ್ಲಿ ವಿಷ ಕುಡಿದು ವಿಲವಿಲನೆ ಒದ್ದಾಡುತ್ತಿದ್ದ. ಆಸ್ಪತ್ರೆಗೆ ಸೇರಿಸಿದ ಮೇಲೆ ಗುಣುಮುಖನಾದ."೪೦ ಎಂದು ಸಿದ್ದಲಿಂಗಯ್ಯ ಅವರು ಊರುಕೇರಿ ಆತ್ಮಕಥನದಲ್ಲಿ ಹೇಗೆ ದಲಿತರ ಬದುಕು ಜೀತದಲ್ಲಿಯೇ ಹುಟ್ಟಿ ಜೀತದಲ್ಲಿಯೇ ಬೆಳದು ಜೀತದಲ್ಲಿಯೇ ಅವನತಿ ಹೊಂದಿ ಮುಂದಿನ ಪೀಳಿಗೆಗೂ ಜೀತಗಾರಿಕೆಯನ್ನು ಬಳುವಳಿಯಾಗಿ ಮುಂದುವರಿಯುವಂತೆ ಈ ಅಸಮಾನತೆಯ ಸಮಾಜ ನಡೆಸಿಕೊಂಡು ಬರುತ್ತಿದೆ ಎಂಬುದನ್ನು ತಿಳಿಸಿದ್ದಾರೆ. ಹಾಗೆಯೇ ದಲಿತರ ಜೀತಪೂರ್ವ, ಜೀತಕಾಲ ಹಾಗೂ ಜೀತೋತ್ತರಕಾಲದಲ್ಲಿದ್ದ ಬದುಕಿನ ದುರಂತಗಳನ್ನು ಕಟ್ಟಿಕೊಟ್ಟಿದ್ದಾರೆ.

ದಲಿತರು ಊರ ಚಾಕರಿ ಮಾಡಬೇಕಾದರೆ ತಮಟೆ ಬಡಿಯುವುದನ್ನು ಕಡ್ಡಾಯವಾಗಿ ಕಲಿತಿರಬೇಕಿತ್ತು. ತಮಟೆ ಬಡಿಯುವುದು ದಲಿತರಿಗೆ ವಂಶಪಾರಂಪರ್ಯವಾಗಿ ಬಂದ ಸಾಂಸ್ಕೃತಿಕ ಕಲಾ ಕಾಯಕ. ಸತ್ತ ದನಗಳನ್ನು ಹಟ್ಟಿಗೆ ತಂದುಕೊಯ್ಯುವ ಕೆಲಸವನ್ನು ದಲಿತರೇ ಮಾಡುತ್ತಿದ್ದರು. ಕೊಯ್ದ ದನದ ಜಠರದ ಹತ್ತಿರ ಸಿಗುತ್ತಿದ್ದ ಪೊರೆಯಂತಹ ತೆಳುವಾದ ಚರ್ಮವನ್ನು ಹೊರತೆಗೆದು, ಅದನ್ನು ಒಡೆದು ಹೋದ ಮಡಕೆಯ ಕಂಠಕ್ಕೆ ಬಿಗಿದು ಕಟ್ಟಿ, ಬಿಸಿಲಲ್ಲಿ ಒಣಗಿಸಿ ಕಡ್ಡಿಯಿಂದ ಬಾರಿಸಿದರೆ ತಮಟೆ ಬಡಿದ ಶಬ್ಧ ಬರುತ್ತದೆ. ಹೀಗೆ ಬಡಿಯುತ್ತಾ ತಮಟೆ ಕಲೆಯನ್ನು ಅಭ್ಯಾಸ ಮಾಡುತ್ತಾರೆ. ತಮಟೆ ಬಡಿಯುವುದು ದಲಿತರ ಒಂದು ಅದ್ಭುತವಾದ ಕಲಾಕಾಯಕ. ಅದನ್ನು ಬಡಿಯುವವನ ಎಲ್ಲ ಅಂಗಾಂಗಗಳೂ ತಮಟೆ ಲಯದೊಂದಿಗೆ ಮಿಡಿಯುತ್ತಿರುತ್ತವೆ. ತಮಟೆ ಬಡಿಯುವವನಿಗೆ ಲೋಕದ ಎಲ್ಲ ವಸ್ತುಗಳು ಕರಗಿ ಹೋಗಿ, ಕೇವಲ ತಮಟೆ ಮತ್ತು ಅದರ ಲಯ ಮಾತ್ರ ಅವನ ಪ್ರಜ್ಞೆಯಲ್ಲಿರುತ್ತದೆ.

ತಮಟೆ ಬಡಿಯುವುದೂ ಒಂದು ಧ್ಯಾನ! ಧ್ಯಾನದ ಕಂಪನಗಳಂತೆ ತಮಟೆಯ ಕಂಪನಗಳು ನಿಧಾನವಾಗಿ ತನ್ನ ಸುತ್ತಲಿನ ವಾತಾವರಣವನ್ನೆಲ್ಲ ಆವರಿಸುತ್ತಾ ಹೋಗುತ್ತದೆ. ಎಂಥ ನಿರುತ್ಸಾಹದ ಮನಸ್ಸೂ ಕೂಡ ತಮಟೆಯ ದನಿಗೆ ನಿಧಾನವಾಗಿ ಚಲಿಸುತ್ತಾ ಹೋಗುತ್ತದೆ. ಹಾಗೆಯೇ ತಮಟೆ ಬಡಿಯುವುದು ಒಂದು ದಿನಕ್ಕೆ ಬರುವ ವಿದ್ಯೆಯೂ ಅಲ್ಲ. ಅದೊಂದು ನಿರಂತರ ಕಲಿಕೆ. ಅದೊಂದು ತಪಸ್ಸು. ಈ ಕುರಿತಾಗಿ ತಾವು ವೇದ್ಯಗೊಳಿಸಿಕೊಂಡ ಅನುಭಾವಗಳನ್ನು ತುಂಬಾಡಿ ರಾಮಯ್ಯವರು ಸ್ಮರಿಸುತ್ತ, "...... ಹಟ್ಟಿಯಲ್ಲಿ ತಮಟೆ ಬಡಿಯುವುದು ಯಾರು ಕಲಿಸಿಕೊಡಬೇಕಾಗಿಲ್ಲ. ಏಕಲವ್ಯನಂತೆ ಅವರುಗಳೇ ಗುರು–ಶಿಷ್ಯರಾದಿಯಾಗಿ ಕಲಿಯುತ್ತಿದ್ದರು. ಬೇರೆ ಬೇರೆ ಸನ್ನಿವೇಶಗಳಿಗೆ ಬೇರೆ ಬೇರೆ ಗಸ್ತಿಗಳನ್ನು ಉಪಯೋಗಿಸಿ ತಮಟೆ

ಬಡಿಯುವುದನ್ನು ಕಲಿಯಲಾಗುತ್ತಿತ್ತು. ಹನುಮಂತರಾಯನ ಗಸ್ತಿ, ಇದು ಸದಾ ಗಸ್ತಿ, ಮಾರಮ್ಮನಿಗೆ ಮಾರಮ್ಮನ ಗಸ್ತಿ, ಇದೊಂದು ರೀತಿ ನಾನ್‌ವೆಜ್ ಗಸ್ತಿ, ಈ ಗಸ್ತಿ ಹೊಡೆಯಲು ಹೊಟ್ಟೆಯೊಳಗಡೆ ಸ್ವಲ್ಪ ಅಮ್ಮನವರು ಸೇರಿದರೆ ಮಣೆಗಾರರು ಬಹಳ ಪಗಡದಸ್ತಾಗಿ ಗಸ್ತಿ ಹೊಡೆಯುತ್ತಾರೆ. ತಮಟೆ ಬಡಿಯುತ್ತಲೇ ಮಲಗಿ ಮಲಗಿ ನೆಲದ ಮೇಲಿದ್ದ ಕಾಸನ್ನು ಹಣೆಯಲ್ಲಿ ಕಚ್ಚಿಸಿಕೊಂಡು ಮೇಲೇಳುತ್ತಿರುವವರನ್ನೂ ಕಂಡು ಮಾದಿಗ ಜಾತಿಯಲ್ಲಿ ಹುಟ್ಟಿರುವುದಕ್ಕೆ ಖುಷಿ ಮತ್ತು ಹೆಮ್ಮೆ ಆಗುತ್ತಿತ್ತು."[೪೧] ಎನ್ನುತ್ತಾರೆ. ಈ ಬಗೆಯ ಜಾನಪದ ಕಲೆಯು ದಲಿತ ಸಮುದಾಯದವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ದಲಿತ ಚಳುವಳಿಯ ಸಂದರ್ಭದಲ್ಲಿ, ಹೋರಾಟದ ಹಾಡುಗಳನ್ನು ಹಾಡಿ ಜನರಲ್ಲಿ ಜಾಗೃತಿಯನ್ನು ಉಂಟುಮಾಡುವ ಸನ್ನಿವೇಶಗಳಲ್ಲಿ ತಮಟೆಯನ್ನು ಬಾರಿಸಿಕೊಂಡು ಹಾಡುತ್ತಿದ್ದರು. ಇದಲ್ಲದೆ ತಮಟೆಯು ಮೇಲು ವರ್ಗದವರಲ್ಲಿ ಎಚ್ಚರಿಕೆಯ ಘಂಟೆಯ ಸಂಕೇತವಾಗಿದ್ದರೇ, ದಲಿತರಲ್ಲಿ ಇದು ಸಾಂಸ್ಕೃತಿಕ ಜಾಗೃತಿಯ ಸಂಕೇತವಾಗಿ ಬಳಸಲಾಗುತ್ತಿತ್ತು.

ದಲಿತ ಸಮುದಾಯದ ಜನರು ಜೀತಗಾರರಾಗಿ ತಮ್ಮ ಜೀವನವನ್ನು ಬಹಳ ಕಷ್ಟದಿಂದ ಸಾಗಿಸಿದ್ದಾರೆ. ಇದಕ್ಕೆ ಅವರ ಪರಂಪರೆಯಿಂದ ಹಿರಿಯರು ಮಾಡಿದ ಸಾಲ, ಮೈಮೇಲೆ ಹೊದ್ದುಕೊಂಡಿದ್ದ ಬಡತನವೇ ಕಾರಣವಾಗಿರುತ್ತದೆ. ದಲಿತ ಹಟ್ಟಿಯ ಜನರಿಗೆ ಜೀತವೇ ಸರ್ಕಾರಿ ನೌಕರಿಯಾಗಿತ್ತು. ಯಜಮಾನರುಗಳ ಮನೆಯಲ್ಲಿ ಎಂಟಾಣೆ, ನಾಲ್ಕಾಣೆಗೆ ವರ್ಷಗಟ್ಟಲೆ ಸಂಬಳಕ್ಕೆ ಗೇಯುತ್ತಿದ್ದರು. ಬಾಲಕರಾಗಿದ್ದಾಗ ಜೀತಕ್ಕೆ ಸೇರಿದವರು ಮದುವೆಯಾಗುವವರೆಗೂ ಮುಕ್ತರಾಗುತ್ತಿರಲಿಲ್ಲ. ಕೆಲವರು ಸಾಯುವವರೆಗು ಸಾಲ ತೀರಿಸಲಾಗದೆ ಜೀತದಲ್ಲೇ ಕೊನೆಯಾಗುತ್ತಿದ್ದರು. ಸಾಲ ತೀರಿಸಲು ತಮಗಿದ್ದ ಅಲ್ಪಸ್ವಲ್ಪ ಆಸ್ತಿಯನ್ನು ಯಜಮಾನರುಗಳಿಗೆ ಮಾರಿ ಜೀತಮುಕ್ತರಾದವರ ಸಂಖ್ಯೆ ಭಾರತದೇಶದಲ್ಲಿ ಅಪಾರವಾಗಿದೆ. ಹಳ್ಳಿಯಲ್ಲಿ ಈಗ ಇರುವ ದೊಡ್ಡ ದೊಡ್ಡ ಜಮೀನ್ದಾರರ ಹಿಂದೆ ಜೀತಗಾರರು ಕಳೆದುಕೊಂಡ ಬೆವರಿನ ಹನಿಗಳ ಭೂಮಿಗಳಿವೆ. ಇಷ್ಟಾದರೂ ಈಗಿನ ಕಾಲದ ಮಕ್ಕಳು ತಮ್ಮ ಹಿರಿಯರನ್ನು ಕುರಿತು, 'ನೀವೇನು ನಮಗೆ ಹೊಲ, ಮನೆ, ತೋಟ ಉಳಿಸಿದ್ದೀರಾ? ಏನು ಕಿಸಿದಿದ್ದೀರಿ' ಎಂದು ರೇಗುವುದುಂಟು. ಆದಕ್ಕೆ ಹಿರಿಯರು 'ನಿಮ್ಮನ್ನೆಲ್ಲಾ ಜೀತಕ್ಕೆ ಸೇರಿಸದೆ, ಸಾಯದಂತೆ ಉಳಿಸಿದ್ದೇವಲ್ಲಾ ಅದನ್ನು ನೋಡ್ಕಳ್ರುಲಾ!' ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಈ ಹಿನ್ನೆಲೆಯಲ್ಲಿ ಎನ್.ಕೆ.ಹನುಮಂತಯ್ಯನವರ ಮಾತುಗಳು ಇಲ್ಲಿ ಮುಖ್ಯವಾಗುತ್ತವೆ. "ನನ್ನ ಅಪ್ಪನ ಹೆಸರು ಕರಿಯಪ್ಪ. ಅವ್ವ ಲಕ್ಷ್ಮಮ್ಮ. ಸಣ್ಣ ಹುಡುಗನಾಗಿದ್ದಾಗಲೇ ಅಪ್ಪನನ್ನು ಗೌಡರ ಮನೆಗೆ ಸಂಬಳಕ್ಕೆ ಸೇರಿಸಿದ್ದರು. ಮದುವೆಯ ವಯಸ್ಸಿನ ತನಕ ಜೀತಗಾರನಾಗಿದ್ದ. ಅಪ್ಪ ಜೀತದಲ್ಲಿರುವಾಗ ಗೌಡರ ಮನೆಯಲ್ಲಿ ಎರಡು

ಭಾರೀ ಎತ್ತುಗಳಿದ್ದವಂತೆ. ಆ ಎತ್ತುಗಳನ್ನು ಯಾರೂ ಮುಟ್ಟುತ್ತಿರಲಿಲ್ಲವಂತೆ. ಮುಟ್ಟಿದರೆ ಹಾಯುತ್ತಿದ್ದವಂತೆ. ಎತ್ತುಗಳ ಜೊತೆ ಕೊಟ್ಟಿಗೆಯಲ್ಲಿಯೇ ನಿದ್ರಿಸುತ್ತಾ ಬೆಳೆದ ಅಪ್ಪನನ್ನು ಮಾತ್ರ ಹಾಯುತ್ತಿರಲಿಲ್ಲವಂತೆ; ಹುಲ್ಲು ಹಾಕಿ, ನೀರು ಕುಡಿಸಿ, ಮೈ ತೊಳೆಯುತ್ತಿದ್ದ ಅಪ್ಪ ಆ ಎತ್ತುಗಳ ಕಣ್ಣಿಗೆ ಎತ್ತಿನಂತೆಯೇ ಆಗಿದ್ದ ಎನ್ನಿಸುತ್ತದೆ. ಅಪ್ಪನಿಲ್ಲದಿದ್ದರೆ ಆ ಎತ್ತುಗಳು ಮೇವು, ನೀರು ಬಿಟ್ಟು ಮಲಗಿರುತ್ತಿದ್ದವಂತೆ. ಅಪ್ಪ ಜೀತದ ಮನೆಯಲ್ಲಿ ಗಟ್ಟಿಗನಾಗಿದ್ದ. ಹೊಲ, ತೋಟ, ಗದ್ದೆಯ ಕೆಲಸಗಳನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದ. ರಾತ್ರಿ ಕೊಟ್ಟಿಗೆಯಲ್ಲಿ ನಿದ್ರಿಸುತ್ತಿದ್ದ. ಅವನಿಗೆ ಪ್ರತ್ಯೇಕವಾದ ಅಲ್ಯೂಮಿನಿಯಂ ತಟ್ಟೆ, ಚೆಂಬುಗಳನ್ನು ಕೊಟ್ಟಿದ್ದರು. ತೆಂಗಿನ ಚಿಪ್ಪುಗಳಿಂದ ಕಾಫಿ, ಟೀ ಕೊಡುತ್ತಿದ್ದರು."[೪೨] ಇದು ಇಡೀ ಭಾರತದ ಜೀತಗಾರಿಕೆಯ ಪರಂಪರೆಗಳನ್ನು ನಿರೂಪಿಸುವ ನೆಲಸಂಬಂಧ, ಜೀವಸಂಬಂಧದ ಆರ್ತನಾದ ಕಥನವಾಗಿದೆ.

ದಲಿತ ಮಕ್ಕಳು ಹೊಸ ಎಚ್ಚರವನ್ನು ಪಡೆಯಲೆಂಬ ಆಶಯದಲ್ಲಿ ಶಾಲೆಗೆ ಸೇರಿದರೂ ಶಿಕ್ಷಣದ ಹಾದಿಯಲ್ಲಿ ಜೀತಗಾರಿಕೆ ಅವರನ್ನು ಬೆಂಬಿಡದೆ ಹಿಂಬಾಲಿಸಿದ ದಲಿತ ಕಥನಗಳು ಅನೇಕ. ಅವರಿಗೆ ಓದು ಮತ್ತು ಜೀತಗಾರಿಕೆ ಒಟ್ಟೊಟ್ಟಾಗೇ ನಡೆದು ಬಂದಿರುವ ಚಾರಿತ್ರಿಕ ಕಥನಗಳ ರೀತಿಯಲ್ಲಿ ಲೇಖಕರು ತಮ್ಮ ಆತ್ಮಚರಿತ್ರೆಗಳಲ್ಲಿ ನಿರೂಪಿಸಿದ್ದಾರೆ. ದಲಿತರು ವಿವಿಧ ಮೇಲು ಜಾತಿಯವರಲ್ಲಿ ಜೀತಗಾರರಾಗಿ ದುಡಿದಿದ್ದಾರೆ. ಸಂಜೀವರಾಯರು ಲಿಂಗಾಯ್ತ ಇಸುಬಿನ ಈಶ್ವರಪ್ಪನವರ ಮನೆಗೆ ಆರನೆ ವಯಸ್ಸಿಗೆ ಜೀತಕ್ಕೆ ಸೇರಿರುತ್ತಾರೆ. ದನ ಕಾಯುವುದು, ಮೈಮುರಿಯುವಂತಹ ಕೊಟ್ಟಿಗೆ ಕೆಲಸ ಮಾಡುತ್ತ ಒಗ್ಗರಣೆ ಎಸರು, ತಂಗಳು ಕೂಳಿಗೆ ಹೊಂದಿಕೊಳ್ಳುತ್ತಾರೆ. ಎರಡು ವರ್ಷ ಜೀತದ ಕೆಲಸದಲ್ಲಿ ನಿರತರಾಗಿದ್ದರಿಂದ ಇಸ್ಕೂಲು ವಾಸನೆ ಮೂಗಿಗೆ ಬಡಿಯಲೇ ಇಲ್ಲ. ಅಪ್ಪ ಅಮ್ಮರು ಶಾಲೆಗೆ ಸೇರಿಸಿದರೂ ಅವರಿಗೆ ಜೀತವನ್ನು ಬಿಟ್ಟು ಹೋಗಲಾಗಲಿಲ್ಲ. ಏಕೆಂದರೆ, ಅವರೇ ಹೇಳುವಂತೆ, "…..ಈಶ್ವರಪ್ಪನವರ ತಂಗ್ಳು ಕೂಳು, ಹುಡುಗ್ರು ಜೊತೆ ಆಡುತ್ತಿದ್ದ ಗೋಡುಪಟ್ಟೆ, ಮರಕೋತಿ ಆಟಗಳು, ಕೆರೆಯ ಹಿಂದೆ ಮಾವಿನಕಾಯಿ, ಎಳ್ನೀರು ಕದಿಯುತ್ತಾ ಕಟ್ಟೆಗಳಲ್ಲಿ ಈಜುತ್ತಿದ್ದ ನೆನಪುಗಳು ಕಾಡುವುದಕ್ಕೆ ಹತ್ತಿದವು. ಗೋವಿಂದಪ್ಪ ಮೇಷ್ಟ್ರು ಹರಸಾಹಸ ಮಾಡಿ ಅಕ್ಷರ ಕಲಿಸೋಕೆ ಪ್ರಯತ್ನ ಪಟ್ರೂನೂ ಸಾಧ್ಯವಾಗ್ಲಿಲ್ಲ. ಗೋವಿಂದಪ್ಪ ಮೇಷ್ಟ್ರು ದನ ಬಡಿದಂಗೆ ಬಡಿದ್ರೂನೂ ಸಿಲೇಟು ಬಳಪುಗಳು ಮುರಿದ್ಹೋದ್ವೇ ಹೊರತೂ ಅ, ಆ, ಇ, ಈ ಜ್ಞಾನ ಹುಟ್ಲೇ ಇಲ್ಲ! ಅವರು ಕೊಡ್ತಿದ್ದ ಕಾಟ ಒಂದು ಕಡೆ ಆದ್ರೆ ಈಶ್ವರಪ್ಪನವ್ರ ಮೇನೇಲಿ ಹಾಕ್ತಾ ಇದ್ದ ವೈವಿಧ್ಯಮಯ ತಿಂಡಿಗಳು ಎಷ್ಟೋ ವೈನಾಗಿತ್ತು ಅಂತಾ ಅನ್ನಿಸ್ತಾ ಇತ್ತು…..."[೪೩] ಆದರೆ, ಬದುಕು ಅಷ್ಟಕ್ಕೆ ನಿಲ್ಲದೆ, ಜೀತವೂ ಒಮ್ಮೆ

ಸಾಕಾಗಿ ಸ್ವಂತ ಕಾಯಕಗಳನ್ನು ಮಾಡಿಕೊಂಡು ತಂದೆಗೆ ಆಸರೆಯಾಗುತ್ತ ಬದುಕುವ ಸಂಜೀವರಾಯರು, "ಇಸುಬಿನ ಈಶ್ವರಪ್ಪನ ಜೀತ, ಗೋವಿಂದಪ್ಪ ಮೇಷ್ಟ್ರು ಹೊಡೆತಗಳೊಂದಿಗೆ ಸಿಕ್ಕಿ ಕಕ್ಕಾಬಿಕ್ಕಿಯಾದ ನಾನು ಇಸ್ಕೂಲ್ ದಾರಿ ಮರ್ತು ಅಪ್ಪನ ಹಿಂದೆ ಊರಿನ ಕುಳವಾಡಿಗಳ ನೊಗ, ನೇಗಿಲು, ರಂಟೆ-ಕುಂಟೆ, ಹಲುಬೆ-ಹೆಗ್ಗುಂಟೆ ಕೆಲಸ ಮಾಡುತ್ತಿದ್ದವನಿಗೆ ಕೈ ಆಸರೆಯಾದೆ. ಶಾದ್ರ್ ಕೇರಿಯವ್ರ ಮನೆ ಹತ್ರ ಹೋಗಿ ಮಡ್ಕೆ ಮರ, ಈಸ್‌ಮರ, ನೊಗದ ಮರ ಮುಂತಾದವನ್ನು ಹೊತ್‌ಕಂಡು ಬರುವುದು ಖಾಯಂ ಆಗಿತ್ತು. ಊರ್ ಅರಳೀಕಟ್ಟೆ ಹತ್ರ ನಡೀತಿದ್ದ ಬಡಗೀ ಕೆಲಸಕ್ಕಾಗಿ ಗುಂಪು ಗುಂಪಾಗಿ ಜನ ಸೇರ್ತಿದ್ರು! ಒಬ್ಬೊಬ್ರುದೂ ಒಂದೊಂದು ತರ ಆತ್ರ! ಕೆಲವ್ರಿಗೆ ಮಡ್ಕಿಗೆ ಖಾತರ, ಇನ್ಕೆಲವ್ರಿಗೆ ನೊಗದ ಆತುರ, ನನ್ನಪ್ಪ ಮಾತ್ರ ಯಥಾಸ್ಥಿತಿಯಾಗಿ ಬಾಳಚಿ ಹಿಡ್ಕೊಂಡು 'ಏಯ್ ಬಿಡ್ರಯ್ಯೋ, ಎಲ್ಲೂ ಒಂದೇ ಸಾರಿ ನಾಯಿ ಬೆದೆಗ್ ಬಂದಂಗ್ ಆಡ್ತೀರಾ, ಮಳೆ ಬಿದ್ದಾಗ್ಲೇ ನಿಮ್‌ಗೆ ಬೆದೆ ಹುಟ್‌ತೈತೆ, ಹೊಸ್ ಮರ ತಂದು ನನ್ ಜೀವ ತೆಗೀತೀರಾ, ಮಳೆಗಾಲ್ದಲ್ಲೇ ಮರ ಕಡ್ದು ನೀರ್‌ಗ್ಹಾಕಿದ್ರೆ ಚೆನ್ನಾಗಿ ಸೇಗ ಬಂದು ಹದವಾಗಿರ್ತಿತ್ತು.' ಎಂದು ಬಯ್ತಿದ್ದ. ಕೆತ್ತುತ್ತಿದ್ದ ಮರ ಚಕ್ಕೆಗಳನ್ನೆಲ್ಲಾ ಕೂಡಿಹಾಕಿ ಮನೆಗೆ ಸಾಗಿಸುವುದು ನನ್ನ ಕೆಲಸ.."[೬೬] ಅಂತ ಜೀತಕ್ಕೆ ಒಗ್ಗಿಹೋಗಿದ್ದ ತಮ್ಮ ಸ್ಥಿತಿಯನ್ನು ಹಾಗೂ ಆ ನಂತರದಲ್ಲಿ ತಂದೆಯೊಂದಿಗೆ ವಿವಿಧ ಕಾಯಕಗಳಲ್ಲಿ ಸಹಕರಿಸಿದ ಸನ್ನಿವೇಶಗಳನ್ನು ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾರೆ.

ಬಿ.ಡಿ.ನಾರಾಯಣ್‌ದಾಸ್ ಅವರು ತಮ್ಮ ತಂದೆಯವರು ಪಟ್ಟಿರುವಷ್ಟು ಕಷ್ಟ ಮತ್ತು ಶ್ರಮವನ್ನು ಅರಿತು ಅಪ್ಪನು ಮಾಡಿದ್ದ ಸಾಲವನ್ನು ತೀರಿಸುವ ಕೈಂಕರ್ಯ ಕೈಗೊಂಡು ಅದರಲ್ಲಿ ಯಶಸ್ಸು ಪಡೆಯುತ್ತಾರೆ. ಊರಿನ ತೋಪೇಗೌಡ ಎಂಬುವರ ಮನೆಯಲ್ಲಿ ಚಿಕ್ಕ ಹುಡುಗನಾಗಿದ್ದಾಗಿನಿಂದ ಮದುವೆಯಾಗುವವರೆಗೆ ತಂದೆಯು ಜೀತಕ್ಕೆ ಇರುತ್ತಾರೆ. ತಂದೆಯ ತಂದೆ ಅಂದರೆ-ತಾತ-ಚಿಕ್ಕಯ್ಯನವರು ತಂದೆಯ ಎಳೆವಯಸ್ಸಿನಲ್ಲಿ ತೀರಿಕೊಂಡ ಕಾರಣ ಅವರ ಅಜ್ಜಿ ಬಹಳ ಬಡತನದಿಂದ ಚಿಕ್ಕಮಗುವಾಗಿದ್ದಾಗಿನಿಂದಲೇ ತೋಪೇಗೌಡರ ಮನೆಯಲ್ಲಿ ಬರೀ ಊಟಕ್ಕೋಸ್ಕರ ದನಗಳ ಕೊಟ್ಟಿಗೆಯ ಕಸ ಗುಡಿಸುತ್ತಿರುತ್ತಾರೆ. ತಂದೆ ಸ್ವಲ್ಪ ಕೆಲಸ ಮಾಡುವಂತಾದಾಗ ವರ್ಷಕ್ಕೆ ಮೂರು ರೂಪಾಯಿಗಳಿಗೆ ಜೀತಕ್ಕೆ ಇಟ್ಟುಕೊಂಡರಂತೆ. ಮದುವೆಯಾಗುವವರೆಗೆ ಸುಮಾರು ಇಪ್ಪತ್ತು ವರ್ಷ, ಅವರ ಮನೆಯಲ್ಲಿ ವರ್ಷಕ್ಕೆ ೩. ರೂ.ಗಳ ಸಂಬಳ, ಒಂದು ಜೊತೆ ಬಟ್ಟೆ, ಅಂದರೆ ಒಂದು ದಟ್ಟಿ, ಒಂದು ಶರ್ಟ್ ಮತ್ತು ಊಟ, ತಿಂಡಿ. ಅವರ ಅಜ್ಜಿಯಾದ ಕಾಳಮ್ಮನವರೂ ಸಹ ಬರೀ ಊಟ ತಿಂಡಿಗೇ ಗೌಡರ ಮನೆಯಲ್ಲಿ ದನಗಳ ಕಸ ಗುಡಿಸಿಕೊಂಡು ಮಗನ ಜೊತೆ

ದುಡಿಯುತ್ತಾರೆ. ತಂದೆಗೆ ಮದುವೆಯಾಗಿ ತಾವು ಹುಟ್ಟಿ ಚಿಕ್ಕ ಹುಡುಗನಾಗಿದ್ದಾಗಲೂ ಅವರ ಅಜ್ಜಿ ತೋಪೇಗೌಡರ ಮನೆಯಲ್ಲಿ ಕಸ ಗುಡಿಸುವುದನ್ನು ನೋಡಿರುತ್ತಾರೆ. ಆಗಿನ ಕಾಲದಲ್ಲಿ ಒಂದು ವರ್ಷ ಜೀತ ಮಾಡಿದರೆ ಮತ್ತೊಂದು ತಿಂಗಳು ಹೆಚ್ಚಿಗೆ ಜೀತ ಮಾಡಬೇಕಿದ್ದ ಅಲಿಖಿತ ಸಂವಿಧಾನದಂತೆ, ಅಂದರೆ ೧೩ ತಿಂಗಳು. ಒಂದು ತಿಂಗಳು ಹೆಚ್ಚಿಗೆ ದುಡಿಸಿಕೊಳ್ಳುತ್ತಿದ್ದರು. ಗೌಡರು ಹೀಗೆ ಬಡವರ ಜೀವ ಹಿಂಡುತ್ತಿದ್ದರು. ಇಂಥ ಜೀತದ ಕುಟುಂಬದಿಂದ ಓದಿ ವಿದ್ಯಾವಂತರಾದ ಬಿ.ಡಿ.ನಾರಾಯಣ್‌ದಾಸ್ ಅವರು ಜೀತಗಾರ ಅಪ್ಪನ ಸಾಲ ತೀರಿಸಿದ ಬಗ್ಗೆ ಅತ್ಯಂತ ಆಪ್ತವಾಗಿ ಹೇಳಿಕೊಂಡಿದ್ದಾರೆ. “ನಮ್ಮ ತಂದೆಯವರು ಅವರ ಮದುವೆಗೆ ತೋಪೇಗೌಡರ ಹತ್ತಿರ ಮಾಡಿದ್ದ ಸಾಲ ಇನ್ನೂ ತೀರಿಲ್ಲವೆಂದು ಹೇಳುತ್ತಿದ್ದರು. ಅವರ ಮದುವೆಗೆ ನೂರು ರೂಪಾಯಿ ಸಾಲ ಮಾಡಿದ್ದರಂತೆ! ಪ್ರತಿವರ್ಷ ಅದರ ಬಡ್ಡಿ ಹನ್ನೆರಡು ರೂ. ಕೊಡುತ್ತಿದ್ದರಂತೆ. ನಾನು ಸೊಸೈಟಿ ಇನ್ಸ್‌ಪೆಕ್ಟರ್ ಕೆಲಸದಿಂದ ಸೋಷಿಯಲ್ ವೆಲ್‌ಫೇರ್ ಕ್ಲಾಸ್ ಗೆಜೆಟೆಡ್ ಆಫೀಸರಾಗಿ ೧೯೪೯ರಲ್ಲಿ ಬೆಳಗಾಂನಲ್ಲಿದ್ದೆ. ಹಾಸನದಿಂದ ನನಗೆ ಬೆಳಗಾಂಗೆ ವರ್ಗವಾಯಿತು. ಆಗ ನನಗೆ ಎ.ಜಿ.ಯಿಂದ ಪೇ ಸ್ಲಿಪ್ ಬರಲು ತಡವಾಗಿ ಒಂದು ಸಾವಿರ ರೂ.ಗಳು ಒಟ್ಟಿಗೆ ಬಂತು. ಅದನ್ನು ತೆಗೆದುಕೊಂಡು ನಮ್ಮ ಊರಿಗೆ ಬಂದು ಅದೇ ದಿನ ರಾತ್ರಿ ನಮ್ಮ ತಂದೆಯವರನ್ನು ‘ಅಪ್ಪ, ನೀವು ಯಾರಿಗೆ ಎಷ್ಟು ಸಾಲ ಕೊಡಬೇಕು’ ಎಂದು ಕೇಳಿದೆ. ಅವರು ಮೇಗಲಮನೆ ತೋಪೇಗೌಡರ ಬಳಿ ಅವರ ಮದುವೆಯಲ್ಲಿ ತೆಗೆದುಕೊಂಡಿದ್ದ ಸಾಲ ಮತ್ತು ಪಟೇಲ್ ಬೋರೇಗೌಡರಿಗೆ ೨೦೦/- ರೂ. ಕೊಡಬೇಕೆಂದರು. ರಾತ್ರಿ ಎಂಟು ಗಂಟೆಯಲ್ಲಿ ತಂದೆಯವರನ್ನು ಕರೆದುಕೊಂಡು ಅವರ ಮನೆ ಬಳಿ ಹೋದೆವು. ತೋಪೇಗೌಡರು ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರಿಗೆ ಸಾಲ ಎಷ್ಟು ಕೊಡಬೇಕು ಎಂದು ಕೇಳಿದೆವು. ಅವರು ಹಳೆಯ ಬಡ್ಡಿಯ ಬಾಕಿ ಎಲ್ಲವನ್ನು ಲೆಕ್ಕ ಹಾಕಿ ನೂರು ರೂ. ಗಳ ಸಾಲಕ್ಕೆ ಈಗ ಉಳಿದಿರುವುದು ೪೫೭/- ರೂ.ಗಳು ಎಂದರು. ನಾನು ಅಷ್ಟೂ ಹಣವನ್ನು ತೆಗೆದುಕೊಟ್ಟೆ. ಅದಕ್ಕೆ ಅವರು ‘ಏಕೋ ಮಗ ಇಷ್ಟು ಅರ್ಜೆಂಟ್. ನಿಧಾನವಾಗಿ ಕೊಟ್ಟಿದ್ದರೆ ಆಗುತ್ತಿತ್ತು’ ಎಂದರು. ಕೊನೆಗೆ ೭. ರೂ. ಬಿಟ್ಟು ೪೫೦ ರೂ. ತೆಗೆದುಕೊಂಡರು. ಮತ್ತು ಪತ್ರವನ್ನು ಕೊಡುತ್ತೇನೆಂದರು. ನಮಗೆ ಅದರ ಅಗತ್ಯವೂ ಇರಲಿಲ್ಲ. ಆಮೇಲೆ ಪಟೇಲ್ ಬೋರೇಗೌಡರ ಮನೆಯ ಹತ್ತಿರ ಹೋಗಿ ಅವರಿಗೆ ಕೊಡಬೇಕಾಗಿದ್ದ ೨೦೦ ರೂ ಗಳನ್ನು ಕೊಟ್ಟು ರಾತ್ರಿ ೯ ಗಂಟೆಯಷ್ಟೊತ್ತಿಗೆ ಮನೆಗೆ ಬಂದೆವು. ಮನೆಗೆ ಬಂದು ಊಟ ಮಾಡುವಾಗ ನಮ್ಮ ತಂದೆಯವರು ಒಂದು ಮಾತು ಹೇಳಿದರು. ‘ಮಗಾ ನಾನು ಹುಟ್ಟಿದಾಗಿನಿಂದ ಇಂದಿನವರೆಗೂ ಸಾಲಗಾರನಾಗಿದ್ದೆ. ಈ ದಿನ ನಾನು ಯಾರಿಗೂ ಸಾಲಗಾರನಲ್ಲ. ಸಂತೋಷವಾಗಿ ಊಟ

ಮಾಡುತ್ತೇನೆ' ಎಂದು ಹೇಳಿದರು."[೪೫] ಹೀಗೆ, ತಲೆತಲಾಂತರದಿಂದ ಜೀತಕ್ಕೆ ಒಳಗಾಗಿದ್ದ ದಲಿತ ಕುಟುಂಬದಲ್ಲಿ ಬೆಳಕಿನ ಆಶಾಕಿರಣವಾಗಿ ಕಂಡ ದಲಿತಯುವಕರ ಓದು ಮತ್ತು ಉದ್ಯೋಗದ ಪರಿಣಾಮದಿಂದ ಜೀತಗಾರಿಕೆಯು ಕೊನೆಯಾಯಿತು. ಇಲ್ಲಿ ದಲಿತ ಯುವಕರ ಜವಾಬ್ದಾರಿ ಮತ್ತು ಸಮುದಾಯದ ಎಚ್ಚರಿಕೆಯ ಸಂದೇಶವನ್ನು ಸಾರುವಂತೆ ಸ್ವಾಭಿಮಾನದ ಬದುಕಿನ ನಿಲುವುವನ್ನು ಸ್ಪಷ್ಟಪಡಿಸುತ್ತದೆ. ತಂದೆ-ತಾಯಿಯರ ಜೀತಗಾರಿಕೆಯ ನೋವನ್ನು ಕಡಿಮೆ ಮಾಡಿ ಅವರ ನೋವು-ನಲಿವುಗಳನ್ನು ಪ್ರಾಮಾಣಿಕವಾಗಿ ಹಂಚಿಕೊಂಡರೆ ನೆಮ್ಮದಿಯ ಬದುಕು ಸಾಧ್ಯವಾಗುತ್ತದೆ ಎಂಬ ಆಶಯಗಳನ್ನು ದಲಿತ ಆತ್ಮಕಥೆಗಳು ಬಿಚ್ಚಿಡುತ್ತವೆ.

೩.೪. ಕೇರಿ, ಭೂಮಿ ಮತ್ತು ಜೀವಸಂಬಂಧ

ಭಾರತದಲ್ಲಿನ ಅನಿಷ್ಟಪದ್ಧತಿಗಳಲ್ಲಿ ಜಾತೀಯತೆಯು ಪ್ರಧಾನವಾದುದು. ಇದರಿಂದ ನಿಸರ್ಗದೊಳಗಿನ ಭೇದ ಸೃಷ್ಟಿಗೊಳ್ಳುತ್ತದೆ. ಉತ್ತಮ, ಅಧಮ ಎಂಬ ಜಾತಿ ಹಾಗೂ ವರ್ಗಗಳು ಕಂಪಾರ್ಟ್‌ಮೆಂಟ್‌ಗಳಾಗಿ ನಿಸರ್ಗದ ಮೇಲೆ ಒತ್ತಡ ಹೇರಲ್ಪಡುತ್ತವೆ. ಇಂಥ ಭೇದ ಪರಂಪರೆಗೆ ಊರುಕೇರಿಗಳು ಉತ್ತಮ ಉದಾಹರಣೆ. ಮನುಷ್ಯ ಜಾತಿ ವ್ಯವಸ್ಥೆಯಿಂದ ವಿಭಜನೆಗೊಂಡಿರುವುದಕ್ಕೆ ಇಡೀ ಭಾರತದಾದ್ಯಂತ ಕೋಟ್ಯಾಂತರ ನಿದರ್ಶನಗಳನ್ನು ನಾವು ಕಾಣಬಹುದು. ಈ ಜಾತಿವ್ಯವಸ್ಥೆಯ ಸಮಾಜದಲ್ಲಿ ದಲಿತರಿಗೆ ಕೇರಿ ಭೂಮಿ ಮತ್ತು ಹಲವು ಪ್ರಾಣಿ ಸಂಬಂಧದೊಂದಿಗೆ ಅವಿನಾಭಾವ ಸಂಬಂಧವನ್ನು ಬೆಸದುಕೊಂಡಿರುವುದನ್ನು ದಲಿತ ಸಮುದಾಯದಲ್ಲಿ ಗುರುತಿಸಬಹುದು. ಈ ಹಿನ್ನಲೆಯಲ್ಲಿ ಗಮನಿಸಿದಾಗ ದಲಿತ ಆತ್ಮಕಥನಕಾರರು ತಮ್ಮ ಊರುಕೇರಿ, ಭೂಮಿ ಹಾಗೂ ಜೀವಸಂಬಂಧದ ಚಿತ್ರಣಗಳನ್ನು ತಮ್ಮ ಆತ್ಮಕಥದಲ್ಲಿ ನೀಡಿದ್ದಾರೆ. ಪ್ರಾತಿನಿಧಿಕವಾಗಿ ಎಲ್ಲಪ್ಪ ಕೆ.ಕೆ.ಪುರ ಅವರು ನೀಡಿರುವ ಕೇರಿಯ ಚಿತ್ರಣವನ್ನು ನೋಡಿದರೆ ಅದು ಈ ನೆಲದ ಎಲ್ಲ ದಲಿತರ ಮನೆಯ ಸ್ಥಾನಮಾನ ಸಾಮಾನ್ಯವಾಗಿ ಇದೇ ರೀತಿಯದಾಗಿರುತ್ತದೆ: "ಇಲ್ಲಿ ಲಿಂಗವಂತ ರೆಡ್ಡಿಗಳ ನೂರಾರು ಮನೆಗಳಿದ್ದರೆ, ಉಪ್ಪಾರರವು ಮೂರು ಮನೆಗಳು, ಗಾಣಿಗರವು ಎರಡು, ಕೊರಚರವು ಹತ್ತು, ತಳವಾರದ್ದು ಒಂದು. ಮುಸ್ಲೀಮು ಎರಡು! ಹೆಚ್ಚು ಕಡಿಮೆ ಇವೆಲ್ಲ ಒಂದೊಂದಕ್ಕು ನಿಕಟ ಹತ್ತಿರ.., ಹತ್ತಿರ.., ಇರುವ ಓಣಿ, ಗಲ್ಲಿಗಳು! ಐದಾರು ಮಾರು ದೂರದಲ್ಲಿ ತಿಪ್ಪೆಗುಂಡಿ, ಸೀಮೆಜಾಲಿ, ಸೊಪ್ಪೆದಂಟಿನ ಕಣ, ಕುಂಟೆ ಬಯಲು ದೆಸೆಗೆ ಹೋಗುವ ಮಾರು ಹತ್ತಿರದಲ್ಲಿ ನಲವತ್ತು ಮಾದಿಗರ ಮನೆಗಳಿವೆ. ಮನೆಗಳೆಂದರೆ ಮಾಸಲು ಮಾಸಲು ಚಪ್ರ, ನೆರಿಕೆ, ಗುಡಿಸಲುಗಳು ಮುರಿದುಬಿದ್ದ ಹಾಳುಗೋಡೆಗಳು. ಅದ್ರ ಮೇಲೆ ಹಾರಾಕಿದ ತ್ವಗ್ಲುಗಳು, ದನದ ಮೂಳೆ, ಕೊಂಬುಗಳು, ತಲೆಕಾಯಿಗಳ ರಾಶಿರಾಶಿ ಅವುಗಳಿಗೆ

ಮುತ್ತಿ ಗುಯ್‌ಗುಡುವ ನೊಣಗಳು, ಕುರುಡು ಹಚ್ಚನೆ ನೊಣಗಳ ಹಿಂಡು ಹಿಂಡು ಸುಕ್ಕಾಡಿಗಳ ದಂಡು. ಕೋಳಿ ನಾಯಿಗಳ ಗುಂಪು, ಮುದುಕ ಮುಪ್ಪರ ಗೂರಲು ಧ್ವನಿ...... ಮಾಸಲು ಬಟ್ಟೆ, ಕೆದರಿದ ತಲೆಗಳಲ್ಲಿ ಹೇನು, ಸೀರು, ಕೂರೆಗಳ ತಾಂಡವ ನೃತ್ಯ.... ಮಳೆ ಬಂದರೆ ಇಲ್ಲಿ ನವಲ ಕೆರೆಕುಂಟೆಗಳು ತುಂಬಿ ಹರಿದಂತೆ ಕೇರಿ ಮುಳುಗುವ ದೃಶ್ಯ. ಕೆಸರಿನ ಗದ್ದೆಯಾಗಿ, ನಿತ್ಯ ಜಾರಿಕೆಬಂಡೆಯಾಟ. ಒಳ್ಳೇ ನರಕ ಸದೃಶ. ಮನೆಗಳ ಎರಡು ಸಾಲುಗಳಲ್ಲಿ ಗೆರೆ ಎಳೆದಂತಿವೆ. ಕೆಲವು ಮಣ್ಣಿನ, ಕಲ್ಲಿನ, ಹುಲ್ಲಿನ ಹಳೇ ಮನೆಗಳು ಇಲಿ, ಹೆಗ್ಗಣಗಳ ಗೂಡು, ಹದ್ದು, ಕಾಗೆ ಗೂಬೆ, ಕಣ್ಣುಕಪ್ಪೆ ಹಾಳು ಹಾಳು ಬಡಿಯುವ ಸುಡುಗಾಡು! ಇದನ್ನು ಮಾದಿರ್ಹಟ್ಟಿ, ಮಾದಿಗೇರಿ ಹಟ್ಟಿ, ಕೇರಿ, ಕೊಳೆಗೇರಿ ಊರು ಹೊರಗಿನವರೆಂದೂ., ಹರಳಯ್ಯನವರ ಕುಲದವರೆಂದೂ ಕರೆವರು. ಇಲ್ಲಿ ಎಲ್ಲವೂ ಅನ್ವರ್ಥವೇ."[೪೬] ಈ ಕೇರಿಯಲ್ಲಿನ ಜೀವಸಂಬಂಧಗಳ ಬಗ್ಗೆ ಆತ್ಮಕಥನಕಾರರು ಕಟ್ಟಿಕೊಟ್ಟಿದ್ದಾರೆ.

ಊರು-ಕೇರಿಗೆ ಜಲಚರಾದಿಗಳಿಗೆ ಜೀವನೋಪಯೋಗಿಯಾದ ಕೆರೆಗಳನ್ನು ಜಾತಿ ಮೂಲಕ ಅಳೆದು ಹಣೆಪಟ್ಟಿ ಹಾಕಿ ಸಹಜವಾದ ನಿಸರ್ಗ ಧರ್ಮದಿಂದ ಜೀವಪರವಾಗಿದ್ದನ್ನು ಜಾತಿಪಟ್ಟಿಗೆ ಸೇರಿಸಿಬಿಡುವುದು. ಕುಪ್ಪೆನಾಗರಾಜರು ತಮ್ಮ 'ಅಲೆಮಾರಿಯ ಅಂತರಂಗ'ದಲ್ಲಿ ದಾಖಲಿಸುವಂತೆ ತಮ್ಮ ಊರಿನಲ್ಲಿದ್ದ ಕೆರೆಗಳನ್ನು ವಿಭಜಿಸಿರುವುದು ಹೀಗೆ ಎಂದು ಹೇಳಿಕೊಂಡಿದ್ದಾರೆ:

೧. ಕುಪ್ಪೆ ಕೆರೆ ಸವರ್ಣೀಯರದ್ದು ; ಕೊಳಗಟ್ಟದ ಕೆರೆ ಹರಿಜನರಿಗೆ ಸೇರಿದ್ದು
೨. ಸವರ್ಣೀಯರ ಕೆರೆಗೆ ದಲಿತರು, ದಲಿತರ ಕೆರೆಗೆ ಸವರ್ಣೀಯರು ಬೇಟೆ ಆಡಲು ಬರುತ್ತಿರಲಿಲ್ಲ.
೩. ಹರಿಜನ ಕೇರಿಯವರು ತಮ್ಮ ಕೆರೆಯ ನೀರನ್ನು ಮಾತ್ರ ದನ ಕರು, ಬಟ್ಟೆ ತೊಳೆಯಲು, ಕೆಲವು ಸಂದರ್ಭದಲ್ಲಿ ಕುಡಿಯಲೂ ಬಳಸುತ್ತಾರೆ. ಆದರೆ ಸವರ್ಣೀಯರು ತಮ್ಮ ಕೆರೆಯಲ್ಲಿ ಮಾತ್ರವಲ್ಲದೆ ದಲಿತರ ಕೆರೆಯಲ್ಲಿ ದನ ಕರುಗಳಿಗೆ ನೀರು ಕುಡಿಸೋದು, ಮೈ ತೊಳೆಯೋದು ಮಾಡುತ್ತಾರೆ.

ಹೀಗೆ ಕೆರೆ ಮತ್ತು ಕೇರಿ ವಿಭಜನೆಯು ಜಾತಿನಿಷ್ಠವಾಗಿ ಜನವಿಭಜನೆಯೂ ಆಗಿಬಿಟ್ಟಿರುವುದು ಈ ದೇಶದ ಜಾತೀಯತೆಯ ದುರಂತ ಸಂಗತಿಯಾಗಿದೆ. ಮೇಲು ಜಾತಿಗಳು ಯಾವಾಗಲೂ ಕೆಳಜಾತಿಯವರ ಮೇಲೆ ಸರ್ವಾಧಿಕಾರದ ಸವಾರಿ ಮಾಡಲು ಯತ್ನಿಸುತ್ತವೆ. ಇದಕ್ಕೆ ಮತ್ತೊಂದು ನಿದರ್ಶನವಾಗಿ ಲಿಂಗಾಯಿತ ಈರಪ್ಪಾಜಿಯ ಜಾತಿ ಅಹಂಕಾರ ಪ್ರಸಂಗವನ್ನು ಗಮನಿಸಬಹುದು. "ಲಿಂಗಾಯಿತರ ಪುಟ್ಟನಂಜವ್ವ ಅವರ ಉದಾರತೆಯಿಂದ ದೊಂಬಿದಾಸರಿಗೆ ಕುಡಿಯುವ ನೀರಿಗೆ

ಸಹಾಯ ಮಾಡಿರುತ್ತಾರೆ. ಪುಟ್ಟನಂಜಮ್ಮ ಅವರ ಜಮೀನಿನ ಮೂಲೆಯೊಂದರಲ್ಲಿ ನೆಲಬಾವಿ ತೋಡಿ ನೀರಿನ ಬವಣೆ ನೀಗಿಸಿಕೊಳ್ಳುತ್ತಿದ್ದ ದಾಸರಿಗೆ ಜಾತಿದೌರ್ಜನ್ಯ ಸಮಸ್ಯೆ ಎದುರಾಗುತ್ತದೆ. ಪುಟ್ಟನಂಜಮ್ಮನವರಿಗೆ ಈರಪ್ಪಾಜಿ ಅಂತ ಒಬ್ಬ ಮಗ. ಅವನು ಸ್ವಲ್ಪ ಕೇಡಿಗ. ಒಂದು ದಿನ ಬೆಳಿಗ್ಗೆ ದೊಂಬಿದಾಸರ ಹೆಂಗಸರು ನೀರು ತರಲು ಹೋದಾಗ, ಈರಪ್ಪಾಜಿ ತನ್ನ ನಿತ್ಯದ ಕ್ರಿಯಾ ಕರ್ಮಗಳನ್ನು ಮುಗಿಸಲು ಬಂದು ಅವರ ಕುಡಿಯುವ ನೀರಿನ ಬಾವಿಯಲ್ಲಿ ತಿಕ ತೊಳೆಯುತ್ತಿರುವುದು ಕಂಡುಬರುತ್ತದೆ. ಇದನ್ನು ಕಂಡ ಹೆಂಗಸರು, 'ಏನು ಐನೋರೆ ನಾವು ಕುಡಿಯೋ ನೀರಲ್ಲಿ ತಿಕ ತೊಳಿತಿದ್ದೀರಲ್ಲಾ ನ್ಯಾಯಾನ ಅಂತ ಕೇಳಿದ್ರೆ ಹೋಗ್ರಮ್ಮಿ ಇದೇನು ನಿಮ್ಮಪ್ಪದೀರ ಜಾಗೀರಿನ? ನನ್ನ ಜಮೀನು, ನನ್ನ ಬಾವಿ ನಾನು ತಿಕನಾರ ತೊಳೀತೀನಿ ಏನಾರ ಮಾಡ್ತೀನಿ ನೀವು ಯಾರು ಕೇಳೋಕೆ.'[೪೭] ಹೀಗೆ ದಬಾಯಿಸುತ್ತಾನೆ. ಇಂಥ ಜಾತಿದೌರ್ಜನ್ಯದ ಅಹಂಕಾರದ ತುಳಿತಕ್ಕೆ ಸಿಕ್ಕಿದ ದುರಂತವನ್ನು ಆತ್ಮಕಥನಕಾರರು ದಾಖಲಿಸುತ್ತಾರೆ. ಈ ಬಗೆಯ ದೌರ್ಜನ್ಯಗಳು ಭಾರತ ದೇಶದಂತಹ ಜಾತಿ ವ್ಯವಸ್ಥೆಯ ಹಳ್ಳಿಗಳಲ್ಲಿ ಇಂದಿಗೂ ನಿರಂತರವಾಗಿ ವಿವಿಧ ಬಗೆಯ ಶೋಷಣೆಗಳು ನಡೆಯುತ್ತಿರುವುದನ್ನು ಸಾಂಕೇತಿಕವಾಗಿ ಆತ್ಮಕಥನಕಾರರು ದಾಖಲಿಸಿರುವುದು ದಲಿತೇತರರ ಜೀವನ ವ್ಯವಸ್ಥೆಗೆ ಹಿಡಿದ ಕೈ ಕನ್ನಡಿಯಾಗಿದೆ.

ಬಾಲ್ಯವೆಂಬುದು ಬಹಳಷ್ಟು ಜನರ ಬದುಕಿನಲ್ಲಿ ಸುಂದರವಾದ ಕ್ಷಣಗಳ ಮಧುರ ನೆನಪು. ಆದರೆ ದಲಿತ ಕೇರಿಯವರ ಬಾಲ್ಯವನ್ನು ಓದಿದಾಗ ಸಹಿಸಲು ಅಸಾಧ್ಯವಾದ ಸಂಕಟ ಆವರಿಸುತ್ತದೆ. ಕೇವಲ ಒಂದು ಲಾಡು ತಿನ್ನುವ ಸಹಜ ಆಸೆಗಾಗಿ ಹಿಡಿ ಹತ್ತಿ ಕದ್ದ ತಪ್ಪಿಗೆ ಮಾಲಗತ್ತಿ ಅವರು ಅನುಭವಿಸಿದ ಯಾತನೆ, ಜೀವ ತಲ್ಲಣಿಸಿದ ಬಗೆ ನಿಜಕ್ಕೂ ಅಸಹನೀಯವಾದದ್ದು. ಈ ರೀತಿಯ ಬದುಕು ದಮನಿತರಿಗೆ ಸಾರ್ವತ್ರಿಕವಾದದ್ದು ಎಂಬುದು ಅಷ್ಟೇ ಸತ್ಯ. "ನಿಮ್ಮ ಹುಟ್ಟು ಗುಣ ಹ್ಯಾಂಗ ಬಿಟ್ಟೀರಿ? ದನದ ಚರ್ಮ ಸುಲ್ದು ತೆಗ್ದಂಗ ನಿಮ್ಮ ಚರ್ಮಾ ಸುಲ್ದು ತೆಗಿಬೇಕು."[೪೮] ಎಂಬ ಮಾತುಗಳನ್ನಾಡುತ್ತಲೆ ತಂಗಡಗಿಯ ಟಾರು ರೋಡಿನ ಮೇಲೆ ಹಾಕಿ ಬಾರಕೋಲಿನಿಂದ ಹೊಡೆಯುವ ಕ್ರೌರ್ಯ, ಯಾಜಮಾನ್ಯ ಸಂಸ್ಕೃತಿಯ ಅಟ್ಟಹಾಸವನ್ನು ಎಳೆಎಳೆಯಾಗಿ ಬಿಚ್ಚಿಡುತ್ತದೆ. ಈ ಎಲ್ಲ ಬವಣೆಗಳ ಮಧ್ಯೆಯೂ ಬದುಕನ್ನು ಹಸನು ಮಾಡಿಕೊಳ್ಳುವ, ಶೋಧಿಸುವ, ಏನೆಲ್ಲ ಸಂಕಷ್ಟಗಳಿಗೆ ಸವಾಲೊಡ್ಡುವ, ಆಯಿಯ ಅಳುದನಿಗೆ ಕೊನೆಯ ವಿದಾಯ ಹೇಳುವ ಗಟ್ಟಿತನ, ಮತ್ತೊಂದು ಕಡೆ ಹರೆಯವೆಂಬ ಸೋಜಿಗ ತಂದೊಡ್ಡುವ ಭ್ರಮೆಗಳು, ಬದುಕಿನ ತಲ್ಲಣಗಳು, ಸಹಜವಾಗಿ ಉಲ್ಬಣಿಸುವ ಒಳಗಿನೊಳಗಿನ ಉನ್ಮಾದಗಳನ್ನು ಗೆದ್ದು ನಿಲ್ಲುವ ಬಗೆ ವಿಶಿಷ್ಟವಾಗಿ ಕಟ್ಟಿಕೊಡುತ್ತಾರೆ. "ರಾತ್ರಿಯಾದರೆ ಸಾಕು ಕೇರಿಗೆ ಜೀವ ಬರುತ್ತಿತ್ತು. ಕುಡಿಯುವ,

ತೆಕ್ಕೆಗೆ ಬಿದ್ದು ಅಳುವ, ನೆಲ ಬಡಿದು ಶಾಪ ಕೊಡುವ, ಮಣ್ಣು ತೂರುವ, ಕಚ್ಚೆ ಹಾಕಿ ಕದನಕ್ಕೆ ನಿಲ್ಲುವ, ಕಚಾ ಕಚಿ ಕೇಶಾ ಕೇಶಿ ಯುದ್ಧಗಳು ನಡೆಯುತ್ತಿದ್ದವು."[೪೯] ಈ ರೀತಿಯ ಪರಿಸರ ಕೇವಲ ಒಂದು ಕೇರಿಯದಲ್ಲ, ಬಹುಶಃ ಅದು ಭವ್ಯ ಭಾರತದ ಸಮಸ್ತ ದಲಿತ ಕೇರಿಗಳದ್ದೂ ಹೌದು. ಈ ಗೌಜು ಗದ್ದಲದ ಮಧ್ಯೆ ಬೀದಿ ದೀಪದ ಕಂಬದ ಕೆಳಗೆ ವಿದ್ಯುತ್ ಬರುವ ನಿರೀಕ್ಷೆಯಲ್ಲೆ ಓದುವ, ಬದುಕನ್ನು ಕಟ್ಟಿಕೊಳ್ಳಲು ಶ್ರಮಿಸುವ ಲೇಖಕರ ಮನಸ್ಸು ಎಂದಿಗೂ ಮಾದರಿಯಾದುದು. ರಾತ್ರಿ ಸೂಳೆಗೇರಿಗೆ ಮೋಜು ಮಾಡಲು ವೇಷ ಮರೆಸಿಕೊಂಡು ಬರುವ ಊರ ಸಿರಿವಂತರು ತಮ್ಮ ಗುಟ್ಟನ್ನು ಮುಚ್ಚಿಕೊಳ್ಳಲು ದೀಪ ಒಡೆಯುವ ದೌರ್ಜನ್ಯದ ಸ್ಥಿತಿಯಾಗಲಿ, ತಾವು ಕದ್ದು ಬೀಡಿ ಸೇದುವುದು ಯಾರಿಗೂ ಗೊತ್ತಾಗದಿರಲೆಂದು ಕಂಬ ಅಲುಗಾಡಿಸಿ ದೀಪ ಹತ್ತದಂತೆ ಮಾಡುವವರಾಗಲಿ, ಇವು ಓದುವ ಮನಸ್ಸಿಗೆ ತಂದೊಡ್ಡುವ ಆಘಾತ ಸಾಮಾನ್ಯವಾದುದೆ? ಇಲ್ಲಿನ ಪ್ರತಿಯೊಂದು ಘಟನೆಯೂ ನಮ್ಮೊಳಗಿನ ಚೇತನದ ಇರುವಿಕೆಯನ್ನು ಅಲ್ಲಾಡಿಸುತ್ತದೆ, ಯೋಚನೆಗೆ ಹಚ್ಚುತ್ತದೆ. "ನಡುರಾತ್ರಿಯಲ್ಲಿ ಕುಳಿತು ಓದುವ ನನ್ನ ಓದು ಊರವರಿಗೆ ಶಾಪವಾಗಿದ್ದರೂ ಅವರು ಕೊಡುವ ಕಿರುಕುಳ ನನಗೆ ಇನ್ನಷ್ಟು ರಾತ್ರಿಯೇ ಓದುವಂತೆ ಪ್ರೇರೇಪಿಸಿತು."[೫೦] ಎಂದು ದಾಖಲಿಸುತ್ತಾರೆ. ಆದರೆ ಬಹಳಷ್ಟು ಸಾರಿ ಬದುಕಿನಲ್ಲಿ ಬಂದೊದುಗುವ ಸವಾಲುಗಳು ನಮ್ಮನ್ನು ಖಿನ್ನರನ್ನಾಗಿಸುತ್ತವೆ. ಶಕ್ತಿ ಕುಂದಿಸುತ್ತವೆ. ಇಲ್ಲವೆ ದಾರಿ ತಪ್ಪಿಸುತ್ತವೆ. ಆದರೆ ಈ ಆತ್ಮಕಥನಕಾರರು ಮಾತ್ರ ಅದನ್ನು ಆರೋಗ್ಯಕರವಾಗಿ ಸ್ವೀಕರಿಸುತ್ತಾರೆ. ಹಾಗೇಯೇ ಓದುವ ಇಚ್ಛಾಶಕ್ತಿಯನ್ನು ದುಪ್ಪಟ್ಟಾಗಿಸಿಕೊಳ್ಳುತ್ತಾರೆ.

ಯಾವುದೋ ಒಂದು ಕಾಲದಲ್ಲಿ ದಲಿತರ ಊರುಕೇರಿಗಳಿಗೆ 'ಬರ' ಬರಸಿಡಿಲನಂತೆ ಬಡಿದಾಗ ದಲಿತ ಜೀವಗಳು ತತ್ತರಸಿ ಹೋಗಿವೆ. ಬರದಿಂದಾಗಿ ದಲಿತರು ಮಾತ್ರವಲ್ಲದೆ ಇಡೀ ಊರಿಗೆ ಊರೇ ತತ್ತರಿಸುತ್ತಿತ್ತು. ಸಿಕ್ಕಸಿಕ್ಕ ಸೊಪ್ಪುಸೊದೆಗಳನ್ನು ತಿಂದು ಹಸಿವು ನೀಗಿಸಿಕೊಳ್ಳಬೇಕಾಗಿತ್ತು. ಬರದ ಕಾರಣಕ್ಕಾಗಿ ಸರ್ಕಾರ ವ್ಯವಸ್ಥೆ ಮಾಡಿದ್ದ ಉಪ್ಪಿಟ್ಟು ಮತ್ತು ಪೌಡರ್ ಹಾಲನ್ನು ನಂಬಿ ಊರು ಜೀವ ಉಳಿಸಿಕೊಳ್ಳಬೇಕಾಗಿತ್ತು. ಊರಿನ ನಡುವೆ ಇದ್ದ ಚಾವಡಿಯಲ್ಲಿ ಉಪ್ಪಿಟ್ಟು ಮತ್ತು ಪೌಡರ್ ಹಾಲನ್ನು ಮಾಡಿ ಮಧ್ಯಾಹ್ನದ ಹೊತ್ತಿಗೆ ಹಂಚುತ್ತಿದ್ದರು. ಇಂಥ ಅನುಭವ ಕಥನವೊಂದನ್ನು ತುಂಬಾಡಿ ರಾಮಯ್ಯ ಅವರು ಕರುಳು ಚುರುಕ್ ಅನ್ನುವಂತೆ ನಿರೂಪಿಸಿದ್ದಾರೆ: "ಆಗ ನಮ್ಮೂರಿನ ಎಂಟು-ಹತ್ತು ಮನೆಗಳವರನ್ನು ಬಿಟ್ಟರೆ ಉಳಿದೆಲ್ಲಾ ಮನೆಗಳೂ ಸರ್ಕಾರ ಕೊಡುವ ಉಪ್ಪಿಟ್ಟನ್ನೇ ಅವಲಂಬಿಸಿದ್ದವು. ಉಪ್ಪಿಟ್ಟು ಹಂಚುವಾಗ ಹಸಿವಿನಿಂದ ಬರಗೆಟ್ಟಿರುತ್ತಿದ್ದ ನಮ್ಮ ಜನ, ಉಪ್ಪಿಟ್ಟಿಗಾಗಿ ಒಬ್ಬರ ಮೇಲೆ ಒಬ್ಬರು ಬಿದ್ದು ಕೈಯೊಡ್ಡುತ್ತಿದ್ದರು. ಆಗಿನ

ಬರಗಾಲವಂತು ನಮ್ಮೂರಿನ ಜನಗಳ ಬದುಕುವ ಆಶೆಯನ್ನೇ ಕಮರಿಸಿತ್ತು. ಆದರೆ ಉಪ್ಪಿಟ್ಟು ಮಾತ್ರ ನಮ್ಮೆಲ್ಲರ ಜೀವ ಉಳಿಸಿತ್ತು. ಉಪ್ಪಿಟ್ಟು ಹಂಚುತ್ತಿದ್ದ ನೀರಗಂಟಿ ಮುದ್ದಪ್ಪ, ಬಾಂಡಲಿಯನ್ನೇ ತಿನ್ನುವಂತೆ ಮೇಲೆ ಬೀಳುತ್ತಿದ್ದ ಜನರ ಕಡೆ ಉಪ್ಪಿಟ್ಟನ್ನು ಬೊಗಸೆಯಲ್ಲಿ ಎರಚುತ್ತಿದ್ದ, ನಮ್ಮ ತಲೆ ಮತ್ತು ಮೈಮೇಲೆ ಬಿದ್ದಿರುತ್ತಿದ್ದ ಉಪ್ಪಿಟ್ಟಿನ ಅಗಳುಗಳನ್ನು ಕೆಳಗೆ ಬೀಳದಂತೆ ನಾವು ಎಚ್ಚರಿಕೆಯಿಂದ ಆಯ್ದುಕೊಂಡು ತಿನ್ನುತ್ತಿದ್ದೆವು. ಮಳೆ–ಬೆಳೆ ಇಲ್ಲದ್ದರಿಂದ, ಹಬ್ಬ ಹರಿದಿನದಲ್ಲೂ ಸಹ ಒಂದು ತುತ್ತು ಅನ್ನವೂ ಸಿಗದಂತಹ ಸ್ಥಿತಿ ಉಂಟಾಯಿತು. ಸರ್ಕಾರ ಹೊಲಗಳಲ್ಲಿ ಮಟ್ಟಿ ತಗೆಸುವ ಕೂಲಿ ಕೆಲಸ ಹಮ್ಮಿಕೊಂಡು ಜನರಿಗೆ ತಾತ್ಕಾಲಿಕ ಉದ್ಯೋಗವನ್ನು ಒದಗಿಸಿತು. ಕೂಲಿಗೆ ಹಣ ಕೊಡುವ ಬದಲು ಮೈದಾಹಿಟ್ಟನ್ನು ಕೊಡುತ್ತಿದ್ದರು. ಸರ್ಕಾರ ಕೊಡುತ್ತಿದ್ದ ಮೈದಾಹಿಟ್ಟನ್ನು ಹೇಗೆ ಬಳಸಬೇಕೆಂದು ತಿಳಿಯದ ನಮ್ಮ ಜನ, ಮೈದಾಹಿಟ್ಟಿಗೆ ಬೆಲ್ಲಬೆರಸಿ ಅಂಬಲಿ ಮಾಡಿಕೊಂಡು ಕುಡಿಯುತ್ತಿದ್ದರು. ಆಗ ಅಂಗಡಿಗಳಲ್ಲಿ ಬಟಾಣಿ ಹೆಚ್ಚು ಸಿಕ್ಕುತ್ತಿದ್ದರಿಂದ, ಜನ ಬಟಾಣಿ ತಿಂದು ಜೀವ ಉಳಿಸಿಕೊಳ್ಳುವಂತಾಗಿತ್ತು. ಆದ್ದರಿಂದ ಆ ಬರಗಾಲವನ್ನು ಜನ 'ಬಟಾಣಿಬರ'ವೆಂದೂ ಕರೆಯುತ್ತಿದ್ದರು."[೩೧] ಇಂಥ ಬರಗಾಲದ ಅನುಭವಗಳನ್ನು ಈಗಲೂ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಈ ಬಗೆಯ ಬರಗಾಲಗಳನ್ನು ಜನಸಾಮಾನ್ಯರು ಎದುರಿಸಿ ಉತ್ತಮವಾದ ಜೀವನವನ್ನು ನಡೆಸಬೇಕೆಂಬ ಆಶಯದಿಂದ ಸಿದ್ದರಾಮಯ್ಯನವರ ಸರ್ಕಾರ ಅನ್ನಭಾಗ್ಯದ ಯೋಜನೆಯನ್ನು ಜಾರಿಗೆ ತಂದಿದೆ ಎಂದು ಅರ್ಥೈಸಬಹುದಾಗಿದೆ.

ಕೆ.ಗೋವಿಂದರಾಜು ಅವರು 'ಮನವಿಲ್ಲದವರ ಮಧ್ಯೆ' ಆತ್ಮಕಥೆಯಲ್ಲಿ ಮೇಲು ಜಾತಿಗಳ ಹಂಗಿಲ್ಲದ ತಮ್ಮ ಹುಟ್ಟೂರಾದ 'ದೊಡ್ಡೊಲಗೇರಿ'ಯ ಸಾಮಾಜಿಕ ವ್ಯವಸ್ಥೆಯ ಕೇರಿ ಸಂಬಂಧವನ್ನು ಅಭಿಮಾನಪೂರ್ವಕವಾಗಿ ಅನಾವರಣಗೊಳಿಸಿದ್ದಾರೆ. ಅಂದಿನ ದೊಡ್ಡೊಲಗೇರಿ ಇಂದು ಮೈಸೂರಿನ ಮಧ್ಯೆ ಭಾಗದಲ್ಲಿರುವ ಅಶೋಕಪುರಂ ಆಗಿರುವುದು ಕುತೂಹಲಕಾರಿಯಾಗಿದೆ. ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ ಈ ಊರಲ್ಲಿ, ಇಡೀ ಕರ್ನಾಟಕದಲ್ಲೇ ಅತಿ ಹೆಚ್ಚು ಹೊಲೆಯರು ವಾಸಿಸುತ್ತಿದ್ದರು. ಇದಕ್ಕಾಗಿ 'ದಲಿತರ ರಾಜಧಾನಿ' ಎಂಬ ಹೆಸರನ್ನು ಪಡೆದಿತ್ತು. ಈ ಊರಿನ ಜನ ಮೂಲತಃ ವಿಜಯನಗರ, ಮೇಲುಕೋಟೆ, ಪಿರಿಯಾಪಟ್ಟಣ, ನಂಜನಗೂಡು ಇನ್ನೂ ಮೊದಲಾದ ಕಡೆಗಳಿಂದ ವಲಸೆ ಬಂದವರು. ಈಗಿರುವ ಸ್ಥಳಕ್ಕೆ ಬರುವುದಕ್ಕೂ ಮೊದಲು ಮೈಸೂರು ಮಹಾರಾಜರ ನಿರ್ದೇಶನದಂತೆ ಅರಮನೆಯ ರಕ್ಷಣೆ ಕಾರ್ಯ ನಿರ್ವಹಿಸುತ್ತಿದ್ದು, ನಗರದ ಸಯ್ಯಾಜಿರಾವ್ ರಸ್ತೆಯ ಆಚೆಯ ಬೀದಿಗಳಲ್ಲಿ ವಾಸಿಸುತ್ತಿದ್ದವರು. ಮರದ ಮೈಸೂರು

ಅರಮನೆಗೆ ಬೆಂಕಿಬಿದ್ದಾಗ ಈ ಹೊಲೆಯರೆಲ್ಲ ಪ್ರಾಣದ ಹಂಗು ತೊರೆದು ಸಂರಕ್ಷಿಸಲು ಹೋರಾಡಿದವರು. ಇದನ್ನು ಮೆಚ್ಚಿದ ಮಹಾರಾಜರು ಈ ಕುಟುಂಬಗಳಿಗೆ ಹಲವಾರು ರೀತಿಯಲ್ಲಿ ಸಹಾಯ ಮಾಡಿದ್ದರು, ಈಗಿನ ಅಶೋಕಪುರಂ ಎಂಬ ಸ್ಥಳವನ್ನು ವಾಸಕ್ಕಾಗಿ ಒದಗಿಸಿಕೊಟ್ಟರು. ಈ ಮೊದಲಾದ ವಿಷಯಗಳನ್ನು ಲೇಖಕರು ನಿರೂಪಿಸಿದ್ದಾರೆ.

ದೊಡ್ಡೊಲಗೇರಿಯ ಸಾಮಾಜಿಕ ಸಂರಚನೆ ಹಾಗೂ ಸಂಬಂಧಗಳ ಸ್ವರೂಪವನ್ನು ಅತ್ಯಂತ ದೀರ್ಘವಾಗಿ ನಿರೂಪಿಸುವ ಕ್ರಮ ವಿಶೇಷವಾಗಿದೆ. ದಟ್ಟವಾದ ಮನುಷ್ಯ ಸಂಬಂಧಗಳು ಹಾಗೂ ಶ್ರೀಮಂತವಾದ ಸಾಂಸ್ಕೃತಿಕ ವಿವರಗಳು ಈ ಕೇರಿಯ ವೈಭವದ ದಿನಗಳನ್ನು ನೆನಪಿಸುತ್ತವೆ. ಇಲ್ಲಿ ಒಂದು ಕಾಲಕ್ಕೆ ೧೩ ಬೀದಿಗಳು, ೦೭ ಅಡ್ಡರಸ್ತೆಗಳು, ೨೧ ದೇವ ಮಂದಿರಗಳು ಇದ್ದವು. ಆ ೧೩ ಬೀದಿಗಳಲ್ಲಿ ಬೇರೆ ಬೇರೆ ಜಾತಿ ವೃತ್ತಿಗಳ ಜನರು ವಾಸಿಸುತ್ತಿದ್ದು, ಈ ಎಲ್ಲಾ ಗುಂಪುಗಳಿಗೂ ಪ್ರತ್ಯೇಕ ಯಜಮಾನರು ಇರುತ್ತಿದ್ದರು. ಜಲಗಾರರು, ಹೊಲೆಯರು, ದೊಂಬರು, ಚಕ್ಕರು ಇವರೇ ಮೊದಲಾದ ಸಮುದಾಯದ ಜನ ಗಣಗಳಲ್ಲಿ ತಮ್ಮ ತಮ್ಮ ವಿವಾದಗಳನ್ನು ತಮ್ಮ ಯಜಮಾನನ ಸಮ್ಮುಖದಲ್ಲೇ ಪರಿಹರಿಸಿಕೊಳ್ಳುವ ಪರಿಪಾಠವಿತ್ತು. ಅಲ್ಲಿ ವಿವಾದ ಬಗೆಹರಿಯದಿದ್ದರೆ 'ಊರೊಟ್ಟಿನ ಕೂಟಕ್ಕೆ' ಒಯ್ಯುತ್ತಿದ್ದರು. ಊರೊಟ್ಟಿನ ಕೂಟ ಎಂದರೆ – 'ಊರಿನ ಪ್ರತೀ ಬೀದಿಯಿಂದ ಒಬ್ಬೊಬ್ಬ ಯಜಮಾನನನ್ನು ಆಯ್ದು ಮಾಡಿದ ಒಂದು ಉನ್ನತ ಮಟ್ಟದ ಸಮಿತಿ'. ಈ ಕೂಟದಲ್ಲಿ ಮುಖ್ಯವಾಗಿ ಊರಿನ ಹಿತದೃಷ್ಟಿ, ಶ್ರೇಯೋಭಿವೃದ್ಧಿ, ಐಕ್ಯತೆ ಇವು ಮುಖ್ಯವಾಗಿದ್ದು, ಇವುಗಳ ತಳಹದಿಯ ಮೇಲೆಯೇ ನ್ಯಾಯ ತೀರ್ಮಾನಗಳಾಗುತ್ತಿದ್ದವು. ತಪ್ಪು ಮಾಡಿದವರಿಗೆ ಕೂಡ ದಂಡ ಹಾಕುವುದು, ಎದುರು ಪಾರ್ಟಿಯವರಿಗೆ ಕಾಲಿಗೆ ಬೀಳಿಸುವುದು, ಕಂಬಕ್ಕೆ ಕಟ್ಟಿ ಹೊಡೆಸುವುದು, ಬೀದಿಯಿಂದ ಬಹಿಷ್ಕಾರ ಹಾಕುವುದು, ಬೆಂಕಿ–ನೀರು ಕೊಡದೇ ಇರುವುದು, ಸಂಬಂಧ ಬೆಳಸದೇ ಇರುವುದು ಮೊದಲಾದ ಶಿಕ್ಷೆಗಳನ್ನು ನೀಡುತ್ತಿತ್ತು. ಇಂಥ ಶಿಕ್ಷೆಗಳಲ್ಲಿ ಸಾಮಾಜಿಕ ಬಹಿಷ್ಕಾರಕ್ಕೆ ಜನ ಬಹಳ ಹೆದರುತ್ತಿದ್ದರು. ಇಂಥ ನ್ಯಾಯ ವ್ಯವಸ್ಥೆಯ ಬಗ್ಗೆ ಲೇಖಕರ ಅಭಿಮಾನದ ಮಾತುಗಳು ಹೀಗಿವೆ: "ನಮ್ಮೂರ ನ್ಯಾಯವೆಂದರೆ, ಲಿಖಿತ ಸಂವಿಧಾನವಿದ್ದಂತೆ. ಅಗೋಚರ ಕಾನೂನು ಕಟ್ಟಳೆಗಳು ನಮ್ಮೂರಿನವರನ್ನು ನಿಯಂತ್ರಿಸುತ್ತಿದ್ದವು. ಕೆಟ್ಟದ್ದನ್ನು ಯೋಚಿಸಲು, ಕೆಟ್ಟದ್ದನ್ನು ಮಾಡಲು ನೈತಿಕ ಹಿಂಜರಿಕೆಯಿತ್ತು. ನಮ್ಮೂರಿನ ಸಾಮಾಜಿಕ ನೀತಿ ನಿಯಮಗಳು ಅಷ್ಟೊಂದು ಸೂತ್ರ ಬದ್ಧವಾಗಿದ್ದವು."[೫೨] ಈ ಬಗೆಯ ಊರು ಕೇರಿಯ ಸಂಬಂಧ ದಿನ ಕಳೆದಂತೆ ಆಧುನಿಕ ವ್ಯವಸ್ಥೆಗೆ ಬದಲಾದುದರ ಬಗ್ಗೆ ಲೇಖಕರಲ್ಲಿ ಗಾಢವಾದ ವಿಷಾದವಿದೆ.

ದೊಡ್ಡೊಲಗೇರಿಯು ದಲಿತರ ಸಾಂಸ್ಕೃತಿಕ ಶ್ರೀಮಂತಿಕೆಯ ತಾಣ. ಭಿನ್ನ ಭಿನ್ನ ಸಮುದಾಯಗಳಿಗೆ ಬಗೆ ಬಗೆಯ ದೇವರುಗಳು. ಅವುಗಳಿಗೆ ಹೊಂದಿಕೊಂಡಂತೆ ನಂಬಿಕೆ–ಸಂಪ್ರದಾಯ–ಆಚರಣೆಗಳು. ರಾಮ, ಸೀತಾದೇವಿಯರಿಂದ ಮೊದಲುಗೊಂಡು ಶನೇಶ್ವರ ಶಂಭುಲಿಂಗೇಶ್ವರ, ಕಾಳಿಕಾಂಬ, ಮಾದೇಶ್ವರ, ಮಂಚಮ್ಮ, ದಂಡಮ್ಮ ಇಂಥ ಹಲವಾರು ದೇವರುಗಳು ಇಲ್ಲಿವೆ. ಇಲ್ಲಿರುವ ದೇವರುಗಳಿಗೆ ಸಾವಿರಾರು ಜನ ಒಕ್ಕಲು, ಹತ್ತಾರು ಪೂಜಾ ವಿಧಾನಗಳು ನಡೆಯುತ್ತಿರುತ್ತವೆ. ಇದಲ್ಲದೆ ಶಾಲೆಗಳು, ಆಸ್ಪತ್ರೆಗಳು, ಅರಣ್ಯಭವನ, ರೇಷ್ಮೆ ಕಾರ್ಖಾನೆ, ಚಿತ್ರಮಂದಿರ ಮೊದಲಾದವುಗಳ ಚಿತ್ರಣದ ಅವಿನಾಭಾವ ಸಂಬಂಧವನ್ನು ದಾಖಲಿಸಿದ್ದಾರೆ. ಇಷ್ಟೇ ಅಲ್ಲದೆ ಮೈಸೂರು ಮಹಾರಾಜರ ಕೃಪೆಯಿಂದಾಗಿ ಭೂಮಿ ಪಡೆದು ಕೃಷಿ ಆರಂಭಿಸಿದ್ದು, ಆ ಕೃಷಿಯ ಭಾಗವಾಗಿ ವೀಳ್ಯದ ಎಲೆ ಬೆಳೆಯಲು ಆರಂಭಿಸಿ ಆರ್ಥಿಕ ಹಾಗೂ ಮಾನಸಿಕ ಸಾಮರ್ಥ್ಯ ಹೆಚ್ಚಿಸಿಕೊಂಡಿದ್ದು, ಇವೆಲ್ಲವೂ ದೊಡ್ಡೊಲಗೇರಿಯ ಧನಾತ್ಮಕ ಬೆಳವಣಿಗೆಗಳಾಗಿವೆ. ಆತ್ಮಕಥನಕಾರರ ತಾಯಿಯ ಕುಟುಂಬ ಉತ್ತಮ ಸ್ಥಿತಿಯಲ್ಲಿದೆ. ಜಾತಿ ವ್ಯವಸ್ಥೆಯ ಶ್ರೇಣೀಕರಣದಲ್ಲಿ ಕೆಳಜಾತಿಯ ಸ್ಥಾನದಲ್ಲಿರುವ ಈ ಕುಟುಂಬ ಸಾಮಾಜಿಕ ಹಾಗೂ ಆರ್ಥಿಕವಾಗಿ ಸಬಲೀಕರಣ ಹೊಂದಿರುವುದು ಆಶ್ಚರ್ಯಕರ ಸಂಗತಿ. ಆತ್ಮಕಥನಕಾರರ ತಾತ ಊರಲ್ಲಿ ಸರ್ಕಾರದ ಪರವಾಗಿ ಕಂದಾಯ ವಸೂಲಿ ಮಾಡುವ ಪಟೇಲನಾಗಿದ್ದ. ಆ ಕಾರಣಕ್ಕಾಗಿ ಮನೆಯಲ್ಲಿ ಉತ್ತಮ ಶಿಕ್ಷಣ ಪಡೆದ ಮಕ್ಕಳಿದ್ದರು. ಆದರೆ ಆತ್ಮಕಥನಕಾರರ ತಂದೆಗೆ ಇಂಥ ಯಾವ ಹಿನ್ನೆಲೆಯೂ ಇರಲಿಲ್ಲ. ಚಕ್ಕೂರಿನ ಮಂತ್ರಗಾರ ಕೃಷ್ಣಪ್ಪನ ಕುಟುಂಬ ಹತ್ತಾರು ತಾಪತ್ರಾಯಗಳಲ್ಲಿ ನರಳುತ್ತಿದ್ದ ಕುಟುಂಬ. ಶಾಸ್ತ್ರವನ್ನೇ ಬಂಡವಾಳವಾಗಿಸಿಕೊಂಡು ಬದುಕು ಸಾಗಿಸುವ ಸ್ಥಿತಿ ಇವರದಾಗಿತ್ತು. ಇಂಥ ವೈರುಧ್ಯದ ನಡುವೆ ವೈಚಾರಿಕ ಪ್ರಜ್ಞೆ ಹಾಗೂ ಸಾಮಾಜಿಕ ಕಾಳಜಿಯೊಂದಿಗೆ ಬೆಳೆದ ಉನ್ನತ ಬದುಕಿನ ನಡೆ ಸೋಜಿಗ ತರಿಸುವಂಥದಾಗಿದೆ.

೩.೪.೧ ಭೂಮಿ, ಬೇಸಾಯ ಮತ್ತು ದಲಿತರ ಪ್ರತಿನಿಧೀಕರಣ

ದಲಿತರಿಗೆ 'ಭೂಮಿ'ಯ ಒಡೆತನ ಬಹುದೂರದ ಮಾತು. ದಲಿತರಿಗೆ ಸ್ವಂತ ಭೂಮಿಯನ್ನು ಹೊಂದಿ ಬೇಸಾಯ ಮಾಡಬೇಕೆನ್ನುವುದು ಬಹು ದಿನಗಳ ಕನಸು. ಈ ನಿಟ್ಟಿನಲ್ಲಿ ದಲಿತರು ನಿಷ್ಠಾವಂತರಾಗಿ ದುಡಿದಿದ್ದಾರೆ, ಅಂತಃಕರಣ ಕರಗಿಸುವಂತೆ ನಿರೀಕ್ಷಕರಾಗಿದ್ದಾರೆ. ಈ ಪೂರ್ವದಲ್ಲಿ ಇತರ ಜಮೀನಿನಲ್ಲಿ ಜೀತಗಾರಿಕೆಯ ಕಾರಣದಿಂದ 'ವಾರ'ಕ್ಕೆ ಬೇಸಾಯ ಮಾಡುತ್ತಿದ್ದರು. ಉಳ್ಳವರಿಂದ ಇಂತಿಷ್ಟು ಜಮೀನನ್ನು ಪಡೆದು, ಆ ಜಮೀನಿನಲ್ಲಿ ವ್ಯವಸಾಯ ಮಾಡಿ ಫಸಲಿನಲ್ಲಿ ಇಂತಿಷ್ಟು ಭಾಗವನ್ನು ಭೂ ಒಡೆಯರಿಗೆ, ಇಂತಿಷ್ಟು ಭಾಗವನ್ನು ಬೇಸಾಯಗಾರ ದಲಿತರಿಗೆ

ನೀಡುತ್ತಿದ್ದರು. ಸಾಮಾನ್ಯವಾಗಿ ಬೇರೆಯವರ ಅದರಲ್ಲೂ ಬ್ರಾಹ್ಮಣರ, ಗೌಡರ ಜಮೀನನ್ನು ವಾರಕ್ಕೆ ವ್ಯವಸಾಯ ಮಾಡುತ್ತಿದ್ದರು. ವಾರ ಅಂದರೆ ಅವರ ಜಮೀನಿನಲ್ಲಿ ಬೆಳೆದಿದ್ದರಲ್ಲಿ ಅವರಿಗೆ ಅರ್ಧ, ದಲಿತರಿಗೆ ಅರ್ಧ. ಅವರ ಹೊಲ ಅಥವಾ ಒಕ್ಕಣೆ ಮಾಡಿದ ಮೇಲೆ ಕಣದಲ್ಲಿಯೆ ಸಮವಾಗಿ ಅಳತೆಮಾಡಿ ಜಮೀನಿನ ಒಡೆಯರಿಗೆ ಕೊಡುತ್ತಿದ್ದರು. ಒಂದು ಸೇರು ಹೆಚ್ಚಿಗೆ ಬಂದರೂ ಅದರಲ್ಲೂ ಕೊಡುತ್ತಿದ್ದರು. ಮೇಲಾಗಿ ಇವರು ಅಳತೆ ಮಾಡುವಾಗ ಜಮೀನಿನ ಒಡೆಯರು ಯಾರೂ ಇರುತ್ತಿರಲಿಲ್ಲ. ಅಂತಹ ಧರ್ಮಿಷ್ಠರಾಗಿದ್ದವರು ದಲಿತರು. ಇಂಥ ದಲಿತ ಬದುಕನ್ನು ತಮ್ಮ ತಲೆಮಾರಿನವರ ಹಾಗೂ ಹಿರಿಯರ ಅನುಭವದ ಹಿನ್ನೆಲೆಯಲ್ಲಿ ತಿಳಿದು ಹಾಗೂ ಸ್ವತಃ ಅನುಭವದಿಂದ ಅರಿತ ದಲಿತ ಆತ್ಮಕಥನಕಾರರು ಭೂಮಿಯ ದುಡಿಮೆ–ಭೂಮಿಯ ಕನಸುಗಳಿರುವ ದಲಿತರ ಜೀವನ ಸಂಬಂಧವನ್ನು ನಿರೂಪಿಸಿದ್ದಾರೆ.

ದಲಿತರು ತಮ್ಮ ಇತರ ಕಾಯಕಗಳ ನಡುವೆ ಬೇಸಾಯವನ್ನೂ ಮಾಡುತ್ತಿದ್ದರು. ಇದು ದಲಿತರು ಮತ್ತು ಭೂಮಿ ಸಂಬಂಧದ ಮಹತ್ವವನ್ನು ತಿಳಿಸುವಂತದ್ದು. ತುಂಬಾಡಿ ರಾಮಯ್ಯ ಅವರು ತಮ್ಮ ಕುಟುಂಬದ ಬೇಸಾಯದ ಕನಸು ಮತ್ತು ಕಾಯಕ ಪರಂಪರೆಯನ್ನು ಹೀಗೆ ದಾಖಲಿಸಿದ್ದಾರೆ: “ಇಷ್ಟೆಲ್ಲ ಕಸುಬುಗಳ ಮಧ್ಯೆ ಅಪ್ಪ ಬೇಸಾಯವನ್ನು ಉಪಕಸುಬು ಎಂಬಂತೆ ಮಾಡುತ್ತಿದ್ದ. ಅಪ್ಪನಿಗೆ ಸ್ವಂತ ಜಮೀನು ಕೇವಲ ಒಂದೂವರೆ ಎಕರೆಯಷ್ಟು ಮಾತ್ರ ಇತ್ತು. ಇದರ ಜೊತೆಗೆ ತುಂಬಾಡಿ ಸುಬ್ಬಣ್ಣನವರ ಊರು ಪಕ್ಕದ ಒಂದು ಎಕರೆ ಜಮೀನನ್ನು ಪಾಲಿಗೆ ಮಾಡುತ್ತಿದ್ದ. ಇದರೊಂದಿಗೆ ಎತ್ತಗೋನಹಳ್ಳಿಯ ಹತ್ತಿರ ನಾಲ್ಕು ಎಕರೆ ಜಮೀನನ್ನು ಸರ್ಕಾರ ದರಖಾಸ್ತಿನಲ್ಲಿ ಅಪ್ಪನಿಗೆ ಮಂಜೂರು ಮಾಡಿತ್ತು. ಆ ಜಮೀನು ನಮ್ಮೂರಿಗೆ ದೂರವಿದ್ದುದರಿಂದ ಕಾಟಾಚಾರಕ್ಕೆಂಬಂತೆ ಗೇಯ್ಮೆ ಮಾಡುತ್ತಿದ್ದ. ಕೊನೆಗೆ ಎತ್ತಗೋನಹಳ್ಳಿಯ ಜಮೀನನ್ನು ನನ್ನ ದೊಡ್ಡಣ್ಣ ರಂಗಪ್ಪನ ಮದುವೆಗೆ ಮಾರಿದ್ದ. ಸಾಲ ತೀರಿಸಲು ಕೇವಲ ಎಂಟನೂರು ರೂಪಾಯಿಗಳಿಗೆ ಮಾರಿದ! ಆ ಸಾಲದ ಬಡ್ಡಿ ತೀರುವಳಿಗಾಗಿ ನನ್ನ ಎರಡನೆ ಅಣ್ಣ ಚಿಕ್ಕರಂಗಯ್ಯನನ್ನು ತುಂಬಾಡಿ ಬೆಸ್ತರ ಸುಬ್ಬಣ್ಣನವರ ಮನೆಗೆ ಅಪ್ಪ ಜೀತಕ್ಕೆ ಇರಿಸಿದ್ದ. ಚಿಕ್ಕರಂಗಯ್ಯ ಕೇವಲ ಆರು ತಿಂಗಳು ಮಾತ್ರ ಅವರಲ್ಲಿ ಜೀತ ಮಾಡಿ ವಾಪಸ್ಸು ಮನೆಗೆ ಬಂದುಬಿಟ್ಟ. ಇದರಿಂದಾಗಿ ತುಂಬಾಡಿ ಸುಬ್ಬಣ್ಣನವರು ಬಡ್ಡಿಗಾಗಿ ಅಪ್ಪನಲ್ಲಿ ತಕರಾರು ಮಾಡಿದ್ದರಿಂದ, ಅಪ್ಪ ಅವರ ಬಡ್ಡಿ ತೀರಿಸಲು ಮನೆಯಲ್ಲಿದ್ದ ಎಮ್ಮೆಪಡ್ಡೆಯನ್ನೂ ಸುಬ್ಬಣ್ಣನವರಿಗೆ ಒಪ್ಪಿಸಿ ಬಂದ! ಹಸು–ಕರುವನ್ನು ನಾನು ಮತ್ತು ಅಮ್ಮ ಇನ್ನಿಲ್ಲದಷ್ಟು ಅಕ್ಕರೆಯಿಂದ ಸಾಕಿದ್ದೆವು. ಎರಡುಹೊತ್ತು ಚಂಬಿನ ತುಂಬ ಹಾಲು ಕೊಡುತ್ತಿದ್ದ ಹಸು. ನಮ್ಮ ಮನೆಯ ಕರುಳುಬಳ್ಳಿಯಂತಿದ್ದ ಆ ಹಸುವನ್ನು ತುಂಬಾಡಿ

ಸುಬ್ಬಣ್ಣನವರು ಹೊಡೆದುಕೊಂಡು ಹೋಗಿ ತಮ್ಮ ಮನೆಯ ಮುಂದೆ ಕಟ್ಟಿಹಾಕಿಕೊಂಡು ಹಾಲುಕರೆದುಕೊಳ್ಳುತ್ತಿದ್ದರು. ನಾನು ಅಸಹಾಯಕನಾಗಿ ಸುಮ್ಮನೆ ನೋಡುತ್ತಾ ನಿಂತಿರುತ್ತಿದೆ."[೫೩] ಹೀಗೆ ದಲಿತರ ಬದುಕಿನಲ್ಲಿ ಭೂಮಿ, ಬೇಸಾಯ ಮತ್ತು ಜೀತಗಾರಿಕೆಗಳು ಬಿಡಲಾರದ ನಂಟಿನಂತೆ ಅಂಟಿಕೊಂಡಿವೆ.

ಜಾತಿಯು ಎಲ್ಲ ಕಾಲದ ಎಲ್ಲ ಸ್ತರದ ವಾಸ್ತವ. ಈ ವಾಸ್ತವದೊಳಗಿದ್ದು ಜಾತಿಯನ್ನು ಮೀರುವ ಮತ್ತು ಮೀರಲೇಬೇಕಾದ ಸಂದರ್ಭಗಳು ಪ್ರಾಕೃತಿಕವಾಗಿ ಒದಗಿಬರುವುದು ನಿಸರ್ಗನಿಯಮ. ನಿಸರ್ಗ ಸಹಜತೆಯ ಎದುರು ಮಾನವ ಅಸಹಜತೆಗಳು ತಲೆಯೆತ್ತಲಾರವು. ಜಾತೀಯತೆಯನ್ನು ಮೀರುವ ನಿಸರ್ಗ ಸಹಜವಾದ ನೆಲಸಂಸ್ಕೃತಿಯಲ್ಲಿನ ಒಂದು ನೀತಿಯೆಂದರೆ ಬೆಳೆದ ದವಸ ಧಾನ್ಯಗಳನ್ನು ಸುಗ್ಗಿ ಸಂದರ್ಭದಲ್ಲಿ ಹಂಚಿಕೊಳ್ಳುವುದು. ರೈತರು ತಾವು ಬೆಳೆದ ದವಸ ಧಾನ್ಯಗಳನ್ನು ತಮಗಾಗಿ ದುಡಿದವರಿಗೆಲ್ಲ ಅಷ್ಟೋ ಇಷ್ಟೋ ಕೊಡುವುದು ಈ ಸುಗ್ಗಿಕಾಲದಲ್ಲೆ. ದಾಸರಿಗೆ, ದಲಿತರಿಗೆ ಅವರವರ ಸೇವಾನುಸಾರ ಕೃತಜ್ಞತಾ ಪೂರ್ವಕವಾಗಿ ಮೊರ, ಕೊಳಗ, ಬೊಗಸೆಯಲ್ಲಿ ತುಂಬಿ ಕೊಡುವ ಸುಗ್ಗಿ ಸಂಭ್ರಮದ ಸಂದರ್ಭವನ್ನು ಕುಪ್ಪೆ ನಾಗರಾಜು ಹೀಗೆ ಸ್ಮರಿಸಿದ್ದಾರೆ : "ಒಕ್ಕಣೆಯ ಕಡೆದಿನ ದವಸದ ರಾಶಿಯನ್ನು ಕಣದ ಮಧ್ಯಭಾಗದಲ್ಲಿ ರಾಶಿ ಮಾಡಿ ಅದಕ್ಕೆ ಪೂಜೆ ಮಾಡುತ್ತಿದ್ದರು. ಪೂಜೆ ಮಾಡಿ ಅಲ್ಲಿಗೆ ಬಂದಿದ್ದ ಎಲ್ಲರಿಗೂ ಚರ್ಪು ಹಂಚಿ ನಂತರ ಆ ರಾಶಿ ಧಾನ್ಯಗಳನ್ನು ಕದಲಿಸುತ್ತಿದ್ದರು. ಆ ರಾಶಿಯಿಂದ ಆಡದೆಗೆ ಅಂತ ಸ್ವಲ್ಪ ಭಾಗ ತೆಗೆದಿಟ್ಟು ವರ್ಷಪೂರ್ತಿ ವ್ಯವಸಾಯದ ಸಾಮಗ್ರಿಗಳನ್ನು ಮಾಡಿಕೊಟ್ಟ ಆಚಾರಿ, ಶುಭ–ಅಶುಭ ಸಮಾರಂಭಗಳಲ್ಲಿ ಬಂದು ತನ್ನ ಸೇವೆ ಮಾಡಿದ, ಮುಟ್ಟಿನ ಬಟ್ಟೆ ಒಗೆದು ಶುಚಿಮಾಡಿಕೊಟ್ಟ ಅಗಸ, ತಲೆಕ್ಷೌರ ಮಾಡಿದ ಕ್ಷೌರಿಕ ಇತ್ಯಾದಿ ಸೇವೆ ಮಾಡಿದ ಎಲ್ಲರಿಗೂ ಒಂದೊಂದು ಪಾಲು ಕೊಡುತ್ತಿದ್ದರು. ರೈತರು ಕಡೆ ಕಣಕ್ಕೆ ಬಂದವರನ್ನು ಬರಿಗೈಲಿ ಕಳುಹಿಸುತ್ತಿರಲಿಲ್ಲ. ತಮ್ಮ ಯೋಗ್ಯತಾನುಸಾರ ದವಸ ಕೊಟ್ಟು ಕಳುಹಿಸುತ್ತಿದ್ದರು...."[೫೪] ಕೃಷಿಯ ಕಾರ್ಯಕಾರಣದಿಂದಾಗಿ ಜನರು ಮಾಡುತ್ತಿದ್ದ ಕೆಲಸದ ಗೌರವ ಮತ್ತು ಸಾಮರಸ್ಯದಿಂದ ಪಾಲು ಪಡೆದು ಸಂಭ್ರಮಿಸುವುದು ಸುಗ್ಗಿಯ ಕಾಲದ ಮಹತ್ವವನ್ನು ತಿಳಿಸುತ್ತದೆ. ಜಾತೀಯತೆಯ ನೆಲೆಯಲ್ಲಿಯು ಸಹ ನೆಲಪ್ರೀತಿ, ಮನುಷ್ಯಪ್ರೀತಿ ಹಾಗೂ ಕಾಯಕ ಪ್ರೀತಿಯಲ್ಲಿ ಮುಂದಾಗುವ ಈ ಸಂದರ್ಭವನ್ನು ಪ್ರಜ್ಞಾವಂತ ಸಮೂಹವು ಅರಿಯಬೇಕಾದ ಆಶಯಗಳನ್ನು ಆತ್ಮಕಥನಕಾರರು ಹೇಳುತ್ತಾರೆ.

ಭೂಮಿಯ ವಿಚಾರದಲ್ಲಿ ದಲಿತರು ಜೈಲಿಗೆ ಹೋದರು. ಆದರೆ ಕರ್ನಾಟಕದಲ್ಲಿ ಭೂ ಸುಧಾರಣಾ ಕಾನೂನನ್ನು ಮುಖ್ಯಮಂತ್ರಿ ಡಿ.ದೇವರಾಜ ಅರಸರು ಕಟ್ಟುನಿಟ್ಟಾಗಿ ಜಾರಿಗೊಳಿಸಿದ್ದರು. ಇದರಿಂದ ಅನೇಕ ದಲಿತರಿಗೆ ಭೂಮಿ ಸಿಕ್ಕಿತು. ಅವರ ಭೂಮಿಭಾಗ್ಯ ಮತ್ತು ಅನ್ನಭಾಗ್ಯ ಅವರ ಪಾಲಿಗೆ ದೂರಕುವಂತೆ ಆಯಿತು. ಉಳ್ಳವರಿಗೆ ಅಡವಿಟ್ಟಿದ್ದ ಭೂಮಿ, ದಲಿತರಿಗೆ ವಾಪಸಾದವು. ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ಕಾನೂನಿನ ಬಲ ದ್ವಿಗುಣಗೊಂಡಿತು. ಗಿರವಿಟ್ಟಿದ್ದ ವಾಚು, ಉಂಗುರ, ಒಡವೆಗಳು ಮರಳಿ ಮನೆಗೆ ಬಂದವು. ಮೇಲು ಜಾತಿಗಳಿಗೆ ಕತ್ತಲೆ ಒದಗಿದ ಸಂದರ್ಭದಲ್ಲಿ ಕೆಳಜಾತಿಗಳಿಗೆ ಬೆಳಕು ಬಂದದ್ದು ತುಂಬಾ ವಿಸ್ಮಯಕಾರಿ ಸಂಗತಿ. ದೇವರಾಜ ಅರಸು ಸರ್ಕಾರ ಇದ್ದ ಕಾಲದಲ್ಲಿ, 'ಉಳುವವನೇ ಭೂಮಿಯ ಒಡೆಯ' ಎಂಬ ಕಾನೂನು ಜಾರಿಗೆ ಬಂದಿದ್ದ ಸಂದರ್ಭದಲ್ಲಿ ದಲಿತರು ಮತ್ತು ಬ್ರಾಹ್ಮಣರ ನಡುವೆ ನಡೆದ ಮಾನವೀಯತೆಯ ಸಂದರ್ಭವನ್ನು ಸಂಜೀವರಾಯರು ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದ್ದಾರೆ:

"ನಮ್ಮ ಸುತ್ತಮುತ್ತಲಿನ ಬ್ರಾಹ್ಮಣ್ರು ಲಿಂಗಾಯ್ತ್ರಿಗೆ ಸೇರಿದ ಜಮೀನುಗಳನ್ನು ಮಾದಿಗರ ಹಟ್ಟಿಯವರು ಪಾಲಿಗೆ ಮಾಡ್ತಾ ಇದ್ರು. ಒಬ್ಬೊಬ್ಬರೂ ಇಪ್ಪತ್ತು ಮೂವತ್ತು ವರ್ಷಗಳಿಂದ ಗೇಣಿಗೆ ಮಾಡ್ತಾ ಇದ್ರು. ಈ ಕಾನೂನು ಜಾರಿಯಾದ್ಮೇಲೆ ಅಗ್ರಹಾರ, ಬೆಳಧರ, ಥರಟಿ ಮುಂತಾದ ಗ್ರಾಮಗಳ ಲಿಂಗಾಯ್ತ್ರು, ಬ್ರಾಹ್ಮಣ್ರು ತಮ್ಮ ಜಮೀನುಗಳನ್ನು ಕಳೆದುಕೊಳ್ಳಬೇಕಾಗಿ ಬಂತು. ಈ ಊರಿನವರು ಜಮೀನುಗಳನ್ನು ಪಡದುಕೊಳ್ಳುವ ಧಣಿಯ ವಿರುದ್ಧವೇ ತಿರುಗಿಬಿದ್ರು. ಇಪ್ಪತ್ತು ವರ್ಷಗಳಿಂದ ಪಾಲಿಗೆ ಮಾಡಿ ನೆಮ್ದಿ ಜೀವನ ಮಾಡುತಿದ್ದವರಿಗೆ ಉಳುವವನೇ ಭೂಮಿಯ ಒಡೆಯನೆಂಬ ಕಾನೂನಿನಿಂದಾಗಿ ಜಮೀನುಗಳು ಇವರ ಪಾಲಾದವು. ಭೂಮಿಯನ್ನು ಕಳಕೊಂಡವರು ಶಾಪ ಹಾಕಿ ಬೆಂಗ್ಳೂರು, ತುಮ್ಕೂರು ಕಡೆ ಸೇರ್ಕೊಂಡ್ರು. ನಮ್ಮೂರಲ್ಲಿ ಇದ್ದ ಬ್ರಾಹ್ಮಣ್ರ ಜಮೀನನ್ನು ನಾವು ಇಪ್ಪತ್ತು ವರ್ಷದಿಂದ ಗೇಣಿ ಮಾಡ್ತಾ ಇದ್ವಿ. ನಾವು ಯಾರೂ ಸಹ ಇಂತಹ ಕಾನೂನು ಪ್ರಕಾರವಾಗಿ ಹೋಗಲಿಲ್ಲ! ಅವರು ನಮ್ಮ ನಿಯತ್ತಿಗೆ ಮೆಚ್ಚಿ ಪಾಲಿಗೆ ಮಾಡುತ್ತಿದ್ದವರನ್ನು ಮುಂದುವರಿಸಿದರು. ಕಾಲಾನಂತರ ಬ್ರಾಹ್ಮಣರ ಕುಟುಂಬಗಳೆಲ್ಲಾ ಖಾಲಿಯಾಗಿ ತಿಳಿದ ಬೆಲೆಗೆ ಮಾರಿ ಬೆಂಗಳೂರು ಸೇರ್ಕೊಂಡ್ರು. ದ್ಯಾವಲಾಪುರದ ಶ್ರೀನಿವಾಸರಾಯರ ಜಮೀನನ್ನು ನಾವು ಗೇಣಿ ಮಾಡ್ತಾ ಇದ್ವಿ. ಸಂತೃಪ್ತಿಯಾಗಿ ಭತ್ತ, ನೆಲ್ಲುಲ್ಲು ಬೆಳೆಯಾಗ್ತಾ ಇತ್ತು. ಅವರೆಂದೂ ನಮಗೆ ಮೋಸ ಮಾಡದೇನೆ ಪಾಲುಕೊಡ್ತಾ ಇದ್ರು. ಕರೆಂಟು ಮತ್ತು ನೀರಿನ ಪಾಲು ಯಾವ್ದೂ ತೆಗೆದುಕೊಳ್ತಿರಲಿಲ್ಲ. ಬೆಳೆದ ಬೆಳೆಯನ್ನು ಸಮಪಾಲಾಗಿ ಭಾಗಾ ಮಾಡ್ತಾ

ಇದ್ರು. ನಮ್ಮ ತಂದೆ ತಾಯಿಗೆ ಅವರು ದೇವರಾಗಿದ್ರು"[೫೫] ಮತ್ತೊಂದು ನಿದರ್ಶನವನ್ನು ನೀಡುತ್ತಾ, "ನಮ್ಮ ತಂದೆ ನಮ್ಮ ತೋಟದ ಹತ್ತಿರವಿರುವ ಬ್ರಾಹ್ಮಣರ ಎರಡು ಎಕರೆ ಗದ್ದೆಯನ್ನು ಸುಮಾರು ಇಪ್ಪತ್ತು ವರ್ಷ ವಾರ ಮಾಡುತ್ತಿದ್ದರು. ಅದನ್ನು ಬ್ರಾಹ್ಮಣರು ತಮ್ಮ ಮಗಳಿಗೆ ಕೊಟ್ಟಿದ್ದರು. ಪ್ರತಿವರ್ಷವೂ ಬೆಳೆದಿದ್ದರಲ್ಲಿ ಅರ್ಧ ಕೊಡುತ್ತಿದ್ದರು. ನಾನು ದೊಡ್ಡವನಾದ ಮೇಲೆ ಆ ಗದ್ದೆಯಲ್ಲಿ ನಾನು ಕೆಲಸ ಮಾಡಿದ್ದೇನೆ. ಬಹಳ ಫಲವತ್ತಾದ ಗದ್ದೆ. ಅದರಲ್ಲಿ ಬೆಳ್ಳುಳ್ಳಿ, ನೀರುಳ್ಳಿ, ಕಬ್ಬು, ಧನಿಯ ಮತ್ತು ಭತ್ತವನ್ನು ಸಹ ಬೆಳೆಯುತ್ತಿದ್ದೆವು. ಪಾಪ! ಆಕೆಯ ಗಂಡ ಸತ್ತ ಮೇಲೆ ಅವರ ತವರು ಮನೆಯ ಸಂಬಂಧಿಕರಿಗೆ ಎರಡು ಸಾವಿರ ರೂ.ಗಳಿಗೆ ಮಾರಿದರು. ಇದು ನನಗೆ ಗೊತ್ತಾದದ್ದು, ಮುಂದಿನ ವರ್ಷ ಅದನ್ನು ನಾವು ವ್ಯವಸಾಯ ಮಾಡದಿದ್ದಾಗ, ನಾನು ಮೈಸೂರಿನಲ್ಲಿ ಕಾಲೇಜಿನಲ್ಲಿ ಓದುತ್ತಿದ್ದೆ. ರಜಾದಲ್ಲಿ ಊರಿಗೆ ಬಂದಿದ್ದೆ. ಆಕೆ ಗದ್ದೆ ಮಾರಿದ ವಿಚಾರ ನನಗೆ ಗೊತ್ತಾಯಿತು. ಆಗ ನನ್ನ ತಂದೆಯವರನ್ನು 'ಅಪ್ಪಾ' ಅವರು ಗದ್ದೆಯನ್ನು ಬೇರೆಯವರಿಗೆ ಕಾನೂನು ಪ್ರಕಾರ ಮಾರುವಂತಿಲ್ಲ. ಮಾರುವುದಾದರೆ ನಮಗೇ ಕೊಡಬೇಕು. ನೀನು ಈ ಕಾಗದಕ್ಕೆ ಸಹಿ ಹಾಕು, ನಾನು ತಹಶೀಲ್ದಾರಿಗೆ ಅರ್ಜಿ ಬರೆಯುತ್ತೇನೆ ಎಂದು ಹೇಳಿದೆ. ಅದಕ್ಕೆ ಅವರು 'ಮಗ' ಇಪ್ಪತ್ತು ವರ್ಷದಿಂದ ನಾವು ಅದರಲ್ಲಿ ಅನ್ನ ತಿಂದಿದ್ದೇವೆ. ಸಾಲದಕ್ಕೆ ಆಕೆ ಬ್ರಾಹ್ಮಣ ವಿಧವೆ. ಅವಳ ಋಣ ನಮಗೇಕೆ ಬೇಕು. 'ನಾನು ಸಹಿ ಮಾಡುವುದಿಲ್ಲ' ಎಂದು ಹೇಳಿದರು. ಆಗ ನನ್ನಷ್ಟಕ್ಕೆ ನಾನೇ ನಾನು ಎಷ್ಟು ಸಣ್ಣವನು ಅಂದುಕೊಂಡು ತೆಪ್ಪಗಾದೆ. ಇಂತಹ ದೊಡ್ಡ ವ್ಯಕ್ತಿ ನನ್ನ ತಂದೆ."[೫೬] ಇಂಥ ಪ್ರಸಂಗಗಳು ಅಪರೂಪದಲ್ಲಿ ಅಪರೂಪ. ದಲಿತರಿಗೆ ತಾವು ದುಡಿದ ಭೂಮಿಯ ಬಗೆಗೆ ಅದಮ್ಯವಾದ ಕಳ್ಳುಬಳ್ಳಿಯ ಜೀವಸಂಬಂಧವಿದ್ದಾಗ್ಯೂ ಮೇಲು ಜಾತಿಯ ವಿಧವೆ ಹೆಣ್ಣಿಗೇ ತಮ್ಮ ಗೇಣಿಯ ಭೂಮಿಯನ್ನು ಬಿಟ್ಟುಕೊಟ್ಟಿದ್ದು ದಲಿತ ಮಾನವೀಯತೆ ಮತ್ತು ಅಂತಃಕರಣದ ಮಾತೃತ್ವದ ಜೀವಸೆಲೆಯಾಗಿದೆ.

೩.೫. ದಲಿತ ಮಹಿಳಾ ಸ್ಥಾನಮಾನ

ಚಿಂತಕಿ ಹಾಗೂ ಹೋರಾಟಗಾರ್ತಿಯಾದ ಡಾ.ಕೆ.ವಿ.ನೇತ್ರಾವತಿ ಅವರು, "ದಲಿತ ಮಹಿಳೆ ಎಂದರೆ ಸಮಾಜದಿಂದ ಬಹಿಷ್ಕೃತರೆನಿಸಿಕೊಂಡವರು, ಕಟ್ಟಕಡೆಯವರು, ಅಸ್ಪೃಶ್ಯರೆನಿಸಿಕೊಂಡ ಹೊಲೆಮಾದಿಗ, ಜಾಡಮಾಲಿ ಮಹಿಳೆಯರು, ಅದರಲ್ಲೂ ದಿನಗೂಲಿ ಕೃಷಿಕಾರ್ಮಿಕ ಮಹಿಳೆ, ಜಾಡಮಾಲಿ ಮಹಿಳೆಯರೇ ನಿಜವಾದ ದಲಿತ ಮಹಿಳೆಯರು."[೫೭] ಎಂಬುದನ್ನು ದಲಿತ ಮಹಿಳೆಯ ಸ್ಥಿತಿಗತಿಯಲ್ಲಿ ಅರ್ಥೈಸಿಕೊಟ್ಟಿದ್ದಾರೆ. ದಲಿತ ಕುಟುಂಬಗಳಲ್ಲಿ ಮನೆಯ ನಿರ್ವಹಣೆ

ಮತ್ತು ಸಂಸಾರ ನಡೆಸುವ ಜವಬ್ದಾರಿಯನ್ನು ಇಂದಿಗೂ ಮಹಿಳೆಯರೇ ಹೊತ್ತಿರುತ್ತಾರೆ. ಕುಟುಂಬಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳಲು ಅಪಾರ ಶ್ರಮದೊಂದಿಗೆ ತಮ್ಮ ದುಡಿಮೆಯ ಸಮಯವನ್ನು ಸಹ ವ್ಯಯಿಸುತ್ತಿದ್ದಾಳೆ. ಮನೆಯ ಜವಾಬ್ದಾರಿಯೇ ಇಲ್ಲದ ಕುಡುಕ ಗಂಡನ ದೌರ್ಜನ್ಯಗಳಿಗೆ ತುತ್ತಾಗಿ ತಾವು ಸಂಪಾದಿಸಿ ತಂದಂತಹ ಬಿಡಿಗಾಸನ್ನು ಕಿತ್ತುಕೊಂಡು ಹೋಗಿ ತಾನು ಮಾತ್ರ ಕುಡಿದು ತನ್ನ ಹೆಂಡತಿ ಮಕ್ಕಳನ್ನು ಉಪವಾಸ ಕೆಡುವಂತಹ ಪುರುಷರೇ ಹೆಚ್ಚಾಗಿದ್ದಾರೆ. ಇಂಥಹ ಪುರುಷರ ಜೊತೆ ಜೀವನವನ್ನು ನಡೆಸಲು ಆಗದೆ ಇತ್ತ ಸಾಯಲೂ ಆಗದೆ ದಲಿತ ಮಹಿಳೆ ಬಳಲುತ್ತಿದ್ದಾಳೆ. ಇದರಿಂದ ಅಪೌಷ್ಟಿಕ ಆಹಾರವನ್ನು ಸೇವಿಸುತ್ತಾ ರಕ್ತಹೀನತೆಗೆ ದಲಿತ ಮಹಿಳೆಯರು ಅತಿಹೆಚ್ಚಿನ ಪ್ರಮಾಣದಲ್ಲಿ ಒಳಗಾಗುತ್ತಿದ್ದಾರೆ.

ದಲಿತ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಸಮಾಜದಲ್ಲಿ ದ್ವಿಪತ್ನಿತ್ವ ವ್ಯವಸ್ಥೆಯು ಅಸ್ಥಿತ್ವದಲ್ಲಿರುವುದರಿಂದ ಸಂತಾನೋತ್ಪತ್ತಿಯ ಪ್ರಮಾಣ ಮೇಲುಜಾತಿ ಮಹಿಳೆಯವರಿಗಿಂತ ದಲಿತ ಮಹಿಳೆಯರಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಕುಟುಂಬ ವ್ಯವಸ್ಥೆಯನ್ನು ಯಾರೂ ವಿರೋಧಿಸಬಾರದು. ಆದರೆ, ಕುಟುಂಬದಲ್ಲಿ ಗಂಡ–ಹೆಂಡತಿಯರಿಬ್ಬರು ಸಮಾನತೆಯಿಂದ ಬಾಳ್ವೆಯನ್ನು ನಡೆಸಬೇಕು ಮೇಲು–ಕೀಳು ಎಂಬ ಭೇದವನ್ನು ಬಿಡಬೇಕೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರೆ ಹೇಳಿದ್ದಾರೆ. ಅನೇಕ ಸಂದಿಗ್ಧ ಸಂದರ್ಭಗಳಲ್ಲಿಯು ದಲಿತ ಮಹಿಳೆಯರು ಸಾಂಸಾರಿಕ ಜೀವನದೊಂದಿಗೆ ಹಾಗೂ ದಲಿತ ಸಂಸ್ಕೃತಿಗೆ ಅದ್ವಿತೀಯ ಕಾಣಿಕೆ ಸಲ್ಲಿಸಿದ್ದಾರೆ. ದಲಿತ ಮಹಿಳೆಯರ ಪಾತ್ರಗಳಲ್ಲಿ ಹೊಲೆಮಾದಿಗ, ಜಾಡಮಾಲಿ ಮಹಿಳೆಯರ ಜೀವನದ ಶ್ರೇಯೋಭಿವೃದ್ಧಿಯಲ್ಲಿ ಅವರ ಅನನ್ಯಪಾತ್ರವನ್ನು ಅತ್ಯಂತ ಆಪ್ತವಾಗಿ ದಲಿತ ಆತ್ಮಕಥನಕಾರರು ಕಟ್ಟಿಕೊಟ್ಟಿದ್ದಾರೆ.

ಸಂಜೀವರಾಯರು ನಿರೂಪಿಸುವ ತಮ್ಮ ತಾಯಿಯ ಜೀವನ ಪಯಣ ಹಾಗೂ ಕೌಟುಂಬಿಕ ಕಾಳಜಿಯು ದಲಿತ ಮಹಿಳೆಯರ ಸಾಮಾಜಿಕ ನೆಲೆಯ ಅಸ್ತಿತ್ವವನ್ನು ಬಿಂಬಿಸುತ್ತದೆ: "ನಾನು ಊರಿಗೆ ಹೋದಾಗಲೆಲ್ಲಾ, 'ನನಗೆ ಕೆಲಸವಿಲ್ಲದೆ ಸುಮ್ಮನೆ ಕಾಲ ಕಳೆಯುವ ಹಾಗೆ ಮಾಡದೆ ಮಗಾ! ನಾನು ಭೂಮಿತಾಯಿಗೆ ನೆತ್ತರ ಬಸಿದು ದುಡಿದೋಳು. ಹೀಗೆ ಕಾಲಹರಣ ಮಾಡುವುದು ಮನಸ್ಸು ಒಲ್ಲೆ ಅನಿಸುತ್ತದೆ.' ಇದು ನಾನು ಹೋದಾಗಲೆಲ್ಲಾ ಅವಳದು ಒಂದೇ ಪದ. ಅವ್ವನ ಮಾತಿನಲ್ಲಿ ಸತ್ಯ ತುಂಬಿ ತುಳುಕುತ್ತಿದೆ. ಏಕೆಂದರೆ ಹುಟ್ಟಿದಾಗಿನಿಂದ ನಮ್ಮಪ್ಪನ ಮನೆಗೆ ಬಂದಾಗಿನಿಂದ್ಲೂ ಕಲ್ಲು ಮಣ್ಣು ಹೊತ್ತು ಭೂಮಿತಾಯಿಗೆ ಒಂಚೂರೂ ವಂಚನೆ ಮಾಡದಂಗೆ ದುಡಿದೋಳು. ನಾನು ಹುಟ್ಟಿ ಬುದ್ಧಿ ಕಂಡಾಗಿನಿಂದ್ಲು ನಮ್ಮವ್ವ ದುಡೀತಲೇ

ಇದಾಳೆ. ಬೇಸ್ಗೆ, ಮಳೆ, ಬಿಸ್ಲು, ನೆರಳು ಯಾವುದೂ ಗೊತ್ತಿಲ್ಲ. ಹುಟ್ಟಿದ ಮನೇಲಿ ಅವಳು ಸುಖವಾಗಿ ಬೆಳೆದೋಳಲ್ಲ, ಊರೂರು ತಿರುಗಿ ಕಲ್ಲು ಮಣ್ಣು ಹೊತ್ತು ಟಾರ್ ಹಾಕೋ ಕೆಲಸಕ್ಕೆ ಹೋಗ್ತಾ ಇದ್ಲಂತೆ. ಇವ್ಳ ದುಡಿಮೆಯಿಂದ ಎಲ್ರೂ ತಿನ್‌ಬೇಕು. ಕಿತ್ತು ತಿನ್ನುವ ಬಡತನ. ನಮ್ಮವ್ವನೇ ಚಿಕ್ಕವಳು. ಪ್ರೀತಿಯಿಂದ ಬೆಳೆಯಬೇಕಾದವ್ಳು ಯಾವಾಗ್ಲೂ ಬಿಸಿಲ್ನಲ್ಲೇ ಬೆಂದ ಕರಿಕಲ್ಲಾಗಿ ಹೋಗಿದ್ದಳು. ಮದ್ವೆ ಆಗಿ ನಮ್ಮಪ್ಪನ ಮನೆಗೆ ಬಂದ ಮೇಲೆ ಇವ್ಳ ಬೆನ್ನ ಹಿಂದೇನೆ ಬಡತನ ಕಟ್ಟಿಕೊಂಡು ಬಂದಿದ್ಲು. ಹೊಟ್ಟೆಗಿದ್ರೆ ಬಟ್ಟೆಗಿಲ್ಲ, ಬಟ್ಟೆಗಿದ್ರೆ, ಹಿಟ್ಟಿಗಿಲ್ಲ ಎಂಬ ಸ್ಥಿತಿ. ಮನೇಲಿ ಅತ್ತೆ, ಗಂಡ, ಮಾವ ಇರೋದಕ್ಕೆ ಒಂದು ಸಣ್ ಮನೆ ಮನೆಯಾದ್ರು ಅದೊಂದು ದನದ ಕೊಟ್ಟಿಗೆ. ಪಾತ್ರೆಯಿಲ್ಲ ಪಡಗ ಇಲ್ಲ. ನಮ್ಮಪ್ಪ ಒಬ್ನೇ ಮಗ. ಮೊದಲಿಂದ ಕೆಲಸ ಮಾಡೋನಲ್ಲ. ಅಲ್ಲಿ ಇಲ್ಲಿ ಊರು ತಿರಿಕ್ಕೊಂಡು ಕಾಲ ಕಳೆಯುವವ. ನಮ್ಮವ್ವನಿಗೆ ಪ್ರಾರಂಭವಾಗುತ್ತೆ ಭೂಮಿಗೆ ದುಡಿಯುವ ಕೆಲ್ಸ. ದನದ ಕೊಟ್ಟಿಗೆಯಂತೆ ಇದ್ದ ಮನೇನ ರಾತ್ರಿ ಹಗ್ಲೂ ಎನ್ನದೆ ಒಬ್ಳೆ ಗಾರೆ ಹಾಕಿದ್ಲಂತೆ. ಅಷ್ಟೊಂದು ದೊಡ್ಡ ಮನೇಗೆ ಈ ಮಾರಾಗಿತ್ತಿ ಹೇಗೆ ಗಾರೆ ಇಟ್ಲು ಎಂದು ನೋಡಿದಾಗೆಲ್ಲ ಆಶ್ಚರ್ಯಪಡುತ್ತೇನೆ.

ನಮ್ಮೂರಾಗೆ ಮೂವತ್ತು ನಲವತ್ತು ಮನೆ ಇದ್ವು. ಎಲ್ರಿಗು ಕೂಲೀ ಜೀವನ ಬಿಟ್ರೆ ಕೆಲವ್ರಿಗ್ ಮಾತ್ರ ಒಂದು ಗೋವಿನ ಪಾದದ ಅಗ್ಲ ಹೊಲಗಳಿದ್ವು. ನಮಗಿದ್ದದ್ದು ಮುಕ್ಕಾಲೆಕ್ರೆ ಹೊಲ ಹತ್ತುಕುಂಟೆ ಗದ್ದೆ. ನಮ್ಮವ್ವನಿಗೆ ಅಷ್ಟೇ ಸಾಕಾಗಿತ್ತು. ಗದ್ದೆ ಹೊಲಗಳಲ್ಲಿ ಚಿನ್ನವನ್ನೇ ಬೆಳೀತೀನಿ ಎಂಬ ಆಸೆ. ಆದ್ರೆ ಮನೇಲಿ ಉಳುಮೆ ಮಾಡೋಕೆ ದನಗಳೇ ಇರಲಿಲ್ಲ. ಸಾದ್ರ್ ಕೇರಿಯವ್ರ ಹತ್ರ ಒಂದು ಹಸೂನ ಪಾಲಿಗೆ ಮೇಯಿಸಿ ಒಂದು ಜೊತೆ ದನಾನಾ ಮಾಡಿಕೊಂಡಿದ್ಲು. ಆದ್ರೆ ನಮ್ಮಪ್ಪ ಮಾತ್ರಾ ಸೋಮಾರಿತನವನ್ನು ಬಿಟ್ಟಿರಲಿಲ್ಲ. ಇಂಥ ಗಂಡನ್ನ ಕಟ್ಕೊಂಡು ಜಗ್ಳ ಗುದ್ದಾಟ ಮಾಡ್ಕೊಂಡು ಜೀವನ ಸಾಗಿಸತಾ ಬಂದಿದ್ಲು. ಮುಂಗಾರು ಮಳೆ ಭೂಮಿಗೆ ಬಿತ್ತಂದ್ರೆ ಅವ್ವನಿಗೆ ಎಲ್ಲಿಲ್ಲದ ಸಂತೋಷ. ಊರೂರೇ ಉಳುಮೆ ಕೆಲಸಕ್ಕೆ ಶುರು ಮಾಡ್ತಾರೆ. ನಮ್ಮೊಲ ಗದ್ದೆ ಉಳುಮೆ ಮಾಡಬೇಕೆಂದು ರಾತ್ರಿ ಹಗಲೂ ನಮ್ಮಪ್ಪನಿಗೆ ಚುಚ್ತಾ ಇದ್ಲು. ಬೆಳಗಿಂಜಾವ ನಾಲ್ಕು ಗಂಟೆಗೆ ಹೊರಟ್ಳಂದ್ರೆ ಹಿಂದಾಗಡೆಯಿಂದ ನಮ್ಮಪ್ಪ ಬರ್ತಾ ಇದ್ದ. ಹೊಸ ಹಸುಗಳಿಗೆ ಇನ್ನೂ ಉಳುಮೆ ಮಾಡ್ಲಿಕ್ಕೆ ಸಾದ್ಯವಾಗ್ತಿರಲಿಲ್ಲ. ಬೇಸಗೆ ಕಾಲದಲ್ಲಿ ಹಸುಗಳಿಗೆ ಬರೇ ನೊಗ ಹಾಕ್ಕೊಂಡು ಒಣಭೂಮಿಯಲ್ಲಿ ಕಲ್ಸಿದ್ರೆ ತಿದ್ದಿಕೊಳ್ತಿದ್ವು ಅಂತ ಒಂದೇ ಸಮ್ನೇ ಹೇಳ್ತಾನೇ ಇರ್ತಿದ್ಲು. ಅದ್ರೆ ನಮ್ಮಪ್ಪ ಊರವಕ್ಕರಿಗೆಲ್ಲಾ ನೊಗ ನೇಗಿಲು ಕೆಲ್ಸ ಮಾಡೋದು ಬಿಟ್ರೆ ನಮ್ಮವ್ವನ ಮಾತು ಕಿವಿಗೆ ಬೀಳ್ತಿರಲಿಲ್ಲ. ನಮ್ಮಪ್ಪ ಹಿಂದಿನಿಂದ ಹೊಡೀತಿರಬೇಕಾದ್ರೆ ನಮ್ಮವ್ವ

ಮುಂದೆ ನೊಗ ಹಿಡ್ಕೊಂಡು ಕಲಿಸ್ಬೇಕಾಗಿತ್ತು. ಒಂದೆರಡು ಸಾರಿ ಹೊಡಯೋ ಹೊತ್ತಿಗೆ ಚೆನ್ನಾಗಿ ಕಲ್ತುಕೊಳ್ತಾ ಇದ್ವು. ಹೀಗೆ ಇಂಥ ಸೋಮಾರಿ ಗಂಡನ್ನ ಕಟ್ಕೊಂಡು ಹೊಲ್ದಾಗೆ ಹುಲ್ಲು ಸೈತ ಒಬ್ಳೇ ಆಯ್ದು ಪೈರಾಕ್ಸಿ ಮಳೆರಾಯನ ದೆಸೆಯಿಂದ ಸಂತೃಪ್ತಿ ಮಳೆಯಾಗಿ ಬೆಳೆ ಬೆಳೀತಾ ಇದ್ಲು. ನಾನು ಕೂಲಿ ನಾಲಿ ಮಾಡುವುದಕ್ಕೆ ಶುರು ಮಾಡಿದ್ಮೇಲೆ ಸ್ವಲ್ಪ ವಿರಾಮ ಸಿಕ್ತು. ಆದ್ರೂ ಮಾತ್ರ ಅವಳ ಮನಸ್ಸು ಸುಮ್ನೆ ಇರ್ತಿರಲಿಲ್ಲ. ನಾನು ಶಾಲೆಗೆ ಹೋಗೋದಕ್ಕೆ ಶುರು ಮಾಡಿದ್ಮೇಲೆ ಇನ್ನೂ ದುಡಿಮೆ ಜಾಸ್ತಿ ಮಾಡಿದ್ಲು. ಮನೆ ಕಡೆ ಹೊಟ್ಟೆಗೆ, ಪುಸ್ತಕ, ಬಟ್ಟೆಗೆ ಹಣ ಒದಗಿಸೋಕೆ ನಿರಂತರವಾಗಿ ದುಡಿಯೋಕೆ ಶುರುಮಾಡಿದ್ಲು. ನಮ್ಮಪ್ಪ ಮಾತ್ರ ಒಂದ್ವಾರ ಕೆಲಸ್ ಮಾಡಿದ್ರೆ ಇನ್ನೊಂದ್ವಾರ ಮನೇಲಿ ಕಾಲ ಕಳೀತಿದ್ದ. ಅವನ ಸಿಟ್ಟು ಯಾವಾಗ್ಲು ನನ್ನ ಓದಿನ ಕಡೆ ಇರ್ತಿತ್ತು. ಸ್ಕೂಲ್ಗೋಗಿ ಉದ್ದಾರ ಮಾಡೋದೇನು ಬೇಡ, ಮನೇಲಿದ್ದು ಎಲ್ಲಾದ್ರೂ ಕೂಲಿ ಜೀವನ ಮಾಡ್ಲಿ ಅಂತ ಬೈಯ್ತಿದ್ದ. ನಮ್ಮವ್ವ ಮಾತ್ರ ನಿನ್ನಂಥ ಸೋಮಾರಿ ಗಂಡ ಇದ್ರೆ ಮಕ್ಕಳ್ನ ಹಾಳ್ ಮಾಡ್ತೀಯ, ನನ್ನ ಜೀವತೇದು ಓದಿಸ್ತೀನಿ, ನನ್ ಜೀವಮಾನ ಇರೋವರ್ಗೂ ಬಿಡೋದಿಲ್ಲ."[೫೮] ಈ ಮೇಲಿನ ಎಲ್ಲ ಪ್ರಸಂಗಗಳು ಸಂಜೀವರಾಯರ ಅವ್ವನ ದುಡಿಮೆ ಮಾತ್ರ ವಾಗಿರುವುದಿಲ್ಲ. ದಲಿತ ಸಮುದಾಯದ ಪ್ರತಿಯೊಬ್ಬ ಮಹಿಳೆಯರ ಸ್ಥಿತಿ ಇದೇ ಆಗಿರುತ್ತದೆ. ಮನೆಯ ಕೆಲಸದೊಂದಿಗೆ ಹೊರಗೆ ಮತ್ತು ಒಳಗೆ ದುಡಿದು ಇಡೀ ಸಂಸಾರದ ನೊಗವನ್ನು ಹೊತ್ತು ಜೀವನ ನಡೆಸುತ್ತಿರುವವಳು ಈ ದಲಿತ ಮಹಿಳೆಯಾಗಿದ್ದಾಳೆ. ಇದಷ್ಟೇ ಅಲ್ಲದೆ ಬಡತನದ ನಡುವೆಯು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ನೀಡಿ ವಿದ್ಯಾವಂತರನ್ನಾಗಿ ಮಾಡುವ ಹಂಬಲವನ್ನು ಹೊತ್ತ ಮಹಿಳೆಯರಾಗಿರುತ್ತಾರೆ. ಈ ಬಗೆಯ ತಾಯ್ತನದ ಪ್ರೀತಿ ಎಲ್ಲಾ ದಲಿತ ಮಹಿಳೆಯರಲ್ಲಿ ಸ್ವಾಭಾವಿಕವಾಗಿ ಕಂಡುಬರುತ್ತದೆ.

ಅರವಿಂದ ಮಾಲಗತ್ತಿ ಅವರ 'ಗೌರ್ಮೆಂಟ್ ಬ್ರಾಹ್ಮಣ' ಆತ್ಮಕಥೆಯಲ್ಲಿ ಅಜ್ಜಿ, ಕನ್ನಡ ದಲಿತ ಆತ್ಮಕಥೆಯಲ್ಲಿ ಕಂಡ ಅಪರೂಪದ ವ್ಯಕ್ತಿತ್ವದ ಪಾತ್ರವಾಗಿದೆ. ವಿಮರ್ಶಕರಾದ ರಹಮತ್ ತರೀಕೆರೆ ಅವರು 'ಗೌರ್ಮೆಂಟ್ ಬ್ರಾಹ್ಮಣ'ದ 'ಅಜ್ಜಿಯ' ಪಾತ್ರದ ಮಹತ್ವವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. "ಈ ಆತ್ಮಕಥೆಯಲ್ಲಿ ಮೈದಳೆದು ನಿಲ್ಲುವ ಲೇಖಕರ ಆಯಿ(ಅಜ್ಜಿ)ಯ ಬಗ್ಗೆ ಹೇಳಲೇಬೇಕು. ತನ್ನ ಜಾಣತನ, ಜಿಗುಟುತನ, ತಾಯ್ತನ, ಸಾಹಸಗಳಿಂದ ಈ ಆಯಿ ಅತ್ಯಂತ ಅದ್ಭುತ ಚೈತನ್ಯಶೀಲ ವ್ಯಕ್ತಿಯಾಗಿ ಬೆಳೆದು ಕೃತಿಯಲಿ ನಿಲ್ಲುತ್ತಾಳೆ. ಓದುಗರ ಮನಸ್ಸಿನಲ್ಲಿ ಗಟ್ಟಿಯಾಗಿ ನಿಂತು ಬಿಡುವ ಈ ಪಾತ್ರವು ದೇವನೂರರ ಒಡಲಾಳದ ಸಾಕವ್ವನಂತೆ. ಮಾಲಗತ್ತಿ ತಮ್ಮ ಆತ್ಮಕತೆಯಲ್ಲಿ ಸದಾ ಕಾಲ ಮೊಮ್ಮಕ್ಕಳನ್ನು ಹಿಂಡುಕಟ್ಟಿಕೊಂಡು ಬೆಳೆಸಿದ

‘ಆಯಿ’ಯ ನೆನಪಿಗೆ ಅರ್ಪಿಸಿರುವುದು ಸಹಜವಾಗಿದೆ.”[೫೯] ಎಂದು ಚಿತ್ರಿಸುತ್ತಾರೆ. ಅರವಿಂದ ಮಾಲಗತ್ತಿಯವರ ಆತ್ಮಕಥನದಲ್ಲಿ ಅಜ್ಜಿ ನಿಜವಾದ ನಾಯಕಿಯಾಗಿ ಮೂಡಿಬಂದಿದ್ದಾಳೆ. ಆಕೆ ತನ್ನ ಕುಟುಂಬವನ್ನು ಹೊಸ ಕಾಲಕ್ಕೆ ಮತ್ತು ಮಜಲಿಗೆ ಕೊಂಡೊಯ್ಯಲು ಬುನಾದಿ ಹಾಕಿದ ಗಟ್ಟಿಗಿತ್ತಿಯಾಗಿ ಗುರುತಿಸುವುದು ಅರ್ಥಪೂರ್ಣವಾಗಿದೆ. ಅಜ್ಜಿಯ ಮಿತವ್ಯಯದ ತಾತ್ವಿಕ ಧೋರಣೆ ಬದುಕನ್ನು ಕಟ್ಟಿ ಬೆಳಸಲು ಸಹಕಾರಿಯಾಗಿದೆ. ತನ್ನ ತಾಯ್ತನದ ಪ್ರೀತಿಯನ್ನು ಧಾರೆಯೆರೆದು ಮೊಮ್ಮಕ್ಕಳನ್ನ ಬಾಲ್ಯದಿಂದ ಇಂದಿನವರೆಗೆ ಅಸ್ತಿತ್ವವನ್ನು ಕೊಟ್ಟ ವ್ಯಕ್ತಿತ್ವವನ್ನು ರೂಪಿಸಿದ್ದಾಳೆ. ದೊಡ್ಡ ಅವಿಭಕ್ತ ಕುಟುಂಬದ ಏಳ್ಗೆಗಾಗಿ ತನ್ನ ಜೀವನವನ್ನು ಸವೆಸಿದ ತ್ಯಾಗಮಯಿಯಾಗಿ ಇಡೀ ಆತ್ಮಕಥೆಯಲ್ಲಿ ಕಂಡು ಬರುತ್ತಾಳೆ.

ದಲಿತ ಪುರುಷನಿಂದ ದಲಿತ ಮಹಿಳೆ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಲೇ ಇವೆ. ಸಾಮಾಜಿಕವಾಗಿ ಮೇಲ್ಜಾತಿಗಳಿಂದ ನಿರಂತರವಾಗಿ ದೌರ್ಜನ್ಯಕ್ಕೆ ಒಳಗಾದ ದಲಿತ ಪುರುಷನು ತನ್ನ ಕುಟುಂಬ ವ್ಯಾಪ್ತಿಯಲ್ಲಿ ದಲಿತಮಹಿಳೆಯ ಮೇಲೆ ಅಧಿಕಾರ ಸ್ಥಾಪಿಸುತ್ತ ದೌರ್ಜನ್ಯವೆಸಗುವುದನ್ನು ಕಾಣುವುದು ಅಮಾನವೀಯ. ದಲಿತ ಮಹಿಳೆಯ ಸಮಾನತೆಯ ಕನಸು ಮರೀಚಿಕೆಯಾಗಿದೆ. ತನ್ನ ಕುಟುಂಬವನ್ನು ಶಕ್ತಿಮೀರಿ ಮುನ್ನೆಡೆಸಿಕೊಂಡು ಬಂದರೂ ದಲಿತ ಪುರುಷನ ಎಡಬಿಡಂಗಿತನ ಮತ್ತು ನಡವಳಿಕೆಗಳಿಂದ ದಲಿತ ಮಹಿಳೆ ನಲುಗಿ ಹೋಗುತ್ತಾಳೆ.

ಎನ್.ಕೆ. ಹನುಮಂತಯ್ಯ ಅವರು ತಮ್ಮ ತಾಯಿಯನ್ನು ಕುರಿತಾಗಿ ಇಂಥ ಚಿತ್ರಣವನ್ನು ತಮ್ಮ ಅನುಭವ ಮನಸ್ಸುಗಳಿಂದ ಕಟ್ಟಿಕೊಟ್ಟಿದ್ದಾರೆ. ಅವರ ಅಪ್ಪ ರಾತ್ರಿ ವೇಳೆ ಕುಡಿದು ಮನೆಗೆ ವಾಪಸ್ಸಾಗುವಾಗ ಒಂದು ಬಾಟಲಿ ಸೇಂದಿಯನ್ನು ತರುತ್ತಿದ್ದ. ಅವ್ವನಿಗೆ ಬಲವಂತವಾಗಿ ಕುಡಿಸುತ್ತಿದ್ದ. ದಿನ ಕಳೆದಂತೆ ಅವ್ವನೂ ಕುಡಿಯುವುದರಲ್ಲಿ ನಿಸ್ಸೀಮಳಾಗುತ್ತಾಳೆ. ಇಡೀ ಹಟ್ಟಿಯಲ್ಲಿ ಕುಡಿಯುವ ಹೆಂಗಸೆಂದರೆ, ಲಕ್ಷ್ಮಮ್ಮನೇ ಎನ್ನಿಸಿಕೊಂಡಳು. ಅಪ್ಪ ಹಟ್ಟಿಯ ಯಾವುದೋ ಹೆಂಗಸಿನ ಜೊತೆಗೆ ಪ್ರೇಮ ಸಂಬಂಧ ಇಟ್ಟುಕೊಂಡಿದ್ದನ್ನು ಅವ್ವ ಅರಿಯುತ್ತಾಳೆ. ಕೆಲವೊಮ್ಮೆ ಅಪ್ಪ ಆ ಹೆಂಗಸಿನ ಜೊತೆ ಇರುವುದನ್ನು ಅವ್ವ ಖುದ್ದಾಗಿ ನೋಡಿ, ಅಪ್ಪ ಅವ್ವನ ಬಗ್ಗೆ ಕೋಪಗೊಂಡು ಹೊಡೆಯಲು ಶುರು ಮಾಡಿದ. ಹೀಗೆ ಪ್ರತಿ ರಾತ್ರಿ ಶುರುವಾಗುತ್ತಿದ್ದ ಅವ್ವ–ಅಪ್ಪರ ಜಗಳ ಹೊಡೆದಾಟದಲ್ಲಿ ಅಂತ್ಯವಾಗುತ್ತಿತ್ತು. ಅನಾಥ ಪ್ರಜ್ಞೆಯಿಂದಲೋ ಅಥವಾ ಕಳೆದುಕೊಂಡ ಪ್ರೀತಿಯ ಹಂಬಲದಿಂದಲೋ ವ್ಯಕ್ತಿ ತನ್ನ ಸುತ್ತ ಪರ್ಯಾಯವಾದ ಪ್ರೀತಿಯನ್ನು ಹುಡುಕುತ್ತಿರುತ್ತಾನೆ.

ಎನ್.ಕೆ.ಹನುಮಂತಯ್ಯ ಅವರ ಅಪ್ಪನಂತೆಯೇ ಅವ್ವನೂ ಅಂತರಂಗವನ್ನು ಅರ್ಥ ಮಾಡಿಕೊಳ್ಳುವ ಜೀವಕ್ಕಾಗಿ ಕಾಯಲಾರಂಭಿಸುತ್ತಾಳೆ. ಕೊನೆಗೆ, ಕುಡಿಯುವುದನ್ನು ಕಲಿತ ಅವ್ವ,

ಅಪ್ಪನಿಲ್ಲದಿರುವಾಗ, ಮನೆಯಲ್ಲಿರುತ್ತಿದ್ದ ಎಣ್ಣೆಯನ್ನು ಮಾರಿ. ಹಣ ಕೂಡಿಟ್ಟುಕೊಳ್ಳುತ್ತಾಳೆ. ಮುಂದೆ ಆತ್ಮಕಥನಕಾರರು ಹೇಳಿರುವಂತೆ, “ಅಪ್ಪನಿಲ್ಲದ ರಾತ್ರಿ ಅವ್ವನ ಮೈತುಂಬಾ ಮಿಂಚು ಸೋರುತ್ತಿತ್ತು. ಮಧ್ಯರಾತ್ರಿಯಲ್ಲಿ ಗುರುತಿಲ್ಲದ ನೆರಳುಗಳು ಮನೆಯೊಳಗೆ ನುಸುಳುತ್ತಿದ್ದವು. ಅವ್ವನ ಜೊತೆ ಕತ್ತಲಿನಲ್ಲಿ ನಲಿದಾಡಿ ಮುಂಜಾನೆಯಾದೊಡನೆ ಕರಗುತ್ತಿದ್ದವು. ನನ್ನ ತಮ್ಮ ಗಾಢ ನಿದ್ರೆಯಲ್ಲಿರುತ್ತಿದ್ದ. ಆದರೆ, ನೆರಳುಗಳ ಸದ್ದಿಗೆ ನಾನು ಎಚ್ಚರವಾಗುತ್ತಿದ್ದೆ. ಆ ನೆರಳುಗಳು ನನ್ನ ಕಣ್ಣಲ್ಲಿ ಚಿತ್ರಗಳಾಗಿ ಚುಚ್ಚುತ್ತಿದ್ದವು. ಅಪ್ಪನಿಲ್ಲದ ರಾತ್ರಿಗಳು ಅವ್ವನ ರಾತ್ರಿಗಳು ಅವ್ವನ ಬಾಳಿನಲ್ಲಿ ಗಾಢವಾಗತೊಡಗಿದವು.”[೬೦] ಇಂತಹ ಸಂದರ್ಭಗಳು ಅಪ್ಪ ನೆಂಟರ ಮನೆಯಿಂದ ವಾಪಸ್ಸಾದ ರಾತ್ರಿ ಮನೆಯಲ್ಲಿ ಘಟಿಸಿರುವ ಸಂಗತಿಯನ್ನು ಕುರಿತಂತೆ ಬರೆಯುತ್ತಿದ್ದರು. ಅವ್ವನನ್ನು ಹಿಟ್ಟಿನ ಕೋಲು, ಒನಕೆಗಳಿಂದ ಜೋರಾಗಿ ಬಾರಿಸುತ್ತಿದ್ದ. ಅವ್ವನ ತಲೆ, ಮೂಗು, ಬಾಯಲ್ಲಿ ರಕ್ತ ಚಿಮ್ಮುತ್ತಿತ್ತು. ಒಂದೆರಡು ದಿನ ಕಳೆದ ನಂತರ ಮತ್ತೆ ಹೊಡೆದಾಟವಾಗುತ್ತಿತ್ತು. ಲೇಖಕರು ಹಗಲಿರುಳು ಈ ಜಗಳದಲ್ಲಿಯೇ ಬೆಳೆಯ ತೊಡಗುತ್ತಾರೆ. ಅವ್ವನ ವಿರುದ್ಧ ಅಪ್ಪ ದೂರುತ್ತ, ಅಪ್ಪನ ವಿರುದ್ಧ ಅವ್ವ ದೂರುತ್ತ, ಇಬ್ಬರಲ್ಲಿ ಯಾರು ಸರಿ, ಯಾರು ತಪ್ಪು ಎಂಬುದು ಚಿಕ್ಕವರಾಗಿದ್ದ ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವ್ವ ಮಾತ್ರ ಅವರಿಗೆ ಅಪ್ಪನಿಗೆ ನೆರಳಿನ ವಿಷಯ ತಿಳಿಸಬೇಡಿರೆಂದು, ಬೇಯಿಸಿದ ಕೋಳಿಮೊಟ್ಟೆ, ಮಿಠಾಯಿ, ಚಕ್ಕುಲಿ ಇತ್ಯಾದಿಗಳನ್ನು ಕೊಡಿಸುತ್ತಿದ್ದಳು. ಅಪ್ಪನ ಎದುರು ಅವರ ನಾಲಗೆ ಸ್ತಬ್ಧವಾಗುತ್ತಿತ್ತು.

ದಲಿತ ಮಹಿಳೆ ಮತ್ತು ದಲಿತ ಪುರುಷರ ಇಂಥ ದುರಂತ ಇಷ್ಟಕ್ಕೆ ನಿಲ್ಲದೆ, ನೆರಳುಗಳ ಉಡುಗೆಯಲ್ಲಿ ನಲಿಯುತ್ತಿದ್ದ ಅವ್ವನ ಬಗ್ಗೆ ಅಪ್ಪನಿಗೆ ಅತೀವವಾದ ಕೋಪವಿದ್ದು, ಅವ್ವನ ಮುಂದಲೆಯನ್ನು ಕತ್ತರಿಸುವ, ಎದೆಗೆ ಸೂಜಿಯಿಂದ ಚುಚ್ಚುವ ಹಾಗೂ ಕುದಿಯುವ ಬಾಡಿನ ಮಡಕೆಯನ್ನು ಅವ್ವನ ತಲೆಯ ಮೇಲೆ ಸುರಿಯುವಂತಹ ಹಿಂಸೆಯ ಕೆಲಸದಲ್ಲಿ ಅವರ ಅಪ್ಪ ನಿರತನಾಗುತ್ತಾನೆ. ಚಿತ್ರಹಿಂಸೆ ತಾಳಲಾರದೆ ಅವ್ವ ರಾತ್ರೋರಾತ್ರಿ ಮನೆ ಬಿಟ್ಟು ಗಂಟು ಮೂಟೆ ಕಟ್ಟಿಕೊಂಡು ಓಡಿಹೋಗುವುದು, ನಂತರ ಅವ್ವನ ಕ್ಷಮೆ ಕೇಳಿ ವಾಪಸ್ಸು ಮನೆಗೆ ಕರೆದುಕೊಂಡು ಬರುವುದು, ಒಂದೆರಡು ದಿನ ಸಂತೋಷದಿಂದ ಇದ್ದು ಪುನಃ ಜಗಳವಾಡುವುದು, ಹೀಗೆ ದಲಿತ ಕುಟುಂಬವೊಂದರ ಜೀವನ ಸಾಗುತ್ತದೆ. ದಲಿತ ಕುಟುಂಬದೊಳಗೆ ನುಸುಳಿದ ಅನ್ಯಸಂಬಂಧಗಳ ಪರಿಣಾಮವನ್ನು ಅಕ್ರಮಸಂಬಂಧವೆನ್ನಬೇಕೋ, ಅಥವಾ ಲೈಂಗಿಕ ಸ್ವಾತಂತ್ರ್ಯವೆನ್ನಬೇಕೋ ಎಂಬ ತರ್ಕಾತರ್ಕಕ್ಕೂ ಮೀರಿದಂತೆ ಇಂಥ ಸಂಗತಿಗಳನ್ನು, ಅದರಿಂದಾದ ದುರಂತಗಳನ್ನು

ಎನ್.ಕೆ.ಹನುಮಂತಯ್ಯ ಅವರು ನಿರ್ಭಿಡೆಯಿಂದ ನಿರುಮ್ಮಳವಾಗಿ ಹೇಳಿರುವುದು ದಲಿತಜಗತ್ತಿನ ಕರಾಳಸ್ಮೃತಿಗಳನ್ನು ಹಿಡಿದು ಅಲ್ಲಾಡಿಸುವಂತಿದೆ.

ದಲಿತ ಮಹಿಳೆಯರು ಕೌಟುಂಬಿಕವಾಗಿ ತಮ್ಮ ಪುರುಷರಿಂದ ಎಷ್ಟೇ ದೌರ್ಜನ್ಯಕ್ಕೆ ಒಳಗಾದರೂ ಲೋಕ ಕಲ್ಯಾಣಾರ್ಥವಾದ ತತ್ವಪದ ಗಾಯನ ಮೊದಲಾದ ಶ್ರದ್ಧೆಗಳನ್ನು ಮರೆಯುತ್ತಿರಲಿಲ್ಲ. ತುಂಬಾಡಿ ರಾಮಯ್ಯ ಅವರು ಇಂಥ ತತ್ವಪದ ಪರಂಪರೆಯನ್ನು ಮುಂದುವರೆಸಿದ ದಲಿತ ಮಹಿಳೆಯ ಸಂಕಥನವನ್ನು ಕಟ್ಟಿಕೊಟ್ಟಿದ್ದಾರೆ: “ದೊಡ್ಡಪ್ಪ ಮನೆ ಮತ್ತು ಮಕ್ಕಳ ಜವಾಬ್ದಾರಿಯನ್ನು ಎಂದೂ ಹೊತ್ತವರಲ್ಲ. ಸದಾ ಊರೂರು ಅಲೆಯುತ್ತಿದ್ದ ಅಲೆಮಾರಿ. ಹೀಗಾಗಿ ಮನೆಯ ಜವಾಬ್ದಾರಿಯನ್ನು ಕರಿಯಮ್ಮ ಮತ್ತು ನಾಗಮ್ಮನವರೇ ನಿಭಾಯಿಸುತ್ತಿದ್ದರು. ಇದಕ್ಕಾಗಿ ಹೊಲಗಳಲ್ಲಿ ಕೂಲಿಮಾಡಿ ದುಡಿಯುತ್ತಿದ್ದರು. ಒಮ್ಮೊಮ್ಮೆ ಕೂಲಿ ಸಿಗದಿದ್ದರೆ, ಅನುಕೂಲಸ್ಥರ ಮನೆಮುಂದು ಕುಂತು ಅಕ್ಕಿ–ರಾಗಿ ಮಾಡಿಕೊಟ್ಟು, ಅವರು ಕೊಡುತ್ತಿದ್ದ ಹಿಟ್ಟು–ಸಾರನ್ನು ಸ್ವಲ್ಪ ಮಾತ್ರ ತಿಂದು, ಉಳಿದಿದ್ದನ್ನು ಸೆರಗಲ್ಲಿ ಕಟ್ಟಿಕೊಂಡು ಬಂದು ಮಕ್ಕಳನ್ನು ಸಾಕುತ್ತಿದ್ದರು.”[೬೧] ಇಷ್ಟೆಲ್ಲಾ ಕಷ್ಟಪಟ್ಟು ಮಕ್ಕಳು ಮತ್ತು ತನ್ನ ಗಂಡನನ್ನು ಸಾಕಿದರು. ಕೊನೆಗೆ ತಾವು ಸಾಕಿದ ಮಕ್ಕಳು ಮತ್ತು ಗಂಡನಿಂದ ಬೈಗುಳ–ಒದೆ ತಿಂದೂ ಸಹಿಸಿಕೊಂಡಿದ್ದ ಸಹನೆಯ ಮೂರ್ತಿಗಳು ದಲಿತ ಮಹಿಳೆಯರು.

ಇಂಥದ್ದರ ನಡುವೆಯೂ ದಲಿತ ಮಹಿಳೆಯರ ಮೇಲೆ ಸಂಪ್ರದಾಯ, ನಂಬಿಕೆ, ಆಚರಣೆಯ ಹೆಸರಿನಲ್ಲಿ ಮೇಲು ವರ್ಗದ ಪುರುಷರು ನಡೆಸುವ ದೌರ್ಜನ್ಯವೂ ಕಡಿಮೆ ಇರಲಿಲ್ಲ. ಕೆಳವರ್ಗದ ಅದರಲ್ಲೂ ದಲಿತ ಸ್ತ್ರೀಯರ ಜೊತೆ ನಡೆಸುವ ಓಕುಳಿಯ ಉತ್ಸವ; ಶ್ರಾವಣ ಮಾಸದಲ್ಲಿ ಹನುಮಂತನ ಎದುರು ನಡೆಸುವ ಕ್ರೀಡಾ ಉತ್ಸವಗಳು ಅಸ್ಪೃಶ್ಯರನ್ನು ಕಾಡುತ್ತಿರುವ ಸಾಂಪ್ರದಾಯಿಕ ಶೋಷಣೆಯೇ ಸರಿ. ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಓಕುಳಿ ಉತ್ಸವದಂಥ ಶೋಷಣೆಯನ್ನು ಬ್ರಾಹ್ಮಣಶಾಹಿ ಮನಸ್ಥಿತಿಗಳು ಸಮರ್ಥಿಸಿಕೊಳ್ಳುವುದು, ಪ್ರತಿವರ್ಷ ಈ ಕ್ರೀಡೆ ನಡೆಯಲೇಬೇಕೆಂಬ ನಿಯಮ, ನಡೆಸದಿದ್ದರೆ ಊರಿಗೆ ಮಳೆಬರಲಾರದು. ಬೆಳೆಗೆ ರೋಗ ಬೀಳುತ್ತದೆ. ಊರಿಗೆ ಮಾರಿ (ರೋಗ) ಬರುತ್ತದೆ. ಶನಿಯ ಕಾಟ ಹೆಚ್ಚುತ್ತದೆ ಎಂದು ಈ ನಂಬಿಕೆಗಳಿಗೆ ಹೆದರುವ ದಲಿತ ಮಹಿಳೆಯರು ಪುರುಷರು ಹೀಗೆ ಮನರಂಜನೀಯ ನೆಲೆಯಲ್ಲಿ ಶೋಷಣೆಗೆ ಬಲಿಯಾಗುತ್ತಾರೆ. ಎಂಬ ವಿವರವನ್ನು ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಕಥನವಾದ ಗೌರ್ಮೆಂಟ್ ಬ್ರಾಹ್ಮಣದಲ್ಲಿ ದಾಖಲಿಸಿದ್ದಾರೆ. “ಸಂಪ್ರದಾಯದ ಸೋಗಿನಲ್ಲಿ ಇಂದಿಗೂ ‘ಓಕುಳಿಯ ಈಸ್ಟ್‌ಮನ್ ಕಲರ್ ಚಿತ್ರ’ ನೋಡುವ ಈ ಗಂಡಸರು ತಮ್ಮ

ಮಡದಿಯರನ್ನು ಈ ರೀತಿ ನಿಲ್ಲಿಸಿ ಬಹಿರಂಗವಾಗಿ ಆಡುತ್ತೀರಿಯೇ? ಎಂದು ಪ್ರಶ್ನಿಸಿದರೆ ಕಣ್ಣು ಕೆಕ್ಕರಿಸುತ್ತಾರೆ. ತಮ್ಮ ಮಡದಿಯರಂತೆ ಇವರೂ ಮಾನವುಳ್ಳ ಹೆಂಗಸರು ಎಂಬ ಭಾವನೆ ಇವರಿಗೆ ಬರುವುದಾದರೂ ಯಾವಾಗ?"[೬೨] ಎಂಬ ಲೇಖಕರ ಪ್ರಶ್ನೆಗೆ ಸಂಪ್ರದಾಯ ವ್ಯವಸ್ಥೆ ಉತ್ತರಿಸಬೇಕಾಗಿದೆ.

ಭಾರತದ ಪರಂಪರೆಯು ಮಹಿಳೆಯನ್ನು 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾ' ಎಂದು ದೈವೀಕ ಭಾವದಿಂದ ಕಂಡಿದೆ. ಆದರೆ, ಇಂಥ ನಾಡಿನಲ್ಲೂ ಪ್ರಾಚೀನ ಕಾಲದಿಂದ ಇಂದಿನವರೆಗೂ, ಹೆಣ್ಣು ಒಂದಲ್ಲ ಒಂದು ರೀತಿಯಲ್ಲಿ ಪುರುಷನಿಂದ ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಾಳೆ. ಒಂದು ಹೆಣ್ಣು ಪ್ರಾಪ್ತ ವಯಸ್ಕಳಾದೊಡನೆ ಹುಡುಗರಿಂದ ಹಿಡಿದು ಮುದುಕರವರೆಗೂ ಲೈಂಗಿಕ ಕಿರುಕುಳವನ್ನು ಸಹಿಸಿಕೊಳ್ಳುವುದು ಒಂದು ಸಾಹಸದ ಯಶೋಗಾಥೆಯಾಗಿದೆ. ಇಂತಹ ತಮ್ಮ ಒಂದರೆಡು ಅನುಭವಗಳನ್ನು ದು.ಸರಸ್ವತಿಯವರು ನಮ್ಮ ಮುಂದಿಡುತ್ತಾರೆ: "ಶಾಲೆಗೆ ಹೋಗುವಾಗ ಮೂರಂತಸ್ಥಿನ ಮಹಡಿಯಲ್ಲಿದ್ದ ಮುದಿಯ ಪಂಚೆ ಸಂದಿಂದ ಏನೊ ತೋರಿಸ್ಕಂಡು ಹಿಡ್ಕಳಿಕೆ ಬರ್ತಾ ಇದ್ದ. ಹೆದರ್ಕೆ ಆಗಿ ಓಟ, ಆ ರೋಡಲ್ಲೆ ಹೋಗ್‌ಬಾರದು ಕಾರ ಬೇರೆನೋನು, ಮುದುಕ ಬೇರೆಯೋನು, ಆದ್ರೆ ಇವ್ರು ಪಕ್ಕದಮನೇನು, ವಟ್ಗೆ ಆಡ್ಕೊಂಡು ಬೆಳ್ದೋರು ಅಣ್‌ತಮ್‌ದಿರಾಗ್ಬೇಕು.. ಅವ್ವ ಅವತ್ತು ಮುಸಂಬಿ ತರಕ್ಕೆ ಹೋಗು ಅಂತೇಳಿ ಅವನನ್ನು ಜೊತೆಲೋಗು ಒಬ್ಳೆ ಅಂದ್ಲು, ಜೊತೆಲೋಗುವಾಗ ಚಳಿಅಲ್ವ ಅಂತ ಅವನ ಶಾಲುನಲ್ಲೆ ನಂಗೂ ಹೊದ್ಸಿ ಹೆಗಲ ಮೇಲೆ ಕೈ ಹಾಕಿ ಹಂಗೆ ಮೆತ್ತಗೆ ಜಾಕೀಟೊಳ್ಗೆ ಕೈ ಇಳಿಸ್ತಾನೆ ಹಲ್ಕನಾಯಿ, ಹೆದ್ರುಕೊಂಡು ಒಡೋದೆ".[೬೩] ಇದು ವಯೋಮಾನಗಳನ್ನು ಮೀರಿ ದಲಿತ ಮಹಿಳೆಯರ ಮೇಲೆ ಪುರುಷ ಸಮಾಜದ ದೌರ್ಜನ್ಯ, ಅವ್ಯವಸ್ಥೆಯನ್ನು ಎತ್ತಿ ತೋರಿಸುತ್ತದೆ. ಯಾರನ್ನು ನಂಬುವುದು, ಯಾರನ್ನು ಬಿಡಿವುದು ಎಂಬ ಪ್ರಶ್ನೆಯು ದಲಿತ ಮಹಿಳೆಯರಲ್ಲಿ ಹುಟ್ಟುತ್ತದೆ. ಪ್ರಸ್ತುತ ಸಂದರ್ಭದಲ್ಲಿ ದಲಿತ ಮಹಿಳೆಯರ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಇಂದು ಲೈಂಗಿಕ ಕಿರುಕುಳ, ಲೈಂಗಿಕ ಪ್ರವೃತ್ತಿಗೆ ವಯಸ್ಸಿನ ಮಿತಿ ಇಲ್ಲದಾಗಿದೆ. ಐದರಿಂದ ಎಪ್ಪತ್ತರವರೆಗಿನ ಅಪ್ರಾಪ್ತ ಬಾಲಕಿಯರು, ಪ್ರಾಪ್ತಮಹಿಳೆಯರು ಮಾತ್ರವಲ್ಲದೆ ವಯೋವೃದ್ಧರ ಮೇಲೂ ಲೈಂಗಿಕ ದೌರ್ಜನ್ಯ ನಡೆಯುತ್ತಿದೆ. ತಂದೆ ಮಗಳ ಮೇಲೆ, ಮೈದ ಅತ್ತಿಗೆಯ ಮೆಲೆ ನಡೆಸುತ್ತಿರುವ ದೌರ್ಜನ್ಯಗಳಿಂದ ಕೌಟುಂಬಿಕ ಸಂಬಂಧಗಳಿಗೆ ಬೆಲೆಯೇ ಇಲ್ಲದಂತೆ ಆಗಿದೆ.

ದಲಿತ ಮಹಿಳೆಯಾಗಿ ತನ್ನ ಸ್ವಾಭಿಮಾನೀ ಹಾಗೂ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಳ್ಳುವುದು ಈ ಆಧುನಿಕ ಸಂದರ್ಭದಲ್ಲಿ ಸಾಹಾಸದ ಬದುಕಾಗಿದೆ. ಹೆಜ್ಜೆ ಹೆಜ್ಜೆಗೂ ಯಾಜಮಾನ್ಯ

ವ್ಯವಸ್ಥೆಯು ದಲಿತ ಮಹಿಳೆಯ ಮೇಲೆ ದೌರ್ಜನ್ಯ ಮತ್ತು ಆರೋಪಗಳನ್ನು ಮಾಡುತ್ತಲೇ ಬರುತ್ತಿದೆ. ದು.ಸರಸ್ವತಿಯವರು ಬದುಕಿನಲ್ಲಿ ಕಂಡುಂಡ ಯಾಜಮಾನ್ಯ ವ್ಯವಸ್ಥೆಯ ಮತ್ತು ದೌರ್ಜನ್ಯದ ಕರಾಳ ರೂಪದ ಅನುಭವವನ್ನು ನಿರೂಪಿಸಿದ್ದಾರೆ. ಕೂಡುಕಳಿ, ಲಾಭನಷ್ಟ, ಅಂಕಿಸಂಖ್ಯೆಗಳ ಕೆಲಸಕ್ಕೆ ಸೇರಿದ ಎರಡು ವರ್ಷಗಳಾದ ಮೇಲೆ ಡೊಡ್ಡ ಅಕೌಂಟ್ ಪುಸ್ತಕ ಬರೆಯಲು ಶುರುಮಾಡುತ್ತಾರೆ. ಈ ಅಂಕೆ ಸಂಖ್ಯೆಗಳೊಂದಿಗೆ ಏನು ಮಾಡುವುದೂ ತಲೆ ನೋವೆನಿಸುತ್ತದೆ. ನೋಟುಗಳನ್ನು ಎಣೆಸಲೇ ಭಯವಾಗುತ್ತದೆ. ಮ್ಯಾನೇಜರ್, ಕ್ಯಾಶಿಯರ್ ಏನೂ ಹೆದರಿಕೊಬೇಡಿ ಮೇಡಂ ನಾವು ನೋಡ್ಕೋತಿವಿ ಅನ್ನೋರು, ಚೆನ್ನಾಗಿ ಮಾತಾಡಿಸುತ್ತಾರೆ. ಇವರು ಬರೆಯುತ್ತಿದ್ದ ಅಕೌಂಟ್ ಪುಸ್ತಕದಲ್ಲಿ ಬರೆದ ಅಂಕಿ ಸಂಖ್ಯೆಗಳು ಬದಲಾಗುತ್ತಿದ್ದವು, ಸೊನ್ನೆಗಳು ಹೆಚ್ಚಾಗುತ್ತಿದ್ದವು, ಇವರು ನೋಡಿಕೊಳ್ಳಲಿಲ್ಲ. ನಿತ್ಯವೂ ಬರೆಯದೆ ಆಗಾಗ್ಗೆ ಬರೆಯುತ್ತಿದ್ದರಿಂದ ಪೇಜು ತಿರುಗಿಸಿ ನೋಡಲಿಲ್ಲ ಬರೆದಾಗ ಟ್ಯಾಲಿ ಆಗದೆ ಪರದಾಡುವಾಗ ಕ್ಯಾಶಿಯರ್ ತಾನು ಟ್ಯಾಲಿ ಮಾಡ್ತೀನಿ. ನೀವು ಸಹಿ ಮಾಡಿ ಇಡಿ ಮೇಡಂ ಅಂತ ವಿನಯವಾಗಿ ಹೇಳುತ್ತಿರುತ್ತಾನೆ.

ಲೇಖಕಿಯು ಕಛೇರಿಯಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದರು. ಆದರೆ ಕಛೇರಿಯ ಬೇರೆ ಸಿಬ್ಬಂದಿಗಳು ಇವರ ಪ್ರಾಮಾಣಿಕತೆ ಹಾಗೂ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ಇವರು ಜೈಲಿಗೆ ಹೋಗುವಂತೆ ಮಾಡಿದರು. ಒಮ್ಮೆ ಅಕ್ಕನ ಹೆರಿಗೆಗೆಂದು ಒಂದು ತಿಂಗಳು ರಜೆ ಹಾಕಿ ಊರಿಗೆ ಹೋಗಿದ್ದಾಗ ತುರ್ತಾಗಿ ಬರಬೇಕೆಂಬ ಸೂಚನೆ ಬರುತ್ತದೆ. ಕೂಡಲೆ ಹೊರಟು ಆಫೀಸಿಗೆ ಹೋದರೆ ಆಫೀಸಿನ ತುಂಬಾ ಜನ. ಆಡಿಟರ್‌ಗಳು, ಸೀಲು ಮಾಡಿದ ಬೀರುಗಳು, ಎಲ್ಲೆಡೆ ಅಕೌಂಟ್ ಪುಸ್ತಕಗಳು, ಚಲನ್ ಬಂಡಲ್‌ಗಳು. ಕಛೇರಿಯಲ್ಲಿ ಅದೆಷ್ಟೊ ಕೋಟಿ ಹಣದ ಅವ್ಯವಹಾರ ನಡೆದಿರುತ್ತದೆ. ಆ ಲೆಕ್ಕವನ್ನು ಬರೆದವರು ಲೇಖಕಿಯಾಗಿದ್ದರಿಂದ ಪೊಲೀಸರು ಅವರನ್ನು ಜೀಪಿನಲ್ಲಿ ಹತ್ತಿಸಿಕೊಂಡು ಠಾಣೆಗೆ ವಿಚಾರಣೆಗೆಂದು ಕರೆದೊಯ್ಯುತ್ತಾರೆ. ಠಾಣೆಯಲ್ಲಿ, ಹೆಸರೇನು? ವಯಸ್ಸೆಷ್ಟು? ತಂದೆ ತಾಯಿ ಯಾರು? ಮನೇಲಿ ಎಷ್ಟು ಜನ? ಕೆಲಸಕ್ಕೆ ಸೇರಿ ಎಷ್ಟು ವರ್ಷವಾಯಿತು? ನಿನಗೂ ಅವನಿಗೂ ಏನು ಸಂಬಂಧ?, ನಿನಗೂ ಅವನು ದುಡ್ಡು ಕೊಟ್ಟಿದ್ದಾನಂತೆ?' ಅವನ ಜೊತೆಯಲ್ಲಿ ಸುತ್ತುತ್ತಾ ಇದ್ಯಂತೆ?, ರಾತ್ರಿ ಹನ್ನೊಂದು ಗಂಟೆಲೆಲ್ಲ ಮನೆಗೆ ಕರ್ಕೊಂಡು ಬಂದು ಬಿಡ್ತಾ ಇದ್ದನಂತೆ?' ನಿನ್ನ ಅಕ್ಕನ ಹೆರಿಗೆಗೆ ನೀನೇ ಯಾಕ್ ಹೋದೆ?' ನಿಮ್ಮ ಅತ್ತಿಗೆಯರು ಯಾರು ಹೋಗಲಿಲ್ಲ?, ನೀನ್ ಯಾಕೆ ಇನ್ನು ಮದ್ವೆಮಾಡ್ಕೊಂಡಿಲ್ಲ?, ಬೇರೆ ಮನೆ ಯಾಕೆ ಮಾಡ್ಕೊಂಡಿದಿಯಾ?', ಎಂದೆಲ್ಲ ಪ್ರಶ್ನೆಗಳನ್ನು ಕೇಳುತ್ತಾರೆ. ಇದಕ್ಕೆ ಉತ್ತರವಾಗಿ ಲೇಖಕಿಯು, "ಯಾಕೆ ಇದನ್ನೆಲ್ಲ ಕೇಳ್ತಾ ಇದಾರೆ, ನಾನೇನ್ ತಪ್ ಮಾಡಿದಿನಿ ಅಂತ ಹೀಗೆ ಪ್ರಶ್ನೆ ಕೇಳ್ತಾ

ಇದ್ದಾರೆ. ಏನೇನೂ ತೋಚದೆ ಬೆಪ್ಪು ಹಿಡಿದವಳಂತೆ ಕೂತೆ. ಸಾವರಿಸಿಕೊಂಡು, ನನಗೆ ಯಾರೂ ದುಡ್ಡು ಕೊಟ್ಟಿಲ್ಲ ಸಾರ್, ಯಾರೊಂದಿಗೂ ನಾನು ಸುತ್ತಾಡಿಲ್ಲ, ನನಗೆ ಇಷ್ಟ ಇಲ್ಲ ಅದಕ್ಕೆ ಮದ್ವೆ ಆಗಿಲ್ಲ, ನನ್ನದೇ ಮನೆ ಬೇಕು ಅಂತ ಮನೆ ಮಾಡಿಕೊಂಡಿದ್ದೀನಿ, ಪೊಲೀಸ್ ಸ್ಟೇಶನ್ನಿಗೆ ಕರ್ಕೊಂಡ್ ಬರುವಂತಹ ಕೆಲ್ಸ ಏನು ಮಾಡಿಲ್ಲ ಅಂದೆ. ಆ ಪೊಲೀಸ್ ಅಧಿಕಾರಿ ಧಡಕ್ಕನೆದ್ದು ನನ್ನ ಪಕ್ಕದಲ್ಲಿದ್ದ ಸ್ಟೂಲಿನ ಮೇಲೆ ಕಾಲಿಟ್ಟು ಓಹೋಹೋ ಪೊಲೀಸ್ ಸ್ಟೇಷನ್ನಿಗೆ ಬರೋದು ನಿಂಗೆ ಅವಮಾನನಾ ಎಂದು, ರಪ್ಪನೆ ಲಾಠಿಯನ್ನು ಟೇಬಲ್ಲಿನ ಮೇಲೆ ಎತ್ತಿ ಬಾರಿಸಿದ. ಬೆಚ್ಚಿ ಬಿದ್ದು ತತ್ತರಿಸಿ ಹೋದೆ."[೬೪] ಹೀಗೆ ಮುಂದೆ ವಿಚಾರಣೆಗಳು ನಡೆಯುತ್ತವೆ.

ಲೇಖಕಿ ಅಸಹಾಯಕಳಾಗಿದ್ದ ಕಾರಣ ಯಜಮಾನ್ಯ ಕುತಂತ್ರದ ವ್ಯವಸ್ಥೆಯಿಂದ ನಲುಗಿಹೋತ್ತಾರೆ. ಆದರೆ ಧೈರ್ಯ ಕಳೆದುಕೊಳ್ಳದೆ ಹೋರಾಟದ ಹಾದಿಯಲ್ಲಿ ಹಲವಾರು ಮಾನವೀಯ ಮನಸ್ಸುಗಳ ಸಹಾಯದಿಂದ ನಿರಪರಾಧಿಯೆನಿಸಿಕೊಳ್ಳುತ್ತಾರೆ. ಇಷ್ಟಾಗ್ಯೂ ಇಂತಹ ಯಜಮಾನ್ಯ ವ್ಯವಸ್ಥೆಯಿಂದ ಕೂಡಿದ ಸಮಾಜದಲ್ಲಿ ಇಂಥ ಅನಾಹುತಗಳನ್ನು ತಡೆಯಲು ಸಂವಿಧಾನದಲ್ಲಿ ಕಲಂ ೩೭೦ ಎ, ೩೭೦ ಬಿ, ೩೬೭ ಸಿ, ಕಲಂ ೩೭೬ ಬಿ, ಕಲಂ ೩೭೭ ವಿಧಿಗಳ ಮುಖೇನ ದಂಡ ಮತ್ತು ಶಿಕ್ಷೆಯನ್ನು ವಿಧಿಸುತ್ತದೆ. ಆದರೆ, ಸಂವಿಧಾನ ಇಷ್ಟೆಲ್ಲ ಸವಲತ್ತುಗಳನ್ನು ಒದಗಿಸಿದ್ದರೂ ಇಂದಿಗೂ ಅನೇಕ ಸ್ತ್ರೀಯರು ಸಂಪ್ರದಾಯ ಕಟ್ಟುಪಾಡಿಗೆ ಒಳಗಾಗಿ, ನಯವಂಚನೆ ಹಾಗೂ ಪುರುಷ ದೌರ್ಜನ್ಯದ ಅತಿರೇಕಕ್ಕೂ ಸಿಲುಕಿ ಇನ್ನೂ ನರಳುತ್ತಿರುವುದು ಈ ಸಮಾಜ ರೋಗಗ್ರಸ್ತವಾಗಿರುವುದನ್ನೇ ಬಿಂಬಿಸುತ್ತದೆ.

ಸ್ವಾತಂತ್ರ್ಯೋತ್ತರ ಸಂದರ್ಭದ ಪ್ರಜಾಪ್ರಭುತ್ವದ ನೆಲೆಯ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳಲ್ಲಿ ಅನೇಕ ರೀತಿಯ ವ್ಯತ್ಯಾಸಗಳನ್ನು ಕಾಣುತ್ತೇವೆ. ಆದಿಕಾಲದಿಂದ ಇತ್ತೀಚಿನವರೆಗಿನ ಹೆಣ್ಣಿನ ಪರಿಸ್ಥಿತಿಯ ಸ್ಥಿತ್ಯಂತರಗಳು ಬೇರೆಯಾಗಿಯೇ ಇವೆ. ಮಾನವೀಯತೆ, ಅನುಕಂಪ ಹಾಗೂ ಪುರುಷನೊಡನೆ ಸಮಾನವಾಗಿ ಜೀವನ ನಡೆಸುವ ಸ್ವಾತಂತ್ರ್ಯವನ್ನು ಮಹಿಳೆ ಪಡೆದುಕೊಂಡಿದ್ದರು ಅಬಲೆಯಾಗಿದ್ದಾಳೆ. ಮಡದಿಯಾಗಿ ವಿಧೇಯತೆಯಿಂದ ಗಂಡನನ್ನು ಆರಾಧಿಸಿ ಪುರುಷನ ಸುಖ-ದುಃಖಗಳಲ್ಲಿ ಪಾಲ್ಗೊಂಡು ಅವನಿಗಾಗಿ ತನ್ನ ತನುಮನಗಳನ್ನು ತೆತ್ತು; ತಾಯಿಯಾಗಿ ಮಕ್ಕಳನ್ನು ಹೆತ್ತು ಹೊತ್ತು ಸಾಕಿದ್ದಾಳೆ. ಗಂಡನ ಬದುಕಿನ ಹೊರೆಹೊತ್ತು, ಗೃಹದೇವತೆಯಾಗಿ, ಅಥಿತಿಗಳನ್ನು ಸತ್ಕರಿಸಿ ಮನೆಯ ಅಭಿವೃದ್ದಿಗಾಗಿ ದುಡಿಯುತ್ತಾಳೆ. ತಾನಿಲ್ಲದೇ ಪುರುಷನಿಲ್ಲ; ಪುರುಷನಿಲ್ಲದೇ ತಾನಿಲ್ಲ ಎಂಬುದನ್ನು ಸಹ ತೋರಿಸಿಕೊಟ್ಟಿದ್ದಾಳೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಒತ್ತಡಗಳ ಕಾರಣದಿಂದ ದಮನಕ್ಕೆ ಒಳಗಾಗಿದ್ದ ವಿವಿಧ ಸಾಮಾಜಿಕ ಸ್ತರಗಳ ಅನುಭವ ಪ್ರಪಂಚದಲ್ಲಿ ಅನಾವರಣ ಗೊಂಡಿರುವ

ಮಹಿಳೆಯನ್ನು ಕಾಣುತ್ತೇವೆ. ಮಹಿಳೆ ಧೈರ್ಯದಿಂದ ಸಾಮಾಜಿಕ ಅಸಮಾನತೆಗಳ ವಿರುದ್ಧವಾಗಿ ಮಹತ್ವದಬದಲಾವಣೆಗಳಜೊತೆಗೆಭಾರತದಲ್ಲಿಸಮ–ಸಮಾನತೆಯನ್ನುಸಾಧಿಸಬೇಕೆಂಬ ಹಂಬಲವನ್ನು ವ್ಯಕ್ತಪಡಿಸುತ್ತಾಳೆ. ಇವುಗಳ ನಡುವೆಯು ದಲಿತ ಮಹಿಳೆ ಪಡೆದುಕೊಂಡ ಶಿಕ್ಷಣ, ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯಗಳು ಮಹಿಳೆಯನ್ನು ಸ್ವಾವಲಂಭಿಯನ್ನಾಗಿ ಮಾಡಿವೆ. ಶಾದಿ ಡಾಟ್‌ಕಾಮ್‌ನಲ್ಲಿ ದಲಿತ ಮಹಿಳೆಯೂ ತನಗೆ ಒಪ್ಪುವ ವರನನ್ನು ಆಯ್ಕೆ ಮಾಡಿಕೊಳ್ಳುವ ಸ್ಥಿತಿಯನ್ನು ಇಂದು ತಲುಪಿದ್ದಾಳೆ.

ಎಂ.ಪರಶಿವಮೂರ್ತಿ ಅವರ ‘ಗೆರೆದಾಟಿದ ಮೇಲೆ’ ಕೃತಿಯಲ್ಲಿ ಲೇಖಕರ ಮಗಳೇ ಇಂಟರ್ನೆಟ್ ಯುಗದ ವಧು ವರಾನ್ವೇಷಣೆಯನ್ನು ಮಾಡಿದ ಸಂದರ್ಭದ ನಿರೂಪಣೆಯಿದೆ. ಲೇಖಕರೇ ಹೇಳುವಂತೆ, “ಸೌಮ್ಯಳ ಮೊಂಡುತನ ಅವಳ ಭಾವೋದ್ವೇಗದ ತೀವ್ರತೆಯನ್ನು ಅರಿತಿದ್ದೆನಾದ್ದರಿಂದ ನಿನಗೆ ಮದುವೆ ಮಾಡಿದರೆ ಮದುವೆಯಾದ ಎರಡೇ ತಿಂಗಳೊಳಗೆ ನೀನು ನಿನ್ನ ಗಂಡನ ಜತೆ ಜಗಳ ಮಾಡಿಕೊಂಡು ಮನೆಗೆ ಬಂದುಬಿಡುತ್ತೀಯಾ. ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ನಿನಗೆ ಗಂಡನ್ನು ನಾನು ಹುಡುಕಲಾರೆ. ನೀನೇ ನಿನ್ನ ಗಂಡನನ್ನು ಹುಡುಕಿಕೋ ಅಂತ ತಮಾಷೆಗೆ ಹೇಳಿದ್ದರೂ, ಅದು ನನ್ನೊಳಗಿನ ನೈಜ ಅನಿಸಿಕೆಯಾಗಿತ್ತು. ಅವಳು ನನ್ನ ಮಾತಿನಂತೆಯೇ ಮಾಡಿ ತೋರಿಸಿದಳು! ದಿನಪತ್ರಿಕೆಯಲ್ಲಿ ಜಾಹಿರಾತು ಕೊಡುವ ಕಾಲ ಮುಗಿದು ಹೋಯಿತು. ಈಗೆಲ್ಲಾ ‘ಇಂಟರ್ನೆಟ್ ಯುಗ.’ ‘ಶಾದಿ ಡಾಟ್‌ಕಾಮ್’ಗೆ ಸದಸ್ಯಳಾದಳು. ತನ್ನ ಬಾಳ ಸಂಗಾತಿಯನ್ನು ತಾನೇ ಆರಿಸಿಕೊಂಡಳು”.[೬೫] ಇಂದು ಇಂಟರ್ನೆಟ್‌ನಲ್ಲಿ ಏನೆಲ್ಲಾ ಮೋಸ ನಡೆಯುತ್ತಿದ್ದರೂ ಅದ್ಯಾವುದನ್ನೂ ಈ ದಲಿತ ಮಹಿಳೆ ಲೆಕ್ಕಿಸುವುದಿಲ್ಲ. ಅಪ್ಪ ಅಮ್ಮ ಹುಡುಕುವ ಸಂಬಂಧದಲ್ಲಿ ಮೋಸ ನಡೆಯುವುದಿಲ್ಲವಾ? ನಮ್ಮಗಳ ನಡುವೆಯೇ ಎಷ್ಟೋ ಮೋಸಗಾರರಿರುತ್ತಾರೆ. ಇಂತಹ ಸಂದರ್ಭದಲ್ಲಿ ವಿಶ್ವವ್ಯಾಪ್ತಿಯಾದ ಇಂಟರ್ನೆಟ್‌ನಲ್ಲಿ ಮೋಸ ಇಲ್ಲದಿರುವುದು ಹೇಗೆ ಸಾಧ್ಯ? ಅದಕ್ಕೇ ಮನುಷ್ಯನಿಗೆ ವಿವೇಚನೆಯಿರಬೇಕು ಅಂತ ಸೂಕ್ಷ್ಮವಾಗಿ ಆಯ್ಕೆಯನ್ನು ಸಮರ್ಥಿಸಿಕೊಳ್ಳುತ್ತಾಳೆ. ಹಾಗೆಯೇ ಉತ್ತಮ ವರನನ್ನು ತಂದೆತಾಯಿಯರೂ ಮೆಚ್ಚುವಂತೆ ವರಪರೀಕ್ಷೆ ನಡೆಸಿ ಆಯ್ಕೆಮಾಡಿಕೊಳ್ಳುತ್ತಾಳೆ.

ಹೀಗೆ, ಈ ಇಂಟರ್ನೆಟ್ ಯುಗದಲ್ಲೂ ದಲಿತ ಮಹಿಳೆ ಮುಂದುವರೆದಿರುವ ಬಗೆ ಆಶ್ಚರ್ಯ ತರಿಸುವಂಥದ್ದು. ಯಾವ ಯುಗದಲ್ಲಾಗಲೀ, ವಿವೇಕವಿದ್ದರೆ ಎಲ್ಲವನ್ನೂ, ಎಲ್ಲರನ್ನೂ ಗ್ರಹಿಸುವ, ತೂಗಿ ಅಳೆಯುವ ಶಕ್ತಿ ಬರುತ್ತದೆ. ಒಳ್ಳೆಯವರಾರು ಅನ್ನುವುದು ತಿಳಿಯುತ್ತದೆ. ನಮ್ಮ ಭಾವನೆಗೆ ಸ್ಪಂದಿಸುವ ವ್ಯಕ್ತಿಯ ಜತೆ ಸಮಾಗಮವಾಗುವ ಅವಕಾಶಗಳು ಲಭ್ಯವಾಗುತ್ತದೆ

ಎಂಬುದು ಸತ್ಯ. ಹಾಗೆ ನೋಡಿದರೆ, ಹಿಂದಿಗಿಂತ, ಇಂದು ದಲಿತ ಮಹಿಳೆಗೆ ತನ್ನದೇ ಆದ ಮನೋಧರ್ಮ ಇರುವುದನ್ನು ಕಾಣುತ್ತೇವೆ. ಮಹಿಳೆ ತನ್ನ ಮನೋಧರ್ಮದ ಮೂಲಕ ಜಗತ್ತನ್ನು ಪುರುಷರಿಗಿಂತ ಭಿನ್ನವಾಗಿ ಗ್ರಹಿಸಬಲ್ಲಳು. ಮಹಿಳೆ ತನ್ನದೇ ಆದ ಅನುಭವ ಪ್ರಪಂಚವನ್ನು ಇದುವರೆಗೂ ಪುರುಷರು ಚಿತ್ರಿಸಿರುವುದಕ್ಕಿಂತ ಬೇರೆ ಬೇರೆ ನೆಲೆಯಲ್ಲಿ ಬಲ್ಲವಳಾಗಿದ್ದಾಳೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾರತದಲ್ಲಿ ನರಳುತ್ತಿರುವ ದಲಿತ ಮಹಿಳೆಯರಿಗೆ ಆತ್ಮಗೌರವ ಮತ್ತು ದಿಟ್ಟತನದ ಸ್ವಾತಂತ್ರ್ಯ ವ್ಯಕ್ತಿತ್ವ ಬೆಳೆಸಬೇಕಾಗಿದೆ. ಸ್ವತಂತ್ರ ವ್ಯಕ್ತಿತ್ವವೊಂದನ್ನು ನಿರ್ಮಾಣ ಮಾಡಬೇಕಾದರೆ ಶ್ರದ್ಧೆ ಮತ್ತು ಕಾಳಜಿಯೊಂದಿಗೆ ಶಿಕ್ಷಣ ಅತ್ಯಂತ ಅಗತ್ಯವಾಗಿ ಬೇಕಾಗಿದೆ.

ಶತಶತಮಾನಗಳಿಂದಲೂ ಸಮಾಜವೂ ತನ್ನ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿ ಮುಂದುವರಿದುಕೊಂಡು ಹೋಗುತ್ತಿದೆ. ಆದರೆ ಇಲ್ಲಿ ಹೆಣ್ಣು ಗಂಡುಗಳ ನಡುವಣ ಶಾರೀರಿಕ ವ್ಯತ್ಯಾಸಗಳಿಂದಾಗಿ ಪುರುಷ ಪ್ರಾಧಾನ್ಯತೆಗೆ ಹೆಚ್ಚು ಕಾರಣವಾಗಿದೆ. ಎಲ್ಲ ತರಹದ ಯಾಜಮಾನ್ಯಗಳ ಕಷ್ಟಕೋಟಲೆಗಳ ಮಧ್ಯೆ, ಕ್ರೂರವರ್ತನೆಗಳಿಗೆ ಸಿಕ್ಕಿ ನಲುಗಿದ ನಂತರವೂ ಭೂಮಿತಾಯಿಯಂತೆ ಪೊರೆದು ದಲಿತ ಮಹಿಳೆಯರೂ ದಲಿತಸಮಾಜಕ್ಕೆ ತಂದುಕೊಟ್ಟ ಅಸ್ತಿತ್ವ ಮತ್ತು ಸ್ಥಾನಮಾನ ಅದ್ವಿತೀಯವಾದುದು. ಆದರೆ ದಲಿತ ಜೀವನದಲ್ಲಿ ದಲಿತ ಮಹಿಳೆಯರು ನೂರಾರು ನೋವು, ಸಂಕಟಗಳ ನಡುವೆ ಸ್ಥಾಪಿಸಿ, ಬೆಳೆಸಿದ ಸಾಮಾಜಿಕ ವ್ಯವಸ್ಥೆಯ ಸ್ಥಾನಮಾನವನ್ನು ಈ ಸಮಾಜ ಇನ್ನೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂಬುವುದು ಇನ್ನೂ ಸೋಜಿಗದ ಸಂಗತಿಯಾಗಿದೆ.

ಅಡಿಟಿಪ್ಪಣಿಗಳು

೧. ಡಾ.ಬಿ.ಆರ್.ಅಂಬೇಡ್ಕರ್ : **ಜಾತಿವಿನಾಶ** ; (ಅನು.) ಡಾ.ಮ.ನ.ಜವರಯ್ಯ ; ಪುಟ–೩೬.

೨. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಪುಟ–xv-xvi.

೩. (ಸಂ.) ಅರವಿಂದ ಮಾಲಗತ್ತಿ : **ದಲಿತ ಮಾರ್ಗ** ; ಪುಟ–೯.

೪. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಅಪ್ಪನ ಸಾಲ ತೀರಿಸಿದೆ, ಪುಟ–೩೬೨–೩೬೩.

೫. ಸರಸ್ವತಿ ದು. : **ಈಗೇನ್ ಮಾಡೀರಿ?** ; ಪುಟ–೧೩.

೬. ಅದೇ : ಪುಟ–೧೩.

೭. ಮುಳ್ಳೂರು ನಾಗರಾಜ್ : **ಮಾಮರದ ಮೇಲೊಂದು ಕೋಗಿಲೆ** ; ಪುಟ–೨೮.

೮. ಅನಂತಮೂರ್ತಿ ಯು.ಆರ್. : **ಪ್ರಜ್ಞೆ ಪರಿಸರ ಸಾಹಿತ್ಯದ ಒಳಹೊರಗು** ; ಪುಟ–೨೨೩

೯. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ, ಪುಟ–೪೪೯.

೧೦. ಡಾ. ಸಂಜೀವರಾಯ ಜಿ., **ಹೊರಬೀಡು** ; ಪುಟ–೧೦.

೧೧. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು, ಪುಟ–೪೨೬–೪೨೭

೧೨. ಲಕ್ಷ್ಮಣ್ : **ಸಂಬೋಳಿ** ; ಪುಟ–೬೬

೧೩. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೨೪–೨೫.

೧೪. ಅದೇ : ಪುಟ–೧೪,

೧೫. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಅಪ್ಪನ ಸಾಲ ತೀರಿಸಿದೆ, ಪುಟ–೩೭೫.

೧೬. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೧೦,

೧೭. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಅಪ್ಪನ ಸಾಲ ತೀರಿಸಿದೆ, ಪುಟ–೩೬೨

೧೮. ಅದೇ : ಪುಟ–೩೬೩.

೧೯. ಮುಳ್ಳೂರು ನಾಗರಾಜ್ : **ಮಾಮರದ ಮೇಲೊಂದು ಕೋಗಿಲೆ** ; ಪುಟ–೫೬, ೫೭.

೨೦. ಲಕ್ಷ್ಮಣ್ : **ಸಂಬೋಳಿ** ; ಪುಟ–೮೩

೨೧. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ–೩೨.

೨೨. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಪುಟ–೨೬೦.

೨೩. **ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ. ಸಂ. ೫** ; ಪುಟ–೨೩.

೨೪. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ–೮೩

೨೫. ಸಿದ್ಧಲಿಂಗಯ್ಯ : **ಊರುಕೇರಿ** ; ಹಿನ್ನುಡಿ, ಪುಟ–೧೨೩.

೨೬. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ–೨೩.

೨೭. ಸಿದ್ಧಲಿಂಗಯ್ಯ : **ಊರುಕೇರಿ** ; ಪುಟ–೨೫.

೨೮. ಮುಳ್ಳೂರು ನಾಗರಾಜ್ : **ಮಾಮರದ ಮೇಲೊಂದು ಕೋಗಿಲೆ** ; ಪುಟ–೪೬–೪೭

೨೯. ತುಂಬಾಡಿ ರಾಮಯ್ಯ : **ಮಣೆಗಾರ** ; ೫೪–೫೫.

೩೦. ಲಕ್ಷ್ಮಣ್ : **ಸಂಬೋಳಿ** ; ಪುಟ–೪೪.

೩೧. ಅದೇ : ಪುಟ–೭೨.

೩೨. ಹೊರಬೀಡು; ಡಾ. ಜಿ. ಸಂಜೀವರಾಯ, ಪುಟ–೨.

೩೩. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ, ಪುಟ–೪೪೬–೪೪೭.

೩೪. ಡಾ. ಸಂಜೀವರಾಯ ಜಿ. : **ಹೊರಬೀಡು** ; ಮುನ್ನುಡಿ ಪುಟ–xi.

೩೫. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು; ಪುಟ–೪೦೭, ೪೦೮.

೩೬. ಸಿದ್ಧಲಿಂಗಯ್ಯ : **ಊರುಕೇರಿ** ; ನಾಗರಾಜ್ ಡಿ.ಆರ್., ಹಿನ್ನುಡಿ; ಪುಟ–೧೨೩.

೩೭. ಪುಟ್ಟಯ್ಯ ಬಿ.ಎಂ : **ಆತ್ಮಕಥೆಗಳಲ್ಲಿ ಕರ್ನಾಟಕದ ಕತೆ** ; ಪುಟ–೧೯

೩೮. ಸಿದ್ಧಲಿಂಗಯ್ಯ : **ಊರುಕೇರಿ** ; ಪುಟ–೯.

೩೯. ಅದೇ : ಪುಟ–೪೬.

೪೦. ಅದೇ : ಪುಟ–೪೬.

೪೧. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೧೭–೧೮.

೪೨. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು; ಪುಟ–೪೦೦–೪೦೧

೪೩. ಡಾ. ಸಂಜೀವರಾಯ ಜಿ. : **ಹೊರಬೀಡು** ; ಪುಟ–೫.

೪೪. ಅದೇ : ಪುಟ–೮.

೪೫. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಅಪ್ಪನ ಸಾಲ ತೀರಿಸಿದೆ, ಪುಟ–೩೭೬–೩೭೭.

೪೬. ಡಾ. ಎಲ್ಲಪ್ಪ ಕೆ.ಕೆ.ಪುರ : **ಕೇರಿಯಿಂದ ತೇರಿಗೆ** ; ಪುಟ–೨.

೪೭. ಕುಪ್ಪೆ ನಾಗರಾಜ್ : **ಅಲೆಮಾರಿಯ ಅಂತರಂಗ** ; ಪುಟ–೨೧.

೪೮. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ–೨೮.

೪೯. ಅದೇ : ಪುಟ–೪೪.

೫೦. ಅದೇ : ಪುಟ–೪೬.

೫೧. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೪೩–೪೪.

೫೨. ಗೋವಿಂದರಾಜು ಕೆ. : **ಮನವಿಲ್ಲದವರ ಮಧ್ಯೆ** ; ಪುಟ–೯.

೫೩. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೨೩.

೫೪. ಕುಪ್ಪೆ ನಾಗರಾಜ್ : **ಅಲೆಮಾರಿಯ ಅಂತರಂಗ** ; ಪುಟ–೯೬

೫೫. ಡಾ. ಸಂಜೀವರಾಯ ಜಿ. : **ಹೊರಬೀಡು** ; ಪುಟ–೧೩.

೫೬. ಅದೇ : ಪುಟ–೧೫

೫೭. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಅಪ್ಪನ ಸಾಲ ತೀರಿಸಿದೆ, ಪುಟ–೫೯೧.

೫೮. ಡಾ. ನೇತ್ರಾವತಿ ಕೆ.ವಿ. : **ದಲಿತ ಮಹಿಳಾ ಸಂಕಥನ** ; ಪುಟ–೨೭.

೫೯. ರಹಮತ್ ತರೀಕೆರೆ : **ದಲಿತಜ್ಞ**; ಪುಟ–೧೬೩

೬೦. ಡಾ. ಸಂಜೀವರಾಯ ಜಿ. : **ಹೊರಬೀಡು** ; ಪುಟ–೨೧–೨೩.

೬೧. (ಸಂ.) ಕೋಟಿಗಾನಹಳ್ಳಿ ರಾಮಯ್ಯ : **ತಲಪರಿಗೆ** ; ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು; ಪುಟ –೪೦೪–೪೦೫.

೬೨. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ–೩೪.

೬೩. ಸರಸ್ವತಿ ದು. : **ಈಗೇನ್ ಮಾಡೀರಿ?** ; ಪುಟ–೧೨.

೬೪. ಅದೇ : ಪುಟ–೩೮–೪೦.

೬೫. ಪರಶಿವಮೂರ್ತಿ : **ಗೆರೆ ದಾಟಿದ ಮೇಲೆ** ; ಪುಟ–೪೦೧.

ಅಧ್ಯಾಯ ೪

ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಂಸ್ಕೃತಿಕ ನೆಲೆಗಳು

ಭಾರತವು ವಿಶ್ವದ ಹಲವಾರು ಧರ್ಮಗಳಿಗೆ ಮತ್ತು ಧಾರ್ಮಿಕ ಪಂಥಗಳಿಗೆ ಜನ್ಮ ನೀಡಿದೆ. ಅದರಂತೆಯೇ ಹಿಂದೂ, ಬೌದ್ಧ, ಜೈನ, ಸಿಖ್, ಇಸ್ಲಾಂ ಮತ್ತು ಕ್ರೈಸ್ತ ಮತಗಳಿಗೂ ಆಶ್ರಯ ನೀಡಿದೆ. ಈ ಧರ್ಮಗಳ ಪ್ರಭಾವದಿಂದ ಧಾರ್ಮಿಕವಾಗಿ, ಸಾಮಾಜಿಕವಾಗಿ ನಾನಾ ತೆರನಾದ ರೂಢಿ, ಸಂಪ್ರದಾಯ, ಆಚಾರ–ವಿಚಾರ, ಲೋಕಾಚಾರ, ಉಟೋಪಚಾರ, ಉಡುಪು, ವೈವಾಹಿಕತೆ ಮುಂತಾದವುಗಳನ್ನು ಮೈಗೂಡಿಸಿಕೊಂಡಿರುವ ವಿಶೇಷ ಜನಸಮುದಾಯವನ್ನು ನೋಡಬಹುದು. ಈ ಬಗೆಯ ವಿಭಿನ್ನ ಆಚಾರ ವಿಚಾರಗಳಿಂದ ವಿಶೇಷವಾಗಿ ಕಂಡುಬರುವ ಪ್ರಮುಖ ಸಮುದಾಯಗಳಲ್ಲಿ ದಲಿತ ಸಮುದಾಯವು ಸಹ ಒಂದಾಗಿದೆ. ಈ ಸಮುದಾಯವು ಆಚರಿಸುವ ಸಂಪ್ರದಾಯಗಳು ಮತ್ತು ಆಚಾರ–ವಿಚಾರಗಳು ಇನ್ನಿತರೆ ವರ್ಗಗಳಿಗಿಂತ ಭಿನ್ನವಾಗಿ ತಿಳಿದುಬರುತ್ತದೆ. ಈ ಭಿನ್ನತೆಗಳನ್ನು ಕನ್ನಡ ದಲಿತ ಆತ್ಮಕಥನಕಾರರು ತಮ್ಮ ತಮ್ಮ ಆತ್ಮಕಥನಗಳಲ್ಲಿ ಕಟ್ಟಿಕೊಟಿದ್ದಾರೆ.

ಈಹಿನ್ನೆಲೆಯಲ್ಲಿಪ್ರಾಚೀನಕಾಲದಿಂದಲೂದಲಿತರುಭಾರತದಾದ್ಯಂತಹರಡಿ ಕೊಂಡಿರುವುದರಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಚಲನೆಗೆ ಕಾರಣರಾಗಿದ್ದಾರೆ. ಅಂತೆಯೇ ವಿಶಿಷ್ಟ ರೀತಿಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪಸರಿಸುವಿಕೆಗೂ ಸಹ ಕಾರಣರಾಗಿದ್ದಾರೆ. ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಜೀವನದಲ್ಲಿ ದಲಿತ ಸಮುದಾಯದ ಕನ್ನಡದ ಆತ್ಮಕಥೆಗಳು ವಿಶೇಷವಾಗಿ ಸೇರಿಕೊಂಡಿರುವುದರಿಂದ ಇವರ ಸಾಂಸ್ಕೃತಿಕ ಜೀವನದ ಸ್ಪಷ್ಟ ಚಿತ್ರಣವನ್ನು ಇಲ್ಲಿ ಕಾಣಬಹುದು. ಇವರ ಕುಲಗೋತ್ರಗಳು, ವಿವಾಹ ಪದ್ಧತಿ, ನಡೆ–ನುಡಿಗಳು, ಹಬ್ಬ–ಹರಿದಿನಗಳು, ಶವಸಂಸ್ಕಾರ ಮತ್ತು ಆಚಾರ–ವಿಚಾರಗಳು ಇತರ ಮೇಲು ವರ್ಗದವರ ಸಂಸ್ಕೃತಿಗಳಿಗಿಂತ ಭಿನ್ನವಾಗಿ ಕಂಡುಬರುತ್ತವೆ ಎಂಬುದು ಸ್ಪಷ್ಟ. ಇದರೊಂದಿಗೆ ಇವರ ಭಾಷೆ, ಉಡುಗೆ–ತೊಡುಗೆಗಳು ಕೂಡ ಭಿನ್ನವಾಗಿರುತ್ತವೆ. ವೈದಿಕಹಿನ್ನೆಲೆಯಸಮುದಾಯಕ್ಕಿಂತಲೂ ಈ ದಲಿತ ಸಮುದಾಯದವರು ತಮ್ಮ ವಿವಾಹ ಪದ್ಧತಿ, ಹಬ್ಬ–ಹರಿದಿನಗಳು, ಆಹಾರ ಮತ್ತು ಪಾನೀಯಗಳು, ನಂಬಿಕೆ–ಸಂಪ್ರದಾಯಗಳನ್ನು ವಿಭಿನ್ನವಾಗಿ ಕಟ್ಟಿಕೊಂಡಿರುವುದು ಇವರ ಸಂಸ್ಕೃತಿಯ ಹೆಗ್ಗುರುತಾಗಿದೆ. ಈ ಬಗೆಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕನ್ನಡ ದಲಿತ ಆತ್ಮಕಥೆಗಳು ವಿಶೇಷವಾದ ಸ್ಥಾನವನ್ನು ಕನ್ನಡ ಸಾಹಿತ್ಯದಲ್ಲಿ ಪಡೆದುಕೊಂಡಿವೆ.

೪.೧ ದಲಿತ ಆತ್ಮಕಥೆಗಳಲ್ಲಿ ಸಾಂಸ್ಕೃತಿಕ ಅನನ್ಯತೆ

'ಸಂಸ್ಕೃತಿ'ಯೆಂಬುದು ಅತ್ಯಂತ ಸಂಕೀರ್ಣ ಹಾಗೂ ಅಮೂರ್ತವಾದ ಸಂಗತಿಯಾದರೂ ನಡವಳಿಕೆಗಳು ಮೂರ್ತರೂಪದಲ್ಲಿ ಗೋಚರಿಸುವಂಥದ್ದು. ಸಮುದಾಯವೊಂದರ ಸಮಸ್ತ ಜೀವನಕ್ರಮಗಳನ್ನು ಸಂಸ್ಕೃತಿಯು ಒಳಗೊಂಡಿರುತ್ತದೆ. ಜೀವನದ ಭೌತಿಕ ವಸ್ತುಗಳಾದ ಉಡುಗೆ ತೊಡುಗೆಗಳು, ಆಹಾರ-ಪಾನೀಯಗಳು, ಸಂಪ್ರದಾಯಗಳು, ನಂಬಿಕೆ, ಆಚರಣೆ, ದೇವರು, ನೀತಿ, ಆದರ್ಶ ಮೊದಲಾದವುಗಳನ್ನು 'ಸಂಸ್ಕೃತಿ'ಯಾಗಿ ಇವು ಪ್ರತಿಬಿಂಬಿಸುತ್ತವೆ. ಸಂಸ್ಕೃತಿ ಚಿಂತಕ ಟೈಲರ್ ಉಲ್ಲೇಖಿಸುವಂತೆ; "ಸಂಸ್ಕೃತಿ ಅಥವಾ ನಾಗರಿಕತೆಯನ್ನು ಅದರ ವಿಶಾಲ ಮಾನವಶಾಸ್ತ್ರೀಯ ಅರ್ಥದಲ್ಲಿ ತೆಗೆದುಕೊಂಡಾಗ, ಆ ಸಂಕೀರ್ಣ ಸಮಷ್ಟಿ ಜ್ಞಾನ, ನಂಬಿಕೆ, ಕಲೆ, ನೀತಿಗಳು, ಕಾನೂನುಗಳು, ಸಂಪ್ರದಾಯಗಳು ಹಾಗೂ ಮನುಷ್ಯ ತನ್ನ ಸಮಾಜದ ಸದಸ್ಯನಾಗಿ ಗಳಿಸಿಕೊಂಡ ಸಮಸ್ತ ಸಾಮರ್ಥ್ಯಗಳು ಮತ್ತು ಅಭ್ಯಾಸಗಳನ್ನೆಲ್ಲ ಒಳಗೊಳ್ಳುತ್ತದೆ"[೧] ಎಂದಿದ್ದಾರೆ.

ಒಂದೊಂದು ಜನಸಮುದಾಯವು ತನ್ನದೇ ಆದ ಸಂಸ್ಕೃತಿಯನ್ನು ನಿರ್ಮಿಸಿಕೊಂಡು, ಅದರೊಳಗೆ ಸದಸ್ಯರಾದವರೆಲ್ಲರೂ ಅದನ್ನು ಅನುಸರಿಸುತ್ತಾರೆ ಎಂಬುದರ ಸಾಂಸ್ಕೃತಿಕ ಆಯಾಮವನ್ನು ತಿಳಿಸುತ್ತದೆ. ಹಾಗೆಯೇ ಒಂದು ಜನಸಮುದಾಯವು ನಿರ್ಮಿಸಿಕೊಂಡಿರುವ ಸಂಸ್ಕೃತಿಯು ಮತ್ತೊಂದು ಜನಸಮುದಾಯವು ನಿರ್ಮಿಸಿಕೊಂಡಿರುವಸಂಸ್ಕೃತಿಗೆಭಿನ್ನವಾಗಿರುತ್ತದೆ.ಅಂದರೆ ಏಕಜನಸಮುದಾಯದ ಸಂಸ್ಕೃತಿಯೇ ಎಲ್ಲ ಜನಸಮುದಾಯಗಳ ಸಂಸ್ಕೃತಿ ಆಗಿರುವುದಿಲ್ಲ. ಎಲ್ಲ ಜನಸಮುದಾಯಗಳ ಸಂಸ್ಕೃತಿಗಳು ಒಂದೇ ಆಗಿರಬೇಕಾಗಿಲ್ಲ ಕೂಡ. ಬಹುಜನರ ಸಂಸ್ಕೃತಿಗಳು ಬಹುತ್ವಗಳಿಂದ ಕೂಡಿದ್ದು, ಪ್ರತಿಯೊಂದು ತಮ್ಮದೇ ಆದ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಜೀವಿಸುತ್ತಿರುತ್ತವೆ. ಆದರೆ ಕೆಳವರ್ಗದ ಜನಸಮುದಾಯಗಳ ಮೇಲೆ ಮೇಲುವರ್ಗದ ಜನಸಮುದಾಯಗಳು ಹೇರುವ ಸಾಂಸ್ಕೃತಿಕ ಅನನ್ಯತೆ ಹಾಗೂ ಯಾಜಮಾನ್ಯತೆಗಳು ಸಾಂಸ್ಕೃತಿಕ ಶ್ರೇಣೀಕರಣವನ್ನು ಹುಟ್ಟುಹಾಕಿವೆ. ಇದರಿಂದ ಸಂಸ್ಕೃತಿಗಳಲ್ಲಿ ಶ್ರೇಷ್ಠ-ಕನಿಷ್ಠ, ಪ್ರಧಾನ-ಅಧೀನ, ಮೇಲು-ಕೀಳು ಮುಂತಾದ ಅವಾಸ್ತವಗಳು ನೆಲೆಯೂರಿವೆ.

ದಲಿತವರ್ಗದ ಸಮುದಾಯದ ಜನರು ಅನೇಕ ಅಪಮಾನ ಅವಮಾನಗಳ ಮಧ್ಯೆಯೂ ತಮ್ಮ ನೆಲಮೂಲದ ನೈಜವಾದ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಪರಂಪರೆಯಿಂದಲೂ ತಾವು ನಂಬಿಕೊಂಡು, ಅನುಸರಿಸಿಕೊಂಡು ಬಂದಿರುವ ಆಚರಣೆ, ಸಂಪ್ರದಾಯ, ಆಹಾರ ಪದ್ಧತಿ, ಉಡುಗೆ-ತೊಡುಗೆಗಳು, ನೀತಿ-ನಡತೆಗಳನ್ನು ಇಂದಿಗೂ ದಲಿತ ಸಮುದಾಯದವರು ಉಳಿಸಿಕೊಂಡಿದ್ದಾರೆ. ಅಧಿಕಾರಸ್ಥ ಹಾಗೂ ಬಲಯುತವಾದ ಸಂಸ್ಕೃತಿಗಳ ದೌರ್ಜನ್ಯಕ್ಕೆ ಒಳಗಾದರೂ ತಮ್ಮದೇ ಸಾಂಸ್ಕೃತಿಕ ಪ್ರಜ್ಞೆಗಳ ಮೂಲಕ ಈ ಸಮುದಾಯದ ಜನರು ಸಾಂಸ್ಕೃತಿಕ ಜೀವನವನ್ನು

ಸಾಗಿಸುತ್ತಿದ್ದಾರೆ. ಕಾಲದಿಂದ ಕಾಲಕ್ಕೆ ಅನೇಕ ಸಂತರ, ಜ್ಞಾನಿಗಳ, ಹೋರಾಟಗಾರರ 'ಸಾಂಸ್ಕೃತಿಕ ಎಚ್ಚರ' ಹಾಗೂ 'ಸಾಂಸ್ಕೃತಿಕ ಸಾಮರಸ್ಯ'ದ ಅರಿವನ್ನು ಮೂಡಿಸುತ್ತಿದ್ದಾರೆ. ಇದರ ಫಲವಾಗಿ ಹಲವಾರು 'ಸಾಂಸ್ಕೃತಿಕ ಪಲ್ಲಟ'ಗಳಿಗೂ ಸಹ ದಲಿತರು ಒಳಗಾಗುತ್ತಿದ್ದಾರೆ. ಜೊತೆಗೆ ಆಧುನಿಕ ಶಿಕ್ಷಣದ ಪ್ರಭಾವದಿಂದ ತಮ್ಮ ಪರಂಪರೆಯನ್ನು ಬೇರೆಬೇರೆ ಸಂಸ್ಕೃತಿಯೊಂದಿಗೆ ಅನುಸಂಧಾನಗೊಳಿಸಿ–ಕೊಂಡು ತಮ್ಮ ಬದುಕಿನಲ್ಲಿನ ಏಳು–ಬೀಳುಗಳನ್ನು ದಲಿತ ಸಮುದಾಯದವರು ಇಂದಿಗೂ ಅನುಭವಿಸುತ್ತಿದ್ದಾರೆ ಎಂಬ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕನ್ನಡದ ದಲಿತ ಆತ್ಮಕಥೆಗಳು ಕಟ್ಟಿಕೊಡುತ್ತವೆ.

ಕರ್ನಾಟಕದ ಸಂದರ್ಭದಲ್ಲಿ ಇತ್ತೀಚೆಗೆ 'ದೇಸಿಸಂಸ್ಕೃತಿ' ಬಗೆಗಿನ ಅಧ್ಯಯನದ ಚರ್ಚೆ ಮತ್ತು ಸಂಶೋಧನೆ ಹೆಚ್ಚು ಹೆಚ್ಚು ನಡೆಯುತ್ತಿದೆ. ಸಂಸ್ಕೃತಿಯ ಬಗೆಗೆ ವಿಭಿನ್ನ ಆಲೋಚನೆ ಮತ್ತು ವ್ಯಾಖ್ಯಾನಗಳು ವಿದ್ವಾಂಸರು ಹಾಗೂ ಚಿಂತಕರಿಂದ ಅಭಿವ್ಯಕ್ತವಾಗುತ್ತಿವೆ. ಈ ಕುರಿತು ಮಲ್ಲೇಪುರಂ ಜಿ. ವೆಂಕಟೇಶ್; "ನಮ್ಮ ಸಾಂಸ್ಕೃತಿಕ ಅಧ್ಯಯನದಲ್ಲಿ ಶೂದ್ರ ಸಂಸ್ಕೃತಿಯನ್ನು ಕುರಿತ ಅಧ್ಯಯನದ ನೆಲೆಗಳಿಗೂ ಅಸ್ಪೃಶ್ಯತೆ ಸಂಸ್ಕೃತಿ ಕುರಿತ ಅಧ್ಯಯನದ ನೆಲೆಗಳಿಗೂ ಬೇರೆ ಬೇರೆ ರೀತಿಯ ನಿಲುಗಡೆ ಬೇಕಾಗುತ್ತದೆ. ಕರ್ನಾಟಕ ಸಂಸ್ಕೃತಿ ಅಧ್ಯಯನ ಇಂದಿನ ಒಟ್ಟು ಸಂದರ್ಭದಲ್ಲಿ ಶೂದ್ರ ಸಂಸ್ಕೃತಿಯ ಕಡೆ ಇರುವ ನಿಲುವ ಒಟ್ಟು ತಳಸಮುದಾಯದ ಸಂಸ್ಕೃತಿ ಕಡೆ ಇಲ್ಲ. ಇದಕ್ಕೆ ಕಾರಣ ಶೂದ್ರ ಎಂಬುದನ್ನು ಉಳಿದೆಲ್ಲಾ ಪರಿಕಲ್ಪನೆಗಳ ಜೊತೆ ಐಕ್ಯಗೊಳಿಸುವ ಪ್ರಯತ್ನ. ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಕುರಿತ ನಮ್ಮ ಅಧ್ಯಯನದಲ್ಲಿ ಈ ಭಾಗಗಳು ಸಮರ್ಪಕವಾದ ನಿರ್ವಚನಗಳಿಗೆ ದಾರಿ ಮಾಡಿಕೊಟ್ಟಿಲ್ಲ ಎಂಬುವುದು ಸ್ಪಷ್ಟ. ಆದರೆ ಶೂದ್ರ ಪರಿಕಲ್ಪನೆ ಈ ನಾಲ್ಕು ವರ್ಣ ಘಟಕಗಳ ಆಚೆ ನೆಲೆನಿಂತಿದೆ"[೨] ಎಂದು ಹೇಳುವ ಅಭಿಪ್ರಾಯ ಮಹತ್ವದ್ದಾಗಿದೆ.

ಈ ಬಗೆಯ ಭಿನ್ನ ಭಿನ್ನವಾದ ಸಂಸ್ಕೃತಿಯ ನೆಲೆಗಳನ್ನು ದಲಿತರು ಹೊಂದಿದ್ದರೂ ಸಹ ಸಾಮಾಜಿಕ ವ್ಯವಸ್ಥೆಯಲ್ಲಿ ಉತ್ತಮವಾದ ಜೀವನವನ್ನು ನಡೆಸಲು ಅವಕಾಶವೇ ಇಲ್ಲದಂತ ನಿರ್ಮಾಣವಾಗಿದೆ. ಏಕೆಂದರೆ ದಲಿತ ಸಮುದಾಯದವರು ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಯ ನಡುವೆಯೇ ತಮ್ಮ ಬದುಕಿನ ಬಂಡಿಯನ್ನು ಎಳೆಯುತ್ತಿರುವುದು ತುಂಬಾ ನೋವಿನ ಸಂಗತಿಯಾಗಿದೆ. ಉದಾ: ಬೆಂಡಿಗೇರಿಯಲ್ಲಿ ಮಲ ತಿನ್ನಿಸಿದ ಪ್ರಕರಣ, ಬಿಹಾರದ ಬೆಲ್ಚಿ ಗ್ರಾಮದಲ್ಲಿ ಮತ್ತು ಕೋಲಾರದ ಕಂಬಾಲಪಲ್ಲಿಯಲ್ಲಿ ನಡೆದ ದಲಿತರ ಜೀವಂತ ದಹನ, ವೇಣನೂರು ಮತ್ತು ಚಂದ್ರಗುತ್ತಿಯಲ್ಲಿ ನಡೆದ ದಲಿತ ಮಹಿಳೆಯರ ಬೆತ್ತಲೆ ಪ್ರಕರಣ, ಶ್ರೀರಂಗಪಟ್ಟಣದ ಹಂಗರಹಳ್ಳಿ

ಜೀತ ಪ್ರಕರಣದಂತಹ ಘಟನೆಗಳು ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿರುವ ಸಾಮಾಜಿಕ ಶೋಷಣೆಗೆ ಪ್ರತ್ಯಕ್ಷ ಸಾಕ್ಷಿಯಾಗಿವೆ. ಸವದತ್ತಿ ಎಲ್ಲಮ್ಮನ ಹೆಸರಿನಲ್ಲಿ ನಡೆಯುವ ಬೇವಿನುಡುಗೆ ಆಚರಣೆ, ಬೆತ್ತಲೆ ಸೇವೆ ಮತ್ತು ಓಕುಳಿ ಉತ್ಸವಗಳು, ಇತ್ತೀಚೆಗೆ ನಡೆಯುತ್ತಿರುವ ಮರ್ಯಾದೆ ಹತ್ಯೆಗಳು, ಸವರ್ಣೀಯರ ದೇವಾಲಯಗಳಿಗೆ ದಲಿತರ ಪ್ರವೇಶ ನಿರಾಕರಣೆಗಳು ಸಂಸ್ಕೃತಿಯ ಹೆಸರಿನಲ್ಲಿ ದಲಿತರ ಮೇಲೆ ನಿರಂತರವಾಗಿ ನಡೆಸುತ್ತಿರುವ ಶೋಷಣೆಯ ಪ್ರತೀಕಗಳಾಗಿವೆ. ಪುರೋಹಿತಶಾಹಿ ವ್ಯವಸ್ಥೆಯು ರೂಪಿಸಿದ ಶ್ರೇಣೀಕೃತ ಸಮಾಜದಿಂದ ಇಂದು ಇಡೀ ಭಾರತೀಯ ಸಮಾಜದೊಳಗೆ ಇಂತಹ ಅಮಾನವೀಯ ಹಿಂಸೆಗಳು ವ್ಯಾಪಿಸುತ್ತಿರುವುದನ್ನು ಮನಗಾಣಬಹುದು. ಇಂತಹ ವ್ಯವಸ್ಥೆಯಿಂದ ನೊಂದು ಹೊರಬಂದ ಈ ದಲಿತ ಸಮುದಾಯದ ಬರಹಗಾರರು ತಮ್ಮ ಆತ್ಮಕಥೆಗಳಲ್ಲಿ ಇಂತಹ ಅನುಭವಗಳನ್ನು ದಾಖಲಿಸಿದ್ದಾರೆ.

ಇಡೀ ವಿಶ್ವದಲ್ಲೆ ದಲಿತ ಸಂಸ್ಕೃತಿಯ ನೆಲೆಗಳು ತಮ್ಮದೇ ಆದ ಅಸ್ತಿತ್ವ ಮತ್ತು ಅಸ್ಮಿತೆಗಳನ್ನು ಒಳಗೊಂಡಿವೆ ಎಂಬುವುದನ್ನು ಕನ್ನಡ ದಲಿತ ಆತ್ಮಕಥೆಗಳಲ್ಲಿ ಆತ್ಮಕಥನಕಾರರು ತಮ್ಮ ತಮ್ಮ ಸಾಂಸ್ಕೃತಿಕ ನೆಲೆಯಲ್ಲಿ ನಿರೂಪಿಸಿದ್ದಾರೆ. ಪ್ರೊ. ಲಿಂಗದೇವರು ಹಳೆಮನೆ ಅವರು ಹೇಳಿದಂತೆ; "ದಲಿತರ ಆತ್ಮಕಥೆ ಸಂದರ್ಭಕ್ಕೆ ಬಂದಾಗ ಕಲ್ಚರಲ್ ಹಿನ್ನೆಲೆಯ ವಿಸ್ತರಣೆ ಸಾಹಿತ್ಯಕ್ಕೆ ಬರುವಂತಹುದು ಆಗಿರುತ್ತದೆ. ಶುಷ್ಕವಾದ ವಿವರಗಳು ಇಲ್ಲಿ ಇಲ್ಲ. ಸಾಹಿತ್ಯ ಕೃತಿಯ ಹಿನ್ನೆಲೆಯಲ್ಲಿ ಇವರು ಸಾಹಿತ್ಯದ ವಿದ್ಯಾರ್ಥಿಯಾಗಿದ್ದು, ತಾನು ಕಂಡಂತಹ ಘಟನೆಗಳನ್ನು ಆಧುನಿಕವಾಗಿ ಪಡೆದುಕೊಂಡಿರುವ ಅರಿವಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾ ಹೋಗುತ್ತಾರೆ. ಯಾಕೆಂದರೆ ದಲಿತರಲ್ಲಿ ಬಂದಿರುವಂತಹ ಕಥೆ, ಕಾವ್ಯ, ಕಾದಂಬರಿ, ಆತ್ಮಕಥೆ ಏನೇ ಇದ್ದರೂ ಅವೆಲ್ಲವೂ ಸಹ ನನ್ನ ಪ್ರಕಾರ ಒಂದು ರೀತಿಯಲ್ಲಿ ಬಯೋಗ್ರಾಫಿಕಲ್ ಡಿಟೈಲ್ಸ್. ದೇವನೂರ ಮಹಾದೇವರ ಕಥೆಯೂ ಕೂಡಾ ಬಯೋಗ್ರಾಫಿಕಲ್ ಅಥವಾ ಸಿದ್ಧಲಿಂಗಯ್ಯನವರ ಒಂದು ಹಾಡು ಕೂಡಾ ಬಯೋಗ್ರಾಫಿಕಲ್. ಉದಾಹರಣೆಗೆ 'ಒಂದು ಮೂಳೆಯ ಹಾಡು', ನಾನು ಮೂಳೆ ಹಿಂಗೆ ಇರೋಕಿಲ್ಲ ಒಂದು ದಿವಸ ಮನುಷ್ಯ ಆಗ್ತೀನಿ' ಇದು ಪ್ರತಿಯೊಬ್ಬ ದಲಿತನು ಅನುಭವಿಸಿರುವ ನೋವಿನ ಹಾಡಾಗಿದೆ. ಹೀಗೆ ಎಲ್ಲವೂ ಸಹಾ ಬಯೋಗ್ರಾಫಿಕಲ್ಲೇ ಆಗಿರುತ್ತವೆ. ಯಾಕೆಂದರೆ ಅವರಿಗೆ ಹೊರಗಿನದನ್ನು ಕದ್ದು ಬರೆಯುವ ಅನಿವಾರ್ಯತೆ ಇಲ್ಲ. ಹೊರಗಿನದನ್ನು ತಂದು ಬರೆಯುವುದೇ ಆಗಿದ್ದರೆ ಆತ ದಲಿತ ಲೇಖಕ ಆಗಿರೋದೆ ಇಲ್ಲ. ಅವನು ಬೇರೆ ರೀತಿಯ ಲೇಖಕನೇ ಆಗಿರಬಹುದು"[೩] ಎಂಬುವುದು ಅಕ್ಷರ ಸಹ ಸತ್ಯವಾಗಿ ತಿಳಿದು ಬರುತ್ತದೆ. ಏಕೆಂದರೆ ಪ್ರತಿಯೊಬ್ಬ ದಲಿತನ ಅನುಭವವು ಒಂದೊಂದು ಬಗೆಯ ಸಂಸ್ಕೃತಿಯ ಅನುಭವದ ಜನ್ಯವಾಗಿ ರೂಪುಗೊಳ್ಳುತ್ತದೆ. ಇದು ದಲಿತನೊಬ್ಬನ ಅನುಭವವೇ ಆಗಿರದೆ ಇಡೀ ದಲಿತ ಸಮುದಾಯಗಳ ಜೀವನದ ಸುಡುವ ಕಟು ವಾಸ್ತವ ನೆಲೆಗಳು ಆಗಿವೆ.

ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಆತ್ಮಕಥನಕಾರರು ತಮ್ಮ ತಮ್ಮ ಅನುಭವದ ನೆಲೆಯಲ್ಲಿ; ಸಾಂಸ್ಕೃತಿಕ ನೆಲೆ-ಬೆಲೆ, ಪರಂಪರೆ ಮತ್ತು ಅದರ ಪಲ್ಲಟ, ಜೊತೆಗೆ ಆಧುನಿಕತೆಯ ಪರಿಣಾಮಗಳನ್ನು ಹೊಸಕಣ್ಣುಗಳಿಂದ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ವಿಮರ್ಶಕರಾದ ಜಿ.ಆರ್. ತಿಪ್ಪೇಸ್ವಾಮಿ ಅವರು "ಆತ್ಮಚರಿತ್ರೆ ಯಾರದ್ದೇ ಆಗಿರಲಿ ಅದು ಯಾವಾಗಲೂ ವೈಯಕ್ತಿಕ ವಿಷಯಗಳ ಜೊತೆಜೊತೆಯಲ್ಲಿ ಸಾಮುದಾಯಿಕ, ಸಾಂಸ್ಕೃತಿಕ ವಿವರಗಳೂ ಬಿತ್ತರಗೊಳ್ಳುತ್ತಿರಬೇಕು. ಹೀಗೆ ಜೊತೆಗೂಡಿ ಬಂದಾಗಲೇ ಅದಕ್ಕೆ ಬೆಲೆ"[೪] ಎಂದಿದ್ದಾರೆ. ಈ ನಿಟ್ಟಿನಲ್ಲಿ ದಲಿತ ಆತ್ಮಕಥನಕಾರರು ಏಕಮೂಲ ಚಿಂತನೆಯಲ್ಲದೆ ಸಮುದಾಯದ ಪ್ರಜ್ಞೆಯಿಂದ ತಮ್ಮ ಅನನ್ಯ ಅಸ್ಮಿತೆಯ ಸಾಂಸ್ಕೃತಿಕ ಪರಂಪರೆಯ ನಂಬಿಕೆ, ಆಚರಣೆಗಳು, ಸಂಪ್ರದಾಯಗಳು, ಆಹಾರ ಪದ್ಧತಿ, ಉಡುಗೆ-ತೊಡುಗೆಗಳನ್ನು ಆಪ್ತವಾಗಿ, ಮೌಲ್ವೀಕೃತವಾಗಿ, ವಿಮರ್ಶಾತ್ಮಕವಾಗಿ ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ.

೪.೨ ನಂಬಿಕೆ-ಆಚರಣೆ-ಸಂಪ್ರದಾಯಗಳು

ದಲಿತ ಸಮುದಾಯದವರ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳು ದೇವರ ಪರಿಕಲ್ಪನೆಯಲ್ಲಿ ಬಹಳ ಮುಖ್ಯವಾಗಿ ಕೇಂದ್ರೀಕರಣಗೊಂಡಿರುತ್ತವೆ. ಕಾಲಕಾಲಕ್ಕೆ ತಕ್ಕಂತೆ ಬದುಕನ್ನು ಮುನ್ನಡೆಸುವ ದಿಕ್ಕುದೆಸೆಗಳನ್ನು ಅರಿಯುವ ಮತ್ತು ನಿರ್ದೇಶಿಸುವ ತೋರುಗಲ್ಲುಗಳಾಗಿ ಇವು ಕಂಡುಬರುತ್ತವೆ. ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳನ್ನು ದಲಿತರು ತಮ್ಮ ಜೀವನದ ನೆಲಮೂಲಸಂಸ್ಕೃತಿಯ ಪರಂಪರೆಯಿಂದ ಅನುಸರಿಸಿಕೊಂಡು ಬಂದಿದ್ದಾರೆ. ದೇವರ ಮೇಲಿನ ಭಕ್ತಿಯು ಭಿನ್ನ ಭಿನ್ನ ರೂಪದಲ್ಲಿ ಇವರಲ್ಲಿ ಪ್ರಕಟಗೊಳ್ಳುತ್ತಿರುತ್ತದೆ. ಅಂತೆಯೇ ಈ ಮೇಲಿನ ಸಂಸ್ಕೃತಿ ಪ್ರಕಟಗೊಳ್ಳುವ ಬಗೆಗಳ ಹಿಂದಿರುವ ಕಾರಣ, ಒತ್ತಡ, ತುರ್ತುಗಳು ಆಯಾ ಸಾಮಾಜಿಕ ಸನ್ನಿವೇಶಗಳನ್ನು ದಲಿತ ಆತ್ಮಕಥೆಗಳು ರೂಪಿಸುತ್ತವೆ. ಈ ಸಾಮಾಜಿಕ ಸನ್ನಿವೇಶಗಳು ಮತ್ತು ಘಟನೆಗಳು ದಲಿತ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳುತ್ತಿರುತ್ತವೆ. ಈ ಮೂಲಕ ಚರಿತ್ರೆಯನ್ನು ಕಟ್ಟುವಲ್ಲಿ ದಲಿತ ಸಮುದಾಯಗಳು ಒಂದಲ್ಲ ಒಂದು ರೀತಿಯಲ್ಲಿ ಪಾಲ್ಗೊಳ್ಳುತ್ತಿರುತ್ತವೆ. ಆದರೆ ಕೆಲವು ಸಮುದಾಯಗಳು ಮಾತ್ರ ಏಕಮುಖವಾಗಿ ಚರಿತ್ರೆಯಲ್ಲಿ ಪ್ರಾಧಾನ್ಯತೆಯನ್ನು ಪಡೆಯುತ್ತವೆ. ಆದ್ದರಿಂದ ದಲಿತ ಸಾಂಸ್ಕೃತಿಕ ಅನನ್ಯತೆಯನ್ನು ಶೋಧಿಸುವ ಸಂದರ್ಭದಲ್ಲಿ ದಲಿತ ಆತ್ಮಕಥನಕಾರರು ಕಟ್ಟಿಕೊಡುವ ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳ ನೆಲೆ-ಬೆಲೆ ಬಹಳ ಮುಖ್ಯವಾಗಿವೆ ಎಂಬುದನ್ನು ನಮ್ಮ ಕನ್ನಡ ದಲಿತ ಆತ್ಮಕಥೆಗಳು ನಿರ್ಭೀಡೆಯಿಂದ ಕಟ್ಟಿಕೊಡುತ್ತವೆ.

ದಲಿತಸಮುದಾಯದವರಿಗೆ ಇರುವ ದೇವರ ನಂಬಿಕೆಯು ಮೂಢನಂಬಿಕೆಯಿಂದ ಕೂಡಿರುವುದೋ ಅಥವಾ ಮುಗ್ಧತೆಯಿಂದ ಕೂಡಿದ್ದೋ ಎನ್ನುವುದಕ್ಕಿಂತ ಅವರ ಮಾನಸಿಕ ಭಾವನೆಗಳಿಂದ ದೇವರನ್ನು

ನಂಬುತ್ತಾರೆ ಎಂದು ಅರ್ಥೈಸಿಕೊಳ್ಳಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯ ಅವರು ತಮ್ಮ ಆತ್ಮಕಥನವಾದ ಊರುಕೇರಿಯಲ್ಲಿ ಮನುಷ್ಯರ ಮೈಮೇಲೆ ದೇವರು ಮತ್ತು ದೆವ್ವಗಳು ಬರುವ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತು ಕುತೂಹಲಕಾರಿಯಾದ ಸಂಗತಿಗಳನ್ನು ನಿರೂಪಿಸಿದ್ದಾರೆ. ಅವರ “ಕೇರಿಯಲ್ಲಿ ಒಂದು ಮಾರಿಗುಡಿ ಇರುತ್ತದೆ. ದೇವತೆಯ ಪೂಜಾರಿಣಿ ಒಬ್ಬ ಮುದುಕಿ. ಆಕೆ ಇವರಿಗೆ ದೂರದಿಂದ ಅಜ್ಜಿಯಾಗಬೇಕಾಗಿತ್ತು. ಮಾರಿಯ ಹಬ್ಬವನ್ನು ಬಹಳ ಆಸ್ಥೆಯಿಂದ ಮಾಡುತ್ತಿದ್ದರು. ಮಾರಮ್ಮ ದೇವತೆಯು ಅಜ್ಜಿಯ ಮೈಮೇಲೆ ಮೈದುಂಬಿ ಬರುತ್ತಿದ್ದಳು. ಬಹಳ ಭಯ, ಗಾಬರಿ ಇದ್ದರೂ ಪೂಜಾರಿಣಿ ಸಂಬಂಧಿಕಳಾಗಿದ್ದರಿಂದ ಬಹಳ ಅಭಿಮಾನವಿದ್ದು, ದೇವತೆ ತಮಗೇನು ಕೆಟ್ಟದ್ದು ಮಾಡಲಾರಳು ಎಂಬ ಧೈರ್ಯ ಮೂಡುತ್ತಿತ್ತು. ಮೇಗಳ ಹಟ್ಟಿಯಲ್ಲಿ ಇನ್ನೊಂದು ದೇವತೆ ಮೈದುಂಬಿ ಬರುತ್ತಿತ್ತು. ಆ ದೇವತೆಯ ಹೆಸರು ಜಲ್ದಗೆರೆ ಅಮ್ಮ. ವಾರಕ್ಕೊಮ್ಮೆ ಮೈದುಂಬುವ ಆ ದೇವತೆಗೆ ಭಕ್ತರು ಬಹಳ. ಲೇಖಕರ ತಾಯಿಯೂ ಆ ದೇವತೆಯ ಭಕ್ತೆಯರಲ್ಲಿ ಒಬ್ಬಳು. ಮೈದುಂಬುವ ಸಮಯಕ್ಕೆ ಮೊದಲೇ ಇವರೆಲ್ಲ ಹೋಗಿ ಕೂರುತ್ತಿದ್ದರು. ಆಕೆಯ ಹಾವ-ಭಾವ ಭಯ ಹುಟ್ಟಿಸುತ್ತಿತ್ತು. ಆಕೆ ಒಮ್ಮೆ ನೊರನೊರ ಹಲ್ಲು ಕಡಿದರೆ ಜನ ಗಡಗಡ ನಡುಗಿ ಬೆವೆತು ಹೋಗುತ್ತಿದ್ದರು. ಇವರ ಅವ್ವ ದೇವತೆ ಮೈದುಂಬುವ ಹೆಂಗಸನ್ನು ಅಕ್ಕ ಎಂದು ಕರೆಯುತ್ತಿದ್ದರು. ಇವರನ್ನು ದೊಡ್ಡಮ್ಮ ಎಂದು ಸಹ ಕರೆಯುತ್ತಿದ್ದರು. ಈಕೆಯ ಗಂಡ ಇವಳನ್ನು ತೊರೆದು ಇನ್ನೊಬ್ಬ ಹೆಣ್ಣಿನೊಂದಿಗೆ ಹೊರಟು ಹೋದ ಮೇಲೆ ಇವರ ಮೈಮೇಲೆ ದೇವತೆ ಮೈದುಂಬುವುದು ಪ್ರಾರಂಭವಾಗಿದ್ದು”[೨೫] ಎಂಬುದನ್ನು ಆತ್ಮಕಥನಕಾರರು ದಾಖಲಿಸುತ್ತಾರೆ. ಅಂದರೆ ಇಲ್ಲಿನ ತಳಸಮುದಾಯದ ಜನರು ಈ ಬಗೆಯ ನಂಬಿಕೆ ಮತ್ತು ಆಚರಣೆಗಳಿಗೆ ತುಂಬಾ ಗೌರವವನ್ನು ಕೊಡುವುದು ಕಂಡುಬರುತ್ತದೆ.

ದೇವರ ನಂಬಿಕೆಯಲ್ಲಿ ಶ್ರದ್ಧೆಯನ್ನು ತಮ್ಮ ಓದಿನ ಹಾದಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡ ದು.ಸರಸ್ವತಿ ಅವರು ದಲಿತ ಬದುಕಿನ ಒಂದು ಪ್ರಸಂಗವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ:

> **“ಅವ್ವಾ ಈ ಪುಟಾಣಿ ಕೃಷ್ಣ ಕೈಯಾಗಿಟ್ಕಂಡಿರದು ಏನು?**
> **ಅವ್ನು ಸ್ವರ್ಗನ ಕೈಯಲಿಟ್ಕಂಡವ್ನೆ...**
> **ಸ್ವರ್ಗಾ ಅಂದ್ರೇನು?”**

ಸ್ವರ್ಗ ಅಂದ್ರೆ ಕೆಟ್ಟೆನೂ ಮಾಡ್ದೆ ನೆಮ್ದಿಯಾಗಿರೊ ಜನ್ಗಳು. ಹಣ್ಣು, ಅಂಪ್ಲು ಊವಾ ತುಂಬ್ಕಂಡಿರೊ ಗಿಡಮರ, ಸಂತೋಸ್ವಾಗಿರೊ ಪ್ರಾಣಿ ಪಕ್ಷಿಗಳಿರೊ ಜಾಗ. ಮತ್ತೆ ಎಲ್ರು ಅಲ್ಗೇ ಒಗ್‌ಬೋದಲ್ಲ. ಅಲ್ಲಿಗೋಗ್ಬೇಕು ಅಂದ್ರೆ ಕೆಟ್ದ್ನ ಮಾತಾಡ್ಬಾರದು, ಯಾರ್ನು ಅಯ್ಕೊನ್ಸಬ್ರ್ದು,

ಇನ್ನೊಬ್ರೂಸ್ತುಗೆ ಕೈ ಆಕ್ಬಾರ್ದು, ನಂಪಾಲಿಂದ್ನ ಸಿವ ನಿನ್ಕೊಟ್ಟಿದ್ದಪ್ಪ ಅಂತ ಇಟ್ಕಬೇಕು. ಎಲ್ಲಾರೂ ಅಂಗಿದ್ರ ನಾವಿರೋ ಜಾಗ್ವೆ ಸ್ವರ್ಗ ಆಗುತ್ತೆ. ಒಟ್ಟಿಗೆ ಬಗವಂತ್ಮೆಚ್ಚಂಗಿರ್ಬೇಕು.

ದೇವ್ರಿಗೆ ನಾವ್ ಮಾಡದೆಲ್ಲಾ ಗೊತ್ತಾಗುತ್ತಾ?

ಊಂ ಎಲ್ಲಾನು ಗೊತ್ತಾಗುತ್ತೆ. ಎಲ್ಲ ಲೆಕ್ಕ ಇರುತ್ತೆ ಅವ್ನ್ತಾವ.

ನಾವ್ ಸುಳ್ಳೇಳಿರೆ, ಕೆಟ್ಮಾತಾಡಿರೆ ಗೊತ್ತಾಗುತ್ತಾ?

ಊಂ ಗೊತ್ತಾಗುತ್ತೆ.

ಹೆಂಗೆ ಕೆಳಿಸ್ಕತನೆ ಅವ್ನು?

ನಾವ್ ಮಾತಾಡೊದೆಲ್ಲ ಗಾಳಿಲೋಗಿ ಅವ್ನ್ ಕಿವಿಗೆ ಬೀಳುತ್ತೆ"[೬] ಎಂಬ ದೇವರನ್ನು ಕುರಿತಾದ ದಲಿತಲೋಕದ ಈ ಮುಗ್ಧನಂಬಿಕೆ ಮನೋಜ್ಞವಾಗಿದೆ. ದೇವರು ಎಂಬ ಪರಿಕಲ್ಪನೆಯನ್ನು ನಂಬಿದ್ದು ನಾವು ಯಾವಾಗಲು ಒಳ್ಳೆಯದನ್ನೇ ಮಾಡಬೇಕು. ಆಗ ದೇವರು ನಮಗೆ ಒಳ್ಳೆಯದನ್ನೆ ಮಾಡುತ್ತಾನೆ. ನಾವು ಕೆಟ್ಟದನ್ನ ಮಾಡಿದರೆ ನಮಗೆ ಕೆಟ್ಟದ್ದು ಆಗುತ್ತದೆ ಎಂಬ ನಂಬಿಕೆಯನ್ನು ದಲಿತ ಮತ್ತು ತಳಸಮುದಾಯದವರು ಹೀಗೆ ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ ಎಂಬುದನ್ನು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ. ಈ ಬಗೆಯ ನಂಬಿಕೆಯನ್ನು ಇಂದಿಗೂ ಈ ಜನರು ಪಾಲಿಸಿಕೊಂಡು ಬರುತ್ತಿದ್ದಾರೆ.

ಪರಶಿವಮೂರ್ತಿಯವರು ತಮ್ಮ ಆತ್ಮಕಥನದಲ್ಲಿ ತಮ್ಮ ತಂದೆಯು ಪಾಲಿಸಿಕೊಂಡು ಬಂದ ದೈವತ್ವದ ನಂಬಿಕೆಯನ್ನು ಕುರಿತು ಹೀಗೆ ಪ್ರಸ್ತಾಪಿಸುತ್ತಾರೆ: "ಅಪ್ಪ ದೈವಭಕ್ತ. ಬೆಳಿಗ್ಗೆ ಎದ್ದವರೇ ಶೌಚಕರ್ಮಾದಿಗಳನ್ನು ಮುಗಿಸಿಕೊಂಡು ಸ್ನಾನ ಮಾಡಿ ಶುಭ್ರವಾಗಿ ಮೈ ಒರೆಸಿಕೊಂಡ ಟವೆಲ್ಲನ್ನೇ ನಡುವಿಗೆ ಸುತ್ತಿಕೊಂಡು, ಮನೆಯ ಅಂಗಳದಲ್ಲಿ ಇರುತ್ತಿದ್ದ ದೊಡ್ಡ ದೊಡ್ಡ ದೇವರ ಪಟಗಳಿಗೆಲ್ಲಾ ಹೂವನ್ನಿಟ್ಟು, ವಿಭೂತಿ ಹಚ್ಚಿ, ತಾವು ಸಹಾ ಹಣೆಯುದ್ದಕ್ಕೂ ವಿಭೂತಿ ಬಳಿದುಕೊಂಡು, ಪ್ರತಿಯೊಂದು ಪಟಕ್ಕೂ ಗಂಧದಕಡ್ಡಿಯಿಂದ ಬೆಳಗಿ, ಹತ್ತು ನಿಮಿಷವಾದರೂ ನಿಂತು ಪ್ರಾರ್ಥಿಸಿ ಅನಂತರ ಮನೆಯ ಹೊಸ್ತಿಲನ್ನು ದಾಟಿನಿಂತು ಸೂರ್ಯನಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ, ಒಳಬರುವ ಹೊತ್ತಿಗೆ ಇಪ್ಪತ್ತು ನಿಮಿಷಗಳ ಸಮಯ ಹಿಡಿಯುತ್ತಿತ್ತು. ಸಂಜೆ ಮನೆಗೆ ಬರುವುದು ಎಷ್ಟೇ ಹೊತ್ತಾಗಲಿ ಮತ್ತೆ ಇದೆ ರೀತಿಯ ಪೂಜಾ ವಿಧಾನ ಮಾಡಿ ಮುಗಿಸಿಯೇ ಊಟ ಮಾಡುತ್ತಿದ್ದುದು. ತಾವು ಪೂರ್ವಿಕರಿಂದ ಕಾಪಾಡಿಕೊಂಡಿದ್ದ ಈ ಪರಂಪರೆಯನ್ನು ಸಂಸ್ಕಾರವನ್ನು ಮಗನು ಮುಂದುವರೆಸಿಕೊಂಡು ಹೋಗಲಿ ಅನ್ನುವ ಬಯಕೆ ಅಪ್ಪನಿಗೆ."[೭] ಈ ನಂಬಿಕೆ ಹಾಗೂ ಆಚರಣೆಯನ್ನು ನಮ್ಮ ಮನೆಯ ಮಗ ಮುಂದುವರಿಸಿಕೊಂಡು ಹೋಗಬೇಕು

ಎಂಬುವುದು ಇವರ ಆಶಯವಾಗಿತ್ತು. ಇದಲ್ಲದೆ ಜನಪದರು ಮೊದಲು ಯಾವುದೇ ಒಳ್ಳೆಯ ಕೆಲಸವನ್ನುಪ್ರಾರಂಭಮಾಡಬೇಕಾದರೆಭೂಮಿತಾಯಿಗೂ,ಸೂರ್ಯದೇವರಿಗೂಸಹ ಕೈಮುಗಿಯುತ್ತಾರೆ. ಈ ಬಗೆಯ ನಂಬಿಕೆಗಳು ಸಹ ದಲಿತ ಆತ್ಮಕಥನಕಾರರ ಕುಟುಂಬದಲ್ಲಿಯು ಇತ್ತು ಎಂಬುದನ್ನು ಪರಶಿವಮೂರ್ತಿ ಅವರು ತಮ್ಮ 'ಗೆರೆದಾಟಿದ ಮೇಲೆ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಈ ಬಗೆಯ ನಂಬಿಕೆ ಕೇವಲ ಇವರ ಕುಟುಂಬಕ್ಕೆ ಸಂಬಂಧಿಸಿದ್ದಲ್ಲ; ಅದು ಇಡೀ ದಲಿತ ಸಮುದಾಯವನ್ನೇ ಹಾಗೂ ಜನಪದರನ್ನು ಸಹ ಒಳಗೊಂಡಿದ್ದೇ ಎಂದು ಹೇಳಬಹುದು.

ಪರಶಿವಮೂರ್ತಿಯವರ ಗ್ರಾಮದಲ್ಲಿನ ದಲಿತ ಸಮುದಾಯದವರು ವಿವಿಧ ಬಗೆಯ ಪೂಜಾ ವಿಧಿವಿಧಾನಗಳು, ಆಚರಣೆ ಮತ್ತು ನಂಬಿಕೆಯ ವಿವರಣೆಯನ್ನು ದಾಖಲಿಸುತ್ತಾರೆ: "ನಾವು ಜೋಗಯ್ಯನವರು. ದಾಸಯ್ಯನವರು ಹಣೆಗೆ ಉದ್ದದ ನಾಮ ಬಳಿದುಕೊಂಡರೆ, ನಾವು ಹಣೆಗೆ ಅಡ್ಡವಾಗಿ ಮೂರು ಗೆರೆಯ ವಿಭೂತಿ ಬಳಿದುಕೊಳ್ಳುತ್ತೇವೆ. ನಮ್ಮಲ್ಲಿ ಮನೆಯ ಹಿರಿಯ ಮಗನನ್ನು 'ಜೋಗಿ' ಬಿಡುತ್ತಾರೆ. ಹಾಗೆ ಜೋಗಿಯಾದವನು ಕಿವಿಗೆ ಓಲೆ ಧರಿಸಿ, ಸದಾ ಹಣೆಗೆ ವಿಭೂತಿ ಬಳಿದುಕೊಂಡಿರಬೇಕು. ಪೂಜೆಯ ಸಮಯದಲ್ಲಿ ದಾಸಯ್ಯಗಳು ಜಾಗಟೆ ಬಡಿದು ಭಾಂಗಿ ಊದಿದರೆ, ನಾವು ಪೂಜೆಗೆ ಎಡೆಪಾತ್ರೆ ಇಟ್ಟು ಸಿಂಗ್ಲಾತ ಊದುತ್ತೇವೆ. ಎಡೆ ಪಾತ್ರೆ ಅಂದರೆ ಕುಂಬಳಕಾಯಿಯಲ್ಲಿ ಮಾಡಿದಂಥದು. ಎಡೆಗೆ ಬಡಿಸುವಾಗ ಊಟವನ್ನು 'ದೇವರಿಗಾಗಿ' ಅದರೊಳಗೆ ಇಡುತ್ತಾರೆ. ಜಿಂಕೆಯ ಕೊಂಬಿನ ತುದಿಯನ್ನು ಕೊಳವೆಯಾಗುವಂತೆ ಕೊಂಚ ಕತ್ತರಿಸಿ ಮಾಡಿದ ಸಿಂಗ್ಲಾತದ ತುದಿಯಿಂದ ಊದಿದರೆ ಮಂಗಳಕರ ಧ್ವನಿ ಹೊರಬರುತ್ತದೆ. ಎಲ್ಲರ ಮನೆಗಳಲ್ಲೂ ಅವನ್ನೂ ಇಟ್ಟುಕೊಳ್ಳುವ ಹಾಗಿರಲಿಲ್ಲ. ಅಪ್ಪನ ಅಣ್ಣ-ತಮ್ಮಂದಿರ ಪೈಕಿ ಒಂದು ಮಾತ್ರ ದೊಡ್ಡಪ್ಪನ ಮನೆಯಲ್ಲಿತ್ತು. ಅದಲ್ಲದೇ ಪೂಜೆ ನಡೆಯುವ ಪ್ರಶ್ನೆಯೇ ಇಲ್ಲ. ಇದ್ದುದು ಒಂದೇ ಆದ್ದರಿಂದ ಹಬ್ಬ ಹರಿದಿನಗಳಲ್ಲಿ ಒಬ್ಬರ ಮನೆಯಲ್ಲಿ ಪೂಜೆ ನಡೆದ ಅನಂತರವೇ ಮತ್ತೊಬ್ಬರ ಮನೆಯಲ್ಲಿ ಪೂಜೆ. ದೊಡ್ಡವರ ಗೈರು ಹಾಜರಿಯಲ್ಲಿ ಮನೆಯಲ್ಲಿ ದೊಡ್ಡ ಮಗನಾದ ನಾನು, ನಮ್ಮ ದೊಡ್ಡಪ್ಪ ಚಿಕ್ಕಪ್ಪಂದಿರ ಮನೆಗೆ ಹೋಗಿ ಪೂಜೆ ಮಾಡುತ್ತಿದ್ದೆ. ಒಂದರ್ಥದಲ್ಲಿ ನಾನೇ ಪೂಜಾರಿ! ಪ್ರತಿ ಶುಕ್ರವಾರ ನಮಗೆಲ್ಲಾ 'ವಾರದ ದಿನ' ಅಂದು ಮನೆಯ ಹೆಂಗಸರು ಮಿಂದು ಮಡಿಯುಟ್ಟು ಗುಡಿಸಲಲ್ಲಿರುವ ಎಲ್ಲಾ ಪಾತ್ರೆ ಪಗಡವನ್ನು ಹೊರತಂದು ಉಜ್ಜಿ ಬೆಳಗಿ ಒಳಗೆ ಕೊಂಡೊಯ್ಯುವ ಮುನ್ನ ಒಲೆ ಹಾಗೂ ನೆಲವನ್ನೆಲ್ಲಾ ಸಗಣಿಯಿಂದ ಸಾರಿಸಿ, ಅದು ಒಣಗಿದ ನಂತರ ಶುಭ್ರಗೊಂಡ ಪಾತ್ರೆಗಳಿಂದ ಅಡಿಗೆ ಮಾಡಿ ಪೂಜೆ ಮಾಡುವಷ್ಟರಲ್ಲಿ ಮಧ್ಯಾಹ್ನ ಮೂರು ಗಂಟೆಯಾಗಿ ಬಿಡುತ್ತಿತ್ತು. ಅಲ್ಲಿಯವರೆಗೂ ಮನೆಯಲ್ಲಿ ಯಾರೂ ಸಹ ಒಂದು ತೊಟ್ಟು ನೀರನ್ನು ಕುಡಿಯುತ್ತಿರಲಿಲ್ಲ.

‘ಬಾ ಮೂರ್ತಪ್ಪ., ಧೂಪ ಹಾಕುವಿಯಂತೆ’ ಅಂತ ಹೇಳಿ ನಮ್ಮನ್ನು ಸರದಿ ಪ್ರಕಾರ ಮನೆಗೆ ಕರೆದೊಯ್ಯುತ್ತಿದ್ದರು. ಕೈಕಾಲು ಮುಖ ತೊಳೆದು, ವಿಭೂತಿ ಬಳಿದು, ಹೆಗಲ ಮೇಲೊಂದು ಟವೆಲ್ಲನ್ನಿಟ್ಟುಕೊಂಡು ದೊಡ್ಡವ್ವನ ಮನೆಯಲ್ಲಿ ಗುಡಾಣದಲ್ಲಿರುತ್ತಿದ್ದ ಎಡೆಪಾತ್ರೆ ಸಿಂಗ್ಲಾತ್ಣವನ್ನು ಭಕ್ತಿಯಿಂದ ಎತ್ತಿಕೊಂಡು ಬಂದು ಕರೆದವರ ಮನೆಯಲ್ಲಿ ಪೂಜೆ ಮಾಡಿ, ಅಲ್ಲೇ ಊಟವನ್ನು ಮಾಡುತ್ತಿದ್ದೆ. ಅದಾದ ನಂತರ ಮತ್ತೊಂದು ಮನೆ. ಹೀಗೆ ಅಂದು, ಒಂದರ ನಂತರ ಒಂದರಂತೆ ಮೂರ್ನಾಲ್ಕು ಮನೆಗಳಲ್ಲಿ ಪೂಜೆ ಮಾಡಿ ಅಷ್ಟೂ ಮನೆಗಳಲ್ಲೂ ಊಟ ಮಾಡುತ್ತಿದ್ದೆ!”[೮] ಎಂಬುವುದನ್ನು ಬಹಳ ಭಕ್ತಿಯಿಂದ ನೆನೆಯುತ್ತಾರೆ. ಈ ಬಗೆಯ ಪದ್ಧತಿಯನ್ನು ‘ಜೋಗಿ ಬಿಡುವ ಪದ್ಧತಿ’ ಎಂದು ಕರೆಯುತ್ತಾರೆ. ಇದು ಬಹಳ ವರ್ಷಗಳಿಂದ ದಲಿತರಲ್ಲಿ ಹುಟ್ಟಿಕೊಂಡು ಬಂದಿರುವ ನಂಬಿಕೆ ಮತ್ತು ಆಚರಣೆಯಾಗಿದೆ. ಏಕೆಂದರೆ ಪ್ರತಿಯೊಂದು ಮನೆಯವರು ಈ ದಾಸಯ್ಯ ಮತ್ತು ಜೋಗಯ್ಯರನ್ನು ತಮ್ಮ ತಮ್ಮ ಮನೆಗೆ ಕರೆದುಕೊಂಡು ಹೋಗಿ ಈ ದಾಸಯ್ಯ ಜೋಗಯ್ಯರ ಕೈಯಲ್ಲಿ ಮನೆಗೆ ಧೂಪವನ್ನು ಹಾಕಿಸುತ್ತಾರೆ. ಇದರ ಹಿನ್ನೆಲೆಯನ್ನು ಗಮನಿಸಿದರೆ, ಮನೆಯಲ್ಲಿ ಹಸು–ಕರು, ಬಾಣಂತಿ–ಮಕ್ಕಳು ಹಾಗೂ ವಯಸ್ಸಾಗಿರುವ ಅಜ್ಜ–ಅಜ್ಜಿಯರಿಗೆ ಯಾವುದೇ ಅಂಕೆ–ಶಂಕೆ, ಭಯ–ಭೀತಿ, ಗಾಳಿ–ಪೀಡೆಗಳು ನಮ್ಮ ಮನೆಗೆ ಸುಳಿಯದೇ ಇರಲಿ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಈ ಪದ್ಧತಿಯನ್ನು ಇಂದಿಗೂ ಈ ತಳ ಸಮುದಾಯದವರು ನಡೆಸಿಕೊಂಡು ಬರುತ್ತಿದ್ದಾರೆ.

ದೇವರನ್ನು ನಂಬುವುದು ದಲಿತಾನುಭವದ ಒಂದು ಬಗೆಯದಾದರೆ, ದೇವರನ್ನು ನಂಬಿಸಿ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಿದ್ದ ಪೌರೋಹಿತ್ಯದ ಮುಖಗಳನ್ನು ದಲಿತ ಆತ್ಮಕಥನಕಾರರು ಬಿಚ್ಚಿಟ್ಟಿದ್ದಾರೆ. ಅದರಂತೆ ಸಿದ್ಧಲಿಂಗಯ್ಯ ಅವರು ತಮ್ಮ ‘ಊರುಕೇರಿ’ಯಲ್ಲಿ ಪಕ್ಕದ ಊರಿನಲ್ಲಿ ಒಬ್ಬನ ಮೇಲೆ ಒಂದು ದೇವತೆ ಮೈದುಂಬುತಿತ್ತು. ಜನ ಅದನ್ನು ‘ಕುರಿದೇವ್ರು’ ಎಂದು ಕರೆಯುತ್ತಿದ್ದರು. ದೇವತೆ ಮೈದುಂಬಿದ ಕೂಡಲೇ ‘ಕುರಿ ಕುರಿ’ ಎಂದು ಆರ್ಭಟಿಸುತ್ತಿತ್ತು. ಭಕ್ತರು ಭಯದಿಂದ ‘ಯಾರ ಕುರಿ ತಾಯಿ?’ ಎಂದು ಕೇಳುತ್ತಿದ್ದರು. ಆಗ ದೇವತೆ ‘ಯಾವುದಾದರೂ ಒಂದು ಕುರಿ’ ಎನ್ನುತ್ತಿತ್ತು. ಭಕ್ತರು ಓಡಿಹೋಗಿ ಸಿಕ್ಕಿದ ಕುರಿಯನ್ನು ಹಿಡಿದು ದೇವತೆಯ ಮುಂದೆ ನಿಲ್ಲಿಸುತ್ತಿದ್ದರು. ದೇವತೆ ಮೈಯಿಳಿದ ನಂತರ ಪೂಜಾರಿ ಮತ್ತು ಭಕ್ತರು ಕುರಿಕೊಯ್ದು ಚೆನ್ನಾಗಿ ಊಟಮಾಡುತ್ತಿದ್ದರು. ಕುರಿ ಕಳೆದುಕೊಂಡವರು ಏನೂ ಅನ್ನುವಂತೆಯೂ ಇಲ್ಲ. ಅನುಭವಿಸುವಂತೆಯೂ ಇಲ್ಲ. ಎದುರು ಮಾತಾಡಿದರೆ ದೇವತೆ ಕೇಡು ಮಾಡೀತು ಎಂಬ ಭಯ. ಮತ್ತೊಮ್ಮೆ ದೇವತೆ ಮೈದುಂಬಿ ಕುರಿ ಎಂದು ಕೂಗುತ್ತಿದ್ದ. ಒಮ್ಮೆ ಭಕ್ತರು ಯಥಾಪ್ರಕಾರ ಹತ್ತಿರದಲ್ಲಿ ಸಿಕ್ಕಿದ ಒಂದು

ಕುರಿಯನ್ನು ಹಿಡಿದು ತರುತ್ತಾರೆ. ಯಾಕೋ ದೇವತೆ ಈ ಕುರಿ ನನಗೆ ಬೇಡ, ಬೇರೆ ಕುರಿ ತನ್ನಿ ಎನ್ನುತ್ತದೆ. ದೇವತೆ ಹೀಗೆ ಹೇಳಿದ್ದು ಇದೇ ಮೊದಲ ಸಲ. ಜನ ಚಕಿತಗೊಂಡರು. ತಮ್ಮಿಂದ ತಪ್ಪೇನಾದರೂ ಆಗಿರಬಹುದೇ ಎಂದು ಚಿಂತಿಸಿದರು. 'ಯಾಕೆ ಬೇಡ ತಾಯಿ' ಎಂದು ದೈನ್ಯದಿಂದ ಕೇಳಿದರು. ಸ್ವೀಕರಿಸುವಂತೆ ಪರಿಪರಿಯಾಗಿ ಬೇಡಿದರು. ದೇವರು ಯಾವುದಕ್ಕೂ ಜಗ್ಗಲಿಲ್ಲ. 'ಈ ಕುರಿ ಬೇಡ ಅಂದರೆ ಬೇಡ' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿತು. ಸಮಸ್ಯೆ ಬಗೆ ಹರಿಯಲಿಲ್ಲ. ಸಿದ್ಧಲಿಂಗಯ್ಯ ಅವರ ಮಾವ ಈ ಕುರಿಯನ್ನು ಗುರುತಿಸಿ ಊರಿನವರನ್ನು ಕುರಿತು 'ಈ ಕುರಿ ದೇವತೆ ಮೈದುಂಬಿದ ಪೂಜಾರಪ್ಪನದು' ಎನ್ನುತ್ತಾರೆ. ಇದು ಪೂಜಾರಿಯ ಕುರಿ. ಆದ್ದರಿಂದ ಬೇಡ ಎನ್ನುತ್ತಿದ್ದಾನೆ ಎಂದು ಜನಕ್ಕೆ ಮನವರಿಕೆಯಾಯಿತು. ದೇವರು ಮೈದುಂಬುವುದು ಕುರಿ ತಿನ್ನಲು ಮಾಡುವ ನಾಟಕ ಎಂದು ಗೊತ್ತಾಯಿತು. ಹಿಂದೆ ಕುರಿ ಕಳೆದುಕೊಂಡಿದ್ದವರ ಕೋಪ ನೆತ್ತಿಗೇರಿತು. ಜನ ದೇವತೆ ಮೈದುಂಬುತ್ತಿದ್ದವನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದರು. ಅಂದಿನಿಂದ ಕುರಿದೇವರ ಕಾಟ ತಪ್ಪುತ್ತದೆ”.[೯] ಈ ಬಗೆಯಲ್ಲಿ ದಲಿತರು ದಲಿತರನ್ನೇ ದೇವರ ಹೆಸರಿನ ನಂಬಿಕೆಯಲ್ಲಿ ಹೇಗೆ ಮೋಸ ಮಾಡುತ್ತಾರೆ ಎಂಬುದನ್ನು ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

'ಗೆರೆದಾಟಿದ ಮೇಲೆ' ಕೃತಿಯಲ್ಲಿ ಸ್ವತಃ ಆತ್ಮಕಥನಕಾರರೇ ದೈವ ಮೈಮೇಲೆ ಬರುವುದನ್ನು ಹುಸಿನಂಬಿಕೆ ಎಂಬುದನ್ನು ಸಾಬೀತು ಮಾಡುತ್ತಾರೆ. ಮದುವೆಯ ಹಿಂದಿನ ರಾತ್ರಿ ದೇವರು ತರುವ ಸಂಪ್ರದಾಯವನ್ನು ಲೇಖಕರೆ ಹೇಳುವಂತೆ, “ನನಗೆ ಮೊದಲೇ ಕಾಲುನೋವು. ಸ್ವಲ್ಪ ದೂರ ಶ್ರಮಿಸುವುದರಲ್ಲಿ ಕಾಲೆಳೆಯುವಂತಾಯ್ತು. ನಿದ್ದೆಗೆ ಕಣ್ಣುಗಳು ಭಾರವಾಯ್ತು. ನನ್ನ ಅವಸ್ಥೆಯನ್ನು ಗಮನಿಸಿದ ಹುಚ್ಚಪ್ಪ, ಬೇರೊಂದು ರೀತಿಯಲ್ಲಿ ಅರ್ಥೈಸಿ, ಪಕ್ಕದವನಿಗೆ 'ಮೂರ್ತಿ ಮೈಮೇಲೆ ದೇವರು ಬತ್ತಾ ಇದೆ' ಅಂತ ಪಿಸುಗುಟ್ಟಿದ. ಮದುವೆಗಳಲ್ಲಿ ಹೀಗೆ ದೇವರು ತರುವಾಗ ಯಾರಾದರೊಬ್ಬರಿಗೆ ದೇವರು ಮೈಮೇಲೆ ಬರುತ್ತದೆ ಹಿಂದೆ ಬರುತ್ತಿದ್ದ ದೊಡ್ಡವ್ವ, ಚಿಕ್ಕವ್ವಂದಿರೆಲ್ಲ ಮುಂದೆ ಬಗ್ಗಿ ನನ್ನನ್ನು ನೋಡತೊಡಗಿದಾಗ, 'ನಾನು ಯಾಕೆ ಇದರ ಮಜಾ ತಗೋಬಾರ್ದು' ಅಂತ ಇನ್ನು ಸ್ವಲ್ಪ ಆಕ್ಟಿಂಗ್ ಮಾಡಿದೆ, ತೂರಾಡಿದೆ, ಕಾಲುಗಳನ್ನು ಒಂದಿಂಚೂ ಕದಲಿಸದೇ ನಿಂತಲ್ಲೇ ನಿಂತುಬಿಟ್ಟೆ. ಯಾರೋ ಹೋಗಿ ಮುಂದೆ ಹೋಗುತ್ತಿದ್ದ ಹಿರಿಯವನಾದ ದೊಡ್ಡಪ್ಪನಿಗೆ ಸುದ್ದಿ ಮುಟ್ಟಿಸಿದರು. ಡಬಡಬ ಓಡಿ ಬಂದ ದೊಡ್ಡಪ್ಪ ನನ್ನ ಪಕ್ಕದಲ್ಲೇ ನಿಂತಿದ್ದ ಚಿಕ್ಕವ್ವ ಹಿಡಿದುಕೊಂಡಿದ್ದ ಆರತಿ ತಟ್ಟೆಯಿಂದ ಊದುಬತ್ತಿಯನ್ನು ತೆಗೆದು ಹೊತ್ತಿಸಿ, ನನಗೆ ಪೂಜಿಸಿ, 'ಹುಚ್ಚವ್ವ, ನಮ್ಮದು ಏನೇ ತಪ್ಪಿದ್ದರೂ ನಿನ್ನ ಹೊಟ್ಟೆಗಾಕಂಡು ಈ ಮದುವೆ ಕಾರ್ಯ ನಡೆಯೋಹಂಗೆ ಕಾಪಾಡವ್ವ' ಅಂತ ಕೈಮುಗಿದು ಕಾಲಿಗೆರಗಿದ.

ದೊಡ್ಡಪ್ಪ ನನ್ನ ಕಾಲಿಗೆರಗಿದ್ದು ಮುಜುಗರವಾದರೂ 'ಅವನು ಹುಚ್ಚವ್ವನ (ಶಿವನ ಪತ್ನಿ ಪಾರ್ವತಿ) ಕಾಲಿಗೆ ಬೀಳ್ತಾ ಇರೋದು, ನನ್ನ ಕಾಲಿಗಲ್ಲ' ಅಂತ ಅಂದುಕೊಂಡು ಸಾವರಿಸಿಕೊಂಡೆ. ಯಾರೊ ಕೊಟ್ಟ ತೆಂಗಿನ ಕಾಯಿಯನ್ನು ನನ್ನ ಮುಖಕ್ಕೆ ನೀವಾಳಿಸಿ ನೆಲಕ್ಕೆ ಅಪ್ಪಳಿಸಿ ಈಡುಗಾಯಿ ಒಡೆದಾಗ, ಅದು ಹತ್ತಾರು ಹೋಳುಗಳಾಗಿ ಚೆಲ್ಲಾಪಿಲ್ಲಿಯಾಯ್ತು. ಅದಕ್ಕಾಗಿಯೇ ಕಾಯ್ದುಕೊಂಡಿದ್ದ ಹೈಕಳು ಒಬ್ಬರ ಮೇಲೊಬ್ಬರು ಬಿದ್ದು, ಒಡೆದ ತೆಂಗಿನಕಾಯಿಯ ಚೂರುಗಳನ್ನು ಆಯ್ದುಕೊಂಡು ದಾರಿ ಬಿಟ್ಟಾಗ, ನಾನು ಮತ್ತೊಂದಷ್ಟು ಹೆಜ್ಜೆ ಹಾಕಿದೆ. ಸ್ವಲ್ಪ ಕ್ರಮಿಸಿ ಮತ್ತೆ ನನ್ನ ನಿದ್ದೆಯಿಂದಾಗಿ ಮೆರವಣಿಗೆ ಸ್ಥಗಿತ. ಮತ್ತೆ ದೊಡ್ಡಪ್ಪನ ಆಗಮನ, ಮತ್ತೆ ಕೈ ಜೋಡಿಸಿ ಪ್ರಾರ್ಥನೆ, ಮತ್ತೊಂದು ಈಡುಗಾಯಿ. ಹೀಗೆ ದೇವರನ್ನು ಹೊತ್ತು ಮನೆ ತಲುಪುವಷ್ಟರಲ್ಲಿ ಏಳೆಂಟು ತೆಂಗಿನ ಕಾಯಿಗಳು ಈಡುಗಾಯಿಯಾಗಿದ್ದವು. ಮನೆಯನ್ನು ತಲುಪಿ ತಲೆಯ ಮೇಲೆ ಎರಡು ತಾಸಿನವರೆಗೂ ಇದ್ದ ದೇವರನ್ನು ಕೆಳಗಿಳಿಸಿದಾಗ, ಕೈಕಾಲು ಬಿದ್ದುಹೋಗಿ ದಣಿದಿದ್ದ ನಾನು ಅಲ್ಲೇ ಮೂಲೆಯಲ್ಲಿ ಕುಸಿದು ನಿದ್ದೆ ಹೋಗಿಬಿಟ್ಟೆ. ಬೆಳಿಗ್ಗೆ ಎದ್ದಾಗ ಅಕ್ಕ, 'ನೆನ್ನೆ ರಾತ್ರಿ ನಿಜವಾಗಲೂ ನಿನ್ನ ಮೇಲೆ ಹುಚ್ಚವ್ವ ಬಂದಿದ್ಲಾ' ಅಂತ ಕೇಳಿದಾಗ, 'ಹೂಂ........ ಬಂದಿದ್ಲು.........' ಅಂತ ನಗುತ್ತಾ ಹೊರಗಡೆ ಓಡಿದ್ದೆ."[೧೦] ಇಲ್ಲಿ ಆತ್ಮಕಥನಕಾರರು ಅಕ್ಷರ ಕಲಿತವರು ಎಂಬುವುದು ಅಷ್ಟೇ ಸತ್ಯ. ಆದರೆ ಅನಕ್ಷರಸ್ಥ ಸಮುದಾಯದವರಲ್ಲಿ ದೇವರು ಎಂಬ ಪರಿಕಲ್ಪನೆ ಇದ್ದೇ ಇರುತ್ತದೆ. ಏಕೆಂದರೆ ಪ್ರತಿದಿನವು ದಲಿತರು ಒಂದಲ್ಲ ಒಂದು ನಂಬಿಕೆ, ಆಚರಣೆಗಳ ನಡುವೆಯೇ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ. ಹಾಗಾಗಿ ಆತ್ಮಕಥನಕಾರರಿಗೆ ದೇವರ ನಂಬಿಕೆ ಇಲ್ಲದಿದ್ದರು ಸಹ ಆ ಊರಿನ ಜನರಲ್ಲಿ ಈ ನಂಬಿಕೆ ಇನ್ನೂ ಜೀವಂತಿಕೆಯ ಸಂಸ್ಕೃತಿಯಾಗಿಯೇ ಮುಂದುವರಿಯುತ್ತಿದೆ ಎಂಬುವುದು ಅಷ್ಟೇ ಸತ್ಯವಾಗಿದೆ.

'ಈಗೇನ್ ಮಾಡೀರಿ?' ಆತ್ಮಕತೆಯ ಪ್ರಾರಂಭದಲ್ಲಿಯೇ ಸ್ತ್ರೀ ಸಹಜ ಬಯಕೆಗಳೊಂದಿಗೆ ಹಾಗೂ ಸ್ತ್ರೀಯರ ದೈವದ ನಂಬಿಕೆ, ಗಂಡನ ಭಯದಲ್ಲಿ ಮುಗ್ಧ ಹುಡುಗಿಯು ತಾರ್ಕಿಕ ಪ್ರಶ್ನೆ ಹಾಕುವುದು ಕಂಡುಬರುತ್ತವೆ. ಸರಸ್ವತಿಯವರು ಪ್ರಾರಂಭದಲ್ಲೇ ಆಶ್ರಮ ಮತ್ತು ದೇವರ ಬಗ್ಗೆ ಹೇಳಿರುವುದು ಔಚಿತ್ಯಪೂರ್ಣವಾಗಿ ಬಂದಿದೆ. ಆಧುನಿಕ ಬದುಕಿನ ಸಂದರ್ಭದಲ್ಲಿ ಅಸಂಖ್ಯಾತ ಮಹಿಳೆಯರು ಆಶ್ರಮದಲ್ಲಿ ಹಾಗೂ ದೇವಾಲಯಗಳಲ್ಲಿ ಮಾನಸಿಕ ನೆಮ್ಮದಿಯನ್ನು ಪಡೆಯುತ್ತಿದ್ದಾರೆ. ಈ ಲೇಖಕಿಯ ಬದುಕಿನ ಚಿತ್ರಣವು ಕೂಡ ಮಹಿಳೆಯರ ಪ್ರತೀಕದಂತೆ ರೂಪುಗೊಂಡಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಇಲ್ಲಿ ತಮ್ಮ ಅಜ್ಜಿಯನ್ನು ದೈವತ್ವಕ್ಕೆ ಹೋಲಿಸಿರುವುದು ತಿಳಿದು ಬರುತ್ತದೆ: "ಈ ಅವ್ವನ ಕನ್ನಡ್ಕ ತಗುದ್ರೆ ಇಲ್ಲ ಗುಡಿವಳ್ಗಿರೂ ವನ್ನಮ್ಮಂಗೆ ಕನ್ನಡ್ಕ ಆಕಿರೆ ಇಬ್ರಿಗೂ ವ್ಯತ್ಯಾಸನೆ ಇಲ್ಲ. ಇಲ್ಲ ಇಲ್ಲ ವ್ಯತ್ಯಾಸ ಐತೆ ವನ್ನಾದೇವಿ ಯಾವಾಗ್ಲು ಗುಡಿ ವಳ್ಗೆ ಇರ್ತಾಳೆ ಪರ್ಸೆ

ದಿನ ಮಾತ್ರ ಈಚಗ್ಗೆ ಬತ್ತಳೆ, ಅವ್ವ ಓಡಾಡೂ ಮಾತಾಡೊ ವನ್ನಾದೇವಿ."[೧೧] ಈ ಮಾತು ಲೇಖಕಿಯ ಅಜ್ಜಿಯ ಬದುಕಿನ ಚಿತ್ರಣದೊಂದಿಗೆ ದೇವತೆಯನ್ನು ಹೋಲಿಸುವುದಾಗಿದೆ. ಜೊತೆಗೆ ಬಿಡುವಿಲ್ಲದ ಅಜ್ಜಿಯ ಜೀವನ ವೈಖರಿಯನ್ನು ಹೇಳುವಂತೆ ಇದೆ. ಗುಡಿ ಒಳಗಿನ ದೇವಿ ಕೇವಲ ದೇವಿಯಾದರೆ, ಈ ನನ್ನ ಅಜ್ಜಿ ಮಾತಾನಾಡುವ ಮತ್ತು ಓಡಾಡುವ ದೇವಿಯಾಗಿದ್ದಾಳೆ ಎಂದು ತಮ್ಮ ಅಜ್ಜಿಯ ಮಹತ್ವವನ್ನು ತಿಳಿಸಿದ್ದಾರೆ. ದು.ಸರಸ್ವತಿಯ ತಾಯಿ ಅನಾರೋಗ್ಯದ ಕಾರಣ ಅವರ ಬಲಗೈ ಸ್ವಾಧೀನ ತಪ್ಪುತ್ತದೆ. ದೇವರನ್ನು ಅಪಾರವಾಗಿ ನಂಬುತ್ತಿದ್ದ ಅವರ ತಾಯಿ ದೇವರಿಗೆ ಪ್ರತಿಸವಾಲನ್ನು ಹಾಕುವುದು ಕಂಡುಬರುತ್ತದೆ. "ನಿನ್ನಾಟ ನಡೀದು, ನೋಡೆ ಬಿಡ್ತಿನಿ ನಾನು, ನೀನ್ ಗೆಲ್ತಿಯೋ ನಾನ್ ಗೆಲ್ತಿನೋ."[೧೨] ಎಂದು ದೇವರಿಗೆ ಪ್ರತಿಸವಾಲನ್ನು ಹಾಕುತ್ತಾರೆ. ಈ ಬಗೆಯ ಸಂಗತಿಗಳು ಇಂದು ಪ್ರತಿಯೊಂದು ಹಳ್ಳಿಗಳಲ್ಲಿ ಊರಿನ ಯಜಮಾನರು ಊರಿನ ಜನರಿಗೆ ಯಾವುದಾದರೂ ಕಾಯಿಲೆ ಬಂದಾಗ ದೇವರನ್ನೇ ಪ್ರಶ್ನೆ ಮಾಡುವ ಮನೋಭಾವನೆಯನ್ನು ಬೆಳಸಿಕೊಂಡಿವುದನ್ನು ನೆನಪಿಗೆ ತರುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಲೇಖಕಿಯರ ತಾಯಿಗೆ ತಾನು ನಂಬಿದ ದೇವರು ಎಂದೂ ಕೈ ಬಿಡುವುದಿಲ್ಲ, ಕಾಪಾಡುತ್ತಾನೆ ಎಂಬ ಆತ್ಮವಿಶ್ವಾಸವಿರುವುದು ಈ ಮೇಲಿನ ಮಾತುಗಳಿಂದ ತಿಳಿದು ಬರುತ್ತದೆ. ಆದರೆ ಕೊನೆಗೂ ಇಲ್ಲಿ ಗೆಲ್ಲುವುದು ದೈವತ್ವವೇ ಹೊರತು ಮಾನವನ ಸಾವಲ್ಲ. ಆದ್ದರಿಂದ ದೇವರ ಮುಂದೆ ಮನುಷ್ಯರ ಆಟ ಏನೂ ನಡೆಯದು. ಅಂತೆಯೇ ಸಾವಿಗೆ ಹೊರತಾಗಿ ಯಾರೂ ಉಳಿಯುವುದಿಲ್ಲ. ಸಾವಿಗೆ ಎಲ್ಲರೂ ಶರಣಾಗಲೇಬೇಕು ಎಂಬುವುದನ್ನು ಪರೋಕ್ಷವಾಗಿ ಲೇಖಕಿ ಸೂಚಿಸಿದ್ದಾರೆ.

ಒಮ್ಮೆ ಇಂಗ್ಲಿಷ್ ಬಂದರೂ ಬಾಯಿ ಬಿಟ್ಟು ಇಂಗ್ಲಿಷ್ ಮಾತನಾಡಿದರೆ ಎಲ್ಲಿ ತಪ್ಪಾಗಿ ಉಚ್ಚಾರಣೆ ಮಾಡಿಬಿಡುತ್ತೇನೋ ಎಂಬ ಕೀಳರಿಮೆಯ ಭಾವನೆಯಿಂದ ದೇವರನ್ನು ನಂಬಿ ಈ ಆಪಾದನೆಯಿಂದ ದೂರ ಉಳಿಯಲು ಪ್ರಯತ್ನಿಸುತ್ತಾರೆ. "ಕೈ ಮುಕ್ಕಂಡು ಕಣ್ ಮುಚ್ಕಂಡು ಇವತ್ತೆ ಕೊನೆ ಇನ್ಮೇಲೆ ಪನಿಷ್ಮೆಂಟ್ ತಗಳಲ್ಲ, ಓದ್ಕಂಡೋಗಿರೋ ಉತ್ರಾನ ಧೈರ್ಯವಾಗಿ ಏಳ್ತಿನಿ ಅಂತ ದೇವರ ಮೇಲೆ ಅಣೆ ಮಾಡಿ ಅಡ್ಬೀಳು"[೧೩] ಎಂದು ಹೇಳಿಕೊಳ್ಳುವುದನ್ನು ದಾಖಲಿಸಿದ್ದಾರೆ. ಈ ಬಗೆಯ ಪರಿಕಲ್ಪನೆ ಶಾಲೆಯಲ್ಲಿ ಓದುವಂತಹ ಪ್ರತಿಯೊಬ್ಬ ವಿದ್ಯಾರ್ಥಿಗಳ ನಂಬಿಕೆಯಾಗಿರುತ್ತದೆ. ಈ ನಂಬಿಕೆಯಿಂದ ತರಗತಿಯಲ್ಲಿ ಸರಸ್ವತಿಯವರು ನಿರ್ಭಯವಾಗಿ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡಿ ಶಹಬ್ಬಾಸ್ ಗಿರಿಯನ್ನು ದಕ್ಕಿಸಿಕೊಂಡು ಸಂತೋಷಪಡುವುದನ್ನು ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ.

ಲಕ್ಷ್ಮಣ್ ಅವರು ತಮ್ಮ 'ಸಂಬೋಳಿ' ಆತ್ಮಕಥನದಲ್ಲಿ ದೇವರು ಮತ್ತು ನಂಬಿಕೆಯ ಹಿನ್ನೆಲೆಯಲ್ಲಿ ಇವರ ಕೇರಿಯ ಜನರು ಯಾವ ಯಾವ ರೀತಿಯ ಪದ್ಧತಿಗಳನ್ನು ಆಚರಿಸುತ್ತಾರೆ

ಎಂಬುದನ್ನು ದಾಖಲಿಸಿದ್ದಾರೆ. “ದೇವರು ಮತ್ತು ದೆವ್ವ ಮನುಷ್ಯರ ಮೇಲೆ ಬರುತ್ತದೆ ಎಂಬ ನಂಬಿಕೆ ನಮ್ಮ ಜನರಲ್ಲಿ ಇಂದಿಗೂ ಇದೆ. ಈ ಹಿನ್ನೆಲೆಯಲ್ಲಿ ನಮ್ಮ ಊರಿನ ಪೂಜಾರಪ್ಪನ ಮೇಲೆ ದೇವರು ಬಂದಾಗ ಜನರು ಕಷ್ಟ–ಸುಖ ಹೇಳಿಕೊಂಡು ಅದರಿಂದ ಪರಿಹಾರ ಪಡೆಯುತ್ತಿದ್ದರು. ಉದಾ: ಯಾರ ಮನೆಯಲ್ಲಾದರೂ ದನ, ಕರು, ಕೋಳಿ, ಚೊಂಬು, ತಟ್ಟೆ ಮೊದಲಾದ ಸಾಮಾನುಗಳು ಕಳೆದುಹೋದರೆ, ಪೂಜಾರಪ್ಪನ ಮೈ ಮೇಲೆ ದೇವರು ಬಂದಾಗ ಅವು ಯಾರ ಮನೆಯಲ್ಲಿ ಇವೆ ಅಥವಾ ಯಾರು ಕದ್ದಿರುವವರು? ಎಂದು ಹೇಳಿ, ಅವುಗಳು ಇಂತಹ ದಿಕ್ಕಿಗೆ ಹೋಗಿವೆ ಎಂದು ಕೈ ತೋರಿಸಿ ಹೇಳಿದರೆ, ಕದ್ದು ಹೋಗಿರುವ ಜನರು ದೇವರ ಭಯದಿಂದ ಮುಂದೆ ನಮಗೆ ತೊಂದರೆ ಆಗುತ್ತದೆ ಎಂದು ಯಾರು ಕಾಣದ ಸಮಯದಲ್ಲಿ ಅವರ ವಸ್ತುಗಳನ್ನು ತಂದು ಹಾಕಿ ಹೋಗುತ್ತಿದ್ದರು.”[೧೪] ಈ ಬಗೆಯ ನಂಬಿಕೆ ಇಂದಿಗೂ ಹಳ್ಳಿಗಳಲ್ಲಿ ಇದೆ. ಹಾಗೆಯೇ ಊರಿನಲ್ಲಿ ಯಾರಿಗಾದರು ರೋಗರುಜಿನಗಳು ಬಂದಾಗ ಅವುಗಳ ನಿವಾರಣೆಗಾಗಿ ದೇವರಲ್ಲಿ ಮೊರೆ ಹೋಗುವುದನ್ನು ಲೇಖಕರು ಉಲ್ಲೇಖಿಸುತ್ತಾರೆ: “ಅಮ್ಮ ಬಂದದ್ದಕ್ಕಾಗಿ ದೇವರಲ್ಲಿ ಹರಸಿಕೊಂಡು ಅದಕ್ಕಾಗಿ ಧರ್ಮರಾಯನ ಕರಗದ ತೇರಿನ ಕಳಸದ ಮೇಲೆ ಬಾಳೆ, ದವನವನ್ನು ಎಸೆದು ಹರಕೆ ತೀರಿಸಿದ ಪ್ರಸಂಗವನ್ನು ಮತ್ತು ಅದರಿಂದ ಲೇಖಕರಿಗೆ ಬಂದಿದ್ದ ಅಮ್ಮ ಗುಣವಾದುದ್ದರ ಪ್ರಸಂಗವನ್ನು ಇಲ್ಲಿ ನೆನೆಯುತ್ತಾರೆ.”[೧೫] ಒಟ್ಟಾರೆಯಾಗಿ ದೇವರಲ್ಲಿಟ್ಟ ನಂಬಿಕೆಯಿಂದ ನನಗೆ ಉಂಟಾಗಿದ್ದ ತೊಂದರೆಯಿಂದ ಮುಕ್ತಿ ಪಡೆದುಕೊಂಡೆ ಎಂಬ ಆಶಯವನ್ನು ಇಲ್ಲಿ ವ್ಯಕ್ತಪಡಿಸುತ್ತಾರೆ.

ಕಾಲಕಾಲಕ್ಕೆ ಮಳೆಯಾಗದೆ ಬರಗಾಲ ಬಂದರೆ ಪ್ರತಿಯೊಂದು ಹಳ್ಳಿಗಳಲ್ಲಿ ‘ಮಳೆರಾಯ’ನನ್ನು ಮಾಡುವ ಪದ್ಧತಿಯನ್ನು ಇಂದಿಗೂ ನಮ್ಮಲ್ಲಿ ಆಚರಣೆ ಮಾಡಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಇಂತಹ ಒಂದು ಪ್ರಸಂಗವನ್ನು ‘ಸಂಬೋಳಿ’ ಕೃತಿಯಲ್ಲಿ ಕಾಣಬಹುದು. “ನಮ್ಮಟ್ಟಿ ಪೂಜಾರಿ ಮುನಿಯಪ್ಪ ಜೇಡಿಮಣ್ಣನ್ನು ಕಿತ್ತು ಒಂದ್ಕಲ್ಮೇಲಾಕಿ ಚೆನ್ನಾಗಿ ಮಿದ್ದಿ ಮಿದ್ದಿ ಮಣ್ಗೆ ಕೈ ಮುಗ್ದು ಮಳೆರಾಯ್ನ ಮಾಡಿ ಚಡ್ಡಿ ಜೋಬ್ನಿಂದ ಎಳ್ಡು ಗೋಲಿಗಳ್ನ ತೆಗ್ದು ಮಳೆರಾಯ್ನ ಕಣ್ಗಳ್ನ ಮಾಡಿದ್ದ. ಆ ಪೂಜಾರಪ್ಪ ನನ್ಕಡೆ ನೋಡಿ ಲೇ ಲಚ್ಮ ನೀನೆ ಇವತ್ತು ಮಳೆರಾಯ್ನ ಹೋರೋ ಅಂದ್ಬುಟ್ಟ. ಮಳೆರಾಯನನ್ನು ತಲೆ ಮೇಲೆ ಹೊತ್ತುಕೊಂಡು ಮನೆ ಮನೆಯಲ್ಲಿ ನೀರು, ಅರಿಸಿನ, ಕುಂಕುಮ, ಸಾಮ್ರಾಣಿಯಿಂದ ಪೂಜೆ ಮಾಡಿಸಿಕೊಂಡು,

ಉಯ್ಯೋ ಉಯ್ಯೋ ಮಳೆರಾಯ
ಹೂವಿನ ಗಿಡಕ್ಕೆ ನೀರಿಲ್ಲಾ

ಬಾರೋ ಬಾರೋ ಮಳೆರಾಯ

ಬಾಳೆಗಿಡ್ಕೆ ನೀರಿಲ್ಲಾ.. ..”[೧೬]

ಎಂದು ರಾಗವಾಗಿ ಹೇಳಿಕೊಂಡು ಊರಿನ ಹುಡುಗರು ಆನಂದದಿಂದ ಕುಣಿಯುತ್ತಿದ್ದರು. ಇದಕ್ಕೆ ಪ್ರತಿಫಲವಾಗಿ ಮಾರನೇ ದಿನ ‘ನೋಡ್ ನೋಡ್ತಿದಂಗೆ ದಶದಿಕ್ಕುಗಳಿಂದಲೂ ನೀರ್ಗಾಲುವೆಗಳು ಸಡಗರ ಸಂಭ್ರಮದಿಂದ ವೈಯಾರವಾಗಿ ಹರಿಯುತ್ತಿದ್ದವು.’ ಹೀಗೆ ದೇವರ ಮೇಲಿನ ಅಪಾರವಾದ ನಂಬಿಕೆಯಿಂದ ಊರಿನಲ್ಲಿ ಮಳೆರಾಯನನ್ನು ಹಾಡಿದ ಕಾರಣಕ್ಕಾಗಿ ನಮ್ಮ ಊರಿನ ಬರ ಪರಿಹಾರವಾಯಿತು ಎಂದು ಇಲ್ಲಿಯ ಜನರು ನಂಬಿದರು. ಹಾಗೆಯೇ ನಾವು ನಂಬಿದ ದೇವರು ಎಂದೂ ನಮ್ಮ ಕೈ ಬಿಡುವುದಿಲ್ಲ ಎಂಬ ಅಪಾರವಾದ ನಂಬಿಕೆಯನ್ನು ಇಂದಿಗೂ ಈ ಜನರು ಇಟ್ಟುಕೊಂಡಿದ್ದಾರೆ ಎನ್ನುವ ನಿಲುವನ್ನು ಈ ಆತ್ಮಕಥನಕಾರರು ಅಭಿವ್ಯಕ್ತಪಡಿಸುತ್ತಾರೆ. ಇಂತಹ ಹಲವಾರು ನಂಬಿಕೆ, ಆಚರಣೆ, ಸಂಪ್ರದಾಯಗಳು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಚಾಲ್ತಿಯಲ್ಲಿವೆ.

ಸಾಮಾನ್ಯವಾಗಿ ದಲಿತ ಮಹಿಳೆಯರ ಮೈಮೇಲೆ ಬರುತ್ತಿದ್ದ ದೆವ್ವದ ವಿಚಾರವನ್ನು ‘ಊರುಕೇರಿ’ಯಲ್ಲಿ ಹೀಗೆ ನಿರೂಪಿಸಲಾಗಿದೆ: “ಒಬ್ಬ ವ್ಯಕ್ತಿಯ ಎರಡನೇ ಹೆಂಡತಿಗೆ ದೆವ್ವ ಬರುತ್ತಿತ್ತು. ಆಕೆ ಕೂಗಾಡುತ್ತಾ ಅತ್ತ ಇತ್ತ ಓಡಾಟ ಮಾಡುತ್ತಿದ್ದಳು. ಬಹಳ ಜನ ಪ್ರಯತ್ನಪಟ್ಟರೂ ಆಕೆಯನ್ನು ಹಿಡಿಯಲು ಆಗುತ್ತಿರಲಿಲ್ಲ. ದೆವ್ವ ಬಂದ ಕೂಡಲೇ ಆಕೆ ಮಾಡುತ್ತಿದ್ದ ಮೊದಲ ಕೆಲಸ ತನ್ನ ಗಂಡನ ಕುತ್ತಿಗೆ ಪಟ್ಟಿ ಹಿಡಿದು ಚೆನ್ನಾಗಿ ಹೊಡೆಯುವುದು. ದೆವ್ವ ಬಂದಿರುವ ಸಮಯವಾದ್ದರಿಂದ ಗಂಡ ಪ್ರತಿಯಾಗಿ ಕೈಮಾಡುತ್ತಿರಲಿಲ್ಲ. ಇನ್ನೊಬ್ಬ ಹೆಂಗಸಿದ್ದಳು. ಅವಳಿಗೆ ದೆವ್ವ ಹಿಡಿಯದಿದ್ದರೂ ಅವಳು ಯಮಲೋಕಕ್ಕೆ ಹೋಗಿ ಹಿಂದಿರುಗಿ ಮತ್ತೆ ಕೇರಿಗೆ ಬಂದಿದ್ದಳು. ಅವಳು ಸತ್ತಿದ್ದಳಂತೆ. ಎಲ್ಲರೂ ಹಾಗೆಯೇ ತಿಳಿದು ಅವಳ ಶವಸಂಸ್ಕಾರಕ್ಕೆ ಸಿದ್ಧತೆ ನಡೆಸಿದ್ದರು. ಅವಳನ್ನು ಆ ವೇಳೆಗಾಗಲೇ ಯಮನ ದೂತರು ಎಳೆದುಕೊಂಡು ಹೋಗಿ ಯಮನ ಮುಂದೆ ನಿಲ್ಲಿಸಿದ್ದರು. ಯಮ ಇವಳ ಹೆಸರು ಕೇಳಿದ, ಇವಳು ಹೇಳಿದಳು. ಯಾವ ಕೇರಿ ಯಾವ ಬೀದಿ ಎಂದು ಕೇಳಿದ, ಈಕೆ ಹೇಳಿದಳು. ಯಮ ಏನನ್ನೋ ಯೋಚಿಸಿ ನೋಡಿ ದೂತರನ್ನು ತರಾಟೆಗೆ ತೆಗೆದುಕೊಂಡ. ಯಮ ಕರೆತರಲು ಕಳುಹಿಸಿದ್ದು ಇದೇ ಹೆಸರಿನ ಪಕ್ಕದ ಬೀದಿಯ ಹೆಂಗಸನ್ನು. ದೂತರು ಅಚಾತುರ್ಯದಿಂದ ಈಕೆಯನ್ನು ಕರೆದುಕೊಂಡು ಹೋಗಿದ್ದರು. ಯಮ ಈಕೆಯನ್ನು ಮತ್ತೆ ಭೂಲೋಕಕ್ಕೆ ಕರೆದುಕೊಂಡು ಹೋಗುವಂತೆ ದೂತರಿಗೆ ಆಜ್ಞೆ ಮಾಡಿದ. ದೂತರು ಯಾವುದಕ್ಕೂ ಗುರುತಿರಲಿ ಎಂದು ಇವಳ ಬೆನ್ನಿಗೆ ಒಂದು ಬರೆ ಹಾಕಿ ಭೂಲೋಕಕ್ಕೆ

ಕರೆದುಕೊಂಡು ಬಂದುಬಿಟ್ಟರು. ಚಟ್ಟದ ಮೇಲೆ ಮಲಗಿದ್ದ ಈಕೆ ತಟ್ಟನೆ ಎದ್ದು ಕುಳಿತಳು. ಸುತ್ತ ಇದ್ದವರು ಇವಳು ಎದ್ದಿದ್ದರಿಂದ ಗಾಬರಿಯಾಗಿ ಓಡಲಾರಂಭಿಸಿದರು. ಅವರನ್ನು ಈಕೆಯೇ ಸಮಾಧಾನಪಡಿಸಿ ನಡೆದ ಕಥೆಯನ್ನು ಹೇಳಿದಳು. ತನ್ನ ಬೆನ್ನಿಗೆ ದೂತರು ಹಾಕಿರುವ ಬರೆಯನ್ನು ತೋರಿಸಿದಳು. ಈ ಕಥೆಯ ಸತ್ಯಾಸತ್ಯತೆ ಏನೇ ಇರಲಿ ಅವಳ ಬೆನ್ನಿನ ಮೇಲಿನ ಬರೆಯನ್ನು ನಾನು ನೋಡಿ ಆಶ್ಚರ್ಯಪಟ್ಟೆ"[೧೭] ಎಂದಿರುವ ಈ ಸಂಗತಿಯು ಸ್ವರ್ಗ ನರಕದ ಪರಿಕಲ್ಪನೆಯನ್ನು ಚಿಂತಿಸುವಂತೆ ಮಾಡುತ್ತದೆ. ದಲಿತ ಸ್ತ್ರೀಯ ಮಾನಸಿಕ ಸ್ಥಿತಿಯೊಂದಿಗೆ ಪುರುಷ ಕೇಂದ್ರಿತ ವ್ಯವಸ್ಥೆಯನ್ನು ತಿಳಿಸುತ್ತದೆ.

ಸಿದ್ಧಲಿಂಗಯ್ಯವರು ತಮ್ಮ 'ಊರುಕೇರಿ' ಆತ್ಮಕಥೆಯಲ್ಲಿ ದೆವ್ವದ ನಂಬಿಕೆಯನ್ನು ನಿರೂಪಿಸುತ್ತ: 'ಮಳವಳ್ಳಿಯ ಕಡೆ ಮಾರಕುನ್ನ ಎಂಬ ಸಾಹಸಿ ಇದ್ದನು. ಅವನು ದೆವ್ವಗಳಿಗೆ ಅಂಜುತ್ತಿರಲಿಲ್ಲ. ಕಣ ಮಾಡುವಾಗ ಮೆದೆಯ ಬಳಿ ಒಬ್ಬನೇ ಮಲಗುತ್ತಿದ್ದನು. ಅವನ ಬಳಿ ಒಳ್ಳೆಯ ಮಚ್ಚಿತ್ತು. ಆ ಮಚ್ಚನ್ನು ಸದಾ ಪಕ್ಕದಲ್ಲಿಟ್ಟುಕೊಂಡು ಮಲಗುತ್ತಿದ್ದನು. ಒಂದು ರಾತ್ರಿ ಅವನು ಹೀಗೆ ಮಲಗಿದ್ದಾಗ ದೆವ್ವಗಳು ಬಂದು ಮೆಲ್ಲಗೆ ಅವನ ಮಚ್ಚನ್ನು ಅಪಹರಿಸಿದವು. ಹೀಗೆ ಮಾಡಿದ್ದಷ್ಟೇ ಅಲ್ಲ, ಇವನ ಸುತ್ತ ವೃತ್ತಾಕಾರದಲ್ಲಿ ನಿಂತು ಮಚ್ಚನ್ನು ಹಿಡಿದು 'ಮಾರಕುನ್ನ ಮಚ್ಚು ಕೊಟ್ಟ ಸುಯ್ಯೋ ಸುಯ್ಯೋ ಎಂದು ನೃತ್ಯ ಮಾಡತೊಡಗಿದವು. ಅವನ ಮಚ್ಚು ಒಂದು ದೆವ್ವದ ಕೈಯಿಂದ ಇನ್ನೊಂದು ದೆವ್ವದ ಕೈಗೆ ಬದಲಾವಣೆಯಾಗುತ್ತಿತ್ತು. ಮಾರಕುನ್ನನಿಗೆ ಎಚ್ಚರವಾಯಿತು, ನೋಡುತ್ತಾನೆ. ತನ್ನ ಮಚ್ಚನ್ನೇ ಹಿಡಿದು ಗೇಲಿ ಮಾಡುತ್ತಾ ಕುಣಿಯುತ್ತಿರುವ ದೆವ್ವಗಳು. ಮಾರಕುನ್ನ ಗಾಬರಿಗೊಳ್ಳಲಿಲ್ಲ. ತಾನೂ ದೆವ್ವಗಳ ಜೊತೆ ಕುಣಿತಕ್ಕೆ ಸೇರಿಕೊಂಡು ದೆವ್ವಗಳಂತೆಯೇ ಹೆಜ್ಜೆ ಇಟ್ಟು ಕುಣಿಯತೊಡಗಿದನು. ದೆವ್ವಗಳಿಗೂ ಸಂತೋಷವಾಯಿತು. ಮಚ್ಚು ತನ್ನ ಕೈಗೆ ಬದಲಾದದ್ದೆ ತಡ ಒಂದು ದೆವ್ವದ ಜುಟ್ಟನ್ನು ಹಿಡಿದು ಒಂದು ಕೂದಲನ್ನು ಕತ್ತರಿಸಿ, ತನ್ನ ತೊಡೆಯನ್ನು ಬಗೆದು ಅದರಲ್ಲಿ ಇಟ್ಟುಕೊಂಡನು. ಉಳಿದ ದೆವ್ವಗಳು ಓಡಿದವು. ಕೂದಲು ಕಳೆದುಕೊಂಡ ದೆವ್ವ ಇವನ ಗುಲಾಮನಾಯಿತು. ಅವನು ಆ ದೆವ್ವದ ಕೈಯಿಂದ ಬಹಳ ಕೆಲಸ ಮಾಡಿಸಿದನು. ಗದ್ದೆಯ ಕೆಲಸದಿಂದ ಮನೆ ಕಟ್ಟುವ ಕೆಲಸದವರೆಗೂ ಇದು ನಡೆಯಿತು. ಮಾರಕುನ್ನನಿಗೆ ಆ ದೆವ್ವದ ಮೇಲೆ ಸ್ನೇಹ ಕರುಣೆ ಹೆಚ್ಚಾಗಿ ಅದರ ಕೂದಲನ್ನು ಹಿಂದಿರುಗಿಸಿ ಕಳುಹಿಸಿಕೊಟ್ಟನು.

ಮಳವಳ್ಳಿ ಕಡೆಯವರು ಈ ಕಥೆ ಹೇಳಿದರೆ ಮಡಿಕೇರಿ ಕಡೆಯ ವಿದ್ಯಾರ್ಥಿ ಮರಿ ಎನ್ನುವವನು ಅವನ ಊರಿಗೆ ಹೋಗುವ ದಾರಿಯಲ್ಲಿ ಒಂದು ಮರದ ಮೇಲೆ ಇಪ್ಪತ್ತು ಮೂವತ್ತು ದೆವ್ವಗಳಿವೆಯೆಂದೂ ಅವು ರಾತ್ರಿಯೆಲ್ಲಾ ಗೋಳಾಡುತ್ತವೆಯೆಂದೂ ಹೇಳುತ್ತಿದ್ದನು.

ಹಿಂದೆ ಯಾವಾಗಲೋ ಬಸ್ ಅಪಘಾತವೊಂದರಲ್ಲಿ ಪ್ರಯಾಣಿಕರೆಲ್ಲ ಸತ್ತು ಹೋದರು. ಅವರೆಲ್ಲಾ ದೆವ್ವಗಳಾಗಿ ಆ ಮರವನ್ನು ಆಶ್ರಯಿಸಿಕೊಂಡಿದ್ದಾರೆ. ರಾತ್ರಿಯಾಗುತ್ತಲೇ ಅವರ ಗೋಳಾಟ ಹೇಳತೀರದು ಎಂದು ಭಯಪೂರ್ಣವಾಗಿ ವರ್ಣಿಸುತ್ತಿದ್ದನು. ಹೀಗೆ ನಮ್ಮ ಮನಸ್ಸೆಲ್ಲಾ ದೆವ್ವಗಳ ಭಯದಿಂದ ತುಂಬಿತ್ತು. ಯಾರಾದರೂ ಅಪರಿಚಿತರು ರಾತ್ರಿ ಹೊತ್ತು ಬಂದರೆ ನಾವು ಮೊದಲು ಅವರ ಕಾಲನ್ನು ನೋಡಿ ಆತ ಮನುಷ್ಯನೋ, ದೆವ್ವವೋ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಿದ್ದೆವು. ಕಾಲು ಹಿಂದುಮುಂದಾಗಿರದಿದ್ದರೆ, ಕಣ್ಣು ನೆತ್ತಿಯಲ್ಲಿರದಿದ್ದರೆ ಆತ ದೆವ್ವವಲ್ಲ ಎಂದು ಧೈರ್ಯ ತಂದುಕೊಳ್ಳುತ್ತಿದ್ದೆವು."[೧೮] ಗ್ರಾಮ ಸಮಾಜದ ದಲಿತಜಗತ್ತಿನಲ್ಲಿ ದೆವ್ವಗಳ ಕುರಿತಾದ ಇಂಥ ಅನೇಕ ನಂಬಿಕೆಗಳು ಹಾಸುಹೊಕ್ಕಾಗಿರುವುದನ್ನು ತಿಳಿಸುತ್ತದೆ. ಇಲ್ಲಿ ನಂಬಿಕೆಗಳು ಎಷ್ಟು ಮುಖ್ಯವೋ ಅಷ್ಟೇ ರೀತಿಯಲ್ಲಿ ದಲಿತ ಸಮುದಾಯದವರ ದವಸ ಧಾನ್ಯಗಳ ಫಸಲನ್ನು ಹಾಳುಮಾಡುವ ಹುನ್ನಾರದಿಂದ ಮೇಲುವರ್ಗದವರು ಮಾಡುವಂತಹ ತೊಂದರೆಯ ಮತ್ತೊಂದು ವಿಧಾನವಾಗಿದೆ ಎಂದರೆ ತಪ್ಪಾಗಲಾರದು.

ಇಂಥಹುದೇ ಕಥೆಯೊಂದು ಬೇರೆ ಕಾರಣವುಳ್ಳದ್ದನ್ನು ತಮ್ಮ ತಾಯಿ ಹೇಳಿದ್ದನ್ನು ಮುಳ್ಳೂರು ನಾಗರಾಜು ಅವರು ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದ್ದಾರೆ: "ನಮ್ಮಪ್ಪನವರಪ್ಪ ಇರಬೇಕು ಅವನು ಒಂದ್ಸಲ ಏನಾಯ್ತಂತ ಅಂದ್ರಾ ಅದು ಹೇಳೊದಂದಚ್ಚರಿ, ಕೇಳಕೊಂದಚ್ಚರಿ. ಒಂದ್ಸಲಿ ನಮ್ಮ ತಾತನವರ ಅಕ್ಕನೋ, ತಂಗಿನೋ ಯಾರೋ ಒಬ್ಬಳು ಹೇಳಿದಳು ಅವಳು ಭಾರೀ ಸುರದ್ರೂಪಿಯಂತಾ ಅವಳು ನಮ್ಮ ತಾತನಟ್ಟಿಗಾ ಬಂದ್ಲಂತೆ. ಉಂಡ್ಕಂದು ತಿಂದ್ಕಂದು ಊರುಗೋಗಾ ಟೇಮ್‌ನಲ್ಲಿ ನಮ್ಮಜ್ಜಿ ಕೊರಳಲ್ಲಿ ಬಂಗಾರದ ಸರ ಫಳ ಫಳ ಅಂತಿತ್ತಂತೆ. ಅದುಕುಂಡಗಿ ಅವ ಕೇಳುದ್ದಂತೆ. ನೋಡಮಿಕೂಸು ಇನ್ನನ್ನೇಡು ಜಿನ್ನ ನನ್ನ ಮಗಳ ಮದುವೆ ಅದ. ಅಲ್ಲಿಗಂಟ ಈ ಸರವ ಕೊಟ್ಟರು. ಮದುವಾ ಹೆಣ್ಣ ಈ ಸರವ ಹಾಕಿರ್ತೀನಿ. ಹೆಂಗಿದ್ರು ಮದುವೆಗ ಬತ್ತಿದ್ದೆಯ್ಲು, ನೀನು ವಾಪಸ್ ಬರಾವಗ ನಿನ್ನಸರವ ನೀನೀಸ್ಕಂದು ಬರ್ಬಹುದು. ಇಸ್ವಾಸಿದ್ರ ಕೊಡು. ಇಲ್ದೇರ ಬ್ಯಾಡ ಅಂದ್ಲಂತೆ. ಇನ್ನು ನಂಟು ಇಸ್ಯದಲ್ಲಿ ಮೊಕಾಮುರಿಯಂಗಿದ್ದ. ನಮ್ಮಜ್ಜಿ ಹಿಂದ್ಲೂ ಮುಂದ್ಲೂ ಲೆಕ್ಕಾಚಾರ ಮಾಡ್ದಿಯಾ ಕೊಟ್ಟು ಬುಟ್ಲಂತ. ಅವ ಆ ಸರವ ಆಕಂಡು ಹೋದದೇ ಹೋದದು ಇತ್ತಗ ತಿರುಗೇ ನೋಡ್ಲಿಲ್ವಂತೆ. ಇಂದುಗ ಬಂದಳು ನಾಳ್ಗ ಬಂದಳು ಅಂತ ಕಾದು ಕಾದು ಸಾಕಾಗಿ ಸರದ ಇಸಯಪತ್ತೇನೇ ಆಗಲಿಲ್ಲವಂತ. ನಂಟರ ಮನೆಗೋಗಿ ಇಚಾರಿಸು ಅವರಿತ್ತಂಗ ತಲೇನೆ ಹಾಕಿಲ್ಲ. ಅವರ ಮಗಳ ಮದುವಾ ಏನಾರು ನಡ್ದಿದ್ದಾ ಅಂದ್ರಾ ಅದೂ ಸುಳ್ಳು. ಈಗಲೀಗ ಕೆಟ್ಟಲ್ವ ಅಂತ ನಮ್ಮಾತ ತಲಮೇಲ ಕೈವೊತ್ತಾಗ್ಗ ಕೂತ್ಗಂಡಾ ಕೊನೆಲಿ ಚಿಂತಿಸಿ ಫಲವಿಲ್ಲ ಅನ್ನುಸ್ತು. ಮನ್ದೇವ್ರ ನೆನಾಸ್ಕಿಂಡು ಈಳ್ಳವ ಮಡಗಿ ಅದುಕಾ ಅಂಜನ ಅಂಟುಸ್ಗಂಡು ನೋಡುದ್ನಂತ.

ಊರಾಚಲ ವಾಸಾಗಿದಲ್ಲಿ ಯಾವುದೋ ದಯ್ಯದ ಕೊರಳಲ್ಲಿ ಆ ಸರವು ಫಳಗರಿತಿತ್ತಂತ ನಮಯ್ಯ ಆಗಲೂ ಧೈರ್ಯ ಕೆಡ್ಡಿಲ್ಲ. ತನ್ನೆಡ್ತಿ ಸೀರ ಉಟ್ಕಡದ ಗೆಜ್ಜಚೈನು ಬಳೆಗಿಳೆ ತೊಟ್ಟಂಡನಂತೆ ಅಮಾಸದಿವಸ್ದಲಿ ರಾತ್ರ ಕವಳದಲ್ಲಿ ಮಸಾಣದಿಕ್ಕಾ ಹೋದ್ನಂತ. ಅಲ್ಲಿ ದಯ್ಯಗಳು ಗುಂಪಾಗಿ ಕ್ಯಾಕ ಹಾಕ್ತ ಕುಣೀತವ. ಚಿನ್ನದ ಸರವ ಒಂದಾದ ಮೇಲೊಂದು ಹಾಕಂಡು ಆ ಗುಂಪು ಗಲಗಲಾಂತ ನಗ್ತಾ ಕುಣೀತದ. ಆ ಗುಂಪ್ಗಾಗೆಸೇರ್ಕಂಡು ನಮ್ಮಯ್ಯನೂ ಕುಣಿತ ಸುರು ಮಾಡಿದನು. ಒಬ್ಬರಿಂದ ಒಬ್ಬುರಾಗಾ ಸರಾ ಬದಲಾಗ್ತ ಬಂತು. ಅಂತಿಯ ಇವನ ಕೈಗಾ ಸರ ಬಂದ್ಮೇಲ, ಸರವ ಸೊಂಟಕಾ ಸಿಕ್ಕಾಸ್ಕೊಂಡು ಕಾಲಲ್ಲಿದ್ದ ಜೋಡನೀಗ ಕಳ್ದುಕೈಲಿಡ್ದುಕೊಂಡು ಬನ್ನಿ ಬಡ್ಡೆತ್ತವ ನಿಮ್ಗು ಜಾರಪಾರ್ಗ ಗಟ್ಟುಸ್ತೀನಿ ಅಂದ್ನಂತೆ. ಎಕಡ ಕಂಡೇಟಿಗೆ ದಯ್ಯಗಳು ಪೇರಿಕಿತ್ತವಂತ. ಆಗ ನಮ್ಮಯ್ಯ ಸರದ ಜೊತಲಿ ಊರದಿಕ್ಕ ಓಡ್ಬಂದ್ನಂತ”.[೧೯] ಹೀಗೆ ದಲಿತ ತಾಯಿಯರು ದೆವ್ವಗಳ ನಂಬಿಕೆಯಿಂದ ಈ ಬಗೆಯ ಪರಿಣಾಮಕಾರಿಯಾದಂತಹ ಕಥೆಗಳನ್ನು ಹೇಳುತ್ತಿದ್ದರು. ದಲಿತ ತಾಯಂದಿರು ತಮ್ಮ ಬಿಡುವಿನ ಸಮಯದಲ್ಲಿ ದೆವ್ವಗಳ ಬಗ್ಗೆ ಕತೆಯನ್ನೇ ಕಟ್ಟಿ ಹೇಳುತ್ತಾರೆ. ಹೀಗೆ ಕೇಳಿದ ದೆವ್ವದ ಕಥೆಗಳಲ್ಲಿ ಸತ್ಯವೆಷ್ಟೋ, ಸುಳ್ಳೆಷ್ಟೋ ಎಂಬುದು ತರ್ಕದ ವಿಚಾರ. ಆದರೆ ಈ ಕಥೆಗಳಲ್ಲಿ ಮಡುಗಟ್ಟಿರುವ ನಂಬಿಕೆಗಳ ಹಿಂದೆ ದಲಿತರು ತಮ್ಮ ಅಸ್ತಿತ್ವ ಮತ್ತು ಸಂಪತ್ತಿಗಾಗಿ ಹೋರಾಟ ಮಾಡಿದ್ದರ ಸಾಂಸ್ಕೃತಿಕ ಚರಿತ್ರೆಯ ಸೂಕ್ಷ್ಮವಾದ ಹೊಳಹುಗಳನ್ನು ಶೋಧಿಸಿಕೊಳ್ಳಬಹುದಾಗಿದೆ.

ದಲಿತ ಸಮುದಾಯದ ಜನರಲ್ಲಿ ವಿಶೇಷವಾದ ಆಚರಣೆಗಳಲ್ಲಿ 'ತಣಿಗೆ ಶಾಸ್ತ್ರ' ಒಂದು. ಯಾವುದಾದರೂ ಮನೆಯಲ್ಲಿ ಕಳುವಾದರೆ, ಕಳ್ಳ ಯಾರು ಎಂದು ಪತ್ತೆ ಮಾಡಲು ಆ ಮನೆಯವರು ತಣಿಗೆ ಶಾಸ್ತ್ರದ ಮೊರೆಹೋಗುತ್ತಾರೆ. ಕಳುವಾದ ಮನೆಯಲ್ಲಿ ಊಟಮಾಡುವ ಹಿತ್ತಾಳೆಯ ತಣಿಗೆಯನ್ನಿಟ್ಟು ಪೂಜಿಸಿ ಒಬ್ಬ ವ್ಯಕ್ತಿ ಅದರೊಳಕ್ಕೆ ಎರಡೂ ಕೈಗಳನ್ನು ಇಟ್ಟು ನಿಂತರೆ ಆ ತಣಿಗೆ ಚಲಿಸಲಾರಂಭಿಸುತ್ತದೆ. ಅದರ ಹಿಂದೆಯೇ ಆ ತಟ್ಟೆಯಲ್ಲಿ ಕೈಯಿಟ್ಟವನು ಚಲಿಸುತ್ತಾನೆ. ಅದರ ಚಲನೆ ಕ್ರಮೇಣ ವೇಗವಾಗುತ್ತದೆ. ಜನ ತಣಿಗೆಯನ್ನು ಹಿಂಬಾಲಿಸುತ್ತಾರೆ. ಆ ತಣಿಗೆ ಬೀದಿಯಲ್ಲಿ ಮನೆ ಮನೆಯ ಮುಂದೆ ಹೋಗುತ್ತಾ ಹಣ ಕದ್ದವರ ಮನೆ ಮುಂದೆ ನಿಲ್ಲುತ್ತೆ. ಆಗ ಜನ ಕಳ್ಳನನ್ನು ಹಿಡಿಯುತ್ತಾರೆ. ಚಲಿಸುವ ತಣಿಗೆ ಯಾರ ಮನೆಯ ಮುಂದೆಯಾದರು ಸ್ವಲ್ಪ ನಿಧಾನವಾಗಿ ಚಲಿಸಿದರೆ ಅವರ ಎದೆ ಒಡೆದು ಕೊಳ್ಳಲಾರಂಭಿಸುತ್ತದೆ. ಇಂಥ ಶಾಸ್ತ್ರವನ್ನು ಕುರಿತು ಸಿದ್ಧಲಿಂಗಯ್ಯ ಅವರು ವಿವರಿಸುತ್ತಾ: “ಈ ತಣಿಗೆ ಅನೇಕ ಮನೆಗಳನ್ನು ದಾಟಿದರೂ ಎಲ್ಲೂ ನಿಲ್ಲಲಿಲ್ಲ. ಕೊನೆಗೆ ಮುನೇಶ್ವರ ಮೈದುಂಬುತ್ತಿದ್ದ ಪೂಜಾರಿಯ ಮನೆಯ ಮುಂದೆ ನಿಂತಿತ್ತು. ಒಳ್ಳೆಯ ಮನುಷ್ಯನೆಂದು ಹೆಸರು ಪಡೆದಿದ್ದ ಪೂಜಾರಪ್ಪನ ಅದೃಷ್ಟವೋ ಎನ್ನುವಂತೆ ತಟ್ಟೆ ಬಹಳ ವೇಗವಾಗಿ ಮುಂದಕ್ಕೆ ಚಲಿಸತೊಡಗಿತು. ಪೂಜಾರಪ್ಪನ ಮುಖದಲ್ಲಿ ಗೆಲುವು ಮೂಡತೊಡಗಿತು.

ಹೀಗೆ ತಟ್ಟೆ ಚಲಿಸಿತೇ ಹೊರತು ಕಳ್ಳ ಸಿಗಲಿಲ್ಲ."[೨೦] ಆದರೆ ಜನಪದರಲ್ಲಿ ಈ ಬಗೆಯ ತಣಿಗೆ ಶಾಸ್ತ್ರ ಇಂದಿಗೂ ಹಳ್ಳಿಗಳಲ್ಲಿ ಆಚರಣೆಯಲ್ಲಿ ಇದೆ. ಇದು ಕೇವಲ ಆತ್ಮಕಥನಕಾರರಾದ ಸಿದ್ಧಲಿಂಗಯ್ಯನವರ ಊರಿನಲ್ಲಿ ನಡೆಯುವ ಆಚರಣೆ ಮಾತ್ರವಾಗಿರದೆ ಪ್ರತಿಯೊಂದು ದಲಿತ ಊರುಕೇರಿಗಳಲ್ಲಿ ಈ ಬಗೆಯ ತಣಿಗೆ ಶಾಸ್ತ್ರವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈ ಬಗೆಯ ಆಚರಣೆಯು ದಲಿತ ಸಮುದಾಯದ ಸಮಷ್ಠಿ ಸಂಸ್ಕೃತಿಯ ಆಚರಣೆಯ ಪ್ರಜ್ಞೆ ಎಂದು ಹೇಳಬಹುದು. ಈ ಶಾಸ್ತ್ರವನ್ನು ಮಾಡುವುದರಿಂದ ನಾವುಗಳು ಕಳೆದುಕೊಂಡಿರುವ ವಸ್ತುಗಳು ಸಿಗಬಹುದು ಎಂಬ ನಂಬಿಕೆಯಲ್ಲಿ ದಲಿತ ಸಮುದಾಯದ ಜನರು ಈ ಆಚರಣೆ ಮಾಡುತ್ತಾರೆ.

ದಲಿತ ಸಮುದಾಯದ ಜನರಲ್ಲಿ ಹುಡುಗಿ ಮೈನೆರೆಯುವುದಕ್ಕೆ ಮುಂಚಿತವಾಗಿ ಮದುವೆ ಆಗುತ್ತಿತು. ಇಂತಹ ಸಂದರ್ಭದಲ್ಲಿ ಮಧುಮಗನು ಪ್ರಸ್ಥವನ್ನು ಮಾಡಿಕೊಳ್ಳುವಂತಿರಲಿಲ್ಲ. ಒಂದು ವರುಷ ಎರಡು ವರ್ಷ ಆದರೂ ಕಾಯಬೇಕಾಗಿತ್ತು. ಏಕೆಂದರೆ ಹುಡುಗಿ ಮೈನೆರೆಯುವುದಕ್ಕೆ ಮುಂಚಿತವಾಗಿಯೇ ಮದುವೆ ಮಾಡಿಬಿಡುತ್ತಿದ್ದರಿಂದ ಅವಳು 'ದೊಡ್ಡವಳು' ಆಗುವವರೆಗೂ ಮಧುಮಗನು ಕಾಯಲೇಬೇಕಿತ್ತು. ಇಂತಹ 'ಪ್ರಸ್ಥಪೂರ್ವ ಆಚರಣೆ'ಯೊಂದನ್ನು 'ಗೆರೆದಾಟಿದ ಮೇಲೆ' ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಲೇಖಕರು ಹೇಳುವಂತೆ, "ಚಿಕ್ಕವ್ವ ಇನ್ನು ಮೈನೆರೆದಿರಲಿಲ್ಲ. ಪ್ರತಿದಿನ ಮುಂಜಾನೆ ಅವ್ವ, ಉದ್ದನ್ನು ಬೆಲ್ಲದೊಂದಿಗೆ ಬೇಯಿಸಿ ತಿನ್ನಲು ನವದಂಪತಿಗಳಿಗೆ ಕೊಡುತ್ತಿದ್ದಳು. 'ಅವರಿಗೆ ಮಾತ್ರ ಉದ್ದು ಕೊಡ್ತಿಯಾ.. ನನಗ್ಯಾಕೆ ಕೊಡೊದಿಲ್ಲ' ಅಂತ ಒಂದು ಸಲ ನಾನು ಗಲಾಟೆ ಮಾಡಿ ಅತ್ತಿದ್ದುಂಟು. 'ಅದು, ಹುಡುಗಿ ಬೇಗ ಮೈನೆರೆಯಲಿ ಅಂತ ಹೆಣ್ಣಿಗೂ, ಹುಡುಗನ ವೀರ್ಯ ವೃದ್ಧಿಸಲಿ ಅಂತ ಗಂಡಿಗೂ ಕೊಡುವ ಪದ್ಧತಿ ಅಂತ ಎಷ್ಟೋ ವರ್ಷಗಳ ಬಳಿಕ ನನಗೆ ಗೊತ್ತಾಯಿತು. ಚಿಕ್ಕವ್ವನಿಗೆ ಉದ್ದು ತಿನ್ನಲು ವಾಕರಿಕೆ ಬರೋದು! ಪೂರ್ತಿ ತಿನ್ನಲಾಗದೇ ಹೊರಗೆ ಚೆಲ್ಲಿಬಿಡುತ್ತಿದ್ದಳು. ಹಾಗೇ ಚೆಲ್ಲುತ್ತಿರುವಾಗ ಒಂದ್ಸಲ ಬೋರಪ್ಪ ನೋಡಿದವನೆ ಅವಳ ಹತ್ತಿರ ಓಡಿ ಹೋಗಿ, 'ಅಯ್ಯೋ ಹಂಗೆಲ್ಲ ಚೆಲ್ ಬಾರ್ದು ಅದ್ನ ತಿನ್ನಲೇಬೇಕು' ಅಂತ ಅವಳನ್ನು ಕಾಡಿ ಬೇಡಿ ಹೇಗೋ ತಿನ್ನಿಸಿದ್ದ. ಆದಷ್ಟು ಅದನ್ನು ತಿಂದು ಬೇಗ ಅವಳು ಮೈನೆರೆದು, ತನ್ನ ಪ್ರಸ್ಥ ಕಾರ್ಯ ಮುಗಿದರೆ ಸಾಕು ಅನ್ನುವ ಆತುರ ಬೋರಪ್ಪನಿಗೆ!".[೨೧] ಈ ಬಗೆಯ ಪದ್ಧತಿಯನ್ನು ಗಮನಿಸಿದರೆ ಬಹಳ ಮುಖ್ಯವಾಗಿ ಬಡತನದ ಛಾಯೆ ದಲಿತರಲ್ಲಿ ಬಾರಿ ಪ್ರಮಾಣದಲ್ಲಿ ಇರುವುದು ತಿಳಿದುಬರುತ್ತದೆ. ಆದರೂ ಸಹ ದಲಿತ ಸಮುದಾಯದವರಲ್ಲಿ ಚಿಕ್ಕ ಚಿಕ್ಕ ವಯಸ್ಸಿನಲ್ಲಿ ಇಂದಿಗೂ ಮದುವೆ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಇದಲ್ಲದೆ ತನ್ನ ವಂಶವು ಉದ್ಧಾರವಾಗಬೇಕೆಂಬ ಹಂಬಲ ವ್ಯಕ್ತವಾಗುವುದನ್ನು ಗಮನಿಸಿರಬಹುದು. ಹೀಗೆ

ದಲಿತರಲ್ಲಿಇಂತಹನಂಬಿಕೆಗಳುಹಾಗೂಆಚರಣೆಗಳುಇಂದಿಗೂನಿರಂತರವಾಗಿ ಮುಂದುವರೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದು.

ಸತ್ತವರಿಗೆ 'ದಿವಸ' ಆಚರಣೆ ಮಾಡುವುದು ನಮ್ಮ ದಲಿತ ಸಂಸ್ಕೃತಿಯ ಒಂದು ಭಾಗ. ಸತ್ತವರ ಆ 'ದಿವಸ'ವು ಸತ್ತ ನಂತರವು ಹಲವು ದಿನಗಳ ಕಾಲ ನಡೆಯುವ ಒಂದು ಸಂಪ್ರದಾಯ. ಇಂತಹ ಆಚರಣೆಯನ್ನು ಎಲ್ಲಪ್ಪ ಕೆ.ಕೆ. ಪುರ ಅವರು ತಮ್ಮ ತಂದೆ ತೀರಿಕೊಂಡ ನಂತರ ಯಾವ ಯಾವ ರೀತಿಯಲ್ಲಿ ಸತ್ತ ದಿವಸದ ಆಚರಣೆಗಳನ್ನು ಮಾಡುತ್ತಾರೆ ಎಂದು ತಮ್ಮ ಆತ್ಮಕಥೆಯಾದ 'ಕೇರಿಯಿಂದ ತೇರಿಗೆ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

೧. "ಜೀವ' ಹೋದ ದಿನ – ಹೆಣದ ಸುತ್ತ ಕುಳಿತು ರಾತ್ರಿ ಭಜನೆ ಮತ್ತು ಮುಖ ದರ್ಶನಕ್ಕಾಗಿ ಎಲ್ಲ ನೆಂಟರಿಗಾಗಿ ಕಾಯುವುದು.
೨. ಮರು ದಿನ – 'ಸಿದಿಗೆ' ಕಟ್ಟುವುದು. ಸುಡುಗಾಡಿಗೆ ಹೆಣ ತರುವುದು ಆರಡಿ–ಮೂರಡಿ ಕುಣಿಯಲ್ಲಿ ಮಣ್ಣು ಮಾಡುವುದು.
೩. ಮಾರನೇ ದಿನ – 'ಮೂರು ದಿನದ ಕೂಳು' ತಿನ್ನುವುದು.
೪. ಒಂಬತ್ತನೆಯ ದಿನ – ನಮ್ಮವ್ವನಿಗೆ ಕೈಗೆ ಕೆಂಪುಬಳೆ ತೊಡಿಸಿ ಎಲೆ, ಅಡಿಕೆ ಕೊಟ್ಟು ಅಕ್ಕಿ, ಅರಿಶಿಣ, ಕೊಂಬು, ಬೆಲ್ಲ ನೀಡಿ ಇಡೀ ಸಂಬಂಧಿಕರ ಬಳಗದಲ್ಲಿ ಹಾಕಿಕೊಳ್ಳುವ ಶಾಸ್ತ್ರ ಮಾಡುವುದು.
೫. ಹನ್ನೊಂದನೆಯ ದಿನ – ಸತ್ತವ್ಯಕ್ತಿಯ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ತಿಥಿ ಕಾರ್ಯಮಾಡುವುದು.
೬. ಹದಿನಾರನೆಯ ದಿನ – ಈ ದಿನ ಸುತ್ತ ಏಳು ಹಳ್ಳಿಯ ಬಳಗವನ್ನು ಕರೆದು ಮನೆಯಲ್ಲಿ ಗೋಧಿ, ಹುಗ್ಗಿ, ಅಕ್ಕಿಬಾನ, ಜೋಳದ ಸಜ್ಜೆಯ ಕಡುಬು ಮಾಡಿ ಬಂದಿರುವ ಬಳಗಕ್ಕೆ 'ದಿವಸ'ದ ಊಟ ಹಾಕಿಸುವುದು."[೨೨]

ಇಂಥ ಆಚರಣೆಗಳು ಅಲ್ಪ ಸ್ವಲ್ಪ ಭಿನ್ನತೆಗಳೊಂದಿಗೆ ಇಡೀ ಕರ್ನಾಟಕದಾದ್ಯಂತ ದಲಿತ ಸಮುದಾಯದವರಲ್ಲಿ ಇಂದಿಗೂ ನಡೆಯುತ್ತಿರುತ್ತದೆ. ಈ ಬಗೆಯ ಆಚರಣೆಗಳನ್ನು ಮಾಡುವುದರಿಂದ ಮುಂದೆ ನಮ್ಮ ಮನೆಗೆ ಹಾಗೂ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಗಳು ಉಂಟಾಗದಂತೆ ನಮ್ಮ ಹಿರೀಕರು ಕಾಪಾಡುತ್ತಾರೆ ಎಂಬ ನಂಬಿಕೆಯನ್ನು ಇಟ್ಟುಕೊಂಡು ಸತ್ತದಿವಸದ ಕಾರ್ಯಗಳನ್ನು ಯಾವುದೇ ಕಾರಣಕ್ಕೂ ತಪ್ಪಿಸದೇ ಮಾಡುತ್ತಾರೆ. ಹೀಗೆ ಮಾಡುವುದರಿಂದ ನಮಗೆ ಯಾವುದೇ ರೀತಿಯ ತೊಂದರೆಗಳು ಉಂಟಾಗುವುದಿಲ್ಲ

ಹಾಗೂ ಎಲ್ಲ ಸಂಬಂಧಿಕರಿಗೂ ಒಳ್ಳೆಯದಾಗುತ್ತದೆಂದು ನಂಬಿಕೊಂಡು ಈ ಬಗೆಯ ಆಚರಣೆ ಹಾಗೂ ವಿವಿಧ ರೀತಿಯ ಸಂಪ್ರದಾಯಗಳನ್ನು ಮಾಡುತ್ತಾರೆ.

ಕುಪ್ಪೆ ನಾಗರಾಜ್ ಅವರು ತಮ್ಮ 'ಅಲೆಮಾರಿ ಅಂತರಂಗ' ಆತ್ಮಕಥೆಯಲ್ಲಿ ನಿರೂಪಿಸಿರುವ ದೊಂಬಿದಾಸರ ಭಿಕ್ಷಾಟನೆ, ಬಯಲಾಟದಂಥ ಕಾಯಕಗಳ ಜೊತೆಗೆ ವಿವಿಧ ಸಂದರ್ಭಗಳಲ್ಲಿ ಆಚರಿಸುವ ಸಾಮುದಾಯಿಕ ಸಂಪ್ರದಾಯದ ಆಚರಣೆಗಳು ಸಹ ಹಲವು ವಿಶೇಷತೆಗಳಿಂದ ಹಾಗೂ ಕುತೂಹಲದಿಂದ ಕೂಡಿವೆ ಎಂಬುದನ್ನು ಇವರ ಆತ್ಮಕಥನದಲ್ಲಿ ಕಾಣಬಹುದು.

೧. ತನ್ನ ತಾಯಿಗೆ ಆಗಾಗೆ ಮೈಗೆ ಉಷಾರು ತಪ್ಪುತ್ತದೆ. ನಮ್ಮವ್ವನ ಆರೋಗ್ಯ ಚನ್ನಾಗಿರಬೇಕು ಎಂದರೆ ಯಾರಿಗೂ ತಿಳಿಯದಂತೆ ಎಲ್ಲಮ್ಮನ ಹಬ್ಬ ಮಾಡಬೇಕೆಂದು ತೀರ್ಮಾನಿಸುವುದು. ಈ ಹಬ್ಬದ ವಿಶೇಷ ಸಂಪ್ರದಾಯವೆಂದರೆ "ನಾವು ವಾಸಮಾಡುವ ಮನೆಯಲ್ಲಿ ಹಬ್ಬ ಮಾಡುವಂತಿಲ್ಲ. ಕಾರಣ ಸೂತಕ, ಮೈಲಿಗೆಯಾಗುತ್ತದೆ ಎಂದು ಯಾವುದಾದರೂ ಜಮೀನಿನ ಬೇವಿನ ಮರದ ನೆರಳಿನಲ್ಲಿ ಚಪ್ಪರ ಹಾಕಿ ಅದರ ಕೆಳಗೆ ಮಣ್ಣಿನ ಗದ್ದುಗೆ ಮಾಡಿ ಅದಕ್ಕೆ ಒಡವೆಗಳಿಂದ ಅಲಂಕಾರ ಮಾಡಿ ಹೂವು ಮುಡಿಸಿ ಕುಂಕುಮ ಹಚ್ಚಿ ಮೊಸರನ್ನದ ತಳಿಗೆ ಇಟ್ಟು ಪೂಜೆ ಮಾಡುವುದು"[೨೩] ಈ ಎಲ್ಲಮ್ಮ ದೇವತೆಯ ವಿಶೇಷವಾಗಿದೆ. ಏಕೆಂದರೆ ಇಲ್ಲಿನ ಅಲೆಮಾರಿಯ ದೊಂಬಿದಾಸ ಸಮುದಾಯದವರಿಗೂ ಸಹ ಭೂಮಿಯ ಜೊತೆ ಅವಿನಾಭಾವ ಸಂಬಂಧವಿರುವುದನ್ನು ಈ ಪರಂಪರೆಯು ತಿಳಿಸಿಕೊಡುತ್ತದೆ. ಇದಲ್ಲದೆ ಎಲ್ಲಮ್ಮದೇವತೆಯ ಹಬ್ಬ ಮಾಡುವುದರಿಂದ ನಮ್ಮ ಸಮುದಾಯದ ಜನರಿಗೆ ಯಾವುದೇ ತೊಂದರೆಗಳು ಉಂಟಾಗುವುದಿಲ್ಲ ಎಂಬ ನಂಬಿಕೆಯನ್ನು ಆಗಾಧವಾಗಿ ಇಟ್ಟುಕೊಂಡಿರುವುದು ಸಹ ತಿಳಿಯುತ್ತದೆ.

೨. ಈ ಎಲ್ಲಮ್ಮನ ಹಬ್ಬವನ್ನು ಮಾಡುವಾಗ ಮತ್ತೊಂದು ಬಗೆಯ ಆಚರಣೆಯನ್ನು ಮಾಡುತ್ತಾರೆ. ಅದೇನೆಂದರೆ "ಹೊಲೆಮಾದಿಗರಾದಿಯಾಗಿ ಗೌಡ, ಕುರುಬ, ನಾಯ್ಕ, ಯಾವುದೇ ಜಾತಿಯ ಜನಾಂಗದವರು ಈ ಕಡೇ ಬರದಂತೆ ನೋಡಿಕೊಂಡು ತೀರ ಗೌಪ್ಯವಾಗಿ ಹಬ್ಬವನ್ನು ಮುಗಿಸಬೇಕು"[೨೪] ಎಂದು ಹೇಳುತ್ತಾರೆ. ಈ ಬಗೆಯ ಸಂಪ್ರದಾಯವನ್ನು ಏನಾದರೂ ಮುರಿದರೆ ಆ ಎಲ್ಲಮ್ಮ ತಾಯಿ ಕೋಪಗೊಂಡು ನಮಗೆ ಕೊಡಬಾರದ ಕಷ್ಟ ಕೊಡುತ್ತಾಳೆಂದು ಈ ಜನರು ನಂಬಿದರು ಎಂದು ತಿಳಿದುಬರುತ್ತದೆ. ಹೀಗೆ ಹಲವು ಸಮುದಾಯದ ಜನರು ಇಂತಹ ಹಬ್ಬ, ಆಚರಣೆಗಳು, ಸಂಪ್ರದಾಯಗಳನ್ನು ಅವರವರ

ಕಟ್ಟುಪಾಡುಗಳೊಂದಿಗೆ ಇಂದಿಗೂ ಆಚರಣೆ ಮಾಡಿಕೊಂಡು ಬರುತ್ತಿರುವುದನ್ನು ಮನಗಾಣ–ಬಹುದು.

೩. ಮದುವೆಯ ಸಂದರ್ಭದಲ್ಲಿ ಕುಲಸ್ಥರಿಗೆ ವೀಳ್ಯದೆಲೆ ನೀಡುವ ಪರಿಕಲ್ಪನೆಯು ದಲಿತ ಮತ್ತು ದಲಿತೇತರ ಸಮುದಾಯಗಳಲ್ಲಿ ಇಂದಿಗೂ ಆಚರಿಸಿಕೊಂಡು ಬರುತ್ತಿದ್ದಾರೆ. ಇಂತಹ ಒಂದು ಬಗೆಯ ಪರಂಪರೆಯ ಸಂಪ್ರದಾಯವನ್ನು ಕುಪ್ಪೆ ನಾಗರಾಜು ಅವರು ಕಟ್ಟಿ ಕೊಟ್ಟಿದ್ದಾರೆ. ತನ್ನ ಅಕ್ಕನ ಮದುವೆ ಸಂದರ್ಭದಲ್ಲಿ ವಿಳ್ಯದ ಶಾಸ್ತ್ರ ವಿಶೇಷವಾಗಿ ಕಂಡು ಬರುವುದನ್ನು ಗಮನಿಸಬಹುದು. ಮದುವೆ ನಿಗದಿತ ಸಮಯಕ್ಕೆ ಮುಗಿದು ಎಲ್ಲರೂ ಊಟ ಮಾಡಿ ಮುಗಿಸಿದ ಮೇಲೆ ಎಲೆ ಅಡಿಕೆ ಹಂಚುವ ಸಂಪ್ರದಾಯ ನಡೆಯುತ್ತದೆ. "ಮದುವೆಯಲ್ಲಿ ಊಟ ಒಬ್ಬರಿಗೆ ಸಿಗದಿದ್ದರೂ ಚಿಂತೆ ಇಲ್ಲಾ ಆದರೆ ಈ 'ಸಿಂಹಾಸನವಕ್ಕಾಕು ಪಂಚೇದಿ' ಸಿಗದಿದ್ದರೆ ಅಲ್ಲಿ ದೊಡ್ಡ ರಣರಂಗವೇ ನಿರ್ಮಾಣವಾಗೋದು. ಈ ವಿಳ್ಯ ಯಾರಿಗೆ ಕೊಡೊದಿಲ್ವೊ ಅವರು ಕುಲದಿಂದ ಹೊರಗಿರೋರು, ಜಾತಿ ನೀತಿಗೆಟ್ಟವರು ಅಂತ್ಲೆ ತೀರ್ಮಾನ."[೨೫] ಈ ಒಂದು ಸಂಪ್ರದಾಯವನ್ನು ಪ್ರತಿಯೊಂದು ಗ್ರಾಮದ ಪ್ರತಿಷ್ಠೆಯ ಪ್ರತೀಕದಂತೆ ಕಾಣುತ್ತಾರೆ. ಹಾಗೆಯೇ ಈ ಗ್ರಾಮದ ಜನರು ಈ ವಿಳ್ಯ ಪದ್ಧತಿಯನ್ನು ತಮ್ಮ ಕುಲದೇವರ ಸಂಕೇತ ಎಂದೇ ಬಿಂಬಿಸಿ ನಂಬಿದ್ದಾರೆ. ಮದುವೆಯ ಸಂದರ್ಭದಲ್ಲಿ ನಾವು ವಿಳ್ಯವನ್ನು ಪಡೆದುಕೊಂಡಿಲ್ಲ ಎಂದರೆ ನಾವು ನಮ್ಮ ಕುಲದಿಂದ ದೂರ ಉಳಿದಂತೆ. ಹಾಗೇ ಜಾತಿಯಿಂದ ನೀತಿಗೆಟ್ಟವರು ಎಂದು ಗ್ರಾಮದಿಂದ ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆ ಎಂದು ನಂಬಿದ ಈ ಸಮುದಾಯದವರು ಈ ಆಚರಣೆಯನ್ನು ಬಹಳ ಗೌರವ ಹಾಗೂ ಪ್ರತಿಷ್ಠೆಯ ರೀತಿಯಲ್ಲಿ ಆಚರಿಸಿಕೊಂಡು ಬರುತ್ತಿದ್ದಾರೆ.

೪. ಈ ದೊಂಬಿದಾಸರ ಸಮುದಾಯದಲ್ಲಿ ಶವಸಂಸ್ಕಾರ ವಿಧಿ ವಿಧಾನದ ಆಚರಣೆಗಳು ವಿಶಿಷ್ಟವಾಗಿವೆ. ಅದರಲ್ಲೂ ಗುರು ಬೋಧನೆಯನ್ನು ತೆಗೆದುಕೊಂಡಿರುವ ವ್ಯಕ್ತಿಗಳನ್ನು ಭಿನ್ನವಾದ ಆಚರಣೆಗಳೊಂದಿಗೆ ಶವಸಂಸ್ಕಾರ ಮಾಡುತ್ತಾರೆ. ಈ ಬಗೆಯ ಶವಸಂಸ್ಕಾರದ ಬಗ್ಗೆ ನಾಗರಾಜುರವರು ತನ್ನ ತಾಯಿ ತೀರಿಕೊಂಡ ಸಂದರ್ಭದ ಸನ್ನಿವೇಶವನ್ನು ಆತ್ಮಕಥೆಯಲ್ಲಿ ಕಟ್ಟಿಕೊಡುತ್ತಾರೆ."ಗುರುಬೋಧನೆಯನ್ನುತೆಗೆದುಕೊಂಡಗುರುಮಕ್ಕಳನ್ನುಹಾಗೂ ಮಹಿಳೆಯರನ್ನು ಮಾಮೂಲಿನಂತೆ ಶವಸಂಸ್ಕಾರ ಮಾಡುವಂತಿಲ್ಲ. ವಿಪರೀತ ವಿಧಿವಿಧಾನಗಳನ್ನುಮಾಡುವುದಕ್ಕೆ ಒಬ್ಬ ಹಿರಿಯ 'ಗುರುಬೋಧನೆ' ತೆಗೆದುಕೊಂಡಿರುವವರನ್ನು ಕರೆಯಿಸಿ ಶವಸಂಸ್ಕಾರದ ವಿಧಿ ವಿಧಾನಗಳನ್ನು ಆಚರಿಸುತ್ತಾರೆ. ಆರು ಅಡಿ ಮತ್ತು ಮೂರು ಅಡಿ ಆಳತೆಯ ಗುಂಡಿ ತಗೆದು ಧ್ಯಾನಾಸಕ್ತ ಭಂಗಿಯಲ್ಲಿ ಕೂರಿಸಿ ಶವಸಂಸ್ಕಾರ ಮಾಡುತ್ತಾರೆ."[೨೬] ಈ ಬಗೆಯ

ಶವಸಂಸ್ಕಾರ ಪದ್ಧತಿಯು ದಲಿತ ಸಮುದಾಯದಲ್ಲಿನ ಜನರು ಗುರುಬೋಧನೆಯನ್ನು ತೆಗೆದುಕೊಂಡಿರುವವರಿಗೆ ಮಾಡುತ್ತಾರೆ. ಈ ಬಗೆಯ ಪರಿಕಲ್ಪನೆಯ ಶವಸಂಸ್ಕಾರದ ಆಚರಣೆಯನ್ನು ಕರ್ನಾಟಕದ ಹಾಸನ, ಚಾಮರಾಜನಗರ, ಮಂಡ್ಯ, ತುಮಕೂರು, ಮೈಸೂರು, ಬೀದರ್, ರಾಯಚೂರು ಜಿಲ್ಲೆಗಳಲ್ಲಿನ ದಲಿತ ಸಮುದಾಯದ ಜನರು ಆಚರಿಸುತ್ತಾರೆ. ಈ ಬಗೆಯ ಆಚರಣೆಗಳು ದಲಿತ ಸಮುದಾಯದ ಜನರಲ್ಲಿ ಬರಬೇಕಾದರೆ ವಚನಕಾಲದ ಶರಣರ ಪ್ರಭಾವ ಉಂಟಾಗಿರಬೇಕೆಂದು ವಿಶ್ಲೇಷಣೆ ಮಾಡಲು ಸಾಧ್ಯವಿದೆ. ಹಾಗಾಗಿ ಈ ಬಗೆಯ ಸಂಪ್ರದಾಯಗಳು ಆಚಾರ-ವಿಚಾರಗಳು ಮತ್ತು ನಂಬಿಕೆಗಳು ದೊಂಬಿದಾಸ ಸಮುದಾಯದವರೊಟ್ಟಿಗೆ ದಲಿತ ಸಮುದಾಯದ ಇನ್ನಿತರೆ ಜನಾಂಗದವರಲ್ಲಿಯು ಇಂದಿಗೂ ಆಚರಣೆಯಾಗಿಯೇ ಉಳಿದುಕೊಂಡಿದೆ.

ದಲಿತ ಮಹಿಳೆಯರಿಗೆ ಸಂಬಂಧಿಸಿದ ಹಲವಾರು ನಂಬಿಕೆ, ಆಚರಣೆಗಳಲ್ಲಿ ದೇವ್ರು ಕಟ್ಟಿಸುವ ಸಂಪ್ರದಾಯವು ಒಂದು. ಈ ಬಗೆಯ ಸಂಪ್ರದಾಯವು ಹೆಚ್ಚು ಉತ್ತರ ಕರ್ನಾಟಕ ಹಾಗೂ ಮಧ್ಯಕರ್ನಾಟಕದ ತುಮಕೂರು, ಚಿತ್ರದುರ್ಗ ಮೊದಲಾದ ಕಡೆಗಳಲ್ಲಿ ಇಂದಿಗೂ ದಲಿತ ಸಮುದಾಯದ ಕುಟುಂಬಗಳಲ್ಲಿ ಆಚರಣೆಯಲ್ಲಿದೆ. ಇಂಥ ಸಂಪ್ರದಾಯವನ್ನು ಎಲ್ಲಪ್ಪ ಕೆ.ಕೆ.ಪುರ ಅವರು ತಮ್ಮ ಆತ್ಮಕಥೆಯಾದ 'ಕೇರಿಯಿಂದ ತೇರಿಗೆ' ಕೃತಿಯಲ್ಲಿ ವಿವರಣಾತ್ಮಕವಾಗಿ ನಿರೂಪಿಸಿದ್ದಾರೆ: "ನಮ್ಮಕ್ಕ ಎಲ್ಲಕ್ಕನಿಗೆ "ದೇವ್ರು" ಕಟ್ಟಿಸಲು, ಮನೆತನಕ ಬಿಡಲು ಅಪ್ಪ ಭರದಿಂದ ಸಿದ್ಧತೆ ನಡೆಸಿದ. ಅಪ್ಪನ ನಿರ್ಣಯನೇ ಹಾಗೆ. ಯಾರ ಮಾತು ಕೇಳುತ್ತಿರಲಿಲ್ಲ. ತನ್ನ ಸ್ವಂತ ಪ್ರತಿಷ್ಠೆಯ ಜೊತೆಗೆ, ಮನೆತನ ಹಾಳಾಗಬಾರದೆಂಬ ಘನ ಉದ್ದೇಶವಿತ್ತು. ಇದು ಒಳ್ಳೆಯದೆಂದು ಭಾವಿಸಿದ್ದ. ಏಕಮುಖ ನಿರ್ಣಯ. ಮನೆ ಮುಂದೆ ದೊಡ್ಡ ಚಪ್ಪರ ಹಾಕಿಸಿದ. ಸುತ್ತ ಏಳು ಹಳ್ಳಿಗೆ ಹೇಳಿ ಕಳಿಸಿದ. ಮನೆಯಲ್ಲಿ ಗಡ್ಡದ ಓತವನ್ನು ದೇವ್ರಿಗೆ ಬಿಟ್ಟ. ಅಕ್ಕಿ, ಬೇಳೆ, ಬೆಲ್ಲ, ಗೋಧಿ, ಉಪ್ಪು, ಸಕ್ಕರೆ, ಜೋಳ, ರಾಗಿ, ಅಕ್ಕಿಕಾಳು, ಹೊಗೆಸೊಪ್ಪು, ಸುಣ್ಣ, ಚಕ್ಕೆ, ಎಲೆ, ಅಡಿಕೆ, ಹಸನು ಮಾಡಲು ಸಿಡೇಗಲ್ಲುನಿಂದ ಚೌಡಿಕೆಯವರು ಬಂದರು. ರಾಂಪುರ, ತಿಮ್ಮಲಾಪುರದವರಿಂದ ಹಲಗೆಗಳ ಬಡಿತ ಶುರುವಾಯಿತು. ಸಾವಿರಾರು ಜನರೆದುರಿಗೆ ಅಪ್ಪ ಗಡ್ಡದ ಓತಕ್ಕೆ ಕುಂಕುಮ ಭಂಡಾರ, ಚಂದ್ರ ಬಟ್ಟು ಹಚ್ಚಿ. ಕೊರಳಿಗೆ ಮಾವು, ಬೇವಿನ ತೋರಣ ಕಟ್ಟಿ ಊದುಗಡ್ಡಿ ಬೆಳಗಿ, ತೆಂಗಿನಕಾಯಿ ಒಡೆದು, ಹೊಸ್ತಿಲು ಬಾಗಿಲಿಗೆ ಇಟ್ಟು ಕಡ್ಲೆ ಮಂಡಾಳು, ಕೊಬ್ಬರಿ, ರೊಕ್ಕವನ್ನು ಅಂಗೈಯಿಂದ ಉಗ್ಗಿದ. ದಾನವಾಗಿ ಬೆಂಡೋಲೆ, ಹಸು, ಕರುಗಳನ್ನು, ಹೊಸ ಬಟ್ಟೆಗಳನ್ನು ನೀಡಿದ. ಅಕ್ಕ ಎಲ್ಲಕ್ಕನಿಗೆ ಬೇವಿನ ಉಡುಗೆ ತೊಡಿಸಿ, ತಲೆ ಮೇಲೆ ನಂದಾ ದೀವಿಗೆ ಹೊರಿಸಿ

ಮುತ್ತೈದೆಯರಿಂದ ಕಳಸ, ಕುಂಭ, ಹೆಡ್ಗಿಗೆಗಳು, ಎಡೆಗಳು, ತೆಂಗಿನಕಾಯಿ ಚೀಲ, ಮಂಡಾಳು ಚೀಲ, ಬಾಳೆಗೊನೆ ಹೊರ್ಸಿದ. ಬೀಗರು ಬಿಜ್ಜರಿಗೆ ಹೊಸ ಸೀರೆ, ಕುಪ್ಪಸಗಳು ಮೆರವಣಿಗೆ ಮನೆಯಿಂದ ಹೊರಟಿತು. ಜನ್ರು ಇರುವೆ ಸಾಲಿನಂತೆ ಹೊರಟಿತು.

> **“ಮಂಗಳವಾರ ಮಾಯಕಾತಿ.. ತಂದನ್ನಾ ತಾನೋ**
> **ತಾನೆ ಬಂದಾಳೋ ತಂದನ್ನಾ ತಾನೋ..ಯಲ್ಲಮ್ಮನಿಗೆ ಹೋಗಾರು**
> **ಯಳ್ಳುಬೆಲ್ಲವ ಹೋಯ್ಯಿರೀ”**
> **ಚೌಡಿಕೆಯವರ ಸಮೂಹಗಾನ ತಾರಕಕ್ಕೇರಿತು.**
> **“ಎಲ್ಲಮ್ಮಗೇ ಹೋಗಾರು ಎಳ್ಳು ಬೆಲ್ಲ ಹೊಯ್ಯರಿ,**
> **ಹುಟ್ಟಿದ ಮಗನಿಗೆ ಎಲ್ಲಪ್ಪನೆಂದೂ**
> **ಮಗಳಿಗೆ ಎಲ್ಲಮ್ಮನೆಂದೂ ಹೆಸರಿಡಿ ಸೋಬಾನವೇ.”**

ಸೋಬಾನ ಪದಗಳು ಮುಗಿಲು ಮುಟ್ಟಿದವು. ಜನರ ದಂಡೇ ತೇರು ಪರೀಕ್ಷೆಯಂತೆ ಸಾಗಿತ್ತು. ನಾ ಅಪ್ಪನ ಕಿರು ಬೆರಳು ಹಿಡಿದು, ದೊಡ್ಡವರಂತೆ ಹೆಜ್ಜೆ ಹಾಕಿದೆ. ಮೆರವಣಿಗೆ ನನ್ನೂರ ಊರ ಬಾಗಿಲಿನಿಂದ, ಕೆರೆ ಬಯಲಿಗೆ ಸಾಗಿ, ಅಲ್ಲಿಂದ ಕೆರೆ ಏರಿ ಮೇಲಿನಿಂದ ದೇವ ಸಮುದ್ರದಲ್ಲಿನ ಎಲ್ಲಮ್ಮ ದೇವಸ್ಥಾನಕ್ಕೆ ಬಂದು ಮುಟ್ಟಿತು. ದೇವಸ್ಥಾನ ಪ್ರದಕ್ಷಿಣೆ ಹಾಕಿತು ಮಂದಿ. ಓತ ಹಿಡಿದ ಜನ ಕೇಕೆ ಹಾಕಿದರು. ಒಂಬತ್ತು ದಿನಸಿನ ಐದು ಇಡಿಯನ್ನು (೯ ದಿನಸು=ನೆರೆದಲೆಗ (ರಾಗಿ), ನೆಲ್ಲು (ಅಕ್ಕಿ), ಹಾರಕ (ನವಣೆಯಂತೆ ಧಾನ್ಯ), ಬರಗು (ಉದ್ದು), ಜೋಳ, ಕಂಬು (ಕರಿಹೆಸರು), ಅವರೆ, ಎರಡ (ಮಡಿಕೆಸರು) ಹಾಗೂ ನವಣೆ ಹಾಕಿ ಪೂಜಿಸಿ, ಪ್ರಸಾದ ತೀರ್ಥದ ನೀರನ್ನು ಅಕ್ಕನ ತಲೆ ಮೇಲೆ ಚಿಮಿಕಿಸಿ, ತೀರ್ಥ, ಕುಡಿಸಿ. ಎಡೆಯ ಮೊದಲ ತುತ್ತು ತಿನಿಸಿ ‘ಜೋಕುದ್ಲೋ ಜೋಕೋ ಉಧೋ’ ಎಂದು ಮೂರು ಸಾರಿ ಅಕ್ಕ ಎಲ್ಲಕ್ಕನಿಂದ ಹೇಳಿಸಿ, ಬಿದರಿನ ಅಡ್ಲಿಗೆಯೊಂದನ್ನು ತಲೆ ಮೇಲಿಟ್ಟು ತಮ್ಮಟೆಗಳನ್ನು ಬಡಿದು ಕೇಕೆ ಹಾಕಿದರು. ಅಪ್ಪನಿಗೆ ಏನೋ ವಿಜಯ ಸಾಧಿಸಿದ ಹಿಗ್ಗು. ಮಕದಲ್ಲಿ ಖುಷಿ ಇತ್ತು. ದೇವರ ಕಾರ್ಯ ನೆರವೇರಿಸಿದ ತೃಪ್ತಿ ಅಪ್ಪನಲ್ಲಿತ್ತು. ಅಕ್ಕ ಮಾತ್ರ ಒಂದೇ ಸಮನೆ ಅಳುತ್ತಿದ್ದಳು. ಅಕ್ಕನ ಅಕ್ಕಂದಿರಾದ ತಿಮ್ಮಕ್ಕ, ಊಲೆಮ್ಮ ನಗು ಮಕದಲ್ಲಿದ್ದರು. ನಾನು ಮಿಕಿ ಮಿಕಿ ನೋಡುತ್ತಾ ಇದ್ದೆ. ಅಂಗೆಲ್ಲ ಅಳಬೇಡಾ ತಾಯಿ ನಿನ್ಗೆ ಏನ್ ಕಡೆಮೆ ಮಾಡೀವಿ ಅಂತಾ ಈ ಕಣ್ಣಿರು ತಾಯಿ’ ಎಂದು ಕೇರಿಯ ಬಿಳಿತಲೆಗಳು ಅಕ್ಕ ಎಲ್ಲಕ್ಕನನ್ನು ಪ್ರಶ್ನಿಸುತ್ತಾ ದೇವ್ರ ಪುಣ್ಯವಿದೆಂದು ಜನ್ರು ವಿಚಿತ್ರವಾಗಿ ವರ್ತಿಸುತ್ತಿದ್ದರು”[೨೭]. ಇಂತಹ ಸಂಪ್ರದಾಯಗಳು ದಲಿತರ ಜೀವನದಲ್ಲಿ ಇಂದಿಗೂ ಮುಂದುವರೆದುಕೊಂಡು ಬಂದಿದೆ. ಅದರಲ್ಲಿ ದಲಿತ ಪುರುಷರಿಗೆ ಹೆಚ್ಚು ಆನಂದವಾದರೆ,

ದೇವ್ರನ್ನು ಕಟ್ಟಿಸಿಕೊಳ್ಳುವ ಮಹಿಳೆಗೆ ನರಕಯಾತನೆ. ಇಂಥ ಅನೇಕ ನರಕಯಾತನೆಗಳಿಗೆ ದೈವನಂಬಿಕೆಯ ಲೇಪನ ಹಾಕಿ ದಲಿತ ಜಗತ್ತು ತನಗರಿವಿಲ್ಲದಂತೆ ನರಳುತ್ತಿದೆ. ಇದು ಒಂದು ಬಗೆಯಲ್ಲಿ ದೇವದಾಸಿಯಾಗಿ ಬಿಡುವ ಪ್ರವೃತ್ತಿಯಾಗಿದೆ. ಈಕೆ ಯಾವುದೇ ಊರಿನ ಕಾರ್ಯಕ್ರಮಗಳಿಗೆ ಜನಸಾಮಾನ್ಯರಂತೆ ಭಾಗವಹಿಸುವಂತಿಲ್ಲ. ಇವರು ಅನೇಕ ನಿಯಮಗಳಿಗೆ ಒಳಪಡಬೇಕಾಗುತ್ತದೆ. ಈ ಎಲ್ಲಾ ಹಿನ್ನೆಲೆಯನ್ನು ಗಮನಿಸಿದಾಗ ದೇವರ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆಮಾಡುವ ಪ್ರತೀಕವಾಗಿ ಗೋಚರಿಸುತ್ತದೆ. ಆದರೂ ಈ ಸಮುದಾಯದ ಜನರು ಇದೊಂದು ನಂಬಿಕೆಯ ಆಚರಣೆಯಂತೆ ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ.

ಭಾರತೀಯ ಸಮಾಜದಲ್ಲಿ ಇಂದಿಗೂ ಪ್ರಜ್ಞಾವಸ್ಥೆಯಲ್ಲಿರುವ ಶೋಷಣೆ, ಅರೆಪ್ರಜ್ಞಾವಸ್ಥೆಯಲ್ಲಿರುವ ಅಸ್ಪೃಶ್ಯತೆಯ ನೋವು, ಅಮೇರಿಕಾದ ಕಪ್ಪುಜನರ ಮೇಲೆ ನಡೆಯುತ್ತಿರುವ ಜನಾಂಗವಾರು ಶೋಷಣೆಗಿಂತ ಭೀಕರವಾಗಿದೆ. ಸಂಪ್ರದಾಯ, ನಂಬಿಕೆ, ಆಚರಣೆಯ ಹೆಸರಿನಲ್ಲಿ ಮೇಲ್ವರ್ಗದ ಪುರುಷರು ಕೆಳವರ್ಗದ ಅದರಲ್ಲೂ ದಲಿತ ಸ್ತ್ರೀಯರ ಜೊತೆ ನಡೆಸುವ ಓಕುಳಿಯ ಉತ್ಸವ; ಶ್ರಾವಣಮಾಸದಲ್ಲಿ ಹನುಮಂತರಾಯನ ಎದುರು ನಡೆಸುವ ಕ್ರೀಡಾ ಉತ್ಸವಗಳು ಅಸ್ಪೃಶ್ಯರನ್ನು ಕಾಡುತ್ತಿರುವ ಸಾಂಸ್ಕೃತಿಕ ಶೋಷಣೆಯೇ ಸರಿ. ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ 'ಓಕುಳಿ ಉತ್ಸವ'ದಂತ ಶೋಷಣೆಯನ್ನು ಬ್ರಾಹ್ಮಣಶಾಹಿ ಮನಸ್ಥಿತಿಗಳು ಸಮರ್ಥಿಸಿಕೊಳ್ಳುವ ಬಗ್ಗೆ, ಪ್ರತಿವರ್ಷ ಈ ಕ್ರೀಡೆ ನಡೆಯಲೇಬೇಕೆಂಬ ನಿಯಮ ನಡೆಸದಿದ್ದರೆ ಊರಿಗೆ ಮಳೆಬರಲಾರದು. ಬೆಳೆಗೆ ರೋಗ ಬೀಳುತ್ತದೆ. ಊರಿಗೆ ಮಾರಿ ಬರುತ್ತದೆ. ಶನಿಯ ಕಾಟ ಹೆಚ್ಚುತ್ತದೆ ಎಂದು ಈ ನಂಬಿಕೆಗಳಿಗೆ ಹೆದರುವ ದಲಿತ ಹೆಂಗಸರು ಮತ್ತು ಗಂಡಸರು ಮನರಂಜನೆಯ ಹೆಸರಿನಲ್ಲಿ ಬಲಿಯಾಗುತ್ತಾರೆ.

ದಲಿತರ ಕೇರಿಗೂ ಹಾಗೂ ಊರೊಳಗಿನ ಸಂಪ್ರದಾಯಗಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಈ ಸಂಬಂಧಗಳು ದಲಿತರಿಗೆ ಮಾರಕವಾಗಿಯೂ ದಲಿತೇತರಿಗೆ ಪೂರಕವಾಗಿಯೂ ಕೆಲಸ ಮಾಡುತ್ತವೆ. ಸಂಪ್ರದಾಯದ ಹೆಸರು ಹೇಳಿ ದಲಿತ ಮಹಿಳೆಯರನ್ನು ಯಾವ ರೀತಿಯಲ್ಲಿ ಶೋಷಣೆ ಮಾಡುತ್ತಾರೆ ಎಂಬುವುದನ್ನು ಸಮತಾ ದೇಶಮಾನೆಯವರು ತಮ್ಮ ವಿಮರ್ಶಾ ಕೃತಿಯಾದ 'ಒಡಲಿನ ಬೆಂಕಿ'ಯಲ್ಲಿ ದಾಖಲಿಸಿದ್ದಾರೆ. "ದಲಿತ ಹೆಂಗಸರು ಕುಪ್ಪಸವನ್ನು ಕಳೆದು ಅಂಡುಗಚ್ಚೆ ಹಾಕಿದ ಸೀರಿಯನ್ನು ಉಟ್ಟಿರಬೇಕು. ಅಂದರೆ ನಡುಭಾಗಕ್ಕೆ ಮಾತ್ರ ಸೀರೆ ಸುತ್ತಿದ್ದು ಸೆರಗು ತಲೆ ಮೇಲೆ ಬಂದಿರುತ್ತದೆ. ಇವರ ಕೈಯಲ್ಲಿ ನೀಳವಾದ ಮಾರುದ್ದದ ಲಕ್ಕಿಯ ಹತ್ತಾರು ಜಬರಿಗಳಿರುತ್ತವೆ. ಇವರ ವಿರುದ್ಧ ಇನ್ನೊಂದು ಬಣ್ಣ. ಇದರಲ್ಲಿ

ದಲಿತೇತರ ಹಾಗೂ ಬ್ರಾಹ್ಮಣೇತರರಿಂದ ಕೂಡಿದ ಗಂಡಸರು ಮಾತ್ರ ಇರುತ್ತಿದ್ದು, ಅಂಡಗಚ್ಚೆ ಹಾಕಿದ ಧೋತಿಯನ್ನು ಉಟ್ಟಿರುತ್ತಾರೆ. ಕೈಯಲ್ಲಿ ರ್‍ಯಾಳದಿಂದ ಅಥವಾ ಸರೆಯಿಂದ ಲೇಪಿತವಾದ ಜೋಳಿಗೆ ಇರುತ್ತದೆ. ಈ ಗಂಡಸರಲ್ಲಿ ಸಾಮಾನ್ಯವಾಗಿ ಊರ ಪ್ರಮುಖರು ಹಾಗೂ ಪುಂಡ ಹುಡುಗರು ಹೆಚ್ಚು ಇರುತ್ತಾರೆ. ಸಂಪ್ರದಾಯದ ಹೆಸರಿನಿಂದ ದಲಿತ ಮಹಿಳೆಯರಿಗೆ ಎಲ್ಲೆಂದರಲ್ಲಿ ಮುಟ್ಟುವ ಅವಕಾಶಕ್ಕಾಗಿ ಅವರು ಈ ಆಟ ಏರ್ಪಡಿಸುತ್ತಾರೆ. ದೇವಾಲಯದ ಎದುರು ಹೊಂಡಗಳ ಸುತ್ತಮುತ್ತಲೂ ಕ್ರೀಡೆಯಾಗಿ ನಡೆಯುವುದು ಓಕುಳಿ. ಗಂಡಸರು ಅರಿಶಿಣ ಕುಂಕುಮಗಳಿಂದ ಕೂಡಿದ ಹೊಂಡದ ನೀರು ಜೋಳಿಗೆಯಲ್ಲಿ ತಂದು ಹೆಂಗಸರಿಗೆ ಹೊಡೆಯುತ್ತಾರೆ. ಕೈಯಲ್ಲಿ ನೀಳವಾದ ಜಬರಿಯನ್ನು ಹಿಡಿದು ನಿಂತ ಹೆಂಗಸರು ಈ ನೀರಿನ ಹೊಡೆತದಿಂದ ತಪ್ಪಿಸಿಕೊಂಡು ಜಬರಿಯಿಂದ ಗಂಡುಗಳಿಗೆ ಹೊಡೆಯಬೇಕು. ಇದು ಪದ್ಧತಿಯಾಗಿದೆ."[೨೮] ಈ ಮೇಲಿನ ವಿಷಯವನ್ನು ಅವಲೋಕಿಸಿದರೆ, ಮೇಲುವರ್ಗದ ಜನರಿಗೆ ದಲಿತ ಹೆಣ್ಣುಮಕ್ಕಳ ಮೈಮಾಟವನ್ನು ಕಣ್ಣಿನ ತುಂಬ ನೋಡಿ ಅನುಭವಿಸಲು ಆಚರಿಸಿಕೊಂಡು ಬರುತ್ತಿರುವ ಅನಿಷ್ಟ ಪದ್ಧತಿ ಎಂದು ಗೋಚರವಾಗುತ್ತದೆ. ಇಂತಹ ಪದ್ಧತಿಗಳನ್ನು ಆಚರಿಸಲು ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೂ ಸಹ ಸಂಪ್ರದಾಯದ ಬಣ್ಣ ಹಚ್ಚಿ ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳುತ್ತಿರುವುದು ಈ ಸಮಾಜದಲ್ಲಿನ ಮೇಲುವರ್ಗದ ಜನರ ಹುನ್ನಾರವಾಗಿದೆ. ಈ ಹುನ್ನಾರದಿಂದ ದಲಿತ ಸಮುದಾಯದ ಮಹಿಳೆಯರನ್ನು ಯಾವ ಯಾವ ರೀತಿಯಲ್ಲಿ ಶೋಷಣೆಗೆ ಒಳಗು ಮಾಡುತ್ತಾರೆ ಎಂಬುವುದನ್ನು ಅರಿಯಲು ಸಾಧ್ಯವಿದೆ.

ಇಂತಹ ಅನಿಷ್ಟ ಪದ್ಧತಿಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಭಿನ್ನ ಭಿನ್ನ ರೀತಿಯ ಸ್ವರೂಪಗಳಲ್ಲಿ ನಡೆಯುವುದನ್ನು ಗುರುತಿಸಬಹುದಾಗಿದೆ. ಮೇಲುವರ್ಗದ ಸಮುದಾಯದ ಜನರು ದಲಿತ ಹೆಣುಮಕ್ಕಳನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಶೋಷಣೆ ಮಾಡುವ ನೆಪದಿಂದ ಈ ಅನಿಷ್ಟ ಆಚರಣೆಗಳನ್ನು ಆಚರಿಸುತ್ತಾರೆ. "ಓಕುಳಿಯಂತೆ ಇದೂ ಶ್ರಾವಣ ಮಾಸದಲ್ಲಿಯೆ ಹನುಮಂತನ ಎದುರೇ ನಡೆಯುವ ಕ್ರೀಡೆ. ಇಲ್ಲಿಯೂ ದಲಿತ ಹೆಂಗಸರೇ ಬೇಕು. ಗಂಡಾಗಲಿ–ಹೆಣ್ಣಾಗಲಿ ಅವರ ಮೈ ಮೇಲೆ ಬಟ್ಟೆ ಇರುವುದಿಲ್ಲ. ಗಂಡು–ಹೆಣ್ಣು ಸೇರಿ ನೃತ್ಯ ಮಾಡುತ್ತಾರೆ. ಅನಂತರದಲ್ಲಿ ಪ್ರಮುಖವಾದ ಅಂಶವೆಂದರೆ ಗಂಡುಗಳ ಹೆಗಲ ಮೇಲೆ ಹೆಣ್ಣುಗಳು ಕುಳಿತುಕೊಂಡು, ಹೆಣ್ಣು ಬಾಳೆ ಹಣ್ಣನ್ನು ಸುಲಿದು ಗಂಡಿನ ಬಾಯಲ್ಲಿ ಇಡುವುದಕ್ಕಾಗಿ ಹೋಗುತ್ತಾರೆ. ಗಂಡು ಬಾಯಿ ಮುಂದಕ್ಕೆ ತಂದಾಗ ತಕ್ಷಣ ಅದನ್ನು ಅಲ್ಲಿಂದ ಸರಿಸಿಬಿಡುತ್ತಾನೆ. ಅನಂತರ ಆ ಬಾಳೆಹಣ್ಣನ್ನು ತಿನ್ನದೆ ನೆಕ್ಕುತ್ತಾರೆ. ಹೆಣ್ಣು ನೆಕ್ಕಿದ ಬಾಳೆಹಣ್ಣನ್ನು, ಈ ಮೇಲು ಜಾತಿಯ ಗಂಡು

ಕಚ್ಚಿ ತಿನ್ನುತ್ತಾನೆ. ಇದು ಸಂಪ್ರದಾಯದಲ್ಲಿ ಪ್ರಧಾನವಾದ್ದದ್ದು".[೨೯] ಇಂತಹ ಪ್ರಸಂಗಗಳು ಸವದತ್ತಿ ಮತ್ತು ಕಲಬುರ್ಗಿಯ ಆಳಂದ ತಾಲ್ಲೂಕಿನ ಚಿಂಚೂರ್ ಮಾಪೂರ ತಾಯಿ ದೇವಸ್ಥಾನದ ಎದುರಿನಲ್ಲಿ ಬೇವಿನುಡುಗೆ, ಗಂಧದ ಉಡುಗೆ ತೊಟ್ಟು, ದಲಿತ ಮಹಿಳೆಯರು ಆಚರಿಸುವ ಅನಿಷ್ಟ ಪದ್ಧತಿಯಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮೇಲು ಜಾತಿಯವರ ದೌರ್ಜನ್ಯದ ಬಹಿರಂಗದ ಕುಕೃತ್ಯವಾಗಿ ಇದು ರೂಪಗೊಂಡಿದೆ ಎಂದು ಹೇಳಬಹುದು. ಇದನ್ನೇ ಸಂಪ್ರದಾಯದ ನೆಪದಿಂದ ಹಾಗೂ ದೇವರ ಹೆಸರಿನಲ್ಲಿ ಆಚರಿಸುತ್ತಾ ದಲಿತ ಮಹಿಳೆಯರನ್ನು ಬೆತ್ತಲೆಯಾಗಿ ನೋಡಿ ಆನಂದಿಸುವ ಕ್ರೂರ ಮನಸ್ಥಿತಿಯನ್ನು ಕಾಣಬಹುದು. ಇಂದಿಗೂ ಈ ಅನಿಷ್ಟ ಪದ್ಧತಿ ಈ ಭಾಗಗಳಲ್ಲಿ ಚಾಲ್ತಿಯಲ್ಲಿವೆ. ಈ ಅನಿಷ್ಟ ಪದ್ಧತಿಯಿಂದ ಇಂದು ದಲಿತ ಸ್ತ್ರೀಯರು ಜಾಗೃತರಾಗಬೇಕಾದ ಅನಿವಾರ್ಯತೆ ಇದೆ. ಮಹಿಳೆಯರು ತಮ್ಮ ಅರಿವಿನ ಪ್ರಜ್ಞೆಯನ್ನು ಬೆಳಸಿಕೊಳ್ಳಬೇಕಾಗಿದೆ. ಅಲ್ಲದೆ ಇಂತಹ ಅನಿಷ್ಟ ಪದ್ಧತಿಯ ವಿರುದ್ಧ ಪ್ರತಿಭಟನೆಯ ಕಾವನ್ನು ಹೆಚ್ಚಿಸಿ ಹೋರಾಟ ಮಾಡಿ ಈ ಪದ್ಧತಿಯಿಂದ ಬಿಡುಗಡೆಯನ್ನು ಪಡೆಯಬೇಕಾದ ಅವಶ್ಯಕತೆ ಇದೆ.

ಅರವಿಂದ ಮಾಲಗತ್ತಿ ಅವರು ಪ್ರಶ್ನಿಸುವಂತೆ: "ಹೆಣ್ಣಿನ ಶೀಲಹರಣ ಮಾಡಿ ವೇಶ್ಯೆಯಾಗಿಸಿ ಅವಳಲ್ಲಿಗೆ ಬರುವ ಗಂಡಸರು ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಹೂಡುವ ತಂತ್ರಗಳನ್ನು ಗಮನಿಸಿದರೆ ಆ ಹೆಣ್ಣುಗಳಿಗೆ ಮರ್ಯಾದೆ ಇಲ್ಲವೇ? ಸಂಪ್ರದಾಯದ ಸೋಗಿನಲ್ಲಿ ಇಂದಿಗೂ 'ಓಕುಳಿಯ ಈಸ್ಟ್‌ಮನ್ ಕಲರ್ ಚಿತ್ರ' ನೋಡುವ ಈ ಗಂಡಸರು ತಮ್ಮ ಮಡದಿಯರನ್ನು ಈ ರೀತಿ ನಿಲ್ಲಿಸಿ ಬಹಿರಂಗವಾಗಿ ಆಡುತ್ತಿರಿಯೇ? ಎಂದು ಪ್ರಶ್ನಿಸಿದರೆ ಕಣ್ಣು ಕೆಕ್ಕರಿಸುತ್ತಾರೆ. ತಮ್ಮ ಮಡದಿಯಂತೆ ಇವರೂ ಮಾನವುಳ್ಳ ಹೆಂಗಸರು ಎಂಬ ಭಾವನೆ ಬರುವುದಾದರೂ ಯಾವಾಗ?"[೩೦] ಎಂದು ಪ್ರಶ್ನೆ ಮಾಡುತ್ತಾರೆ. ಇಂಥ ಕೆಲವು ಅಮಾನವೀಯ ಸಂಪ್ರದಾಯ ಆಚರಿಸಲು ಈ ಆಧುನಿಕ ಸಂದರ್ಭದಲ್ಲಿ, ಯಾವ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ? ಇಂಥ ಸಂಪ್ರದಾಯಗಳು ದಲಿತೇತರ ಹೆಂಗಸರಿಗೆ ಯಾಕೆ ಇಲ್ಲ? ಯಾವ ದಿಕ್ಕಿನಿಂದ ಕಲ್ಲು ಹೊಡೆದರೂ ದಲಿತರಿಗೆ ಮಾತ್ರ ತಾಕಬೇಕು. ಈ ಬಗೆಯ ಸಂಪ್ರದಾಯಬದ್ಧ ಆಚರಣೆಗಳು ಈ ದೇಶದ ಸಾಂಸ್ಕೃತಿಕ ದುರಂತಗಳಾಗಿವೆ. ಶತಮಾನಗಳಿಂದಲೂ ಅಸ್ಪೃಶ್ಯರನ್ನು ಶೋಷಣೆಯ ಸಂಸ್ಕೃತಿಯೊಳಗೆಬಂಧಿಸಿಡಲಾಗಿದೆ ಎಂಬುವುದು ಅಕ್ಷರಸಹ ಸತ್ಯವಾಗಿ ಕಂಡುಬರುತ್ತದೆ.

ಇಂತಹ ಸಾಂಸ್ಕೃತಿಕ ದೌರ್ಜನ್ಯಕ್ಕೆ ಅಸ್ಪೃಶ್ಯರಲ್ಲಿರುವ ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳೇ ಕಾರಣ. ಇದು ಮೇಲು ಜಾತಿಯವರ ಒಳಮರ್ಮದ ಹುನ್ನಾರವಾಗಿದೆ. ಅನಕ್ಷರತೆ ದಲಿತರಲ್ಲಿ

ಹೆಚ್ಚಾಗಿರುವುದರಿಂದ ಮತ್ತು ಅಕ್ಷರಸ್ಥ ಕೆಲವು ದಲಿತರಲ್ಲಿ ಇನ್ನೂ ದೈವಭಯ ಮತ್ತು ದ್ವಂದ್ವದ ಅರಿವು ಇರುವುದರಿಂದ ತಪ್ಪು-ಸರಿಯಾವುದೆಂದು ನಿರ್ಧರಿಸುವುದರಲ್ಲಿ ವಿಳಂಬವಾಗುತ್ತಿರುವುದರಿಂದ ಇಂತಹ ಕೆಟ್ಟ ಪದ್ಧತಿಗಳಿಗೆ ದಲಿತ ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ. ದಲಿತ ಸಮುದಾಯದವರ ನಂಬಿಕೆಗಳು ಮತ್ತು ಆಚರಣೆಗಳು ಒಂದು ಬಗೆಯ ವೈಜ್ಞಾನಿಕ ನಿಲುವುಗಳನ್ನು ಒಳಗೊಂಡಿದ್ದರೇ, ದಲಿತೇತರರು ದಲಿತರನ್ನು ಕುರಿತು ಇಟ್ಟುಕೊಂಡಿರುವ ನಂಬಿಕೆಗಳು ಅಮಾನವೀಯ ಕ್ರೂರತನಕ್ಕೆ ಸಾಕ್ಷಿಯಾಗಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಈ ಮುಂದಿನ ಎರಡು ಸಂಗತಿಗಳನ್ನು ಪರಿಶೀಲಿಸಿದ್ದರೆ ಇವರ ಮನಸ್ಥಿತಿಗಳು ಅರ್ಥವಾಗುತ್ತವೆ.

ಎನ್.ಕೆ. ಹನುಮಂತಯ್ಯ ಅವರು ತಮ್ಮ ಆತ್ಮಕಥನವಾದ 'ಹೊಲಗೇರಿ ಹಾದಿಯಲಿ ಸೋಬಾನೆ ಪದಗಳು' ಎಂಬ ಕೃತಿಯಲ್ಲಿ ಮೂಢನಂಬಿಕೆಯ ಹಿನ್ನೆಲೆಯಲ್ಲಿ ದಲಿತರು ಹಾಲು, ಮೊಸರು, ಮಜ್ಜಿಗೆಯನ್ನು ಪಡೆಯಲು ಯೋಗ್ಯರಲ್ಲ. ಇವರು ಯಾವಾಗಲು ನಾವು ತಿಂದು ಬಿಟ್ಟ ಎಂಜಲ ಅನ್ನವನ್ನೇ ತಿಂದು ಬದುಕಲು ಮಾತ್ರ ಅರ್ಹರು ಎಂದು ಪ್ರತಿಪಾದಿಸುತ್ತಾ, ಜಾತಿಯ ಹಿನ್ನೆಲೆಯಲ್ಲಿ ದಲಿತರನ್ನು ಹೇಗೆ ಶೋಷಿಸುತ್ತಾರೆ ಎಂಬುವುದನ್ನು ದಾಖಲಿಸಿದ್ದಾರೆ. "ಲಿಂಗಾಯ್ತರು ನಮ್ಮನ್ನೆಲ್ಲಾ ಅಸಹ್ಯದಿಂದ ಕಾಣುತ್ತಿದ್ದರು. ಹಾಲು, ಮಜ್ಜಿಗೆಯನ್ನು ಇತರೆ ಜಾತಿಗಳ ಜನರಿಗೆ ಕೊಡುತ್ತಿದ್ದರು. ಆದರೆ, ನಮ್ಮ ಜಾತಿಯವರಿಗೆ ಮಾತ್ರ ಕೊಡುತ್ತಿರಲಿಲ್ಲ. ನಮಗೆ ಹಾಲು ಮಜ್ಜಿಗೆ ಕೊಟ್ಟರೆ ಅವರ ಹಸು, ಎಮ್ಮೆಗಳು ಹಾಲು ಕೊಡುವುದನ್ನು ನಿಲ್ಲಿಸುತ್ತವೆ ಹಾಗೂ ರಕ್ತ ಕಾರಿಕೊಂಡು ಈ ಹಸು ಎಮ್ಮೆಗಳು ಸಾಯುತ್ತವೆ ಎಂಬ ನಂಬಿಕೆ ಮೇಲ್ಜಾತಿಯವರಿಗಿತ್ತು".[೩೧] ಈ ಹಿನ್ನೆಲೆಯನ್ನು ಗಮನಿಸಿದಾಗ ಕೆಳಜಾತಿಯ ಜನರು ಮೇಲುಜಾತಿಯ ಜನರು ಸೇವಿಸುವ ಆಹಾರವನ್ನು ಸೇವಿಸುವಂತಿಲ್ಲ. ಒಂದು ವೇಳೆ ಈ ನಮ್ಮ ಆಹಾರ ಪದ್ಧತಿಯ ರುಚಿ ಇವರಿಗೆ ಗೊತ್ತಾದರೆ ನಾವು ಹೇಳಿದಂತೆ ಕೇಳದೆ ನಮ್ಮ ವಿರುದ್ಧವೇ ಪ್ರತಿಭಟನೆ ಮಾಡಿದರೆ ನಮ್ಮ ಕೆಲಸಗಳನ್ನು ಮಾಡುವವರು ಯಾರು? ಎಂಬ ಹೀನ ಮನಸ್ಥಿತಿಯ ಆತಂಕವನ್ನು ಸೃಷ್ಟಿಸಿರುವುದನ್ನು ಕಾಣಲು ಸಾಧ್ಯವಿದೆ. ಇಂತಹ ಹಲವಾರು ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳಿಂದ ದಲಿತರು ದಲಿತೇತರರಿಂದ ಒಂದಲ್ಲ ಒಂದು ರೀತಿಯಲ್ಲಿ ಅವಮಾನ ಹಾಗೂ ಶೋಷಣೆಯನ್ನು ಅನುಭವಿಸುತ್ತಾ ಬಂದಿದ್ದಾರೆ.

ಇದೇ ಬಗೆಯ ಪ್ರಸಂಗವನ್ನು ನೇತ್ರ ಅವರು ತಮ್ಮ ಆತ್ಮಕಥನವಾದ 'ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ' ಎಂಬ ಕೃತಿಯಲ್ಲಿ ತಾವು ಅನುಭವಿಸುವ ಜಾತಿಯ ಅವಮಾನವನ್ನು ದಾಖಲಿಸುತ್ತಾರೆ. "ಒಮ್ಮೆ ಕಡಪದಿಂದ ಚಿಕ್ಕಪ್ಪ ಬಂದಿದ್ರು. ಮಜ್ಜಿಗೆ ತರಲು ಗೌಡರ ಮನೆ ಹತ್ರ ಹೋಗಿದ್ದೆ.

ಅವರು ಕೊಡಲಿಲ್ಲ. ಕೇಳಿದ್ದಕ್ಕೆ ಅವರು ಹೇಳಿದ ಕಾರಣ, ನಿಮ್ಮವರಿಗೆ ಮಜ್ಜಿಗೆ ಹಾಕಿದರೆ ನಮ್ಮ ಮನೆಯಲ್ಲಿ ಕರೆಯುವ ಹಸುವಿನ ಹಾಲು ನಿಂತುಹೋಗುತ್ತೆ ಅಂತ ಕೇಳಿ ಸುಮ್ಮನೆ ಮನೆಗೆ ವಾಪಸ್ಸು ಬಂದೆ."[೩೨] ಈ ಎರಡೂ ನಂಬಿಕೆಗಳು ಪ್ರಕೃತಿದತ್ತವಾಗಿ ಬಂದವಲ್ಲ. ದೈವೀಕವಾಗಿಯೂ, ವೈಜ್ಞಾನಿಕವಾಗಿಯೂ ಎಂದಿಗೂ ಬಂದಿರುವಂತಹ ಸತ್ಯವು ಅಲ್ಲ. ಇದು ಚಿಕ್ಕ ಚಿಕ್ಕ ಸಂಗತಿಯಾದರೂ ಸಹ ಮೇಲ್ವರ್ಗದವರು ದಲಿತರನ್ನು ಆಹಾರದ ಹಿನ್ನೆಲೆಯಲ್ಲಿ ಯಾರು ಯಾರು ಯಾವ ಯಾವ ಆಹಾರವನ್ನು ಸೇವಿಸಿದ್ದರೇ ಒಳ್ಳೆಯದಾಗುತ್ತದೆ. ಇಲ್ಲ ಇದರಿಂದ ಆಗುವ ಅನಾಹುತವೇನು ಎಂಬ ಅಮಾನವೀಯ ಮೌಢ್ಯತೆಯ ಮಾನಸಿಕ ಮಟ್ಟವನ್ನು ಹಾಗೂ ಮೇಲು ವರ್ಗದ ಜನರ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಮನಸ್ಥಿತಿಯ ನಿಲುವುಗಳಿಂದ ಮೊದಲು ದಲಿತರು ಜಾಗೃತಿಯ ಸಂಕೇತಗಳಾಗಿ ಹಾಗೂ ಸ್ವಾಭಿಮಾನದ ಬದುಕನ್ನು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಮೂಡಬೇಕಾಗಿದೆ.

ದಲಿತರ ಸಾಮಾಜಿಕ ಜೀವನವು ನಿಸರ್ಗಮುಖಿಯಾದುದು. ಹೀಗಾಗಿಯೇ ಅವರು ಭೂಮಿ ಮತ್ತು ಆಕಾಶದೊಂದಿಗೆ ನಿಕಟವಾದ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಅದು ತಾಯಿ ಮಗುವಿನ ಸಂಬಂಧದಂತೆ. ಇಂತಹ ಸಂಬಂಧದ ಹಿನ್ನೆಲೆಯನ್ನು ಸಂಜೀವರಾಯ ಅವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ತಮ್ಮೂರಿನ ಕದ್ರಜ್ಜನ ನಿಸರ್ಗದ ನಂಬಿಕೆಗಳನ್ನು ಈ ಮುಂದಿನಂತೆ ಹೇಳಿದ್ದಾರೆ: "ಭರಣಿ ಮಳೆ ಧರಣಿಗೆ ಬೀಳುವ ಮೊದಲೇ ಬೆಟ್‌ದಾಗೆ ಮುಂಗಾರುಮೊಗ್ಗುಗಳನ್ನು (ಮುಂಗಾರು ಮೊಳಕೆಗಳು) ಹುಡುಕುವುದು ಒಂದು ಹುಡುಗಾಟ! ಇದಕ್ಕೆ ಪಕ್ವವಾಗಿ ಮೊಗ್ಗುಗಳನ್ನು ಹುಡುಕ್ತಿದ್ದಿದ್ದು ಕದ್ರಜ್ಜ! ಕದ್ರಜ್ಜ ತನ್ನ ಕಾಲಜ್ಞಾನವನ್ನೂ ರಾಗಿಕಲ್ಲು ಗುಡ್ಡದ ಬಳಿ ಮುಂಗಾರುಮಳೆಯ ಬಗ್ಗೆ ವಾಸ್ತವ ಚಿತ್ರಣವನ್ನೇ ಮುಂದಿಡುತ್ತಿದ್ದುದನ್ನೂ ನಾವು ಬಾಯಿ ಬಾಯಿ ಬಿಟ್ಟುಕೊಂಡು ಕೇಳುತ್ತಿದ್ದೆವು. ಮುಂಗಾರು ಮೊಳಕೆಗಳೇನಾದ್ರೂ ಅರ್ಧ ಮೊಳ ಮೇಲಕ್ ಬಂದಿದ್ರೆ ಈ ವರ್ಷ ಅರ್ಧ ಮಳೆ, ಅರ್ಧ ಬೆಳೆ. ಇಲ್ಲ ಪೂರ್ತಿ ಮೊಳಕೆಗಳು ಸಂತೃಪ್ತಿಯಾಗಿ ಮೇಲೆ ಒಡೆದಿದ್ರೆ ಈ ವರ್ಷ ಪೂರ್ತಿ ಸಂತೃಪ್ತಿ ಮಳೆ ಬೆಳೆ ಅಂತ ತನ್ನ ಕಾಲಜ್ಞಾನದಿಂದ ಮಳೆಗಾಲದ ಹವಾಮಾನವನ್ನೇ ನಿರ್ಧರಿಸುತ್ತಿದ್ದ. ಭರಣಿ ಮಳೆಯ ಬರುವಿಕೆಯನ್ನು ಭರಣಿ ಹುಳುಗಳು ಹೊಂಗೆ ಮರದಾಗೆ ಕುಂತು ಗುಂಯ್ ಗುಂಯ್ ಎಂಬ ಶಬ್ದ ಕೂಗು ಕಚಗುಳಿಯಿಡ್ತಿತ್ತು"[೩೩]. ಈ ಬಗೆಯ ನಂಬಿಕೆಗಳು ದಲಿತ ಸಮುದಾಯದಲ್ಲಿ ಜೀವನಾಡಿಯಾಗಿ ಕಂಡುಬರುತ್ತವೆ. ಇಂತಹ ಹಲವಾರು ನಂಬಿಕೆಗಳಿಂದ ಯಾರಿಗೂ ತೊಂದರೆಯಾಗದಂತೆ ಕಾಲಜ್ಞಾನದ ಸತ್ಯವನ್ನು ಹೇಳುವ ಸಂಸ್ಕೃತಿಯನ್ನು ದಲಿತ ಸಮುದಾಯದ ಅನುಭವಿಯ ಹಿರಿಕರು ಮೈಗೂಡಿಸಿಕೊಂಡಿದ್ದರು.

ಎನ್.ಕೆ. ಹನುಮಂತಯ್ಯ ಅವರು ಈ ಬಗೆಯ ನಂಬಿಕೆ ಮತ್ತು ಆಚರಣೆಗಳನ್ನು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ನಮ್ಮ ಜನರು ಮರಗಿಡಗಳನ್ನೆ ನಂಬಿ ಮನೆದೇವರಾಗಿ ಮಾಡಿಕೊಂಡು ವಿವಿಧ ಬಗೆಯ ಆಚರಣೆಗಳನ್ನು ಮಾಡುತ್ತಿದ್ದುದನ್ನು ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಅವರ ಹಟ್ಟಿಯಲ್ಲಿ ಗಿಡದಮ್ಮ ಹಾಗೂ ಮುಳ್ಳುಕಟ್ಟಮ್ಮ ಎಂಬ ಎರಡು ಬಗೆಯ ಮನೆದೇವರ ಒಕ್ಕಲಿನವರಿದ್ದಾರೆ. ತಂಗಡೆ ಗಿಡವನ್ನು ಆರಾಧಿಸುವವರು ಗಿಡದಮ್ಮನ ಒಕ್ಕಲು. ಈಚಲು ಮರವನ್ನು ಪೂಜಿಸುವವರು ಮುಳ್ಳುಕಟ್ಟಮ್ಮನ ಒಕ್ಕಲು. ಈ ಎರಡು ದೇವತೆಗಳು ಅಕ್ಕ ತಂಗಿಯರೆಂದು, ಇವರಿಬ್ಬರ ಮಧ್ಯೆ ಜಗಳ ಇರುವುದರಿಂದ ಒಬ್ಬರಿಗೊಬ್ಬರಿಗೆ ದ್ವೇಷವಿದೆಯೆಂದು ಹಟ್ಟಿಯ ಜನ ಮಾತನಾಡಿಕೊಳ್ಳುತ್ತಾರೆ. ಗಿಡದಮ್ಮನನ್ನು ಪೂಜಿಸುವ ಕಡೆ ಮುಳ್ಳುಕಟ್ಟಮ್ಮನ ಭಕ್ತರು ಬರುವಂತಿರಲಿಲ್ಲ. ಗಿಡದಮ್ಮನ ಭಕ್ತರು ಮುಳ್ಳುಕಟ್ಟಮ್ಮನ ಪೂಜೆಗೆ ಹೋಗುವಂತಿರಲಿಲ್ಲ. ಏಕೆಂದರೆ ಲೇಖಕರೆ ಹೇಳುವಂತೆ, "ನಮ್ಮ ಮನೆ ದೇವರು ತಂಗಡೆ ಗಿಡದಮ್ಮ. ಒಮ್ಮೆ ನನಗೆ ಜ್ವರ ಬಂತು. ದೇವರಿಗೆ ಹರಕೆ ತೀರಿಸಿಲ್ಲ. ಆದ್ದರಿಂದ ಮಗುವಿನ ಮೇಲೆ ಗಿಡದಮ್ಮ ಹೆಗಲೇರಿದೆ ಎಂದು ಅಪ್ಪ-ಅವ್ವ ಭಾವಿಸಿದರು. ಆಗ ಗಿಡದಮ್ಮನ ಕಾರಣದಿಂದಲೇ ತೊಂದರೆಯಾಗುತ್ತಿದೆ ಎಂಬುದನ್ನು ಪರೀಕ್ಷೆ ಮಾಡುತ್ತಿದ್ದರು. ಹಿರೀಕರಿಂದ ಆಚರಿಸಿಕೊಂಡ ಆ ಪರೀಕ್ಷೆ ಹೀಗಿತ್ತು; ಮೂರು ಮನೆಗಳಿಂದ ತೆಂಗಿನಗರಿ, ಮೂರು ಮೆದೆಗಳಿಂದ ಹುಲ್ಲು ಹಾಗೂ ಮೂರು ಮೆಣಸಿನಕಾಯಿಗಳನ್ನು ಒಲೆಯೊಳಗೆ ಹಾಕುತ್ತಿದ್ದರು. ಕಾರ ಅರೆಯುವ ಗುಂಡು ಕಲ್ಲಿಗೆ ಮೂರು ಎಳೆ ನೂಲನ್ನು ಕಟ್ಟಿ ಒಲೆಯ ಮೇಲಿಡುತ್ತಿದ್ದರು. ಗಿಡದಮ್ಮನನ್ನು ನೆನೆದು ಬೆಂಕಿ ಹಚ್ಚುತ್ತಿದ್ದರು. ಬೆಂಕಿ ಧಗಧಗ ಉರಿಯುತ್ತಿತ್ತು. ಗಿಡದಮ್ಮನ ಕಾರಣದಿಂದ ತೊಂದರೆಯಾಗುತ್ತಿದ್ದರೆ, ಮೆಣಸಿನಕಾಯಿಯಿಂದ ಘಾಟು ಬರುತ್ತಿರಲಿಲ್ಲ. ಗುಂಡು ಕಲ್ಲಿಗೆ ಕಟ್ಟಿದ ನೂಲಿನ ಎಳೆ ಸುಟ್ಟು ಹೋಗುತ್ತಿರಲಿಲ್ಲ. ಆ ನೂಲನ್ನು ಮತ್ತೆ ಬಿಚ್ಚಿ ಜ್ವರ ಬಂದವರ ತೋಳಿಗೆ ಕಟ್ಟಿ ಇಂಥ ದಿನ ತಳಿಗೆ ಮಾಡುತ್ತೇವೆ ಎಂದು ಹರಕೆ ಹೊತ್ತುಕೊಳ್ಳುತ್ತಿದ್ದರು. ಊರಾಚೆಯ ತಂಗಡಿಗಿಡದ ಬಳಿ ಹೋಗಿ ಅಲ್ಲೆಲ್ಲಾ ಶುಚಿಗೊಳಿಸುತ್ತಿದ್ದರು. ಏಳು ಪುಟ್ಟ ಕಲ್ಲುಗಳನ್ನು ಆ ಗಿಡದ ಬುಡದಲ್ಲಿಟ್ಟು ಅರಿಶಿಣ, ಕುಂಕುಮ, ಹೂವು, ಹಣ್ಣು, ಕಾಯಿಗಳಿಂದ ಶೃಂಗರಿಸುತ್ತಿದ್ದರು. ಒಂದು ಹುಂಜವನ್ನು ಬಲಿ ಕೊಡುತ್ತಿದ್ದರು. ಅದೇ ಸ್ಥಳದಲ್ಲಿ ಅಡುಗೆ ಮಾಡಿ ಎಡೆಯಿಡುತ್ತಿದ್ದರು. ಸೇಂಧಿ ಬಾಟಲಿಯನ್ನು ದೇವರ ಮುಂದಿಟ್ಟು ಗಟೆ ಉಕ್ಕಿಸುತ್ತಿದ್ದರು. ಅನಂತರ ಹತ್ತಾರು ಜನ ಆ ಬಯಲಲ್ಲೇ ಊಟ ಮಾಡುತ್ತಿದ್ದರು."[೩೪] ಹೀಗೆ ದಲಿತರು ಗಿಡದಮ್ಮನ ಹರಕೆ ತೀರಿಸುತ್ತಾರೆ. ಇಲ್ಲಿ ನಂಬಿಕೆ ಎನ್ನುವುದು ಬಹಳ ಮುಖ್ಯ. ಈ ತಾಯಿಯ ನಂಬಿಕೆಯಿಂದ ಯಾರಿಗಾದರೂ ಜ್ವರ ಹಾಗೂ ಮುಂತಾದ ಖಾಯಿಲೆಗಳು ಬಂದರೆ ತಾಯಿಯನ್ನು ಆರಾಧನೆ ಮಾಡುವುದರ ಮೂಲಕ ನಾವು ಗುಣಮುಖರಾಗುತ್ತೇವೆ ಎಂದು ಈ ಜನರು ನಂಬಿದ್ದರು. ಈ ಬಗೆಯ

ಹರಕೆಗಳು ಮತ್ತು ನಂಬಿಕೆಗಳು ದಲಿತ ಸಮುದಾಯದವರಲ್ಲಿ ಮಾನಸಿಕ ನೆಮ್ಮದಿ ಮತ್ತು ತೃಪ್ತಿಯನ್ನು ನೀಡುತ್ತಿದ್ದವು ಎಂದರೆ ಆಶ್ಚರ್ಯವಾಗುತ್ತದೆ. ಆಧುನಿಕ ಕಾಲದ ವೈದ್ಯಕೀಯ ವ್ಯವಸ್ಥೆಯೊಂದಿಗೂ ಇಂತಹ ನಂಬಿಕೆ, ಆಚರಣೆಗಳು ಬಹಳಷ್ಟು ಜನರಲ್ಲಿ ಸುಧಾರಣೆ ತರಬಯಸುತ್ತವೆ ಎನ್ನುವುದು ಸಹ ಒಂದು ಬಗೆಯ ವಿಸ್ಮಯವೆ ಸರಿ.

ದಲಿತ ಸಮಾಜದಲ್ಲಿ ಇಂಥ ನಂಬಿಕೆಗಳಿಗಿಂತ ಭಿನ್ನವಾಗಿ ಆಧುನಿಕ ಸಂದರ್ಭದಲ್ಲಿ ತಳಸಮುದಾಯದ ಜನರು ದೇವರ ಮೌಢ್ಯತೆಗೆ ಒಳಗಾಗಿ, ದೇವರ ಹೆಸರಲ್ಲಿ ತಮ್ಮನ್ನು ಶೋಷಿಸುತ್ತಿರುವ ಹಾಗೂ ವಂಚಿಸುತ್ತಿರುವ ಸಂಗತಿಗಳನ್ನು ತಮ್ಮ ಅನುಭವದ ಸತ್ಯಗಳಿಂದ ದಲಿತ ಆತ್ಮಕಥನಕಾರರು ನಿರೂಪಿಸಿದ್ದಾರೆ. ಎಂ. ಪರಶಿವಮೂರ್ತಿ ಅವರು ಭೀಕರ ಖಾಯಿಲೆಗಳನ್ನು ವಾಸಿಮಾಡುವ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿರುತ್ತಾರೆ. ಅಲ್ಲಿ ಇಬ್ಬರು ಕಾರ್ಯಕರ್ತರು ನಡೆಯಲಾರದ ಯುವತಿಯೊಬ್ಬಳನ್ನು ವೇದಿಕೆಯ ಮೇಲೆ ಹೊತ್ತು ತಂದು ಸೂಟುಧಾರಿಯ ಮುಂದೆ ನಿಲ್ಲಿಸಿ, 'ಈಕೆ ಆರು ವರ್ಷಗಳ ಕೆಳಗೆ ತೀವ್ರ ಜ್ವರಕ್ಕೆ ಒಳಗಾಗಿ, ಅಂದಿನಿಂದ ನಡೆಯಲು ಆಗದೇ ಹಾಸಿಗೆ ಹಿಡಿದಿದ್ದಾಳೆ' ಅಂತ ಮೈಕ್ ಬಳಿ ನಿಂತು ನೆರೆದಿದ್ದವರಿಗೆಲ್ಲಾ ಕೇಳಿಸುವ ಹಾಗೆ ಹೇಳುತ್ತಾರೆ. ಸೂಟುದಾರಿಯು ಆಕೆಯ ಹಣೆಯ ಮೇಲೆ ಕೈಯಿಟ್ಟು ಎತ್ತರದ ಧ್ವನಿಯಲ್ಲಿ ಪ್ರಾರ್ಥನೆ ಮಾಡಿ, 'ಈಗ ನೀನು ಕಾಯಿಲೆಯಿಂದ ಸಂಪೂರ್ಣ ಗುಣಮುಖಳಾಗಿದ್ದೀಯಾ' ಅಂತ ದೃಢವಾಗಿ ಹೇಳಿ, ಅವಳ ಸಹಚರರಿಗೆ ಈಗ ನೀವು ಅವಳ ಕೈಬಿಡಿ' ಅಂದನು. ಇಷ್ಟು ಹೊತ್ತು ಕಣ್ಣು ಮುಚ್ಚಿ ನಿಶ್ಚಲವಾಗಿದು, ಆ ಯುವತಿ ಒಮ್ಮೆಲೇ ಕಣ್ಣು ತೆರೆದು ವೇದಿಕೆಯ ಮೇಲೆ ಸಾಮಾನ್ಯರಂತೆ ಅತ್ತಿಂದಿತ್ತ ನಡೆದಾಡಿದ್ದು ಮಾತ್ರವಲ್ಲ ಕುಣಿದಾಡಿದಳು. ಆ ಚಮತ್ಕಾರವನ್ನು ನೋಡಿ, ಇಡೀ ಜನಸ್ತೋಮ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟುತ್ತಾ, ಬೆರಗುಗಣ್ಣಿಂದ ನೋಡುತ್ತಾ ಭಾವ ಪರವಶರಾಗಿಬಿಡುತ್ತಾರೆ. ಇಲ್ಲಿಯತನಕ ದೇವರ ಪ್ರಾರ್ಥನೆಯಲ್ಲಿ ತಲ್ಲೀನತೆಯನ್ನು ಕಂಡುಕೊಂಡಿದ್ದ ಲೇಖಕರಿಗೆ ಒಮ್ಮೆಲೇ ಭ್ರಮನಿರಶನವಾಗಿಬಿಡುತ್ತದೆ. ಇದೆಲ್ಲಾ ಹೇಗೆ ಸಾಧ್ಯ? ಎಂದು ಆಲೋಚಿಸುತ್ತಾರೆ.

ಆರು ವರ್ಷಗಳ ಕಾಲ ತನ್ನ ಪಾದವನ್ನು ಎಳ್ಳಷ್ಟು ಬಳಸದ ಈಕೆ ಏಕಾಏಕಿ ಹೀಗೆ ಕುಣಿಯುವಂತಾಗಲು ವೈಜ್ಞಾನಿಕ ಆಧಾರವೇನು? ಇದು ಹಗಲು ದರೋಡೆಯಲ್ಲದೇ ಮತ್ತೇನು? ಪಾಪ ಇಂತಹ ಅಮಾಯಕ ಮುಗ್ಧ ಮಕ್ಕಳ ಮನದಲ್ಲಿ ಸುಳ್ಳು ಭರವಸೆ ಹುಟ್ಟಿಸಿ ಹೀಗೆ ಮಾಡುವುದು ಅನ್ಯಾಯವಲ್ಲವೇ, ಮೋಸ ಮಾಡಿದಂತಲ್ಲವೇ? ಎಂಬಂಥ ಪ್ರಶ್ನೆಗಳು ಅವರನ್ನು ಕಾಡುತ್ತವೆ. ವಿಪರ್ಯಾಸ ಅಂದರೆ, ದೂರದ ಊರುಗಳಿಂದ ಬಂದಿದ್ದ ಕುಂಟರು, ಕುರುಡರು,

ಅಂಗವಿಕಲರು, ವಾಸಿಯಾಗದ ಕಾಯಿಲೆಯಿಂದ ನರಳುತ್ತಿದ್ದವರು ನೂರಾರು ಮಂದಿ ವೇದಿಕೆಯ ಬಳಿ ಹೋಗಲಾರದೇ ತಳಮಳಿಸುತ್ತಿದ್ದರು. ಅವರಿಗೆ ವೇದಿಕೆಯ ಮೇಲೆ ಹೋಗಲು ಅವಕಾಶ ನೀಡದೆ ಇರುವುದು ಕಂಡುಬರುತ್ತಿತ್ತು.

ಅಲ್ಲಿ ಹೋಗಿದ್ದ ಜನರಲ್ಲಿ ಮೊದಲೇ ಆಯ್ಕೆ ಮಾಡಿಕೊಂಡ ಹಾಗೂ ಅವರಿಂದ ಹಣಪಡೆದ ವ್ಯಕ್ತಿಯಾಗಿರುವುದು ಗೊತ್ತಾಗುತ್ತದೆ. ಈ ಮೋಸದ ಜಾಲಕ್ಕೆ ಶಾಮಿಲಾದವರು ನಡೆಸುವ ಒಳತಂತ್ರ ಎಂಬುವುದು ಸಹ ತಿಳಿಯುತ್ತದೆ. ಮುಂದೆ ಲೇಖಕರು ಹೇಳುವಂತೆ, "ಸೂಟುಧಾರಿ ಮತ್ತೊಂದು ಆಶಾಕಿರಣದ ಬಾಂಬ್ ಎಸೆದ, 'ಸಭೆಯಲ್ಲಿ ಯಾರೂ ಇಂತಹ ಅಂಗವಿಕಲತೆಯಿಂದ ನರಳುತ್ತಿರುವರೋ ಅವರೆಲ್ಲರೂ ನನ್ನ ಜೊತೆ ದನಿಗೂಡಿಸಿ ಪ್ರಾರ್ಥಿಸಿ ನಿಮಗೆ ದೇವರಲ್ಲಿ ಅಚಲ ವಿಶ್ವಾಸವಿದ್ದಲ್ಲಿ ಗುಣಮುಖರಾಗುವಿರಿ' ಅಂತ ಹೇಳಿ, ಸಭೆಯನ್ನು ಮುಗಿಸಿ ಹೋಗಿಬಿಟ್ಟನು. ಇಷ್ಟು ಹೊತ್ತು ತನ್ನ ತಿರುಚಿಕೊಂಡ ಕಾಲುಗಳು ನೆಟ್ಟಗಾಯಿತೋ ಏನೋ ಅಂತ ಅದನ್ನೇ ಮುಟ್ಟಿ ನೋಡಿಕೊಳ್ಳುತ್ತಿದ್ದ ನನ್ನ ಮುಂದೆ ಕುಳಿತಿದ್ದ ಆ ಮುಗ್ಧ ಪುಟ್ಟ ಬಾಲಕ ನಿಲ್ಲಲು ಪ್ರಯತ್ನಿಸಿ ಕೆಳಗೆ ಬಿದ್ದುಬಿಟ್ಟ. ಮನದ ತುಂಬಾ ಆಸೆಗಳನ್ನು ತುಂಬಿಕೊಂಡು ತನ್ನ ಕಾಲಿಲ್ಲದ ಮಗನನ್ನು ಕಂಕುಳಲ್ಲಿ ಹೊತ್ತು ತಂದಿದ್ದ. ಆ ಬಡಕೂಲಿ ಹೆಂಗಸು ಕಣ್ಣಲ್ಲಿ ನೀರು ಸುರಿಸುತ್ತಾ, ಸ್ವಲ್ಪ ನಡೆಯೋ ಮಗನೇ ವಾಸಿಯಾಗಿರಬೋದು ಕಣೋ ನಡೆಯೋ ಕಂದ ಅನ್ನುತ್ತಿದ್ದರೆ ಮತ್ತೆ ಮತ್ತೆ ಪ್ರಯತ್ನಿಸಿ ಕೆಳಗೆ ಬೀಳುತ್ತಾ, 'ಇಲ್ಲ ಕಣವ್ವೋ ವಾಸಿಯಾಗಿಲ್ಲ ಕಣವ್ವೋ!! ಅಂತ ಅಳಲು ತೊಡಗಿದ್ದನ್ನು ಕಂಡು ನನಗೆ ದುಃಖ ಒತ್ತರಿಸಿಕೊಂಡು ಬಂದು, ನಾನೂ ಸಹ ಅವರೊಂದಿಗೆ ಅತ್ತುಬಿಟ್ಟೆ"[೩೫] ಎನ್ನುತ್ತಾರೆ. ಈ ಬಗೆಯ ನಂಬಿಕೆಯಿಂದ ಸಾವಿರಾರು ಜನರು ಹೇಗೆ ಮೋಸಹೊಗುತ್ತಾರೆ ಎಂಬುವುದನ್ನು ಆತ್ಮಕಥನಕಾರರು ಕಟ್ಟಿಕೊಡುತ್ತಾರೆ. ಅಲ್ಲದೆ ತಮ್ಮ ಮುಖದ ಮೇಲಿದ್ದ ಬಿಳುಪು ಮಚ್ಚೆಗಳು ವಾಸಿಯಾಗದಿದ್ದುದನ್ನು ಕಂಡು ಅವರಿಗೆ ಭ್ರಮನಿರಸನವಾಗುತ್ತದೆ. ಸಾಧ್ಯವಾಗದಿರುವುದನ್ನು ಸಾಧ್ಯಪಡಿಸುತ್ತೇವೆ ಎಂದು ಮುಗ್ಧ ಜನರನ್ನು ನಂಬಿಸುವುದು ವಂಚನೆಯಲ್ಲವೇ? ದೇವರ ಹೆಸರಿನಲ್ಲಿ ತಾವು ಮಾಡುತ್ತಿರುವುದು ವಂಚನೆ ಅಂತ ಅವರ ಒಳಮನಸ್ಸಿಗೆ ಅರಿವಿಲ್ಲವೇ? ಅರಿವಿದ್ದೂ ಅಂತಹ ಕೆಲಸವನ್ನು ಮುಂದುವರೆಸಿಕೊಂಡು ಹೋಗುವವರು ವಂಚಕರಲ್ಲವೇ? ಅಂತಹ ವಂಚಕರನ್ನು ದೇವರ ಸಮಾನರೆಂದು ಪೂಜಿಸುವ ನಾವು ಮೂಢರಲ್ಲವೇ? ಇಂತಹ ಹಲವಾರು ಪ್ರಶ್ನೆಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಮೂಡಿಬರಬೇಕೆಂಬ ಆಶಯವನ್ನು ಕೃತಿಕಾರರು ಕಟ್ಟಿಕೊಡುತ್ತಾರೆ.

ಮತ್ತೊಂದು ಸಂಗತಿಯನ್ನು ಇಲ್ಲಿ ದಾಖಲಿಸುತ್ತಾರೆ. ಒಮ್ಮೆ ಅನಾರೋಗ್ಯದ ನಿಮಿತ್ತ ಡಾಕ್ಟರ್ ಬಳಿಗೆ ಲೇಖಕರು ಹೋಗುತ್ತಾರೆ. ಆಗ ಆ ವೈದ್ಯರು ಮೂಢನಂಬಿಕೆಯ ಹಿನ್ನೆಲೆಯಲ್ಲಿ

ಹೇಳಿದ ಪರಿಕಲ್ಪನೆಯನ್ನು ದಾಖಲಿಸಿದ್ದಾರೆ. “ಸಾರ್, ಏನು ಔಷಧಿ ಬರೆದುಕೊಡಲ್ವಾ? ಅಂತ ಕೇಳಿದೆ. ‘ಇದಕ್ಕೇನೂ ಔಷಧಿ ಇಲ್ಲಾರಿ. ನಿಮಗಿರುವುದು Skin Pigmentation and warts ನಂಜನಗೂಡು ಬಳಿ ಹುಲ್ಲುರಿ ಬಸವ ಅಂತ ಸಣ್ಣ ದೇವಸ್ಥಾನವಿದೆ. ಅಲ್ಲಿಗೆ ಹೋಗಿ ಒಂದ್ಸಲ ಹರಕೆ ಹೊತ್ತುಕೊಳ್ಳಿ. ವಾಸಿಯಾಗುತ್ತೆ’ ಅಂತ ಹೇಳಿ ಒಳಗೆ ಹೋಗಿಬಿಟ್ಟರು. ಅಲ್ಲಿಗೆ ಹೋಗಿ ಹರಕೆ ಕಟ್ಟಿಕೊಳ್ಳಿ ಅಂತ ಹೇಳೊದಿಕ್ಕೆ ಇವರು ನನ್ನನ್ನು ಇಲ್ಲಿಗೆ ಕರೆದರಾ? ಒಬ್ಬ ಎಂ.ಬಿ.ಬಿ.ಎಸ್. ಡಾಕ್ಟರ್ ಆಗಿ ಅಂತಹ ಮೂಢನಂಬಿಕೆಯ ಮಾತು ಹೇಳೋದಿಕ್ಕೆ ನಾಚಿಕೆಯಾಗಬೇಕು. ಎಂತಹ ಮೋಸದ ಜನ ಇವರು. ಡಾಕ್ಟರಾ ಇವರು? ವಂಚಕರು. ಆತ್ಮಸಾಕ್ಷಿ ಅನ್ನುವುದು ಎಳ್ಳಷ್ಟು ಇರದ ಶುದ್ಧ ಲಫಂಗರು”[೩೬] ಎಂದು ಟೀಕಿಸುತ್ತಾರೆ. ಆತ್ಮಕಥನಕಾರರನ್ನು ಮುಟ್ಟಿ ನೋಡಿ ಚಿಕಿತ್ಸೆ ನೀಡದಿರಲು ಕಾರಣವೇನೆಂದರೆ ಇವರು ಅಸ್ಪೃಶ್ಯರು ಎಂಬ ವಿಷಯ ಗೊತ್ತಾದರಿಂದ. ಈ ಕಾರಣಕ್ಕಾಗಿ ದೇವರು ಎಂಬ ಪರಿಕಲ್ಪನೆಯಲ್ಲಿ ನೀನು ಹೋಗಿ ನಂಜನಗೂಡಿನ ಹುಲ್ಲುರಿ ಬಸವನಿಗೆ ಹರಿಕೆ ಹೊರು ನಿನಗೆ ಗುಣಮುಖವಾಗುತ್ತದೆ ಎಂದು ಇವರನ್ನು ಮುಟ್ಟದೆಯೆ ಕಳುಹಿಸುತ್ತಾರೆ. ಮೇಲುಜಾತಿಯ ವೈದ್ಯರು ಹಾಗೂ ಅಕ್ಷರಕಲಿತ ಈ ಜನರು ಜಾತಿಯ ಹೆಸರಿನಲ್ಲಿ ಹೇಗೆ ಶೋಷಣೆ ಮಾಡುತ್ತಾರೆ ಎಂಬುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ದಲಿತ ಸಮುದಾಯದವರು ದೇವರನ್ನು ನಂಬಿಕೊಂಡು ಆಚರಿಸುವ ಆಚರಣೆ, ನಂಬಿಕೆ, ಸಂಪ್ರದಾಯಗಳು ಹಲವಾರು ಇವೆ. ಆದರೆ ಕೆಲವು ನಂಬಿಕೆಗಳು ನೆಲಮೂಲ ಸಂಸ್ಕೃತಿಯನ್ನು ಕಟ್ಟುವಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ನಂಬಿಕೆ ಎನ್ನುವುದು ಆಯಾಯ ವ್ಯಕ್ತಿಗೆ ಬಿಟ್ಟ ವಿಚಾರ. ಇಲ್ಲಿ ಯಾರೊಬ್ಬರು ಸಹ ತಮ್ಮ ತಮ್ಮ ಆಚಾರ ಹಾಗೂ ನಂಬಿಕೆಗಳನ್ನು ಬಲವಂತವಾಗಿ ಏರಬಾರದು. ಸ್ವತಂತ್ರವಾಗಿ ಆಲೋಚನೆ ಮಾಡಿ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುವುದನ್ನು ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಆದರೆ ಇಂತಹ ಪರಿಸ್ಥಿತಿ ಈ ಸಾಮಾಜಿಕ ವ್ಯವಸ್ಥೆಯಲ್ಲಿ ನಗಣ್ಯವಾಗಿದೆ ಎಂಬುವುದು ಅಷ್ಟೇ ಸತ್ಯದ ಸಂಗತಿಯಾಗಿದೆ. ದಲಿತ ಸಮುದಾಯದ ಕುಟುಂಬದ ಮನೆಯ ಯಜಮಾನ ಯಾವ ರೀತಿಯಲ್ಲಿ ದೇವರ ಹೆಸರಿನಲ್ಲಿ ಸಂಪ್ರದಾಯ ಹಾಗೂ ನಂಬಿಕೆಗಳನ್ನು ಇಟ್ಟುಕೊಂಡಿದ್ದಾನೆಯೊ ಹಾಗೆಯೇ ಮನೆಯ ಎಲ್ಲಾ ಸದಸ್ಯರು ಇರಬೇಕೆಂದು ಬಯಸುತ್ತಾರೆ.

ಇಂತಹ ಒಂದು ಸಂದರ್ಭವನ್ನು ಅನುಭವಿಸಿದ ಎಂ. ಪರಶಿವಮೂರ್ತಿ ಅವರು ತಮ್ಮ ಆತ್ಮಕಥನದಲ್ಲಿ ದಾಖಲಿಸುತ್ತಾರೆ. ಮನೆಯಲ್ಲಾದ ದೇವರ ನಂಬಿಕೆಯ ಆಗುಹೋಗುಗಳನ್ನು ಪ್ರಾಮಾಣಿಕ ನೆಲೆಯಲ್ಲಿ ನಿರೂಪಿಸಿದ್ದಾರೆ. ಅವರನ್ನು ‘ನಿಮ್ಮ ಮನೆಯಲ್ಲಿ ಯಾವ ದೇವರನ್ನು ಪೂಜಿಸುತ್ತೀರಿ’ ಅಂತ ಸ್ನೇಹಿತರೋ ಬಂಧುಗಳೊ ಕೇಳಿದಾಗ, ಅವರಿಗೆ ಮನದಟ್ಟಾಗುವ ಹಾಗೆ

ಸಮಂಜಸವಾದ ಉತ್ತರವನ್ನು ಕೊಡಲಾಗದೇ ತಡವರಿಸುವಂತಾಗುತ್ತದೆ. ಏಕೆಂದರೆ, ಅವರಿಗೆ ಅಧ್ಯಾತ್ಮದ ನೆಲೆಯಲ್ಲಿ ದೇವರ ಮೇಲೆ ಅಪಾರವಾದ ನಂಬಿಕೆಯಿದ್ದರೂ ಪೂಜೆ ಪುನಸ್ಕಾರಗಳು ಇರಲಿಲ್ಲ. ಆದರೆ ಅವರ ಪತ್ನಿ ಕ್ರೈಸ್ತಧರ್ಮದವರಾಗಿದ್ದರಿಂದ ತನ್ನ ಧರ್ಮದಲ್ಲಿ ಅಪಾರ ಶ್ರದ್ಧೆ ಇರುತಿತ್ತು. ಬಹುತೇಕ ಎಲ್ಲಾ ಕ್ರಿಶ್ಚಿಯನ್ನರು ಹಾಗೆಯೇ; ಚಿಕ್ಕಂದಿನಿಂದಲೇ ಅವರಿಗೆ ಹೇಳಲ್ಪಡುವ ಬೋಧನೆಯಿಂದಾಗಿ, ಲೇಖಕರು ಮದುವೆಯ ಅನಂತರ ನಮ್ಮ ಮನೆಯಲ್ಲಿ ಯಾವ ಧರ್ಮವನ್ನು ಅನುಸರಿಸಬೇಕು. ಬಿಡಬೇಕು ಎಂದು ವಿವಾಹ ಪೂರ್ವದಲ್ಲಿ ಇವರು ಚರ್ಚಿಸಿರಲಿಲ್ಲ. ಆದರೆ ಮುಂದೆ ಧರ್ಮದ ಈ ಸಮಸ್ಯೆ ಬರುತ್ತದೆ ಎಂದು ಮನಸ್ಸಿನಲ್ಲೂ ಸಹ ಊಹಿಸಿರಲಿಲ್ಲ. ಮನೆಯಲ್ಲಿ ಪೂಜೆಯನ್ನಾಗಲೀ ಅಥವಾ ಪ್ರಾರ್ಥನೆಯನ್ನಾಗಲೀ ಮಾಡುತ್ತಿರಲಿಲ್ಲ. ಆದರೂ ಹೆಂಡತಿಯ ಧರ್ಮದ ನಂಬಿಕೆಗೆ ಯಾವ ಅಡ್ಡಿ–ಆತಂಕಗಳನ್ನು ಸೃಷ್ಟಿಸಿರಲಿಲ್ಲ. ಹೆಂಡತಿಯ ಮನಸ್ಸಿನ ಸಂತೋಷಕ್ಕಾಗಿ ಮನೆಯಲ್ಲಿನ ಸೌಹಾರ್ದಯುತ ವಾತಾವರಣ ನೆಲೆಗೊಳ್ಳುವ ಸಲುವಾಗಿ ಪತ್ನಿಯ ಜೊತೆ ಪ್ರಾರ್ಥನೆಯಲ್ಲಿ ಭಾಗಿಯಾಗುತ್ತಿದ್ದರು. ಹಾಗಾಗಿ ನಮ್ಮ ಮನೆಯ ಗೋಡೆಗಳಲ್ಲಿ ಯೇಸುಕ್ರಿಸ್ತನ ಪಟಗಳು ಅಲಂಕರಿಸಿದ್ದವು. ಈ ಬಗೆಯ ಸಂದರ್ಭಗಳು ವಿಧಿ ಇಲ್ಲದೆ ಆತ್ಮಕಥನಕಾರರನ್ನು ಕಾಡಿರುವುದನ್ನು ಅವರ ಬರಹಗಳಿಂದ ತಿಳಿಯಲು ಸಾಧ್ಯವಿದೆ.

ಕಾಲಾನಂತರ ಆತ್ಮಕಥನಕಾರರ ತಂದೆ ತಮ್ಮ ವೈಯಕ್ತಿಕ ಕೆಲಸಕ್ಕೆ ಬೆಂಗಳೂರಿಗೆ ಬಂದಾಗಲೆಲ್ಲ ಮಗನ ಮನೆಯಲ್ಲಿ ಉಳಿಯುತ್ತಿದ್ದರು. ತಿಂಗಳಿಗೆ ಎರಡು ಸಲವಾದರೂ ಬಂದು ತಂಗುತ್ತಿದ್ದರು. ಅವರು ಬೆಳಿಗ್ಗ ಎದ್ದತಕ್ಷಣ ದೇವರಪಟ ನೋಡುವುದು ವಾಡಿಕೆ. ಪೂಜೆ ಮಾಡುವುದಕ್ಕೆ ಅನುವು ಮಾಡಿಕೊಡುವ ಮಾತಿರಲಿ, ಕೊನೆಯಪಕ್ಷ ದೇವರಪಟವನ್ನು ಯಾಕೆ ಮನೆಯಲ್ಲಿ ಇಟ್ಟಿಲ್ಲ ಅಂತ ನೊಂದುಕೊಳ್ಳುತ್ತಾರೇನೋ ಅಂತ ಅವರಿಗಾಗಿಯೇ ಒಂದು ಗಣೇಶನ ಪಟವನ್ನು ನಾನು ಇಟ್ಟುಕೊಂಡಿದ್ದೆ. ಮನೆಗೆ ಬಂದ ದಿನ ಅವರು ಮಲಗುವ ಜಾಗದಲ್ಲಿ ಆ ಗಣೇಶನ ಪಟವನ್ನು ಇಡುತ್ತಿದ್ದೆ. ಇದು ಒಂದು ರೀತಿಯಲ್ಲಿ ನನಗೆ ಇರುಸು ಮುರುಸಾಗುತ್ತಿತ್ತು. ಆದರೆ ಲೇಖಕರಷ್ಟು ವಿಶಾಲದೃಷ್ಟಿಯಿಲ್ಲದ ಅವರ ಪತ್ನಿಯು, ಯೇಸುಕ್ರಿಸ್ತನಿದ್ದ ಕಡೆ ಬೇರೆ ದೇವರಿರಬಾರದು ಎಂದಾಗ ಈ ವಿಷಯಕ್ಕಾಗಿಯೇ ಅವರಿಬ್ಬರ ನಡುವೆ ಕೆಲವು ಸಲ ಘರ್ಷಣೆಗಳಾಗಿದ್ದು ಉಂಟು ಎಂದು ಲೇಖಕರು ತಮ್ಮ ಮನದಾಳದ ನೋವನ್ನು ತೋಡಿಕೊಳ್ಳುತ್ತಾರೆ. ಮುಂದೆ ಲೇಖಕರೇ ಹೇಳಿಕೊಳ್ಳುವಂತೆ, "..ಒಂದು ಸಲವಂತೂ ನಾನು ಬಲವಂತವಾಗಿ ನನ್ನ ಹಿಂದುತ್ವವನ್ನು ನಮ್ಮ ಮನೆಯಲ್ಲಿ ಸ್ಥಾಪಿಸಿಬಿಡುವ ಅತಿರೇಕಕ್ಕೆ ಇಳಿದುಬಿಟ್ಟಿದ್ದೆ. ನಾನು ಈಶ್ವರನ ಪಟವನ್ನು ಮನೆಯ ಪೂಜಾಸ್ಥಳದಲ್ಲಿ ಇಟ್ಟುಕೊಂಡು, ಬೆಳಿಗ್ಗೆ ಮತ್ತು ಸಂಜೆ ಅಪ್ಪ ಮಾಡುವಂತೆ ಪೂಜಾವಿಧಾನಗಳನ್ನು ಅನುಸರಿಸಲು ತೊಡಗಿಬಿಟ್ಟೆ. ನಾನು ಕೆಲಸಕ್ಕೆ ಹೋಗಿ ಮಧ್ಯಾಹ್ನ ಮನೆಗೆ ಬಂದೆ. ದೇವರಪಟ

ನಾನಿಟ್ಟ ಜಾಗದಲ್ಲಿರಲಿಲ್ಲ. 'ಇಲ್ಲಿದ್ದ ದೇವರ ಫೋಟೊ ಏನಾಯ್ತು?' ಅಂತ ಕೋಪದಿಂದ ಗುಡುಗಿದೆ. ನನ್ನ ಕೋಪದ ಆವೇಶಕ್ಕೆ ಹೆದರಿದ ನನ್ನ ಪತ್ನಿ ತಕ್ಷಣ ಅಡಿಗೆ ಮನೆಯಿಂದ ಹೊರ ಓಡಿಬಂದು ಅದೆಲ್ಲೋ ತಾನಡಗಿಸಿಟ್ಟಿದ್ದ ಈಶ್ವರನ ಪಟವನ್ನು ತಂದು ಹೆದರುತ್ತಲೇ ಅದರ ಸ್ಥಳದಲ್ಲಿಟ್ಟಳು. ಸಿಟ್ಟಿನಿಂದ ನಾನು ಎಲ್ಲರ ಮೇಲೂ ಕಿರುಚಾಡಿಬಿಟ್ಟೆ. ಮನೆಯಲ್ಲಿ ಶಾಂತಿ ಕದಡಿತ್ತು. ಮಕ್ಕಳ ಮನಸ್ಸು ಮುದುಡಿತ್ತು. ವಾತಾವರಣ ಕಲುಷಿತಗೊಂಡಿತ್ತು. ಅಂದು ನಾನು ಯೋಚಿಸಿದೆ–ಈ ನನ್ನ ಹಠದಿಂದ ಸಾಧಿಸುವುದಾದರೂ ಏನನ್ನು? ಮಕ್ಕಳು ಇನ್ನೂ ಚಿಕ್ಕವರು. ದೇವರು, ಧರ್ಮದ ಬಗ್ಗೆ ಅವರಿಗೇನು ಅರಿವಿರುತ್ತದೆ?.... ಅಪ್ಪ ಒಂದು ದೇವರು, ತಾಯಿ ಒಂದು ದೇವರನ್ನು ಮನೆಯಲ್ಲಿಟ್ಟುಕೊಂಡು ಪರಸ್ಪರ ಪೈಪೋಟಿ ನಡೆಸಿದರೆ ಮಕ್ಕಳ ಮನಸ್ಸಿಗೆ ಗೊಂದಲವಾಗುವುದಿಲ್ಲವೇ? ಮರುದಿನ, ಆ ದೇವರ ಪಟವನ್ನು ನಾನೇ ಅಡಗಿಸಿಟ್ಟುಬಿಟ್ಟೆ. ಅಂದೇ ಕೊನೆ. ಮತ್ತೆಂದಿಗೂ– ದೇವರ ಬಗ್ಗೆಯಾಗಲೀ, ಧರ್ಮದ ಬಗ್ಗೆಯಾಗಲೀ ಒಂದು ಸಣ್ಣವಾದವು ನಮ್ಮ ನಡುವೆ ನಡೆಯಲಿಲ್ಲ. ನನ್ನ ಪತ್ನಿಯು ಈಗ ನನ್ನನ್ನು ಯಾವ ವಿಷಯಕ್ಕೂ ಬಲವಂತಪಡಿಸುವುದಿಲ್ಲ. ಅವಳ ಧರ್ಮಾಚರಣೆಗೆ ನಾನೂ ಸ್ಪಂದಿಸುತ್ತೇನೆ. ಅವಳೊಂದಿಗೆ ಚರ್ಚಿಗೂ ಹೋಗುತ್ತೇನೆ. ಅವಳು ಸಹ ಕೆಲವು ಸಲ ನನ್ನೊಂದಿಗೆ ದೇವಸ್ಥಾನಕ್ಕೆ ಬರುತ್ತಾಳೆ. ನಮ್ಮ ಹಬ್ಬ ಹರಿದಿನಗಳಲ್ಲಿ ಹಬ್ಬದೂಟವನ್ನು ಮಾಡಿಬಡಿಸುತ್ತಾಳೆ"[೩೭] ಎಂದು ಬರೆಯುತ್ತಾರೆ. ಈ ಮೇಲಿನ ಪ್ರಸಂಗವನ್ನು ಗಮನಿಸಿದಾಗ ತಂದೆ–ತಾಯಿಯರು ಅಂತರ್ಜಾತಿ ವಿವಾಹ ಮಾಡಿಕೊಂಡರೆ ಉಂಟಾಗುವ ಸಮಸ್ಯೆ ಇದು ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಈ ಸಮಸ್ಯೆಯಿಂದ ಬಿಡುಗಡೆ ಪಡೆಯಬೇಕಾದರೆ ನಾವುಗಳು ಬಹಳ ವಿಶಾಲವಾದ ಚಿಂತನೆಯನ್ನು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಬೇಕಾಗುತ್ತದೆ.

ಈ ಆಧುನಿಕ ಸಮಾಜದಲ್ಲಿ ದಲಿತ ಸಮುದಾಯಗಳು ತಮ್ಮದೆ ಆದ ಪರಂಪರಾಗತ ಸಾಂಸ್ಕೃತಿಕ ನಂಬಿಕೆಗಳು ಮತ್ತು ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ನಂಬಿಕೆ ಮತ್ತು ಆಚರಣೆಗಳು ಇವರ ಮನಸ್ಥಿತಿಗೆ ಹೇಗೆ ಸ್ಪಂದಿಸುತ್ತವೆ ಎಂಬುವುದು ಬಹಳ ಸ್ಪಷ್ಟವಾದ ವಿಚಾರ. ಇವುಗಳಿಂದ ಪರಂಪರೆಯ ನಂಬಿಕೆ ಮತ್ತು ಆಚರಣೆಗಳನ್ನು ಉಳಿಸಿ ಬೆಳೆಸಿಕೊಳ್ಳುವ ಸಾಂಸ್ಕೃತಿಕ ಹೊಣೆಗಾರಿಕೆ ಇವರ ಮೇಲಿರುತ್ತದೆ. ಇದಲ್ಲದೆ ಇವುಗಳು ತಲೆಮಾರಿನಿಂದ ತಲೆಮಾರಿಗೆ ಕೊಂಡ್ಯೊಯುವ ಸಾಧನಗಳಾಗಿ ಹಾಗೂ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ.

೪.೨.೧ ದಲಿತ ಸಾಂಸ್ಕೃತಿಕ ಅನನ್ಯತೆಯ ಹಬ್ಬಗಳು ಮತ್ತು ಆಚರಣೆಗಳು

ಪ್ರಚಲಿತ ವಿದ್ಯಮಾನಗಳನ್ನು ಗಮನಿಸುತ್ತ ಹೋದಂತೆ 'ಸಂಸ್ಕೃತಿ' ಎಂದಾಕ್ಷಣ ಮೊದಲು ನೆನಪಾಗುವುದು ಸಂಪ್ರದಾಯ, ಆಚರಣೆ, ನಂಬಿಕೆ ಮತ್ತು ನಡವಳಿಕೆಗಳು. ಇವು ಹೆಚ್ಚಾಗಿ

ಕಂಡುಬರುವುದು ನಾವು ಆಚರಿಸುವ ಹಬ್ಬಹರಿದಿನ ಮತ್ತು ಜಾತ್ರೆಗಳ ಸಂದರ್ಭಗಳಲ್ಲಿ. ಇವುಗಳು ಸಂಸ್ಕೃತಿಗಳ ಬಹುದೊಡ್ಡ ವಾಹಕ ಹಾಗೂ ದರ್ಶಕಗಳು. ಪೂರ್ವಪರಂಪರೆಯಿಂದ ನಡೆದು ಬಂದಿರುವ ಸಾಂಸ್ಕೃತಿಕ ರೀತಿ–ನೀತಿ, ನಂಬಿಕೆ ಆಚರಣೆಗಳನ್ನು ಮುಂದುವರೆಸುವ ಆಸ್ಥೆಯಲ್ಲಿ ಹಬ್ಬಗಳು ನಡೆಯುತ್ತಿವೆ. ಪ್ರತಿಯೊಂದು ಸಂಸ್ಕೃತಿಗೂ ಅದರದೇ ಆದ ಸಂಪ್ರದಾಯ, ಆಚರಣೆ, ರೀತಿ–ನೀತಿ, ನಂಬಿಕೆ ನಡವಳಿಕೆಗಳು ಇರುತ್ತವೆ. ಯಾವುದೇ ಒಂದು ಸಂಸ್ಕೃತಿಯು ತಂತಾನೇ ಶ್ರೇಷ್ಠವೂ ಅಲ್ಲ; ಕನಿಷ್ಠವೂ ಅಲ್ಲ. ತನ್ನದೇ ಆದ ಅಸ್ಮಿತೆ ಮತ್ತು ಅನನ್ಯತೆಯನ್ನು ಸಾಧಿಸಿ–ಕೊಂಡಿರುತ್ತದೆ. ಆದರೆ ಸಾಂಸ್ಕೃತಿಕ ಯಜಮಾನ್ಯದ ಹುನ್ನಾರದಿಂದ ಕೆಳವರ್ಗದ ಸಾಂಸ್ಕೃತಿಕ ನಿಲುವುಗಳನ್ನು ಮೇಲು–ಕೀಳುಗಳು ಮಾಡಿ ಅದರ ಅಸ್ಮಿತೆಯನ್ನು ಹೋಗಲಾಡಿಸುತ್ತಾರೆ. ಈ ಬಗೆಯ ಸಂಸ್ಕೃತಿಯ ನೆಲೆಗಳನ್ನು ಕನ್ನಡ ದಲಿತ ಆತ್ಮಕಥನಕಾರರು ಸೂಕ್ಷ್ಮವಾಗಿ ಗ್ರಹಿಸಿ ತಮ್ಮ ಬರಹದಲ್ಲಿ ಕಟ್ಟಿಕೊಟ್ಟಿದ್ದಾರೆ. ತಮ್ಮ ಬದುಕಿನಲ್ಲಿ ತಾವುಗಳು ಅನುಭವಿಸಿದ ಸಾಂಸ್ಕೃತಿಕ ಯಜಮಾನ್ಯದ ಸಂಗತಿಗಳನ್ನು ನಿರ್ಭೀಡೆಯಿಂದ ನಿರೂಪಿಸಿದ್ದಾರೆ. ಸಾಂಸ್ಕೃತಿಕ ನಂಬಿಕೆ ಮತ್ತು ಆಚರಣೆಗಳ ಮೂಲ ಬೇರುಗಳನ್ನು ಹಿಡಿದು, ವರ್ತಮಾನದ ವಾಸ್ತವಗಳೊಂದಿಗೆ ಮಾನವೀಯ ನೆಲೆಯಲ್ಲಿ ಎತ್ತಿ ಹಿಡಿದಿದ್ದಾರೆ.

ದಲಿತರು ತಮ್ಮ ಸಮುದಾಯದ ಪರಂಪರೆಯ ಭಾಗವಾಗಿ ಅನುಸರಿಸಿ, ಅನುಭವಿಸಿದ ಸಂಸ್ಕೃತಿಗಳು ಅನೇಕ. ಈ ಸಂಸ್ಕೃತಿಯ ಪ್ರತಿಬಿಂಬವಾಗಿ ಹಬ್ಬ–ಹರಿದಿನಗಳು ಪ್ರಚಲಿತದಲ್ಲಿವೆ. ಇದಲ್ಲದೆ ಇವರು ಹೇಗೆ ತಮ್ಮ ಸಾಂಸ್ಕೃತಿಕ ನೆಲಮೂಲ ಸಂಸ್ಕೃತಿಗಳನ್ನು ಕಟ್ಟಿಕೊಟ್ಟಿದ್ದಾರೆ ಎಂಬುವುದನ್ನು ಕಾಣಬಹುದಾಗಿದೆ. ಅವುಗಳೆಂದರೆ,

ಗ್ರಾಮದೇವತೆ ಮಾರಿ ಹಬ್ಬ, ಕದ್ರಿ ಹುಣ್ಣೇವು ಹಬ್ಬ, ಮಾರಮ್ಮನ ಜಾತ್ರೆ, ಊರಮಾರಮ್ಮನ ಹಬ್ಬ, ಗೆರೆಸು ಮಾರಮ್ಮನ ಹಬ್ಬ, ಮುಸ್ಲಿಂರೊಂದಿಗೆ ದಲಿತರ ಬಾಬಯ್ಯನ ಜಾತ್ರೆ, ಜಾನುವಾರುಗಳನ್ನು ಬೆಂಕಿಯಲ್ಲಿ ಕಿಚ್ಚಾಯಿಸುವ ಹಬ್ಬ ಇವುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

೧. ಗ್ರಾಮದೇವತೆ ಮಾರಿ ಹಬ್ಬ

ಗ್ರಾಮದೇವತೆಗಳ ವಿಚಾರದಲ್ಲಿ ಇಲ್ಲಿನ ಜನರಿಗೆ ಗಾಢವಾದ ನಂಬಿಕೆ ಇದೆ. ಶಿಷ್ಟದೇವರುಗಳ ಕಲ್ಪನೆ ಇದ್ದಾಗ್ಯೂ, ಗ್ರಾಮದೇವತೆಗಳೇ ತಮ್ಮ ನಿತ್ಯದ ಕಷ್ಟಸುಖಕ್ಕೆ ಆಗುವವರು ಎಂಬ ವಿಶ್ವಾಸವನ್ನು ಹೊಂದಿದ್ದಾರೆ. ಊರುಕೇರಿ ಆತ್ಮಕಥೆಯಲ್ಲಿ ಸಿದ್ಧಲಿಂಗಯ್ಯನವರೆ ಹೇಳಿಕೊಂಡಿರುವ ಹಾಗೆ ಪುರಾಣ ಮತ್ತು ಆಚರಣೆಗಳಲ್ಲಿ ನಮ್ಮ ಜನಪದರು ತಮ್ಮ ಮನಸ್ಸಿನ ದುಃಖ

ದುಮ್ಮಾನಗಳನ್ನು, ಉಲ್ಲಾಸ ಸಂಭ್ರಮಗಳನ್ನು ತೋಡಿಕೊಳ್ಳಲು ಆಚರಿಸುತ್ತಾರೆ. ಗ್ರಾಮೀಣ ಬದುಕಿನಲ್ಲಿ ಧರ್ಮ, ಕ್ರೀಡೆ, ಮನರಂಜನೆ, ಕಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತಿಸಿಕೊಳ್ಳುವುದಕ್ಕಾಗಿ ಊರಿನ ಗ್ರಾಮದೇವತೆಯ ಹಬ್ಬದ ಆಚರಣೆಗಳನ್ನು ನಡೆಸುತ್ತಾರೆ. ಇದರಿಂದ ಗ್ರಾಮದ ವಿವಿಧ ಹತ್ತು ಹಲವು ಮುಖಗಳ ಸಾಂಸ್ಕೃತಿಕ ನೆಲೆಗಳು ಅನಾವರಣಗೊಳ್ಳಲು ಕಾರಣವಾಗುತ್ತವೆ.

ಇದಲ್ಲದೆ ಊರುಕೇರಿಯ ಯಜಮಾನರಿಗೂ ಗ್ರಾಮದೇವತೆಗೂ ಯಾವ ರೀತಿಯ ಅವಿನಾಭಾವ ಸಂಬಂಧವಿದೆ ಎಂಬುವುದನ್ನು ಬಹಳ ಸ್ವಾರಸ್ಯಕರವಾಗಿ ಸಿದ್ಧಲಿಂಗಯ್ಯನವರು ದಾಖಲಿಸಿದ್ದಾರೆ. ಹಬ್ಬದ ದಿನ ದೇವರು ಮೈದುಂಬಿ ಬಹಳ ದೂರ ಓಡುತ್ತಿತ್ತು. ಜನರು ಅದರ ಹಿಂದೆ ಓಡುತ್ತಿದ್ದರು. ದೇವರು ಓಡಿ ಓಡಿ ಸುಸ್ತಾದ ಮೇಲೆ ಗಕ್ಕನೆ ನಿಂತು ಬಿಟ್ಟಿತ್ತು. ಜನರು ಸಹ ಹಾಗೆಯೇ ನಿಂತುಬಿಟ್ಟರು. ಆಗ ಊರಿನ ಹಿರಿಯ ಯಜಮಾನ ದೇವರ ಮುಂದೆ ಬಂದು ದೇವರನ್ನು ತರಾಟೆಗೆ ತೆಗೆದುಕೊಳ್ಳಲು ಪ್ರಾರಂಭಿಸಿದ: “ಯಜಮಾನ (ದೇವರನ್ನು ಕುರಿತು) ಇಷ್ಟು ದಿನ ಎಲ್ಲೋಗಿದ್ದೆ? ದೇವತೆ: ನಿಮ್ಮೂರೊಂದೇನಾ ನನಗೆ ಇರೋದು, ಮೂರು ಲೋಕಾನು ನೋಡ್ಕೋಬೇಕಲ್ಲ. ಯಜಮಾನ: ನಾವೆಷ್ಟು ಕಷ್ಟಾ ಪಡ್ತಾ ಇದ್ದೀವಿ ಗೊತ್ತಾ? ದೇವತೆ: ನಾನೇನು ಸುಖವಾಗಿದ್ದೀನಾ ಎಂದು ಉತ್ತರವನ್ನು ನೀಡುತ್ತದೆ. ಈ ರೀತಿ ದೇವರು ಮತ್ತು ಮನುಷ್ಯರ ನಡುವೆ ಸಂಭಾಷಣೆ ಮುಂದುವರೆಯುತ್ತಿತ್ತು. ನಂತರ ದೇವತೆ ಕುಣಿಯಲು ತೊಡಗುತ್ತಿತ್ತು. ಜನರೂ ಕುಣಿಯುತ್ತಿದ್ದರು”.[೩೮] ಈ ಮೇಲಿನ ಸಂಭಾಷಣೆಯನ್ನು ಗಮನಿಸಿದರೆ ದಲಿತಸಮುದಾಯದ ಜನರಿಗೂ ಹಾಗೂ ಕುಲ ದೇವತೆಗೂ ಇರುವ ಸಂಬಂಧ ಅರಿವಾಗುತ್ತದೆ. ಇಲ್ಲಿ ದಲಿತರು ಗ್ರಾಮದೇವತೆಯನ್ನು ಪ್ರಶ್ನೆಮಾಡುವ ಅಧಿಕಾರದ ನೆಲೆಯನ್ನು ಗುರುತಿಸಬಹುದು. ಇಂತಹ ಸ್ವಾರಸ್ಯಕರವಾದ ಸನ್ನಿವೇಶಗಳು ದಲಿತ ಸಂಸ್ಕೃತಿಯ ಪ್ರತೀಕಗಳಾಗಿ ಕಂಡುಬರುತ್ತವೆ.

೨. ಕದ್ರಿ ಹುಣ್ಣೇವು ಹಬ್ಬ

ಇದು ಒಂದು ವಿಶಿಷ್ಟ ಸಂಪ್ರದಾಯದ ಹಬ್ಬ. ಏಕೆಂದರೆ ಸಾಮಾನ್ಯವಾಗಿ ಮಾದಿಗರ ಹಟ್ಟಿಯವರು ಮಾತ್ರ ಆಚರಣೆ ಮಾಡುವ ಹಬ್ಬವಾಗಿದೆ. ಉಳಿದ ಜಾತಿಯವರಾರು ಈ ಹಬ್ಬವನ್ನು ಆಚರಿಸುತ್ತಿರಲಿಲ್ಲ!. ಆಂಜನೇಯ ಜಾತ್ರೆ ಮತ್ತು ಸಂಕ್ರಾಂತಿ ಹಬ್ಬ ಮುಗಿದ ನಂತರ ಈ ಹಬ್ಬವನ್ನು ಆಚರಿಸುತ್ತಾರೆ. ಏಕೆಂದರೆ ಈ ಸಮಯ ಎಲ್ಲರಿಗೂ ಬಿಡುವಿನ ಕಾಲ. ಮುಂಗಾರಿನ ರಾಗಿ ಒಕ್ಕಣೆ, ಕಾಳು–ಕಡ್ಡಿ ಕೂಡಿಡುವ ಕೆಲಸ ಮುಗಿದಿರುತ್ತಿತ್ತು. ಎತ್ತ ಕಡೆಯಿಂದ ದೃಷ್ಟಿ ಹಾಯಿಸಿದರು ರಾಗಿಯ ಕಾಳುಗಳು ಕಣ್ಣಿಗೆ ರಾಚುತ್ತಿರುವ ಸಂದರ್ಭದ ಸಮಯವಾಗಿರುತ್ತದೆ. ಈ ಹಬ್ಬದಲ್ಲಿ ಎಲ್ಲಾ ಮನೆಗಳು ಸುಣ್ಣಬಣ್ಣದಿಂದ ಅಲಂಕಾರಗೊಳ್ಳುತ್ತಿದ್ದವು. ಹಬ್ಬದ ಕಾರಣಕ್ಕಾಗಿ

ಒಂದು ವಾರದಿಂದ ಹಿಡಿದು ಮಡಿಕೆಗಳಲ್ಲಿ ಕೂಡಿಟ್ಟ ಗಂಜಲವನ್ನು ತೊಲೆ ಮತ್ತು ಜಂತುಗಳಿಗೆ ಬಳಿಯುತ್ತಿದ್ದರು. ಇದರಿಂದಾಗಿ ಮನೆಯಲ್ಲೆಲ್ಲಾ ಗಂಜಲದ ವಾಸನೆ, ಹೊಸ ಸುಣ್ಣದ ವಾಸನೆ ಮೂಗಿಗೆ ಇಂಪು ಕೊಡುತ್ತಿತ್ತು. ಸಾಯಂಕಾಲವಾದಂತೆ ಎಲ್ಲರ ಮನೆಯಲ್ಲಿ ಪಾಯಸ, ಚಿತ್ರಾನ್ನ, ಎಸರು ರೆಡಿಯಾಗುತ್ತಿತ್ತು. ಸಂಜೆ ಸೂರ್ಯ ಮುಳುಗ್ತಿದ್ದಂತೆ ಬೆಟ್ಟಕ್ಕೆ ಹೋಗಿದ್ದ ದನಕರುಗಳು ಮನೆಕಡೆ ಮರಳುತ್ತಿದ್ದವು. ಅವುಗಳ ಕಾಲಿನ ಧೂಳಿನಿಂದಾಗಿ ಕೆಂಧೂಳು ಎದ್ದು ಕಾಣುತ್ತಿತ್ತು. ಅರಳೀಕಟ್ಟೆಯ ಹತ್ತಿರ ಕಾಸಿನಾಟ ನಡೀತಾ ಇತ್ತು. ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಸಾಲುಸಾಲಾಗಿ ಜನರು ಹೋಗಿಬರುತ್ತಿದ್ದರು. ಖಾಲಿ ಕೆರೆಯ ಅಂಗಳದಲ್ಲಿನ ದೃಶ್ಯ ಕಣ್ಣಿಗೆ ಕಟ್ಟುವಂತೆ ಭಾಸವಾಗುತ್ತಿತ್ತು. "ಅಜ್ಜೀಹಳ್ಳಿ ಹೆಂಡದ ಅಂಗ್ಡೀ ಕಡೆ ಹೋದವರು ಕೋಡಲ್‌ಗುಟ್ಟೆಯಿಂದ ವಾಲಾಡಿಕೊಂಡು ಬರುತ್ತಿದ್ದರು. ಹಟ್ಟಿಯಲ್ಲಿ ಎರಡು ಪಾರ್ಟಿ, ದಾಸಪ್ಪನನ್ನೂ ಕೂಡ ಎರಡು ಭಾಗ ಮಾಡಿಕೊಂಡಿದ್ರು. ಹೊಸಟ್ಟಿಯವ್ರಿಗೆ ದೊಡ್ಡಯ್ಯ, ಮುದ್ದಪ್ಪ ದಾಸಪ್ಪಗಳಾದ್ರೆ ಹಳೇಹಟ್ಟಿನವ್ರಿಗೆ ಸಂಜೀವಪ್ಪ, ರಂಗನಾಥ, ದಾಸಪ್ಪಗಳು. ಪದ್ಧತಿಯಂತೆ ಯಜಮಾನ್ರ ಮನೆಗಳಿಂದ್ಲೇ ನಾಮ ಹಾಕುವ ಕೆಲಸ ಪ್ರಾರಂಭಿಸುತ್ತಿದ್ರು. ಹೊಸಹಟ್ಟಿ ಗುಂಡಯ್ಯನ ಮನೆಯಿಂದ ಪ್ರಾರಂಭ ಮಾಡಿ ಅವ್ರಿಗೆಲ್ಲಾ ನಾಮ ಹಾಕಿ ಗೋವಿಂದನ್ನ ಕೂಗ್ಸಿ ಅವರು ಕೊಡುವ ಪಡಿ ದಕ್ಷಿಣೆ ಪಡೀತಿದ್ರು. ಅದೇ ರೀತಿ ಹಳೇಪಟ್ಟಿಯ ಯಜಮಾನ್ ಚಿಕ್ರಾಮಯ್ಯನ ಮನೆಯಿಂದಲೂ ಪ್ರಾರಂಭಿಸ್ತಾ ಇದ್ರು."[೩೯] ಈ ಬಗೆಯ ಆಚರಣೆಗಳನ್ನು ದಲಿತ ಸಮುದಾಯದವರು ಇಂದಿಗೂ ವಿಶೇಷವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ.

ಈ ಹಬ್ಬದ ಹಿನ್ನೆಲೆಯಲ್ಲಿ ನಡೆಯುವ ಆಚರಣೆ ಹಾಗೂ ಸಂಪ್ರದಾಯಗಳು ವಿಶೇಷವಾಗಿ ಕಾಣಬರದಿದ್ದರೂ ಸಹ ಈ ಸಮುದಾಯದಲ್ಲಿ ಬಹಳ ಮುಖ್ಯವಾದ ಅಂಶವೆಂದೇ ಪರಿಗಣಿಸುತ್ತಾರೆ. ಏಕೆಂದರೆ ದಲಿತ ಸಮುದಾಯದವರಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿರುವ ಆಚರಣೆಗಳಾಗಿವೆ. ಆಂಜನೇಯ ಬೆಟ್ಟಕ್ಕೆ ಹೋಗುವ ವಿಶೇಷತೆಯನ್ನು ಕಾಣಲು ಸಾಧ್ಯವಿದೆ. ಬೆಳಗ್ಗೆ ಕೋಳಿ ಕೂಗುವ ಹೊತ್ತಿಗೆ ಹಟ್ಟೀಯವ್ರ ಒಲೆಗಳೆಲ್ಲಾ ಊದ್ರಾ ಆಡ್ತಿದ್ರು, ಬೆಟ್ಟಕ್ಕೆ ಹೋಗುವವರಿಗೆ ಬುತ್ತಿಯ ಗಂಟುಗಳು ರೆಡಿಯಾಗ್ತಿತ್ತು. ಮಬ್ಬುಗತ್ತಲಿನಲ್ಲಿ ಕೋಡಲ್‌ಗುಟ್ಟೆ ಹಿಂದಗಡೆ ಹೊರ್ಗಡೀಕೆ ಹೋದವ್ರು ಬರ್ತಾ ಇದ್ರು. ಹೆಂಗಸ್ರು ಮಬ್ಬು ಬೆಳಕಿನಲ್ಲಿ ಕೊಡಗಳನ್ನಿಡಿದು ನೀರಿಗಾಗಿ ಸಾಲಿಕ್ಕದ್ರು. ದನಕರುಗಳ ಹೊರಗೆ ಕಟ್ಟಿ ಸಗಣಿ ಕಸ ಬಳೀತಿದ್ರು. ಬೆಟ್ಟಕ್ಕೋಗೋರು ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ ಫಳಫಳ ಅಂತ ಹಟ್ಟೀ ತುಂಬಾ ಓಡಾಡ್ತಿದ್ರು. ಹೆಂಗಸ್ರುಗಳು ಮಾತ್ರ ಬೆಟ್ಟಕ್ಕೆ ಹೋಗ್ತಾ ಇರ್ಲಿಲ್ಲ. ಏಕೆಂದರೆ ಕಾಡಿನ ದಾರಿಯಲ್ಲಿ ಹೋಗಬೇಕಾಗಿದ್ರಿಂದ ಅವರನ್ನು ಮನೇಲೆ ಉಳ್ಸಿ ಹೋಗತಾ ಇದ್ರು. ಬುತ್ತಿಯ ಗಂಟುಗಳನ್ನು ಹೊತ್ತು ಸಾಲುಸಾಲಾಗಿ ಬೆಟ್ಟದ ದಾರಿ ಹಿಡಿದು ನಾನೂ ನನ್ನಪ್ಪ ಅವರ ಜೊತೆ ಕಾಲಾಕ್ತಿದ್ವಿ. ದೊಡ್ಡ ಕದ್ರಜ್ಜ ಎಲ್ಲರನ್ನೂ ಹಿಂದ್ಗಿಂದೆ ಹಾಕುವಂತೆ

ನಡೀತಿದ್ದ. ಅಜ್ಜನ ಕಾಲ್ನಲ್ಲಿ ಚಕ್ರ ಅವೆ ಅಂತ ತಮಾಷೆ ನಡೀತಿತ್ತು. ಅಜ್ಜ ಹುಟ್ಟಿದಾಗಿನಿಂದಾನೂ ಯಾವರ್ಷಾನೂ ಬೆಟ್ಟಕ್ಕೋಗೋದನ್ನ ತಪ್ಪಿಸ್ತಾ ಇರ್ಲಿಲ್ಲ. ಹಾಗಾಗಿ ಬೆಟ್ಟದ ದಾರಿ ಅಂದ್ರೆ ಅಜ್ಜನಿಗೆ ನೀರು ಕುಡಿದಂಥ ಅನುಭವ. ಅಜ್ಜನ ಮುಂದಾಳತ್ವದಲ್ಲೇನೆ ಬೆಟ್ಟದ ದಾರಿ ಸಾಗಬೇಕಾಗಿತ್ತು. ಸುಮಾರು ಮಧ್ಯಾಹ್ನದೊತ್ತಿಗೆ ತೇರು ಎಳೆಯುವ ಹೊತ್ತಿಗೆ ಬೆಟ್ಟ ಸೇರುತ್ತಿದ್ದೆವು. ಅಲ್ಲಿಯೂ ಒಂದೇ ಒಗ್ಗಟ್ಟು. ಎಲ್ಲರೂ ಒಂದೇ ಕಡೆ ನಿಂತು ದೂರದಿಂದ ತೇರನ್ನು ವೀಕ್ಷಿಸುತ್ತಿದ್ದೆವು. ಮಧ್ಯಾಹ್ನದ ಹೊತ್ತಿಗೆ ತೇರಿನ ಮೇಲೆ ಗರುಡಗಳು ಗುಂಪುಗುಂಪಾಗಿ ಹಾರಾಡಿದ ಮೇಲೆ ತೇರು ಎಳೆಯುತ್ತಿದ್ದರು.

ಸುಡುಬಿಸಿಲು ಇಳಿಯುತ್ತಿದ್ದಂತೆ ಜಾತ್ರೆಗೆ ಬಂದ ಜನಗಳು ಕರಗುತ್ತಿದ್ದರು. ತೇರು ತನ್ನ ಪಾಡಿಗೆ ತಾನು ನಿಂತಿತ್ತು. ದೇವಸ್ಥಾನದಲ್ಲಿ ಹೂವು ಕಾಯಿ ಪೂಜೆ ಮಾಡಿಸಿಕೊಳ್ಳುತ್ತಿದ್ದವರು ಮೇಲೆ ಮೇಲೆ ಬಿದ್ದು ಪೂಜೆ ಮಾಡಿಸಿಕೊಳ್ಳುತ್ತಿದ್ದರು. ಮನೆಯ ಕಡೆ ವಾಪಸ್ಸು ಹೋಗುವವರಿಂದ ಕಡಲೆಪುರಿ, ಬೆಂಡು–ಬತ್ತಾಸುಗಳ ಖರೀದಿ ಭರಾಟೆಯಿಂದ ನಡೆಯುತ್ತಿತ್ತು. ಕುಂಭಿಬೆಟ್ಟಕ್ಕೆ ಹೋಗುವುದೆಂದು ತೀರ್ಮಾನಿಸಿ, ಬೆಟ್ಟ ಹತ್ತುವುದಕ್ಕೆ ಶುರು ಮಾಡಿದ್ವಿ, ಇದೊಂದು ಭಯಾನಕ ಕಾಲುದಾರಿ. ಭೂಮಿಯಿಂದ ಸುಮಾರು ಎಂಟು ನೂರು ಅಡಿ ಎತ್ತರದ ಪರ್ವತ ಶ್ರೇಣಿಯಾಗಿತ್ತು. ತುಟ್ಟತುದಿಯನ್ನು ತಲುಪಿ ಕಣ್ಣಾಯಿಸಿದರೆ ಸುತ್ತಮುತ್ತಲಿನ ಎಲ್ಲ ಹಳ್ಳಿಗಳು ಇರುವೆ ರೀತಿಯಾಗಿ ಕಾಣುತ್ತಿದ್ದವು. ಇತ್ತ ಕಡೆ ದೃಷ್ಟಿ ಹಾಯಿಸಿದರೂ ಗುಂಪುಗುಂಪು ಮನೆಗಳು, ಬಟಾಬಯಲುಗಳು, ಕುಂಭಿಬೆಟ್ಟದ ಮೇಲಿರುವ ದೇವರು ನಿಜವಾದ ನರಸಿಂಹಸ್ವಾಮಿ. ಪಾಳೇಗಾರರ ಆಳ್ವಿಕೆಯಲ್ಲಿ ನಿರ್ಮಿತವಾದ ದೇವಸ್ಥಾನ ಕಲ್ಲು ಕೆತ್ತನೆಗಳಿಂದ ಕೂಡಿದ ಹಾಳು ಮಂಟಪಗಳಾಗಿ ಉಳಿದಿವೆ. ಬೆಟ್ಟ ಇಳಿದು ಕೆಳಕ್ಕೆ ಕೊಪ್ಪಲುಗಳತ್ತ ನಡೆಯುತ್ತಿದ್ದೆವು. ಮುದ್ದೆ, ಅವರೆಕಾಳು, ಕೊತ್ಕಾಯಿ (ಎಳೆ ಹಲಸಿನಕಾಯಿ) ಎಸರು ಸಿಕ್ಕಿದರೆ ಇನ್ನೊಂದು ಕಡೆ ಮಾಂಸದೂಟವೂ ಸಿಗುತಿತ್ತು. ಕೊಪ್ಪಲಿಗೆ ಅಲೆಯುತ್ತಾ ಬಾಯಿಗೆ ತಕ್ಕ ರುಚಿ ಊಟ ಸಿಕ್ಕಿದ ಮೇಲೆ ಅರಳೀಮರದಡಿ ನಮ್ಮ ಟೆಂಟ್ ಹಾಕುತ್ತಿದ್ದೆವು. ಬಾಣಬಿರುಸುಗಳಿಂದ ಮದ್ದು ಸುಡುವುದು, ಹೂವಿನ ತೇರು ನೋಡುವುದೇ ಒಂದು ಸೋಜಿಗವಾಗಿತ್ತು. ಕೆಲವೊಂದು ಕಡೆ ಕೋಲಾಟ, ಸೋಬಾನೆ ಪದಗಳು ನಡೆಯುತ್ತಿದ್ದವು. ಅರ್ಧಕ್ಕೆ ಎಳೆದು ನಿಮತ್ತ ತೇರನ್ನು ರಾತ್ರಿಯ ತೇರಾಗಿ ಎಳೆದು ಅದರ ಮಾಮೂಲಿ ಸ್ಥಾನದಲ್ಲಿ ನಿಲ್ಲಿಸುತ್ತಿದ್ದರು. “ಬೆಳಿಗ್ಗೆ ಬುತ್ತಿಯ ಗಂಟುಗಳೊಂದಿಗೆ ದೇವಸ್ಥಾನದ ಹಿಂದಿನ ದೋಣಿಗೆ ಹೋಗುತ್ತಿದ್ದೆವು. ಅಲ್ಲಿಯೂ ದೋಣಿಯ ನೀರನ್ನು ಮುಟ್ಟುವ ಹಾಗಿಲ್ಲ. ಇದಕ್ಕಾಗಿ ದಾಸಪ್ಪಗಳ ಹತ್ತಿರ ಒಂದೊಂದು ಬೋಗುಣಿಗೆ ಐದು ಪೈಸೆಯಂತೆ ನೀರು ಹೊಯ್ಸಿಕೊಳ್ಳಬೇಕಾಗಿತ್ತು. ನಾವುಗಳು ತಂದ ಬುತ್ತಿಯ ಗಂಟುಗಳನ್ನು ಖಾಲಿ ಮಾಡಿ ದೇವಸ್ಥಾನದತ್ತ ಪೂಜೆ ಮಾಡಿಸಿಕೊಳ್ಳಲು ಹೋಗುತ್ತಿದ್ದೆವು. ದೇವಸ್ಥಾನದ

ಒಳಗಡೆ ಹೋಗದೆ ಹೊರಗೇ ಪೂಜೆ ಮಾಡಿಸಬೇಕಾಗಿತ್ತು. ತೀರ್ಥಕಾಯಿ ಮಾಡಿಸಿಕೊಂಡು ಬಿಸಿಲು ತಗ್ಗುವ ತನಕ ಕಾಲಹರಣ ಮಾಡಿ ಕಳ್ಳೇಪುರಿ ಬತ್ತಾಸು ಖರೀದಿಸಿಕೊಂಡು ಗಂಟುಗಳೊಂದಿಗೆ ಊರ ದಾರಿ ಹಿಡಿಯುತ್ತಿದ್ದೆವು. ಊರಹತ್ತಿರ ಬರುವಷ್ಟೊತ್ತಿಗೆ ಮಬ್ಬು ಮಬ್ಬುಗತ್ತಲು. ಬೆಟ್ಟಕ್ಕೆ ಹೋದ ದನಕರುಗಳು ಮನೆಗೆ ಮರಳಿ ಬರುತ್ತಿದ್ದವು. ಕೂಲಿಗೆ ಹೋದವರು ಮನೆಯ ದಾರಿ ಹಿಡಿದಿದ್ದರು. ಹಟ್ಟಿಯ ಹೆಂಗಸರು ಮಕ್ಕಳಿಗೆ ಕಾತುರ, ಆತುರ ನೂರಾರು. ಅವರ ಮನಸ್ಸಿನಲ್ಲಿ ಕಡ್ಲೆಪುರಿ, ಬತ್ತಾಸುಗಳ ನಿರೀಕ್ಷೆ. ರಾಗಿಯ ಕಣದಲ್ಲಿ ಸ್ವಲ್ಪ ಹೊತ್ತು ವಿರಮಿಸಿಕೊಂಡ ನಂತರ ಗಂಟುಗಳೊಂದಿಗೆ ಅವರವರ ಹಟ್ಟಿಗಳಿಗೆ ಸೇರಿಕೊಳ್ಳುತ್ತಿದ್ದೆವು”[೬೦]ಎಂದು ಉಲ್ಲೇಖಿಸುತ್ತಾರೆ. ಇಲ್ಲಿನ ಜಾತ್ರೆಯ ವಿಶೇಷವೇನೆಂದರೆ ಮಾದಿಗ ಸಮುದಾಯದ ಜನರು ಹೋಗಿ ಮೊದಲ ಪೂಜೆ ಮಾಡಿದಾಗಲೇ ಜಾತ್ರೆಯ ತೇರು ಎಳೆಯುವುದು ಎಂಬ ಪ್ರತೀತಿ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ. ಹೀಗೆ ವಿಶಿಷ್ಟವಾದ ಆಚರಣೆಗಳನ್ನು ಸಂಜೀವರಾಯರು ದಾಖಲಿಸುತ್ತಾರೆ.

೩. ಮಾರಮ್ಮನ ಹಬ್ಬ

ತುಂಬಾಡಿ ರಾಮಯ್ಯ ಅವರು ತಮ್ಮ ಆತ್ಮಕಥನವಾದ ‘ಮಣೆಗಾರ’ ಕೃತಿಯಲ್ಲಿ ಮಾರಮ್ಮನ ಜಾತ್ರೆಯ ವಿಶೇಷತೆಯನ್ನು ಬಲು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ತುಂಬಾಡಿ ಗ್ರಾಮದಲ್ಲಿ ಎಲ್ಲಾ ಜಾತಿಯ ಜನರು ಸೇರಿಕೊಂಡು ಕೆಲವು ಹಬ್ಬಗಳನ್ನು ಬಹಳ ಸಡಗರ ಸಂಭ್ರಮದಿಂದ ಯಾವುದೇ ಭೇದ ಭಾವವಿಲ್ಲದೆ ಆಚರಿಸುತ್ತಾರೆ. ಆ ಹಬ್ಬಗಳೆಂದರೆ ಯುಗಾದಿ, ಮಾರ್ನೋಮಿ, ಬಾಬಯ್ಯನಜಲ್ದಿ, ಆಂಜನೇಯ್ಯ ಮತ್ತು ಶೆಟ್ಟಿಹಳ್ಳಿ ಮಾರಮ್ಮನ ಹಬ್ಬಗಳನ್ನು ಎಲ್ಲಾ ಜಾತಿಯ ಜನರು ಸೇರಿ ಆಚರಿಸುತ್ತಾರೆ. ಈ ಮಣೆಗಾರ ಸಮುದಾಯದ ಜನರು ಮಾರ್ನೋಮಿ ಹಬ್ಬದ ಆಚರಣೆ ಮಾಡುವುದಿಲ್ಲ. ಇದಕ್ಕೆ ಕಾರಣವನ್ನು ಆತ್ಮಕಥನಕಾರರೆ ದಾಖಲಿಸಿದ್ದಾರೆ. “ನಮ್ಮ ಪೂರ್ವಿಕರು ಮಾರ್ನೋಮಿ ಹಬ್ಬ ಮಾಡಲು ಸಾಮಾನು ಸರಂಜಾಮುಗಳನ್ನು ತರಲು ಸಂತೆಗೆ ತನ್ನ ದೊಡ್ಡಮಗನೊಂದಿಗೆ ಹೋಗಿದ್ದರಂತೆ. ಸಾಮಾನು ತೆಗೆದುಕೊಂಡು ವಾಪಸ್ಸು ಬರೋವಾಗ, ಅವರ ಮಗನು ಇದ್ದಕ್ಕಿದ್ದಂತೆ ಸತ್ತು ಹೋದನಂತೆ. ಮಗನನ್ನು ಕಳೆದುಕೊಂಡ ದುಃಖದಲ್ಲಿ ಮಾರ್ನೋಮಿ ಹಬ್ಬವನ್ನು ಮಾಡುವುದೇ ಬೇಡ ಎಂದು ನಮ್ಮ ಪೂರ್ವಿಕರು ತೀರ್ಮಾನಿಸಿದರಂತೆ”.[೬೧] ಈ ಮೇಲಿನ ಹಿನ್ನೆಲೆಯನ್ನು ಗಮನಿಸಿದ್ದಾಗ ಇಂದಿಗೂ ಈ ಆಚರಣೆಯನ್ನು ಮಾಡದೇ ಇರುವುದು ಹಿರಿಯರ ನಂಬಿಕೆಯಿಂದ. ಈ ನಂಬಿಕೆಯನ್ನು ನಾವು ಧಿಕ್ಕರಿಸಿ ಮಾರ್ನೋಮಿ ಹಬ್ಬವನ್ನು ಮಾಡಿದ್ದರೆ ಎಲ್ಲಿ ನಮ್ಮ ಮಕ್ಕಳಿಗೆ ತೊಂದರೆಯಾಗುತ್ತದೆ ಎಂಬ ಭಯದಿಂದ ಈ ಹಬ್ಬವನ್ನು ಆಚರಣೆ ಮಾಡುತ್ತಿಲ್ಲ. ಈ ಬಗೆಯ ಹಬ್ಬಗಳು ಇಡೀ ದಲಿತ ಸಮುದಾಯದಲ್ಲಿ ಒಂದಲ್ಲ

ಒಂದು ಕಾರಣದಿಂದ ಮಾಡುತ್ತಾ ಇದ್ದಾರೆ ಹಾಗೂ ಮಾಡದೇ ಇರುವುದನ್ನು ಕಾಣಲು ಸಾಧ್ಯವಿದೆ. ಈಬಗೆಯನಂಬಿಕೆಗಳು ಪರಂಪರಾಗತವಾಗಿ ಮುಂದುವರಿದುಕೊಂಡು ಹೋಗುವುದನ್ನು ಕಾಣಬಹುದು.

ಇದರೊಂದಿಗೆ ನಮ್ಮೂರಿನಲ್ಲಿ ಎಲ್ಲರೂ ಸೇರಿ ಮಾಡುತ್ತಿದ್ದ ಇನ್ನೊಂದು ಹಬ್ಬವೆಂದರೆ. ಶೆಟ್ಟಿಹಳ್ಳಿ ಮಾರಮ್ಮ ಮತ್ತು ಹನುಂತರಾಯ ದೇವರಿಗೆ ಆರತಿ ಮಾಡುವುದು. ಈ ಸಂದರ್ಭಗಳಲ್ಲಿ ಯಾವುದೇ ರೀತಿಯ ವೈಮನಸ್ಸುಗಳು ಇದ್ದರೂ ಸಹ ತಮ್ಮೆಲ್ಲ ನೋವುಗಳನ್ನು ಮರೆತು ಸಂತೋಷದಿಂದ ಹಬ್ಬದಲ್ಲಿ ಮೈಮರೆಯುತ್ತಿದ್ದರು. ಸೋಮವಾರ ಹಬ್ಬದ ಮೊದಲ ದಿನ ಹನುಮಂತರಾಯ ದೇವರಿಗೆ ಆರತಿ ಮಾಡುವುದು. ಮಂಗಳವಾರ ಹಬ್ಬದ ಎರಡನೇ ದಿನ ಶೆಟ್ಟಿಹಳ್ಳಿ ಮಾರಮ್ಮನಿಗೆ ಆರತಿ ಮತ್ತು ಕೋಣ ಕಡಿಯುವುದು. ಮೂರನೇ ದಿನ ಬಾಡಿನೂಟ. ಮಾರಮ್ಮನಿಗೆ ಹರಕೆ ಕಟ್ಟಿಕೊಂಡವರು ಕೋಣವನ್ನು ಬಿಟ್ಟಿರುತ್ತಿದ್ದರು. ಅದು ಊರಲ್ಲೆಲ್ಲಾ ತನಗೆ ಬೇಕಾದ ಹೊಲದಲ್ಲಿ ಚೆನ್ನಾಗಿ ಮೇಯ್ದು ಖಂಡತುಂಡವಾಗಿ ಬೆಳೆದಿರುತ್ತಿತ್ತು. ಊರಿನಲ್ಲಿ ಯಾರೂ ಅದಕ್ಕೆ ಅಡೆ–ತಡೆಯನ್ನುಂಟು ಮಾಡುವಂತಿರಲಿಲ್ಲ. ಊರಿನಿಂದ ಸ್ವಲ್ಪ ದೂರದಲ್ಲಿ ಕಾಳೆಕುಂಟೆಯವರ ದೊಡ್ಡ ಬೇವಿನಮರದ ಬುಡದಲ್ಲಿ ಮೂರು ಕಲ್ಲುಗಳನ್ನು ನಿಲ್ಲಿಸಿ ಮಾರಮ್ಮನ ದೇವಸ್ಥಾನ ಕಟ್ಟಿದ್ದರು. ಆರತಿ ಮಾಡುವ ದಿನ ದೇವಸ್ಥಾನದ ಮುಂದುಗಡೆ ಗೋರಿಗಂಬವನ್ನು ನಿಲ್ಲಿಸುತ್ತಿದ್ದರು. ಗೋರಿಗಂಬಕ್ಕೆ ಆರತಿ ಮಾಡಿ ಪೂಜೆ ಸಲ್ಲಿಸಿದ ಮೇಲೆ, ಬಲಿ ಕೊಡಬೇಕಾದ ಕೋಣವನ್ನು ಎಳೆದು ತಂದು ಗೋರಿಗಂಬಕ್ಕೆ ಭದ್ರವಾಗಿ ಬಿಗಿದು ನಂತರ ಕಡಿಯುತ್ತಿದ್ದರು.”[೪೨] ಇಲ್ಲಿ ಮಾರಮ್ಮ ದೇವರಿಗೆ ಕೋಣ ಬಲಿಕೊಡುವುದರ ಮೂಲಕ ತಮ್ಮ ಕಷ್ಟ ಮತ್ತು ಇಷ್ಟಗಳನ್ನು ದೇವರಲ್ಲಿ ಹೇಳಿಕೊಂಡು ಹರಕೆ ತೀರಿಸುವ ಸಂಪ್ರದಾಯವನ್ನು ಇಲ್ಲಿ ಕಾಣಬಹುದು.

ಮಾರಮ್ಮನಿಗೆ ಬಿಟ್ಟಿರುವ ಕೋಣವನ್ನು ಯಾರು ಒದೆಯುವಂತಿಲ್ಲ. ಇದನ್ನು ಪೂಜನೀಯ ಭಾವನೆಯಿಂದ ನೋಡಿಕೊಳ್ಳಬೇಕು. ಇದು ಊರಿನ ಯಾರ ಹೊಲಗಳಲ್ಲಿ ಬೇಕಾದರೂ ಮೇಯಬಹುದು ಇದನ್ನು ಯಾರು ತಡೆಯುವಂತೆ ಇರಲಿಲ್ಲ. ಒಂದು ವೇಳೆ ಕೋಣ ಮೇಯುತ್ತಿರುವ ಸಂದರ್ಭದಲ್ಲಿ ಯಾರಾದರೂ ತಡೆದರೆ ಅವರಿಗೆ ಮಾರಮ್ಮ ತೊಂದರೆ ಕೊಡುತ್ತಾಳೆ ಎಂದು ಈ ಜನರು ನಂಬಿದ್ದರು. ಹಾಗಾಗಿ ಇದನ್ನು ಯಾರು ತಡೆಯುತ್ತಿರಲಿಲ್ಲ. ಇಂತಹ ಪರಂಪರೆಯು ಪ್ರತಿಯೊಂದು ಹಳ್ಳಿಗಳಲ್ಲಿ ಇದೆ. ಊರಬಸವನ ಬಿಡುವುದು, ಹೆಣ್ಣುದೇವತೆಗಳಿಗೆ ಕೋಣಬಿಡುವುದು ಹಾಗೂ ಕುರಿ, ಹೋತ, ಕೋಳಿಗಳನ್ನು ದೇವರಿಗೆ ಹರಿಕೆ ಬಿಡುವ ಸಂಪ್ರದಾಯವನ್ನು ಇಂದಿಗೂ ಹಳ್ಳಿಗಳಲ್ಲಿ ಜನರು ಆಚರಿಸಿಕೊಂಡು ಬರುತ್ತಿದ್ದಾರೆ.

ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಕಥನವಾದ ‘ನಾ ಹರಿಜನ...?’ ಎಂಬ ಕೃತಿಯಲ್ಲಿ ದೇವರಿಗೆ ಹೋತ ಬಿಡುವ ಸಂಪ್ರದಾಯದ ಬಗ್ಗೆ ಹೇಳುತ್ತಾರೆ. “ದೇವರ ಹೆಸರಿನಲ್ಲಿ

ಹೋತವನ್ನು ಬಿಟ್ಟ ಮೇಲೆ ಅದಕ್ಕೆ ಸಂಬಂಧಿಸಿದಂತೆ ನಂಬಿಕೆಗಳು ಹಲವಾರು, ಈ ನಂಬಿಕೆಗಳು ಅಪ್ರತ್ಯಕ್ಷವಾಗಿ ಇನ್ನಷ್ಟು ಕೊಬ್ಬಿ ಬೆಳೆಯಲು ಕಾರಣವಾಗುತ್ತವೆ ಎಂದಿದ್ದಾರೆ. ದೇವರಿಗೆ ಬಿಟ್ಟ ಹೋತಗೆ ಯಾರು ಹೊಡೆಯಬಾರದು ಹಾಗೂ ಒದೆಯಬಾರದು. ಒದ್ದರಂತೂ ಮಹಾಪಾಪ. ದೇವರಿಗೆ ಬಿಟ್ಟ ಹೋತಕ್ಕೆ ಹೊಡೆದರೆ ಹಾಗೂ ಒದ್ದರೇ ಮೂಕಮಕ್ಕಳು ಹುಟ್ಟುತ್ತಾರೆ ಎಂಬ ನಂಬಿಕೆ ಇದೆ. ಒಮ್ಮೆ ಕಾಲು ಸೋಕಿದರೂ ಸಹ ತಪ್ಪಾಯಿತೆಂದು ನಮಿಸಬೇಕು"[೪೩] ಎಂದು ದಾಖಲಿಸುತ್ತಾರೆ. ಹೀಗೆ ಪ್ರತಿಯೊಂದು ಹಳ್ಳಿಗಳಲ್ಲೂ ಇಂತಹ ನಂಬಿಕೆಗಳು ಮತ್ತು ಸಂಪ್ರದಾಯ ಆಚರಣೆಗಳು ಸಂಸ್ಕೃತಿಯ ತುಣುಕುಗಳಾಗಿ ಗೋಚರವಾಗುತ್ತವೆ.

ಗ್ರಾಮೀಣ ಪ್ರದೇಶದ ಜನಸಾಮಾನ್ಯರಲ್ಲಿ ದೇವರ ಬಗ್ಗೆ ಅಪಾರವಾದ ನಂಬಿಕೆ ಮತ್ತು ಭಕ್ತಿ ಇರುವುದು ತಿಳಿದುಬರುತ್ತದೆ. ಕೋಣವನ್ನು ಬಲಿಕೊಡುವ ಮುನ್ನ ಒಂದು ಬಗೆಯ ಆಚರಣೆಯನ್ನು ಇವರು ಆಚರಿಸುತ್ತಾರೆ. ಮೇಯ್ದು ಕೊಬ್ಬಿರುತ್ತಿದ್ದ ಕೋಣವನ್ನು, ಮಾರಮ್ಮನಿಗೆ ಬಲಿಕೊಡುವ ಮುಂಚೆ ಒಂದು ವಾರ ಕಾಲ ಒಂದೇ ಕಡೆ ಬಿಗಿದು ಮೇವು ಹಾಕದೆ ಸೊರಗುವಂತೆ ಮಾಡುತ್ತಾರೆ. ಮಾರಮ್ಮನಿಗೆ ಬಲಿಕೊಡುವುದಕ್ಕೆ ಎರಡು ದಿನ ಮುಂಚೆಯೇ ಊರಿನ ಸುತ್ತಲು ಮೆರವಣಿಗೆ ಮಾಡುತ್ತಾರೆ. ಪ್ರತಿಮನೆಯವರು ಸಹ ಕೋಣನಿಗೆ ಕಾಲುತೊಳೆದು, ಅರಿಶಿನ ಕುಂಕುಮವಿಟ್ಟು ಪೂಜೆ ಮಾಡುತ್ತಾರೆ. ಜೊತೆಗೆ ಅದರ ಶಿರಕ್ಕೆ ಹರಳೆಣ್ಣೆ ಬಿಡುತ್ತಾರೆ. (ಕಡೆಯುವಾಗ ಅದರ ಶಿರ ಮೃದುವಾಗಿರಲೆಂದು). ಕೋಣವನ್ನು ಕಡಿಯುವ ಮುಂಚೆ, ಅತ್ತಿಂದಿತ್ತ-ಇತ್ತಿಂದತ್ತ ಬೆರಸಾಡಿಸಿ ಅದನ್ನು ಸುಸ್ತುಮಾಡಿಸುತ್ತಾರೆ. ಸುಸ್ತಾದ ಕೋಣವನ್ನು ಗೋರಿಗಂಬಕ್ಕೆ ಕಟ್ಟುವುದು ಸ್ವಲ್ಪ ತಡವಾದರೆ, ಗೊಲ್ಲ ಕಾವಲ್ಲಪ್ಪ ಮತ್ತು ತುಂಬಾಡಿ ಗೌಡರಿಂದ ಮಣೆಗಾರರು ಒದೆ ತಿನ್ನುವು ತಪ್ಪುತಿರಲಿಲ್ಲ. ಹಾಗಾಗಿ ಸರಿಯಾದ ಸಮಯಕ್ಕೆ ಮಣೆಗಾರರು ಕೋಣವನ್ನು ಕಂಬಕ್ಕೆ ಕಟ್ಟಿ ಹಾಕುತ್ತಿದ್ದರು.

"ಕೋಣವನ್ನು ಒಂದೇ ಏಟಿಗೆ ಕಡಿಯಬೇಕಿತ್ತು. ಇಲ್ಲದಿದ್ದರೆ ಕೋಣಕಡಿಯುವ ತಳವಾರನಿಗೆ ಒದೆ ತಪ್ಪುತ್ತಿರಲಿಲ್ಲ! ಕೋಣ ಕಡಿಯುವ ದಿನ, ಕಡಿಯುವವನನ್ನು ದಂಡಿಗೆ ಹೊರಟ ಸಿಪಾಯಿಯಂತೆ ಸಿಂಗರಿಸಿ ಬೀಳ್ಕೊಡುವಂತೆ, ಹಣೆಗೆ ಕುಂಕುಮವನ್ನಿಟ್ಟು, ಕೊರಳಿಗೆ ಹಾರವನ್ನು ಹಾಕಿ ಜನರು ಬೆಂಗಾವಲಿನವರಂತೆ ನಿಂತಿರುತ್ತಿದ್ದರು. ಕೋಣವನ್ನು ಕಡಿದ ತಕ್ಷಣ ಕಡಿದವನಿಂದ ಮಚ್ಚನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಇವರ ಕೆಲಸ. ಕೋಣ ಕಡಿಯುವವನ ಮುಖವಂತೂ ಎಲ್ಲಿ ಸುತ್ತಲಿನವರೆಲ್ಲಾ ಸವರಿಹಾಕಿ ಬಿಡ್ತಾನೇನೊ ಎನ್ನುವಂತಿರುತ್ತಿತ್ತು! ಕೂರಣ್ಣನವರ ಮಗ ನಾಗರಪ್ಪ ಕೋಣ ಕಡಿಯುವುದರಲ್ಲಿ ನಿಸ್ಸೀಮ. ಹೀಗೆ ಶೆಟ್ಟಿಹಳ್ಳಿ ಮಾರಮ್ಮನ ಹಬ್ಬವನ್ನು ನಮ್ಮೂರಿನಲ್ಲಿ ಮೂರು ವರ್ಷಗಳಿಗೊಮ್ಮೆ ಮಾತ್ರ ಮಾಡುತ್ತಿದ್ದರು"[೪೪] ಎಂದು ತುಂಬಾಡಿ ರಾಮಯ್ಯನವರು ತಮ್ಮ ಆತ್ಮಕಥೆಯಾದ ಮಣೆಗಾರದಲ್ಲಿ ದಾಖಲಿಸುತ್ತಾರೆ. ಈ ಮಾರಮ್ಮ ಹಬ್ಬವು ಬಹಳ

ಶಾಸ್ತ್ರೋಕ್ತವಾಗಿ ನಡೆಯಬೇಕು ಎಂದು ಇಲ್ಲಿಯ ಜನರು ಭಾವಿಸುತ್ತಾರೆ. ಒಂದುವೇಳೆ ಸ್ವಲ್ಪ ವ್ಯತ್ಯಾಸ ಉಂಟಾದರೂ ಸಹ ನಮಗೆ ತೊಂದರೆಯಾಗುತ್ತದೆ ಎಂದು ಇಲ್ಲಿಯ ಜನರು ನಂಬಿರುತ್ತಾರೆ. ಇಂತಹ ಹಬ್ಬದ ಆಚರಣೆಗಳು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ನಿರಂತರವಾಗಿ ನಡೆದುಕೊಂಡು ಬರುತ್ತಿವೆ.

೪. ಊರಮಾರಮ್ಮನ ಹಬ್ಬ

ಊರಮಾರಮ್ಮನ ಹಬ್ಬವನ್ನು ಪ್ರತಿವರ್ಷವೂ ನಮ್ಮೂರಿನಲ್ಲಿ ಮಾಡುತ್ತಿದ್ದರು. ಊರಮಾರಮ್ಮನ ಹಬ್ಬವಂತೂ ಕೇವಲ ಒಂದೇ ರಾತ್ರಿಗೆ ಮುಗಿದು ಹೋಗುತ್ತಿತ್ತು. ಊರಮಾರಮ್ಮನ ಹಬ್ಬ ಶುರುವಾಗುವ ಹದಿನೈದು ದಿನ ಮುಂಚೆಯೇ ಊರಿನಲ್ಲಿ ಹಬ್ಬದ ಬಗ್ಗೆ ಸಾರಿಕ್ಕುತ್ತಿದ್ದರು. ಹಬ್ಬಕ್ಕೆ ಸಾರಿಕ್ಕುವ ಕೆಲಸ ನಮ್ಮ ಮಣೆಗಾರರದ್ದೇ ಆಗಿತ್ತು. ತಮಟೆ ಬಡಿಯುತ್ತಾ "ಕೊಂಬಿನ ಕರ, ಹೊಂಬಾಳೆ ಹಣ್ಣು, ನಾಳೆ ಮಂಗಳವಾರ ಮಾರಮ್ಮನಂತಪ್ರೋ" ಎಂದು ಕೂಗುತ್ತಿದ್ದರು. ಮಾರಮ್ಮನಿಗೆ ಪೂಜೆ ಮಾಡುತ್ತಿದ್ದವರು ಮಡಿವಾಳರ ಹುಲಿಯಪ್ಪನವರು. ಊರ ಮಧ್ಯದಲ್ಲಿರುವ ಜೋತಮ್ಮನವರ ಮನೆಯ ಮುಂದೆ ಊರಮಾರಮ್ಮನ ಹಬ್ಬದ ದಿನ ತಾತ್ಕಾಲಿಕವಾಗಿ ಗದ್ದುಗೆಯನ್ನು ನಿರ್ಮಿಸುತ್ತಿದ್ದರು. ಕುರುಬರ ಮನೆಯಿಂದ 'ಬಾನ' ಬರುತ್ತಿತ್ತು. 'ಬಾನ' ಹೊರುವವರು ಬರಿಮೈಯಲ್ಲಿ ಸೊಂಟಕ್ಕೆ ಪಂಚೆ ಬಿಗಿದು, ಬಾಯಿಗೆ ಬಟ್ಟೆಕಟ್ಟಿಕೊಂಡು ಬರುತ್ತಿದ್ದರು. 'ಬಾನ' ಹೊತ್ತು ಗದ್ದುಗೆಗೆ ಬಂದ ನಂತರ ಅದರ ಉಸ್ತುವಾರಿಯನ್ನು ಮಡಿವಾಳರು ವಹಿಸಿಕೊಳ್ಳುತ್ತಿದ್ದರು. 'ಘಟೆ' ನಮ್ಮ ಮಣೆಗಾರರ ಮನೆಯಿಂದ ಬರುತ್ತಿತ್ತು. ಮಣೆಗಾರರ ಹಟ್ಟಿಯ ಯಜಮಾನರಾಗಿದ್ದ ನನ್ನ ದೊಡ್ಡಪ್ಪ ನಾಗಣ್ಣನವರ ಮನೆಯಿಂದ ಹೊರಡುತ್ತಿದ್ದ ಈ 'ಘಟೆ' ಹೊರುವವರು ನೇಮದಿಂದಿದ್ದು ಅದರ ಪೂಜೆಯನ್ನು ಮಣೆಗಾರರೇ ಮಾಡಬೇಕಿತ್ತು. ಮಣೆಗಾರರ ಮನೆಯಿಂದ ಬಂದ ಈ 'ಘಟೆ'ಯನ್ನು ಗದ್ದುಗೆಯ ಸ್ವಲ್ಪದೂರದಲ್ಲಿ, ಅದಕ್ಕೆ ಅಭಿಮುಖವಾಗಿ ಇಡುತ್ತಿದ್ದರು. 'ಘಟೆ' ಇಳಿಸುವಾಗ 'ನನ್ನ ದೊಡ್ಡಗೌಡ ಶಾನಭೋಗರು ನೀರ್ಗಂಟಿ, ಗಮಟಗಾರರು ಹತ್ತು ಕುಲ ಸ್ವಾಮಿ. ಘಟೆ ಇಳಿಸೋಕೆ ಅಪ್ಪಣೆ ಕೊಡಬೇಕು' ಎಂದು ಅಲ್ಲಿ ನೆರದಿದ್ದ ಕುಲಸ್ಥರ ಅಪ್ಪಣೆ ಕೇಳುತ್ತಿದ್ದರು.

ಪೂಜೆ ಮುಗಿದ ಮೇಲೆ ಮುಖ್ಯವಾಗಿ 'ಸರಗು' ಹಾಕುವುದು ಶುರುವಾಗುತ್ತಿತ್ತು. 'ಸರಗು' ಹಾಕುವುದೆಂದರೆ; 'ಮಾರಮ್ಮನಿಗೆ ಕಡಿದಿದ್ದ ಕುರಿಯ ರಕ್ತ ಮತ್ತು ಅದರ ಕರುಳನ್ನು ಅನ್ನದೊಂದಿಗೆ ಬೆರಸಿ ಊರಿನ ನಾಲ್ಕೂ ದಿಕ್ಕಿಗೆ ಎರಚುವುದು. ಹೀಗೆ 'ಸರಗು' ಹಾಕುವುದರಿಂದ ಊರಿಗೆ ಕೇಡು ಬರುವುದಿಲ್ಲವೆಂದು ನಂಬಿಕೆ. ಪ್ರತಿವರ್ಷ 'ಸರಗು' ಹಾಕುವುದನ್ನು ಊರಿನ ಚಾಕರಿ ಮಾಡುತ್ತಿದ್ದ ನಮ್ಮ ಮಣೆಗಾರರೇ ಮಾಡುತ್ತಿದ್ದರು. 'ಸರಗು' ಹಾಕುವವರು ಲಂಗೋಟಿ ಒಂದನ್ನು

ಬಿಟ್ಟು ಮೈಮೇಲೆ ಒಂದು ನೂಲಿನ ಎಳೆಯನ್ನೂ ಹಾಕುವಂತಿರಲಿಲ್ಲ. ಕುರಿಯ ಕರುಳನ್ನು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ತೆಗೆದು, ಅನ್ನದೊಂದಿಗೆ ಬೆರಸಿ 'ಕೋ ಬಲಿ', 'ಕೋ ಬಲಿ' ಕೂಗುತ್ತಾ ಊರಿನ ಸುತ್ತ 'ಸರಗು' ಎರಚುತ್ತಿದ್ದರು. ಊರಿನ ನಾಲ್ಕೂ ದಿಕ್ಕಿನ ಗಡಿಗಳನ್ನು ಸ್ವಲ್ಪಮೀರಿದರೂ 'ಸರಗು' ಹಾಕುವವರು ರಕ್ತಕಾರಿ ಸಾಯುತ್ತಾರೆಂಬ ನಂಬಿಕೆಯು ಇತ್ತು. ಊರಿಗೆ 'ಸರಗು' ಹಾಕುವುದು ಒಂದೊಂದು ವರ್ಷ ಅಪ್ಪನ ಪಾಲಿಗೂ ಬರುತ್ತಿತ್ತು. ಆಗ ಅಪ್ಪ 'ಸರಗು' ಹಾಕಿ ವಾಪಸ್ ಬರುವವರೆಗೂ ನಮಗೆ ಜೀವದಲ್ಲಿ ಜೀವ ನಿಲ್ಲುತ್ತಿರಲಿಲ್ಲ. ಏಕೆಂದರೆ 'ಸರಗು' ಎರಚುವವರು ಊರಿನ ನಾಲ್ಕು ಗಡಿಗಳಿಗೆ ಓಡೋಡುತ್ತಾ 'ಸರಗು' ಎರಚಬೇಕಾಗುತ್ತಿದ್ದರಿಂದ, ಅವರು ಸುಸ್ತಾಗಿ ಗ್ಯಾನತಪ್ಪಿ ಬೀಳುತ್ತಿದ್ದರು. 'ಸರಗು' ಎರಚಿ ಗ್ಯಾನತಪ್ಪಿ ಬಿದ್ದಿರುತ್ತಿದ್ದ ಅಪ್ಪನನ್ನು ಹೊತ್ತು ತರುತ್ತಿದ್ದರು.

ಗ್ಯಾನತಪ್ಪಿ ಬಿದ್ದಿರುತ್ತಿದ್ದ 'ಸರಗು' ಹಾಕಿದವರನ್ನು ಹೊತ್ತು ತಂದು ಗದ್ದುಗೆಯ ಎದುರಿಗಿದ್ದ 'ಘಟೆ'ಯ ಪಕ್ಕದಲ್ಲಿ ಮಲಗಿಸುತ್ತಿದ್ದರು. ಊರಿನ ಮಣೆಗಾರರು ಅವರ ಮೇಲೊಂದು ಬಟ್ಟೆಯನ್ನು ಹೊದ್ದಿಸುತ್ತಿದ್ದರು. ಕೆಲವು ಸಾರಿ ಮಣೆಗಾರರು ಹೊದ್ದಿಸಿದ ಬಟ್ಟೆ ಹಳೆಯದ್ದಾಗಿದ್ದರೆ, 'ಸರಗು' ಹಾಕಿದವರು ಹಳೆಯ ಬಟ್ಟೆಯನ್ನು ನಿರಾಕರಿಸಿ ಹೊಸಬಟ್ಟೆಗಾಗಿ ತಕರಾರು ತೆಗೆಯುತ್ತಿದ್ದರು. ಇದಾದ ನಂತರ ಗದ್ದುಗೆಯ ಮುಂದೆ ರಾಶಿ ಹಾಕಿರುತ್ತಿದ್ದ ಅನ್ನವನ್ನು ಪ್ರಸಾದವನ್ನಾಗಿ ಎಲ್ಲರಿಗೂ ಹಂಚುತ್ತಿದ್ದರು. ಎಲ್ಲರಿಗೂ ಪ್ರಸಾದ ಹಂಚಿದ ಮೇಲೆ ಕೊನೆಯಲ್ಲಿ ಹೊಲೆಮಾದಿಗರಿಗೆ ಪೂಜಾರಪ್ಪನವರು ತಮ್ಮೆರಡೂ ಕೈಗಳನ್ನು ಕತ್ತರಿಯಾಕಾರದಲ್ಲಿ ಹಿಡಿದು 'ಎಡಗೈ' 'ಬಲಗೈ' ಎನ್ನುತ್ತಿದ್ದರು. ಪ್ರಸಾದ ಪಡೆಯಲು ಹೊಲೇರು ಬಲಗಡೆಯಿಂದ, ಮಾದಿಗರು (ಮಣೆಗಾರರು) ಎಡಗಡೆಯಿಂದ ಬರಬೇಕಾಗುತ್ತಿತ್ತು."[೪೫] ಮಾರಮ್ಮನ ಹಬ್ಬದ ಸಂಸ್ಕೃತಿಯಲ್ಲಿ ಮಣೆಗಾರರದೆ ಬಹು ಮುಖ್ಯಪಾತ್ರ. ಆದರೆ ಇವರು ಮೇಲು ಜಾತಿಯವರ ದೌರ್ಜನ್ಯಕ್ಕೆ ಗುರಿಯಾಗುವ ಸನ್ನಿವೇಶವನ್ನು ಕಾಣಲು ಸಾಧ್ಯವಿದೆ. ಊರಿನ ಮಾರಮ್ಮನಿಗೆ ಮೊದಲು ಸೆರಗು ಹಾಕವವರು ಮಣೆಗಾರರು. ಆದರೆ ಆದೇ ದೇವರ ಪ್ರಸಾದವನ್ನು ಪಡೆಯಲು ಮಣೆಗಾರರು ಹಾಗೂ ಹೊಲೆಯ ಜನಾಂಗದವರು ಬೇರೆ ಬೇರೆ ಸಾಲಿನಲ್ಲಿ ಬರುವುದು ಏಕೆ ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಮೇಲುಜಾತಿಯವರ ಮನುವಾದಿ ಮನಸ್ಥಿತಿಯನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

೫. ಗೆರೆಸು ಮಾರಮ್ಮನ ಹಬ್ಬ

ತುಂಬಾಡಿ ಗ್ರಾಮದಲ್ಲಿ ಎಲ್ಲರೂ ಸೇರಿ ಆಚರಿಸುತ್ತಿದ್ದ ಇನ್ನೊಂದು ಹಬ್ಬವೆಂದರೆ 'ಗೆರೆಸು ಮಾರಮ್ಮ'ನ ಹಬ್ಬ. ಈ ಹಬ್ಬವನ್ನು ಮಾಡಬೇಕಾದರೆ ಊರಿನ ದನಕರುಗಳಿಗೆ ಗೆರೆಸು ರೋಗ

ಬಂದರೆ ಮಾತ್ರ ಈ ಹಬ್ಬವನ್ನು ಆಚರಿಸುತ್ತಾರೆ. ಗೆರೆಸು ರೋಗ ಬಂದರೆ ಮುದ್ದು 'ಗೆರೆಸು ಮಾರಮ್ಮ'ನನ್ನು ಪೂಜಿಸುವುದು ಎಂದು ರಾಮಯ್ಯನವರು ಹೇಳುತ್ತಾರೆ. "ಊರ ಮಧ್ಯದ ಚಾವಡಿ ಮುಂದಿದ್ದ ನಿಲುವುಗಲ್ಲಿಗೆ ಊರಿನವರೆಲ್ಲ ಮನೆಗೊಂದು ಬಿಂದಿಗೆಯಂತೆ ನೀರು ತಂದು ಸುರಿಯುತ್ತಿದ್ದರು. ಆ ನೀರೆಲ್ಲ ಹರಿದು ಅಲ್ಲಿನ ನೆಲವೆಲ್ಲ ಕೆಸರಾಗುತ್ತಿತ್ತು. ಆ ಕೆಸರಿನಲ್ಲಿ ದನಕರುಗಳನ್ನೆಲ್ಲಾ ಓಡಾಡಿಸುತ್ತಿದ್ದರು. ಇದರಿಂದ ದನಕರುಗಳ 'ಗೆರೆಸು ರೋಗ' ವಾಸಿಯಾಗುತ್ತದೆಂಬ ನಂಬಿಕೆ ನಮ್ಮವರಲ್ಲಿತ್ತು."[೪೬] ಹೀಗೆ ದೇವತೆಯ ಹೆಸರಿನಲ್ಲಿ ಯಾವುದೇ ರೀತಿಯ ಒಳ್ಳೆಯ ಕೆಲಸಗಳನ್ನು ಮಾಡಿದಾಗ ನಮಗೆ ಹಾಗೂ ನಮ್ಮ ಗ್ರಾಮಗಳಿಗೆ ಒಳ್ಳೆಯದಾಗುತ್ತದೆ ಎಂದು ಇಲ್ಲಿಯ ಜನರು ನಂಬಿದ್ದರು. ಈ ಹಬ್ಬವನ್ನು ಕೇವಲ ಮಣೆಗಾರರು ಮಾತ್ರ ಮಾಡುತ್ತಾರೆ. ಇಲ್ಲಿಯ ವಿಶೇಷವೇನೆಂದರೆ ಪ್ರತಿಯೊಂದು ಮನೆಯಿಂದ ತಂದಿರುವಂತಹ ಆಹಾರವನ್ನು ಒಂದು ಕಡೆ ವಿಶಾಲವಾದ ಬಂಡೆಯ ಮೇಲೆ ಹಾಕಿ ಆಮೇಲೆ ಎಲ್ಲರು ಒಂದೆಡೇ ಕುಳಿತು ಊಟ ಮಾಡುತ್ತಾರೆ. ಇಂತಹ ಆಚರಣೆಯ ಪರಂಪರೆಯನ್ನು ಇಂದಿಗೂ ಈ ಜನರು ನಡೆಸಿಕೊಂಡು ಬರುತ್ತಿದ್ದಾರೆ. ಈ ಬಗೆಯ ಆಚರಣೆಗೆ 'ನೆಲಗಂಗಳದೂಟ' ಎಂದು ಕರೆಯುತ್ತಾರೆ.

ಮುಳ್ಳೂರು ನಾಗರಾಜು ಅವರು ತಮ್ಮ 'ಮಾಮರದ ಮೇಲೊಂದು ಕೋಗಿಲೆ' ಎಂಬ ಆತ್ಮಕಥೆಯಲ್ಲಿ ಅಜ್ಜಿಯ ದೈವಭಕ್ತಿ ಹಾಗೂ ನಂಬಿಕೆ ಬಗ್ಗೆ ದಾಖಲು ಮಾಡಿದ್ದಾರೆ. ಒಮ್ಮೆ ಅಜ್ಜಿ ನಮ್ಮ ಮನೆಗೆ ಹಾಗೂ ನಮಗೆ ಯಾವುದೇ ರೀತಿಯ ಒಳ್ಳೆಯ ಕೆಲಸಗಳು ಆಗುತ್ತಿಲ್ಲ ಬರಿ ಕಷ್ಟಗಳನ್ನೇ ದೇವರು ನೀಡುತ್ತಿದ್ದಾನೆ ಎಂದು ಕೊರಗಿ ದೇವರಲ್ಲಿ ಹರಕೆ ಕಟ್ಟುವ ಪರಿಕಲ್ಪನೆಯನ್ನು ಕಾಣಬಹುದು. "ತನ್ನ ಕಷ್ಟಗಳನ್ನು ಹೋಗಲಾಡಿಸಲು ದೇವರು ತನ್ನತ್ತ ಕಣ್ಣು ಬಿಡಲಿಲ್ಲವೆಂದೋ ಆಕೆ ಕೊರಗುತ್ತಾಳೆ. ಅದಕ್ಕಾಗಿ ಆನೇಕ ಬಾರಿ ದೇವರಿಗಾಗಿ ತಪ್ಪು ಕಾಣಿಕೆಯನ್ನು ಕಟ್ಟುತ್ತಿದ್ದಳು. ಬಿಳಿಯದೊಂದು ತುಂಡು ಬಟ್ಟೆಯನ್ನು ಅರಿಶಿಣದ ನೀರಿನಲ್ಲಿ ಅದ್ದಿದ ಹಳದಿ ಬಟ್ಟೆಯಾಗಿಸುತ್ತಿದ್ದಳು. ಅದಕ್ಕೆ ಆರು ಕಾಸನ್ನೋ ಮೂರು ಕಾಸನ್ನೋ ಗಂಟುಹಾಕಿ ಮನೆಯ ಸೂರಿಗೆ ಗಂಟುಹಾಕುತಿದ್ದಳು."[೪೭] ಈ ಬಗೆಯಲ್ಲಿ ದೇವರಿಗೆ ಹರಕೆ ಕಟ್ಟುತ್ತಾರೆ. ಇಲ್ಲಿನ ಜನರಿಗೂ ಹಾಗೂ ದೇವರಿಗೂ ಇರುವ ಒಂದು ಬಗೆಯ ರಕ್ತಸಂಬಂಧ ಎಂದು ಕರೆಯಲು ಸಾಧ್ಯವಿದೆಯೇ ಎಂದು ನನಗೆ ಅನಿಸುತ್ತದೆ. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುವ ಮಹಿಳೆಯರು ತೊಂದರೆ ಉಂಟಾದರೆ ಈ ಬಗೆಯಲ್ಲಿ ಅರಿಶಿಣದ ಗಂಟನ್ನು ದೇವರ ಹೆಸರಿನಲ್ಲಿ ತಮ್ಮ ತಮ್ಮ ಮನೆಯ ತೊಲೆಗಳಲ್ಲಿ ಕಟ್ಟುವಂತಹ ಪರಂಪರೆಯನ್ನು ಬೆಳಸಿಕೊಂಡು ಬಂದಿದ್ದಾರೆ. ಇದರಿಂದ ಇವರಿಗೆ ನೆಮ್ಮದಿಯು ದೊರೆಯುತ್ತದೆ ಎಂದು ತಿಳಿದುಕೊಳ್ಳಲಿಕೆ ಸಾಧ್ಯವಿದೆಯೇ?. ಏನೇ ಆಗಲಿ ಗ್ರಾಮೀಣ ಜನರ ಮನಸ್ಥಿತಿಯ ಹಿನ್ನೆಲೆಯಲ್ಲಿ ಹಾಗೂ ಮನೋವೈಜ್ಞಾನಿಕ ಧೋರಣೆಯಿಂದ ಇವುಗಳು ಸತ್ಯವಾದ ನಿಲುವುಗಳಾಗಿ ಪರಿಣಮಿಸುತ್ತವೆ.

೬. ಮುಸ್ಲಿಂರೊಂದಿಗೆ ದಲಿತರ ಬಾಬಯ್ಯನ ಜಾತ್ರೆ

ಬಾಬಯ್ಯನ ಜಾತ್ರೆಗೆ ಸಂಬಂಧಿಸಿದ್ದಂತೆ ವಿಶಿಷ್ಟವಾದ ಆಚರಣೆಗಳನ್ನು ತುಂಬಾಡಿ ಗ್ರಾಮದ ಅಕ್ಕ ಪಕ್ಕ ಗ್ರಾಮದ ಜನರು ಹೇಗೆ ಆಚರಿಸುತ್ತಾರೆ ಎಂಬುವುದರ ಬಗ್ಗೆ ರಾಮಯ್ಯನವರು ಮತ್ತಷ್ಟು ವಿಚಾರವನ್ನು ದಾಖಲಿಸುತ್ತಾರೆ. ಈ ಜಾತ್ರೆಯ ವಿಶೇಷವೇನೆಂದರೆ, ಇಲ್ಲಿ ಎಲ್ಲಾ ಜಾತಿಯ ಜನರು ಸೇರಿ ಆಚರಿಸುವ ಜಾತ್ರೆಯಾಗಿದೆ. ತುಂಬಾಡಿ, ಪೆಮ್ಮದೇವರಹಳ್ಳಿ, ಪಕೀರಪ್ಪನ ಪಾಳ್ಯ, ಸುಣ್ಣಕಲ್ಲರ ಪಾಳ್ಯ ಹಾಗೂ ಲಂಬಾಣಿ ತಾಂಡಗಳು ಸೇರಿ ಆಚರಿಸುವ ಜಾತ್ರೆಯಾಗಿದೆ. ಇಲ್ಲಿ ಮುಸ್ಲಿಂ ಜನಾಂಗದವರ ಪಾತ್ರ ಬಹಳ ಮುಖ್ಯವಾಗಿದೆ. ಈ ತುಂಬಾಡಿ ಊರಿನಲ್ಲಿ ಮುಸ್ಲಿಮರು ಇಲ್ಲದಿದ್ದರೂ ಬಾಬಯ್ಯನ ಜಾತ್ರೆಗೋಸ್ಕರವಾಗಿ ಬಾಬಯ್ಯನ ಜಾತ್ರೆಯಲ್ಲಿ ಪೂಜೆಮಾಡುವುದಕ್ಕಾಗಿಯೇ ಅಕ್ಕಿರಾಂಪುರದಿಂದ ಒಂದು ಮುಸ್ಲಿಂ ಕುಟುಂಬವನ್ನು ತುಂಬಾಡಿ ಗ್ರಾಮಕ್ಕೆ ಕರೆದುಕೊಂಡು ಬರುತ್ತಾರೆ. ಈ ಊರಿನ ಜನ ಯಾವುದೇ ಭಾವಗಳಿರದೆ, ತಮ್ಮದೇ ಹಬ್ಬವೆನ್ನುವಂತೆ ಬಾಬಯ್ಯನ ಜಾತ್ರೆಯನ್ನು ಇಲ್ಲಿನ ಎಲ್ಲಾ ಜನರು ಸಂತೋಷದಿಂದ ಏಳು ದಿನಗಳವರೆಗೆ ಆಚರಿಸುತ್ತಾರೆ.

ತುಂಬಾಡಿ ಗ್ರಾಮದಲ್ಲಿ 'ಅಲಾವಿ' ಗುಂಡಿಗೆ ಗುದ್ದಲಿಪೂಜೆ ಮಾಡುವುದರಿಂದ ಬಾಬಯ್ಯನ ಜಾತ್ರೆ ಪ್ರಾರಂಭವಾಗುತ್ತದೆ. "ಬಾಬಯ್ಯನ ಜಾತ್ರೆ ಆರು ದಿನಗಳು ನಡೆದು, ಏಳನೇ ದಿವಸ 'ಸರಗತ್ತು' ಎಂಬ ಆಚರಣೆ ಇದೆ. ಸರಗತ್ತು ಎಂದರೆ, ಒಂದು ಉದ್ದನೆ ಬಿದಿರುಗಳಕ್ಕೆ ಬಿಳಿಬಟ್ಟೆಯನ್ನು ಸುತ್ತಿ, ತುದಿಯಲ್ಲಿ ಕುಚ್ಚನ್ನು ಬಿಟ್ಟು ಕೆಂಪು ಲಾಡಿದಾರದಿಂದ ಕಟ್ಟುತ್ತಿದ್ದರು. ಇದನ್ನು ಹುಸೇನಿ ದೇವರೆಂದು ಕರೆಯುತ್ತಿದ್ದರು. ಬಿದಿರಿನ ಕಡ್ಡಿಗಳಿಂದ ಮಂಟಪವನ್ನು ಕಟ್ಟಿ, ಅದರ ಮಧ್ಯೆ ಬೆಳ್ಳಿಯ ಹಸ್ತಗಳನ್ನು ಕಟ್ಟುತ್ತಿದ್ದರು. ಈ ದೇವರನ್ನು ಜಾತ್ರೆಯ ಕೊನೆಯ ದಿನದವರೆಗೂ (ಏಳನೇ ದಿನದವರೆಗೆ) 'ನೆಲೆದೇವರಂತೆ' ಪೂಜೆಮಾಡುತ್ತಿದ್ದರು. ಇದರ ಪಕ್ಕದಲ್ಲಿ ಮೂರು ಘೋರಿ ಬಾಬಯ್ಯಗಳನ್ನು ಕಟ್ಟುತ್ತಿದ್ದರು. ಈ ಬಾಬಯ್ಯನ ಜಲ್ದಿಗೆ ಹಿಂದಿನ ರಾತ್ರಿ ಪೂಜೆ ಮಾಡುವುದಕ್ಕೆ 'ಸರಗುತ್ತ' ಎಂದು ಕರೆಯಲಾಗುತ್ತಿತ್ತು.

ಈ ಜಾತ್ರೆಯ ಮತ್ತೊಂದು ವಿಶೇಷವೆಂದರೆ, ಅಲಾವಿ ಗುಂಡಿಯಲ್ಲಿ ಮರದ ದಿಮ್ಮಿಗಳನ್ನು ರಾಶಿಹಾಕಿ ಬೆಂಕಿಹಚ್ಚಿ ಇಡೀ ರಾತ್ರಿ ಅದರ ಸುತ್ತ ಕುಣಿಯುವುದು. ಇದಕ್ಕೆ ಎರಡು ದಿನ ಮುಂಚೆ ಹುಸೇನಿ ದೇವರನ್ನು ಹೊತ್ತು ತುಂಬಾಡಿ, ಪೆಮ್ಮದೇವರಹಳ್ಳಿ, ಫಕೀರಪ್ಪನ ಪಾಳ್ಯ, ಸುಣ್ಣಕಲ್ಲರ ಪಾಳ್ಯ ಮತ್ತು ಲಂಬಾಣಿ ತಾಂಡಗಳಿಗೆ ಹುಸೇನಿ ದೇವರು ತಮಟೆ, ವಾಲಗದ ಸಮೇತ ಮೆರವಣಿಗೆ ಹೊರಡುತ್ತಾರೆ. ಹುಸೇನಿ ದೇವರಿಗೆ ಎಲ್ಲ ಮನೆಯವರೂ ಸಕ್ಕರೆ ಓದಿಸಿ ಪೂಜೆ ಮಾಡಿಸುತ್ತಾರೆ. ತಮಟೆ ಮತ್ತು ವಾಲಗದವರು ಹಳ್ಳಿಯವರಿಂದ ರಾಗಿ, ಭತ್ತ ಮತ್ತು ಹಣವನ್ನು

ಕಾಣಿಕೆಯನ್ನಾಗಿ ಪಡೆದರೆ, ಪೂಜಾರಪ್ಪನವರು ಅಕ್ಕಿ ಮತ್ತು ಬೇಳೆಯನ್ನು ಮಾತ್ರ ಕಾಣಿಕೆಯನ್ನಾಗಿ ಪಡೆದು ಈ ಜಾತ್ರೆಯನ್ನು ಆಚರಿಸುವುದು ವಿಶೇಷವಾಗಿದೆ.

ಸರಗತ್ತಿನ ದಿನ ಇಡೀ ರಾತ್ರಿ ಎಲ್ಲರೂ ಸೇರಿ 'ಅಲಾವಿ' ಗುಂಡಿಯ ಸುತ್ತ ಕುಣಿಯುವುದು ಇಲ್ಲಿಯ ಪದ್ಧತಿ. ಕುಣಿಯುವುದು ಶುರುವಾಗುವುದಕ್ಕೆ ಮುಂಚೆ ಲಂಬಾಣಿ ತಾಂಡಗಳಿಂದ ಪಾನಕದ ಗಡಿಗೆಗಳು ಈ ಅಲಾವಿ ಗುಡಿಯ ಬಳಿಗೆ ತರುತ್ತಿದ್ದರು. ಲಂಬಾಣಿ ಗಂಡಸರು ಬಣ್ಣದ ವೇಷಗಳನ್ನು ಹಾಕಿಕೊಂಡು ಕುಣಿಯುತ್ತಾ ಬರುತ್ತಿದ್ದರೆ, ಸದಾ ಬಣ್ಣದ ಬಟ್ಟೆಗಳನ್ನೇ ಹಾಕಿಕೊಂಡಿರುತ್ತಿದ್ದ ಲಂಬಾಣಿ ಹೆಂಗಸರು ಪಾನಕದ ಗಡಿಗೆಗಳನ್ನು ಹೊತ್ತು ಬರುತ್ತಿದ್ದರು. ಅನಂತರ ಹೊತ್ತು ಮೂಡುತ್ತಿದ್ದಂತೆಯೆ ಅಲಾವಿಯ ಗುಡಿಯ ಮುಂದೆ ಕೆಂಡಹಾಯುವುದು ಶುರುವಾಗುತ್ತಿತ್ತು. ಕೆಂಡ ಹಾಯುವುದೆಂದರೆ ಅಲಾವಿಗುಂಡಿಯಲ್ಲಿ ರಾತ್ರಿಯೆಲ್ಲಾ ಉರಿದ ಮರದ ತುಂಡುಗಳು ಬೆಳಿಗ್ಗೆ ಹೊತ್ತಿಗೆ ಕೆಂಡವಾಗಿ, ಅಲಾವಿಗುಂಡಿ ಕೆಂಡದಿಂದಲೇ ತುಂಬಿಹೋಗಿರುತ್ತದೆ"[೪೮] ಎಂದು ಆತ್ಮಕಥನಕಾರರು ಹೇಳುತ್ತಾರೆ.

ಈ ಕೊಂಡಹಾಯುವ ಪದ್ಧತಿಯ ಇನ್ನೊಂದು ವಿಶೇಷವೇನೆಂದರೆ, ಹೆಣ್ಣು ಮಕ್ಕಳು ಕೊಂಡ ಹಾಯುವುದು. ಕಾರಣ ನಮಗೆ ಬಂದಿರುವ ಕಷ್ಟಗಳು ಪರಿಹಾರವಾದರೆ ಬಾಬಯ್ಯನ ಜಾತ್ರೆಯಲ್ಲಿ ಕೊಂಡಾ ಹಾಯುವುದಾಗಿ ಹೆಣ್ಣು ಮಕ್ಕಳು ಹರಕೆ ಹೊತ್ತಿರುತ್ತಾರೆ. ಈ ಹರಕೆ ಹೊತ್ತವರು ಈ ಕೆಂಡದ ಮೇಲೆ ಮೂರು ಸಲ ಓಡುತ್ತ ಹೋಗುತ್ತಾರೆ. ಇಂತಹ ಕೊಂಡಹಾಯುವ ಆಚರಣೆಗಳು ಇಂದಿಗೂ ಹಲವು ಕಡೆ ನಡೆಯುತ್ತವೆ. ಮಂಡ್ಯ, ಮೈಸೂರು, ಸರಗೂರು, ತುಮಕೂರು ಜಿಲ್ಲೆಗಳಲ್ಲಿ ಹೆಣ್ಣುಮಕ್ಕಳು ಕೊಂಡ ಹಾಯುವುದನ್ನು ಕಾಣಬಹುದು.

ಈ ಬಾಬಯ್ಯನ ಜಾತ್ರೆಯು ಮುಗಿಯುವವರೆಗೂ ಊರಿನ ಯಾರ ಮನೆಯಲ್ಲಿಯೂ ಹಂದಿಮಾಂಸವನ್ನು ಬೇಯಿಸುವಂತಿಲ್ಲ ಹಾಗೂ ಊರಿನ ಒಳಕ್ಕೆ ಯಾವ ಹಂದಿಯೂ ಬರದಂತೆ ನೋಡಿಕೊಳ್ಳಬೇಕು. ಈ ಜಾತ್ರೆಯಲ್ಲಿ ಹಂದಿಯನ್ನು ಕಂಡರೆ ಹಾಗೂ ಹಂದಿ ಮಾಂಸವನ್ನು ತಿಂದರೆ ಅದು ಅಶುಭದ ಸಂಕೇತವೆಂದು ಇಲ್ಲಿಯ ಜನರು ನಂಬಿದ್ದರು. ಜಾತ್ರೆ ಆರಂಭವಾದ ಐದು ದಿವಸಕ್ಕೆ ಲಾಡಿ ಹಾಕಿಸಿಕೊಳ್ಳುವ ಹರಕೆಯು ನಡೆಯುತ್ತಿತ್ತು. ಲಾಡಿ ಹಾಕಿಸಿಕೊಳ್ಳುವುದು ಎಂದರೆ, ಕೆಂಪು ದಾರಕ್ಕೆ ಆರಿಸಿನ ಬಣ್ಣದ ಕುಚ್ಚು ಕಟ್ಟಿರುವ ಈ ಲಾಡಿಯನ್ನು ಊರಿನಲ್ಲಿ ಎಲ್ಲ ಮನೆಯವರೂ ಹಾಕಿಸಿಕೊಳ್ಳುವುದು. ಲಾಡಿ ಹಾಕಿಸಿಕೊಂಡವರು ಹಂದಿಮಾಂಸ ತಿನ್ನುವಂತಿರಲಿಲ್ಲ. ಏಳನೆಯ ದಿನ ಕಟ್ಟಿದ್ದ ಲಾಡಿ ಬಿಚ್ಚಿ ನೀರಿಗೆ ಎಸೆಯುವುದರೊಂದಿಗೆ ಹರಕೆ ಮುಗಿಯುತ್ತಿತ್ತು. ಹೀಗೆ ತುಂಬಾಡಿ ಗ್ರಾಮದ ಅಕ್ಕ ಪಕ್ಕ ಗ್ರಾಮಗಳು ಸೇರಿಕೊಂಡು ಬಾಬಯ್ಯನ ಜಾತ್ರೆಯನ್ನು

ನಡೆಸುತ್ತಿದ್ದರು. ಈ ಬಗೆಯ ಆಚರಣೆಗಳು ಹಾಗೂ ನಂಬಿಕೆಗಳು ಸಂಸ್ಕೃತಿಯ ಪ್ರತೀಕಗಳು ಎಂದು ಹೇಳಬಹುದಾಗಿದೆ.

ಹೀಗೆ ದಲಿತ ಸಮುದಾಯದಲ್ಲಿ ಹಬ್ಬಗಳು ಮತ್ತು ಜಾತ್ರೆಗಳು ಸಾಂಸ್ಕೃತಿಕ ಪರಂಪರೆಯ ಗಣಿಗಳಾಗಿ ಆಚರಣೆಗೊಳ್ಳುತ್ತವೆ. ನಾಡಿನ ಪ್ರತಿಯೊಂದು ಗ್ರಾಮಗಳಲ್ಲಿ ನಡೆಯುವ ಜಾತ್ರೆ ಮತ್ತು ಹಬ್ಬಗಳಲ್ಲಿ ದಲಿತ ಸಮುದಾಯದವರ ಪಾತ್ರ ಇದ್ದೇ ಇರುತ್ತದೆ. ಒಂದು ವಿಶೇಷವೆಂದರೆ ಕೆಲವು ಹಬ್ಬಗಳನ್ನು ಎಲ್ಲ ಜಾತಿಯ ಜನರು ಸೇರಿ ಸಾಮರಸ್ಯದಿಂದ ಆಚರಿಸುವ ಹಬ್ಬಗಳು ಸಹ ಈ ನಾಡಿನಲ್ಲಿ ಇರುವುದು ವಿಶೇಷವಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವ ಬಾಬಯ್ಯನವರ ಜಾತ್ರೆಯನ್ನು ಸಂಪ್ರದಾಯದಂತೆ ಆಚರಿಸುತ್ತಾ, ಮನುಷ್ಯ ಸಂಬಂಧಗಳನ್ನು ಬೆಸೆಯುವ ಕಾರ್ಯವನ್ನು ಮಾಡುವುದು ನಿಜಕ್ಕೂ ಒಳ್ಳೆಯ ಆಚರಣೆಯಾಗಿ ಕಂಡುಬರುತ್ತದೆ. ಈ ಎಲ್ಲಾ ಅಂಶಗಳ ಆಧಾರದ ಮೇಲೆ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ದಲಿತ ಆತ್ಮಕಥನಕಾರರು ಈ ಸಂಸ್ಕೃತಿಯನ್ನು ಸಮಷ್ಠಿ ಪ್ರಜ್ಞೆಯ ನೆಲೆಯಲ್ಲಿ ದಲಿತ ಸಮುದಾಯದವರ ಸಾಂಸ್ಕೃತಿಕ ಅಸ್ಮಿತೆಯ ಬದುಕನ್ನು ಕಟ್ಟಿಕೊಟ್ಟಿದ್ದಾರೆ.

೪.೩ ಆಹಾರ–ಪಾನೀಯಗಳು

ಭಾರತೀಯ ಜಾತಿವ್ಯವಸ್ಥೆಯ ಈ ಸಮಾಜದಲ್ಲಿ ಮೇಲು–ಕೀಳು, ಬಡವ–ಶ್ರೀಮಂತ, ಉಳ್ಳವರು–ಇಲ್ಲದವರು ಎಂಬ ಸಾಮಾಜಿಕ ಅಸಮಾನತೆಯು ನಿರಂತರವಾಗಿ ಇಂದಿನ ಪ್ರಜ್ಞಾವಂತ ಸಮುದಾಯವನ್ನು ಕಾಡುತ್ತಾ ಬಂದಿದೆ. ಅಂತೆಯೇ ಈ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ತಮ್ಮದೇ ಆದ ಆಹಾರ ಪದ್ಧತಿಯ ಕ್ರಮಗಳು ಇವೆ ಎಂಬುದು ಸತ್ಯಸಂಗತಿಯಾಗಿದೆ. ಅಂತೆಯೇ ಸಸ್ಯಾಹಾರ ಮತ್ತು ಮಾಂಸಹಾರಗಳನ್ನು ಹಾಗೂ ವಿವಿಧ ಬಗೆಯ ಪಾನೀಯಗಳನ್ನು ಸೇವಿಸುವಂತಹ ಜನ ಸಮುದಾಯವನ್ನು ಈ ಸಮಾಜದಲ್ಲಿ ಗುರುತಿಸಬಹುದಾಗಿದೆ. ಜೊತೆಗೆ ಬಡತನ ಮತ್ತು ಅಸ್ಪೃಶ್ಯತೆಯ ಸೋಂಕಿನಲ್ಲಿ ಬೆಂದು ಬೂದಿಯಾದ ದಲಿತ ಸಮುದಾಯದವರ ಆಹಾರ ಪದ್ಧತಿಗಳು ಮೇಲು ವರ್ಗದ ಸಮುದಾಯದವರ ಆಹಾರ ಪದ್ಧತಿಗಿಂತ ಭಿನ್ನವಾಗಿದೆ ಎಂಬುವುದನ್ನು ಕನ್ನಡ ಸಾಹಿತ್ಯದಲ್ಲಿ ವಿಭಿನ್ನವಾಗಿ ಆಲೋಚನೆ ಮಾಡುವ ಮತ್ತು ನೈಜ ಸತ್ಯಗಳನ್ನು ದಾಖಲು ಮಾಡಿದ ನಮ್ಮ ಕನ್ನಡ ದಲಿತ ಆತ್ಮಕಥನಕಾರರು ತಮ್ಮ ಬರವಣಿಗೆಯಲ್ಲಿ ಆಹಾರ ಪದ್ಧತಿ ಮತ್ತು ಪಾನೀಯಗಳ ವಿವಿಧ ಮಜಲುಗಳನ್ನು ದಾಖಲಿಸಿದ್ದಾರೆ.

ದಲಿತ ಸಮುದಾಯದವರು ಉಪಯೋಗಿಸುತ್ತಿದ್ದ ಆಹಾರದ ಭಿನ್ನತೆಗಳನ್ನು ಹೀಗೆ ದಾಖಲಿಸಬಹುದು:

ರಾಗಿಮುದ್ದೆ, ರಾಗಿರೊಟ್ಟಿ, ಅಪರೂಪಕ್ಕೆ ಅನ್ನ ಸೇವನೆ.

೧. ದನದ ಮಾಂಸ ಸೇವನೆ. (ಸತ್ತ ದನದ್ದು ಅಥವಾ ಹಬ್ಬಗಳಲ್ಲಿ ಕಡಿಯಲ್ಪಟ್ಟ ದನ ಎಮ್ಮೆಗಳು)

೨. ಕೊರಬಾಡು ಸೇವನೆ. (ದನದ ಬಾಡನ್ನು ದಾರದಂತೆ ಕತ್ತರಿಸಿ ಒಣಗುಹಾಕಿ ನಂತರ ಸುಟ್ಟುಕೊಂಡು ಸೇವಿಸುವುದು)

೩. ಬರಗಾಲದಲ್ಲಿ ವಿವಿಧ ರೀತಿಯ ಸೊಪ್ಪುಸೊದೆ ಸೇವನೆ (ಕೀರೆಸೊಪ್ಪು ದಂಟಿನಸೊಪ್ಪು ಇತರೆ)

೪. ಬರಗಾಲದಲ್ಲಿ ಸರ್ಕಾರ ನೀಡುತ್ತಿದ್ದ ಉಪ್ಪಿಟ್ಟು ಸೇವನೆ.

೫. ಬೇರೆಯವರ ಹೊಲಗಳಲ್ಲಿ ಬೆಳೆಯುತ್ತಿದ್ದ ಕಾಚಕ್ಕಿಗಳನ್ನು ಕದ್ದು ಸೇವಿಸುತ್ತಿದುದ್ದು.

ದಲಿತ ಸಮುದಾಯದವರಲ್ಲಿ ತಮ್ಮ ಹಸಿವನ್ನು ಪರಿಹರಿಸಿಕೊಳ್ಳಲು ಸತ್ತದನದ ಬಾಡನ್ನು ಆಹಾರವಾಗಿ ಸೇವಿಸುವುದು ಹಾಗೂ ಸಂಸಾರ ಸಮೇತ ಮಕ್ಕಳನ್ನೂ ಕೂರಿಸಿಕೊಂಡು ಹೆಂಡ ಕುಡಿಯುವುದು ಸರ್ವೆಸಾಮಾನ್ಯವಾಗಿತ್ತು. ಜೊತೆಗೆ ದನದ ಹಸಿ ಬಾಡನ್ನು ಒಣಗಿ ಹಾಕಿ ಕೊರಬಾಡು ಮಾಡಿಕೊಂಡು ಸಸ್ಯಹಾರದ ಜೊತೆಯಲ್ಲಿ ಸೇವಿಸುವುದು ಇವರ ಆಹಾರ ಪದ್ಧತಿಯ ಸಂಸ್ಕೃತಿಯಾಗಿದೆ. ಇಂತಹ ಹಲವಾರು ಬಗೆಯ ಆಹಾರ ಪದ್ಧತಿಯ ಕ್ರಮಗಳನ್ನು ಡಾ. ಜಿ.ಸಂಜಿವರಾಯರು ತಮ್ಮ 'ಹೊರಬೀಡು' ಎಂಬ ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ. ದನದ ಮಾಂಸದ ಆಹಾರವನ್ನು ಹೊಂದಿಸಿಕೊಳ್ಳುತ್ತಿದ್ದ ರೀತಿಯನ್ನು ಕಣ್ಣಿಗೆ ಕಟ್ಟುವಂತೆ ಇವರು ನಿರೂಪಿಸಿದ್ದಾರೆ. "ಎತ್ತು ಕುಯ್ಯೋದಕ್ಕೆ ಶುರು ಮಾಡೋ ಮೊದ್ಲೇ ರಂಪ್ಣೆ, ಮಚ್ಚು ಚೆನ್ನಾಗಿ ಮಸ್ಕಂಡು ಗೋಣೀಚೀಲದಲ್ಲಿ ಕಟ್ಕಂಡು ಬಂದಿದ್ದ ಕದ್ರ. ಎತ್ತು ನಾಲಕ್ಕಾಲ್ ಮೇಲ್ಕ ಮಾಡಿ ಅತ್ಕಡೆ ಇಬ್ರು ಇತ್ಕಡೆ ಇಬ್ರು ಕಾಲಿಡ್ಕಂಡಿದ್ರು. ಕದ್ರ ಕುತ್ಗೆಯಿಂದ ಕುಯ್ಯೋಕೆ ಶುರು ಮಾಡಿ ಎದೆ ಗುಂಡಿಗೆ ಹತ್ರ ಒಡೆದ್ ತಕ್ಷಣ ಕೈಯಲ್ಲಿ ಸೈನಿಕರಂತೆ ಚೂರಿಗಳನ್ನು ಹಿಡದ್ ನಿಂತಿದ್ದ ದೊಡ್‌ಕದ್ರ, ಕೋಳಿಹುಂಜ, ಗಂಗ ಮತ್ತು ಮೋಟ್‌ದಾಸೀ ಸುತ್ತ ಚರ್ಮವನ್ನು ಬಿಡಿಸೋದಿಕ್ಕೆ ಶುರುಮಾಡಿದ್ರು. ಚರ್ಮ ಬಿಡ್ಸಿದ್ಮೇಲೆ ನಾಲಕ್ಕಾಲ್ ಪಕ್ಕೆಗಳನ್ನು ಸೀಳಿ ಮಧ್ಯಭಾಗದ ಮೇಲಿದ್ದಂತಹ ಹೊಟ್ಟೆಚೀಲ, ದೊಮ್ಮೆ, ಗುಂಡಿಗೆ, ಈರ್ಲಿ, ಎಲ್ಲವನ್ನೂ ಒಂದೊಂದ್ ಈಚ್ಗೆ ಎಳೆದ್ದಾಕಿ ಕಳ್ಳು ಪಚ್ಚಿಗಳನ್ನೆಲ್ಲಾ ಬಿಡಿಸಿ ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳದ ನೀರಿನಲ್ಲಿ ತೊಳೆಯೋದಿಕ್ಕೆ ಕೆಲವರು ಹೋದರೆ ಇನ್ನೂ ಕೆಲವರು ತಲೆ ಮತ್ತು ಕಾಲು, ಮುಂಡ, ಮಾಂಸಗಳನ್ನು ತುಂಡ್ ತುಂಡ್ ಮಾಡಿ ಗುಡ್ಡೆ ಹಾಕ್ತ ಇದ್ರು. ತಲೆಯ ಮೆದ್ಲು ಒಡ್ದು ಒಂದ್ಕಡೆ ಇಟ್ಟಿದ್ರು. ಎರಡು ಕೊಂಬುಗಳನ್ನು ಸ್ವಚ್ಛ ಮಾಡಿ ಕದ್ರ ಹೊಲೆಯೋಕೆ ಮತ್ತು

ಎಕ್ಕಡ ಮಡೋದಿಕ್ಕೆ ಮೆದ್ಲನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಹೊಲಿಯೋದಕ್ಕೆ ಮೇಣ ಮಾಡ್ಕಂಡು ಉಪಯೋಗಿಸ್ತಿದ್ರು. ಅತ್ತ ಕೋಡಲುಗುಟ್ಟೆ ಹಿಂದೆ ಎತ್ತು ಕತ್ತರಿಸ್ತಾ ಇದ್ರೆ ಇತ್ತ ಹಟ್ಟೀ ಹೆಂಗಸ್ರೆಲ್ಲಾ ಉಪ್ಪುಖಾರ ರುಬ್ಬುವುದಕ್ಕಾಗ್ಲೇ ಪ್ರಾರಂಭ ಮಾಡಿದ್ರು. ಕೆಲವರು ಕೊತ್ತಂಬರಿ ಬೀಜ, ಮಸಾಲು ಭತ್ತಕ್ಕಾಗಿ ಸಾದರ ಕೇರಿಯವರ ಮನೆ ಬಾಗಿಲಿಗೆ ಅಲೀತಾ ಇದ್ರೆ ಕೆಲವರು ಒಳಕಲ್ ಬಂಡೆ ಹತ್ತಿರ ಭತ್ತ ಕುಟ್ಟುತ್ತಿದ್ದರು. ಬಂಡೆ ಮೇಲೆ ಬಾಡನ್ನ ಗುಡ್ಡೆ ಹಾಕ್ತಾ ಇರಬೇಕಾದ್ರೆ ಕೆಲವರ ಗ್ಯಾನ ಅಜ್ಜಿಹಳ್ಳಿ ಹೆಂಡ್‌ದ ಅಂಗ್ಡೀ ಕಡೆ ತಿರುಗಿತ್ತು. ಕೆಲವ್ರು ಹೊಂಗೆ ಸೊಪ್ಪಾಗೆ ಬಾಡು ಕಟ್ಕೊಂಡು ಬಂದ್ರೆ ಇನ್ಕೆಲವ್ರು ತಟ್ಟೀಲಿ ಕಟ್ಕಂಡು ಬಂದ್ರು. ಬರೋಷ್ಟತ್ತಿಗೆ ಎಲ್ರ ಮನೇಲಿ ಖಾರ ರುಬ್ಬುವ ಕಲ್ಲುಗಳ ಲೊಡ, ಲೊಡ ಶಬ್ದ ಎದೆಗೆ ಹೊಡ್ದಂಗಡ ಕೇಳಿಸ್ತಿತ್ತು. ಉಂಡ್ ಭಾಗಾನ ಅವ್ರವ್ರ ಬುಡಕಟ್ಟಿಗೆ ಪಾಲ್ ಮಾಡ್ಕಂಡ್ ಮೇಲೆ ಕೆಲವ್ರು ಹೆಸ್ರಿಗೆ ಹಚ್ಚಾಕಿದ್ರೆ ಇನ್ಕೆಲವ್ರು ಉಳಿದಿದ್ದ ಬಾಡನ್ನ ಸರಗಳ್ ಮಾಡಿ ಒಣ್ಗಾಕ್‌ಕೊಳ್ತಿದ್ರು"[೪೯] ಎಂದು ದಾಖಲಿಸುತ್ತಾರೆ. ಈ ಹಿನ್ನೆಲೆಯನ್ನು ಗಮನಿಸಿದರೆ ಇಡೀ ಸಮುದಾಯದವರಿಗೆ ಸತ್ತ ದನ ಸಿಕ್ಕರೆ ಇಡೀ ಕೇರಿಗೆ ಹಬ್ಬದ ವಾತಾವರಣ ನಿರ್ಮಾಣವಾಗುತ್ತಿತ್ತು ಎಂದು ಭಾಸವಾಗುತ್ತದೆ.

ಅಂತೆಯೇ ಎಲ್ಲಪ್ಪ ಕೆ.ಕೆ.ಪುರ ಅವರು ತಮ್ಮ 'ಕೇರಿಯಿಂದ ತೇರಿಗೆ' ಎಂಬ ಆತ್ಮಕಥೆಯಲ್ಲಿ ಹೀಗೆ ದಾಖಲಿಸುತ್ತಾರೆ; "ಅಪ್ಪನ ಹಿಂದೆ ಎತ್ತು, ಎಮ್ಮೆ, ಕರ ಕೊಯ್ಯಲು, ಸತ್ತ ದನಗಳನ್ನು ಹೊರುವಾಗ ನಾನವುಗಳ ಕಾಲು, ಬಾಲ, ಕೊಂಬು ಹಿಡಿಯುವುದೆಂದರೆ ಇನ್ನೂ ಖುಷಿಪಡುತ್ತಿದ್ದೆ. ದನದ ರಕ್ತವನ್ನು ಮಣ್ಣಿನ ಗಡಿಗೆಯಲ್ಲಿ ಹಿಡಿದು ಅದರಲ್ಲಿ ಉಪ್ಪು ಖಾರ ಉಳ್ಳಾಗಡ್ಡೆ ಹಾಕಿ ಬೇಯಿಸಲು ಸಣ್ಣ ಪುಟ್ಟ ಕಟ್ಟಿಗೆ ಪುಳ್ಳೆ ಆರಿಸಿ ತರುತ್ತಿದ್ದೆ. ಬೇಯಿಸಿದ ರಕ್ತವನ್ನು 'ಪಾಲು' ಮಾಡಿ ತಿನ್ನುವುದರಲ್ಲಿದ್ದ ಮಜಾ ಇನ್ಯಾವ ತಿಂಡಿ ತಿನಿಸಿನಲ್ಲಿರಲಿಲ್ಲ. ನಮ್ಮ ಪಾಲನ್ನು ಸಳ್ಳೆ ಪುಟ್ಟಿಯಲ್ಲಿ ಹಾಕಿಕೊಂಡು, ತಲೆಯ ಮೇಲೆ ನಾ ಹೊತ್ತು ನಡೆದರೆ, ಅಪ್ಪ ನನ್ನ ಹಿಂದೆ ಹಿಂದೆನೇ ತಂಗಡಿ ಸೊಪ್ಪಿನಿಂದ ರಣಹದ್ದು, ಕಾಗೆ ಹಿಂಡನ್ನು ಓಡಿಸುತ್ತಿದ್ದ. ಹೀಗೆ ಹೊತ್ತು ತಂದ ಸಳ್ಳೆಯನ್ನು ಅಮ್ಮ ಕುಡುಗೋಲಿನಿಂದ ಉದ್ದೂದ್ದನಾಗಿ ಕೊಯ್ದು 'ಆರ್ಬಡ್ಸಿ' ತುಂಡು ತುಂಡು ಮಾಡಿ, ಚಪ್ಪರದ ನೆರಿಕೆಗೆ, ಮನೆಯ ಮುಂದಿನ ಬೇಲಿಯ ಮೇಲೆ, ನಿಲುವುಗಣಿಗೆಗೆ ರಿಬ್ಬನ್ನು ಪೀಪಿಗಳಂತೆ ನೇತು ಹಾಕಿ, ಆಗ್ಗೆ ತಿನ್ನಲು ಒಳ್ಳೊಳ್ಳೆ ಹದವಾದ 'ಬಿಚ್ಚೆ' ತುಂಡು, ಈರಿ, ಗುಂಡಿಗೆ, ಲಲ್ಡಿ, ಪಚ್ಚೆ ಇವುಗಳಿಗೆ ಉಪ್ಪು ಹಾಕಿ ಬೇಯಿಸಿ, ಸಪ್ಪೆ ಬಾಡೆಂದು ಕೊಡುತ್ತಿದ್ದಳು"[೫೦] ಎಂದು ಉಲ್ಲೇಖಿಸುತ್ತಾರೆ. ದಲಿತ ಸಮುದಾಯದ ಜನರು ದನದ ಮಾಂಸವನ್ನು ಆಹಾರವಾಗಿ ಸೇವಿಸುವುದಲ್ಲದೆ ಈ ಹಸಿ ಮಾಂಸವನ್ನು ಸಣ್ಣ ಸಣ್ಣದಾಗಿ ಸಿಗಿದು ಅದನ್ನು ಮನೆಯ ನೆರಕೆಯಲ್ಲಿ ನೇತುಹಾಕಿ ಒಣಗಿಸಿ,

ಸಸ್ಯಾಹಾರ ಮಾಡುವ ಸಂದರ್ಭದಲ್ಲಿ ಮತ್ತು ಹೆಂಡ ಸಾರಾಯಿಯಂತಹ ಮತ್ತಿನ ಪಾನೀಯಗಳನ್ನು ಸೇವಿಸುವ ಸನ್ನಿವೇಶಗಳಲ್ಲಿ ಈ ಕೊರಬಾಡನ್ನು ನಂಚ್ಚಿಕೆಯಾಗಿ ಸೇವಿಸುವುದನ್ನು ನಾನು ಸಹ ನಮ್ಮ ಊರಿನಲ್ಲಿ ಗಮನಿಸಿದ್ದೇನೆ. ಅಂದರೆ ಈ ಬಗೆಯ ಆಹಾರ ಪದ್ಧತಿಯು ಕೇವಲ ಎಲ್ಲಪ್ಪ ಅವರು ದಾಖಲುಮಾಡುವುದಷ್ಟೇ ಅಲ್ಲ, ಇಡೀ ದಲಿತ ಸಮುದಾಯವೇ ಈ ಬಗೆಯಲ್ಲಿ ಮಾಂಸಾಹಾರ ಸೇವನೆಯನ್ನು ಮಾಡುತ್ತಾರೆ ಎಂಬುವುದನ್ನು ಗಮನಿಸಬಹುದು. ಆದರೆ ಈ ದನದ ಮಾಂಸವನ್ನು ಒಂದು ಆಹಾರ ಪದ್ಧತಿಯನ್ನಾಗಿ ತಿನ್ನಲು ಸಮಾಜಿಕ ವ್ಯವಸ್ಥೆ ಬಿಡುತ್ತಿಲ್ಲ. ಸರ್ಕಾರಗಳು ಗೋಮಾಂಸ ನಿಷೇಧ ಕಾನೂನನ್ನು ತರಬೇಕೆಂದು ಶತತವಾದ ಪ್ರಯತ್ನವನ್ನು ಮಾಡುತ್ತಿದ್ದರೂ ದಲಿತರು ಮತ್ತು ಮುಸ್ಲಿಂ ಸಮುದಾಯದವರು ಇಂದಿಗೂ ಈ ಗೋಮಾಂಸವನ್ನು ತಮ್ಮ ಆಹಾರದ ಒಂದು ಪ್ರಮುಖ ಭಾಗವಾಗಿ ಪರಿಗಣಿಸಿದ್ದಾರೆ. ಹೀಗೆ ಮುಂದುವರಿದಂತೆ ದನವನ್ನು ಕತ್ತರಿಸಲು ಬಿಡದ ಪೊಲೀಸ್‌ರ ಗಸ್ತುಗಾರಿಕೆಯನ್ನು ಕುರಿತಂತೆ ಹೇಳುತ್ತಾರೆ. “ಪೊಲೀಸ್‌ನವರು ಸಳ್ಳೆಬಂಡೆಗಳ ಕಡೆ, ಮನೆ ಹಿತ್ತಲು, ಕಣದ ಕಡೆ ಹುಡುಕಿ ಹುಡುಕಿ ಸುಸ್ತಾದರು. ಸತ್ತ ದನ ತಿನ್ನಬಾರದು, ದನ ಕರುಗಳನ್ನು ಕೊಯ್ಯಬಾರದು. ಪ್ರಾಣಿಹತ್ಯೆ ಸಲ್ಲದೆಂದು ಜೈಲಿಗೆ ಹಾಕಲಾಗುವುದೆಂದೂ ಬಹಳ ಜೋರಾಗಿ, ಹೆದರಿಕೆ ಬರುವಂತೆ, ಹೇಳಿ ದಿನವೆಲ್ಲಾ ಇದ್ದು ಹೋದರು. ಕತ್ತಲಾದ ಮೇಲೆ ನನ್ನ ಗಡಿಗೆ, ಪರಿಯಾಣ, ಮಣಬಟ್ಲ, ಸೌಟು, ಗಂಗಳ, ಕ್ವಣೆಗೆ, ಮುಚ್ಚಳ, ಗೋಣಿ ಚೀಲದ ತುಂಬಾ ಮುರುಗೆ ಚೂರುಗಳನ್ನು ಹೊತ್ತು ಮನೆಗೆ ಹಿಂದಿರುಗಿದ್ದೆ. ಅಂದು ನಾವೆಲ್ಲರೂ ನಮ್ಮ ಮನೆಯಲ್ಲೇ ಕದ್ದು ಕದ್ದು ಗುಟ್ಟಾಗಿ ಸಳ್ಳೆ ಸಾರು ತಿಂದ ನೆನಪು ಈಗಲೂ ರೋಮಾಂಚನವೆನಿಸುವುದು”[೫೧] ಎಂದು ಹೇಳುತ್ತಾರೆ. ಈ ಪ್ರಸಂಗವನ್ನು ನೆನಪಿಸಿಕೊಂಡರೆ ದೇವನೂರು ಮಹಾದೇವರ ಒಡಲಾಳದ ಕಡಲೇಕಾಯಿ ಪ್ರಸಂಗ ನೆನಪಿಗೆ ಬರುತ್ತದೆ. ಸಾಕವ್ವನ ಕುಟುಂಬದ ಹಸಿವಿನ ಆಹಾರವಾಗಿ ಕಡಲೇಕಾಯಿ ಪ್ರಮುಖ ಪಾತ್ರ ವಹಿಸಿದರೇ, ಇಲ್ಲಿನ ಎಲ್ಲಪ್ಪನ ಮನೆಯವರಿಗೆ ದನದಬಾಡು ಹಸಿವನ್ನು ನೀಗಿಸುವ ಪ್ರಮುಖ ಆಹಾರವಾಗಿ ಕಂಡುಬರುತ್ತದೆ.

ವಿ.ಮುನಿವೆಂಕಟಪ್ಪ ಅವರು ದನದ ಮಾಂಸಾಹಾರವನ್ನು ಕುರಿತು ಚಿತ್ರಿಸುತ್ತಾ “ಊರಿನಲ್ಲಿ ದನ ಸತ್ತ ಮನೆಯವರು ದಲಿತ ಕೇರಿಗೆ ತಿಳಿಸುತ್ತಿದ್ದರು. ಕಟ್ಟಿಗೆಗೆ ದನದ ಕಾಲುಗಳನ್ನು ಕಟ್ಟಿ ತಲೆಕೆಳಗೆ ಮಾಡಿ, ಇಬ್ಬರು ಮುಂದೆ ಇಬ್ಬರು ಹಿಂದೆ ಸತ್ತ ದನವನ್ನು ಹೊತ್ತು ಊರ ಹೊರಗಿನ ಹೊಂಗೆ ತೋಪಿನಲ್ಲಿಗೆ ಹೊಯ್ಯುತ್ತಿದ್ದರು. ಚರ್ಮ ಸುಲಿದು ಉಳಿದ ವಿವಿಧ ಭಾಗಗಳನ್ನು ಬೇರ್ಪಡಿಸುತ್ತಿದ್ದರು. ದಲಿತ ಕೇರಿಯ ಹುಡುಗರು, ಮುದುಕರು ಹೆಂಗಸರು ಮುತ್ತಿಕೊಳ್ಳುತ್ತಿದ್ದರು. ದನದ ಮಾಂಸವನ್ನು ಕೇರಿಯ ಮನೆಗೊಂದು ಪಾಲು ಬರುವಂತೆ ಭಾಗ ಮಾಡುತ್ತಿದ್ದರು.

ಪಾಲು ನೀಡದಿದ್ದರೆ ಜಗಳವೇ ನಡೆದು ಹೋಗುತ್ತಿತ್ತು. ಕೇರಿಯ ಮನೆಗಳಲ್ಲಿ ಮಾಂಸ ಬೇಯಿಸುತ್ತಿರುವ ಘಮಘಮ ವಾಸನೆ ಬರುತ್ತಿತ್ತು. ಮಾಂಸವನ್ನು ಚೂರಿಯಿಂದ ಸಣ್ಣಸಣ್ಣದಾಗಿ, ಉದ್ದುದ್ದವಾಗಿ ಕೊಯ್ದು ತೋರಣಗಳಂತೆ ಹಗ್ಗದ ಮೇಲೆ ಒಣಗಿಸಲು ಹಾಕುತ್ತಿದ್ದರು. ಒಣಗಿದ ಬಾಡಿನ ತುಂಡುಗಳನ್ನು ಸಾರು ಮಾಡಿ ಊಟದಲ್ಲಿ ತಿನ್ನುತ್ತಿದ್ದರು".[೫೨] ಎಂದು ದಲಿತರ ಸಹಜ ಆಹಾರವಾಗಿರುವ ದನದ ಮಾಂಸದ ಸೂಕ್ಷ್ಮ ವಿಚಾರಗಳನ್ನು ತಮ್ಮ 'ಅಂತ್ಯಜನ ಅಂತರಂಗ' ಆತ್ಮಕಥೆಯಲ್ಲಿ ತಿಳಿಸಿಕೊಟ್ಟಿದ್ದಾರೆ.

ದನದ ಬಾಡನ್ನು ಕರ್ನಾಟಕದ ಕೋಲಾರ, ಮಂಡ್ಯ, ಚಾಮರಾಜನಗರ, ತುಮಕೂರು ಮೊದಲಾದ ಕಡೆಯಲ್ಲಿ ದೊಡ್ಡಬಾಡು ಎಂದು ಕರೆಯುತ್ತಾರೆ. ನೇತ್ರಾವತಿ ಅವರು ತಮ್ಮ ಪ್ರದೇಶದ ದೊಡ್ಡಬಾಡಿನ ಆಹಾರ ಮತ್ತು ಆಧುನಿಕತೆಯ ನಡುವಿನ ಸ್ವರೂಪ ಮತ್ತು ತಲ್ಲಣಗಳನ್ನು ನಿರ್ಭೀತಿಯಿಂದ ನಿರೂಪಿಸಿದ್ದಾರೆ. "ಚಿಕ್ಕಪ್ಪನಿಗೆ ಸರ್ಕಾರಿ ನೌಕರಿ ಸಿಕ್ಕಿದ್ದರಿಂದ ಕಡಪ ಸಿಟಿಯಲ್ಲಿ ಸೆಟ್ಲಾಗಿದ್ದರು. ಬಾಡಿಗೆ ಮನೆಗೋಸ್ಕರ ನಾವು 'ಗೌಡರು' ಎಂದು ಜಾತಿಯನ್ನು ಸುಳ್ಳು ಹೇಳಿಕೊಂಡಿದ್ದೆವು. ಚಿಕ್ಕಪ್ಪ, ಚಿಕ್ಕಮ್ಮ, ಅವರ ಇಬ್ಬರ ಮಕ್ಕಳು ರಜೆ ಸಮಯದಲ್ಲಿ ಊರಿಗೆ ಬಂದಾಗ ಚಿಕ್ಕವರು ಇಲ್ಲಿನ ಎಲ್ಲವನ್ನೂ ನೋಡಿ ಸಿಟಿಯಲ್ಲಿ ಹೇಳಿಕೊಂಡುಬಿಡ್ತಾರೆ, ಜಾತಿ ಗೊತ್ತಾಗಿಬಿಡುತ್ತೆ ಅಂತ ಅವರು ಬರುವುದಕ್ಕೆ ಮೊದಲೇ ಹಲಗೆ, ಡೋಲು ಮತ್ತು ಚರ್ಮವನ್ನು ಅಟ್ಟದ ಮೇಲೆ ಬಚ್ಚಿಡುತ್ತಿದ್ದರು. ಅವರು ಇರುವಷ್ಟು ದಿವಸ ಮನೆಗೆ 'ದೊಡ್ಡ ಬಾಡು' (ದನದ ಮಾಂಸ) ತರುತ್ತಿರಲಿಲ್ಲ. ಕೋಳಿ ಕೊಯ್ತಾ ಇದ್ರು ಅಷ್ಟೇ. ಅಜ್ಜಿ ಹಳೆಯ ಮನೆಯಲ್ಲಿ ಒಣಗಲು ಹಗ್ಗದ ಮೇಲೆ ಹಾಕಿದ್ದ ದೊಡ್ಡ ಬಾಡನ್ನೂ ತೆಗೆದು ಮಡಕೆಯಲ್ಲಿ ಹಾಕಿ ಬಚ್ಚಿಡ್ತಾ ಇದ್ರು. ಚಿಕ್ಕಪ್ಪ ಮತ್ತವರ ಮಕ್ಕಳು ಊರಿಗೆ ಹೋದ ಮೇಲೆಯೇ ಅದನ್ನು ಹೊರಗೆ ತೆಗೀತಾ ಇದ್ರು. ಒಣಗಿದ ಮಾಂಸವನ್ನು ಕೆಂಡದ ಮೇಲೆ ಸುಟ್ಟು ಹಿಟ್ಟಿಗೆ ನಂಚಿಕೊಂಡು ತಿನ್ನುತ್ತಿದ್ದರೆ ಅದೇ ಸ್ವರ್ಗ ಎನಿಸುತ್ತಿತ್ತು. ಗೌಡರ ಮನೆಗಳಂತೆ ಬಾಡು ತಿನ್ನಲು ನಮ್ಮ ಮನೆಯಲ್ಲಿ ಆ ದಿನ ಈ ದಿನ ಎಂದಿಲ್ಲ. ಎಲ್ಲಾ ದಿನಗಳು ಓಕೆ. ಸ್ವಲ್ಪ ಓದಿಕೊಂಡ ನಮ್ಮ ಜಾತಿಯವರೇ ಆದ ಕೆಲವರು ದೊಡ್ಡ ಬಾಡು ತಿನ್ನುವುದನ್ನು ಬಿಟ್ಟಿದ್ದರು ಹಾಗೂ ತಿನ್ನೋರನ್ನು ನೋಡಿ ಆಡಿಕೊಳ್ತಾ ಇದ್ರು. ಅವರ ಪಾಲಿಗೆ ಕೋಳಿ, ಕುರಿ ತಿನ್ನೋರು ಸುಶಿಕ್ಷಿತರು, ನಮ್ಮ ಬಾಡು ತಿನ್ನೋರು ತೀರಾ ಹೊಲಸಿಗೆ ಇಳಿದ ಹೊಲೆಯರು. ನಮ್ಮ ಮನೆಗೂ ಸಹ ಸುಶಿಕ್ಷಿತ ಪ್ರಶ್ನೆಯ ಬಿಸಿ ತಾಕಿ, ಹೇಗಾದರೂ ಮಾಡಿ ಮಾರ್ಯಾದೆ ಉಳಿಸಿಕೊಳ್ಳಲೇಬೇಕೆಂದು ತಿಳಿದು ಕದ್ದು ಮುಚ್ಚಿ ಬಾಡು ಕುಯ್ಯುವುದು ಒಣಗಿಸುವುದು ಮಾಡಿ ಬೇಯಿಸಿಕೊಂಡು ತಿನ್ತಾ ಇದ್ವಿ. ಆದರೆ ಬೇರೆಯವರ ಹತ್ತಿರ 'ನಾವು ದೊಡ್ಡ ಬಾಡು ತಿನ್ನೋದನ್ನ ಬಿಟ್ಟಿದೀವಿ. ಈಗ ನಮ್ಮ ಮಕ್ಕಳು ಓದ್ಕೊಂತಾ ಇದ್ದಾರೆ. ಆ ಬಾಡನ್ನ ತಿಂದ್ರೆ ಅವ್ರು ಬೈತಾರೆ ಅವರ ಭಯಕ್ಕೆ ನಾವು

ತರಲಿಲ್ಲ' ಅಂತ ಅಪ್ಪ ಅಮ್ಮ ಇತರರು ಕೇಳದೇ ಇದ್ರೂನೂವೇ ಹೇಳಿಕೊಳ್ತಾ ಇದ್ರು. ಅಣ್ಣ ಹೈಸ್ಕೂಲ್, ನಾನು ಪ್ರೈಮರಿಯಲ್ಲಿ ಓದ್ತಾ ಮನೆಗೆ ಬಾಡು ತರೋದನ್ನ ತುಂಬಾ ವಿರೋಧಿತ್ತಾ ಇದ್ವಿ. ನಮಗೂ ಸಹ ಸುಳ್ಳು ಹೇಳ್ತಾ ಇದ್ರು. ದೊಡ್ಡ ಬಾಡು ತಂದು 'ಇದು ಕುರಿ ಬಾಡು' ಎಂದಿದ್ದರು. ಗೊತ್ತಾದ್ರಂತೂ ಅವತ್ತು ಮನೆಯಲ್ಲಿ ತುಂಬಾ ಗಲಾಟೆ ಮಾಡ್ತಾ ಇದ್ವಿ. 'ಅದನ್ನ ತರಬೇಡಿ ಮರ್ಯಾದೆ ಎಲ್ಲಾ ಹೋಗುತ್ತೆ' ಅಂತ ನಾನೂ ಸಹ ತುಂಬಾ ಸಲ ಹಠ ಮಾಡಿದ್ದೆ. ಆದರೆ ಹೆಚ್ಚಿನ ಪಾಲು ಅಣ್ಣನದೇ ಆಗಿತ್ತು. ಒಂದ್ಸಲ ಬಾಡು ತಂದ ದಿನ ಅಜ್ಜಿ ಬಾಗಿಲ ಸಂದಿಯಲ್ಲಿ ಅದನ್ನು ಕೊಯ್ಯುತ್ತಿರುವಾಗ ಗೌಡರ ಬನಮ್ಮ ಅಮ್ಮನನ್ನು ಕೂಲಿಗೆ ಕರೆಯಲು ಬಂದಿದ್ದರು. ತಕ್ಷಣವೇ ಅಜ್ಜಿ ಎಲ್ಲವನ್ನೂ ಮೂಲೆಗೆ ಮಡಿಚಿಟ್ಟರು. ಆದರೂ ಆಯಮ್ಮ ಕಂಡುಹಿಡಿದು 'ಏನು ಮಾಂಸ?' ಎಂದಿದ್ದರು. ಅದಕ್ಕೆ ಅಜ್ಜಿ 'ಕುರಿ ಬಾಡು' ಎಂದರು. ಆದರೆ ದೊಡ್ಡ ಮೂಳೆ ನೋಡಿ ಬನಮ್ಮನಿಗೆ ಗೊತ್ತಾಗಿ 'ಅದಾ!' ಎಂದು ರಾಗ ಎಳೆಯುತ್ತಲೇ ಹೋದರು."[೬೩] ಹೀಗೆ ದಲಿತರು ಸೇವಿಸುವ ದನದ ಮಾಂಸಾಹಾರದ ಕುರಿತು ಮೇಲ್ಜಾತಿಗಳಲ್ಲಿ ಇಂದಿಗೂ ಒಂದು ರೀತಿಯ ಕೀಳರಿಮೆಯ ಭಾವ ಇರುವುದನ್ನು ಹೇಳುತ್ತಲೇ ದಲಿತ ಸಮುದಾಯದವರು ಅಕ್ಷರ ಕಲಿತಂತೆ ತಮ್ಮ ಆಹಾರ ಪದ್ಧತಿಯ ಕ್ರಮವನ್ನು ಬದಲಿಸಿಕೊಳ್ಳುವ ತವಕಗಳನ್ನು ಮತ್ತು ಜಾತಿಯತೆಯ ಸೊಂಕಿನ ನಿಲುವುಗಳನ್ನು ಇಲ್ಲಿ ದಾಖಲಿಸುತ್ತಾರೆ.

ದೇವನೂರ ಮಹಾದೇವ ಅವರು 'ಎದೆಗೆ ಬಿದ್ದ ಅಕ್ಷರ' ಕೃತಿಯಲ್ಲಿ ಹೇಳುವಂತೆ, "ದುರಂತವೆಂದರೆ–ಹೆಂಡ, ದನದ ಬಾಡು ನಮ್ಮ ಪಾಲಿಗೆ ಕೇವಲ ಆಹಾರ ಮಾತ್ರವಾಗಿಲ್ಲ. ಈ ಸಮಾಜದಲ್ಲಿ ಹೆಂಡ, ದನದ ಬಾಡಿನಲ್ಲಿ ಅವಮಾನ ಜೊತೆಗೂಡಿಸಲ್ಪಟ್ಟಿದೆ. ಹೆಂಡ ದನದ ಬಾಡು ಭಾರತದಲ್ಲಿ ಪ್ರತಿಷ್ಠಿತ ಹೊಟೇಲ್, ತಿಥಿ ಊಟ ಆಗುವವರೆಗೂ ಈ ಆಹಾರಕ್ಕೆ ಅಂಟಿಸಿರುವ ಅವಮಾನದಿಂದ ತಪ್ಪಿಸಿಕೊಳ್ಳುವುದು ಕಷ್ಟ. ಹಾಗಾದರೆ ಏನು ಮಾಡೋಣ? ಹೆಂಡ ತಪ್ಪೇ? ದನದ ಬಾಡು ತಪ್ಪೇ? ಅದರಲ್ಲಿ ಏನು ತಪ್ಪಿದೆ? ಹೆಂಡ, ದನದ ಬಾಡಿನಲ್ಲಿ ಅಡಕವಾಗಿಸಿರುವ ಅವಮಾನ ತಪ್ಪು. ಹೆಂಡ ದನದ ಬಾಡಿನಲ್ಲಿ ಅಡಕವಾಗಿಸಿರುವ ಅವಮಾನದ ಅಂಶ ತೆಗೆದರೆ ಮಾತ್ರ ಇವೂ ಸಹಜ 'ಆಹಾರ' ಆಗುತ್ತವೆ"[೬೪] ಎಂದಿದ್ದಾರೆ. ಈ ಸಮಾಜದಲ್ಲಿ ಬಹು ಪ್ರತಿಷ್ಠಿತರು ಮಾತ್ರ ಈ ಬಗೆಯ ಪೌಷ್ಠಿಕಾಂಶ ದೊರೆಯುವ ಆಹಾರವನ್ನು ಸೇವಿಸಬೇಕು. ಆದರೆ ದಲಿತ ಸಮುದಾಯದವರು ಈ ದನದ ಮಾಂಸವವನ್ನು ತಿಂದರೆ ಅವಮಾನವನ್ನು ಜೊತೆಯಲ್ಲಿ ತಂದಂತೆ ಆಗುತ್ತದೆಯೇ? ಎಂದು ಪ್ರಶ್ನೆಮಾಡುವುದನ್ನು ನಾವು ಇಲ್ಲಿ ಗುರುತಿಸಬಹುದು.

ದನದ ಮಾಂಸವಲ್ಲದೆ ರಾಗಿಮುದ್ದೆ ಹಾಗೂ ಸರ್ಕಾರ ನೀಡುತ್ತಿದ್ದ ಉಪ್ಪಿಟ್ಟುಗಳು ದಲಿತ ಸಮುದಾಯದರಲ್ಲಿ ಬಡತನದ ಹಸಿವನ್ನು ಪರಿಹರಿಸಿವೆ. ದಿನನಿತ್ಯದ ಆಹಾರವಾದ ರಾಗಿಮುದ್ದೆಯನ್ನು

ನಾವು ‘ಹಿಟ್ಟು’ ಎಂದಷ್ಟೇ ಹೇಳುವುದಿದೆ. ಮಂಡ್ಯ ಮೈಸೂರು, ಚಾಮರಾಜನಗರ ಮೊದಲಾದ ಕಡೆಗಳಲ್ಲಿ ಹಿಟ್ಟು ಪ್ರಧಾನವಾದ ಆಹಾರ. ಈ ಬಗೆಯ ಆಹಾರ ಕ್ರಮವನ್ನು ಪರಶಿವಮೂರ್ತಿಯವರು ದಾಖಲಿಸುತ್ತಾರೆ. “ನಮ್ಮ ಮನೆಯಲ್ಲಿ ಪ್ರತಿ ದಿವಸಾನೂ ಹಿಟ್ಟು (ರಾಗಿಮುದ್ದೆ) ಮಾಡ್ತಾ ಇದ್ರು. ತುಂಬಾ ದಿವಸಗಳಿಗೊಂದು ಬಾರಿ, ಹಬ್ಬಗಳಲ್ಲಿ ಅನ್ನ ಮಾಡ್ತಾ ಇದ್ರು. ಅನ್ನ ಮಾಡಿದ ದಿನವಂತೂ ನಮಗೆ ಹಬ್ಬವೋ ಹಬ್ಬ. ನನ್ನ ಫ್ರೆಂಡ್ಸ್ ಎಲ್ಲಾ ಸ್ಕೂಲಿಗೆ ಬರುವಾಗ ಅನ್ನ ತಿಂದು ಬಾಕ್ಸ್‌ಗೆ ಅನ್ನ ಕಟ್ಕೊಂಡ್ ಬರ್‍ತಾ ಇದ್ರು. ಆದರೆ ನಾನು ಮರ್ಯಾದೆಗೋಸ್ಕರ ‘ನಮ್ಮ ಮನೆಯಲ್ಲಿ ಅನ್ನ ಮಾಡಿದ್ರು. ತಿಂದ್ಕೊಬಂದೆ ಬಸ್‌ಗೆ ಟೈಮ್ ಆಗಿತ್ತು. ಆದಕ್ಕೆ ಬಾಕ್ಸ್‌ಗೆ ಹಾಕ್ಕೊಳ್ಳೊಕಾಗಲಿಲ್ಲ’ ಎಂದು ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ಬರದಿಂದಾಗಿ ಇಡೀ ಊರಿಗೆ ಊರೇ ತತ್ತರಿಸುತ್ತಿತ್ತು. ಬರದ ಕಾರಣಕ್ಕಾಗಿ ಸರ್ಕಾರ ವ್ಯವಸ್ಥೆ ಮಾಡಿದ್ದ ಉಪ್ಪಿಟ್ಟು ಮತ್ತು ಪೌಡರ್ ಹಾಲನ್ನು ನಂಬಿ ಊರು ಜನರು ಜೀವ ಉಳಿಸಿಕೊಳ್ಳಬೇಕಾಗಿತ್ತು. ಊರಿನ ನಡುವೆ ಇದ್ದ ಚಾವಡಿಯಲ್ಲಿ ಉಪ್ಪಿಟ್ಟು ಮತ್ತು ಪೌಡರ್ ಹಾಲನ್ನು ಮಾಡಿ ಮಧ್ಯಾಹ್ನದ ಹೊತ್ತಿಗೆ ಹಂಚುತ್ತಿದ್ದರು. ಉಪ್ಪಿಟ್ಟು ಹಂಚುವಾಗ ಹಸಿವಿನಿಂದ ಬರಗೆಟ್ಟಿರುತ್ತಿದ್ದ ನಮ್ಮ ಜನ, ಉಪ್ಪಿಟ್ಟಿಗಾಗಿ ಒಬ್ಬರ ಮೇಲೆ ಒಬ್ಬರು ಬಿದ್ದು ಕೈಯೊಡ್ಡುತ್ತಿದ್ದರು.”[೩೩] ಹೀಗೆ ತಮ್ಮ ಬಡತನವನ್ನು ನೀಗಿಸಿಕೊಳ್ಳಲು ಈ ದಲಿತ ಸಮುದಾಯದವರು ಬೇರೆ ಬೇರೆ ಆಹಾರ ಕ್ರಮಗಳನ್ನು ಬಳಸುತ್ತಿದ್ದರು ಎಂದು ತಿಳಿದು ಬರುತ್ತದೆ.

ದಲಿತ ಮಹಿಳೆಯು ಅನ್ಯಜಾತಿಯ ಮಹಿಳೆಯ ಹಸಿವನ್ನು ಅರಿತು ತನ್ನಲ್ಲಿದ್ದ ಆಹಾರವನ್ನು ನೀಡಲು ಹೋದರೆ ಅನ್ಯಜಾತಿಯ ಮಹಿಳೆಯು ಅದನ್ನು ಜಾತಿಯ ಕಾರಣದಿಂದ ತಿರಸ್ಕರಿಸುತ್ತಾಳೆ: ಇಂತಹ ಸಂದರ್ಭದಲ್ಲಿ ಮೇಲು ಜಾತಿಯ ಮನಸ್ಥಿತಿಯನ್ನು ಬಿಂಬಿಸುವ ಕಥಾನಕವೊಂದನ್ನು ನೇತ್ರಾ ಅವರು ಹೀಗೆ ಹೇಳುತ್ತಾರೆ. “ಒಕ್ಕಲಿಗರ ಹುಡುಗಿಯೊಬ್ಬಳು ಹೈಸ್ಕೂಲಿನಲ್ಲಿ ನನಗೆ ತುಂಬಾ ಆತ್ಮೀಯ ಗೆಳತಿಯಾಗಿದ್ದಳು. ಅವರ ಮನೆಯ ಎಲ್ಲಾ ಸಮಸ್ಯೆಗಳನ್ನು, ಸಂತೋಷಗಳನ್ನು ನನ್ನ ಜೊತೆ ಹಂಚಿಕೊಳ್ಳುತ್ತಿದ್ದಳು. ಅದೇ ರೀತಿ ನಾನೂ ಸಹ ನಮ್ಮ ಮನೆಯ ಎಲ್ಲಾ ವಿಷಯಗಳನ್ನು ಅವಳ ಹತ್ತಿರ ಹೇಳಿಕೊಳ್ಳುತ್ತಿದ್ದೆ. ಅವರು ತುಂಬಾ ಜಮೀನನ್ನು ಹೊಂದಿದ್ದರು. ಅವರದು ಅವಿಭಕ್ತ ಕುಟುಂಬ. ಆದ್ದರಿಂದ ದಿನವೂ ಒಂದಲ್ಲ ಒಂದು ಜಗಳ. ಎಷ್ಟೋ ದಿವಸ ಅವಳು ಉಪವಾಸ ಬರ್‍ತಾ ಇದ್ದಳು. ಶನಿವಾರ ಎಲ್ಲರೂ ಬಾಕ್ಸ್ ತಗೊಂಡೋಗ್ತಾ ಇದ್ವಿ. ಒಂದೊಂದು ಶನಿವಾರ ಅವಳು ಬಾಕ್ಸ್ ತರದಿದ್ದಾಗ, ನನ್ನ ಬಾಕ್ಸ್‌ನಲ್ಲೇ ತಿನ್ನು ಅಂದ್ರೆ ತಿನ್ನುತ್ತಿರಲಿಲ್ಲ. ಅದು ಅವಳ ಸ್ವಾಭಿಮಾನ ಅಂತ ತಿಳಿದಿದ್ದೆ. ಆಗ ನನಗೇನೂ ಅನ್ನಿಸ್ತಾ ಇರಲಿಲ್ಲ. ಪ್ರತಿ ಶನಿವಾರ ಎಲ್ಲರೂ ಊಟ ಮಾಡಲು ಕುಳಿತಾಗ ಎಲ್ಲರೂ ತಮ್ಮ ತಮ್ಮ ಊಟಗಳನ್ನು ಎಲ್ಲರಿಗೂ ಕೈತುತ್ತು ಕೊಡುತ್ತಿದ್ದೆವು. ಆದರೆ ಅವಳು ನನ್ನ ಕೈತುತ್ತನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆಗ ನನಗೆ ತುಂಬಾ

ಬೇಜಾರಾಗ್ತಾ ಇತ್ತು. ಪರವಾಗಿಲ್ಲ ತಗೋ ಎಂದರೂ ತೆಗೆದುಕೊಳ್ಳುತ್ತಿರಲಿಲ್ಲ. ‘ನೇತ್ರ ಜಾತಿಪಾತಿ ಇವುಗಳನ್ನೆಲ್ಲ ನಾನು ಎಣಿಸಲ್ಲ. ಆದರೆ ನಮ್ಮ ಮನೆಯ ದ್ಯಾವರಲ್ಲಿ ಒರಳು ತೊಳೆಯುವ ಶಾಸ್ತ್ರ ಮಾಡ್ತೀನಿ ಅದಕ್ಕಾಗಿ ನಿಮ್ಮ ಜಾತಿಯವರ ಮನೆಯಲ್ಲಿ ಊಟ ಮಾಡಬಾರದು. ನಮ್ಮ ಅಮ್ಮಣ್ಣಿಗೆ ಗೊತ್ತದ್ರೆ ಬೈತಾರೆ. ಅದು ಹೋಗಲಿ ಬಿಡು ಅಂತಿದ್ದೆ. ಆದರೆ ನಿಮ್ಮ ಜಾತಿಯವರ ಮನೆಯಲ್ಲಿ ಒಂದು ತುತ್ತು ತಿಂದರೂ ವಾಂತಿ ಆಗಿಬಿಡುತ್ತೆ. ನಾನೇನು ಮಾಡಲಿ ನೇತ್ರ, ಬೇಕಾದರೆ ಒಂದು ತುತ್ತು ಕೊಡು ತಿಂತೀನಿ, ವಾಂತಿ ಮಾಡೋದನ್ನ ನೀನೇ ನೋಡಿಯಂತೆ’ ಎಂದಳು. ನಾನು ಕೊಟ್ಟ ಒಂದು ತುತ್ತು ಅನ್ನವನ್ನು ತಿಂದು, ನಿಜವಾಗಿಯೂ ವಾಂತಿ ಮಾಡಿಕೊಂಡಳು. ನನಗಂತೂ ತುಂಬಾ ಗಾಬರಿಯಾಯಿತು ಛೇ, ನಾನು ಎಂಥ ಕೆಲಸ ಮಾಡ್ದೆ ಗೊತ್ತಿದ್ದೂ ಗೊತ್ತಿದ್ದೂ ಅಂತ. ನಾನು ಮತ್ತೆ ಅವಳಿಗೆ ಯಾವತ್ತೂ ಊಟ ಮಾಡು ಅಂತ ಹೇಳಲೇ ಇಲ್ಲ”.[೫೬] ಈ ಪ್ರಸಂಗವನ್ನು ಗಮನಿಸಿದಾಗ ಸಮಾನತೆಯ ಸಂಕೇತದಂತೆ ಇರುವ ಹಾಗೂ ಜ್ಞಾನದ ವಿಸ್ತಾರವನ್ನು ಹೆಚ್ಚಿಸುವ ಶಾಲೆಯಲ್ಲಿ ಓದುವ ಮಕ್ಕಳ ಮೇಲೆ ಹೇಗೆ ಜಾತೀಯತೆಯ ಸೋಂಕು ಪ್ರಭಾವ ಬೀರಿದೆ ಎಂಬುವುದನ್ನು ಗಮನಿಸಬಹುದು.

ಹನುಮಂತರಾವ್ ಬಿ.ದೊಡ್ಡಮನಿ ಅವರ ‘ಪಂಚಮ’ ಆತ್ಮಕಥೆಯಲ್ಲಿ ಜೀವಜಲವಾದ ಕುಡಿಯುವ ನೀರಿಗೆ ದಲಿತರು ಪಡುವ ಪಾಡು, ಅನುಭವಿಸುವ ಸಂಕಷ್ಟಗಳು ದಲಿತರ ದಯನೀಯ ಸ್ಥಿತಿಯನ್ನು ದರ್ಶನ ಮಾಡಿಸುತ್ತಾರೆ. ವಿದ್ಯಾರ್ಥಿಗಳಿರಲಿ ಅಧ್ಯಾಪಕರೂ ಕುಡಿಯುವ ನೀರನ್ನು ಸವರ್ಣಿಯರಿಂದ ಎತ್ತಿ ಹಾಕಿಸಿಕೊಳ್ಳುವುದು ದಲಿತ ವಿದ್ಯಾರ್ಥಿಗಳನ್ನು ಕೆರಳಿಸುತ್ತದೆ. ಆದರೆ ಮಾಸ್ತರದು ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಲಾರದ ಸ್ಥಿತಿ. ಸರಕಾರಿ ನೌಕರಿಯಲ್ಲಿದ್ದೂ ಊರಿನ ಮೇಲ್ವರ್ಗದವರನ್ನು ಎದುರಿಸಲಾಗದ ಅಸಹಾಯಕತೆ ಅವರದು. ದಲಿತ ವಿದ್ಯಾರ್ಥಿಗಳೇ ದಲಿತ ಶಿಕ್ಷಕರ ಬೆಂಬಲಕ್ಕೆ ನಿಲ್ಲಬೇಕಾದ ಅನಿವಾರ್ಯತೆ ಪರಿಣಾಮಕಾರಿಯಾಗಿದೆ. ಮುಂದೆ, ನೀರಿಗಾಗಿ ದಲಿತ ವರ್ಗ ನಡೆಸುವ ಹೋರಾಟ, ಅನುಭವಿಸುವ ಸಂಕಷ್ಟಗಳು ‘ಪಂಚಮ’ದಲ್ಲಿ ವಿಶಿಷ್ಟವಾಗಿ ದಾಖಲಾಗಿವೆ. ಹಳ್ಳದ ನೀರು ಕುಡಿಯಲೂ ಊರವರ ಮರ್ಜಿಗಾಗಿ ಕಾಯಬೇಕಾದ ಸ್ಥಿತಿಯಲ್ಲಿ ತಾವು ಅನುಭವಿಸಿದ ನೋವನ್ನು ವಿವರಿಸುವುದು ಹೀಗೆ; “ಮೊನ್ನೆ ಊರಾಗಿನ ಚುಕ್ಕೋಳು ಹೊಡ್ಡುದರು, ನಾ ಸುಮ್ಕ ಬಂದೀನಿ. ಊರಾಗಿನ ಹೆಣ್ಮಕ್ಕು ದೊಡ್ಡ ಹಳ್ಳದಾಗ ಹೊಡ್ದ್ರು ನಿಮ್ಗ ಹೇಳಿಲ್ಲ. ಅವ್ರು ಮಕ್ಕಳು ಹೇತಿದ್ದ ಅರಿವಿ ತೊಳದ್ರು. ಅದೇ ನೀರು ನಾವು ಕುಡಿಬೇಕಂದ್ರು. ನಾವು ಅವರಿಗಿಂತ ಮ್ಯಾಲ ಹೋಗಿ ಕುಡಿಬೇಕಂದ್ರು ಅವ್ರು ನಮಗ ಬಿಡಲಿಲ್ಲ. ನಾವೇನು ಮನುಷ್ಯರೊ ಅಥವಾ ದನಗಳೊ ಒಂದು ತಿಳಿವಲ್ದು. ಹೇಸ್ಗಿ ತಿನ್ನುವ ನಾಯಿಗಳು ಅವ್ರ

ಮನ್ಯಾಗ ಹೋಗಿ ಉಚ್ಚಿ ಹೊಯ್ದರು ಸುಮ್ಮನಿರತಾರ. ನಾವು ಹರಿಯುವ ನೀರು ಕುಡಿಬಾರ್ದು?."[೩೭] ಸಾರ್ವಜನಿಕ ಹೋಟೆಲ್‌ಗಳಲ್ಲಿಯೂ ದಲಿತರ ಮೇಲಾಗುವ ಶೋಷಣೆಯ ಸ್ವರೂಪಕ್ಕೆ ಈ ಮಾತುಗಳು ಸಾಕ್ಷಿಯಂತಿವೆ. ಹೋಟೆಲ್‌ನಲ್ಲಿ ನೀರು ಕುಡಿಯಲು ಹೋದರೆ ಅದರ ಮಾಲಕ ಸಾಳ್ಯಾರ ತಿಪ್ಪಣ್ಣ, "ಏ ಹೊಲ್ಸು ಸೂಳಿ ಮಕ್ಕಳ್ಯಾ, ನಿಮಗ ನೀರು ಹಾಕಲ್ಲಾ ಅಂತಾನ. ಆ ಹೊಟೆಲ್ ಯಮನವ್ವಾನೂ ನೀರ ಹಾಕಲ್ಲಂತಾಳ. ಮನೀಗಿ ಬಂದು ನೀರ ಕುಡಿದ್ರ ಶಾಲಿಗಿ ತಡ ಆಗ್ತಾದ; ಮಾಸ್ತರು ಹೊಡಿತಾರ. ಇಂಥ ಕಷ್ಟ ಕೊಟ್ಟರ ಹ್ಯಾಂಗ್ ಶಾಲಿ ಕಲಿಬೇಕು?"[೩೮] ಹೀಗೆ ಲೇಖಕರು ನೀರಿನ ವಿಚಾರವಾಗಿ ತಮ್ಮ ಬಾಲ್ಯದಲ್ಲಿ ಅನುಭವಿಸಿದ ಮೇಲು ವರ್ಗದ ಜಾತೀಯತೆ ಹಿನ್ನೆಲೆಯಲ್ಲಿ ಶೋಷಣೆಯ ಘಟನೆಗಳನ್ನು ವಿಷದಪಡಿಸಿದ್ದಾರೆ.

ದಲಿತರಿಗೆ ನೀರಿನದ್ದೇ ಒಂದು ಭೀಕರ ಸಮಸ್ಯೆಯಾದರೆ ಹೆಂಡ ಸಾರಾಯಿಯದ್ದು ಮತ್ತೊಂದು ಸಮಸ್ಯೆ. ದಲಿತರಿಗೆ ಹೆಂಡ ಸಾರಾಯಿ ಸೇವನೆಯು ಪಾನೀಯ ಪದ್ಧತಿಯಾಗಿದ್ದರೂ ಇದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ದಲಿತ ಆತ್ಮಕಥನಕಾರರು ತಮ್ಮ ಆತ್ಮಕಥೆಗಳಲ್ಲಿ ಬಿಚ್ಚಿಟ್ಟಿದ್ದಾರೆ. ಕುಡಿತದ ಚಾಳಿಯಿಂದ ದಲಿತ ಕೇರಿಯಲ್ಲಿ ಸದಾ ಕುಡುಕರ ಹಾವಳಿ. ಸಂಜೆ ಆಯಿತೆಂದರೆ ಕುಡುಕರು ಕೂಗುವುದು, ಕುಣಿಯುವುದು, ಜಗಳಕ್ಕೆ ಕಾಲುಕೆರೆಯುವುದರಿಂದ ಜನರ ಗಮನ ಸೆಳೆಯುತ್ತಿದ್ದರು. ಕೆಲವರು ತಮಗೆ ತಿಳಿದಂತೆ ಹಾಡುತ್ತಿದ್ದರು. ಕುಡಿದ ಸಮಯದಲ್ಲಿ ಅವರಿಗೆ ಹೆಂಡತಿ ಮಕ್ಕಳ ಮೇಲಿನ ಪ್ರೀತಿ ಅಧಿಕವಾಗುತ್ತಿತ್ತು. ಕುಡುಕರ ಹಾವಳಿ ಅತಿಯಾದಾಗ ಅವರನ್ನು ಬಲವಾಗಿ ಹಿಡಿದು ಕುಳ್ಳಿರಿಸಿ, ತಲೆಯ ಮೇಲೆ ತಂಬಿಗೆ ತಣ್ಣೀರನ್ನು ಹೊಯ್ದು ಅವರನ್ನು ಶಮನಗೊಳಿಸುತ್ತಿದ್ದರು. ಸಿದ್ಧಲಿಂಗಯ್ಯ ಅವರು ತಮ್ಮ ಕೇರಿಯಲ್ಲಿ ಮಹಿಳೆಯೊಬ್ಬಳ ಕುಡಿತದ ದುಷ್ಪರಿಣಾಮವನ್ನು ಹೀಗೆ ಕಟ್ಟಿಕೊಟ್ಟದ್ದಾರೆ: "ಗಂಡ ಮಕ್ಕಳಿಲ್ಲದೆ ಒಂಟಿಯಾಗಿದ್ದ ಹೆಂಗಸೊಬ್ಬಳು ಬಹಳ ಕುಡಿಯುತ್ತಿದ್ದಳು. ನಲವತ್ತು ವರ್ಷ ದಾಟಿದ್ದರೂ ನೋಡಲು ಕಟ್ಟುಮಸ್ತಾಗಿದ್ದಳು. ಅವಳಲ್ಲಿ ಒಂದು ದೌರ್ಬಲ್ಯ ಸದಾ ಕುಡಿಯುವುದು. ಕೂಲಿ ಕೆಲಸಕ್ಕೆ ಹೋದವಳು ಸಂಜೆ ಮನೆಗೆ ತೂರಾಡಿಕೊಂಡೇ ಬಂದು ಮಲಗುತ್ತಿದ್ದಳು. ಒಂದು ಬೇಸುಗೆ ರಾತ್ರಿ ಅವಳು ಮನೆಯ ಮುಂದೆ ಬೀದಿಯಲ್ಲಿ ಮಲಗಿದ್ದಳು. ಎಚ್ಚರವಿಲ್ಲದೆ ಅವಳ ಬಟ್ಟೆ ಅಸ್ತವ್ಯಸ್ತವಾಗಿತ್ತು. ದಾರಿಯಲ್ಲಿ ಹೋಗುತ್ತಿದ್ದ ಪುಂಡನೊಬ್ಬ ಇದನ್ನು ನೋಡಿ ಅವಳ ಬಳಿ ಹೋಗಿ ಆಲಂಗಿಸಿದ. ಆಕ್ಷೇಪಣೆ ಬರದೆ ಇದ್ದುದರಿಂದ ಅವನ ರತಿಕ್ರೀಡೆ ಮುಂದುವರೆಯಿತು. ಇದನ್ನು ನೋಡಿದ ಇನ್ನಿಬ್ಬರು ಇದೇ ಕೆಲಸ ಮಾಡಿದರು. ಅವಳು ನಿದ್ದೆ ಮಂಪರಿನಲ್ಲಿ ಕೊಂಚ ಹಾ ಎಂದಳೇ ಹೊರತು ಅವಳಿಂದ ಯಾವುದೇ ಪ್ರತಿರೋಧ ಬರಲಿಲ್ಲ. ಈ ಸುದ್ಧಿ ಹೇಗೋ ಹಬ್ಬಿ ಹಲವರು ಅಲ್ಲಿ ಜಮಾಯಿಸಿ ತಮ್ಮ ಸರದಿಗಾಗಿ ಕಾಯತೊಡಗಿದರು.

ಬೆಳಗಿನ ಜಾವದ ತನಕ ೧೫ ವಯಸ್ಸಿನಿಂದ ೭೦ ವಯಸ್ಸಿನವರೆಗಿನ ಅನೇಕರು ಈ ಉಚಿತ ಸೌಲಭ್ಯವನ್ನು ಅನುಭವಿಸಿದರು. ಬೆಳಗಾತ್ತಿದ್ದಂತೆ ಎಚ್ಚರಗೊಂಡ ಅವಳು ಎಂದಿನಂತೆ ಇದ್ದಳು."[೫೯] ಈ ದಲಿತ ಮಹಿಳೆಯ ದುಡಿಮೆಯ ನಂತರದ ಹೆಂಡಸಾರಾಯಿ ಸೇವನೆ ನೋವನ್ನು ಮರೆಸುತ್ತಿತ್ತು ಎಂದು ಸಮಜಾಯಿಷಿ ಕೊಡಬಹುದಾದರೂ ಕುಡಿತದಿಂದಾಗಿ ಆಕೆಯ ಮೇಲಾದ ದೌರ್ಜನ್ಯಗಳು, ದುಷ್ಪರಿಣಾಮಗಳು ಅಮಾನವೀಯವಲ್ಲದೆ ಮತ್ತೇನು? ಕುಡಿತದ ಅಮಲಿನಲ್ಲಿ ಮೈಮರೆತರೆ ನಮಗೆ ನಾವೇ ಆಪತ್ತುಗಳನ್ನು ತಂದುಕೊಂಡಂತೆ ಆಗುತ್ತದೆ ಎಂಬ ಎಚ್ಚರಿಕೆಯ ಸಂದೇಶವನ್ನು ಆತ್ಮಕಥನಕಾರರು ದಾಖಲಿಸುತ್ತಾರೆ.

ಕುಡಿತದಿಂದ ಉಂಟಾಗುವ ದುಷ್ಪಾರಿಣಾಮವನ್ನು ಮತ್ತು ಕುಡಿತವನ್ನು ತಪ್ಪಿಸಿದ ಊರಜನತೆಯ ಕಾಳಜಿಯನ್ನು ತುಂಬಾಡಿ ರಾಮಯ್ಯ ಅವರು ತಮ್ಮ ಆತ್ಮಕಥೆಯಲ್ಲಿ ಹೀಗೆ ದಾಖಲಿಸಿದ್ದಾರೆ. "ರಾಜ್ಯದಲ್ಲಿ ಮದ್ಯಪಾನ ನಿಷೇಧವಿದ್ದ ಕಾಲ. ಹೆಂಡ ಸಾರಾಯಿ ಕುಡಿಯುವವರನ್ನು ಅವರು ಯಾವ ಜಾತಿಯವರೇ ಆಗಿರಲಿ ಹಳ್ಳಿಗಳಲ್ಲಿ ಅಸ್ಪೃಶ್ಯರಂತೆ ಕಾಣುತ್ತಿದ್ದರು. ನಮ್ಮ ಹಳ್ಳಿಯಲ್ಲಿ ಕದ್ದು–ಮುಚ್ಚಿ ನಡೆಯುತ್ತಿದ್ದ ಈ ಭಟ್ಟಿ ಸಾರಾಯಿ ವ್ಯವಹಾರ, ಒಂದು ಸಲ ಇದ್ದಕ್ಕಿದಂತೆ ಸುತ್ತೇಳು ಹಳ್ಳಿಗಳಿಗೂ ಗೊತ್ತಾಗುವಂತ ಹಘಟನೆಯೊಂದು ನಮ್ಮ ಹಳ್ಳಿಯಲ್ಲಿ ನಡೆಯಿತು. ಒಂದು ದಿನ ಹೊತ್ತಿನಂಟೆ ನಮ್ಮೂರಿನ ಜನ ತಮ್ಮ ಕೆಲಸಗಳಿಗೆ ಹೊರಡಲು ತಯಾರಾಗುತ್ತಿದ್ದಾಗ ಪೆಮ್ಮೆ ದೇವರಹಳ್ಳಿ ಪಕ್ಕದಲ್ಲಿರುವ ವೀರಕ್ಯಾತರಾಯನ ಬೆಟ್ಟದಲ್ಲಿ ನಮ್ಮೂರ ಬೋವಿ ಬುಡುದಿ ತಿಮ್ಮಯ್ಯ, ತಳವಾರ ಕ್ಯಾತಪ್ಪ ಹಾಗೂ ಪೆಮ್ಮೆದೇವರಹಳ್ಳಿಯ ಇನ್ನೂ ಕೆಲವರು ಭಟ್ಟಿಸಾರಾಯಿ ಕುಡಿದು ಸತ್ತು ಬಿದ್ದಿದ್ದಾರೆಂದು ಸುದ್ದಿ ಇಡೀ ಹಳ್ಳಿಗೆ ಕ್ಷಣಮಾತ್ರದಲ್ಲಿ ಹಬ್ಬಿತು. ಸುದ್ದಿ ಕೇಳಿದ ಹಳ್ಳಿಯ ಜನರೆಲ್ಲ ಗರಹೊಡೆದವರಂತೆ ಭಯಭೀತರಾದರು. ತಮ್ಮ ಮನೆಯಲ್ಲಿಯೇ ಸಾವು ಸಂಭವಿಸಿದವರಂತೆ ದುಃಖದಲ್ಲಿ ಮುಳುಗಿಹೋದರು."[೬೦] ಇದರಿಂದ ಊರಿನ ಎಲ್ಲ ಜನರು ಸೇರಿ ಹೆಂಡ ಸಾರಾಯಿ ಮಾರಾಟ ಮಾಡುವುದನ್ನು ನಿಷೇಧಿಸಬೇಕೆಂದು ತೀರ್ಮಾನಿಸಿದ್ದರು.

ಒಟ್ಟಾರೆಯಾಗಿ ನಮ್ಮ ದಲಿತ ಆತ್ಮಕಥೆಗಳು ರಾಜ್ಯದ ವಿವಿಧ ಪ್ರಾದೇಶಿಕ ಭಿನ್ನತೆಯಿಂದ ಮೂಡಿ ಬಂದಿರುವಂತವುಗಳಾಗಿವೆ. ರಾಜ್ಯದ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಆಹಾರ ಮತ್ತು ಪಾನೀಯ ಪದ್ಧತಿಯ ಕ್ರಮಗಳು ಇವೆ. ಅದರೂ ಸಹ ಬಡತನ ಬೇಗೆಯಲ್ಲಿ ಬೆಂದು ಜಾತೀಯತೆಯ ಸೊಂಕಿನಿಂದ ಜೀವನ ನಡೆಸುವ ಈ ದಲಿತ ಸಮುದಾಯದ ಜನರ ಆಹಾರ ಕ್ರಮ ಮೇಲುವರ್ಗದ ಜನರಿಗಿಂತ ಭಿನ್ನವಾಗಿದೆ ಎಂಬುವುದನ್ನು ದಲಿತ ಆತ್ಮಕಥನಕಾರರು ಕಟ್ಟಿಕೊಡುತ್ತಾರೆ.

೪.೪ ಉಡುಗೆ ತೊಡುಗೆಗಳು

ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳನ್ನು ಕುರಿತು ಅಧ್ಯಯನ ಮಾಡಿದಾಗ ಪ್ರಮುಖವಾಗಿ ಯಾವೊಬ್ಬ ಆತ್ಮಕಥನಕಾರರು ಉಡುಗೆ ತೊಡುಗೆಗಳ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಲಿಲ್ಲ ಎಂದು ತಿಳಿದು ಬರುತ್ತದೆ. ನನಗೆ ಅನಿಸಿದಂತೆ ಈ ಸಮುದಾಯದ ಜನರಿಗೆ ಉಡುಗೆ–ತೊಡುಗೆಗಳಿಗಿಂತ ಬಡತನ ಮತ್ತು ಅಸ್ಪೃಶ್ಯತೆಯ ಸೋಂಕಿನಿಂದ ಬಿಡುಗಡೆಯನ್ನು ಪಡೆಯುವುದೇ ಆಶಯವಾಗಿತ್ತು. ಆದರೆ ಉಡುಗೆ–ತೊಡುಗೆಗಳು ಈ ಅಸಮಾನತೆಯ ಸಮಾಜದಲ್ಲಿ, ಸಮಾನತೆಯನ್ನು ಬಯಸುವ ಜನರಿಗೆ ಉಡುವ ಬಟ್ಟೆಗಳು ಬಹಳ ಮುಖ್ಯವಾಗುತ್ತವೆ ಎಂಬುವುದನ್ನು ಸಹ ಪರಿಗಣಿಸಬೇಕಾಗುತ್ತದೆ. ಹಾಗಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಬದುಕಿನಲ್ಲಿ ಅಸ್ಪೃಶ್ಯತೆಗೆ ಕಾರಣವಾದ ತಮ್ಮ ಸ್ಥಿತಿಗತಿಗಳನ್ನು ತಮ್ಮ 'ವೀಸಾ ನಿರೀಕ್ಷಣೆಯಲ್ಲಿ' ಎಂಬ ಆತ್ಮಕಥನದಲ್ಲಿ ನಿರೂಪಿಸಿದ್ದಾರೆ. ಉತ್ತಮ ಉಡುಗೆಗಳನ್ನು ಧರಿಸದ ನಮ್ಮಂತಹ ದಲಿತ ಸಮುದಾಯವನ್ನು ಜನರು ನೋಡುವುದಕ್ಕೂ, ಹಾಗೆಯೆ ಉತ್ತಮ ಉಡುಗೆ ತೊಡುಗೆಗಳನ್ನು ತೊಟ್ಟಾಗ ಅದೇ ಜನರು ನಮಗೆ ಕೊಡುವ ಗೌರವಕ್ಕೂ ಇರುವ ವ್ಯತ್ಯಾಸಗಳನ್ನು ತೌಲನಿಕವಾಗಿ ವಿವೇಚಿಸಿದ್ದಾರೆ. "ಸಾಯಂಕಾಲ ಐದು ಗಂಟೆಗೆ ರೈಲು ಮಾಸೂರು ನಿಲ್ದಾಣ ತಲುಪಿತು. ನಾವು ನಮ್ಮ ಸಾಮಾನು ಸರಂಜಾಮುಗಳೊಂದಿಗೆ ಕೆಳಗೆ ಇಳಿದೆವು. ಉಳಿದೆಲ್ಲ ಪ್ರಯಾಣಿಕರು ಕೆಲವೇ ನಿಮಿಷಗಳಲ್ಲಿ ತಂತಮ್ಮ ಗುರಿಯೆಡೆಗೆ ಹೊರಟು ಹೋದರು. ನಾವು ನಾಲ್ಕು ಮಕ್ಕಳು ನಮ್ಮ ತಂದೆ ಅಥವಾ ಅವರು ಕಳಿಸಲು ವಾಗ್ದಾನವಿತ್ತ ಸೇವಕನ ದಾರಿ ಕಾಯುತ್ತಾ ಪ್ಲ್ಯಾಟ್‌ಫಾರ್ಮಿನಲ್ಲಿಯೇ ಉಳಿದೆವು. ಅವರಿಗಾಗಿ ಹೆಚ್ಚು ಹೊತ್ತು ಕಾಯ್ದರೂ ಯಾರೊಬ್ಬರು ಬರಲಿಲ್ಲ. ಕಾಯುತ್ತಾ ನಿಂತು ಒಂದು ತಾಸು ಆಗಿರಬೇಕು ಆಗ ಸ್ಟೇಶನ್ ಮಾಸ್ತರನು ನಮ್ಮೆಡೆಗೆ ಬಂದು ವಿಚಾರಿಸಿದನು. ನಾವು ಗೋರೇಗಾಂವ್‌ಗೆ ಹೋಗಬೇಕಾಗಿದೆ. ನಮ್ಮ ತಂದೆಯ ಸೇವಕನ ದಾರಿ ಕಾಯುತ್ತಾ ನಿಂತಿದ್ದೇವೆ. ಬಹಳ ಹೊತ್ತಾಯಿತು ಯಾರೊಬ್ಬರೂ ಬಂದಿಲ್ಲ, ಹೇಗೆ ಹೋಗಬೇಕೆಂಬುದು ನಮಗೆ ತಿಳಿಯದಾಗಿದೆ ಎಂದು ಹೇಳಿದೆವು. ಜೊತೆಗೆ ನಾವು ಒಳ್ಳೇ ಬಟ್ಟೆ ಧರಿಸಿದ್ದೆವು. ನಮ್ಮ ಬಟ್ಟೆಗಳಿಂದಾಗಲಿ, ಮಾತುಕತೆಯಿಂದಾಗಲಿ ನಾವು ಅಸ್ಪೃಶ್ಯರ ಮಕ್ಕಳೆಂದು ಯಾರಿಗೂ ತಿಳಿಯುವಂತಿರಲಿಲ್ಲ. ನಿಜ ಹೇಳಬೇಕೆಂದರೆ ಸ್ಟೇಷನ್ ಮಾಸ್ತರರು ನಮ್ಮನ್ನ ಬ್ರಾಹ್ಮಣರ ಮಕ್ಕಳೆಂದು ತಿಳಿದಿರಬೇಕೆಂದು ಕೊಂಡೆವು. ಆದರೆ ಆತನು ನೀವು ಯಾರು? ಎಂದು ಕೇಳಿದ. ಒಂದು ಅರೆಕ್ಷಣವೂ ನಾನು ವಿಚಾರ ಮಾಡದೆ ಥಟ್ಟನೆ ನಾವು 'ಮಹಾರರು' ಎಂದು ಉತ್ತರಿಸಿದೆ. (ಮಹಾರರೆಂದರೆ ಮುಂಬಯಿ ರಾಜ್ಯದಲ್ಲಿರುವ ಅಸ್ಪೃಶ್ಯರಲ್ಲಿಯ ಒಂದು ಪಂಗಡವೆಂದು ಪರಿಗಣಿತವಾಗಿತ್ತು) ನನ್ನ ಮಾತನ್ನು ಕೇಳುತ್ತಿದ್ದಂತೆಯೆ ಅವನು ಬೆಚ್ಚಿಬಿದ್ದ. ಅವನ ಮುಖದಲ್ಲಿ ಬದಲಾವಣೆ ಕಾಣಿಸಿಕೊಂಡಿತು. ನಮ್ಮ ಬಗ್ಗೆ ತಿರಸ್ಕಾರಭಾವ ಮೂಡಿದ್ದನ್ನು ಯಾರಾದರೂ ಗುರುತಿಸಬಹುದಾಗಿತ್ತು. ತಡಮಾಡದೆ ತನ್ನ ಕಾರ್ಯಾಲಯದ ಕೋಣೆಗೆ ಆತ ಹೊರಟು

ಹೋದ."[೬೧] ಈ ಪ್ರಸಂಗವನ್ನು ಗಮನಿಸಿದರೆ ಒಳ್ಳೆಯ ಬಟ್ಟೆಗಳನ್ನು ಅಂಬೇಡ್ಕರ್ ಅವರು ಧರಿಸಿದ್ದ ಕಾರಣಕ್ಕಾಗಿಯೆ ಆತ ನೀವು ಯಾರು? ಎಂದು ಕೇಳಿದ್ದಾನೆ. ಆಗ ಅಂಬೇಡ್ಕರ್ ಅವರು ಸ್ವಾಭಿಮಾನದಿಂದ ನಾವು 'ಮಹಾರ್' ಎಂದು ಹೇಳಿದ್ದರು. ಕೇಳಿದ ತಕ್ಷಣವೇ ಆತನ ಮನಸ್ಸಿನಲ್ಲಿ ಆದ ಈ ಮನುವಾದದ ಹಾಗೂ ಜಾತಿ ಮನಸ್ಸಿನ ಪೊರೆಗಳು ಕಳಚಲಾರಂಭಿಸುತ್ತವೆ. ಆದರೆ ಇಂದು ನಮ್ಮ ದಲಿತ ಸಮುದಾಯದ ಜನರು ಉಡುಗೆ ತೊಡುಗೆಗಳ ವಿಚಾರದಲ್ಲಿ ಅಂಬೇಡ್ಕರ್ ಅವರ ರೀತಿಯಲ್ಲಿ ತಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಲೇಖಕರು ಬಟ್ಟೆಗಳನ್ನು ಕುರಿತು ತೀರ ಗಂಭಿರವಾಗಿ ತಮ್ಮ ಅನುಭಗಳನ್ನು ಹೇಳಿಕೊಂಡಿಲ್ಲ. ಆದರೆ, ಹೇಳಿಕೊಂಡಿರುವ ಕೆಲವೇ ಕೆಲವು ಆತ್ಮಕಥನಕಾರರಅನುಭವಗಳುಅಷ್ಟೇಗಂಭೀರವೂಅರ್ಥಗರ್ಭಿತವೂಅಂತಃಕರಣ ಪೂರ್ವಕವಾಗಿಯೂ ಇವೆ. ತನ್ನ ಅಳತೆಗಿಂತಲೂ ದೊಡ್ಡದಾದ ಅಯ್ಯನವರ ಮನೆಯ ಬಟ್ಟೆಯನ್ನು ಸಿದ್ಧಲಿಂಗಯ್ಯ ಅವರು ಬಾಲ್ಯದಲ್ಲಿ ಧರಿಸಿದ್ದ ವಿಚಾರವು ದಲಿತ ಮಕ್ಕಳಿಗೆ ಬಾಲ್ಯದಲ್ಲಿ ಊರಿನವರಿಂದ ದೊರೆಯುತ್ತಿದ್ದ, ಅವರು ಬಳಸಿ ಹಿಂದಕ್ಕೆ ಹಾಕಿದ್ದ ಹಾಗೂ ಅವರಿಗೆ ಹಳೆಯದಾಗಿದ್ದ ಬಟ್ಟೆಗಳನ್ನು ನೀಡುತ್ತಿದ್ದರು ಎಂದು ತಮ್ಮ ಆತ್ಮಕಥನದಲ್ಲಿ ಹೇಳಿಕೊಳ್ಳುತ್ತಾರೆ.

ಎ.ಎಂ.ಮದರಿಯವರು ತಮ್ಮ 'ಗೊಂದಲಿಗ್ಯಾ' ಆತ್ಮಕಥನದಲ್ಲಿ ಉಡುಗೆಯ ಬಗ್ಗೆ ಪ್ರಸ್ತಾಪಿಸುತ್ತಾರೆ. "ಹೈಸ್ಕೂಲ್ ಮಾಸ್ತರಾಗಿದ್ದರೂ ಮದರಿಯವರಿಗೆ ತೊಡಲು ಒಳ್ಳೆಯ ಬಟ್ಟೆ ಇರುವುದಿಲ್ಲ. ಅವರ ಓಣಿಯಲ್ಲಿರುವ ಮಹೇಂದ್ರಕರ್ ಎಂಬ ಟೇಲರ್ ಕಳಕಳಿಯಿಂದ ತಾನೇ ಮುಂದಾಗಿ ತನ್ನಲಿದ್ದ ಟೆರಿಕಾಟ್ ಬಟ್ಟೆಯಿಂದ ಒಂದು ಜತೆ ಪ್ಯಾಂಟ್ ಮತ್ತು ಶರ್ಟ್ ಹೊಲೆದು ಅವರಿಗೆ ಕೊಡುತ್ತಾನೆ. ಹೊಸ ಬಟ್ಟೆ ಧರಿಸಿ ಸ್ಕೂಲಿಗೆ ಹೋದಾಗ ಪಾಂಡೆ ಎಂಬ ಅವರ ಸಹೋದ್ಯೋಗಿ ಅವರ ಬಟ್ಟೆ ನೋಡಿ ಉದ್ಗರಿಸಿ 'ಇದೇನು ಹೊಸ ಬಟ್ಟೆ ಹೊಲಿಸಿರಿ ಟೆರಿಕಾಟ್ ಇದ್ದಂಗದಾವ. ಯಮಕಾದವ ನೋಡ್ರಿ ಮದರಿ ಟೆರಿಕಾಟ್ ಬಟ್ಟೆ ಹೊಲಿಸ್ಯಾನ ಟೆರಿಕಾಟ್ ಬಟ್ಟೆ ಹೊಲಿಸ್ಯಾನ' ಎಂದು ಹುಬ್ಬು ಹಾರಿಸುತ್ತ ಹೇಳುತ್ತಾರೆ."[೬೨] ಅಂದರೆ ಟೆರಿಕಾಟ್ ಬಟ್ಟೆ ಯಾರು ಬೇಕಾದರು ಹೋಲಿಸುವಂತಿಲ್ಲ, ಅದರಲ್ಲೂ ತಳಸಮುದಾಯದ ಜಾತಿಗಳು ಟೆರಿಕಾಟ್ ಬಟ್ಟೆ ಹೋಲಿಸಿದ್ದರೆ ಅವರು ನಮ್ಮಂತೆ ಸಮಾನರಾಗಿ ಕಾಣುತ್ತಾರೆ ಎಂಬ ಅಸಹನೆಯನ್ನು ಅಭಿವ್ಯಕ್ತಿಸಿದಂತೆ ಕಾಣುತ್ತದೆ. ದಲಿತ ಸಮುದಾಯದ ಜನರಿಗೆ ಮಾತನಾಡುವ ಹಕ್ಕು, ಯಾರ ಭಯನೂ ಇಲ್ಲದೆ ಊರ ಮಧ್ಯದಲ್ಲಿ ತಿರುಗಾಡುವ ಹಕ್ಕು, ಸ್ವಾಭಿಮಾನವಾಗಿ ಬದುಕುವ ಹಕ್ಕು ಕಸಿದುಕೊಂಡಂತೆ ಉಡುವ ಮತ್ತು ತೊಡುವ ಹಕ್ಕನ್ನು ಕಸಿದುಕೊಳ್ಳಬೇಕೆಂಬ ಹುನ್ನಾರವನ್ನು ಬಯಸಿದಂತೆ ಕಾಣುತ್ತದೆ ಎಂಬ ಮೇಲು ವರ್ಗದ ಜನರ ಮನಸ್ಥಿತಿಗಳನ್ನು ಕನ್ನಡದ ದಲಿತ ಆತ್ಮಕಥೆಗಳು ದಾಖಲಿಸುತ್ತವೆ.

ಎನ್.ಕೆ.ಹನುಮಂತಯ್ಯ ಅವರು ಸಹ ಹೊಸದಾಗಿ ಕೊಂಡ ಉಡುಗೆಯ ಬಗ್ಗೆ ಪ್ರಸ್ತಾಪಿಸುತ್ತಾರೆ. "ಪ್ರೌಢಶಾಲೆಯ ಕೊನೆಯ ಹಂತವಾದ ಎಸ್.ಎಸ್.ಎಲ್.ಸಿಗೆ ನಾನು ಪ್ರವೇಶಿಸಿದೆ. ನಾನು ಆ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ದೇವರಿಗೆ ಮರಿ ಕಡಿಯುವುದಾಗಿ ಅಪ್ಪ ಹರಕೆ ಹೊತ್ತ. ತುಮಕೂರಿನ ಬಟ್ಟೆ ಅಂಗಡಿಗೆ ಕರೆದೊಯ್ದು ಇಪ್ಪತ್ತೈದು ರೂ. ಕೊಟ್ಟು ನನಗೆ ಒಂದು ತೇಪೆ ಹಾಕಿದ ಪ್ಯಾಂಟ್ ಕೊಡಿಸಿದ. ಅದು ನನ್ನ ಅಳತೆಗೆ ಹೊಂದದೆ ತುಂಬಾ ಬಿಗಿಯಾಗಿತ್ತು. ಅದೇ ನನ್ನ ಜೀವನದಲ್ಲಿ ನಾನು ಮೊಟ್ಟಮೊದಲು ಧರಿಸಿದ ಪ್ಯಾಂಟು. ಹೊಲಿಸುವ ಶಕ್ತಿ ಅಪ್ಪನಿಗೆ ಇಲ್ಲವಾಗಿತ್ತು. ಹತ್ತನೇ ತರಗತಿಯ ಫಲಿತಾಂಶ ಕಾಯುತ್ತಿದ್ದ ನಾನು ಕಾಲೇಜಿಗೆ ಹಣ ಸಂಪಾದಿಸಲು ದೊಡ್ಡವರ ಜೊತೆಗೆ ಕೆಲಸಕ್ಕೆ ಹೋಗತೊಡಗಿದೆ. ಭಗ್ನಪ್ರೇಮ ನನ್ನೊಳಗೆ ಓದುವ ಕೆಚ್ಚನ್ನು ವೃದ್ಧಿಸಿತು. ಬೆಳಗಿನ ನಾಲ್ಕು ಗಂಟೆಗೆ ಎದ್ದು ಬೀದಿ ದೀಪದ ಕೆಳಗೆ ಕೂತು ಓದುತ್ತಿದ್ದೆ. ಓದು ಮುಗಿಸಿ ಊರ ಸುತ್ತ ವೇಗವಾಗಿ ನಾಲ್ಕಾರು ಸುತ್ತು ಓಡಿ ತಣ್ಣೀರು ಸ್ನಾನ ಮಾಡುತ್ತಿದ್ದೆ. ಹಕ್ಕಿಗಳಿಗಿಂತ ಮೊದಲೇ ಎಚ್ಚೆತ್ತು ಓದುಬರಹದಲ್ಲಿ ತೊಡಗುತ್ತಿದ್ದ ನನ್ನನ್ನು ಹಟ್ಟಿಯ ಇತರೆ ಮಕ್ಕಳು ಸಹ ಕ್ರಮೇಣ ಅನುಕರಿಸತೊಡಗಿದರು. ಕಾಲೇಜಿಗೆ ಹೊಸ ಬಟ್ಟೆ ಹೊಲಿಸುವಷ್ಟು ಹಣ ಇರಲಿಲ್ಲ. ನನ್ನ ತಮ್ಮ ಐವತ್ತು-ನೂರು ನನಗೆ ಕೊಡುತ್ತಿದ್ದ. ಆ ಹಣದಲ್ಲಿ ಪೇಟೆಯ ಬೀದಿಯಲ್ಲಿ ಹರವಿಕೊಂಡ ಹಳೆಯ ಅಂಗಿ, ಪ್ಯಾಂಟು ಖರೀದಿಸುತ್ತಿದ್ದೆ. ಅವು ಬಿಗಿಯಾಗಿಯೂ ಸಡಿಲವಾಗಿಯೂ ಇರುತ್ತಿದ್ದವು. ಒಮ್ಮೆ ತಿಪಟೂರಿನ ಪೈ ಹೋಟೆಲ್ ವೃತ್ತದ ರಸ್ತೆ ಬದಿಯಲ್ಲಿ ಗುಜರಿ ಬಟ್ಟೆಗಳನ್ನು ಜೋಡಿಸಿದ್ದರು. ಆ ಬಟ್ಟೆಯ ನಡುವೆ ಇದ್ದ ಒಂದು ವಿಶೇಷವಾದ ಕಪ್ಪು ಪ್ಯಾಂಟು ನನ್ನ ಗಮನ ಸೆಳೆಯಿತು. ಬೆಲೆ ಕೇಳಿದೆ ಐವತ್ತು ರೂ ಹೇಳಿದರು. ನಲವತ್ತು ರೂ.ಗೆ ಆ ಪ್ಯಾಂಟನ್ನು ಕೊಟ್ಟರು. ನಾನು ಅದನ್ನು ಧರಿಸಿ ಮಾರನೇ ದಿನ ಕಾಲೇಜಿಗೆ ಹೋದೆ ಆಗ ಕಾಲೇಜಿನಲ್ಲಿ ನನ್ನ ದೊಗಳೆ ಪ್ಯಾಂಟು ನೋಡಿ ನನ್ನ ಸ್ನೇಹಿತರು ಅಪಹಾಸ್ಯ ಮಾಡಿದರು".[೬೩] ಹೀಗೆ ಹನುಮಂತಯ್ಯ ಅವರಿಗೆ ಆದ ಅವಮಾನ ಕೇವಲ ಹನುಮಂತಯ್ಯ ಅವರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇಡೀ ದಲಿತ ಸಮುದಾಯದ ಮೊದಲ ತಲೆಮಾರಿನ ಅಕ್ಷರ ಕಲಿಯಲು ಪ್ರಾರಂಭಿಸಿದ ದಲಿತ ವಿದ್ಯಾರ್ಥಿಗಳಿಗೆ ಆದ ಅಪಹಾಸ್ಯವಾಗಿದೆ. ಆದರೆ ಇಂದು ದಲಿತ ಸಮುದಾಯದ ವಿದ್ಯಾವಂತರಲ್ಲಿನ ಉಡುಗೆ-ತೊಡುಗೆಗಳಲ್ಲಿ ತುಂಬಾ ಬದಲಾವಣೆಯನ್ನು ಕಾಣಬಹುದಾಗಿದೆ.

ದಲಿತ ಸಮುದಾಯದವರ ಉಡುಗೆ-ತೊಡುಗೆಗಳ ಸ್ವರೂಪವನ್ನು ಈ ಮುಂದಿನಂತೆ ಸ್ಥೂಲವಾಗಿ ಪಟ್ಟಿ ಮಾಡಬಹುದು.

೧. ದಲಿತ ಸಮುದಾಯದ ತಾಯಂದಿರು ಧರಿಸುವ ಪ್ರಮುಖವಾದ ಬಟ್ಟೆ ಎಂದರೆ ಸೀರೆ. ಅದರಲ್ಲೂ ಹರಿದ ಮಾಸಲು ಸೀರೆಗಳು. ಅಪರೂಪಕ್ಕೆ ಹಬ್ಬ ಹರಿದಿನಗಳಲ್ಲಿ ಮಾತ್ರ ಹೊಸದೊಂದು ಸೀರೆಯನ್ನು ತೊಡುತ್ತಾರೆ.

೨. ದಲಿತ ಪುರುಷರು ಧರಿಸುವುದು ಮುಖ್ಯವಾಗಿ ಅಂಗಿ ಮತ್ತು ಪಂಚೆ. ಅದರಲ್ಲೂ ಹರಿದ ಮಾಸಲು ಅಂಗಿ ಮತ್ತು ಪಂಚೆ. ಅಪರೂಪಕ್ಕೆ ಹಬ್ಬ ಹರಿದಿನಗಳಲ್ಲಿ ಮಾತ್ರ ಹೊಸ ಬಟ್ಟೆಗಳನ್ನು ಧರಿಸುತ್ತಾರೆ.

೩. ದಲಿತ ಸಮುದಾಯದ ಯುವತಿಯರು ಹೆಚ್ಚಾಗಿ ಲಂಗದಾವಣಿಯನ್ನು ತೊಡುತ್ತಾರೆ.

೪. ದಲಿತ ಸಮುದಾಯದ ಯುವಕರು ಅಥವಾ ಮಕ್ಕಳು ಹರಿದ ನಿಕ್ಕರ್ ಅಥವಾ ಪ್ಯಾಂಟ್ ಮತ್ತು ದೊಗಲು ದೊಗಲಾದ ಅಂಗಿಯನ್ನು ಧರಿಸುತ್ತಾರೆ. ಈ ಬಗೆಯ ಉಡುಗೆ–ತೊಡುಗೆಗಳ ವಿನ್ಯಾಸಗಳನ್ನು ನಮ್ಮ ಕನ್ನಡ ದಲಿತ ಆತ್ಮಕಥನಕಾರರು ಹೇಳಿರುವ ಹಿನ್ನೆಲೆಯಲ್ಲಿ ಈ ಮೇಲಿನ ಅಂಶಗಳನ್ನು ಗಮನಿಸಬಹುದು.

೫. ಆದರೆ ಆಧುನಿಕ ಸಂದರ್ಭದಲ್ಲಿ ವಿದ್ಯಾವಂತ ದಲಿತ ಸಮುದಾಯವು ಜಾಗತೀಕರಣದ ಮಾರುಕಟ್ಟೆಯಲ್ಲಿ ದೊರೆಯುವ ವಿವಿಧ ಬಗೆಯ ವಿನ್ಯಾಸದ ಬಟ್ಟೆಗಳನ್ನು ಇಂದು ಕೊಂಡು ಧರಿಸುತ್ತಿದ್ದಾರೆ.

ಒಟ್ಟಿನಲ್ಲಿ, ಕನ್ನಡದ ಬಹುತೇಕ ದಲಿತ ಆತ್ಮಕಥನಕಾರರಿಗೆ ಉಡುಗೆ–ತೊಡುಗೆಗಳಿಗಿಂತ ಇವರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಂಘರ್ಷದ ತಲ್ಲಣಗಳು ಮುಖ್ಯವಾಗಿ ಇವರಿಗೆ ಕಾಡುತ್ತವೆ. ಭಾರತೀಯ ಸಾರಸ್ವತ ಲೋಕದಲ್ಲಿ ದಲಿತ ಆತ್ಮಕಥೆಗಳು ಕೇವಲ ಸಾಹಿತ್ಯ ಕೃತಿಗಳಾಗೆ ಉಳಿದಿಲ್ಲ. ಸಾಹಿತ್ಯಾತ್ಮಕವಾದ ಎಲ್ಲ ರೀತಿಯ ಗುಣಗಳೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಸಂಕಥನಗಳಾಗಿಯೂ ಸಹ ಗುರುತಿಸಿಕೊಂಡಿರುವುದು ಇಂದಿನ ಸಂದರ್ಭಕ್ಕೆ ಮಹತ್ವದ ಸಂಗತಿಯಾಗಿದೆ. ದಲಿತ ಆತ್ಮಕಥೆಗಳನ್ನು ಆಸ್ಥೆಯಿಂದ ಓದಿ ಆಪ್ತವಾಗಿಸಿಕೊಂಡ ಅನೇಕ ಚಿಂತಕರು, ವಿಮರ್ಶಕರು, ಹೋರಾಟಗಾರರು ದಲಿತ ಪ್ರಜ್ಞೆಯ ವಿಕಾಸಶೀಲತೆ ಹಾಗೂ ಸೃಜನಶೀಲತೆಯ ಮಹತ್ತನ್ನು ಸಾಂಸ್ಕೃತಿಕ ಸಂಗತಿಗಳ ಸಾಹಚರ್ಯದಲ್ಲಿ ಅನುಸಂಧಾನಗೊಳಿಸಿದ್ದಾರೆ.

ಅಂತೆಯೇ ಕನ್ನಡ ದಲಿತ ಆತ್ಮಕಥೆಗಳು ಮೇಲು ವರ್ಗದ ಸಂಸ್ಕೃತಿಯ ವಿಕೃತ ಮುಖವನ್ನು ಓದುಗರಿಗೆ ಪರಿಚಯಿಸುತ್ತಲೆ ದಲಿತ ಸಮುದಾಯದ ಮೇಲೆ ಉಂಟಾಗುವ ಶೋಷಣೆಯ ಮೂಲವನ್ನು ಸಹ ಬಯಲುಗೊಳಿಸಿದ್ದಾರೆ. ಸಾಂಸ್ಕೃತಿಕವಾದ ಆಚರಣೆ, ನಂಬಿಕೆಗಳನ್ನು ಪುನರ್‌ಮೌಲೀಕರಣಕ್ಕೆ ಒಳಗು ಮಾಡುವ, ಸಮ ಸಮಾಜದ ಆಶಯವನ್ನು ಕಟ್ಟಿಕೊಡುವ ಹಿನ್ನೆಲೆಯಲ್ಲಿ ಕನ್ನಡ ದಲಿತ ಆತ್ಮಕಥೆಗಳು ಸಂಸ್ಕೃತಿಯ ಸಂಕಥನಗಳಾಗಿ ಕನ್ನಡ ಸಾಹಿತ್ಯದಲ್ಲಿ ವಿಶೇಷವಾದ ಸ್ಥಾನವನ್ನು ನಿರ್ಮಾಣ ಮಾಡಿಕೊಂಡಿವೆ ಎಂಬುದು ಗುರುತರವಾದ ಸಂಗತಿಯೆ ಆಗಿದೆ.

ಕೊನೆಟಿಪ್ಪಣಿಗಳು

೧. ಡಾ. ತಪಸ್ವೀಕುಮಾರ್ ನಂ. : **ಸಂಸ್ಕೃತಿ ವಿನ್ಯಾಸ** ; ಪುಟ–೨೨.

೨. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ** ; ಪುಟ–೯೮.

೩. ಅಪ್ಪಗೆರೆ ಸೋಮಶೇಖರ್, ಮಲ್ಲಿಗೆಹಳ್ಳಿ ನರೇಂದ್ರಕುಮಾರ್ (ಸಂ) : **ನೋವು ಹೆತ್ತ ಪ್ರೀತಿ** ; ಪುಟ–೪೯.

೪. ಡಾ. ತಿಪ್ಪೇಸ್ವಾಮಿ ಜಿ.ಆರ್.: **ಸಾಹಿತ್ಯ ಮತ್ತು ಕ್ರಿಯಾಶೀಲತೆ** ; ಪುಟ–೨೧೨.

೫. ಸಿದ್ಧಲಿಂಗಯ್ಯ : **ಊರುಕೇರಿ ;** ಪುಟ–೨೫.

೬. ಸರಸ್ವತಿ ದು.: **ಈಗೇನ್ ಮಾಡೀರಿ?** ; ಪುಟ–೨.

೭. ಪರಶಿವಮೂರ್ತಿ ಎಂ.ಎಸ್. : **ಗೆರೆದಾಟಿದ ಮೇಲೆ** ; ಪುಟ–೧೮೪.

೮. ಅದೇ : ಪುಟ–೭೩–೭೪.

೯. ಸಿದ್ಧಲಿಂಗಯ್ಯ : **ಊರುಕೇರಿ** ; ಪುಟ–೩೩.

೧೦. ಪರಶಿವಮೂರ್ತಿ ಎಂ.ಎಸ್. : **ಗೆರೆದಾಟಿದ ಮೇಲೆ** ; ಪುಟ–೭೩.

೧೧. ಸರಸ್ವತಿ ದು. : **ಈಗೇನ್ ಮಾಡೀರಿ?** ; ಪುಟ–೯.

೧೨. ಅದೇ : ಪುಟ–೨೯.

೧೩. ಅದೇ : ಪುಟ–೩೨.

೧೪. ಲಕ್ಷ್ಮಣ್ : **ಸಂಬೋಳಿ** ; ಪುಟ–೪೫.

೧೫. ಅದೇ : ಪುಟ–೪೭.

೧೬. ಅದೇ : ಪುಟ–೫೨.

೧೭. ಸಿದ್ಧಲಿಂಗಯ್ಯ : **ಊರು ಕೇರಿ** ; ಪುಟ–೩೧, ೩೨.

೧೮. ಅದೇ : ಪುಟ–೫೨.

೧೯. ಅದೇ : ಪುಟ–೬೫.

೨೦. ಮುಳ್ಳೂರು ನಾಗರಾಜು : **ಮಾಮರದ ಮೇಲೊಂದು ಕೋಗಿಲೆ** ; ಪುಟ–೨೩–೨೫.

೨೧. ಸಿದ್ಧಲಿಂಗಯ್ಯ : **ಊರು ಕೇರಿ** ; ಪುಟ–೪೧.

೨೨. ಪರಶಿವಮೂರ್ತಿ ಎಂ.ಎಸ್. : **ಗೆರೆದಾಟಿದ ಮೇಲೆ** ; ಪುಟ–೪೬.

೨೩. ಡಾ. ಎಲ್ಲಪ್ಪ ಕೆ.ಕೆ. ಪುರ : **ಕೇರಿಯಿಂದ ತೇರಿಗೆ** ; ಪುಟ–೪೭–೫೭.

೨೪. ಕುಪ್ಪೆ ನಾಗರಾಜು : **ಅಲೆಮಾರಿಯ ಅಂತರಂಗ** ; ಪುಟ–೯೮.

೨೫. ಅದೇ : ಪುಟ–೧೫೯.

೨೬. ಅದೇ : ಪುಟ–೬೩.

೨೭. ಅದೇ : ಪುಟ–೨೧೦.

೨೮. ಡಾ. ಎಲ್ಲಪ್ಪ ಕೆ.ಕೆ. ಪುರ : **ಕೇರಿಯಿಂದ ತೇರಿಗೆ** ; ಪುಟ–೨೨–೨೫.

೨೯. ಡಾ. ಸಮತಾ ದೇಶಮಾನೆ : **ಒಡಲಿನ ಬೆಂಕಿ** ; ಪುಟ–೨೬.

೩೦. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** ; ಪುಟ–೩೪.

೩೧. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ, ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು** ; ಪುಟ–೪೦೭.

೩೨. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ, ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ ;** ಪುಟ–೪೫೧.

೩೩. ಡಾ. ಸಂಜೀವರಾಯ ಜಿ. : **ಹೊರಬೀಡು** ; ಪುಟ–೬.

೩೪. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ, ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು ;** ಪುಟ–೪೦೭–೪೦೮.

೩೫. ಪರಶಿವಮೂರ್ತಿ ಎಂ.ಎಸ್. : **ಗೆರೆದಾಟಿದ ಮೇಲೆ** ; ಪುಟ–೨೨೨–೨೨೬.

೩೬. ಅದೇ : ಪುಟ–೨೨೮.

೩೭. ಅದೇ : ಪುಟ–೩೮೪.

೩೮. ಸಿದ್ಧಲಿಂಗಯ್ಯ : **ಊರು ಕೇರಿ** ; ಪುಟ–೨೩.

೩೯. ಡಾ. ಸಂಜೀವರಾಯ ಜಿ. : **ಹೊರಬೀಡು** ; ಪುಟ–೩೦.

೪೦. ಅದೇ : ಪುಟ–೩೩.

೪೧. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೨೭.

೪೨. ಅದೇ : ಪುಟ–೨೭.

೪೩. ಅರವಿಂದ ಮಾಲಗತ್ತಿ : **ನಾ ಹರಿಜನ...? :** ಪುಟ–೫೩.

೪೪. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೩೦.

೪೫. ಅದೇ : ಪುಟ–೩೨.

೪೬. ಅದೇ : ಪುಟ–೨೯.

೪೭. ಮುಳ್ಳೂರು ನಾಗರಾಜು : **ಮಾಮರದ ಮೇಲೊಂದು ಕೋಗಿಲೆ** ; ಪುಟ–೧೭.

೪೮. ಅದೇ : ಪುಟ–೩೩.

೪೯. ಡಾ. ಸಂಜೀವರಾಯ ಜಿ. : **ಹೊರಬೀಡು** ; ಪುಟ–೩೮–೪೦.

೫೦. ಡಾ. ಎಲ್ಲಪ್ಪ ಕೆ.ಕೆ. ಪುರ : **ಕೇರಿಯಿಂದ ತೇರಿಗೆ** ; ಪುಟ–೪–೫.

೫೧. ಅದೇ : ಪುಟ–೧೮–೧೯.

೫೨. ಡಾ. ಮುನಿವೆಂಕಟಪ್ಪ ವಿ. : **ಅಂತ್ಯಜನ ಅಂತರಂಗ, ಸೂರ್ಯಪತ್ರಿಕೆ ನವೆಂಬರ್ ೨೯, ೨೦೦೩** ; ಪುಟ–೧೩–೧೪.

೫೩. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ, ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ** ; ಪುಟ–೪೪೭–೪೪೮.

೫೪. ದೇವನೂರ ಮಹಾದೇವ : **ಎದೆಗೆ ಬಿದ್ದ ಅಕ್ಷರ** ; ಪುಟ–೫೦–೫೧.

೫೫. ಪರಶಿವಮೂರ್ತಿ ಎಂ.ಎಸ್. : **ಗೆರೆದಾಟಿದ ಮೇಲೆ** ; ಪುಟ–೭೫.

೫೬. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ, ಒಕ್ಕಲಿಗರ ಮನೆಯಲ್ಲಿ ಹುಟ್ಟಿದ್ದಿದ್ರೆ** ; ಪುಟ–೪೫೦.

೫೭. ಹನುಮಂತರಾವ್ ಬಿ ದೊಡ್ಡಮನಿ : **ಪಂಚಮ** ; ಪುಟ–೧೮.

೫೮. ಅದೇ : ಪುಟ–೧೯.

೫೯. ಸಿದ್ಧಲಿಂಗಯ್ಯ : **ಊರು ಕೇರಿ** ; ಪುಟ–೩೦–೩೧.

೬೦. ತುಂಬಾಡಿ ರಾಮಯ್ಯ : **ಮಣೆಗಾರ** ; ಪುಟ–೩೭–೩೮.

೬೧. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ–೧೨. ಪುಟ–೮೪೨–೮೪೩.

೬೨. ಮದರಿ ಎ.ಎಂ. : **ಗೊಂದಲಿಗ್ಯಾ** ; ಪುಟ–೫೪.

೬೩. ಕೋಟಿಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ, ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು** ; ಪುಟ–೪೧೭–೪೨೫.

ಅಧ್ಯಾಯ ೫

ಸಮಾರೋಪ

೫.೧ ಅಧ್ಯಯನದ ಫಲಿತಗಳ ದಾಖಲೀಕರಣ

ಆಧುನಿಕ ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ದಲಿತ ಚಳುವಳಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇಂದು ಸೃಜನಶೀಲ ಪ್ರಕಾರವಾಗಲೀ, ಸೃಜನೇತರ ಪ್ರಕಾರವಾಗಲೀ ಏಕಮುಖಿಯಲ್ಲ. ಪ್ರತಿಯೊಂದು ಅಂತರ್‌ಶಿಸ್ತೀಯ ಸಂಕೀರ್ಣತೆಯಿಂದ ವೈವಿಧ್ಯತೆಯನ್ನು ಕಾಣಿಸುವಂತಾದ್ದಾಗಿದೆ. ದಲಿತ ಸಾಹಿತ್ಯವು ಕೂಡಾ ಆರ್ಥಿಕ ಅಸಮಾನತೆ, ಸಾಮಾಜಿಕ ಶೋಷಣೆ, ಪರಂಪರೆ, ಸಂಸ್ಕೃತಿ ನಾಶ, ಗ್ರಾಮೀಣ ಮತ್ತು ನಗರ ಬದುಕಿನ ವೈರುಧ್ಯಗಳು ಹೀಗೆ ಮೊದಲಾದ ಸಮಸ್ಯೆಗಳನ್ನು ಸಶಕ್ತವಾಗಿ ಅಭಿವ್ಯಕ್ತಿಸಿದೆ. ನೂರಾರು ವರ್ಷಗಳಿಂದ ಹರಿದ ಕಣ್ಣೀರು ನಿಲ್ಲಬೇಕು; ಹೊಸ ಆಶಾವಾದ ಮೂಡಬೇಕು. ಇಲ್ಲಿ ಬೆಳಕಿನ ಹುಡುಕಾಟಕ್ಕೆ ಕತ್ತಲೆ ಅಡ್ಡಿಯಾಗಿರುವುದೇ ದೊಡ್ಡ ಸವಾಲಾಗಿದೆ. ಇವತ್ತು ಬದುಕು ನಿಂತಿರುವುದು ಪರಂಪರೆ ಮತ್ತು ನಂಬಿಕೆಯ ಮೇಲೆ. ಹೀಗಾಗಿ ಜೀವನದ ಸಂಕೀರ್ಣತೆಯನ್ನು ಅರಿಯುವ ಮತ್ತು ವಿಶ್ಲೇಷಿಸುವ ಒಂದು ಕಲಾತ್ಮಕವಾದ ಜೀವ ಸೆಲೆಯಾಗಿ ಬದುಕು ಕಾಣಿಸಬೇಕಾಗಿದೆ.

ಮಾನವೀಯ ಸಮಾಜದೆಡೆಗೆ ತುಡಿಯುವಲ್ಲಿ ಇಲ್ಲಿನ ಎಲ್ಲ ಮನಸ್ಸುಗಳೂ ಬದಲಾವಣೆಯ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸಬೇಕು. ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುವ ಮೂಲಕ ನವ ಸಮಾಜವನ್ನು ಕಟ್ಟಬೇಕು. ಈ ಹಿನ್ನೆಲೆಯಲ್ಲಿ ದಲಿತ ಚಳುವಳಿಯ ಒಂದು ಭಾಗವಾಗಿ ಮೂಡಿಬಂದ ದಲಿತ ಸಾಹಿತ್ಯದ ಆತ್ಮಕಥಾನಕಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಸಾಂಸ್ಕೃತಿಕ ಇತಿಹಾಸದಲ್ಲಿ ಅನ್ಯಾಯ, ಅಪಮಾನ, ತುಳಿತ, ಶೋಷಣೆಯ ಎಲ್ಲ ಬಗೆಯ ನೋವು ನಲಿವುಗಳನ್ನು ಹಿಡಿದಿಡುವ ಕೆಲಸವನ್ನು ದಲಿತ ಆತ್ಮಕಥೆಗಳು ಅನಾವರಣ ಮಾಡಿತೋರಿಸಿವೆ. ಆದುದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ಪುನರಾವಲೋಕನ ಮಾಡಿಕೊಳ್ಳಲು, ಸ್ವವಿಮರ್ಶೆಗೆ ಒಡ್ಡಿಕೊಳ್ಳಲು ದಲಿತ ಆತ್ಮಕಥೆಗಳು ಪ್ರೇರೇಪಿಸುತ್ತವೆ. ಹಾಗೆಯೆ ಈ ಮಾನವ ಸಮಾಜ ನಿರ್ಮಾಣ ಮಾಡಿರುವ ಜಾತಿ ಗೋಡೆಗಳನ್ನು ದಾಟಿ ಬರಬೇಕಾದ ವ್ಯಕ್ತಿತ್ವಗಳು ರೂಪುಗೊಳ್ಳುವಂತೆ ಕೂಡ ಪ್ರೇರಪಣೆ ನೀಡುತ್ತವೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ನನ್ನ ಸಂಶೋಧನೆಯ ವಿಷಯವಾಗಿ 'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ತೌಲನಿಕ ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ

ಅಧ್ಯಯನ ಕೈಗೊಳ್ಳಲಾಗಿದೆ. ಇಲ್ಲಿ ನನ್ನ ಸಂಶೋಧನೆಯ ಒಟ್ಟು ಫಲಿತಗಳನ್ನು ಸ್ಥೂಲವಾಗಿ ಕ್ರೋಢೀಕರಿಸಲಾಗುವುದು. ಸಂಶೋಧನೆಯ ಹಿನ್ನೆಲೆಯಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ಚರ್ಚಿಸಲಾಗಿದೆ. ಮೊದಲನೆ ಅಧ್ಯಾಯದಲ್ಲಿ **'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಪ್ರೇರಣೆ ಮತ್ತು ಪ್ರಭಾವಗಳು'** ಎಂಬ ಆರಂಭದಲ್ಲಿ ದಲಿತ ಪದದ ಅರ್ಥ ಮತ್ತು ವ್ಯಾಖ್ಯಾನ, ದಲಿತ ಆತ್ಮಕಥೆಯ ಪರಿಕಲ್ಪನೆ, ಹುಟ್ಟು ಬೆಳವಣಿಗೆ, ದಲಿತ ಪ್ಯಾಂಥರ್ಸ್, ದಿಗಂಬರ ಸಾಹಿತ್ಯ, ಕಪ್ಪುಸಾಹಿತ್ಯ, ದಲಿತ ಚಳವಳಿ, ಜ್ಯೋತಿಬಾಫುಲೆ, ಮಹಾತ್ಮ ಗಾಂಧಿ, ಡಾ. ಬಿ.ಆರ್.ಅಂಬೇಡ್ಕರ್, ರಾಮ ಮನೋಹರ ಲೋಹಿಯಾ, ಪೆರಿಯಾರ್ ಮತ್ತು ಕಾರ್ಲ್‌ಮಾರ್ಕ್ಸ್ ಚಿಂತನೆಗಳು ಹಾಗೂ ಕನ್ನಡ ದಲಿತ ಆತ್ಮಕಥೆಗಳಿಗೆ ಪ್ರೇರಣೆ ಮತ್ತು ಪ್ರಭಾವ ಬೀರಿದ ಚಳವಳಿಗಳು, ಹೋರಾಟಗಳು, ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆಗಳು, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್‌ನ ಪ್ರಭಾವ ಮತ್ತು ಪ್ರೇರಣೆಗಳು, ದಕ್ಷಿಣ ಆಫ್ರಿಕಾದ ಕಪ್ಪುಸಾಹಿತ್ಯ, ಮರಾಠಿ ದಲಿತ ಆತ್ಮಕಥೆಗಳ ಪ್ರೇರಣೆ ಮತ್ತು ಪ್ರಭಾವಗಳನ್ನು ಸ್ಥೂಲವಾಗಿ ಶೋಧಿಸಲಾಗಿದೆ.

'ಭಾರತೀಯ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳು' ಎಂಬ ಎರಡನೆಯ ಅಧ್ಯಾಯದಲ್ಲಿ, ಭಾರತೀಯ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಹಾಗೆಯೇ ಕನ್ನಡ ದಲಿತ ಸಾಹಿತ್ಯಕ್ಕೆ ಕೆಲ ಬಗೆಯಲ್ಲಿ ಪ್ರಭಾವ ಬೀರಿರುವ ಭಾರತೀಯ ಭಾಷೆಗಳಾದ ತಮಿಳು, ಮರಾಠಿ, ತೆಲಗು, ಮಲಯಾಳಂ, ಹಿಂದಿ, ಪಂಜಾಬಿ, ಹಾಗೂ ಕನ್ನಡ ದಲಿತ ಸಾಹಿತ್ಯದ ಹುಟ್ಟು ಬೆಳವಣಿಗೆಯ ಮುಖ್ಯಾಂಶಗಳನ್ನು ದಾಖಲಿಸುವುದರ ಜೊತೆಗೆ ಭಾರತೀಯ ದಲಿತ ಆತ್ಮಕಥೆಗಳ ಬೆಳವಣಿಗೆಯ ಬಗ್ಗೆ ಸ್ಥೂಲವಾದ ಸಮೀಕ್ಷೆಯನ್ನು ನಡೆಸಲಾಗಿದೆ.

'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಮಾಜಿಕ ನೆಲೆಗಳು' ಎಂಬ ಮೂರನೆಯ ಅಧ್ಯಾಯದಲ್ಲಿ, ಭಾರತದ ಸಾಮಾಜಿಕ ಸಂರಚನೆಯಲ್ಲಿ ದಲಿತರಿಗೆ ದಕ್ಕಿರುವ ಸ್ಥಾನಮಾನಗಳನ್ನು ಮೌಲ್ಯೀಕರಿಸಲಾಗಿದೆ. ಕಾಲಾನುಕಾಲದಿಂದ ದಲಿತ ಸಮುದಾಯದವರು ಅನುಭವಿಸುತ್ತಿದ್ದ ಜಾತಿ–ಅಸ್ಪೃಶ್ಯತೆಯ ಸಂಕಟಗಳು, ಬಡತನ–ಹಸಿವಿನ ಹಾಹಾಕಾರಗಳು, ವೈವಿಧ್ಯಮಯ ಬಹುಕಾಯಕಗಳ ಅಸ್ತಿತ್ವ ಹಾಗೂ ಅಸ್ಮಿತೆಗಳು, ದಲಿತಕೇರಿ, ಭೂಮಿ ಮತ್ತು ಜೀವಸಂಬಂಧಗಳು ಹಾಗೂ ದಲಿತ ಮಹಿಳಾ ಅಸ್ತಿತ್ವದ ಸ್ಥಾನಮಾನ ಈ ಮೊದಲಾದ ಅಂಶವನ್ನು ಕುರಿತಂತೆ ಹಾಗೂ ದಲಿತ ಸಾಮಾಜಿಕ ಬದುಕು ಮತ್ತು ಸ್ವಾಭಿಮಾನದ ಹಿನ್ನೆಲೆಯಲ್ಲಿ ಇವುಗಳು ವಹಿಸುವ ಪಾತ್ರವನ್ನು ಕುರಿತಂತೆ ಕೂಲಂಕಷವಾಗಿ ವಿಶ್ಲೇಷಿಸಲಾಗಿದೆ.

'ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಸಾಂಸ್ಕೃತಿಕ ನೆಲೆಗಳು' ಎಂಬ ನಾಲ್ಕನೆ ಅಧ್ಯಾಯದಲ್ಲಿ, ಸಾಮಾಜಿಕ ಹಾಗೂ ಸಾಮುದಾಯಿಕ ಸಾಂಸ್ಕೃತಿಕ ಅಸ್ತಿತ್ವಗಳ ನಡುವೆ ದಲಿತ

ಸಾಂಸ್ಕೃತಿಕ ಅಸ್ತಿತ್ವ ಮತ್ತು ಅಸ್ಮಿತೆಗಳನ್ನು ಶೋಧಿಸಲಾಗಿದೆ. ದಲಿತ ಬದುಕಿನಲ್ಲಿ ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ನಂಬಿಕೆ, ಆಚರಣೆ, ಸಂಪ್ರದಾಯಗಳು, ಮನುಷ್ಯ ಮತ್ತು ದೇವರು ಸಂಬಂಧಗಳ ಒಳಸುಳಿಗಳನ್ನು ಸಾಂಸ್ಕೃತಿಕ ಯಾಜಮಾನ್ಯ ಹಾಗೂ ಸಾಂಸ್ಕೃತಿಕ ಇಕ್ಕಟ್ಟು ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ಆತ್ಮಕಥನಕಾರರರು ನಿರೂಪಿಸಿರುವ ಬಗೆಗಳನ್ನು ವಿವೇಚನಾತ್ಮಕವಾಗಿ ಶೋಧಿಸಲಾಗಿದೆ. ಇದಲ್ಲದೆ ದಲಿತರ ಆಹಾರ ಪದ್ಧತಿ ಹಾಗೂ ಉಡುಗೆ ತೊಡುಗೆಯಲ್ಲಿರುವ ವೈವಿಧ್ಯತೆಗಳನ್ನು ಹಾಗೂ ವೈರುಧ್ಯಗಳನ್ನು ಕೂಡ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅನಂತರ ಸಮಾರೋಪದಲ್ಲಿ ಈ ನನ್ನ ಸಂಶೋಧನೆಯಿಂದ ಕಂಡುಕೊಂಡ ಅಧ್ಯಯನದ ಫಲಿತಗಳು ಹಾಗೂ ಮುಂದೆ ಕೈಗೊಳ್ಳಬಹುದಾದ ಸಂಶೋಧನೆಯ ಸಾಧ್ಯತೆಗಳನ್ನು ಗುರುತಿಸಿ ಹೇಳಲಾಗಿದೆ.

ಒಟ್ಟಾರೆಯಾಗಿ ದಲಿತ ಸಾಂಸ್ಕೃತಿಕ ಕೋಶಗಳಂತೆ ಕಾಣುವ ದಲಿತ ಆತ್ಮಕಥೆಗಳನ್ನು ವಿವಿಧ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿ ಸಂಶೋಧನೆಯ ಮೂಲಕ ಕಂಡುಕೊಂಡ **'ಅಧ್ಯಯನದ ಫಲಿತ'**ಗಳನ್ನು ಈ ಮುಂದಿನಂತೆ ಸ್ಥೂಲವಾಗಿ ದಾಖಲಿಸಲಾಗಿದೆ.

೧. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳು ಬಡತನವನ್ನು ಅಭಿವ್ಯಕ್ತಿಸುತ್ತ ಅದರಿಂದ ಅನುಭವಿಸಿದ ನೋವು-ನಲಿವುಗಳನ್ನು ಹೇಳುವ ಕಥನ ಕ್ರಮವು ದಲಿತ ಬದುಕಿನ ಜೀವನಾನುಭದ ಆಳದಿಂದ ಮೂಡಿ ಬಂದಿರುವುದನ್ನು ತೆರೆದು ತೋರಿಸುತ್ತವೆ. ದಲಿತ ಆತ್ಮಕಥನವೆಂದರೆ ಅದೊಂದು ಬೆಂಕಿಯಿಂದ ಧಗಧಗಿಸುವ ಉಂಡೆ. ಎಂಬ ಅಂಶಗಳನ್ನು ಆತ್ಮಕಥನಕಾರರು ಕಟ್ಟಿಕೊಟಿದ್ದಾರೆ.

೨. ಆಧುನಿಕ ಭಾರತೀಯ ಸಾಹಿತ್ಯದಲ್ಲಿ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಹೊಸ ಶಕೆ ಆರಂಭವಾಗಿ ತನ್ನದೆ ಸ್ಥಾನಮಾನವನ್ನು ಪಡೆದುಕೊಂಡಿರುವುದು ಇವುಗಳ ಅಧ್ಯಯನದಿಂದ ತಿಳಿದುಬರುತ್ತದೆ.

೩. ಜಾತಿವಿನಾಶದ ಪ್ರಕ್ರಿಯಾಪರಂಪರೆಯಲ್ಲಿ ದಾರ್ಶನಿಕ ಚೇತನಗಳ (ಬುದ್ಧ, ಬಸವ, ಅಂಬೇಡ್ಕರ್, ಫುಲೆ ಇತ್ಯಾದಿ) ಪ್ರಭಾವವು ಎಲ್ಲ ಕಾಲದಲ್ಲೂ ಆಗಿರುವಂತೆ ಆಧುನಿಕ ಕಾಲದಲ್ಲೂ ಆಗಿರುವುದನ್ನು ಕನ್ನಡ ದಲಿತ ಆತ್ಮಕಥೆಗಳು ತೆರೆದು ತೋರಿಸುತ್ತವೆ.

೪. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ತಾಯ್ತನದ ಪ್ರೀತಿ ಅದಮ್ಯವಾಗಿದೆ. ಹಾಗೆಯೇ ಪುರುಷ ಕೇಂದ್ರಿತ ಈ ಸಮಾಜದಲ್ಲಿ ಮಹಿಳೆಯರಿಗೆ ವಿಶೇಷವಾದ ಸ್ಥಾನಮಾನವನ್ನು ನಮ್ಮ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳು ನೀಡಿವೆ ಎಂಬುವುದನ್ನು ಸಂಶೋಧನೆಯ ಅಧ್ಯಯನದಿಂದ ಸಾಕ್ಷೀಕರಿಸಬಹುದಾಗಿದೆ.

೫. ಶೋಷಿತ ತಳಸಮುದಾಯಗಳ ಮೇಲೆ ಪ್ರಬಲ ಸಮುದಾಯಗಳು ಹೇರುವ ಸಾಂಸ್ಕೃತಿಕ ಅನನ್ಯತೆ ಹಾಗೂ ಯಾಜಮಾನ್ಯತೆಗಳು ಸಾಂಸ್ಕೃತಿಕ ಶ್ರೇಣೀಕರಣವನ್ನು ಹುಟ್ಟುಹಾಕಿರುವ ನಿದರ್ಶನಗಳನ್ನು ಅಧ್ಯಯನದ ಫಲಿತದಿಂದ ತಿಳಿಯಬಹುದು.

೬. ಆತ್ಮಕಥೆಗಳ ಇತಿಹಾಸದಲ್ಲಿ ಮುಕ್ತವಾಗಿ ತಮ್ಮ ಎಲ್ಲಾ ಸಂಗತಿಗಳನ್ನು ತೆರೆದು ಬಿಚ್ಚಿಡುವುದು ದಲಿತ ಆತ್ಮಕಥೆಗಳು ಮಾತ್ರ. ಹಾಗಾಗಿ ಈ ಎಲ್ಲಾ ಆತ್ಮಕಥೆಗಳ ಕೇಂದ್ರದಲ್ಲಿ ನೋವು ಮಡುಗಟ್ಟಿದ್ದರೂ ಪ್ರೀತಿಗಾಗಿ ಕಾತರಿಸುವ ಹಂಬಲವಿದೆ. ಸಮುದಾಯಮುಖಿ ಚಿಂತನೆಯಿದೆ.

೭. ಅಕ್ಷರ ಲೋಕಕ್ಕೆ ತೆರೆದುಕೊಂಡ ದಲಿತ ಸಮುದಾಯವು ಅಸಮಾನತೆಯ ಈ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಪಡೆದು ಮುಖಾಮುಖಿಯಾಗುವ ಸಂದರ್ಭದಲ್ಲಿ ಎದುರಿಸುವ ಹತ್ತು–ಹಲವು ಸಂಗತಿಗಳನ್ನು ಅಧ್ಯಯನದ ಫಲಿತದಿಂದ ಕಾಣಬಹುದಾಗಿದೆ.

೮. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳು ಏಕಮುಖಿ ಚಿಂತನೆಯಿಂದ ರಚನೆಗೊಂಡಿರುವುದಲ್ಲ, ಇದು ಸಮುದಾಯದ ಬಹುಮುಖಿ ಚಿಂತನೆಯಿಂದ ರಚನೆಗೊಂಡಿರುವುದಾಗಿದೆ. ದಲಿತನೊಬ್ಬನ ನೋವಿನ ಹಾಗೂ ಸಂತೋಷದ ಪ್ರತಿಯೊಂದು ಸಂಗತಿಗಳು ಏಕವ್ಯಕ್ತಿಯದಾಗಿರದೆ ಅದು ಸಮುದಾಯದ ಸಮಷ್ಠೀ ಸಂಗತಿಯಾಗಿರುತ್ತದೆ ಎಂಬ ಅಂಶಗಳನ್ನು ಕಂಡುಕೊಳ್ಳಲು ಈ ಅಧ್ಯಯನ ಸಹಾಯ ಮಾಡುತ್ತದೆ.

೯. ಪ್ರತಿಯೊಂದು ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ದಲಿತ ಸಮುದಾಯದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಂಘರ್ಷದ ವಿವಿಧ ನೆಲೆಗಳ ಸ್ಪಷ್ಟವಾದ ಚಿತ್ರಣವನ್ನು ಕಾಣಬಹುದಾಗಿದೆ.

೧೦. ಅಸಮಾನತೆ ಮತ್ತು ಅವಮಾನಗಳನ್ನು ಉಣಬಡಿಸುವ ಸಾಮಾಜಿಕ ವ್ಯವಸ್ಥೆಯ ಬಗೆಗೆ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥನಕಾರರಿಗೆ ಆಳವಾದ ನೋವಿದೆ. ಆದರೆ ಈ ನೋವಿಗೆ ಪ್ರತಿಕಾರವಾಗಿ ಜೀವವಿರೋಧಿಯಾದ ಯಾವ ಪ್ರತಿಕ್ರಿಯೆಯನ್ನು ತೋರುವುದಿಲ್ಲ ಎಂಬ ಅಂಶವನ್ನು ಗುರುತಿಸಬಹುದಾಗಿದೆ.

೧೧. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥನಗಳಲ್ಲಿ ನಿರೂಪಿತವಾಗಿರುವ ಭಾಷಿಕ ಅಭಿವ್ಯಕ್ತಿಯಲ್ಲಿ ಮರಾಠಿ ಮತ್ತು ಕನ್ನಡ ಭಾಷೆಯ ವೈವಿಧ್ಯತೆಯನ್ನು ಕಾಣಬಹುದಾಗಿದೆ. ಆತ್ಮಕಥನಕಾರರು ಹುಟ್ಟಿ ಬೆಳದ ನೆಲೆಗಳಾದ ಮಹಾರಾಷ್ಟ್ರದ ನೆಲಮೂಲ ಭಾಷೆಯನ್ನು ಅಧ್ಯಯನ ಮಾಡುತ್ತಾ, ಗುಲ್ಬರ್ಗ ಕನ್ನಡ, ನಂಜನಗೂಡು ಕನ್ನಡ, ಬೆಂಗಳೂರು ಕನ್ನಡ, ತುಮಕೂರು ಕನ್ನಡ ಇತ್ಯಾದಿ, ನೆಲಮೂಲ ಭಾಷೆಯಲ್ಲಿ ಆತ್ಮಕಥನಕಾರರು ತಮ್ಮ ಅತ್ಮಕಥೆಯನ್ನು ಅಭಿವ್ಯಕ್ತಿಸಿದ್ದಾರೆ ಎಂಬುವುದನ್ನು ಗುರುತಿಸಬಹುದಾಗಿದೆ.

ಹೀಗೆ ಹಲವಾರು ಅಂಶಗಳನ್ನು ಅಧ್ಯಯನದ ಫಲಿತಗಳಿಂದ ದಾಖಲಿಸಬಹುದು. ಈ ನನ್ನ ಸಂಶೋಧನೆಯ ಫಲಿತದಿಂದ ಮುಂದೆ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳನ್ನು ಕುರಿತಂತೆ ಸಂಶೋಧನೆ ಕೈಗೊಳ್ಳುವವರಿಗೆ ಈ ಕೆಳಕಂಡ ಆಂಶಗಳನ್ನು ಸಂಶೊಧನೆಯ ಸಾಧ್ಯತೆಯಾಗಿ ಗುರುತಿಸಲು ಸಾಧ್ಯವಿದೆ. ಅವುಗಳೆಂದರೆ:

೧. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳನ್ನು ಸಾಮಾಜಿಕ, ಸಾಂಸ್ಕೃತಿಕ ತೌಲನಿಕ ನೆಲೆಯಲ್ಲಿ ಸಮಗ್ರವಾಗಿ ಇಲ್ಲಿ ಸಂಶೋಧನೆಯನ್ನು ಕೈಗೊಂಡಿರುವುದರಿಂದ ಈ ಮೇಲಿನ ಪ್ರತಿಯೊಂದು ವಿಷಯವನ್ನು ಕುರಿತಂತೆ ಮುಂದೆ ಪ್ರತ್ಯೇಕ, ಪ್ರತ್ಯೇಕವಾಗಿ ಸಂಶೋಧನೆ ಕೈಗೊಳ್ಳಬಹುದು.

೨. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ನಿರೂಪಿಸಲಾಗಿರುವ ದಲಿತ ಮಹಿಳೆಯರ ಸ್ಥಾನಮಾನವನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಬಹುದು.

೩. ಭಾರತೀಯ ದಲಿತ ಸಮುದಾಯದ ಸಾಂಸ್ಕೃತಿಕ ಅಸ್ಮಿತೆಯನ್ನು ಕುರಿತು ಮನೋವೈಜ್ಞಾನಿಕ ಅಧ್ಯಯನವನ್ನು ಕೈಗೊಳ್ಳಬಹುದು.

೪. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಮನುಷ್ಯ ಮತ್ತು ಪ್ರಾಣಿ ಸಂಬಂಧ, ಮನುಷ್ಯ ಮತ್ತು ಪ್ರಕೃತಿ ಸಂಬಂಧ ಕುರಿತು ಸಂಶೋಧನೆ ಕೈಗೊಳ್ಳಬಹುದು.

೫. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ದೇವರು ಮತ್ತು ದೆವ್ವಗಳ ಪರಿಕಲ್ಪನೆ ಕುರಿತು ವಿವಿಧ ನೆಲೆಯಲ್ಲಿ ಸಂಶೋಧನೆ ಕೈಗೊಳ್ಳಬಹುದು.

೬. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಪ್ರೇಮ ಮತ್ತು ಕಾಮದ ಪರಿಕಲ್ಪನೆ ಹಾಗೂ ಅಂತರ್ಜಾತಿವಿವಾಹದಸಾಧಕ–ಬಾಧಕಗಳನ್ನುಕುರಿತುಸಂಶೋಧನೆಗಳನ್ನು ನಡೆಸಬಹುದಾಗಿದೆ.

೭. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಲ್ಲಿ ಪ್ರಾದೇಶಿಕ ಅನನ್ಯತೆಯೊಂದಿಗೆ ಭಾಷೆಯ ಅನನ್ಯತೆಯನ್ನು ಕುರಿತಂತೆ ಭಾಷಿಕ ದೃಷ್ಟಿಯಲ್ಲಿ ಸಂಶೋಧನೆಯನ್ನು ನಡೆಸಬಹುದು.

ಹೀಗೆ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳಿಂದ ಇನ್ನೂ ಹಲವಾರು ನೆಲೆಯಲ್ಲಿ ಸಂಶೋಧನೆಗಳನ್ನು ನಡೆಸಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳನ್ನು ಶೋಧಿಸಿದಷ್ಟು ವಿಶೇಷವಾದ ಅಧ್ಯಯನ ಸಾಮಗ್ರಿಗೆ ದಾರಿ ದೀಪವಾಗುತ್ತಾ ಹೋಗುತ್ತದೆ. ಪ್ರಸ್ತುತ ನನ್ನ ಈ ಸಂಶೋಧನೆಯಲ್ಲಿ ಮೇಲೆ ಉಲ್ಲೇಖಿಸಿದ ಸಂಶೋಧನಾ ಸಾಧ್ಯತೆಗಳನ್ನು ಕುರಿತು ಪ್ರಾಸಂಗಿಕವಾಗಿ ವಿಚಾರಗಳನ್ನು ಚರ್ಚಿಸಲಾಗಿದೆ. ಆದರೆ ವಿಷಯ ವ್ಯಾಪ್ತಿ ಸಮಗ್ರವಾಗಿರುವುದರಿಂದ ಕೆಲವು ಸೂಕ್ಷ್ಮ ಸಂಗತಿಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಮುಂದೆ ಬರುವ ಸಂಶೋಧಕರು ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳನ್ನು ಸಂಶೋಧನೆಯ ವಿಷಯವಾಗಿ ಇತ್ತ ಗಮನಹರಿಸುವಂತಾಗಲಿ, ಮತ್ತಷ್ಟು ಹೊಸನೆಲೆಯಲ್ಲಿ ಸಂಶೋಧನೆಗಳು ನಡೆಯುವಂತಾಗಲಿ ಎಂದು ಆಶಿಸುತ್ತೇನೆ.

ಅನುಬಂಧ – ೧

ಆಕರ ಗ್ರಂಥಗಳು

ಕ್ರ. ಸಂ.	ಲೇಖಕರು		ಕೃತಿ
೧.	ಅಂಬೇಡ್ಕರ್	:	**ವೀಸಾದ ನೀರಿಕ್ಷೆಯಲ್ಲಿ – ನೆನಪುಗಳು** : ಸದಾಶಿವ ಮರ್ಜಿ (ಅನು.) ; ಅವಿರತ ಪ್ರಕಾಶನ, ಮೈಸೂರು, ೨೦೧೧
೨.	ಈ. ಸೋನ ಕಾಂಬಳೆ	:	**ನೆನಪಿನ ಹಕ್ಕಿ** : ಚಂದ್ರಕಾಂತ ಪೋಕಳೆ (ಅನು.) ;ಲಡಾಯಿ ಪ್ರಕಾಶನ,ಗದಗ, ೨೦೧೪
೩.	ದಾದಾ ಸಾಹೇಬ ಮಲ್ಲಾರಿ ಮೋರೆ	:	**ಗಬಾಳ** : ದು.ನಿಂ ಬೆಳಗಲಿ (ಅನು.) ; ನವಕರ್ನಾಟಕಪ್ರಕಾಶನಬೆಂಗಳೂರು. ೧೯೯೫
೪.	ನಾಮದೇವ ನಿಮ್ಗಾಡೆ	:	**ಹುಲಿಯಾ ನೆರಳಿನೊಳಗೆ ಅಂಬೇಡ್ಕರ್ ವಾದಿಯ ಆತ್ಮಕಥೆ** ; ಬಿ. ಶ್ರೀಪಾದ (ಅನು.) ; ಲಡಾಯಿ ಪ್ರಕಾಶನ ಗದಗ, ೨೦೧೪
೫.	ಭೀಮಾರಾಮ್ ಗಸ್ತಿ	:	**ವಾಲ್ಮೀಕಿ** : ಸರಜೂ ಕಾಟ್ಕರ್ (ಅನು.) ; ಸೃಷ್ಠಿ ಪಬ್ಲೀಕೇಷನ್ ಬೆಂಗಳೂರು, ೨೦೦೮
೬.	ಮಾದೇವಿ ದೇಸಾಯಿ	:	**ಕುಣಿಯೇ ಘುಮಾ** : ಚಂದ್ರಕಾಂತ ಪೋಕಳೆ (ಅನು.) ; ನವಕರ್ನಾಟಕ ಪ್ರಕಾಶನ ಬೆಂಗಳೂರು, ೧೯೯೭
೭.	ಲಕ್ಷ್ಮಣ ಗಾಯಕವಾಡ	:	**ಉಚಲ್ಯಾ** : ಚಂದ್ರಕಾಂತ ಪೋಕಳೆ (ಅನು.) ನವಕರ್ನಾಟಕಪ್ರಕಾಶನಬೆಂಗಳೂರು, ೧೯೯೭
೮.	ಶರಣಕುಮಾರ ಲಿಂಬಾಳೆ	:	**ಅಕ್ರಮ ಸಂತಾನ** : ಬೆಳಗಲಿ ದು.ನಿಂ. (ಅನು.) ನವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೧೩
೯.	ಶಾಂತಬಾಯಿ ಕೃಷ್ಣಾಜಿ ಕಾಂಬಳೆ	:	**ನನ್ನ ಜನುಮದ ದುರಂತ ಕಥೆ** : ಚಂದ್ರಕಾಂತ ಪೋಕಳೆ (ಅನು.) ; ಕುವೆಂಪು ಭಾಷಾ ಭಾರತಿ, ಬೆಂಗಳೂರು ೨೦೧೩
೧೦.	ಶೋಭಾ ನಾಯಕ್	:	**ಆತ್ಮವೃಂತಾತ** : ಜಾಗೃತಿ ಪಿಂಟರ್ಸ್ ಬೆಂಗಳೂರು, ೨೦೧೯

೧೧. ಅರವಿಂದ ಮಾಲಗತ್ತಿ : **ಗೌರ್ಮೆಂಟ್ ಬ್ರಾಹ್ಮಣ** : ಅಭಿರುಚಿ ಪ್ರಕಾಶನ, ಮೈಸೂರು ; ೧೯೯೪.

೧೨. ಎಲ್ಲಪ್ಪ ಕೆ.ಕೆ.ಪುರ : **ಕೇರಿಯಿಂದ ತೇರಿಗೆ** : ಶ್ರೀಶಾ ಎಂಟರ್ ಪ್ರೈಸಸ್,ನಾಗರಬಾವಿ,ಬೆಂಗಳೂರು; ೨೦೦೯.

೧೩. ಕಾಳೇಗೌಡ ನಾಗವಾರ (ಸಂ) ಆನಂದಮೂರ್ತಿ ಜಿ.ವಿ : **ಗರಿಗೆದರಿದ ನವಿಲು** : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ; ೨೦೦೧.

೧೪. ಕುಪ್ಪೆ ನಾಗರಾಜು : **ಅಲೆಮಾರಿ ಅಂತರಂಗ** : ನವಕರ್ನಾಟಕ ಪ್ರಕಾಶನ, ಬೆಂಗಳೂರು ; ೨೦೧೩.

೧೫. ಕೋಟಗಾನಹಳ್ಳಿ ರಾಮಯ್ಯ (ಸಂ) : **ತಲಪರಿಗೆ** : ಪರಿಶಿಷ್ಟಜಾತಿ/ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು ; ೨೦೦೫.

೧೬. ಗೋವಿಂದರಾಜು ಕೆ. : **ಮನವಿಲ್ಲದವರ ಮಧ್ಯೆ** : ಅಭಿರುಚಿ ಪ್ರಕಾಶನ, ಮೈಸೂರು ; ೨೦೦೦.

೧೭. ತುಂಬಾಡಿ ರಾಮಯ್ಯ : **ಮಣೆಗಾರ** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ; ೨೦೦೬.

೧೮. ತುಂಬಾಡಿ ರಾಮಯ್ಯ : **ಮುತ್ತಿನ ಜೋಳ** : ಬೋಧಿಶ್ರೀ ಪ್ರಕಾಶನ, ತುಮಕೂರು ; ೨೦೦೯.

೧೯. ದು. ಸರಸ್ವತಿ : **ಈಗೇನ್ ಮಾಡೀರಿ?** : ಮಾನಸ ಪಂಚಾಯಿತಿ ರಸ್ತೆ, ಕಾಡಗೊಡಿ, ಬೆಂಗಳೂರು ; ೨೦೦೧.

೨೦. ಪರಶಿವಮೂರ್ತಿ ಎಂ.ಎಸ್. : **ಗೆರೆದಾಟದ ಮೇಲೆ** : ರೂಪ ಪ್ರಕಾಶನ, ಮೈಸೂರು : ೨೦೦೯.

೨೧. ಮದರಿ.ಎ.ಎಂ : **ಗೊಂದಲಿಗ್ಯಾ** : ಲೋಹಿಯಾ ಪ್ರಕಾಶನ, ಬಳ್ಳಾರಿ ; ೨೦೧೨.

೨೨. ಮುಳ್ಳೂರು ನಾಗರಾಜು : **ಮಾಮರದ ಮೇಲೊಂದು ಕೋಗಿಲೆ** : ಸಿ.ವಿ.ಜಿ ಪಬ್ಲಿಕೇಷನ್, ಬೆಂಗಳೂರು ; ೨೦೦೪.

೨೩. ಲಕ್ಷ್ಮಣ್ : **ಸಂಬೋಳಿ** : ಮಾನಸ ಪಂಚಾಯಿತಿ ರಸ್ತೆ, ಕಾಡಗೊಡಿ, ಬೆಂಗಳೂರು ; ೨೦೦೧.

೨೪. ಶಾಂತ ನಾಯಕ ಶಿರಗಾನಹಳ್ಳಿ : **ಲಮಾಣಿ** : ಅನಿಕೇತನ ಪ್ರಕಾಶನ, ಎಲ್.೮, ೭ನೇ ತಿರುವು, ಮಾನಸಗಂಗೋತ್ರಿ ಮೈಸೂರು ; ೨೦೧೦.

೨೫. ಶೇಖರ್ ಎಂ.ಎಸ್(ಸಂ) : **ಡಿ. ಗೋವಿಂದದಾಸ್ ಸಮಗ್ರ ಸಾಹಿತ್ಯ** : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ; ೨೦೦೭.

೨೬. ಸಂಜೀವರಾಯ ಜೆ : **ಹೊರಬೀಡು**:ಕ್ರಾಂತಿಸಿರಿಪ್ರಕಾಶನ, ನಾಗರಬಾವಿ ೨ನೇ ಹಂತ ೯ನೇ ಬ್ಲಾಕ್, ಬೆಂಗಳೂರು ; ೨೦೧೧.

೨೭. ಸಿದ್ಧಲಿಂಗಯ್ಯ : **ಊರುಕೇರಿ ಭಾಗ ೧** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು ; ೨೦೦೬.

೨೮. ಸಿದ್ಧಲಿಂಗಯ್ಯ : **ಊರುಕೇರಿ ಭಾಗ ೨** : ಸಿ.ವಿ.ಕೆ ಪಬ್ಲಿಕೇಷನ್, ಬೆಂಗಳೂರು ; ೨೦೦೬.

೨೯. ಸೋಮಣ್ಣ ಜೆ : **ದಲಿತ ಲೋಕದ ನೋವು ನಲಿವುಗಳು** : ಶ್ರೀಕ್ಷೇತ್ರ ಪ್ರಕಾಶನ, ರಾಮಾನುಜ ರಸ್ತೆ, ಪೋರ್ಟ್ ಮೊಹಲ್ಲ, ಮೈಸೂರು ; ೨೦೦೭.

೩೦. ಹನುಮಂತರಾವ್ ಬಿ.ದೊಡ್ಡಮನಿ : **ಪಂಚಮ** : ಶಾಂತಕುಮಾರ್ ಪ್ರಕಾಶನ, ಮಲ್ಲಬಾದ್, ಗುಲ್ಬರ್ಗ ; ೨೦೦೯.

ಅನುಬಂಧ – ೨

ಪರಾಮರ್ಶನ ಗ್ರಂಥಗಳು

ಕ್ರ. ಸಂ.	ಲೇಖಕರು		ಕೃತಿ
೧.	ಅರ್ಜುನ ಗೊಳಸಂಗಿ	:	**ದಲಿತ ಸಾಹಿತ್ಯ ಪರಿಷತ್ತಿನ ಮೂರು ಸಮ್ಮೇಳನಗಳು ಒಂದು ನೋಟ** : ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ, ಗದಗ ; ೨೦೧೨.
೨.	ಅರ್ಜುನ ಗೊಳಸಂಗಿ (ಸಂ)	:	**ದಲಿತಜ್ಞ** : ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ, ಗದಗ ; ೨೦೦೦.
೩.	ಅರ್ಜುನ ಗೊಳಸಂಗಿ (ಸಂ)	:	**ದಲಿತ ಸಾಹಿತ್ಯ ಸಂಚಯ** : ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ, ಗದಗ ; ೨೦೧೧.
೪.	ಅರ್ಜುನ ಗೊಳಸಂಗಿ(ಸಂ)	:	**ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ** : ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ; ೨೦೧೧.
೫.	ಅರ್ಜುನ ಗೊಳಸಂಗಿ (ಸಂ)	:	**ಪ್ರೊ. ಅರವಿಂದ ಮಾಲಗತ್ತಿ ಅವರ ಕಾವ್ಯ ವಿಮರ್ಶೆ, ಕಾವ್ಯ ಮಂಥನ** : ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ, ಗದಗ ; ೨೦೦೯.
೬.	ಅನಸೂಯ ಕಾಂಬಳೆ	:	**ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ** : ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ; ೨೦೧೧.
೭.	ಅಬೂಬಕ್ಕರ್ ಸಾರಾ	:	**ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ** : ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, ಬಳ್ಳಾರಿ ; ೨೦೦೭.
೮.	ಅರವಿಂದ ಮಾಲಗತ್ತಿ	:	**ದಲಿತ ಸಾಹಿತ್ಯ ಪ್ರವೇಶಿಕೆ** : ಪೃಥ್ವಿ ಉದ್ಯಮ ಕೇಂದ್ರ, ಸರಸ್ವತಿಪುರಂ, ಮೈಸೂರು ; ೧೯೯೭.

೯. ಅರವಿಂದ ಮಾಲಗತ್ತಿ (ಸಂ) : **ದಲಿತ ಮಾರ್ಗ** : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ; ೨೦೦೨.

೧೦. ಅರವಿಂದ ಮಾಲಗತ್ತಿ (ಸಂ) : **ಕನ್ನಡ ಕಾವ್ಯದಲ್ಲಿ ದಲಿತ ಧ್ವನಿಗಳು** : ವಿಚಾರವಾದಿ ಪ್ರಕಾಶನ, ಕುವೆಂಪು ನಗರ, ಮೈಸೂರು ; ೧೯೯೭.

೧೧. ಅರವಿಂದ ಮಾಲಗತ್ತಿ : **ದಲಿತ ಸಾಹಿತ್ಯ ಪರ್ವ** : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ೨೦೦೯.

೧೨. ಅರವಿಂದ ಮಾಲಗತ್ತಿ : **ಕಪ್ಪು ಕಾವ್ಯ** : ಶೈಲ ಪ್ರಕಾಶನ, ಮುದ್ದೇಬಿಹಾಳ ; ೧೯೮೫.

೧೩. ಅಪ್ಪಗೆರೆ ಸೋಮಶೇಖರ : **ಮೌನ ಮಾತು ಪ್ರತಿಭಟನೆ** : ವಿಜಯಲಕ್ಷ್ಮಿ ಪ್ರಕಾಶನ, ಕುವೆಂಪು ನಗರ, ಮೈಸೂರು ; ೨೦೦೫.

೧೪. ಅಪ್ಪಗೆರೆ ಸೋಮಶೇಖರ : **ಅಂತಃಕರಣ ಸಾಂಸ್ಕೃತಿಕ ಮುಖಾಮುಖಿ** : ನಂ.೪ ಅಪ್ಪಗೆರೆ ಗ್ರಾಮ, ಚನ್ನಪಟ್ಟಣ ; ೨೦೦೭.

೧೫. ಅಪ್ಪಗೆರೆ ಸೋಮಶೇಖರ : **ನಡೆವ ನಡೆ** : ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಉತ್ತರಾದಿಮಠದ ರಸ್ತೆ, ಮೈಸೂರು ; ೨೦೦೪.

೧೬. ಅಪ್ಪಗೆರೆ ಸೋಮಶೇಖರ (ಸಂ) ನರೇಂದ್ರಕುಮಾರ : **ನೋವು ಹೆತ್ತ ಪ್ರೀತಿ** : ಶ್ರೀ ಕ್ಷೇತ್ರ ಪ್ರಕಾಶನ, ರಾಮಾನುಜ ರಸ್ತೆ, ಫೋರ್ಟ್ ಮೊಹಲ್ಲಾ, ಮೈಸೂರು : ೨೦೦೩.

೧೭. ಅಂಜನಪ್ಪ. ಕೆ : **ಅಂಬೇಡ್ಕರ್ ಮತ್ತು ಅಸ್ಪೃಶ್ಯತೆ** : ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ, ೨೦೦೭.

೧೮. ಅಂಬೇಡ್ಕರ್ ಬಿ.ಆರ್. : **ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು ಸಂ.೫** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತುಕುವೆಂಪುಭಾಷಾಭಾರತಿ ಪ್ರಾಧಿಕಾರ, ಮಲ್ಲತ್ತಹಳ್ಳಿ, ಬೆಂಗಳೂರು, ೨೦೧೦.

೧೯. ಅಂಬೇಡ್ಕರ್ ಬಿ.ಆರ್. : **ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು ಸಂಪುಟ ೧೨ ಭಾಗ ೨** : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ ಜೆ.ಸಿ ರಸ್ತೆ, ಬೆಂಗಳೂರು, ೧೯೯೯.

೨೦. ಅಂಬೇಡ್ಕರ್ ಬಿ.ಆರ್. ರಾಹು (ಅನು.) : **ಜಾತಿ ವ್ಯವಸ್ಥೆ, ಉಗಮ, ವಿಕಾಸ, ವಿನಾಶ** : ಸುಮೇಧ ಪ್ರಕಾಶನ, ಗುಲ್ಬರ್ಗಾ ; ೨೦೧೦.

೨೧. ಅಂಬೇಡ್ಕರ್ ಬಿ.ಆರ್. ಸದಾಶಿವ ಮರ್ಜಿ (ಅನು.) : **ವೀಸಾದ ನಿರೀಕ್ಷೆಯಲ್ಲಿ – ನೆನಪುಗಳು** : ಅವಿರತ ಪ್ರಕಾಶನ, ಕಸ್ತೂರಿ ಬಾ ನಗರ ಬೆಂಗಳೂರು ; ೨೦೧೧.

೨೨. ಅಂಬೇಡ್ಕರ್.ಬಿ.ಆರ್. ಮಂಗ್ಳೂರ ವಿಜಯ (ಅನು) : **ಅಸ್ಪೃಶ್ಯತೆ ಹುಟ್ಟು, ವ್ಯಾಪ್ತಿ ಪರಿಣಾಮ** : ಸಂಬುದ್ಧ ಪ್ರಕಾಶನ, ನಾಗನಹಳ್ಳಿ, ಬೆಂಗಳೂರು ; ೨೦೦೦.

೨೩. ಅನುಪಮ ಎಚ್.ಎಸ್ : **ಮಹಿಳೆ ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ** : ಲಡಾಯಿ ಪ್ರಕಾಶನ, ಗದಗ ; ೨೦೧೨.

೨೪, ಆನಂದ ತೇಲ್ತುಂಬ್ಡೆ ಅನುಪಮ ಹೆಚ್.ಎಸ್ (ಅನು.) : **ಅಂಬೇಡ್ಕರ್ ವಾದಿಗಳ ಬಿಕ್ಕಟ್ಟು ಮತ್ತು ಭವಿಷ್ಯದ ಸವಾಲುಗಳು** : ಲಡಾಯಿ ಪ್ರಕಾಶನ, ಗದಗ ; ೨೦೧೩.

೨೫. ಓಂಕಾರ ಶರದ್ : **ಲೋಹಿಯಾ** : ಲೋಹಿಯಾ ಪ್ರಕಾಶನ, ಬಳ್ಳಾರಿ ; ೨೦೧೦.

೨೬. ಕಲಬುರ್ಗಿ.ಎಂ.ಎಂ : **ಸಂಸ್ಕೃತಿ–ವಿಕೃತಿ** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು ; ೨೦೦೬.

೨೭. ಕಾಂಚ ಐಲಯ್ಯ ಸುಜ್ಞಾನಮೂರ್ತಿ ಬಿ (ಅನು.) : **ಜಾತಿ ವಿನಾಶ ಮಾರ್ಕ್ಸವಾದಿ ದೃಷ್ಟಿಕೋನ** : ಲಡಾಯಿ ಪ್ರಕಾಶನ, ಗದಗ ; ೨೦೦೯.

೨೮. ಕೆಂಪೇಗೌಡ : **ಕನ್ನಡ ಉಪಭಾಷೆಗಳ ಅಧ್ಯಯನ** : ಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು ; ೨೦೦೩.

೨೯. ಕೇಶವಶರ್ಮ ಕೆ : **ಪ್ರೊ.ಅರವಿಂದ ಮಾಲಗತ್ತಿ ಅವರ ಮಾರ್ಗ ಸಾಹಿತ್ಯ** : ಅಭಿರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು ; ೨೦೦೬.

೩೦. ಕೇಶವಶರ್ಮ.ಕೆ : **ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ** : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ ; ೨೦೦೧.

೩೧. ಕೃಷ್ಣಪ್ಪ ಬಿ. (ಸಂ) : **ಮೀಸಲಾತಿ** : # ೧೮೭೯ ಟಿ.ಪಿ.ಕ್ವಾರ್ಟರ್ಸ್, ಯಲಹಂಕ, ಬೆಂಗಳೂರು, ೨೦೧೦.

೩೨. ಗುರುರತ್ನ ಬಾಬು. ಡಿ : **ದಲಿತ ಚಳುವಳಿಯ ಪರಿಣಾಮಗಳು** : ರಚನಾ ಪ್ರಕಾಶನ, ಕುವೆಂಪು ನಗರ, ಮೈಸೂರು ; ೨೦೦೭.

೩೩. ಗೋಪಾಲ್. ಬಿ : **ಮಹಾತ್ಮ ಜ್ಯೋತಿಬಾ ಫುಲೆ** : ಸರ್ವಜನ ಸಮಾಜ ಪ್ರಕಾಶನ, ಬೆಂಗಳೂರು ; ೨೦೧೦.

೩೪. ಚಲವಾದಿ ಎಂ.ಆರ್. : **ಹೈದ್ರಾಬಾದ ಕರ್ನಾಟಕ ದಲಿತ ಸಾಹಿತ್ಯ** : ಸಾಕ್ಷಿ ಪ್ರತಿಷ್ಠಾನ ಪ್ರಕಾಶನ, ಹುಮನಾಬಾದ, ಬೀದರ್ ; ೨೦೧೦.

೩೫. ಚಿದಾನಂದ ಮೂರ್ತಿ ಎಂ. : **ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ** : ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು ; ೨೦೧೧.

೩೬. ಚಿನ್ನಸ್ವಾಮಿ ಸೋಸಲೆ ಎನ್ : **ದಲಿತರು ಮತ್ತು ಮತಾಂತರ ಒಂದು ಚಿಂತನೆ** : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ, ೨೦೦೯.

೩೭. ಚಿನ್ನಸ್ವಾಮಿ ಸೋಸಲೆ ಎನ್ : **ಅಂಬೇಡ್ಕರ್ ವಾದ ಮತ್ತು ಪ್ರಸ್ತುತ ದಲಿತರು** : ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು ; ೨೦೧೨.

೩೮. ಚಿನ್ನಸ್ವಾಮಿ ಸೋಸಲೆ ಎನ್ : **ಮೈಸೂರು ಸಂಸ್ಥಾನದಲ್ಲಿ ದಲಿತರು** : ಪ್ರಸಾರಾಂಗ,ಕನ್ನಡವಿಶ್ವವಿದ್ಯಾಲಯ ಹಂಪಿ, ಬಳ್ಳಾರಿ, ೨೦೧೩.

೩೯. ಜನಾರ್ಧನ ಎರ್ಪಕಟ್ಟೆ : **ದಲಿತ ಚಿಂತನೆ** : ಸ್ಮೃತಿ ಪ್ರಕಾಶನ, ಅಡ್ಯನಡ್ಕ ; ೧೯೯೯.

೪೦. ಜವರಯ್ಯ ಮ.ನ. : **ಕನ್ನಡ ಸಾಹಿತ್ಯದಲ್ಲಿ ಶಿವ ರಾಮ ಕೃಷ್ಣ ಮತ್ತುಅಂಬೇಡ್ಕರ್**:ಸಿದ್ದಾರ್ಥ ಗ್ರಂಥಮಾಲೆ, ನಂ.ಇ.ಮೊದಲ ಹಂತ, ಕುವೆಂಪು ನಗರ, ಮೈಸೂರು, ೨೦೦೨.

೪೧. ಜವರಯ್ಯ ಮ.ನ. : **ಅಂಬೇಡ್ಕರ್ ಚಿಂತನ ಸಾಹಿತ್ಯ ಸಮಗ್ರ ಅಧ್ಯಯನ** : ಬಹುಜನ ಮಾಧ್ಯಮ ಕೇಂದ್ರ, ೨ನೇ ಹಂತ ರಾಮಕೃಷ್ಣ ನಗರ, ಮೈಸೂರು ; ೨೦೧೧.

೪೨. ಜವರಯ್ಯ ಮ.ನ. : **ವಿದ್ರೋಹ** : ಬಹುಜನ ಉದ್ಯಮ ಕೇಂದ್ರ, ರಾಮಕೃಷ್ಣ ನಗರ, ಮೈಸೂರು ; ೨೦೦೨.

೪೩. ಜೋಗನ್ ಶಂಕರ (ಸಂ) : **ಕಪ್ಪು ಕಾಲಿನ ಕಡಗ :** ಡಾ. ಬಾಬುರಾವ್ ಮುಡಬಿಅಭಿನಂದನಾಸಮಿತಿ, ಬೆಂಗಳೂರು ; ೨೦೦೦.

೪೪. ತಿಪ್ಪೇರುದ್ರಸ್ವಾಮಿ : **ಕರ್ನಾಟಕ ಸಂಸ್ಕೃತಿ ಸಮೀಕ್ಷೆ** : ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು ; ೨೦೧೩.

೪೫. ತಿಪ್ಪೇಸ್ವಾಮಿ.ಜಿ.ಆರ್ : **ಸಾಹಿತ್ಯಮತ್ತುಕ್ರಿಯಾಶೀಲತೆ**: ವಿಜಯಲಕ್ಷ್ಮಿ ಪ್ರಕಾಶನ, ಕುವೆಂಪು ನಗರ, ಮೈಸೂರು, ೨೦೦೫.

೪೬. ತುಕಾರಾಮ್.ಎಸ್ (ಸಂ) ನರೇಂದ್ರಕುಮಾರ್ : **ಸಮಾನತೆ ಕನಸನ್ನು ಮತ್ತೇ ಕಾಣುತ್ತ...,** ದಲಿತ ಸಂಘರ್ಷ ಸಮಿತಿ, ಮೈಸೂರು ಜಿಲ್ಲಾ ಶಾಖೆ, ಮೈಸೂರು, ೨೦೧೨.

೪೭. ದಯಾನಂದ ಮಾನೆ : **ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳುವಳಿ** :ಶ್ರೀಲಿಪಿ ಗ್ರಾಪ್ ಪ್ರಕಾಶನ, ಮೈಸೂರು ; ೨೦೦೯.

೪೮. ದಯಾನಂದ ಮಾನೆ : **ದಲಿತ ಪ್ಯಾಂಥರ್ಸ್ ಚಳುವಳಿ** : ಅಂಬೇಡ್ಕರ್ ರಿಸರ್ಚ್ ಅಕಾಡೆಮಿ, ಯಶೋಧರ ನಗರ, ಮೈಸೂರು ; ೨೦೧೨.

೪೯. ದೇವನೂರ ಮಹಾದೇವ : **ಎದೆಗೆ ಬಿದ್ದ ಅಕ್ಷರ** : ಅಭಿನವ ಪ್ರಕಾಶನ, ಮಾರೇನಹಳ್ಳಿ ವಿಜಯನಗರ, ಬೆಂಗಳೂರು ; ೨೦೧೨.

೫೦. ದೇವರಾಜು ಪಿ. : **ಸ್ವಾಭಿಮಾನಿ ಪೆರಿಯಾರ್** : ಜಸ್ಟೀಸ್ ಪಬ್ಲಿಕೇಷನ್ಸ್, ವಿದ್ಯಾರಣ್ಯಪುರಂ, ಮೈಸೂರು ; ೨೦೦೫.

೫೧. ಧನಂಜಯ್ಯ ಕೀರ
ದೊಡ್ಡಮನಿ ಜೆ.ಪಿ.(ಅನು) : **ಮಹಾತ್ಮ ಜ್ಯೋತಿರಾವ್ ಫುಲೆ** : ಸುನೀಲ್ ಪ್ರಕಾಶನ, ತೆರದಾಳು ; ೨೦೧೧.

೫೨. ದಂಡಪ್ಪ. ಎಚ್ (ಸಂ) : **ಬಡವರ ನಗುವಿನ ಶಕ್ತಿ** : ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು ; ೨೦೦೧.

೫೩. ನರಹಳ್ಳಿ ಬಾಲಸುಬ್ರಹ್ಮಣ್ಯ : **ಸಾಹಿತ್ಯ ಸಂಸ್ಕೃತಿ** : ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು ; ೧೯೯೮.

೫೪. ನಾಗಣ್ಣ ಸಿ : **ಕಪ್ಪು ಸಾಹಿತ್ಯ: ತತ್ವ ಮತ್ತು ಸತ್ವ** : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ೨೦೦೬.

೫೫. ನಾಗಣ್ಣ ಸಿ : **ಕಪ್ಪು ಕಾವ್ಯ** : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ೨೦೦೯.

೫೬. ನಾಗರಾಜು. ಎಂ (ಸಂ) : **ವಕಾಲತ್ತು** : ನಿರಂತರ ಪ್ರಕಾಶನ, ವಿಜಯನಗರ, ಬೆಂಗಳೂರು ; ೨೦೦೯.

೫೭. ನಾಗರಾಜು.ಡಿ.ಆರ್. : **ಅಮೃತ ಮತ್ತು ಗರುಡ** : ಅಕ್ಷರ ಪಲ್ಲವ ಪ್ರಕಾಶನ ಹೆಗ್ಗೋಡು, ಸಾಗರ ; ೨೦೦೯.

೫೮. ನಾಗಭೂಷಣ ಡಿ.ಎಸ್. : **ಲೋಹಿಯಾ ಸಮಾಜವಾದ ದರ್ಶನ** : ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು ; ೨೦೦೮.

೫೯. ನಾರಾಯಣ ಸ್ವಾಮಿ. ಈ : **ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ : ಒಂದು ಅಧ್ಯಯನ** : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ; ೨೦೦೮.

೬೦. ನಾವಲಗಿ.ಸಿ.ಕೆ : **ಆಧುನಿಕ ಕನ್ನಡ ಆತ್ಮಕಥೆಗಳು** : ಸಾಗರ ಪ್ರಕಾಶನ, ನಾಗರಬಾವಿ, ಬೆಂಗಳೂರು ; ೨೦೦೦.

೬೧. ಪುಟ್ಟಯ್ಯ ಬಿ.ಎಂ : **ಆತ್ಮಕಥೆಗಳಲ್ಲಿ ಕರ್ಣಾಟಕದ ಕಥೆ** : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ ; ೧೯೯೯.

೬೨.	ಪುರುಷೋತ್ತಮ ಬಿಳಿಮಲೆ	: **ಬಂಡಾಯ ದಲಿತ ಸಾಹಿತ್ಯ** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ.ಸಿ ರಸ್ತೆ, ಬೆಂಗಳೂರು ; ೧೯೯೯.
೬೩.	ಪ್ರಶಾಂತ ನಾಯಕ ಜಿ.	: **ಕನ್ನಡ ಸಾಹಿತ್ಯ ಮತ್ತು ದಲಿತ ಪರಂಪರೆ** : ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ ; ೨೦೦೭.
೬೪.	ಪ್ರಹ್ಲಾದ್ ಅಗಸನಕಟ್ಟೆ	: **ದಲಿತ ಬಂಡಾಯ ಕಾವ್ಯ ಮತ್ತು ವಿಚಾರ ವಾದಗಳು** : ಹರ್ಷ ಪ್ರಕಾಶನ, ಮನೆ ನಂ ೦೬, ಕಿಮ್ಸ್ ಕ್ವಾರ್ಟಸ್ಸ್, ಹುಬ್ಬಳ್ಳಿ ; ೨೦೦೪.
೬೫.	ಪೋತೆ ಎಚ್.ಟಿ	: **ಸಂಸ್ಕೃತಿ ಸಂಕ್ರಮಣ** : ಕುಟುಂಬ ಪ್ರಕಾಶನ, ಗುಲ್ಬರ್ಗ ; ೨೦೦೭.
೬೬.	ಪೋತೆ ಎಚ್.ಟಿ	: **ಚಮ್ಮಾವುಗೆ** : ಕುಟುಂಬ ಪ್ರಕಾಶನ, ಗುಲ್ಬರ್ಗ ; ೨೦೧೦.
೬೭.	ಬಾಬು ಜಗಜೀವನ್ ರಾಮ್ ಪ್ರೊ. ಕೆ. ಗೌರಮ್ಮ ಪ್ರೊ. ಟಿ. ಯಲ್ಲಪ್ಪ ಬೂತಯ್ಯ (ಅನು.)	: **ಭಾರತದ ಜಾತಿ ಪದ್ದತಿಯ ಸವಾಲುಗಳು** : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾ–ನಿಲಯ, ಮೈಸೂರು ; ೨೦೧೦.
೬೮.	ಬೇನಾಳ ಹೆಚ್.ಎಸ್.	: **ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ದಲಿತ ಚಳುವಳಿ ಭೂ ಹೋರಾಟ** : ಸಹನಾ ಪ್ರಕಾಶನ, ಪ್ಲಾಟ್ ನಂ ೪೦೮, ಜೆ.ಬಿ ಕಾಲೋನಿ, ಗುಲ್ಬರ್ಗ : ೨೦೧೪.
೬೯.	ಮಲ್ಲಿಕಾ ಘಂಟಿ (ಸಂ)	: **ದಲಿತ ಸಾಹಿತ್ಯ ಚಳುವಳಿ** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ,ಸಿ ರಸ್ತೆ, ಬೆಂಗಳೂರು ; ೨೦೦೮.
೭೦.	ಮಹಾದೇವಯ್ಯ ಪಿ	: **ದಲಿತರು ಭಾಷೆ ಮತ್ತು ಸಮಾಜ** : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಬಳ್ಳಾರಿ ; ೨೦೦೬.
೭೧.	ಮಹಾಲಿಂಗ ಕಲ್ಕುಂದ ಕೆ.ಪಿ	: **ಭಾರತದಲ್ಲಿ ದಲಿತ ಚಳುವಳಿ** : ಚಳುವಳಿ ಪ್ರಕಾಶನ, ಗಿರಿದರ್ಶಿನಿ ಬಡಾವಣೆ, ಮೈಸೂರು ; ೨೦೧೧.

೭೨. ಮುನಿವೆಂಕಟಪ್ಪ : **ಅಂಬೇಡ್ಕರ್ ಭಾರತೀಯ ಬೆಳಕು** : ಪಂಚಶೀಲ ಪ್ರಕಾಶನ, ಮಧುವನ, ೧೦ನೇ ಕ್ರಾಸ್, ಶ್ರೀರಾಂಪುರ, ಮೈಸೂರು ; ೨೦೧೧.

೭೩. ಮುನಿವೆಂಕಟಪ್ಪ : **ಅಂಬೇಡ್ಕರ್ ವಾದ** : ಅರುಹು ಕುರುಹು ಪ್ರಕಾಶನ, ಮೈಸೂರು ; ೨೦೧೦.

೭೪. ಮುನಿವೆಂಕಟಪ್ಪ (ಸಂ) : **ದಲಿತ ಚಳುವಳಿ ಚರಿತ್ರೆ** : ತನುಮನ ಪ್ರಕಾಶನ, ಶ್ರೀರಾಂಪುರ, ಮೈಸೂರು ; ೨೦೦೯.

೭೫. ಮುಮ್ತಾಜ್ ಅಲಿ ಖಾನ್ : **ದಲಿತರು ಅಂದು ಮತ್ತು ಇಂದು** : ಸ್ವಪ್ನ ಬುಕ್ ಹೌಸ್, ಗಾಂಧೀನಗರ, ಬೆಂಗಳೂರು ; ೨೦೧೧.

೭೬. ಮುಳ್ಳೂರು ನಾಗರಾಜು : **ಬದನವಾಳು ದುರಂತ** : ಮುಳ್ಳೂರು ಪತ್ರಿಕೆ, ಶ್ರೀಕಂಠಪುರಿ ಬಡಾವಣೆ, ನಂಜನಗೂಡು ; ೧೯೯೪.

೭೭. ಮೊಗಳ್ಳಿ ಗಣೇಶ್ : **ದಲಿತ ಕಥನ** : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ; ೨೦೦೫.

೭೮. ರಹಮತ್ ತರೀಕೆರೆ : **ಸಾಂಸ್ಕೃತಿಕ ಅಧ್ಯಯನ** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ,ಸಿ ರಸ್ತೆ, ಬೆಂಗಳೂರು : ೨೦೦೮.

೭೯. ರಾಚಪ್ಪಾಜಿ ಎಂ. : **ಮಾನವತೆಯ ಕಡಲು** : ಶಾರದ ಮಂದಿರ ಪ್ರಕಾಶನ, ವಿದ್ಯಾರಣ್ಯಪುರಂ, ಮೈಸೂರು ; ೨೦೦೯

೮೦. ರಾಚಪ್ಪಾಜಿ. ಎಂ. (ಸಂ) : **ವಿಮೋಚನಾ ಹಾದಿ ದಲಿತವಾದದ ವೈಚಾರಿಕತೆ** : ವಿಜಯಲಕ್ಷ್ಮಿ ಪ್ರಕಾಶನ, ಕುವೆಂಪು ನಗರ, ಮೈಸೂರು ; ೨೦೦೮.

೮೧. ರಂಗನಾಥ ಕುಟಂನಕುಂಟೆ : **ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ** : ಮುದ್ದಶ್ರೀ ಗ್ರಂಥಮಾಲೆ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರ ದೊಡ್ಡಿ, ಹಂಪಿ ನಗರ, ಬೆಂಗಳೂರು ; ೨೦೦೯.

೮೨. ರಂಗರಾಜ ವನದುರ್ಗ (ಸಂ) : **ಡಾ.ಬಿ.ಆರ್. ಅಂಬೇಡ್ಕರ್ ಚಿಂತನೆಗಳು** : ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ ; ೨೦೦೭.

೮೩. ರಂಗರಾಜ ವನದುರ್ಗ (ಸಂ) : **ಕನ್ನಡ ಸಾಹಿತ್ಯ ಮತ್ತು ಜನಪರ ಚಳುವಳಿ** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ,ಸಿ ರಸ್ತೆ, ಬೆಂಗಳೂರು ; ೨೦೦೬.

೮೪. ವಿವಿಧ ಲೇಖಕರು : **ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ,ಸಿ ರಸ್ತೆ, ಬೆಂಗಳೂರು ; ೨೦೦೬.

೮೫. ವಿವಿಧ ಲೇಖಕರು : **ಶೋಧನ ನಡಿಗೆ** : ಸಂಶೋಧನ ವಿದ್ಯಾರ್ಥಿ ವೇದಿಕೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ೨೦೧೪.

೮೬. ವೇಮಣ್ಣ : **ಪೆರಿಯಾರರ ಜೀವನ ಚರಿತ್ರೆ** : ವಿ.ಆರ್.ವಿ. ಪಬ್ಲಿಕೇಷನ್, ಹಂಪಿ ನಗರ, ಬೆಂಗಳೂರು ; ೨೦೦೭.

೮೭. ವೆಂಕಟೇಶಮೂರ್ತಿ ಎಚ್.ಟಿ. : **ಸಮಾಜ ಪರಿವರ್ತನಾ ಚಳುವಳಿ ಮತ್ತು ಕರ್ನಾಟಕ ದಲಿತ ಚಳುವಳಿ** : ಈಶ್ವರಿ ಪ್ರಕಾಶನ, ಉತ್ತರಾದಿ ಮಠ ರಸ್ತೆ, ಮೈಸೂರು ; ೨೦೦೬.

೮೮. ಶರಣಮ್ಮ ಅ.ಗೊರೇಬಾಳ : **ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ** : ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ, ಗದಗ ; ೨೦೦೨.

೮೯. ಶಂಕರೇಗೌಡ ಎನ್.ಎಸ್ : **ಪ್ರೊ. ಅರವಿಂದ ಮಾಲಗತ್ತಿಯವರ ಸಾಹಿತ್ಯ ಮತ್ತು ಚಿಂತನೆ** : ಚೇತನ ಬುಕ್ ಹೌಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು ; ೨೦೦೫.

೯೦. ಶಿವಕುಮಾರ : **ಅಂಬೇಡ್ಕರ್ ವಾದ ಮತ್ತು ದಲಿತ ಸಾಹಿತ್ಯ** : ಸುಮೇಧ ಪ್ರಕಾಶನ, ಗುಲ್ಬರ್ಗಾ ; ೨೦೧೨.

೯೧. ಶಿವರಾಮ ಅಸುಂಡಿ : **ತಳಸಂಸ್ಕೃತಿ** : ಧಾತ್ರಿ ಪುಸ್ತಕ, ಬೆಂಗಳೂರು ; ೨೦೧೧.

೯೨. ಶಿವಾಜಿ ಜ್ಯೋತಿ : **ಕಾಯಕ ಜೀವಿಗಳ ಸಾಮಾಜಿಕ ಚಿಂತನೆ** : ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು ; ೨೦೧೧.

೯೩. ಶ್ರೀನಿವಾಸ ಭಾಲೇರಾವ್ ಸಿದ್ರಾಮ ಕಾರಣಿಕ (ಅನು.) : **ದಲಿತ ಅಸ್ಮಿತೆ** : ಲಡಾಯಿ ಪ್ರಕಾಶನ, ಗದಗ ; ೨೦೧೩.

೯೪. ಶ್ರೀನಿವಾಸಮೂರ್ತಿ ಕಾ.ವೆಂ : **ದಲಿತತ್ವ ಅಕ್ಷರವಾಗದ ಆತ್ಮಕಥಾನಕ** : ಲಡಾಯಿ ಪ್ರಕಾಶನ, ಗದಗ ; ೨೦೧೦.

೯೫. ಶ್ರೀಪಾದ ಶೆಟ್ಟಿ (ಸಂ) : **ಆಲಯಗಳ ಬಯಲು** : ಎಸ್.ಬಿ.ನಾಯಕ ಪಾರುಮನೆಅಭಿನಂದನಸಮಿತಿ, ಧಾರವಾಡ ; ೨೦೦೮.

೯೬. ಶ್ರೀಶೈಲ ನಾಗರಾಳ (ಸಂ) : **ಉರಿನಾಲಿಗೆ ಪ್ರೊ.ಎಚ್.ಟಿ.ಪೋತೆ ವಾಚಿಕೆ** : ಸಿರಿಗಿರಿ ಪ್ರಕಾಶನ, ಗಾಜಿಪುರ, ಗುಲಬರ್ಗಾ ; ೨೦೧೨.

೯೭. ಶೇಖರ್ ಎಂ.ಎಸ್. : **ಕುದ್ಮಲ್ ರಂಗರಾವ್** : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ೨೦೦೯.

೯೮. ಶೇಖರ್ ಎಂ.ಎಸ್. (ಸಂ) : **ಮೊದಲ ತಲೆಮಾರಿನ ದಲಿತ ಸಾಹಿತಿಗಳು** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ,ಸಿ ರಸ್ತೆ, ಬೆಂಗಳೂರು ; ೨೦೦೬.

೯೯. ಸಬಿಹಾ ಭೂಮಿಗೌಡ(ಸಂ) : **ಮಹಿಳಾ ಸಾಹಿತ್ಯ** : ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಜೆ,ಸಿ ರಸ್ತೆ, ಬೆಂಗಳೂರು ; ೨೦೦೬.

೧೦೦. ಸಮತಾ ದೇಶಮಾನೆ : **ಒಡಲಿನ ಬೆಂಕಿ (ದಲಿತ ಆತ್ಮಕಥೆಗಳ ಸಮಾಜಶಾಸ್ತ್ರಿಯ ಅಧ್ಯಯನ)** : ಶ್ರೀ ಸಾಯಿ ಸಾಹಿತ್ಯ ಪ್ರಕಾಶನ, ಅತ್ತಿಗುಪ್ಪೆ, ಬೆಂಗಳೂರು ; ೨೦೦೯.

೧೦೧. ಸರಜೂ ಕಾಟ್ಕರ್ : **ಕನ್ನಡ ಮರಾಠಿ ದಲಿತ ಸಾಹಿತ್ಯ** : ರೂಪ ಪ್ರಕಾಶನ, ಮೈಸೂರು ; ೨೦೧೦.

೧೦೨. ಸಿದ್ಧಲಿಂಗಯ್ಯ : **ಊರಿಕಂಡಾಯ** : ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು ; ೨೦೦೯.

೧೦೩. ಸಿದ್ಧಲಿಂಗಯ್ಯ : **ಸಾವಿರಾರು ನದಿಗಳು** : ನಾಗಾರ್ಜುನ ಎಂಟರ್ ಪ್ರೈಸಸ್, ದಾವಣಗೆರೆ ; ೨೦೦೮.

೧೦೪. ಸಿದ್ಧಲಿಂಗಯ್ಯ : **ಅವತಾರಗಳು** : ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು ; ೨೦೧೧.

೧೦೫. ಸಿದ್ಧಲಿಂಗಯ್ಯ : **ಹಕ್ಕಿನೋಟ**:ಕಲ್ಯಾಣಿ ಪ್ರಕಾಶನ, ಬನಶಂಕರಿ, ಬೆಂಗಳೂರು ; ೧೯೯೦.

೧೦೬. ಸುಲೋಚನ ನಾರಾಯಣ್ : **ಡಾ.ಅಂಬೇಡ್ಕರವರವೈಚಾರಿಕತೆಯ ನೆಲೆಗಳು** : ಛಾಯ ಸಾಹಿತ್ಯ ಪ್ರಕಾಶನ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು ; ೨೦೧೧.

೧೦೭. ಸಂಪಿಗೆ ನಾಗರಾಜು : **ಇಪ್ಪತ್ತನೆಯ ಶತಮಾನದ ಕೊನೆಯ ದಶಕ–ಗಳಲ್ಲಿ ಸಂಸ್ಕೃತಿ** : ಅನ್ನಪೂರ್ಣ ಪ್ರಕಾಶನ, ಸಿರಿಗೇರಿ ; ೨೦೦೮.

೧೦೮. ಹನುಮಂತಯ್ಯ ಎನ್.ಕೆ : **ಕ್ರಾಂತಿಯ ವಸಂತ (ಬಿ.ಬಸವಲಿಂಗಪ್ಪನವರ ಕಥನ)** : ಪಲ್ಲವ ಪ್ರಕಾಶನ, ಚನ್ನಪಟ್ಟಣ ; ೨೦೦೮.

೧೦೯. ಹರಿಲಾಲ ಪವಾರ : **ಮರಾಠಿ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳು** : ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ೨೦೦೭.

೧೧೦. ಹಸನ್ ನಯಿಂ ಸುರಕೋಡ : **ಡಾ.ರಾಮ ಮನೋಹರ ಲೋಹಿಯಾ ಜಾತಿಪದ್ಧತಿ** : ಲಂಕೇಶ್ ಪ್ರಕಾಶನ, ಆಂಜನೇಯ ಗುಡಿ ರಸ್ತೆ, ಬಸವನಗುಡಿ, ಬೆಂಗಳೂರು ; ೨೦೧೧.

೧೧೧. ಹೆಗ್ಗಡೆ.ಕೆ.ಎಸ್ : **ಮಹಾರಾಷ್ಟ್ರದಲ್ಲಿ ದಲಿತ ಚಳುವಳಿಗಳು** : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ; ೨೦೧೦.

೧೧೨. ಹೊನ್ನಯ್ಯ ಸಿ.ಬಿ : **ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ** : ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಪುರದೊಡ್ಡಿ, ಬೆಂಗಳೂರು ; ೨೦೦೪.

᱑᱑᱔. Eleanor Zelliot : **Ambedkar's world – the making of babasaheb and the dalit movement**: Navayana, New Delhi ; 2013.

᱑᱑᱕. Eva-maria hardtmann : **The Dalit movement in India-local practices global connections**: Oxford University, New Delhi ; 2013

᱑᱑᱖. Gandhi M.K. : **An Auto biography of the story of my Experiments With truth** : Navajeeva publishing House Ahmedabad ; 2007.

᱑᱑᱗. Sukhdev Thorat (Ed.) : **Ambedkar in retrospect** : Aryama, Indian Institute of Dalit Studies, New Delhi ; 2007.

᱑᱑᱘. Vasant Moon
Asha damle (Translate) : **Dr.Babasaheb Ambedkar** : National Book Trust India ; 2004.